## ಅಧ್ಯಾಯ: ಒಂದು

# ಪ್ರಸ್ತಾವನೆ

ಕರ್ನಾಟಕದಲ್ಲಿ ಜೈನಧರ್ಮದ ಇತಿಹಾಸವನ್ನು ಗಮನಿಸಿದಾಗ ಅದು ಕ್ರಿ.ಪೂ.ದ ಕಾಲದಿಂದಲೇ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತ್ತು ಎಂಬುದಕ್ಕೆ ಸಾಕಷ್ಟು ಸಾಹಿತ್ಯ ಆಧಾರಗಳು ದೊರಕುತ್ತವೆ. ಜೈನಧರ್ಮದ ಪ್ರಾಚೀನತೆ ಹಾಗೂ ಆದರ ಸಂಸ್ಕೃತಿಯ ಬಗ್ಗೆ ಅನೇಕ ವಿದ್ವಾಂಸರು ತಮ್ಮ ಸಿದ್ಧಾಂತಗಳನ್ನು ಮಂಡಿಸಿದ್ದು ಅವುಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಲಾಗಿದೆ.

"ಜೈನ ಧರ್ಮವು ಉಪನಿಷತ್ತುಗಳ ಸುಧಾರಕ ಪಂಥದಲ್ಲಿ ಬೆಳೆದು ಬಂದ ವೈದಿಕ ವಿಚಾರಸರಣಿಯ ಒಂದು ಶಾಖೆಯಲ್ಲ. ಅದು ಬೌದ್ಧ ಧರ್ಮಕ್ಕಿಂತ ಬಹಳ ಹಿರಿದಾಗಿದ್ದು, ಆರ್ಯ–ಪೂರ್ವದ ಈಶಾನ್ಯ ಭಾರತದ ಶ್ರಮಣ ಸಂಸ್ಕೃತಿಯ ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರ ಸರಣಿಯಲ್ಲಿ ಜನ್ಮ ತಾಳಿದ್ದಾಗಿದೆ ಮತ್ತು ಈ ಶ್ರಮಣ ಸಂಸ್ಕೃತಿಯ ಪ್ರವಾಹದ ಮೂಲ ಸಿಂಧೂಕೊಳ್ಳದ ಸಂಸ್ಕೃತಿಯಲ್ಲಿ ಹುದುಗಿದ್ದಾಗಿದೆ. ಡಾ. ಜ್ಯೋತಿಪ್ರಸಾದ ಜೈನ ಅವರು ಇತ್ತೀಚೆಗೆ ಜೈನಧರ್ಮ ಈಗ ಜೀವಿಸಿರುವ ಧರ್ಮಗಳಲ್ಲಿ ಎಲ್ಲಕ್ಕೂ ಪ್ರಾಚೀನವಾಗಿದೆ ಎಂಬ ಸಿದ್ಧಾಂತವನ್ನು ಮಂಡಿಸಿದ್ದಾರೆ". [1]

ಈ ಹೇಳಿಕೆಯನ್ನು ಗಮನಿಸಿದಾಗ ಜೈನಧರ್ಮದ ಸಂಸ್ಥತಿಯು ಸಿಂಧೂಕೊಳ್ಳದ ಸಂಸ್ಕೃತಿಯಲ್ಲಿ ಅಂತರ್ಗತವಾಗಿದ್ದು, ಶ್ರಮಣ ಸಂಸ್ಕೃತಿಯ ಮೂಲವಾಗಿರುವುದು ಕಂಡುಬರುತ್ತದೆ. ಇದರಿಂದ ತಿಳಿದುಬರುವ ವಿಷಯವೆನೆಂದರೆ ಬೌದ್ಧಧರ್ಮಕ್ಕಿಂತ ಜೈನಧರ್ಮವು ಪ್ರಾಚೀನವಾದುದೆಂಬುದು.

ಡಾ. ಜಿ. ಸಿ. ಪಾಂಡೆಯವರ ವಿಚಾರಗಳನ್ನು ಗಮನಿಸುವುದು ಸಮಂಜಸ. "ಶ್ರಮಣಿಕ ನಾಸ್ತಿಕವಾದವು ಅಧರ್ಮದ ಅಥವಾ ಧರ್ಮದ ಒಂದು ಪ್ರಕಾರವಾಗಿಲ್ಲ. ಅದು ಜೀವನದಲ್ಲಿ ಬರುವ ಕೆಡುಕನ್ನು ಮತ್ತು ದುಃಖ ದುಮ್ಮಾನಗಳನ್ನು ಧೈರ್ಯದಿಂದ ಎದುರಿಸುವುದು ಮತ್ತು ಅವುಗಳ ಕಾರಣಗಳನ್ನು ಮಾನವನ ದೋಷಗಳಲ್ಲಿ ಕಾಣುವುದು, ಬೇರಾವ ಅಜ್ಞಾತ ಅಥವಾ ರಹಸ್ಯಮಯ ಶಕ್ತಿಯಲ್ಲಿ ಅಲ್ಲ. ಕರ್ಮದ ಶಕ್ತಿಯ ಮುಂದೆ ಯಾವ ಪೂಜೆ ಅಥವಾ ಪ್ರಾರ್ಥನೆ ಉಪಯೋಗವಾಗುವುದಿಲ್ಲ. ಮುಕ್ತಿಗೆ ಅಥವಾ ಪರಿಪೂರ್ಣತೆಗೆ ಆತ್ಮನಿರ್ಭರತೆ ಅವಶ್ಯಕವೆಂದು ಅದು ಒತ್ತುಕೊಟ್ಟು ಹೇಳುವುದು. ಮನುಷ್ಯ ತನ್ನನ್ನು ಸುಧಾರಿಸಿಕೊಳ್ಳಬೇಕಾದರೆ ಇಚ್ಛೆಯನ್ನು ನಿಧಾನವಾಗಿ ತರಬೇತಿಗೊಳಿಸಬೇಕಾಗುತ್ತದೆ; ಮನಸ್ಸನ್ನು ಅಥವಾ ಭಾವನೆಗಳನ್ನು ಪರಿಶುದ್ಧಗೊಳಿಸಬೇಕಾಗುತ್ತದೆ. ಇಂಥ ಶುದ್ಧೀಕರಣ ಅಂತರಿಕ ಬೆಳಕಿನೆಡೆಗೆ ಕರೆದೊಯ್ಯುವುದು ಮತ್ತು ಈ ಬೆಳಕು ಪ್ರತಿಯೊಬ್ಬನ ಆತ್ಮದಲ್ಲಿಯೇ ಇರುವುದು. ಈ ಬೆಳಕು ವೈದಿಕ ವಿಚಾರದಂತೆ ದೇವರ ಕೃಪೆಯಿಂದಾಗಲಿ ಅಥವಾ ಪ್ರವಾದಿಯ ಮಾತುಗಳಿಂದಾಗಲಿ ಬರುವುದಿಲ್ಲ". [2]

ಡಾ. ಜಿ. ಸಿ. ಪಾಂಡೆಯವರ ಈ ಹೇಳಿಕೆಯಂತೆ ಜೈನಧರ್ಮವು ನಿರೀಶ್ವರ ಧರ್ಮವಾಗಿದ್ದು ಅದು ಜೀವನ ಮೌಲ್ಯಗಳಿಗೆ ಒತ್ತು ನೀಡುತ್ತದೆಯೇ ಹೊರತು, ಪೂಜೆ, ಪ್ರಾರ್ಥನೆಗಳಿಗೆ ಮಹತ್ವ ನೀಡುವುದಿಲ್ಲ. ಮುಕ್ತಿ ಮಾರ್ಗದೆಡೆಗೆ ಸಾಗಲು ಕರ್ಮಶಕ್ತಿಯೇ ಪ್ರಧಾನವಾಗುತ್ತದೆ. ಮುಕ್ತಿಗೆ ಜೀವನದ ಪರಿಪೂರ್ಣತೆಗೆ ಆತ್ಮಶಕ್ತಿಯೆ ಮುಖ್ಯವೆನಿಸುತ್ತದೆ. ಪರಿಶುದ್ಧ ಆತ್ಮದ ಬೆಳಕಿನಲ್ಲಿ ಜೀವನ ಪರಿಪೂರ್ಣತೆ ಪಡೆಯುತ್ತದೆಂಬುದು ಸ್ವಾರಸ್ಯಕರವಾದ ಹೇಳಿಕೆಯಾಗಿದೆ. ಅಂದರೆ ಜೈನಧಮವು ಅಹಿಂಸೆ, ಜೀವನ ಮೌಲ್ಯ, ಮುಕ್ತಿಗೆ ಅವಕಾಶ ನೀಡುತ್ತದೆಂಬುದು ಸ್ಪಷ್ಟವಾಗಿದೆ.

ಕನ್ನಡ ಸಾಹಿತ್ಯದ ವಿಷಯವಾಗಿ ಅದರ ಆರಂಭ ಜೈನರಿಂದಲೇ. ಗಂಗ, ರಾಷ್ಟ್ರಕೂಟ, ಚಾಲುಕ್ಯ ಕಲಚೂರಿ ಸೌದತ್ತಿಯ ರಟ್ಟರು, ವಿಜಯನಗರದ ಅರಸರು, ಸಾಮಂತರಾದ ಸಾಳುವರು, ಚೆಂಗಾಳ್ವರು ಕೊಂಗಾಳ್ವರು, ಸಾಂತರು ಇತ್ಯಾದಿ ರಾಜರ ಆಶ್ರಯದಲ್ಲಿ ಜೈನ ಕವಿಗಳ ಸಾಹಿತ್ಯಕ ಕೃಷಿ ನಡೆದು ಕನ್ನಡಸಾಹಿತ್ಯ ಮೌಲಿಕವಾದ ಕೃತಿಗಳನ್ನು ತನ್ನ ಮಡಿಲಿಗೆ ಸೇರಿಸಿಕೊಂಡಿತು. ಹೀಗಾಗಿ ಈ ಪರಿಸರದ ಸಾಹಿತ್ಯ ಪಂಡಿತಪ್ರಿಯ ಸಾಹಿತ್ಯವೆಂತಲೂ,

ಚಂಪೂಪ್ರಕಾರವನ್ನು ಹೆಚ್ಚು ದುಡಿಸಿಕೊಂಡಿದ್ದರಿಂದ ಚಂಪೂಯುಗವೆಂತಲೂ ಕರೆಸಿಕೂಂಡಿತು. ಕನ್ನಡ ಜೈನ ಸಾಹಿತ್ಯ ಅದರಲ್ಲೂ ಆಗಮಿಕ ಕಾವ್ಯಗಳ ವಸ್ತು ಕರ್ಮ ಕಟ್ಟಳೆಗಳನ್ನು ಸುಟ್ಟು ಜಿನರಾದ ಭೂಭುಜಾಗ್ರಣಿಗಳ ಕಥೆಗಳಾಗಿವೆ. ಅಂದರೆ ಆತ್ಮನಲ್ಲಿ ಸೌಮ್ಯವನ್ನು ಬೆಳೆಸುವುದೇ ಆಗಿದೆ. ಯಾಕೆಂದರೆ ಯಾವುದು ರಾಗ, ದ್ವೇಷ, ಮೋಹ, ಮಾತ್ಸರ್ಯ ಮೊದಲಾದ ವಿಕೃತಿಗಳನ್ನು ಉತ್ಪಾದಿಸುವುದೋ ಅದು ಹೀನ ಸಾಹಿತ್ಯವೆಂದು ಭಾವಿಸಿದರು. ಅಂತೆಯೇ ಕವಿ ನಾಗಚಂದ್ರ ತನ್ನ ರಾಮಚಂದ್ರ ಚರಿತ ಪುರಾಣದ ಸಂಧಿ 1 ಪದ್ಯ 24ರಲ್ಲಿ

"ರಾಗದ್ವೇಷ ನಿಬಂಧಮಪ್ಪ ಕೃತಿಯಂ ನಿರ್ಭಂಧದಿಂ ಬಂಧಮಿಂ
ಬಾಗರ್ಥಪೊಸತಾಗೆ ಪೇಚ್ದಿಖಿಲಮು ರಾಗವಿಲಂ ಮಾಳ್ಪದಿ
ದ್ಯುಂಗರ್ವಗ್ರಹ ಪೀಡಿತರ್ ಸ್ವಪರ್ ಬಾಧಾಹೇತುವಂ ದುಸ್ತರೋ
ದ್ಯೋಗ ಕ್ಲೇಶೀತರಾಗಿ ಭಿತ್ತಿ ಬೆಳೆವಂತಕ್ಕುಂ ವಿಷೋದ್ಯಾನಮಂ" [3]

ರಾಗಾದ್ವೇಶಗಳಿಂದ ಕೂಡಿದ ಕೃತಿಯನ್ನು ಎಷ್ಟೇ ಸುಂದರವಾಗಿ ಬರೆದರೂ ಅದು ವಿಷೋದ್ಯಾನವನ್ನು ಬೆಳೆಸಿದಂತಹ ಅನಾರೋಗ್ಯಕರ ಉಪಕ್ರಮವೆಂದಿದ್ದಾರೆ. ಹೀಗಾಗಿ "ಎನಗೆ ರಸವೊಂದೇ ಶಾಂತಮ್" ಎಂದು ಕನ್ನಡ ಸಾಹಿತ್ಯಕ್ಕೆ ಶಮಸ್ಥಾಯಿಯಾದ ಶಾಂತರಸವನ್ನು ನೀಡಿದವರು, ಅಸಹಾಯಕರ ಬಗ್ಗೆ ಅನುಕಂಪ ತೋರಿ "ಸಂಕಲ್ಪ ಹಿಂಸೆಯ" ಸಾಧಕ ಬಾಧಕಗಳನ್ನು ಕಾವ್ಯಗಳ ಮೂಲಕ ಕಟ್ಟಿಕೊಟ್ಟವರು.

ಜೈನಕವಿಗಳು ಕೇವಲ ಧಾರ್ಮಿಕ ಗ್ರಂಥಗಳಲ್ಲದೇ ಲೌಕಿಕ ಗ್ರಂಥಗಳ ರಚನಯನ್ನೂ ಮಾಡಿದ್ದಾರೆ. ಚಂಪೂ ಪ್ರಕಾರ ಜೈನ ಕವಿಗಳ ಪ್ರಮುಖ ಕಾವ್ಯ ಮಾಧ್ಯಮವಾದರೂ ಷಟ್ಪದಿ, ತ್ರಿಪದಿ, ಸಾಂಗತ್ಯಗಳಂಥ ದೇಶಿ ಛಂದಸ್ಸಿನಲ್ಲಿ ಕೂಡ ಕೃತಿ ರಚನೆ ಮಾಡಿದ್ದಾರೆ. ಇದಕ್ಕೆ ಪೂರಕವೆಂಬಂತೆ ಕೆಲ ಜೈನಕವಿಗಳು, ರಾಗ–ತಾಳಬದ್ಧವಾದ ಹಾಡುಗಳನ್ನು ಬರೆದಿದ್ದಾರೆ. ಮಹಾಕಾವ್ಯಗಳ ಕಥಾವಸ್ತುವನ್ನೇ ತಮ್ಮೊಡಲಲ್ಲಿರಿಸಿಕೊಂಡು ಕುಳಿತಿರುವ ಇದಕ್ಕಿಂತ ಹೆಚ್ಚಾಗಿ ಸ್ಥಳೀಯ ಸ್ಥಳಪುರಾಣ ಮಹಾತ್ಮೆಗಳನ್ನು ಉಸುರುವ ಈ ಹಾಡುಗಳ ಶೋಧ–ಸಂಗ್ರಹ–ಸಂಪಾದನೆ ಹಾಗೂ ವಿಶ್ಲೇಷಣೆಗಳು ವೀರಶೈವ ಹಾಗೂ ಹರಿದಾಸರ ಸ್ವರವಚನ–ಕೀರ್ತನೆಗಳಂತೆ ವ್ಯಾಪಕವಾಗಿ ನಡೆದಿರುವುದಿಲ್ಲ. ಹೀಗಾಗಿ ನಾಡಿನ ಪ್ರಮುಖ ಜೈನಮಠಗಳಲ್ಲಿ, ಬೀಡುಗಳಲ್ಲಿ, ಗುತ್ತುಗಳಲ್ಲಿ, ಹಿರಿಯರ ಮನೆಗಳಲ್ಲಿ, ಪ್ರತಿಷ್ಠಾನಗಳಲ್ಲಿ, ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರಗಳಲ್ಲಿ ಸಂಗ್ರಹವಾಗಿರುವ ಹಾಡುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಅವುಗಳ ಅಧ್ಯಯನ ನಡೆಸುವ ಅವಶ್ಯಕತೆ ಇಂದಿನ ತುರ್ತುಗಳಲ್ಲಿ ಒಂದು.

ಕರ್ನಾಟಕದಲ್ಲಿ ಜೈನಧರ್ಮವು ಧಾರ್ಮಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಸಾಹಿತ್ಯಿಕವಾಗಿ ಪ್ರಬಲವಾದ ಪ್ರಭಾವವನ್ನು ಬೀರಿದ ಪ್ರಮುಖ ಧರ್ಮವಾಗಿದೆ. ಸಾಹಿತ್ಯಕ್ಷೇತ್ರಕ್ಕಂತೂ ಜೈನಧರ್ಮದ ಕೊಡುಗೆ ಅಪಾರವಾಗಿದ್ದು, ಈ ವಿಷಯದಲ್ಲಿ ಕನ್ನಡ ಸಾಹಿತ್ಯ ಜೈನರ್ಧರ್ಮಕ್ಕೆ ಅಭಾರಿಯಾಗಿದೆ. ಈ ಕುರಿತಂತೆ ಶಾಸನೋಕ್ತವಾದ ಕೆಳಗಿನ ಪದ್ಯವನ್ನು ಗಮನಿಸಬಹುದು.

"ಜಿನಧರ್ಮ ವಾಸಮಾದತ್ತಮಳವಿನಯದಾಗಾರಮಾದತ್ತು ಪದ್ಮಾ
ಸನನಿರ್ಪಾ ಪದ್ಮ ಮಾದತ್ತತಿವಿಶದ ಯಶೋಗಾಧಮಮಾದತ್ತು ವಿದ್ಯಾ
ಧನ ಜನ್ಮ ಸ್ಥಾನಮಾದತ್ತಸಮ ತರಳ ಗಂಭೀರ ಸಸೋಹಮಾದ
ತ್ತೆನಿಸಲ್ಕಿಂತುಳ್ಳ ನಾನಾ ಮಹಿಮೆಯೊಳೆಸೆಗುಂ ಚಾರು ಕರ್ನಾಟದೇಶಂ" [4]

15ನೇ ಶತಮಾನದ ಈ ಶಾಸನೋಕ್ತ ಪದ್ಯ ಕರ್ನಾಟಕದಲ್ಲಿ ಜೈನಧರ್ಮದ ಪ್ರಭಾವ, ಪ್ರೇರಣೆ ಎಷ್ಟೆಂಬುದನ್ನು ತಿಳಿಯಲು ಮಹತ್ವದ ದಾಖಲೆಯೆನಿಸಿದೆ. ಗಂಗರಾಜರಾದಿಯಾಗಿ ಅನೇಕ ರಾಜಮನೆತನಗಳವರೆಗೆ ಜೈನಧರ್ಮ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಆತ್ಮವಿದ್ಯೆ, ಕರ್ಮವಿದ್ಯೆ, ಲೋಕವಿದ್ಯೆ, ಆಚಾರವಿದ್ಯೆಗಳೆಂಬ ನಾಲ್ಕು ಅಂಗಗಳಲ್ಲಿ ಬೆಳೆದು ಬಂದ ಜೈನಧರ್ಮ ಅಹಿಂಸೆಯನ್ನೇ ತನ್ನ ಮೂಲಸ್ಥಾಯೀಗುಣವಾಗಿ ರೂಪಿಸಿಕೊಂಡಿತು. ಸೃಷ್ಟಿಕರ್ಮದ ವಿವಿಧ ಧರ್ಮಶಾಸ್ತ್ರಗಳು ಮತ್ತು ಆ ಧರ್ಮದ ಸಿದ್ಧಾಂತ ಕೃತಿಗಳು ಜೈನ ಆಗಮ ಸಾಹಿತ್ಯದಲ್ಲಿ ಹೇರಳವಾಗಿ ರಚನೆಗೊಂಡಿವೆ. ಈಗಾಗಲೇ ಭಾರತೀಯ

ನೆಲೆಯಲ್ಲಿ ಮತ್ತು ಕರ್ನಾಟಕದ ನೆಲೆಯಲ್ಲಿ ಈ ಧರ್ಮ ಬೆಳೆದು ಬಂದ ಇತಿಹಾಸವನ್ನು ಅನೇಕ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ.

ವಿದ್ವಾಂಸರ ಪ್ರಕಾರ "ಜೈನಧರ್ಮವು ಕ್ರಿ.ಶ.ಪೂರ್ವ 292ರ ಹೊತ್ತಿಗೆ ಕರ್ನಾಟಕದಲ್ಲಿ ಕಾಲಿಟ್ಟು ರಾಜಾಶ್ರಯವನ್ನು ಪಡೆದು ಸುಮಾರು 12ನೇ ಶತಮಾನದವರೆಗೆ ಶ್ರೇಯೋಭಿವೃದ್ಧಿಯನ್ನು ಸಾಧಿಸಿತು. ನಂತರದ ದಿನಗಳಲ್ಲಿ ರಾಜಾಶ್ರಯ ತಪ್ಪಿದರೂ ಜೈನರ ಧಾರ್ಮಿಕ ಚಟುವಟಿಕೆಗಳು ನಿರಂತರವಾಗಿ ನಡೆದುಕೊಂಡು ಬಂದವು". [5]

ಕವಿಗಳ ಸಾಹಿತ್ಯವನ್ನು ಕುರಿತು ಈಗಾಗಲೇ ಅಧ್ಯಯನಗಳು ನಡೆದಿವೆ. ಅದೇ ರೀತಿ ಕರ್ನಾಟಕದಲ್ಲಿ ಜೈನಶಾಸನಗಳು ಹೇರಳವಾಗಿ ರಚನೆಯಾಗಿವೆ. ವಿಶೇಷವಾಗಿ 'ಎಪಿಗ್ರಾಫಿಯ ಕರ್ನಾಟಕ' ಹೆಸರಿನ ಶ್ರವಣಬೆಳಗೊಳದ ಶಾಸನ ಸಂಪುಟ ಪ್ರಕಟವಾಗಿರುವುದನ್ನು ಎತ್ತಿ ಹೇಳಬಹುದು. ಒಂದರ್ಥದಲ್ಲಿ ಶ್ರವಣಬೆಳಗೊಳದ ಶಾಸನಗಳೆಂದರೆ ಕನ್ನಡ ಲಿಪಿಶಾಸ್ತ್ರದ ಪ್ರಯೋಗಶಾಲೆ, ಶಿಲ್ಪಶಾಸ್ತ್ರಕ್ಕೆ ಸಂಬಂಧಿಸಿದಂತೆ ಕರ್ನಾಟಕ ಜೈನ ಶಿಲ್ಪಗಳ ಹೆಸರಿನ ಪ್ರತ್ಯೇಕ ಅಧ್ಯಯನದ ಅಗತ್ಯವಿದೆ. ಅದರ ಮುನ್ಸೂಚನೆಯೆಂಬಂತೆ ಹಲವು ವಿದ್ವಾಂಸರು ಜೈನ ಶಿಲ್ಪಕಲೆ, ಕಲೆಯಸ್ವರೂಪ, ವಾಸ್ತುಕಲೆ, ಮೂರ್ತಿಕಲೆ, ಚಿತ್ರಕಲೆ ಮುಂತಾಗಿ ಅಧ್ಯಯನ ಮಾಡಿದ್ದಾರೆ.

"ಕರ್ನಾಟಕ ಜೈನಸಂಸ್ಕೃತಿಗೆ ಕಾವ್ಯ, ಶಾಸನ, ಆಕರಗಳಾದಂತೆ ಜನಪದ ಅಧ್ಯಯನಕ್ಕೆ ಸಂಬಂಧಿಸಿದ ಜೈನಜನಪದ ಸಾಹಿತ್ಯ ಹೆಸರಿನ ಕೃತಿಗಳು ರಚನೆಯಾಗಿವೆ. ಅಂದರೆ ಗೀತೆಗಳು, ಕಥೆಗಳು, ಗಾದೆಗಳು, ಒಡಪುಗಳು ಮೌಖಿಕ ಸಂಪ್ರದಾಯದ ಆಚರಣೆ, ನಂಬಿಕೆಗಳನ್ನು ಪ್ರತಿಪಾದಿಸುವ ಈ ಪ್ರಯತ್ನವೂ ಸ್ತುತ್ಯರ್ಹವಾದುದು. ಈ ಹಿನ್ನೆಲೆಯಲ್ಲಿ ಕರ್ನಾಟಕ ಜೈನಧರ್ಮದ ಸಾಂಸ್ಕೃತಿಕ ಅನನ್ಯತೆಯನ್ನು ಪ್ರತಿಪಾದಿಸುವ ಪ್ರಯತ್ನಗಳು ಕಾಲಕಾಲಕ್ಕೆ ವಿದ್ವಾಂಸರಿಂದ ನಡೆದಿವೆ." [6]

## ಅಧ್ಯಯನದ ಉದ್ದೇಶ

ಒಂದು ನಾಡಿನ ಚರಿತ್ರೆಯನ್ನು ಪರಿಪೂರ್ಣವಾಗಿ ತಿಳಿಯಬೇಕಾದರೆ ಆ ನಾಡಿನ ಜನರ ಜೀವನ ಹಾಗೂ ಅವರ ಬದುಕಿನ ಒಳನೋಟವನ್ನು ಆಳವಾಗಿ ಅಭ್ಯಸಿಸಬೇಕಾಗುತ್ತದೆ. ಅವರ ಸಾಂಸ್ಕೃತಿಕ ಜೀವನ, ಅವರ ಆಚಾರ, ವಿಚಾರ ಭಾವನೆಗಳು, ಜನಪದ ಪರಂಪರೆ, ಸಂಪ್ರದಾಯ ಮುಂತಾದುವುಗಳನ್ನು ತೂಗಿನೋಡಿ ಮೌಲ್ಯಗಳನ್ನು ನಿರ್ಧರಿಸಬೇಕಾಗುತ್ತದೆ. ಉತ್ತರ ಭಾರತದಿಂದ ಆಗಮಿಸಿದ ಜೈನಧರ್ಮ, ಕರ್ನಾಟಕದಲ್ಲಿ ನೆಲೆನಿಂತು ತನ್ನನ್ನು ಈ ನಾಡಿನ ಚರಿತ್ರೆಯಲ್ಲಿ ಪರಿಪೂರ್ಣವಾಗಿ ತೊಡಗಿಸಿಕೊಂಡಿದೆ. ಅದರಲ್ಲೂ ಕನ್ನಡ ಸಾಹಿತ್ಯ, ಸಂಸ್ಕೃತಿ ಕ್ಷೇತ್ರದಲ್ಲಂತೂ, ಜೈನಧರ್ಮವೆಂದರೆ ಕನ್ನಡನಾಡು ಎಂಬಷ್ಟರ ಮಟ್ಟಿಗೆ ಅದರಲ್ಲಿ ಅಂತರ್ಗತವಾಗಿದೆ ಎಂದರೆ ಅತಿಶಯೋಕ್ತಿಯಲ್ಲವೆನ್ನಬಹುದು. ದಕ್ಷಿಣಭಾರತದ ಇತಿಹಾಸವೆಂದರೆ ಜೈನಧರ್ಮದ ಇತಿಹಾಸವೆಂಬಷ್ಟರ ಮಟ್ಟಿಗೆ ಈ ಧರ್ಮ ಕರ್ನಾಟಕದ ಮೇಲೆ ಪ್ರಭಾವ ಬೀರಿದೆ.

ಜೈನಹಾಡುಗಳನ್ನು ಕುರಿತ ತಳಮಟ್ಟದ ಮತ್ತು ಸ್ವತಂತ್ರ ರೂಪದ ಅಧ್ಯಯನಗಳು ಇದುವರೆವಿಗೂ ಹೆಚ್ಚು ನಡೆದಿಲ್ಲ. ಕೇವಲ ರಾಜಕೀಯ ಚರಿತ್ರೆಯ ಅಧ್ಯಯನದಲ್ಲಿ ಹೆಚ್ಚು ತೊಡಗಿಸಿಕೊಂಡಂತಹ ವಿದ್ವಾಂಸರನ್ನು ನಾವು ಕಾಣಬಹುದಾಗಿದೆ. ಆದರೂ ಅಲ್ಲಲ್ಲಿ ಸುರುಳಿಸುರುಳಿಯಾಗಿ ಜೈನಹಾಡುಗಳ ಬಗೆಗಿನ ವಿಷಯಗಳು ಬಿಚ್ಚಿಕೊಳ್ಳುತ್ತವೆ. ಅಲ್ಲದೇ ಹಾಡುಗಳು ಜೈನಸಂಸ್ಕೃತಿಯ ಒಂದು ಭಾಗ ಹಾಗೂ ಪ್ರತೀಕವಾಗಿವೆ. ಹಾಗಾಗಿ ಈ ಅಧ್ಯಯನ ಜೈನ ಸಂಸ್ಕೃತಿಯ ಜೊತೆಜೊತೆಗೆ ಸಾಗುವುದಾಗಿದೆ. ಈ ಜೈನ ಹಾಡುಗಳ ಅಧ್ಯಯನದ ಬಗ್ಗೆ ಡಾ. ಕೆ. ರಮೇಶರವರು ಬರೆದಿರುವ 'ಕನ್ನಡ ಜೈನಹಾಡುಗಳು ಸಾಂಸ್ಕೃತಿಕ ಅಧ್ಯಯನ' ಎಂಬ ಪುಸ್ತಕವು ವಿಶೇಷವಾದ ಮಾಹಿತಿ ನೀಡುತ್ತದೆ. ಡಾ. ಟಿ. ಜಿ. ಕಲಘಟಗಿಯವರು ಸಂಪಾದಿಸಿರುವ "ಕರ್ನಾಟಕದಲ್ಲಿ ಜೈನಧರ್ಮ–ಒಂದು ಅಧ್ಯಯನ" (1976) ಕೃತಿಯು ಕರ್ನಾಟಕದಲ್ಲಿ ಜೈನಧರ್ಮದ ಉಗಮ, ಬೆಳವಣಿಗೆ, ಸಂಸ್ಕೃತಿಯ ಬಗ್ಗೆ

ಮಾಹಿತಿಯನ್ನು ನೀಡುತ್ತದೆ. ಇದೇ ರೀತಿ ಎಸ್. ಆರ್ ಶರ್ಮರವರ "Jainism and Karnataka Culture" (1940) ಈ ಕೃತಿಗಳಲ್ಲಿ ಲಭ್ಯವಿರುವ ಎಲ್ಲಾ ಮೂಲಗಳಿಂದಲೂ ದೊರೆಯುವ ಖಚಿತವಾದ ದಾಖಲೆಗಳನ್ನು ಆಧರಿಸಿ ಜೈನ ಸಂಸ್ಕೃತಿಯ ಸ್ಪಷ್ಟವಾದ ಚಿತ್ರವನ್ನು ನೀಡಲು ಪ್ರಯತ್ನಿಸಿದ್ದಾರೆ. ಜೈನಧರ್ಮದ ಅಭ್ಯಾಸಿಗಳಿಗೆ ಈ ಗ್ರಂಥಗಳು ಉತ್ತಮ ಮಾರ್ಗಸೂಚಿಯಾಗಿವೆಯೆನ್ನಬಹುದು.

ಇತ್ತೀಚೆಗೆ ಜೈನರಹಾಡುಗಳು ಮತ್ತು ಸಂಸ್ಕೃತಿಯ ಬಗ್ಗೆ ಬಂದಿರುವಂತಹ ಇನ್ನಿತರ ಪುಸ್ತಕಗಳನ್ನು ಇಲ್ಲಿ ಉಲ್ಲೇಖಿಸಬಹುದು. "ಜೈನಗ್ರಂಥಸ್ಥ ಹಾಡುಗಳು" (2011) ಎಂಬ ಪುಸ್ತಕವನ್ನು ಕರ್ನಾಟಕ ರಾಜ್ಯ ಪ್ರತ್ರಾಗಾರ ಇಲಾಖೆ, ಬೆಂಗಳೂರು ಇವರು ಹೊರತಂದಿದ್ದು, ಡಾ.ಎಸ್.ಡಿ ಶೆಟ್ಟಿಯವರು ಇದನ್ನು ಸಂಪಾದಿಸಿದ್ದಾರೆ. ಡಾ. ಎಸ್. ಪಿ. ಪದ್ಮಪ್ರಸಾದ್‌ರವರು ಸಂಪಾದಿಸಿರುವ, "ಜೈನಜನಪದ ಸಾಹಿತ್ಯ ಸಂಪಾದನೆ ಮತ್ತು ಅಧ್ಯಯನ" (2009) ಅಲ್ಲದೆ ಡಾ.ಎಫ್. ಟಿ. ಹಳ್ಳಿಕೇರಿ ಅವರ "ಡಾ. ಕೆ. ರವೀಂದ್ರನಾಥರವರು ಸಂಪಾದಿಸಿರುವ ಕನ್ನಡ ಹಾಡುಗಳು" ಎಂಬ ಕೃತಿ ಕರ್ನಾಟಕದ ಜೈನಸಂಸ್ಕೃತಿ ಹಾಗೂ ಹಾಡುಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ನೀಡುತ್ತವೆ.

ಯಾವುದೇ ಜನಾಂಗದ ಅಥವಾ ನಾಡಿನ ಸಾಂಸ್ಕೃತಿಕ ಅಧ್ಯಯನದ ರೂಪುರೇಷೆಗಳನ್ನು ನಿರ್ಮಿಸಿಕೊಳ್ಳಲು ಬಹು ಸಹಾಯಕವಾಗುವ ಗ್ರಂಥವೆಂದರೆ **"Out line of Cultural Materials" (Pub Human Relation Area files I NC 333 cedar Strect New Haven"** ಎಂಬ ಗ್ರಂಥ. ಇದು ಮುಖ್ಯವಾಗಿ ಸಾಮಾಜಿಕ ಅಧ್ಯಯನವನ್ನು ಕೈಗೊಂಡವರಿಗೆ ಯಾವಯಾವ ಶೀರ್ಷಿಕೆಯಡಿಯಲ್ಲಿ ವಿಷಯವನ್ನು ಸಂಗ್ರಹಿಸಬಹುದೆಂಬುದರ ಬಗ್ಗೆ ನಿಖರವಾದ ಮಾರ್ಗದರ್ಶನವನ್ನು ನೀಡುತ್ತದೆ.

ನಮ್ಮಲ್ಲಿ 'ಸಂಸ್ಕೃತಿ' ಎಂಬ ಪದವು ಈಗಾಗಲೇ ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ. ಅನೇಕ ವಿದ್ವಾಂಸರು ಸಂಸ್ಕೃತಿ ನಾಗರಿಕತೆಗಿರುವ ಸಾಮ್ಯ, ವೈಷಮ್ಯಗಳನ್ನು ತಲಸ್ಪರ್ಶಿಯಾಗಿ ಚರ್ಚಿಸಿದ್ದಾರೆ. 'ಸಂಸ್ಕೃತಿ' ಎಂಬ ಪದವನ್ನು ಇಂಗ್ಲಿಷ್‌ನ 'Culture' ಎಂಬ ಶಬ್ದಕ್ಕೆ ಸಮಾನಾರ್ಥಕವಾಗಿ ಬಳಸಲಾಗುತ್ತಿದ್ದು, 'Culture' ಎಂಬ ಪದ ಒಳಗೊಂಡಿರುವ ಅರ್ಥಕ್ಕಿಂತ ಹೆಚ್ಚು ವ್ಯಾಪ್ತಿಯ ಅರ್ಥವನ್ನು 'ಸಂಸ್ಕೃತಿ' ಎಂಬ ಪದವು ಒಳಗೊಂಡಿದೆ ಎಂಬುದಾಗಿ ಕೆಲವು ವಿದ್ವಾಂಸರು ತೋರಿಸಿಕೊಟ್ಟಿದ್ದಾರೆ.

"Culture" ಪದವನ್ನು ಮೊಟ್ಟಮೊದಲು ನಿಖರವಾಗಿ ಪ್ರಯೋಗಿಸಿದವನು, ಮಾನವ ಶಾಸ್ತ್ರದ ಪಿತಾಮಹನೆನಿಸಿಕೊಂಡ ಇ. ಬಿ. ಟೈಲರ್ (Primitive Culture–1871). ಜೈವಿಕರೂಪದ ಪ್ರಾಣಿವರ್ಗಗಳಿಂದ ಮನುಷ್ಯನನ್ನು ಬೇರ್ಪಡಿಸಬಲ್ಲ ಒಂದೇ ಒಂದು ಅಂಶವೆಂದರೆ ಸಂಸ್ಕೃತಿ. ಪ್ರಾಣಿಗಳಿಗೆ ಸಂಸ್ಕೃತಿ ಇಲ್ಲ, ಮನುಷ್ಯನಿಗೆ ಸಂಸ್ಕೃತಿ ಇದೆ. ಈ ಮಾತಿನಿಂದ ಸಂಸ್ಕೃತಿ ಎಂದರೇನು ಎಂಬುದು ಮನದಟ್ಟಾಗುತ್ತದೆ. ಸಂಸ್ಕೃತಿಯೆಂಬುದು ಮುಖ್ಯವಾಗಿ ಅಂತರಂಗದ ವಿಕಾಸಕ್ಕೆ ಸಂಬಂಧಿಸಿದುದು. ಮನುಷ್ಯನಲ್ಲಿಯ ಮೃಗತ್ವವನ್ನು ಹೋಗಲಾಡಿಸಿ ಮಾನವೀಯತೆಯನ್ನು ಸೃಷ್ಟಿಸುವುದು ಇದರ ಗುರಿ. ಟಿ. ಎಸ್. ಎಲಿಯಟ್ ಹೇಳುವಂತೆ (Notes towards the definition of Culture P.–13) ಸಂಸ್ಕೃತಿ ಎಂಬುದು ಒಂದು ಸಮಸ್ತ ಜನಾಂಗದ ಕ್ರಿಯೆಗಳನ್ನು, ಅಭಿರುಚಿಗಳನ್ನು ಒಳಗೊಳ್ಳುತ್ತದೆ. ಜನರು ತಾವು ಗಳಿಸಿದ ಉತ್ತಮವಾದ ಮೌಲ್ಯಗಳನ್ನೆಲ್ಲ ಮುಂದಿನ ಜನಾಂಗಕ್ಕೆ ದಾಟಿಸುತ್ತಾ ಬರುತ್ತಾರೆ". [7]

"ಮ್ಯಾಥ್ಯು ಅರ್ನಾಲ್ಡ್‌ನು ಹೇಳುವಂತೆ (Culture and Anarchy pp.viii,4-32) 'ಸಂಸ್ಕೃತಿ' ಎಂದರೆ ಉತ್ತಮ ಆಲೋಚನೆ, ಭಾವನೆ, ಅನುಸರಿಸುವ ಪದ್ಧತಿ ಇತರರ ಬೆಳಕಿನಲ್ಲಿ ನಮ್ಮನ್ನು ನಾವು ತಿದ್ದಿಕೊಳ್ಳುವ, ಉತ್ತಮಪಡಿಸಿಕೊಳ್ಳುವ ಪ್ರಯತ್ನ. ಹೆಚ್ಚು ಆನಂದ, ಬೆಳಕು, ಅನುಕಂಪೆಯುಳ್ಳ ಆಂತರಂಗಿಕ ಆತ್ಮ ಸಂಬಂಧಿಯಾದ ಕ್ರಿಯೆ. ಅದು ವ್ಯಕ್ತಿವಿಕಾಸನಕ್ಕೆ ನಾಂದಿಯಾಗುವಂತೆ, ಸುಸಂಸ್ಕೃತ ಸಮಾಜ ಸೃಷ್ಟಿಗೂ ಕಾರಣವಾಗುತ್ತದೆ. ಈ ಅರ್ಥದಲ್ಲಿ ರವೀಂದ್ರನಾಥ ಠಾಗೂರರು (Civilization and progress,

pp.42.58) ಹೇಳುವಂತೆ, ಸಂಸ್ಕೃತಿಯೆಂಬುದು ಆಕಸ್ಮಿಕ ಮೊತ್ತವಲ್ಲ, ಪರಿಪೂರ್ಣತೆಯ ದಿವ್ಯ ದರ್ಶನದ ಅಭಿವ್ಯಕ್ತಿ, ಮನುಷ್ಯ ನಿಜವಾಗಿ ಏನಾಗಿದ್ದಾನೆಯೋ ಅದರ ಅತ್ಯುತ್ತಮ ಅಭಿವ್ಯಕ್ತಿ ಧರ್ಮವೇ ಆಗಿದೆ. ಅದು ಸಾಂಘಿಕ ಜೀವನದಲ್ಲಿ ಅಭಿವ್ಯಕ್ತಿಗೊಂಡು ಸಂಸ್ಕೃತಿಯಾಗಿದೆ ಎಂದಿದ್ದಾರೆ. ಈ ದೃಷ್ಟಿಯಿಂದ ಒಂದು ಜನಾಂಗದ ಸಾಂಸ್ಕೃತಿಕ ಅಧ್ಯಯನವೆಂದರೆ, ಆ ಜನಾಂಗದ ಸಮಸ್ತ ಸಂವೇದನೆಗಳ ಧಾರ್ಮಿಕ ಜೀವನವೇ ಆಗಿದೆ. ಸಮಾಜದ ಪರಿಧಿಯಲ್ಲಿ ಕಾಲಕಾಲಕ್ಕೆ ಉಂಟಾದ ಜೀವನಕ್ರಮದ ಬದಲಾವಣೆ, ಬದುಕನ್ನು ಪ್ರತಿನಿಧಿಸುವ ಇತಿಹಾಸ, ಕಲೆ, ಎಲ್ಲವೂ ಇದರಲ್ಲಿ ಸೇರಿಕೊಳ್ಳುತ್ತವೆ. ತಮ್ಮ ಬದುಕಿನ ಸಂದರ್ಭದಲ್ಲಿ ನಿರ್ಮಿಸಿಕೊಂಡ ಜೈವಿಕ, ಅಜೈವಿಕ ಸಾಧನ ಸಂಪತ್ತುಗಳ ಜೊತೆಗೆ ಈ ಜನಾಂಗವು ಕಟ್ಟಿಕೊಂಡ ರಕ್ತ ಸಂಬಂಧ, ವ್ಯಕ್ತಿಸಂಬಂಧ, ವಂಶ, ಗೋತ್ರ, ವಿವಾಹ, ಹುಟ್ಟು–ಸಾವು, ದೇವರು, ಆತ್ಮ, ಆಚರಣೆ, ನಂಬಿಕೆ, ಸೌಂದರ್ಯಪ್ರಜ್ಞೆ , ಮೌಲ್ಯಗಳು, ಶಿಕ್ಷಣ, ಅನ್ಯಸಂಸ್ಕೃತಿಯ ಸ್ವೀಕಾರ– ಹೀಗೆ ಹತ್ತುಹಲವು ವಿಷಯಗಳು ಸುತ್ತುವರಿದು ಸಂಲಗ್ನವಾಗಿ, ಸಂವಹನಗೊಡು ಸಂಸ್ಕೃತಿಯೊಂದನ್ನು ರೂಪಿಸಿಕೊಳ್ಳುತ್ತವೆ.” [8] ಒಟ್ಟು ಸಮಾಜದ ಸಮಷ್ಟಿ ಬದುಕಿನ ನಡುವೆ ತನ್ನ ವೈಯಕ್ತಿಕತೆಯನ್ನು ಉಳಿಸಿಕೊಳ್ಳುತ್ತದೆ. ಕರ್ನಾಟಕ ಜೈನಧರ್ಮದ ಜೈನಹಾಡುಗಳ ಸಾಂಸ್ಕೃತಿಕ ಅಧ್ಯಯನವನ್ನು ಈ ಹಿನ್ನೆಲೆಯಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಇಂತಹ ಅಧ್ಯಯನಗಳು ತನ್ನ ಆಳವಿಸ್ತಾರವನ್ನು ಹೆಚ್ಚಿಸಿಕೊಂಡು, ಆಯಾಧರ್ಮದ ವಿವಿಧ ಸಂಸ್ಕೃತಿ ಸಂಪ್ರದಾಯಗಳನ್ನು ವಿವಿಧ ಆಯಾಮಗಳಿಂದ ತೂಗಿನೋಡುವ, ಹಾಗೂ ವಿಮರ್ಶಿಸಿ ತೌಲನಿಕವಾಗಿ ಒರೆಹಚ್ಚುವ ದಿಕ್ಕಿನತ್ತ ಚಲಿಸುತ್ತವೆ. ಕರ್ನಾಟಕ ಧಾರ್ಮಿಕ ಹಿನ್ನಲೆಯಲ್ಲಿ, ವಿಭಿನ್ನ ಜನಾಂಗಗಳ, ವಿವಿಧ ಸಂಸ್ಕೃತಿಗಳ ಜೊತೆಗೆ ಜೈನಧರ್ಮವನ್ನಿಟ್ಟು ತೌಲನಿಕವಾಗಿ ನೋಡಲು ಸಹಾಯಕವಾಗಿದೆ. ಈ ಅಧ್ಯಯನದ ವಿಷಯಕ್ಕೆ ಸಮಗ್ರತೆ ಮತ್ತು ಸ್ಪಷ್ಟತೆಯಿರಬೇಕೆಂಬ ಕಾರಣದಿಂದ, ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಜೈನಧರ್ಮದ ಹಿನ್ನೆಲೆ, ಹುಟ್ಟು, ಬೆಳವಣಿಗೆ ಮತ್ತು ಅದು ನೀಡಿದ ಕೊಡುಗೆಗಳನ್ನು ಕರ್ನಾಟಕಕ್ಕೂ ಆಗಮಿಸಿ ಇಲ್ಲಿ ಪಡೆದುಕೊಂಡ ಮಹತ್ವ ಹಾಗೂ ನೀಡಿದ ಕೊಡುಗೆಗಳನ್ನು ಸಮೀಕ್ಷಿಸಿ, ಆ ವಿಷಯದ ಮುಂದುವರಿಕೆಯ ರೂಪದಲ್ಲಿ ಕರ್ನಾಟಕದ “ಗ್ರಂಥಸ್ಥ ಮತ್ತು ಕಂಠಸ್ಥ ಜೈನ ಹಾಡುಗಳು” ಗಳ ಕುರಿತ ಸಾಂಸ್ಕೃತಿಕ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

## ವ್ಯಾಪ್ತಿ

ಒಂದು ಅಧ್ಯಯನದ ನಿಶ್ಚಿತ ಫಲಿತವನ್ನು ಕಂಡುಕೊಳ್ಳಬೇಕಾದರೆ, ಆ ವಿಷಯದ ಅಥವಾ ಅಧ್ಯಯನದ ವ್ಯಾಪ್ತಿ ಅಥವಾ ಚೌಕಟ್ಟು ಬಹಳ ಮುಖ್ಯವಾಗುತ್ತದೆ. ಅಧ್ಯಯನದ ವ್ಯಾಪ್ತಿ ಎಂದರೆ, ಅಧ್ಯಯನದ ಚೌಕಟ್ಟು ಎಂದರ್ಥ. ಪ್ರಸ್ತುತ ಈ ಮಹಾಪ್ರಬಂಧದಲ್ಲಿ ಜೈನರ ಗ್ರಂಥಸ್ಥ ಮತ್ತು ಕಂಠಸ್ಥ ಹಾಡುಗಳೆರಡನ್ನೂ ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕೇವಲ ಜೈನಹಾಡುಗಳ ವ್ಯಾಕರಣ, ಛಂದಸ್ಸು ಮೊದಲಾದ ರಾಚನಿಕ ಅಧ್ಯಯನಕ್ಕೆ ಒತ್ತುಕೊಡದೆ, ಆ ಹಾಡುಗಳ ಸಾಂಸ್ಕೃತಿಕ ಸಂರಚನೆಗೆ ಗಮನ ನೀಡಲಾಗಿದೆ. ಅಂದರೆ ಜೈನಹಾಡುಗಳ ರಚನೆಯ ಹಿಂದೆ ಜೈನಕಥಾವಸ್ತುವಿದೆ, ತತ್ವವಿದೆ, ಸಿದ್ಧಾಂತವಿದೆ. ಆ ಧರ್ಮದ ಆಚರಣೆ, ನಂಬಿಕೆಗಳಿವೆ. ಇವೆಲ್ಲವುಗಳನ್ನು ಪರಿಶೋಧಿಸುವ ಸಾಂಸ್ಕೃತಿಕ ಅನನ್ಯತೆಯನ್ನು ಈ ಮಹಾಪ್ರಬಂಧದ ವ್ಯಾಪ್ತಿಗೆ ಒಡ್ಡಲಾಗಿದೆ. ಅಂದರೆ ಹಾಡುಗಳು ಪ್ರತಿನಿಧಿಸುವ ಆಭೌತಿಕವಾದಂತಹ ಆತ್ಮಪರಿಕಲ್ಪನೆ, ಜೈನದರ್ಶನ, ಲೋಕನೀತಿತತ್ವ, ಮತ್ತು ತೀರ್ಥಂಕರಸ್ತುತಿ, ಯಕ್ಷಯಕ್ಷಿಯರ ಸ್ತುತಿಗಳ ಅಧ್ಯಯನ ಮಾತ್ರವಲ್ಲದೆ, ಆ ಧರ್ಮದಲ್ಲಿರುವ ಸಂಪ್ರದಾಯ, ಆಚರಣೆಗಳನ್ನು, ಹಬ್ಬಹರಿದಿನಗಳನ್ನೂ ಅಧ್ಯಯನ ಹಾಗೂ ವಿಶ್ಲೇಷಣೆಗಳಿಗೆ ಒಳಪಡಿಸಲಾಗಿದೆ.

ಅಲ್ಲದೆ ಒಂದು ಮಹಾಕಾವ್ಯ ಪ್ರತಿಪಾದಿಸಬಹುದಾದ ಜೈನಧಾರ್ಮಿಕ ಆಚರಣೆಗಳಾದ ಪಂಚಾಣುವ್ರತ, ಸಪ್ತವ್ಯಸನ, ತಪಸ್ಸು, ದಾನ, ಧರ್ಮ ಮತ್ತು ತೀರ್ಥಂಕರರ ಚರಿತ್ರೆಯನ್ನು ಕುರಿತಂತ ಸಂಗತಿಗಳನ್ನು ಜೈನ ಹಾಡುಗಳು ವಿವರಿಸುತ್ತವೆ ಎಂಬುದನ್ನು ಅಧ್ಯಯನಕ್ಕೆ ಒಳಪಡಿಸುವುದರ ಮೂಲಕ ಕರ್ನಾಟಕ ಜೈನಸಂಸ್ಕೃತಿಯನ್ನು

ಪುನರ್ ರಚನೆಗೊಳಿಸುವ ಮತ್ತು ಗ್ರಾಂಥಿಕ ಹಾಡುಗಳ ಜೊತೆಗೆ ಕಂಠಸ್ಥ ಹಾಡುಗಬ್ಬ ಸಾಹಿತ್ಯವೂ ಕೂಡ, ಒಂದು ಸಮುದಾಯದ ಸಾಂಸ್ಕೃತಿಕ ಅಧ್ಯಯನಕ್ಕೆ ಆಕಾರವಾಗಬಲ್ಲವು ಎಂಬುದನ್ನು ನಿರೂಪಿಸುವ ಅಧ್ಯಯನ ಇದಾಗಿದೆ.

ಜೈನಪರಂಪರೆಯ ಗ್ರಾಂಥಿಕ ಹಾಡುಗಳ ಹಿನ್ನೆಲೆ ಬೆಳವಣಿಗೆ, ಅವುಗಳ ವಸ್ತುವಿನ ವಿಸ್ತಾರಗಳನ್ನು ಚರ್ಚಿಸುವುದರ ಜೊತೆಗೆ, ಹಾಡುಗಳ ಕೆಲವು ವಿಶ್ಲೇಷಣೆಯನ್ನು ಸಹ ಮಾಡಲಾಗಿದೆ. ಜೈನ ಹಾಡುಗಳ ಗ್ರಾಂಥಿಕ ರೂಪಗಳ ಜೊತೆಜೊತೆಗೆ, ಜೈನಹಾಡುಗಳ ಜನಪದ ಹಾಡುಗಬ್ಬ ಸಾಹಿತ್ಯದ ಅನೇಕ ಪ್ರಕಾರಗಳನ್ನೂ, ಆ ಪ್ರಕಾರಗಳ ಹಾಡುಗಳನ್ನೂ ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿ ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರಸ್ತುತ ಕಂಠಸ್ಥ ಮತು ಗ್ರಂಥಸ್ಥ ಹಾಡುಗಳ ಮೂಲಕ ಜೈನಸಾಹಿತ್ಯದ ಅನನ್ಯತೆ, ವಿಸ್ತಾರತೆಗಳನ್ನು ಹಾಗೂ ಜೈನ ಸಮುದಾಯದ ಆಚರಣೆ ಮತ್ತು ನಂಬಿಕೆಗಳನ್ನು ಶೋಧಿಸುವ ಕಡೆಗೆ ಗಮನಹರಿಸಿದೆ. ಪ್ರಸ್ತುತ ಈ ಸಂಶೋಧನ ಮಹಾಪ್ರಬಂಧ ಕರ್ನಾಟಕ ಜೈನ ಸಾಂಸ್ಕೃತಿಕ ಚರಿತ್ರೆಯು ಹಾಡುಗಳ ಮೂಲಕ ಹೇಗೆ ಅಭಿವ್ಯಕ್ತಗೊಂಡಿದೆ ಎಂಬುದನ್ನು ವಿಶ್ಲೇಷಿಸುತ್ತದೆ.

ಸಂಶೋಧನೆಗೆ ಮೂಲದ್ರವ್ಯ ಹಾಡುಗಳೇ ಆಕರಗಳಾಗಿದ್ದು, ಈ ಹಾಡುಗಳ ವಿಷಯವನ್ನು ಚರ್ಚಿಸಲು ಕನ್ನಡ ಜೈನಕಾವ್ಯಗಳನ್ನು, ಜೈನತತ್ವ–ಸಿದ್ಧಾಂತಗಳನ್ನು ಪೂರಕಸಾಮಾಗ್ರಿಗಳಾಗಿ ಬಳಸಿಕೊಳ್ಳಲಾಗಿದೆ. ಪ್ರಮುಖ ಆಕರಗಳ ಶೋಧಕ್ಕಾಗಿ ಕ್ಷೇತ್ರ ಕಾರ್ಯವನ್ನು ಕೈಗೊಳ್ಳಲಾಗಿದೆ. ಈಗಾಗಲೇ ಪ್ರಕಟಗೊಂಡ ಜೈನ ಹಾಡುಗಳ ಸಂಗ್ರಹದ ಗ್ರಂಥ ಭಂಡಾರಗಳನ್ನು ಹಾಗೂ ಕೆಲವು ವಿದ್ವಾಂಸರನ್ನು ಸಂದರ್ಶಿಸಲಾಗಿದೆ. ಜನಪದ ಸಾಹಿತ್ಯದ ಹಾಡುಗಳ ಸಂಗ್ರಹಕಾರ್ಯವಂತೂ, ಕ್ಷೇತ್ರಕಾರ್ಯ, ಸಂದರ್ಶನದ ಮೂಲಕ ಮೂಡಿಬಂದಿರುವ ಕಾರ್ಯವಾಗಿದೆ. ಆದ್ದರಿಂದ ಈ ಅಧ್ಯಯನದ ವ್ಯಾಪ್ತಿ ವಿಸ್ತೃತವಾಗಿದೆ.

ವಿಶೇಷವಾಗಿ ಜೈನಹಾಡುಗಳನ್ನು ರತ್ನಾಕರನ ಹಾಡುಗಳು, ತೀರ್ಥಂಕರನ ಹಾಡುಗಳು, ಯಕ್ಷಿಣಿಯರ ಹಾಡುಗಳು, ಜೋಗುಳದ ಹಾಡುಗಳು, ಶೋಭಾನದ ಹಾಡುಗಳು, ಮಂಗಳಾರತಿಯ ಹಾಡುಗಳು, ಮತ್ತು ಸಂಕೀರ್ಣದ ಹಾಡುಗಳು ಎಂದು ವರ್ಗೀಕರಿಸಿಕೊಂಡು ಹಾಡುಗಳ ವಸ್ತು ವೈವಿಧ್ಯತೆಯನ್ನು ಈ ಮಾಹಾಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಹಸ್ತಪ್ರತಿಯಲ್ಲಿ ಬಹು ದೊಡ್ಡಪ್ರಮಾಣದಲ್ಲಿ ಸಿಗುವ, ಹಾಗೂ ಅವುಗಳಲ್ಲಿನ ಅಪ್ರಕಟಿತವಾದ ಹಾಡುಗಳನ್ನು ಅಧ್ಯಯನಕ್ಕೆ ಒಳಪಡಿಸುವ ಮೂಲಕ ಜೈನಹಾಡುಗಳ ಗಾತ್ರ ಬಾಹುಳ್ಳವನ್ನು ನಿರ್ಧರಿಸುವ ಪ್ರಯತ್ನ ಮಾಡಲಾಗಿದೆ. ಜೈನ ತೀರ್ಥಂಕರರು, ನೋಂಪಿಗಳು, ಯಕ್ಷಯಕ್ಷಿಯರನ್ನು ಕುರಿತು ಹೇರಳವಾದ ಜೈನ ಸಾಹಿತ್ಯ ಪರಂಪರೆ ನಿರ್ಮಾಣಗೊಂಡಿದೆ. ಈ ಎಲ್ಲ ಅಂಶಗಳನ್ನು ತಮ್ಮ ಬದುಕಿನ ಭಾಗವೆಂಬಂತೆ ಹಾಡಿ ಹೊಗಳಿದ್ದಾರೆ. ಹಾಡುಗಳನ್ನು ರಾಗ–ಲಯ–ತಾಳಬದ್ಧವಾಗಿ ಸ್ಥಳೀಯ ಜನರ ಸಮ್ಮುಖದಲ್ಲಿ ಸೃಷ್ಟಿಸಿಕೊಂಡಿದ್ದಾರೆ. ಈ ಹಾಡುಗಳು ಆ ಸ್ಥಳೀಯರ ಚರಿತ್ರೆಯನ್ನು ಹೇಳುವುದರ ಮೂಲಕ ಅದರ ಜೊತೆಯಲ್ಲೇ, ಜೈನಧರ್ಮದ ಸಂಪ್ರದಾಯ, ನಂಬಿಕೆ, ಆಚರಣೆ, ರೀತಿ–ನೀತಿಗಳು, ಸ್ಥಳನಾಮಗಳು, ಸಾಮಾಜಿಕ ಸ್ಥಿತ್ಯಂತರಗಳನ್ನು ಜೈನಹಾಡುಗಳ ಮೂಲಕ ನಿರ್ವಚಿಸಲಾಗಿದೆ. ಇದು ಈ ಮಹಾಪ್ರಬಂಧದ ಉದ್ದೇಶವಾಗಿದ್ದು, ಇದರ ಅಧ್ಯಯನ ವ್ಯಾಪ್ತಿಯು ವಿಶಾಲವಾದುದಾಗಿದೆ.

"ಜೈನಧರ್ಮದ ಮೂಲ ಆಧಾರಗ್ರಂಥಗಳೆಲ್ಲ ಪ್ರಾಕೃತ ಭಾಷೆಯಲ್ಲಿವೆ. ಧರ್ಮದ ತತ್ವಗಳೆಲ್ಲ ನೀರಸ, ಕ್ಲಿಷ್ಟ ಹಾಗೂ ಸೂಕ್ಷ್ಮ. ಇದನ್ನು ಜನಸಾಮಾನ್ಯರಿಗೆ ಸರಳ ಸುಲಭವಾಗಿಸಲು ಜನಭಾಷೆಯಲ್ಲಿ ಬರೆಯಲು ಪ್ರಯತ್ನಿಸಿದರು. ನೀತಿ ನೆಲೆಗಟ್ಟಿನ ಮೇಲೆ ಜೈನಧರ್ಮ ನಿಂತಿದ್ದು, ಸದ್ಗುಣ– ಸದ್ಭಾವನೆಗಳು ಇದರ ತಾಯಿಬೇರು. ಜನರಲ್ಲಿ ಭಕ್ತಿಯನ್ನು ಮೂಡಿಸುವುದರ ಜೊತೆಗೆ, ಧರ್ಮದ ವರ್ತುಲದೊಳಗೆ ಬರಮಾಡಿಕೊಳ್ಳಲು, ಸರಳ ಹಾಗೂ ಜನಪ್ರಿಯುವಾದ ಹಾಡುಗಬ್ಬ ಸಾಹಿತ್ಯ ಸೃಷ್ಟಿಸಿದರು." [9]

"ಜೈನ ಹಾಡುಗಳಲ್ಲಿನ ಮುಕ್ತಬಂಧ, ಗೇಯಗುಣ; ಧಾರ್ಮಿಕ ಸಿದ್ಧಾಂತಗಳು, ಸಾಹಿತ್ಯ ಮತ್ತು ಚರಿತ್ರೆಯ ಸಂಬಂಧ, ಮೌಖಿಕ ಪರಂಪರೆಯ ಬಾಂಧವ್ಯ, ಲಿಖಿತ ಪರಂಪರೆಗೆ ಒಂದು ಹೊಸತನ ತಂದುಕೊಡುವ ಗುಣ–

ಇವುಗಳು ಪ್ರಧಾನ ಲಕ್ಷಣಗಳಾಗಿ ಕಂಡು ಬರುತ್ತವೆ. ಇಂಥ ಗೇಯಗುಣ; ಮುಕ್ತಬಂಧ ಹಾಗೂ ಐತಿಹಾಸಿಕ ಸಂಗತಿಗಳಿಂದ ಕೂಡಿದ ಜೈನ ಹಾಡಿನ ಇತಿಹಾಸವನ್ನು ಕುರಿತು ಚರ್ಚಿಸುವ ಮತ್ತೊಂದು ಉದ್ದೇಶವನ್ನು ಈ ಪ್ರಬಂಧ ಒಳಗೊಂಡಿದೆ. ಹಾಗೆಯೇ ನಡುಗನ್ನಡ ಸಂದರ್ಭದ ಹೊತ್ತಿಗೆ ಸಾಂಗತ್ಯ ಕೃತಿಗಳು, ದೇಸಿ ಛಂದಸ್ಸಿನ ಪ್ರಕಾರಗಳು ರಚನೆಗೊಂಡಿದ್ದವು. ಇದಕ್ಕೆ ಪೂರಕವೆನ್ನುವ ಹಾಗೆ ಜೈನಕವಿಗಳು ರಾಗ, ತಾಳಬದ್ಧವಾದ ಹಾಡುಗಳನ್ನು ರಚಿಸಲು ಮುಂದಾದುದನ್ನು ದಾಖಲಿಸುವುದು. ಹಾಗೆಯೆ ಅನುಭಾವಗೀತೆ, ಕೈವಲ್ಯಪದ, ಭಜನೆಹಾಡು ಮುಂತಾದ ಹಾಡುಗಬ್ಬ ಪರಂಪರೆ ಮಾನವನಲ್ಲಿ ಧಾರ್ಮಿಕತೆಯ ಒಲವು ಮೂಡುವಂತೆ ಮಾಡಲು ಅಭಿವ್ಯಕ್ತಗೊಂಡವು. ಇಂಥ ಕಾವ್ಯೋಕ್ತ ಕಥಾವಸ್ತು ಒಬ್ಬ ಹಾಡುಗಾರನ ಕೈಯಲ್ಲಿ ಒಂದು ಕಥನಕಾವ್ಯವಾಗಿ ರೂಪುಗೊಂಡ ಬಗೆಯನ್ನು ಶೋಧಿಸುವುದು ಈ ಮಹಾಪ್ರಬಂಧದ ಮಗದೊಂದು ಉದ್ದೇಶವಾಗಿದೆ". [10]

"ಜೈನಗ್ರಂಥಸ್ಥ ಹಾಡುಗಳು, ಕನ್ನಡ ಜಾನಪದ ಲೋಕಕ್ಕೆ ಸಂಬಂಧಿಸಿದವುಗಳಾಗಿವೆ. ಜೈನರು ವಿಶೇಷವಾಗಿ ಕನ್ನಡ ಮಾರ್ಗಸಾಹಿತ್ಯದ ಪ್ರವರ್ತಕರಾಗಿದ್ದರೂ ಕೂಡ, ಕನ್ನಡ ದೇಸೀಯ ಸಾಹಿತ್ಯವನ್ನು ಕಡೆಗಣಿಸಿಲ್ಲವೆಂಬುದು ಇಲ್ಲಿನ ಗ್ರಂಥಸ್ಥ ಹಾಡುಗಳಿಂದ ಸಿದ್ಧವಾಗುತ್ತದೆ. ಇವರು ಸಾಮಾನ್ಯವಾಗಿ ಅಕ್ಷರಸ್ಥ ಸಂಸ್ಕೃತಿಗೆ ಸಂಬಂಧಪಟ್ಟವರಾಗಿದ್ದರೂ ಕೂಡ, ಹಳ್ಳಿ, ಗ್ರಾಮಗಳಲ್ಲಿ ವಾಸವಾಗಿರುವ ಹಲವರು ಅನಕ್ಷರಸ್ಥರಾಗಿ ಇರುವುದು ಕಂಡುಬರುತ್ತದೆ. ಇನ್ನು ಕೆಲವರು ಸಾಮಾನ್ಯ ಅಕ್ಷರ ಜ್ಞಾನವುಳ್ಳವರಾಗಿದ್ದರೂ ಅವರನ್ನು ವಿದ್ಯಾವಂತ ವರ್ಗಕ್ಕೆ ಸೇರಿಸಲು ಸಾಧ್ಯವಾಗದು, ಏಕೆಂದರೆ ಇಂಥವರು ಸಾಮಾನ್ಯ ಓದು ಬರಹಕ್ಕಷ್ಟೇ ಸೀಮಿತವಾಗಿರುತ್ತಾರೆ. ಇಂಥ ಜನರು ರಚಿಸಿರುವ ಹಾಡುಗಳು ಮೌಖಿಕ ಪರಂಪರೆಯಲ್ಲಿ ಮುಂದುವರಿಯುತ್ತಾ ಬಂದು, ಮುಂದೆ ಅದು ವಿದ್ಯಾವಂತರ ಕೈಗೆ ದೊರೆತು ಗ್ರಂಥಸ್ಥ ರೂಪವನ್ನು ಪಡೆದಿರಬೇಕು. ಇಲ್ಲಿಯ ಹಾಡುಗಳು ವಿಶೇಷವಾಗಿ ಜನಪದ ಛಂದಸ್ಸಿನ ಮೂಲ ರೂಪವಾಗಿರುವ ತ್ರಿಪದಿಯಲ್ಲಿ ರಚನೆಯಾಗಿರುವುದು ಕಂಡುಬರುತ್ತದೆ. ಜೊತೆಗೆ ದ್ವಿಪದಿ, ಚೌಪದಿ, ಲಾವಣಿ, ಕಥನರೂಪದ ಹಾಡುಗಳಿರುವುದನ್ನೂ ಗಮನಿಸಬಹುದು". [11]

ಮಾನವನ ಸಂವೇದನಗಳ ಸೂಕ್ಷ್ಮತೆ ವಿಶಾಲವಾದುದು. ಅಂತರಂಗದ ಈ ಭಾವನೆಗಳು ಹೊರಹೊಮ್ಮಲು ತುಡಿಯುತ್ತವೆ. ತೀವ್ರ ಸಂವೇದನಾಶೀಲರಲ್ಲದವರಲ್ಲಿ ಅವು ಯಾವುದಾದರೊಂದು ತಾತ್ಕಾಲಿಕ ಕ್ರಿಯೆ ಅಥವಾ ಮಾತಿನ ಮೂಲಕ ತಕ್ಷಣ ವ್ಯಕ್ತಗೊಳ್ಳುತ್ತವೆ. ಆದರೆ ಹೆಚ್ಚು ಸಂವೇದನಾಶೀಲರಾದವರಲ್ಲಿ ಅದು ಪರಿಣಾಮಕಾರಿಯಾದ ರೂಪದಲ್ಲಿ ಹಾಡುಗಬ್ಬವಾಗಿ ಹೊರಬೀಳುತ್ತದೆ.

ಮಾನವನ ಮನಸ್ಸು ಮೂಲತಃ ಒಂದೇ ಆದರೂ ವಾತಾರಣ, ಸಂಸ್ಕೃತಿ, ವಿದ್ಯಾಭ್ಯಾಸ, ಕಸಬು ಹಾಗೂ ದೊರೆತ ಅನುಭವಗಳಿಗನುಸಾರವಾಗಿ ಅದು ಭಿನ್ನರೂಪ ಪಡೆಯುವುದು ಸ್ವತಃಸಿದ್ಧ ಅಂಶ. ಈ ಮೇಲಿನ ಅಂಶಗಳಲ್ಲದೆ ಜನರ ಮನಸ್ಸಿನ ಮೇಲೆ ಪ್ರಭಾವ ಬೀರುವ ಬದುಕನ್ನೂ ರೂಪಿಸುವ ಇನ್ನೊಂದು ಮಹತ್ವವಾದ ಅಂಶವಿದೆ, ಅದೇ ಅವರ ಮತಧರ್ಮ. ಆದ್ದರಿಂದಲೇ ವಿವಿಧ ಮತಸ್ಥರ ಜನಪದ ಸಾಹಿತ್ಯದಲ್ಲಿ ಅವರ ಧರ್ಮದ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ. ಈ ಸಂದರ್ಭದಲ್ಲಿ ಡಾ. ಶಿವರಾಮ ಕಾರಂತರ ಈ ಮಾತುಗಳನ್ನು ನೆನೆಯಬಹುದು:

"ಮತಧರ್ಮಗಳಿಂದ ಪ್ರಭಾವಿತವಾದ ನಂಬುಗೆ, ಆಚರಣೆ ಮೊದಲಾದುವು ಒಂದು ಜನವರ್ಗದ ಸಂಸ್ಕೃತಿಯನ್ನು ರೂಪಿಸುತ್ತದೆ. ಉಳಿದ ಪ್ರಭಾವಗಳು ಅವರ ಮೇಲೆ ಬೀಳುವುದಿಲ್ಲ ಎಂದಲ್ಲ, ಮತ, ಧರ್ಮಗಳಿಂದಾಗುವ ಪ್ರಭಾವ ಆತ್ಯಧಿಕ. ಅವುಗಳಿಂದ ಬರುವ ಅನೇಕಾನೇಕ ಭಾವನೆಗಳು, ಕಲ್ಪನೆಗಳು ನಮ್ಮ ಸಾಹಿತ್ಯ ಕಲೆಗಳಲ್ಲಿ ಅವುಗಳ ಸಂಕೇತಗಳು, ಆಶಯಗಳು ಪ್ರಕಟಗೊಳ್ಳುತ್ತವೆ. ಇದಕ್ಕೆ ಸಂಪ್ರದಾಯಗಳು ಬಲವಾದ ಕಾರಣಗಳಾಗಿವೆ. ಸಂಸ್ಕೃತಿ ಎನ್ನುವುದು ಮುಂದುವರೆಯುವುದೇ ಸಂಪ್ರಾದಾಯಶೀಲತೆಯಿಂದಾಗಿ". [12]

"ಜೈನ ಸಾಹಿತ್ಯದ ರಚನೆ ಸಂಶೋಧನೆಗಳನ್ನು ಕುರಿತು ಆ. ನೆ. ಉಪಾಧ್ಯ, ಟಿ. ಜಿ. ಕಲಘಟಗಿ ಮಿರ್ಜಿಅಣ್ಣಾರಾಯ, ಡಾ. ಹಂಪನಾಗರಾಜಯ್ಯ, ಡಾ. ಎಂ.ಎಂ ಕಾಲಘಟಗಿ, ಡಾ. ಎಂ. ಎಂ. ಕಲಬುರ್ಗಿ, ಜಿ. ಬ್ರಹ್ಮಪ್ಪ, ಡಾ. ಕಮಲಹಂಪನಾ, ಡಾ. ಎಸ್. ಪಿ. ಪದ್ಮಪ್ರಸಾದ್, ಡಾ. ಎಸ್. ಪಿ. ಪಾಟೀಲ– ಇನ್ನೂ

ಮುಂತಾದವರು ಚರ್ಚಿಸಿದ್ದಾರೆ. ಮಾರ್ಗಸಾಹಿತ್ಯದ ಅಧ್ಯಯನದ ಜೊತೆಗೆ ದೇಶೀ ಸಾಹಿತ್ಯ ಶೋಧ, ಸಂಗ್ರಹಗಳಿಂದ ಗಾಯನ ಅಭಿವ್ಯಕ್ತಿಯ ಹಾಡುಗಬ್ಬಗಳಲ್ಲಿನ ಲಯ–ರಾಗ–ತಾಳಗಳ ಪ್ರಾಮುಖ್ಯತೆ ಇವುಗಳ ಲಕ್ಷಣ ಕುರಿತು ಚರ್ಚಿಸಿದ್ದಾರೆ. ಹೀಗೆ ಕನ್ನಡದಲ್ಲಿ ಜೈನ ಹಾಡುಗಳ ಸಂಗ್ರಹ ಸಂಪಾದನ ಹಾಗೂ ಪ್ರಕಟಣಾ ಇತಿಹಾಸವನ್ನು ಸೈದ್ಧಾಂತಿಕವಾಗಿ ನಿರೂಪಿಸುವುದು ಈ ಮಹಾಪ್ರಬಂಧದ ಇನ್ನೊಂದು ಉದ್ದೇಶವಾಗಿದೆ". [13]

"ಬೇರೆ ಬೇರೆ ಧರ್ಮದ ಅನುಯಾಯಿಗಳಿಗೆ ಸಂಬಂಧಿಸಿದ ಜನಪದ ಸಾಹಿತ್ಯದ ಅಭ್ಯಾಸ ಇನ್ನೂ ಹಲವು ಕಾರಣಗಳಿಂದಾಗಿ ಉಪಯುಕ್ತವಾಗುತ್ತದೆ. ಪ್ರತಿಯೊಂದು ಧರ್ಮದ ಅನುಯಾಯಿಗಳ ಸಂಸ್ಕೃತಿಯಲ್ಲಿಯೂ ವ್ಯತ್ಯಾಸಗಳಿರುವುದರಿಂದ ಅವರ ಜನಪದ ಸಾಹಿತ್ಯದಲ್ಲಿಯೂ (ಮಾರ್ಗೀಯ ಸಾಹಿತ್ಯದಲ್ಲಿ ಹೇಗೋ ಹಾಗೆ) ವ್ಯತ್ಯಾಸಗಳು ಕಂಡು ಬರುತ್ತದೆ. ಹಾಗಾದರೆ, ಒಂದು ನಿರ್ದಿಷ್ಟ ಧರ್ಮದವರ ಜನಪದ ಸಾಹಿತ್ಯದಲ್ಲಿನ ವಿಶಿಷ್ಟ ಅಂಶಗಳಾವುವು? ಎಂಬುದೂ, ಹಾಗೆಯೇ, ಬೇರೆ ಬೇರೆ ಮತ ಧರ್ಮದವರ ಜನಪದ ಸಾಹಿತ್ಯದಲ್ಲಿನ ಸಮಾನ ಅಂಶಗಳಾವುವು? ಒಂದು ಧರ್ಮದವರ ಜನಪದ ಸಾಹಿತ್ಯ ಇನ್ನೊಂದು ಧರ್ಮದವರ ಮೇಲೆ ಪ್ರಭಾವ ಬೀರಿದೆಯೇ? ಎಂಬುದೂ ಸಾಹಿತ್ಯಭ್ಯಾಸಿಗಳಿಗೆ ತುಂಬಾ ಕುತೂಹಲ ಹುಟ್ಟಿಸುವ ಆಸಕ್ತಿಯುತ ಪ್ರಶ್ನೆ ಗಳಾಗುತ್ತವೆ". [14] ಈ ಸಂದರ್ಭದಲ್ಲಿ ಡಾ. ಶಿವರಾಮ ಕಾರಂತರ ಮಾತುಗಳನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು:

"ನಮ್ಮಲ್ಲಿ ಪ್ರಚಾರದಲ್ಲಿರುವ ಮತ ಧರ್ಮಗಳು ಅನಾದಿಯಿಂದಲೂ ಒಂದೇ ರೀತಿಯಿಂದ ಬದಲಾವಣೆ ಇಲ್ಲದೆ ಉಳಿದುಕೊಂಡಿಲ್ಲ. ನಮ್ಮ ಇಂದಿನ ನಂಬಿಕೆ, ಆಚಾರ, ಮೊದಲಾದವುಗಳಿಗೆ ಯಾವೆಲ್ಲಾ ಪ್ರಭಾವಗಳು ಕಾರಣವಾದವು ಎಂದು ತಿಳಿಯುವವರಿಗೆ ನಮ್ಮ ಲಿಖಿತ ಪುರಾಣ, ಸಾಹಿತ್ಯ ಚರಿತ್ರೆ, ಮೊದಲಾದವುಗಳು ಸಹಾಯ ಮಾಡಬಹುದಾದಂತೆಯೇ ಬರೆಯದೇ ಇರುವ, ಬಾಯ್ದೆರೆಯಾಗಿ ಹರಿದುಬಂದ ಮತೀಯ ಆಚರಣೆಗಳ ಕಟ್ಟಳೆಗಳು, ಹಾಡುಗಳು, ಗಾದೆಗಳು ಸಹ ಸಹಾಯ ಮಾಡಬಹುದು. ಸಂಸ್ಕೃತಿ ಎಂಬುದು ಬಹಳ ಮಟ್ಟಿಗೆ ಮತಧರ್ಮಗಳಿಂದ ಪ್ರೇರಿತವಾದ ಜೀವನ ನಡವಳಿಕೆ ಅದರ ಅಭ್ಯಾಸಕ್ಕೆ ನಾವು ಮಾನವಶಾಸ್ತ್ರದ ಅಭ್ಯಾಸಿಗಳಂತೆಯೇ, ಆ ಮತ ಧರ್ಮಗಳೊಡನೆ ಬಂದಿರುವ ಸಾಹಿತ್ಯವನ್ನು ಅಭ್ಯಸಿಸಬೇಕಾಗುತ್ತದೆ". [15]

ಒಂದು ನಿರ್ದಿಷ್ಟ ಧರ್ಮದವರ ಜನಪದ ಸಾಹಿತ್ಯಕ್ಕೂ, ಮಾರ್ಗೀಯ ಸಾಹಿತ್ಯಕ್ಕೂ ಇರುವ ಸಂಬಂಧ, ಆ ಧರ್ಮಕ್ಕೆ ಸಂಬಂಧಿಸಿದ ಶಾಸ್ತ್ರ ಪುರಾಣಗಳಲ್ಲಿ ಹೇಳಲ್ಪಟ್ಟ ಕಟ್ಟಳೆಗಳು ಹಾಗೂ ವಾಸ್ತವಿಕವಾಗಿ ಅವರಲ್ಲಿರುವ ಆಚರಣೆಗಳಲ್ಲಿನ ಸಾಮ್ಯ–ವೈಷಮ್ಯಗಳು–ಇದನ್ನು ಗುರುತಿಸಲು ಸಾಧ್ಯವಾಗುತ್ತದೆ.

ಹಾಗೆ ಒಂದು ನಿರ್ಧಿಷ್ಟ ಧರ್ಮದ ಅನುಯಾಯಿಗಳಿಗೆ ಸಂಬಂಧಿಸಿದಂತಿರುವ ಜನಪದ ಸಾಹಿತ್ಯದ ಅಭ್ಯಾಸದಿಂದ ಈ ಕೆಳಕಂಡ ಪ್ರಯೋಜನೆಗಳನ್ನು ಪಡೆಯಬಹುದು–

1. ಆ ಧರ್ಮೀಯರ ಸಂಸ್ಕೃತಿ
2. ಅವರಲ್ಲಿನ ಜನಪದ ಸಾಹಿತ್ಯದ ವಿಶಿಷ್ಠತೆ
3. ಅವರ ಮೇಲಾಗಿರುವ ಅನ್ಯ ಧರ್ಮದ ಪ್ರಭಾವ
4. ಅವರ ಹಾಗೂ ಅನ್ಯ ಜನಪದ ಸಾಹಿತ್ಯಗಳಿಗಿರುವ ಸೌಮ್ಯ– ವೈಷಮ್ಯ
5. ಆ ಧರ್ಮೀಯರಲ್ಲಿನ ಮಾರ್ಗೀಯ ಹಾಗೂ ಜನಪದ ಸಾಹಿತ್ಯಗಳಲ್ಲಿನ ಪರಸ್ಪರ ಪ್ರಭಾವ ಮತ್ತು ಸೌಮ್ಯ– ವೈಷಮ್ಯಗಳು
6. ಅವರಲ್ಲಿ ಬಳಕೆಯಲ್ಲಿರಬಹುದಾದ ವಿಶಿಷ್ಟ ಛಂದಸ್ಸು, ನುಡಿಗಟ್ಟುಗಳು ಇತ್ಯಾದಿ ಅಧ್ಯಯನ
7. ಅವರ ಧಾರ್ಮಿಕ ಸಿದ್ಧಾಂತಗಳು ಹಾಗೂ ಜನಪದ ಸಾಹಿತ್ಯದಲ್ಲಿ ಅದು ಪ್ರತಿಬಿಂಬಿತವಾಗಿರುವ ರೀತಿ.
8. ಕಾವ್ಯ ಸೌಂದರ್ಯದ ದೃಷ್ಟಿಯಿಂದ ಅವರ ಜಾನಪದ ಸಾಹಿತ್ಯದ ವಿಶಿಷ್ಟತೆ.
9. ಜಾನಪದ ಗೀತೆಗಳನ್ನು ಹಾಡುವ ರೀತಿ ಇತ್ಯಾದಿ" [16]

ಇಷ್ಟೆಲ್ಲಾ ಪ್ರಯೋಜನಗಳಿದ್ದಾಗ್ಯೂ ಈ ರೀತಿಯ ಅಧ್ಯಯನ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ನಡೆಯದಿರುವುದು, ಈ ಕ್ಷೇತ್ರದಲ್ಲಿನ ಒಂದು ಪ್ರಬಲವಾದ ಕೊರತೆಯನ್ನು ಸೂಚಿಸುತ್ತದೆ. ಪ್ರಸ್ತುತ ಅಧ್ಯಯನವು ಈ ಕೊರತೆಯ ಒಂದಂಶವನ್ನಾದರೂ ತುಂಬುವ ದೃಷ್ಟಿಯಿಂದ ನಿರ್ದಿಷ್ಟ ಧರ್ಮದ ಅನುಯಾಯಿಗಳಿಗೆ ಸಂಬಂಧಿಸಿದ ಜನಪದ ಸಾಹಿತ್ಯವನ್ನು ಅಭ್ಯಸಿಸುವ ಒಂದು ಪ್ರಾಮಾಣಿಕ ಪ್ರಯತ್ನವಾಗಿದೆ.

ಜೈನ ಪರಂಪರೆಯ ಹಾಡುಗಳನ್ನು ಗ್ರಂಥಸ್ಥ ಮತ್ತು ಕಂಠಸ್ಥ ಹಿನ್ನೆಲೆಯಲ್ಲಿ ಅಭ್ಯಸಿಸುವಾಗ, ಆ ಹಾಡುಗಳ ಸ್ವರೂಪ ಉದ್ದೇಶ ವ್ಯಾಪ್ತಿಯನ್ನು ಅರಿಯುವಾಗ ಜೈನ ಜನಪದ ಸಾಹಿತ್ಯವನ್ನು ಅಭ್ಯಸಿಸುವುದು ಅನಿವಾರ್ಯವಾಗಿದೆ.

ಜನಪದಗೀತೆಗಳು ಸಾಮಾನ್ಯವಾಗಿ ನಿರ್ದಿಷ್ಟ ಕ್ಷೇತ್ರಗಳಿಗನುಸಾರವಾಗಿ ಪ್ರಚಲಿತವಿರುವುದಾದರೂ, ನಿರ್ದಿಷ್ಟ ಕ್ಷೇತ್ರದ ನಿರ್ದಿಷ್ಟ ಜಾತಿ (ಪಂಗಡ)ಯವರಿಂದಲೇ ಹಾಡಲ್ಪಡುವಂತಹ ಗೀತೆಗಳು ಇರುತ್ತವೆ. ಡಾ ಶರ್ಮರು ಜನಪದ ಸಾಹಿತ್ಯದ ಧಾರ್ಮಿಕ ಮಹತ್ವದ ಬಗ್ಗೆ ಹೇಳುವ ಮಾತುಗಳೂ ಗಮನಾರ್ಹವಾಗಿವೆ.

"ಧರ್ಮ ಜೀವನದ ಅತ್ಯಂತ ಮಹತ್ವದ ಭಾಗ. ಆದ್ದರಿಂದ ಜನಪದ ಸಾಹಿತ್ಯದಲ್ಲಿ ಜನರ ಧಾರ್ಮಿಕ ಭಾವನೆ ಅತ್ಯಂತ ಅರ್ಥಪೂರ್ಣವಾಗಿ ಚಿತ್ರಿಸಲ್ಪಟ್ಟಿರುತ್ತದೆ. ಸಾಮಾನ್ಯ ಜನ ಸಂಸಾರದ ವೈಭವ, ಸಮೃದ್ಧಿಗಳು ಸಹ ಹೇಗೆ ವಿನಾಶಕ್ಕೆ ಕಾರಣವಾಗಬಲ್ಲವೆಂಬುದನ್ನು ಅನುಭವದಿಂದ ತಿಳಿದಿದ್ದಾರೆ. ಇದರಿಂದಾಗಿ ಕೆಲವು ಗೀತೆಗಳಲ್ಲಿ ಸಂಸಾರದ ಅನಿತ್ಯತೆ, ಮಾನವನ ಜೀವನದ ಕ್ಷಣ ಭಂಗುರತೆ, ವೈಭವದ ನಿಸ್ಸಾರತೆಗಳನ್ನು ಹಲವು ವಿಧವಾಗಿ ಉಲ್ಲೇಖಿಸಲಾಗಿದೆ. ವ್ರತ ಸಂಬಂಧದ ಕಥೆಗಳಲ್ಲಿ ಧರ್ಮದ ನಿಗೂಢ ರಹಸ್ಯಗಳು ಮುಚ್ಚಿಕೊಂಡಿರುತ್ತವೆ. ಸಾಮಾನ್ಯ (ಗ್ರಾಮೀಣ) ಜನ ತಮ್ಮ ಅಶಿಕ್ಷಣದ ಕಾರಣ ಧರ್ಮತತ್ವಗಳನ್ನು ನೇರವಾಗಿ ಅರಿಯಲಾರರು. ಅವರಿಗೆ ಅದನ್ನು ಈ ಜನಪದ ಗೀತೆ, ಕಥೆಗಳ ಮೂಲಕ ನೀಡಲಾಗುತ್ತದೆ. ಆದುದರಿಂದ ಇವುಗಳ ಮಹತ್ವ ಅಧಿಕ. ಜನಪದ ಸಾಹಿತ್ಯದ ಅಧ್ಯಯನದಿಂದ ತತ್ಕಾಲದ ಧಾರ್ಮಿಕ ಜೀವನದ ಇಣುಕು ನೋಟ ಕಾಣುವುದು". [17]

ಈ ಮೇಲಿನ ಕಾರಣಗಳಿಂದಲೇ ಅಲ್ಲದೆ ಇನ್ನು ಹಲವು ದೃಷ್ಟಿಗಳಿಂದ ನಿರ್ದಿಷ್ಟ ಧರ್ಮಾನುಯಾಯಿಗಳಿಗೆ ಸಂಬಂಧಿಸಿದ ಜನಪದ ಸಾಹಿತ್ಯದ ಅಧ್ಯಯನ ಮಹತ್ವ ಪೂರ್ಣವಾಗುತ್ತದೆ. ಒಂದು ವಿಶಾಲ ಸಮಾಜದಲ್ಲಿ ಬದುಕುತ್ತಿರುವ, ಹಲವು ಪಂಗಡಗಳ ನಡುವೆ ಕೊಡು–ಕೊಳೆ ಅನಿವಾರ್ಯ ಅಗತ್ಯ. ಹಾಗಾದರೆ ಒಂದು ನಿರ್ಧಿಷ್ಟ ಮತದ ಮೂಲಸ್ವರೂಪವೇನು? ಅದರ ಮೇಲಿನ ಹೊರಗಿನ ಪ್ರಭಾವವೇನು? ಆ ಪ್ರಭಾವಗಳ ಮೂಲ ಯಾವುದು? ಅವುಗಳ ವಲಸೆಯಲ್ಲಿ ನಡೆದ ರೂಪಾಂತರವೇನು? ಎಂಬುದನ್ನರಿಯಲು ಮೂಲತಃ ಆ ಮತೀಯರಲ್ಲಿನ ಜನಪದ ಸಾಹಿತ್ಯವನ್ನೇ ಅವಲೋಕಿಸಬೇಕು. ಕಾರಣ ಹಿಂದೆಯೇ ಸ್ಪಷ್ಟಪಡಿಸಿರುವಂತೆ "ಇಲ್ಲಿ ಮಾತ್ರ ಅವು ಹೆಚ್ಚು ಸಹಜವಾದ ಬಣ್ಣದಲ್ಲಿ ಕಾಣಿಸಿಕೊಳ್ಳುತ್ತವೆ. ಅನಕ್ಷರಸ್ಥ ಸಮಾಜದಲ್ಲಿ, ಕಂಠಪಾಠ ಸಂಪ್ರಾದಯದ ಮೂಲಕ ಉಳಿದುಬರುವ ಸಾಹಿತ್ಯದ ಭೌತಿಕ ವರ್ಗಗಳು ತಮ್ಮ ಜನಪದ ಅಂಶಗಳಿಂದಾಗಿ ನಾಗರಿಕ ಸಮಾಜದವಕ್ಕಿಂತ ಹೆಚ್ಚು ಶ್ರೀಮಂತವಾಗಿರುತ್ತವೆ. ಅನಕ್ಷರಸ್ಥ ಸಮಾಜದ ಜಾನಪದದಲ್ಲಿ ಮಾನವನ ಮೂಲಭೂತ ಅನಿಸಿಕೆಗಳನ್ನು ಹೆಚ್ಚು ಹೆಚ್ಚಾಗಿ ಹೆಕ್ಕುವುದಕ್ಕೆ ಅವಕಾಶವಿರುತ್ತದೆ". [18]

## ಜೈನ ಹಾಡುಗಳ ಲಕ್ಷಣ

ಕನ್ನಡ ಜೈನ ಹಾಡುಗಳು ವಸ್ತು ವೈವಿಧ್ಯತೆಯಿಂದ ಕೂಡಿದ್ದು, ತನ್ನದೇ ಆದ ವಿಶೇಷ ಲಕ್ಷಣವನ್ನು ಒಳಗೊಂಡಿವೆ. ಈ ಹಾಡುಗಳು ಅನುಭಾವಗೀತೆ, ಹಾಡು, ಕೈವಲ್ಯ–ಪದ, ಭಜನೆ ಹಾಡುಗಳೆಂದು ಕರೆಸಿಕೊಂಡಿರುವ ವೀರಶೈವ ಸ್ವರವಚನ, ದಾಸರ ಕೀರ್ತನೆಗಳ ಪರಂಪರೆಗೆ ಸೇರಿವೆ. "ಕನ್ನಡ ಜೈನ ಹಾಡುಗಳು" ಎಂಬ ಪುಸ್ತಕದ ಸಂಪಾದಕರಾದ ಡಾ.ಎಫ್.ಟಿ. ಹಳ್ಳಿಕೇರಿ ಹಾಗೂ ಡಾ.ಕೆ.ರವೀಂದ್ರನಾಥರವರು ಜೈನ ಹಾಡುಗಳನ್ನು ಗಮನಿಸಿ ಕೆಲವೊಂದು ಲಕ್ಷಣಗಳನ್ನು ಗುರುತಿಸಿದ್ದಾರೆ. ಆ ಲಕ್ಷಣಗಳನ್ನು ಈ ಕೆಳಕಂಡಂತೆ ಹೇಳಲಾಗಿದೆ.

1. ಪಲ್ಲವಿ, ಅನುಪಲ್ಲವಿ, ನಾಲ್ಕುನುಡಿಗಳು, ಚರಣಬಂಧಗಳಿಂದ ಕೂಡಿವೆ
2. ಆರಂಭದಲ್ಲಿ ಕೆಲವು ಹಾಡುಗಳಲ್ಲಿ ರಾಗ–ತಾಳಗಳ ನಿರ್ದೇಶನವಿರುತ್ತವೆ

3. ಹಾಡುಗಳು ಷಟ್ಪದಿ, ಕಂದ, ಚೌಪದಿ, ದ್ವಿಪದಿಗಳಿಂದ ರಚನೆಯಾಗಿದ್ದು ಗಾದೆ ನುಡಿಗಟ್ಟುಗಳಂತಹ ಸಾಲುಗಳಿಂದ ಮನೋಹರವಾಗಿವೆ
4. ಅಂಶಗಣ ಇಲ್ಲವೇ ಮಾತ್ರಾ ಗಣ ಸಂಯೋಜನೆ ಇಲ್ಲವೆ ಇವೆರಡರ ಮಿಶ್ರ ಛಂದೋಪದ್ಯಗಳಾಗಿವೆ. ಆದಿ–ಅಂತ್ಯಪ್ರಾಸಗಳ ಸೊಬಗಿನಿಂದ ಕೂಡಿದ ಇವುಗಳಿಗೆ ಕೊನೆಯಲ್ಲಿ ಆರಾಧ್ಯ ದೈವದ ಇಲ್ಲವೇ ರಚನಾಕಾರರ ಅಂಕಿತ(ಮುದ್ರಿಕೆ) ಬರುತ್ತದೆ. ಆದರೆ ಬಳಸಿಕೊಂಡ ಅಂಕಿತಗಳಲ್ಲಿ ನಿರ್ದಿಷ್ಟತೆ ಇಲ್ಲವೆನಿಸುತ್ತದೆ. ಉದಾ:–ರತ್ನಾಕರ ಬರೆದನೆನ್ನಲಾದ ಹಾಡುಗಳು ಅಪರಾಜಿತೇಶ, ಹಂಸನಾಥ, ನಿರಂಜನಸಿದ್ಧ, ಶ್ರೀಮಂದರಸ್ವಾಮಿ, ಚಿದಂಬರಪುರುಷ ಮುಂತಾದ ಬೇರೆ ಬೇರೆ ಅಂಕಿತಗಳಿಂದ ಬಳಕೆಗೊಂಡಿರುವುದನ್ನು ನೋಡಬಹುದು.
5. ಗೀತ ಮಾಧ್ಯಮವಾದ ಕಾರಣ ಇವು ಹಾಡುಗಬ್ಬಗಳು
6. ಬೆಡಗು, ಸಾಂಕೇತಿಕತೆ, ರೂಪಕ, ಉಪಮೆಗಳಿಂದ ಕೂಡಿದವುಗಳಾಗಿವೆ
7. ವಸ್ತುವಿನ ದೃಷ್ಟಿಯಿಂದ ಜಿನತತ್ವ–ಸಿದ್ಧಾಂತಗಳ ಪ್ರತಿಪಾದನೆ ಇಲ್ಲಿನ ಮುಖ್ಯ ಆಶಯ
8. ತೀರ್ಥವಂದನೆ, ತೀರ್ಥಂಕರ ಸ್ತುತಿಗಳಂತಹ ಸುಧೀರ್ಘವಾದ ಹಾಡುಗಳು ರಚನೆಗೊಂಡಿವೆ.” [19]

ಕನ್ನಡ ಸಾಹಿತ್ಯದ ಕೀರ್ತನೆಗಳಂತೆ ಜೈನ ಸಾಹಿತ್ಯದಲ್ಲಿಯೂ, ಸಹ ತಾಳ, ಸುಳಾದಿ, ಉಗಾಬೋಗ, ಸಂಗೀತ ಪರಂಪರೆಗೆ ಸೇರಿದ ಹಾಡುಗಳು ರಚನೆಯಾಗಿವೆ. ಜೈನ ಹಾಡುಗಳಲ್ಲಿ ಅನೇಕ ಹಾಡುಗಳು ಭಕ್ತಿಪ್ರಧಾನವಾದುವುಗಳಾಗಿದ್ದು ಸ್ತೋತ್ರಗಳ ರೂಪದಲ್ಲಿ ರಚನೆಗೊಂಡಿವೆ. ರತ್ನಾಕರವರ್ಣಿಯು ಕೀರ್ತನೆಗಳನ್ನು ರಚಿಸಿದ್ದಾನೆ. “ರತ್ನಾಕರನ ಕೀರ್ತನೆ”ಗಳೆಂದೇ ಅವುಗಳು ಪ್ರಸಿದ್ಧಿ ಪಡೆದುಕೊಂಡಿದೆ. ಇವೇ ಅಲ್ಲದೇ ವಚನಗಳು, ದೋಹಾಗಳು ಹಾಗೂ ಲಾವಣಿಗಳ ರೂಪದಲ್ಲಿ ಜೈನಹಾಡುಗಳು ಕಾಣಿಸಿಕೊಂಡಿರುವುದು ಒಂದು ವಿಶೇಷವಾಗಿದೆ. ಹೀಗೆ ಜೈನ ಹಾಡುಗಳು ಕಂದ, ತ್ರಿಪದಿ, ದ್ವಿಪದಿ, ಷಟ್ಪದಿ, ರಗಳೆ, ಇನ್ನೂ ಅನೇಕ ಪ್ರಕಾರಗಳಲ್ಲಿ ರಚನೆಗೊಂಡಿವೆ. ಅಲಂಕಾರಗಳಿಂದ ಕೂಡಿದ, ಹಾಡುಗಳು ಜನಜನಿತವಾಗಿವೆ. ಅಲ್ಲದೇ ಇನ್ನೂ ಅನೇಕ ಲಕ್ಷಣಗಳನ್ನು ಜೈನ ಹಾಡುಗಳು ಹೊಂದಿವೆ.

ಹೀಗೆ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಜೈನಧರ್ಮವು ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿದೆ. ಇದು ಉತ್ತರ ಭಾರತದಲ್ಲಿ ಹುಟ್ಟಿ ಬೆಳೆದ ಧರ್ಮವಾದರೂ, ಕರ್ನಾಟಕದಲ್ಲಿ ಪ್ರಚಾರಗೊಂಡ ಬಳಿಕ ಇಲ್ಲಿಯ ಪರಿಸರದ ಸಾರವನ್ನು ಹೀರಿ ಹುಲುಸಾಗಿ ಬೆಳೆಯಿತು. ಜನಜೀವನದ ಎಲ್ಲಾ ಸ್ಥಳಗಳಲ್ಲೂ ಪ್ರಭಾವಬೀರಿ ವರ್ಚಸ್ವೀ ಧರ್ಮವಾಯಿತು. ಇಲ್ಲಿಯ ಶಾಸ್ತ್ರ ಸಾಹಿತ್ಯ, ಕಲೆ, ಭಾಷೆ, ವಿದ್ಯಾಪ್ರಸಾರ, ಜೀವನ ವಿಧಾನ ಮತ್ತು ನೈತಿಕ ಮೌಲ್ಯಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾ ಬಂದಿದೆ. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯದಲ್ಲಿ ಜೈನಯುಗವೆಂದು ಕರೆಯಲಾಗುವ 10ನೇ ಶತಮಾನದಲ್ಲಿ ಹುಟ್ಟಿದ ಅಪಾರ ಸಾಹಿತ್ಯ ರಾಶಿಯನ್ನು ನೆನೆಯಬಹುದು. ಜೈನ ತೀರ್ಥಂಕರರೆಲ್ಲ ಉತ್ತರ ಭಾರತದಲ್ಲಿ ಜನಿಸಿ ಧರ್ಮಪ್ರಚಾರವನ್ನು ಮಾಡಿದರೂ ಮುಂದೆ ಜೈನಧರ್ಮಕ್ಕೆ ಸಂಬಂಧಿಸಿದ ಉತ್ತಮ ಗ್ರಂಥಗಳನ್ನು ನೀಡಿದ ಅಚಾರ್ಯರುಗಳಲ್ಲಿ ಹೆಚ್ಚಿನವರು ಕರ್ನಾಟಕದವರು. ಇಂದು ಕನ್ನಡದಲ್ಲಿ ಜೈನ ಸಾಹಿತ್ಯ ಕೃತಿ ಹುಲುಸಾಗಿಬೆಳೆದು, ಜೈನರ ಸಾಂಸ್ಕೃತಿಕ ಕೊಡುಗಳಲ್ಲಿ ಜೈನರ ಗ್ರಂಥಸ್ಥ ಹಾಗೂ ಕಂಠಸ್ಥ ಹಾಡುಗಳು ಪ್ರಮುಖ್ಯತೆಯನ್ನು ಪಡೆದು, ಅದರ ವ್ಯಾಪ್ತಿ ವಿಸ್ತಾರವಾದುದಾಗಿದೆ.

# ಅಡಿಟಿಪ್ಪಣಿಗಳು

1. ಡಾ. ಖಡಬಡಿ ಬಿ. ಕೆ. (ಸಂ) ಶ್ರಾವಕಾಚಾರ ಪು.ಸಂ. 3 ರಿಂದ 4 ಪ್ರಕಾಶಕರು–ರತ್ನತ್ರಯ ಪ್ರಕಾಶನ, 713, ಚಿತ್ರಭಾನುರಸ್ತೆ, ಕುವೆಂಪುನಗರ, ಮೈಸೂರು– 570023 1997
2. ಮೇಲಿನ ಅದೇ, ಪು. ಸಂ–4
3. ಡಾ. ಹಳ್ಳಿಕೇರಿ, ಎಫ್.ಟಿ. ಮತ್ತು ಡಾ ರವೀಂದ್ರನಾಥ್ ಕೆ (ಸಂ) ಕನ್ನಡ ಜೈನ ಹಾಡುಗಳು, ಪು.ಸಂ–1 ಪ್ರಸಾರಾಂಗ–ಕನ್ನಡ ವಿಶ್ವವಿದ್ಯಾನಿಲಯ, ಹಂಪಿ–2001
4. ಡಾ. ರಮೇಶ. ಕೆ(ಸಂ) ಕನ್ನಡ ಜೈನ ಹಾಡುಗಳು ಸಾಂಸ್ಕೃತಿಕ ಅಧ್ಯಯನ, ಪು.ಸಂ–1 ಪ್ರ–ಮಂಗಳಾಪ್ರಕಾಶನ ಹೊಸಪೇಟೆ–2015
5. ಮೇಲಿನ ಅದೇ, ಪುಸಂ–1–2
6. ಮೇಲಿನ ಅದೇ, ಪು.ಸಂ– 3–4
7. ಡಾ. ಶೆಟ್ಟಿ. ಎಸ್.ಡಿ. (ಸಂ) ತುಳುನಾಡಿನ ಜೈನಧರ್ಮ–ಒಂದು ಸಾಂಸ್ಕೃತಿಕ ಅಧ್ಯಯನ
8. ಪುಟ.ಸಂ 12, ಪ್ರ–ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ 2002.
9. ಮೇಲಿನ ಅದೇ, ಅದೇ ಪುಟ.
10. ಲೇ ಡಾ. ರಮೇಶ .ಕೆ (ಸಂ) ಕನ್ನಡ ಜೈನ ಹಾಡುಗಳು ಸಾಂಸ್ಕೃತಿಕ ಅಧ್ಯಯನ ಪು.ಸಂ–3 ಪ್ರ– ಮಂಗಳ ಪ್ರಕಾಶನ, ಹೊಸಪೇಟೆ–2015.
11. ಮೇಲಿನ ಅದೇ ಪು.ಸಂ– 3ರಿಂದ 4.
12. ಡಾ ಶಾಂತ ಕುಮಾರ ಶೆಟ್ಟಿ (ಸಂ) ಜೈನಗ್ರಂಥಸ್ಥ ಹಾಡುಗಳು ಪು.ಸಂ –15, ಪ್ರ–ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ , ಬೆಂಗಳೂರು–2011
13. ಪದ್ಮ ಪ್ರಸಾದ್ (ಸಂ) ಜೈನ ಜನಪದ ಸಾಹಿತ್ಯ ಸಂಪಾದನೆ ಮತ್ತು ಅಧ್ಯಯನ, ಪು.ಸಂ–2, ಪ್ರ.ರತ್ನತ್ರಯ ಪ್ರಕಾಶ ಮೈಸೂರು–2009.
14. ಡಾ. ರಮೇಶ ಕೆ. (ಸಂ) ಕನ್ನಡ ಜೈನ ಹಾಡುಗಳು ಸಾಂಸ್ಕೃತಿಕ ಅಧ್ಯಯನ ಪು.ಸಂ– 4, ಪ್ರ ಮಂಗಳ ಪ್ರಕಾಶನ, ಹೊಸಪೇಟೆ– 2015.
15. ಡಾ. ಪದ್ಮಪ್ರಸಾದ್ ಎಸ್. ಪಿ. (ಸಂ) ಜೈನ ಜನಪದ ಸಾಹಿತ್ಯ ಸಂಪಾದನೆ ಮತ್ತು ಅಧ್ಯಯನ, ಪು.ಸ–4, ಪ್ರ–ರತ್ನತ್ರಯ ಪ್ರಕಾಶನ, 713, ಚಿತ್ರಭಾನು ರಸ್ತೆ, ಇ ಮತ್ತು ಎಫ್ ಬ್ಲಾಕ್, ಕುವೆಂಪು ನಗರ, ಮೈಸೂರು– 570023–2009.
16. ಮೇಲಿನ ಅದೇ, ಪು.ಸಂ–4–5.
17. ಮೇಲಿನ ಅದೇ, ಪು.ಸಂ–6–7.
18. ಮೇಲಿನ ಅದೇ, ಪು.ಸಂ–3.
19. ಮೇಲಿನ ಅದೇ, ಪು.ಸಂ 3–4.
20. ಡಾ. ಹಳಿಕೇರಿ ಎಫ್. ಟಿ. (ಸಂ) ಡಾ. ರವೀಂದ್ರನಾಥ ಕೆ. (ಸಂ) ಕನ್ನಡ ಜೈನಹಾಡುಗಳು, ಪು.ಸಂ 14–15, ಪ್ರ–ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ–2001.

## ಅಧ್ಯಾಯ: ಎರಡು

# ಕರ್ನಾಟಕದಲ್ಲಿ ಜೈನಧರ್ಮದ ಇತಿಹಾಸ ಮತ್ತು ಬೆಳವಣಿಗೆ

ಜೈನಧರ್ಮ ಆರ್ಯಪೂರ್ವಕಾಲದ ಧರ್ಮವಾಗಿದ್ದು, ಅದು ಜೈನಧರ್ಮದ 24 ತೀರ್ಥಂಕರರಲ್ಲಿ ಕಡೆಯ ಇಬ್ಬರು ತೀರ್ಥಂಕರರಾದ ಪಾರ್ಶ್ವನಾಥ ಮತ್ತು ಮಹಾವೀರರಿಗಿಂತಲೂ ಪ್ರಾಚೀನವಾದುದಾಗಿದೆ. ಭಾರತದಲ್ಲಿ ಆರ್ಯೇತರ ಚಿಂತನೆಯ ಜಗತ್ತಿನ ಪ್ರಾರಂಭ ಮತ್ತು ಅಸ್ತಿತ್ವವನ್ನು ಅದು ಹೇಳುತ್ತದೆ. ಜೈನಧರ್ಮದ ಸಾಂಪ್ರದಾಯಕ ಹೇಳಿಕೆಯಂತೆ ಈ ಅವಸರ್ಪಿಣಿ–ಕಾಲದಲ್ಲಿ ಜೈನಧರ್ಮವನ್ನು ಪ್ರಥಮ ತೀರ್ಥಂಕರನಾದ ವೃಷಭನಾಥನು ಬೋಧಿಸಿದ್ದಾನೆ. ಭಗವಾನ್ ಮಹಾವೀರನು ಕಡೆಯ 24ನೇ ತೀರ್ಥಂಕರನಾಗಿದ್ದಾನೆ. ಭಗವಾನ್ ಮಹಾವೀರನು ತನ್ನ ಬೋಧನೆಯಲ್ಲಿ "ಎಲ್ಲಾ ಪ್ರಾಣಿಗಳು ಬದುಕಲು ಆಶಿಸುತ್ತವೆ. ಎಲ್ಲರಿಗೂ ಅವರವರ ಜೀವಿತವು ಪ್ರಿಯವಾಗುತ್ತದೆ. ಎಲ್ಲರೂ ಸುಖವಾಗಿರಲು ಆಶಿಸುತ್ತಾರೆ. ಆದುದರಿಂದ ಯಾವ ಪ್ರಾಣಿಗೂ ಹಿಂಸೆ ಮಾಡುವುದು ಯಾರಿಗೂ ಒಳ್ಳೆಯದಲ್ಲ" ಎಂದು ಹೇಳಿ ಅಹಿಂಸೆಗೆ ಪ್ರಥಮ ಪ್ರಾಶಸ್ತ್ಯಕೊಟ್ಟನು.

ಜಾತಿ ಪದ್ಧತಿಯನ್ನು ವಿರೋಧಿಸಿದ ಮಹಾವೀರರು ಸಮಾನತೆಯನ್ನು ಒತ್ತಿ ಹೇಳುತ್ತಾ, ಮೇಲುಕೀಳು, ಉಚ್ಛ–ನೀಚ, ಬಡವ–ಬಲ್ಲಿದ ಈ ಭಾವಗಳು ಆತ್ಮನ ಸಿದ್ಧಿಗೆ ಅಡ್ಡಿಗಳೆಂದು ತಿಳಿಸಿದನು. ಅಹಿಂಸೆಯ ಆಚರಣೆಗಾಗಿ ಮಹಾವೀರ ಐದು ವ್ರತಗಳನ್ನು ಬೋಧಿಸಿದನು. ಇವುಗಳಿಂದ ವ್ಯಷ್ಟಿಯ ಸಿದ್ಧಿಯೇ ಅಲ್ಲದೆ ಸಮಷ್ಠಿಯ ಕಲ್ಯಾಣವು ಆಗುತ್ತದೆ ಎಂದು ಹೇಳುತ್ತಾರೆ. ಅಪರಿಗ್ರಹ ತತ್ವ ಎಲ್ಲ ಕಾಲದ ಸಮಾಜಿಕ ಪರಿಸ್ಥಿತಿಗೆ ಪರಿಹಾರವಾಗಬಲ್ಲಂಥದ್ದು. ಮಹಾವೀರರು ಬೋಧಿಸಿದ 'ಅನೇಕಾಂತವಾದ' ವೈಚಾರಿಕ ಕ್ಷೇತ್ರಕ್ಕೆ ಒಂದು ಮಹತ್ತರ ಕೊಡುಗೆಯಾಗಿದೆ. ಭಾಷೆಯ ದೃಷ್ಟಿಯಿಂದಲೂ ಮಹಾವೀರನಿಗೆ ಭಾರತದಲ್ಲಿ ಮಹತ್ವದ ಸ್ಥಾನವಿದೆ. ಅವನು ಜನಸಾಮಾನ್ಯರ ಆಡುಭಾಷೆಯಿಂದಲೇ ತನ್ನ ಉಪದೇಶಮಾಡಿ ಆ ಭಾಷೆಗಳಿಗೆ ಒಂದು ಗೌರವದ ಸ್ಥಾನವನ್ನು ತಂದುಕೊಟ್ಟ. ಈ ಆದರ್ಶವನ್ನೇ ಪಾಲಿಸಿದ ಅವನ ಶಿಷ್ಯರಿಂದ ಭಾರತದ ಉತ್ತರ ಹಾಗೂ ದಕ್ಷಿಣ ಭಾಗಗಳಲ್ಲಿ ಭಾಷೆಗಳು ಬೆಳೆದವು, ಹದಗೊಂಡವು, ಸಾಹಿತ್ಯ ಕೃತಿಗಳು ಮೈದೋರಿದವು. ಪ್ರಾಚೀನತೆ, ಗುಣಗಾತ್ರಗಳ ದೃಷ್ಟಿಯಿಂದ ಕನ್ನಡದಲ್ಲಿಯೂ ಜೈನ ಸಾಹಿತ್ಯ ಅಗ್ರಗಣ್ಯವಾಗಿದೆ.

"ಭಾರತದಲ್ಲಿ ಜೈನ ಪರಂಪರೆಯು ಅತಿ ಪ್ರಾಚೀನವಾದುದು. ವರ್ತಮಾನಕಾಲದ ಮೊದಲನೆಯ ತೀರ್ಥಂಕರ ಆದಿನಾಥರೇ, ಈ ಧರ್ಮದ ಆದ್ಯಪ್ರವರ್ತಕರು. ಆರ್ಯರು ಭಾರತಕ್ಕೆ ಬರುವ ಮೊದಲೇ ಜೈನಧರ್ಮವು ಅಸ್ತಿತ್ವದಲ್ಲಿತ್ತೆಂಬುದು ಹರಪ್ಪ–ಮಹೇಂಜದಾರೋಗಳಲ್ಲಿ ನೇಮಿನಾಥ ತೀರ್ಥಂಕರರ ಉಲ್ಲೇಖವಿರುವುದರ ಮೂಲಕ ಸ್ಪಷ್ಟವಾಗುತ್ತದೆ. ಯಜುರ್ವೇದದಲ್ಲಿ ವೃಷಭ, ಸುಪಾರ್ಶ್ವ ಮತ್ತು ನೇಮಿನಾಥ ತೀರ್ಥಂಕರರ ಉಲ್ಲೇಖವಿದೆ. ಹಾಗೆಯೇ ಋಗ್ವೇದದಲ್ಲಿ "ಅರಿಷ್ಟನೇಮಿಃ ಸ್ವಸ್ತಿನೋ ಬೃಹಸ್ಪತಿರ್ದಧಾತು" ಎಂದು ಹೇಳಿದೆ. ಭಾಗವತದಲ್ಲಿಯೂ ವೃಷಭ ತೀರ್ಥಂಕರರ ವರ್ಣನೆಯು ಜೈನಪರಂಪರೆಗೆ ಅನುಗುಣವಾಗಿದೆ. ವೃಷಭನಾಥನಿಗೆ ಭರತ ಮತ್ತು ಬಾಹುಬಲಿ ಎಂಬ ಇಬ್ಬರು ಮಕ್ಕಳು ಇದ್ದರೆಂದೂ, ಆ ಭರತನಿಂದಲೇ ನಮ್ಮ ದೇಶಕ್ಕೆ ಭಾರತದೇಶವೆಂಬ ಹೆಸರು ಬಂತೆಂದೂ ವಿಷ್ಣುಪುರಾಣದಲ್ಲಿ ಉಲ್ಲೇಖವಿದೆ.

"ಋಷಭಾತ್ ಭರತೋ ಜಜ್ಞೇ ಜ್ಯೇಷ್ಠ: ಪುತ್ರ: ಶಾತಾಗ್ರಜ: ॥ 1
ತತಶ್ಚಭಾರತಂ ವರ್ಷಮೇತಲ್ಲೋಕೇಷು ಗೀಯತೇ" ॥ 2

ಡಾ. ರಾಧಾಕೃಷ್ಣನ್ನರು "ಭಾರತೀಯ ತತ್ವಜ್ಞಾನ" (ಭಾಗ 1, ಪುಟ 287) ಎಂಬ ತಮ್ಮ ಗ್ರಂಥದಲ್ಲಿ ಜೈನಧರ್ಮದ ಪ್ರಾಚೀನತೆಯ ಬಗ್ಗೆ ಹೇಳಿದ್ದಾರೆ. "ವರ್ಧಮಾನ ಅಥವಾ ಪಾರೀಶ್ವನಾಥರಿಗಿಂತ ಪೂರ್ವದಲ್ಲಿ ಜೈನಧರ್ಮವು ಅಸ್ತಿತ್ವದಲ್ಲಿತ್ತೆಂದು ಹೇಳಲು ಏನೂ ಸಂದೇಹವಿಲ್ಲ. ಯಜುರ್ವೇದದಲ್ಲಿ ಮೂವರು ತೀರ್ಥಂಕರರ ಉಖ್ಲೇಖವಿದೆ. ವೃಷಭ, ಅಜಿತನಾಥ ಮತ್ತು ಅರಿಷ್ಠನೇಮಿ, ವೃಷಭನಾಥನೇ ಜೈನದರ್ಮದ ಸ್ಥಾಪಕನೆಂಬ

ವಿಚಾರವನ್ನು ವಿಷ್ಣುಪುರಾಣವು ದೃಢಪಡಿಸುತ್ತದೆ" [2] ಇವೆಲ್ಲ ಆಧಾರಗಳು ಜೈನಧರ್ಮದ ಪ್ರಾಚೀನತೆಯನ್ನು ಸ್ಪಷ್ಟ ಪಡಿಸುತ್ತವೆ.

ಜೈನಧರ್ಮವು ಕರ್ನಾಟಕದಲ್ಲಿ ಕ್ರಿ.ಪೂ. ಕಾಲದಿಂದಲೇ ಹರಡಿದೆ ಎಂಬುದಕ್ಕೆ ಅನಂತರ ಕಾಲದ ಹಲವು ಸಾಹಿತ್ಯಕ ಕೃತಿಗಳ ಆಧಾರಗಳು ದೊರೆಯುತ್ತವೆ. ಆದರೂ ಇದು ಉತ್ತರ ಭಾರತದಿಂದ ದಕ್ಷಿಣಕ್ಕೆ ಅದರಲ್ಲೂ ಮುಖ್ಯವಾಗಿ ಕರ್ನಾಟಕಕ್ಕೆ ಯಾವಾಗ ಬಂದಿತೆಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಅಸಾಧ್ಯ. "ಡಾ. ಬಿ. ಎ. ಸಾಲೆತ್ತೂರು, ಡಾ. ಫ್ಲೀಟ್, ಗೋವಿಂದ ಪೈ, ಬಿ. ಎಲ್. ರೈಸ್, ವಿನ್ಸೆಂಟ್ ಸ್ಮಿತ್, ಡಾ. ಪಿ. ಬಿ. ದೇಸಾಯಿ, ಆರ್. ನರಸಿಂಹಾಚಾರ್, ಡಾ. ಚಿದಾನಂದ ಮೂರ್ತಿ ಮೊದಲಾದ ವಿದ್ವಾಂಸರು ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆ ನಡೆಸಿದ್ದಾರೆ. ಹೆಚ್ಚಿನ ಎಲ್ಲಾ ವಿದ್ವಾಂಸರು ನೀಡುವ ಒಂದು ಪ್ರಮುಖವಾದ ಆಧಾರವೆಂದರೆ, ಭದ್ರಬಾಹು ಭಟ್ಟಾರಕರು ಉತ್ತರದಿಂದ ದಕ್ಷಿಣಕ್ಕೆ ಅದರಲ್ಲೂ ಶ್ರವಣಬೆಳಗೊಳಕ್ಕೆ ಬಂದು ನೆಲೆಸಿದ ಚಾರಿತ್ರಿಕ ಘಟನೆ." [4]

ಜೈನಧರ್ಮ ಕರ್ನಾಟಕದಲ್ಲಿ ಕ್ರಿ.ಪೂ 3ನೇ ಶತಮಾನದಲ್ಲಿ ಇತ್ತು ಎಂದು ಹೇಳಲು, ಶ್ರವಣಬೆಳಗೊಳದ ಚಂದ್ರಗಿರಿಯ ಮೇಲಿರುವ ಪಾರ್ಶ್ವನಾಥ ಬಸ್ತಿಯ ದಕ್ಷಿಣಕ್ಕಿರುವ ಒಂದು ಬಂಡೆಯ ಮೇಲಿರುವ ಶೀಲಾಲೇಖವು ಆಧಾರವಾಗಿದೆ. ಮಹಾಪುರುಷ ಸಂತತಿ ಸಮವದ್ಯೋತಿತಾನ್ವಯ ಭದ್ರಬಾಹುಸ್ವಾಮಿಯು "ಅಷ್ಟಾಂಗಮಹಾನಿಮಿತ್ತ ತತ್ವಜ್ಞೇನ ತ್ರೈಕಾಲ್ಯದರ್ಶಿನಾನಿಮಿತ್ತೇನ" [5] ಹನ್ನೆರಡು ವರ್ಷ ದೊಡ್ಡ ಬರಗಾಲ ಸಂಭವಿಸುವುದೆಂದು ಉಜ್ಜೈನಿಯಲ್ಲಿ ಹೇಳಿ, ಸರ್ವಸಂಘದೊಡನೆ ಉತ್ತರದಿಂದ ದಕ್ಷಿಣಕ್ಕೆ ಆಚಾರ್ಯ ಪ್ರಭಾಚಂದ್ರರೊಡನೆ ಕಟವಪ್ರಕ್ಕೆ ಬಂದರು. ಭದ್ರಬಾಹು ಸ್ವಾಮಿಯ ಶಿಷ್ಯನಾದ ಚಂದ್ರಗುಪ್ತ ಮೌರ್ಯನೂ ತನ್ನ ಗುರುಗಳನ್ನು ಹಿಂಬಾಲಿಸಿದನು. ಶಿಷ್ಯರು 1200 ಇದ್ದಾರೆಂದು ಊಹೆ. ಭದ್ರಭಾಹು ಗುಹೆಯೂ, ಚಂದ್ರಗುಪ್ತ ಬಸದಿಯೂ ಚಿಕ್ಕ ಬೆಟ್ಟದ ಮೇಲೆ ಅವರ ಸ್ಮಾರಕಗಳಾಗಿವೆ. ಭದ್ರಬಾಹು ಮತ್ತು ಅವರ 300 ಶಿಷ್ಯರು ಸಲ್ಲೇಖನ ವ್ರತ ಸ್ವೀಕರಿಸಿ ಮರಣಹೊಂದಿದರೆಂದು, ಈ ಶಿಲಾಲೇಖ ಸಾರುತ್ತದೆ. "ಭದ್ರಬಾಹು ಮತ್ತು ಚಂದ್ರಗುಪ್ತರು ಶ್ರವಣಬೆಳಗೊಳಕ್ಕೆ ಬಂದ ಸಂಪ್ರದಾಯದ ಉಲ್ಲೇಖವು ಹರಿಷೇಣ ಕವಿಯು 981ರಲ್ಲಿ ಸಂಸ್ಕೃತದಲ್ಲಿ ರಚಿಸಿದ "ಬೃಹತ್ಕಥಾಕೋಶ" ರತ್ನನಂದಿಯ "ಭದ್ರಬಾಹುಚರಿತ್ರೆ," ಚಿದಾನಂದ ಕವಿಯ ''ಮುನಿವಂಶಾಭ್ಯುದಯ" (1680) ಮತ್ತು ದೇವಚಂದ್ರನ ರಾಜಾವಳಿಕಥೆ" ಈ ಗ್ರಂಥಗಳಲ್ಲಿ ದೊರೆಯುತ್ತದೆ. ಇವೆಲ್ಲಾ ಆಧಾರಗಳನ್ನು ಲಕ್ಷ್ಯದಲ್ಲಿಟ್ಟು ಆರ್. ನರಸಿಂಹಚಾರ್ಯರೂ, ಡಾ ವಿನ್ಸೆಂಟ್ ಸ್ಮಿಥ್‌ರೂ ಮತ್ತು ಪ್ರೊ. ಎಸ್. ಆರ್ ಶರ್ಮಾರವರೂ ಈ ಸಂಪ್ರದಾಯವು ಐತಿಹಾಸಿಕ ಸತ್ಯವೆಂದು ಒಪ್ಪಿದ್ದಾರೆ" [6]

ಈ ಉಲ್ಲೇಖವನ್ನು ನೋಡಿದಾಗ ಕರ್ನಾಟಕದಲ್ಲಿ ಜೈನಧರ್ಮವು ಕ್ರಿ. ಪೂ 3ನೇ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದು ಆ ಕಾಲಕ್ಕಾಗಲೇ ಪ್ರಚಾರಕಾರ್ಯದಲ್ಲಿ ತೊಡಗಿತ್ತೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ.

ಕರ್ನಾಟಕಕ್ಕೆ ಜೈನಧರ್ಮದ ಆಗಮನದ ಬಗ್ಗೆ ಹೇಳುತ್ತಾ, ರಾಷ್ಟ್ರಕವಿ ಎಂ. ಗೋವಿಂದ ಪೈಯವರು ಈ ರೀತಿ ಉಲ್ಲೇಖಿಸಿದ್ದಾರೆ:

1) "ತತೋ ಯಥಾಕ್ರಮಂ ವಿಷ್ಣುರ್ನಂದಿ ಮಿತ್ರೋಪರಾಜಿತ:
ಗೋವರ್ಧನೋ ಭದ್ರಬಾಹುರಿತ್ಯಾಚಾರ್ಯ ಮಹಾಧಿಯಃ
ಚತುರ್ದಶ ಮಹಾವಿದ್ಯಾಸ್ಥಾನಾನಾಂ ಪಾರಗಾ ಇಮೇ ॥
ಸುಭದ್ರಶ್ಚ ಯಶೋಭದ್ರೋ ಭದ್ರಬಾಹು ರ್ಮಹಾಯಶಾಃ
ಲೋಹಾರ್ಯಶ್ಚೇತ್ಯಮೀ ಜ್ಞೇಯಾಃ ಪ್ರಥಮಾಂಗಾಬ್ಧಿ ಪಾರಾಗಾಃ ।

2) ತಸ್ಮಾದಿಷ್ಣು: ಕ್ರಮಾತ್ತಸ್ಮಾನ್ನಂದಿಮಿತ್ರೋಪರಾಜಿತ:
ತತೋಗೋವರ್ಧನೋದಧ್ಯೇ ಭದ್ರಬಾಹು: ಶ್ರುತಂ ತತಃ
ಸುಭದ್ರೋತೋ ಯಶೋಭದ್ರೋ* ಯಶೋಬಾಹುರನಂತರ:
ಲೋಹಾಚಾರ್ಯಸ್ತುರೀಯೋ ಭೂದಾಚಾರಂಗ ಧ್ರತಾತ್ತತಃ ॥ [7]

(*ಯಶೋಬಾಹು = ಭದ್ರಬಾಹು).

ಅಂದರೆ ಶ್ರೀ ಗೋವಿಂದ ಪೈಯವರ ಅಭಿಪ್ರಾಯವನ್ನು ಅವರ ಮಾತುಗಳಲ್ಲಿ ಹೀಗೆ ಸಂಗ್ರಹಿಸಬಹುದು: ಶ್ರೀ ಮಹಾವೀರಸ್ವಾಮಿಯ ನಿರ್ವಾಣದ ಕೆಲ ಕಾಲಾನಂತರ ಜೈನಧರ್ಮದ ಆಚಾರ್ಯ ಪರಂಪರೆಯಲ್ಲಿಯ ಭದ್ರಬಾಹು ಎಂಬಾತನು ತಾನಿದ್ದಲ್ಲಿ ಮಹಾಕ್ಷಾಮ ಒದಗಿದುದರಿಂದ ತನ್ನೊಂದಿಗಿದ್ದ ಜೈನ ಯತಿಗಳ ಸಂಗದೊಡನೆ ದಕ್ಷಿಣಾಪಥಕ್ಕೆ ಇಳಿತಂದು, ಕರ್ನಾಟಕಕ್ಕೆ ಬಂದನೆಂದು ದಿಗಂಬರ ಹಾಗೂ ಶ್ವೇತಾಂಬರ ಎಂಬ ಅವೆರಡೂ ಸಂಪ್ರದಾಯಗಳ ಜೈನರಲ್ಲಿ ಐತಿಹ್ಯವಿದೆ. ದಿಗಂಬರ ಗುರುಪರಂಪರೆಯಲ್ಲಿ ಭದ್ರಬಾಹು ಎಂಬ ಅದೊಂದೇ ಹೆಸರಿನ ಸುಮಾರು 500ಕ್ಕಿಂತ ಹೆಚ್ಚು ವರ್ಷಗಳ ಪರಸ್ಪರ ಕಾಲಾಂತರ ಉಳ್ಳ ಆಚಾರ್ಯರು ಇಬ್ಬರಿರುವರಾದರೂ ಅವರಲ್ಲಿ ಮೊದಲನೆಯ ಭದ್ರಬಾಹುವನ್ನೇ ಮೇಲೆ ಕಾಣುವಂತೆ ದಿಗಂಬರರು ಹೇಗೋ ಹಾಗೇಯೇ ಶ್ವೇತಾಂಬರರೂ ಪಂಚಮ ಶ್ರುತಕೇವಲಿ ಎನ್ನುವರಲ್ಲದೆ (ದಿಗಂಬರದಲ್ಲಿ ಕೂಡ ಶ್ರುತ ಕೇವಲಿಯಲ್ಲದ) ಎರಡನೆಯ ಭದ್ರಬಾಹುವಿನ ಹೆಸರಾದರೂ ಶ್ವೇತಾಂಬರರ ಪಟ್ಟಾವಲಿಗಳಲ್ಲಿ ಇಲ್ಲದಿರುವುದರಿಂದ ಎರಡೂ ಸಂಪ್ರದಾಯಗಳಿಲ್ಲಿರುವ ಈ ಐತಿಹ್ಯದಲ್ಲಿಯ ಭದ್ರಬಾಹುವಾದರೊ ಮೊದಲನೆಯ ಭದ್ರಬಾಹುವೇ ಸರಿ. ಆತನು ಸಸಂಘನಾಗಿ ಕರ್ನಾಟಕಕ್ಕೆ ಬರುವುದಕ್ಕೆ ಮುಂಚೆ ದಕ್ಷಣಾಪಥದಲ್ಲಿ ಜೈನಸಂಘವೇ ಏಕೆ, ಜೈನಧರ್ಮವಾದರೂ ಇದ್ದುದನ್ನು ಅಥವಾ ಬಂದುದನ್ನು ಕುರಿತು ಜೈನರಲ್ಲಿ ಐತಿಹ್ಯವೂ ಇಲ್ಲದುದರಿಂದ ಆ ಧರ್ಮವನ್ನು ಮೊತ್ತಮೊದಲಲ್ಲಿ ಇಲ್ಲಿಗೆ ತಂದಾತನೂ ಆತನೇ ಸರಿ.

"ಕೇವಲಿ ಚರಮೋ ಜಂಬೂ ಸ್ವಾಮ್ಯಥ ಪ್ರಭವಪ್ರಭು:
ಶರ್ಯ್ಯಂಭವೋ ಯಶೋಭದ್ರ: ಸಂಭೂತವಿಜಯಸ್ತತ:
ಭದ್ರಬಾಹು: ಸ್ಥೂಲಭದ್ರ: ಶ್ರುತಕೇವಲಿನೋ ಹಿ ಷಟ್" ॥ [8]

ಶ್ರುತಕೇವಲಿ ಭದ್ರಬಾಹುವು ಚಂದ್ರಗುಪ್ತ ಮತ್ತು ಇತರ ಸಾವಿರಾರು ಶಿಷ್ಯರೊಡನೆ ದಕ್ಷಿಣ ಭಾರತಕ್ಕೆ ಆಗಮಿಸುವ ಪೂರ್ವದಲ್ಲಿ ಜೈನಧರ್ಮವು ಕರ್ನಾಟಕದಲ್ಲಿ ಅಸ್ತಿತ್ವದಲ್ಲಿ ಇರಲಿಲ್ಲವೇ? ಈ ವಿಷಯ ಕುರಿತ ಯಾವ ಐತಿಹಾಸಿಕ ಆಧಾರವೂ ಇಲ್ಲ. ಆದರೆ ಅವರ ಪ್ರವಾಸದ ಬಗ್ಗೆ "ಜನಪದಮನೇಕ ಗ್ರಾಮ ಶತಸಂಖ್ಯಂ ಮುದಿತಜನ ಧನಕನಕಸಸ್ಯ ಗೋಮಹಿಷಾಜಾವಿ ಕುಲಸಮಾಕೀರ್ಣಂ ಪ್ರಾಪ್ತವಾನ್" [9] ಎಂದು 1ನೇ ನಂಬರಿನ ಶಿಲಾಲೇಖದಲ್ಲಿ ಬರೆದಿರುವುದರಿಂದ ದಕ್ಷಿಣದೇಶದಲ್ಲಿ ಸುಖಸಮೃದ್ಧಿಯಿಂದ ತುಂಬಿದ ಅನೇಕ ಹಳ್ಳಿಗಳು ಇದ್ದುವೆಂದು ಹೇಳುವುದು ವಾಸ್ತವಿಕಾಂಶ. ಜೈನಯತಿಗಳು ತಮ್ಮ ಆಹಾರವನ್ನು ತಾವು ತಾಯಾರಿಸುವುದಿಲ್ಲ. ತಮಗಾಗಿಯೇ ಸಿದ್ಧಪಡಿಸಿದ ಆಹಾರವನ್ನು ಸ್ವೀಕರಿಸಬಾರದೆಂದು ಯತಿನಿಯಮ. ಆದುದರಿಂದ ತಮ್ಮ ಪ್ರವಾಸದಲ್ಲಿ ತಮಗೆ ಯೋಗ್ಯ ಸ್ವಾಗತ ಮತ್ತು ಆಹಾರದಾನ ಮಾಡುವ ಶ್ರಾವಕ ಶ್ರಾವಿಕೆಯರು ಮಾರ್ಗದಲ್ಲಿ ಇದ್ದುದನ್ನು ಮನಗಂಡೇ ಅವರು ಪ್ರವಾಸವನ್ನು ಕೈಗೊಂಡಿರಬೇಕು.

ಈ ಮೇಲಿನ ಉಲ್ಲೇಖಗಳಲ್ಲಿ ಪ್ರಸ್ತಾವಿಸಲ್ಪಟ್ಟ ಭದ್ರಬಾಹು ಮತ್ತು ಚಂದ್ರಗುಪ್ತರ ವಿಷಯದಲ್ಲಿ ಸಾಕಷ್ಟು ಚರ್ಚೆಗಳು ನಡೆದವು. ಇಲ್ಲಿ ಉಲ್ಲೇಖಿತರಾದ ಭದ್ರಬಾಹುಗಳು ಶ್ರುತ ಕೇವಲಿ ಭಟ್ಟಾರಕರೆಂದೂ, ಅವರ ಜೊತೆಗೆ ಆಗಮಿಸಿದವನು ಮೌರ್ಯವಂಶದ ದೊರೆಯಾದ ಚಂದ್ರಗುಪ್ತನೆಂದೂ, ಶಾಸನ ಮತ್ತು ಪ್ರಾಚೀನ ಗ್ರಂಥಗಳಲ್ಲಿ ಉಕ್ತವಾದ ಸಂಗತಿಗಳು ನಿಜವೆಂದೂ ರೈಸರು ಅಭಿಪ್ರಾಯ ಪಟ್ಟರು. ಇದನ್ನು ಆರ್. ನರಸಿಂಹಚಾರ್, ವಿನ್ಸೆಂಟ್ ಸ್ಮಿತ್ ಮೊದಲಾದ ವಿದ್ವಾಂಸರು ಕೂಡ ಬೆಂಬಲಿಸಿದರು. ಆದರೆ ಡಾ ಫ್ಲೀಟ್ ಅವರು ಈ ಆಧಾರವನ್ನು ವಿಮರ್ಶಿಸುತ್ತ "ಕ್ರಿ.ಪೂ 52ರಲ್ಲಿ ಇದ್ದಿರಬಹುದಾದ ಇಮ್ಮಡಿ ಭದ್ರಬಾಹು ಮತ್ತು ಅವನ ಶಿಷ್ಯನಾದ ಗುಪ್ತಗುಪ್ತ ಎಂಬುವವನೇ ಚಂದ್ರಗುಪ್ತ"ನೆಂದು ವಾದಿಸಿದರೆ, ಗೋವಿಂದ ಪೈಗಳು ಶ್ರುತಕೇವಲಿ ಭದ್ರಬಾಹುಗಳ ಜೊತೆಗೆ ಬಂದವನು ಅಶೋಕನ ಮೊಮ್ಮಗ ಸಂಪ್ರತಿ ಚಂದ್ರಗುಪ್ತನು. ಅವನು ಕ್ರಿ.ಪೂ 2ನೆಯ ಶತಮಾನದಲ್ಲಿ ಶ್ರವಣಬೆಳಗೊಳಕ್ಕೆ ಬಂದನೆಂದು ಸುದೀರ್ಘ ಆಧಾರಗಳನ್ನು ನೀಡಿ ವಾದಿಸಿದ್ದಾರೆ. ಡಾ.ಚಿದಾನಂದ ಮೂರ್ತಿಯವರು

ಗೋವಿಂದಪೈ ಅವರ ಅಭಿಪ್ರಾಯದ ಕಡೆಗೆ ಒಲವು ತೋರಿಸುತ್ತ "ಈಗ ಪ್ರಬಲವಾಗಿ ವಿರೋಧಿಸುವ ಅಂಶಗಳು ಹೊರಬರುವತನಕ ಇದು ನಿಜವೆಂದು ಭಾವಿಸಬಹುದು" [10] ಎನ್ನುತ್ತಾರೆ. ಪಂಡಿತ ವಲಯದಲ್ಲಿ ಈಗ ಗೋವಿಂದಪೈಗಳ ವಾದವೇ ಬಹುಮಟ್ಟಿಗೆ ಸರಿಯೆಂದು ಅಂಗೀಕೃತವಾಗಿದೆ.

ಭದ್ರಬಾಹು ಮತ್ತು ಚಂದ್ರಗುಪ್ತರು ಸಲ್ಲೇಖನ ವ್ರತವನ್ನು ಸ್ವೀಕರಿಸಿದ ತರುವಾಯ, ಜೈನಧರ್ಮ ಹಂತಹಂತವಾಗಿ ಬೆಳೆದು, ಕರ್ನಾಟಕದ ಮೇಲೆ ತೀವ್ರವಾದ ಪ್ರಭಾವವನ್ನು ಬೀರಿತು. ಕರ್ನಾಟಕದ ಪ್ರಾಚೀನ ಅರಸರಾದ ಕದಂಬರು, ಗಂಗರು, ಚಾಳುಕ್ಯ, ರಾಷ್ಟ್ರಕೂಟ, ಹೊಯ್ಸಳ ಮೊದಲಾದ ಸಾಮ್ರಾಟರ ಆಶ್ರಯವನ್ನು ಪಡೆದು, ಕರ್ನಾಟಕದ ಜನ ಜೀವನದ ಮೇಲೆ ಗಾಢವಾದ ಪ್ರಭಾವನ್ನು ಬೀರಿತು.

"ಕರ್ನಾಟಕದಲ್ಲಿ ಜೈನಧರ್ಮದ ಬೆಳವಣಿಗೆಗೆ ಪ್ರಮುಖವಾದ ಕಾರಣ ಜೈನಮತಾಚಾರ್ಯರು ಸಂಘಟಿಸಿದ ಧಾರ್ಮಿಕ ಚಳುವಳಿ. "ಪ್ರಸಿದ್ಧ ಜೈನಾಚಾರ್ಯರಾದ ಕುಂದಕುಂದಾಚಾರ್ಯ (ಕಿ. ಪೂ. 1ನೇ ಶತಮಾನ) ಉಮಾಸ್ವಾತಿ (ಕ್ರಿ. ಪೂ. 1ನೇ ಶತಮಾನ) ಪೂಜ್ಯಪಾದ, ದೇವನಂದಿ, ಸುಮಂತಭದ್ರ ಮೊದಲಾದವರು, ಸ್ವತಃ ಕನ್ನಡಿಗರಾಗಿದ್ದು ಸಂಸ್ಕೃತ, ಪ್ರಾಕೃತ ಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿದ್ದರೂ, ಜೈನಧರ್ಮದ ತತ್ವವನ್ನು ಸಾಮಾನ್ಯ ಜನತೆಯ ಹೃದಯಕ್ಕೆ ಮುಟ್ಟಿಸುವಲ್ಲಿ ಯಶಸ್ವಿಯಾದರು. ಕ್ರಿ. ಶ. 1ನೇ ಶತಮಾನದಲ್ಲಿ ಪಾದಲಿಪ್ತಾಚಾರ್ಯನೆಂಬ ಜೈನಗುರುವು ದಕ್ಷಿಣಕ್ಕೆ ಬಂದಾಗ ಮಾನ್ಯಖೇಟದ ಬಳಿ ಜೈನರು ವಾಸವಾಗಿದ್ದರೆಂದು ಹೇಳಲಾಗುತ್ತದೆ" [11]

ಶ್ರವಣಬೆಳಗೊಳದಲ್ಲಿ ದೊರೆತ ಶಿಲಾಲೇಖಗಳು ಗಂಗ, ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ಕದಂಬರ ಜೊತೆಗೆ ನೊಳಂಬ, ಚೋಳ ಮತ್ತು ಚೆಂಗಾಳ್ವ ಮನೆತನದ ಅರಸರಿಂದಲೂ, ನಿಡಗಲ್ಲು ಮತ್ತು ನುಗ್ಗೇಹಳ್ಳಿಯ ಒಡೆಯರಿಂದಲೂ ಬರೆಯಿಸಲ್ಪಟ್ಟಿವೆ. ಈ ಮೇಲಿನ ಎಲ್ಲಾ ರಾಜಮನೆತನಗಳು ಕರ್ನಾಟಕದ ಜೈನಧರ್ಮದ ಬೆಳವಣಿಗೆಯಲ್ಲಿ ವಹಿಸಿದ ಪಾತ್ರ ಕೊಡುಗೆಗಳನ್ನು ಕ್ರಮವಾಗಿ ಅಭ್ಯಸಿಸೋಣ.

## ಗಂಗರು

ಗಂಗರು ಇಕ್ಷ್ವಾಕು ವಂಶಕ್ಕೆ ಸೇರಿದ್ದು, ಪದ್ಮರಾಜನ ಮಕ್ಕಳಾದ ದಡಿಗ ಮತ್ತು ಮಾಧವ ಎಂಬುವವರು ದಕ್ಷಿಣಕ್ಕೆ ಬಂದು ಪ್ರಸಿದ್ಧ ಜೈನಆಚಾರ್ಯರಾದ ಸಿಂಹನಂದಿಯ ಸಹಾಯದಿಂದ ಗಂಗಾವಾಡಿ ರಾಜ್ಯವನ್ನು (ಕ್ರಿ. ಶ. ಸು. 189–250) ಸ್ಥಾಪಿಸಿದರು. ಕೊಂಗುಣಿವರ್ಮನೆಂಬ ಹೆಸರಿನಿಂದ ರಾಜ್ಯವಾಳಿದ ಮೊದಲನೇ ಮಾಧವನು, ಕುವಲಯಾಪುರ ಅಂದರೆ ಈಗಿನ ಕೋಲಾರದಿಂದ ರಾಜ್ಯಾವಾಳಿದನು. "ಗಂಗರಾಜಮಮ್ ಮಾಡಿದ ಸಿಂಹನಂದಿ ಆಚಾರ್ಯರ್"ಎಂದು ಹೊಂಬುಜದ ಪಂಚಬಸ್ತಿಯಲ್ಲಿ ದೊರೆತ ಶಿಲಾಲೇಖದಲ್ಲಿ ಉಲ್ಲೇಖವಾಗಿದೆ". [12]

ಆತನ ನಂತರ ಬಂದ ಅವನೀತ, ಹರಿವರ್ಮ, 2ನೇ ಮಾಧವ, ದುರ್ವಿನೀತ ಇವರೆಲ್ಲರೂ ಸರ್ವಧರ್ಮ ಸಹಿಷ್ಣುಗಳಾಗಿದ್ದು, ಎಲ್ಲಾಧರ್ಮಗಳನ್ನು ಉಧಾರದೃಷ್ಟಿಯಿಂದ ಕಾಣುತ್ತಿದ್ದರು. ಇವರೆಲ್ಲರೂ ಪಲ್ಲವರು ಕರ್ನಾಟಕದೊಳಗೆ ನುಗ್ಗದಂತೆ, ಎಚ್ಚರವಹಿಸಿ ರಾಜ್ಯರಕ್ಷಣೆ ಮಾಡಿದರು.

"ಅವನೀತನು, ತನ್ನ ಗುರು ವಿಜಯಕೀರ್ತಿಯ ಉಪದೇಶದಿಂದ ಅನೇಕ ಜಿನಮಂದಿರಗಳಿಗೆ ದಾನ ನೀಡಿದ ಉಲ್ಲೇಖಗಳಿವೆ. ವಿಜಯಕೀರ್ತೀಯು ಸ್ವತಃ ಜನರ ಕಷ್ಟಗಳನ್ನು ಪರಿಹರಿಸುತ್ತಿದ್ದನೆಂದೂ, ವಿದ್ವಜನರಿಗೆ ಆಧಾರವಾಗಿದ್ದನೆಂದೂ ಶಾಸನದಲ್ಲಿ ಸುತ್ತಿಸಲಾಗಿದೆ". [13] ದುರ್ವಿನೀತನು ಬಾದಾಮಿ ಚಾಲುಕ್ಯ ಅರಸ ಎರಡನೇ ಪುಲಕೇಶಿಯ ಹಿತಚಿಂತಕನಾಗಿದ್ದು, ಜೈನವೈಯಾಕರಣಿಯಾದ ಪೂಜ್ಯಪಾದನ ಶಿಷ್ಯನಾಗಿದ್ದನು. ಇವನನ್ನು ಧರ್ಮರಾಯನಿಗೆ ಹೋಲಿಸಲಾಗಿದೆ. "ಪ್ರಭುಶಕ್ತಿ, ಉತ್ಸಾಹಶಕ್ತಿಗಳ ಸಂಗಮ ಈತನಲ್ಲಿತ್ತೆಂದು ಶಾಸನವೊಂದರಲ್ಲಿ ಹೇಳಲಾಗಿದೆ". [14] ಈತನ ಗುರುವಾಗಿದ್ದ ಪೂಜ್ಯಪಾದನು ಉಮಾಸ್ವಾಮಿಯ ತತ್ವಾರ್ಥಸೂತ್ರದ ಮೇಲೆ ಟೀಕಾಗ್ರಂಥ 'ಸರ್ವಾರ್ಥಸಿದ್ದಿ'ಯನ್ನು ಬರೆದನು. ಅಲ್ಲದೆ 'ಸಮಾಧಿಶತಕ' ಎಂಬ ಜೈನಧಾರ್ಮಿಕ ಗ್ರಂಥವನ್ನೂ, 'ಜೈನೇಂದ್ರವ್ಯಾಕರಣ' ಎಂಬ ವ್ಯಾಕರಣಗ್ರಂಥವನ್ನೂ ಬರೆದನು. ಇವನು ವೈದ್ಯಶಾಸ್ತ್ರದಲ್ಲಿ ನಿಷ್ಣಾತನಾಗಿದ್ದನು.

ದುರ್ವಿನಿತನೂ ಸಹ ಸಂಸ್ಕೃತ ಮತ್ತು ಕನ್ನಡ ಭಾಷೆಗಳೆರಡರಲ್ಲೂ ಸಹ ಪಂಡಿತನಾಗಿದ್ದು, ಈತ, ಗುಣಾಢ್ಯನ ಬೃಹತ್ಕಥೆಯ ಸಂಸ್ಕೃತ ಅನುವಾದ, ಭಾರವೀಯ ಕಿರಾತಾರ್ಜುನೀಯದ 15ನೇ ಸರ್ಗಕ್ಕೆ ಟೀಕೆಯನ್ನೂ, ಕನ್ನಡದಲ್ಲಿ 'ವಡ್ಡಕಥಾ', 'ಶಬ್ದಾವತಾರ' ಕೃತಿಗಳನ್ನು ಸ್ವತಃ ರಚಿಸಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆಯನ್ನು ನೀಡಿದ್ದಾನೆ. ದುರ್ವಿನೀತನ ನಂತರ ಬಂದ ಶ್ರೀಪುರುಷ, ಶಿವಮಾರ, ಮಾರಸಿಂಹ, ರಾಜಮಲ್ಲ ಮೊದಲಾದವರು ಜೈನ ಧರ್ಮಕ್ಕೆ ಪ್ರೋತ್ಸಾಹವನ್ನಿತ್ತು ಪೋಷಿಸಿದರು.

ಉಜ್ವಲ ಜೈನ ಭಕ್ತನಾಗಿದ್ದ ಮಾರಸಿಂಹ ಗುತ್ತಿಗೆಯ ಗಂಗನು ಅನೇಕ ಬಸದಿಗಳನ್ನು, ಮಾನಸ್ತಂಭಗಳನ್ನು ಕಟ್ಟಿಸಿದನು. ಅನಂತರ ಅರಸೊತ್ತಿಗೆಯನ್ನು ತ್ಯಜಿಸಿ, ಆತ ತನ್ನ ಗುರು ಅಜಿತಸೇನಾಚಾರ್ಯಭಟ್ಟಾರಕರ ಸಮ್ಮುಖದಲ್ಲಿ ಬಂಕಾಪುರ (ಈಗಿನ ಧಾರಾವಾಡ) ದಲ್ಲಿ ಸಲ್ಲೇಖನ ವ್ರತವನ್ನು ಸ್ವೀಕರಿಸಿ ಮರಣ ಹೊಂದಿದನು. ಈತನ ಆಸ್ಥಾನದಲ್ಲಿದ್ದ ಮಹಾಜೈನ ಪಂಡಿತ ವಾದಿಘಂಗಲಭಟ್ಟ ಇವನು ಜೈನಸಿದ್ಧಾಂತದಲ್ಲಿ ಉತ್ತಮ ಶ್ರುತಜ್ಞನಾದುದರಿಂದ ವಾದಗಳಲ್ಲಿ ಜಯಿಸಿ ಕೀರ್ತೀವಂತನಾಗಿದ್ದನು. ಆನಂತರ ಬಂದ 'ಜಗದೇಕವೀರ', 'ಧರ್ಮಾವತಾರ' ಎಂಬ ಬಿರುದಾಕಿಂತನಾಗಿದ್ದ 4ನೇ ರಾಚಮಲ್ಲನು ಕರ್ನಾಟಕದ ಕೀರ್ತೀಪತಾಕೆಯನ್ನು ವಿಶ್ವದಲ್ಲೆಡೆ ಹಬ್ಬುವಂತೆ ಮಾಡಿದನು. ಈತನ ದಂಡನಾಯಕನಾಗಿದ್ದ ಚಾವುಂಡರಾಯ ಜಗತ್ಪ್ರಸಿದ್ದ ಗೊಮ್ಮಟೇಶ್ವರ ಮೂರ್ತಿಯನ್ನು ಶ್ರವಣಬೆಳಗೊಳದಲ್ಲಿ ನಿಲ್ಲಿಸಿದನು. ಅಲ್ಲದೆ ಇವನು ಅಸಮ ಸಾಹಿಸಿಯಾಗಿದ್ದು, ಸ್ವತಃ ಕವಿಯಾಗಿದ್ದು, ಅಪಾರ ಪಾಂಡಿತ್ಯವನ್ನು ಹೊಂದಿದ್ದು, 'ಚಾವುಂಡರಾಯ ಪುರಾಣ'ವನ್ನು ಬರೆದು ಜಗತ್ ಪ್ರಸಿದ್ದನಾಗಿದ್ದನು.

ಗಂಗವಂಶದ ಕೊನೆಯ ಅರಸ 5ನೇ ರಾಚಮಲ್ಲ, 'ಛಂದೋಂಬುದಿ' ಮತ್ತು 'ಕರ್ನಾಟಕ ಕಾದಂಬರಿ' ಬರೆದ ನಾರ್ಗವರ್ಮನಿಗೆ ಆಶ್ರಯದಾತನಾಗಿದ್ದನು. ಒಂದನೆಯ ಗುಣವರ್ಮನು 'ಹರಿವಂಶಪುರಾಣ' ಮತ್ತು 'ನೇಮಿನಾಥಪುರಾಣ'ಗಳನ್ನು ಬರೆದನು. 'ಉಭಯಭಾಷಾಚಕ್ರವರ್ತಿ' ಎಂಬ ಬಿರುದಾಂಕಿತನಾಗಿದ್ದ ಪೊನ್ನನು ಕೃಷ್ಣರಾಜನ ಕಾಲದಲ್ಲಿ 'ಶಾಂತಿಪುರಾಣ', 'ಜಿನಾಕ್ಷರಮಾಲೆ', 'ಜಿನಸ್ತುತಿ' ಕಾವ್ಯವನ್ನು ಬರೆದನು. ಇವರೇ ಅಲ್ಲದೆ ಗುಣನಂದಿ, ಹೇಮಸೇನ, ವಾಧೀಭಸಿಂಹ, ವೀರನಂದಿ, ಅಸಗ, ನೇಮಿಚಂದ್ರ ಮೊದಲಾದ ಕವಿಗಳು, ಶಾಸ್ತ್ರಕಾರರು, ಗಂಗರಕಾಲದಲ್ಲಿ ಕನ್ನಡ, ಸಂಸ್ಕೃತ, ಪ್ರಾಕೃತ ಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿದ್ದಾರೆ. ಅನೇಕ ಶೀಲಾಲೇಖಗಳು ಗಂಗರ ಔದಾರ್ಯ, ಘನತೆಯನ್ನು ಸಾರಿ ಹೇಳಿವೆ. ಆದುದರಿಂದ ಕರ್ನಾಟಕದ ಜೈನಧರ್ಮದ ಇತಿಹಾಸದಲ್ಲಿ ಗಂಗರ ಕಾಲವು ಸ್ಮರಣೀಯವಾದುದಾಗಿದೆ.

## ಕದಂಬರು

ಗಂಗವಂಶವು ಕಳೆಗುಂದುವ ಮೊದಲೇ ಕರ್ನಾಟಕದಲ್ಲಿ ಕದಂಬ ಮತ್ತು ರಾಷ್ಟ್ರಕೂಟರು ಏಳಿಗೆಗೆ ಬಂದು ಜೈನಧರ್ಮದ ಉನ್ನತಿಗೆ ಕಾರಣವಾದವು. ಕದಂಬರು ಮೂಲತಃ ವೈದಿಕ ಮತಾವಲಂಬಿಗಳಾಗಿದ್ದರೂ ಜೈನಧರ್ಮದ ಬೆಳವಣಿಗೆಗೆ ಅಪಾರವಾದ ಪ್ರೋತ್ಸಾಹವನ್ನು ನೀಡಿದ್ದಾರೆ. ಈ ವಂಶದ ಮೂಲಪುರುಷ ಮುಕ್ಕಣ. ಮಯೂರವರ್ಮ ಈ ವಂಶದ ಶ್ರೇಷ್ಠರಾಜನಾಗಿದ್ದನು. ಕ್ರಿ.ಶ.4ನೇ ಶತಮಾನದ ಕೊನೆಯಭಾಗದಲ್ಲಿ ಆಳಿಹೋದ ಕಾಕುಸ್ಥವರ್ಮನು ಶ್ರದ್ಧೆಯುಳ್ಳ ಜೈನರಾಜನಾಗಿದ್ದನು. ಈತನ ಸೇನಾಪತಿಯಾದ ಶ್ರುತಕೀರ್ತೀಯು ಜೈನನಾಗಿದ್ದು, ವಿದ್ಯಾಪಾರಂಗತನೂ, ಉದಾರಿಯೂ, ಸದಾಚಾರಿಯೂ ಆಗಿದ್ದು ಅನೇಕ ದಾನಗಳನ್ನು ಮಾಡಿದನು. ಕಾಕುಸ್ಥವರ್ಮನ ಮೊಮ್ಮಗನಾದ ಮೃಗೇಶವರ್ಮನು ತನ್ನ ರಾಜ್ಯದಲ್ಲಿ "ಸ್ವೇತಪಟ ಮಹಾಶ್ರಮಣಸಂಘ" (ಶ್ವೇತಾಂಬರ) ಮತ್ತು "ನಿರ್ಗಂಥ ಮಹಾಶ್ರಮಣಸಂಘ" [15] (ದಿಗಂಬರ)–ಈ ಯತಿಗಳ ಸಂಘಗಳನ್ನು ತನ್ನ ರಾಜ್ಯದಲ್ಲಿ ಸ್ಥಾಪಿಸಿದನೆಂದು ತಿಳಿದುಬರುತ್ತದೆ.

"5ನೇ ಶತಮಾನದಲ್ಲಿ ಮೃಗೇಶವರ್ಮನಿಂದ ನಿರ್ಮಿತವಾದ ಹಲಸಿಯ ಜೈನಬಸದಿಯು ಅತ್ಯಂತ ಪ್ರಾಚೀನ ಕಟ್ಟಡವಾಗಿದೆ. ಆತನು ಯಾಪನೀಯ ನಿರ್ಗ್ರಂಥ ಕೂರ್ಚಕರಿಗೆ ದಾನ ನೀಡಿದಂತೆ ಉಲ್ಲೇಖವಿದೆ. ಬೃಹತ್ಪರಲೂರ ಎಂಬ ಗ್ರಾಮದಲ್ಲಿರುವ ಚೈತ್ಯಾಲಯದಲ್ಲಿ ಸಮ್ಮಾರ್ಜನ, ಉಪಲೇಪನ, ಭಿನ್ನಸಂಸ್ಕಾರ ಉತ್ಸವಗಳನ್ನು ನಡೆಸಲು ದಾನನೀಡುತ್ತಾನಲ್ಲದೆ ಕಾಲವಾಟಿಕಾ ಗ್ರಾಮದಲ್ಲಿ ಒಂದು ಭಾಗವನ್ನು ಜಿನೇಂದ್ರ ದೇವರಿಗೆ, ಮತ್ತೊಂದು ಭಾಗವನ್ನು ಶ್ವೇತಪಟ ಮಹಾಸಂಘಕ್ಕೆ ಉಳಿದುದನ್ನು ನಿರ್ಗ್ರಂಥ ಮಹಾಶ್ರಮಣ ಸಂಘಕ್ಕೆ ದಾನನೀಡಿದನೆಂದು ತಿಳಿದುಬರುತ್ತದೆ."[16]

ಈ ಉಲ್ಲೇಖದಿಂದ ನಮಗೆ ಸಮಾನ್ಯವಾಗಿ ತಿಳಿದುಬರುವುದೇನೆಂದರೆ ಕ್ರಿ.ಶ. 4ನೇ ಶತಮಾನದ ಸುಮಾರಿಗೆ ಜೈನಧರ್ಮದಲ್ಲಿ ದಿಗಂಬರ–ಶ್ವೇತಾಂಬರ ಪಂಗಡಗಳ ಜೊತೆಗೆ ಯಾಪನೀಯ ಪಂಗಡದ ಜೈನಯತಿಗಳು ಇದ್ದರೆಂದು, ಈ ತಾಮ್ರಪಟದ ಲೇಖನದಿಂದ ವಿಧಿತವಾಗುತ್ತದೆ. ಮೃಗೇಶನ ನಂತರ ಅವನ ಮಗನಾದ ರವಿವರ್ಮನು ಪಟ್ಟಕ್ಕೆ ಬಂದನು. ಕುಮಾರದತ್ತನು ಇವನ ಆಸ್ಥಾನ ಪಂಡಿತನಾಗಿದ್ದನು. ರವಿವರ್ಮ ತಂದೆಯ ರಾಜನೀತಿಯನ್ನು ಅನುಸರಿಸಿ, ಪುರುಖೇಟಕ ಎಂಬ ಗ್ರಾಮದ ಕಂದಾಯವನ್ನು ಚಾತುರ್ಮಾಸದಲ್ಲಿ ಯಾಪನೀಯ ಮುನಿಗಳ ಆಹಾರಕ್ಕಾಗಿ ಉಪಯೋಗಿಸಬೇಕೆಂದು ಆಜ್ಞೆಮಾಡಿದನು. ರವಿವರ್ಮನ ಮಗನಾದ ಹರಿವರ್ಮ, ವಾದಿಸೇನಾಚಾರ್ಯ, ಹಾಗೂ ಆಚಾರ್ಯ ಧರ್ಮನಂದಿಗೂ ಬೇರೆ ಬೇರೆ ಗ್ರಾಮಗಳನ್ನು ಜಿನಪೂಜೆಗಾಗಿ ದಾನಮಾಡಿದನು. ರವಿವರ್ಮನು ತನ್ನ ಅರಮನೆಯ ಬಳಿಯಲ್ಲಿಯೇ, ಕಾಮಜಿನಾಲಯವನ್ನು ಕಲ್ಲಿನಲ್ಲಿ ನಿರ್ಮಿಸಿ ಪೂಜೆ ಉತ್ಸಾವಾದಿಗಳಿಗೆ ವ್ಯವಸ್ಥೆ ಮಾಡಿದ್ದನೆಂಬ ಉಲ್ಲೇಖಗಳು ದೊರಕುತ್ತವೆ.

## ರಾಷ್ಟ್ರಕೂಟರು

ರಾಷ್ಟ್ರಕೂಟರ ಕಾಲ ಜೈನಧರ್ಮದ ಸುವರ್ಣಯುಗ. ಇವರ ಕಾಲದಲ್ಲಿ ಜೈನಧರ್ಮವು ಉತ್ತುಂಗ ಶಿಖರಕ್ಕೇರಿತು. ರಾಷ್ಟ್ರಕೂಟ ಚಕ್ರವರ್ತಿಗಳು ಮಾತ್ರವೇ ಅಲ್ಲ ಸಾಮಂತರು, ಅಧಿಕಾರಿಗಳು, ವಣಿಕರು ಅನೇಕ ರೀತಿಯಿಂದ ಜೈನಧರ್ಮವನ್ನು ಪೊರೆದು ಪೋಷಿಸಿದರು. ಇವರ ಕಾಲದಲ್ಲಿ ಜೈನಮಂದಿರಗಳು, ಬಸದಿಗಳು, ವಿದ್ಯಾಕೇಂದ್ರಗಳು ನಿರ್ಮಾಣಗೊಂಡವು. ಆಚಾರ್ಯರು ದಾನದತ್ತಿ, ಧರ್ಮಬೋಧೆಗಳಂತಹ ಪ್ರಚಾರಗಳನ್ನು ಕೈಗೊಂಡರು. ದಂತಿದುರ್ಗ ಅಥವಾ ವೈರಮೇಘನು, ಜೈನ ಇತಿಹಾಸದಲ್ಲಿ ಹೆಸರಾದ ಅಕಲಂಕದೇವನಿಗೆ ಗೌರವ ಸಲ್ಲಿಸಿದ ಉಲ್ಲೇಖಗಳು ಸಾಕಷ್ಟು ಲಭ್ಯವಿದೆ. ಉತ್ತಮ ವಾಗ್ಮಿಯೂ, ಶ್ರೇಷ್ಟಕವಿಯೂ, ಶಾಸ್ತ್ರಪಂಡಿತನೂ ಆಗಿದ್ದ ಅಕಲಂಕದೇವನು ವಾದದಲ್ಲಿ ಪಂಡಿತರನ್ನು ಸೋಲಿಸಿದ ಉಲ್ಲೇಖಗಳು ದೊರಕುತ್ತವೆ. ಪುಷ್ಪಸೇನಮುನಿ, ಅವನ ಶಿಷ್ಯ ವಿಮಲಚಂದಮುನಿಯೂ (ಕ್ರಿ. ಶ. 815) ಶೈವ ಮತ್ತು ಪಾಶುಪತ ಮತೀಯರೊಡನೆ ವಾದಿಸಿ ಜಯಗಳಿಸಿದ್ದಂತೆ ತಿಳಿದುಬರುತ್ತದೆ. ಇನ್ನೊಬ್ಬ ಪಂಡಿತ ಇಂದ್ರಮುನಿಯೂ ಇದೇ ಕಾಲದಲ್ಲಿ ಇದ್ದನೆಂದು (ಕ್ರಿ. ಶ. 815) ತಿಳಿದುಬರುತ್ತದೆ. ಈ ವಂಶದ ಪ್ರಸಿದ್ದ ರಾಜ 3ನೇಗೋವಿಂದ.

ಕಾಲದಲ್ಲಿ ಕಾವ್ಯ, ಶಾಸ್ತ್ರ, ಪುರಾಣಗಳು ರಚನೆಗೊಂಡು ಕನ್ನಡಸಾಹಿತ್ಯ ಸುವರ್ಣಯುಗವಾಗಿ ಮಾರ್ಪಟ್ಟಿತು. 3ನೇ ಗೋವಿಂದನ ನಂತರ ಮೊದಲನೇ ಅಮೋಘವರ್ಷ ನೃಪತುಂಗನು (ಕ್ರಿ. ಶ. 815–877) ಜೈನಧರ್ಮದ ಮಹಾಪೋಷಕನಾಗಿದ್ದನು. ಇವನಿಗೆ 'ಅತಿಶಯಧವಳ' 'ರಟ್ಟಮಾರ್ತಾಂಡ' ಎಂಬ ನಾನಾವಿಧದ ಬಿರುದುಗಳಿದ್ದವು. ನೃಪತುಂಗನು ಜೈನ ಮತಾವಲಂಬಿಯಾಗಿದ್ದು, ಅವನು ಜೈನಧರ್ಮವನ್ನು ಸ್ವೀಕರಿಸಿದ್ದನೆಂದು ಡಾ.ಆರ್.ಜಿ.ಭಾಂಡಾರಕರರವರು ಹೇಳಿದ್ದಾರೆ. ಇವನು ಸಾಹಿತ್ಯಾಸಕ್ತನಾಗಿದ್ದು, ಉದ್ದಾಮಪಂಡಿತನೂ ಆಗಿದ್ದು ಇವನ ಕೊಡುಗೆ ಚಿರಸ್ಮರಣೀಯವಾದುದು. ನೃಪತುಂಗನು ಅನೇಕ ಜಿನಾಲಯಗಳಿಗೆ ನೀಡಿದ ದಾನ ವಿಷಯಗಳನ್ನು ವರ್ಣಿಸುವಂತಹ ಅನೇಕ ಶಾಸನಗಳು ದೊರಕುತ್ತವೆ. ಅವುಗಳಲ್ಲಿ ಸೌಂದತ್ತಿಯಲ್ಲಿ ದೊರೆತ ಶಾಸನಗಳು ಪ್ರಮುಖವಾದವುಗಳಾಗಿವೆ. "ಈ ವಂಶದ ಕೊನೆಯ ಅರಸನಾದ ಇಂದ್ರನು ಸಲ್ಲೇಖನ ದೀಕ್ಷೆಯನ್ನು ಪಡೆದು,

ಶ್ರವಣಬೆಳಗೊಳದಲ್ಲಿ ಸಮಾಧಿ ಮರಣಹೊಂದಿದನೆಂದು, ಅಲ್ಲಿಯ ಶಾಸನವೊಂದು ಉಲ್ಲೇಖಿಸಿದೆ".[17] ನೃಪತುಂಗ ರಚಿಸಿದ ಕವಿರಾಜಮಾರ್ಗ ಗ್ರಂಥವು, ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದೆ. "ಗಣಿತಸಾರಸಂಗ್ರಹ'ರಚಿಸಿದ ಮಹಾವೀರಾಚಾರ್ಯರು, ಅಮೋಘವರ್ಷನು ಸ್ಯಾದ್ವಾತತ್ವಾನುಯಾಯಿಯಾಗಿದ್ದನೆಂದು ಬರೆದಿದ್ದಾನೆ. ನೃಪತುಂಗನ ಮಗನಾದ 2ನೇ ಕೃಷ್ಣನು ಗುಣಭದ್ರನ ಶಿಷ್ಯನಾಗಿದ್ದನೆಂದು ಆದಿಪುರಾಣದಲ್ಲಿ ಉಲ್ಲೇಖವಿದೆ. ಇವನು ಮುಳಗುಂದದಲ್ಲಿಯ ಬಸದಿಗೆ ದಾನಕೊಟ್ಟನು. ಇವನು ಪೊನ್ನ(ಪೊನ್ನಮಯ್ಯ) ಕವಿಗೆ "ಉಭಯಭಾಷಾಚಕ್ರವರ್ತಿ"ಎಂಬ ಬಿರುದುಕೊಟ್ಟು ಗೌರವಿಸಿದನು. ಪದ್ಮಪುರಾಣವನ್ನು ರಚಿಸಿದ ರವಿಷೇಣ ಕವಿಯು ರಾಷ್ಟ್ರಕೂಟರ ಕಾಲದಲ್ಲಿ ಇದ್ದನೆಂದು ತಿಳಿದುಬರುತ್ತದೆ. ಈ ಕೃತಿ 'ಜೈನ ರಾಮಾಯಣ' ಕೃತಿಯಾಗಿದೆ".[18] ಈ ಕಾಲದಲ್ಲಿ ರಚನೆಯಾದ, ಹೆಸರಿಸಲೇಬೇಕಾದ ಇನ್ನಿತರ ಕೃತಿಗಳೆಂದರೆ, ಶಾಕಟಾಯನನ 'ಶಬ್ದಾನುಶಾಸನ', ಜಿನಸೇನರ 'ಹರಿವಂಶ', (ಅಮೋಘವರ್ಷ ನೃಪತುಂಗನಗುರು) 'ಆದಿಪುರಾಣ', 'ಜಯಧವಲಾ', ಗುಣಭದ್ರರ 'ಉತ್ತರ ಪುರಾಣ,' ಕುಮುದೇಂದುಮುನಿಯ 'ಸಿರಿಭೂವಲಯ' ಮುಂತಾದವು ಪ್ರಸಿದ್ಧ ಗ್ರಂಥಗಳಾಗಿವೆ. ಪುಷ್ಪದಂತನ 'ಮಹಾಪುರಾಣ', 'ಜಸಹರಚರಿಉ' ಮಹತ್ವದ ಕೃತಿಗಳಾಗಿವೆ.

ರಾಷ್ಟ್ರಕೂಟರ ಸಾಮಂತರ ಕೊಡುಗೆಯೂ ಕೂಡ ಅವಿಸ್ಮರಣೀಯವಾಗಿದ್ದು, ಇಲ್ಲಿ ಸಾಮಂತ ಲೋಕಾದಿತ್ಯನನ್ನು ಸ್ಮರಿಸಲೇಬೇಕಾಗಿದೆ. ಗುಣಭದ್ರರು ಉತ್ತರಪರಾಣದಲ್ಲಿ ಈತನನ್ನು ಜೈನಧರ್ಮದ ಉನ್ನತಿಗೆ ಕಾರಣಕರ್ತನೆಂದು ಮುಕ್ತಕಂಠದಿಂದ ಹೊಗಳಿದ್ದಾರೆ. ನಾಗದೇವನ ಪತ್ನಿಯಾದ ದಾನಚಿಂತಾಮಣಿ ಅತ್ತಿಮಬ್ಬೆಯಂತೂ, ಈ ಕಾಲದ ಒಂದು ದೊಡ್ಡ ಹೆಸರು. ಲಕ್ಕುಂಡಿಯಲ್ಲಿ ಜೈನಮಂದಿರವನ್ನು ನಿರ್ಮಿಸಿ, ದಾನಕೊಟ್ಟ ವಿಷಯವನ್ನು ಅಲ್ಲಿನ ಶಾಸನವು, "ಜಸಕ್ಕೆ ಭೌಜನಮೆನಿಪತ್ತಿಮಬ್ಬೆ ಜಿನಶಾಸನಂ ಬೆಳಗುತ್ತಮಿರ್ದಪಳ್"[19] ಎಂದು ಅವಳ ದಾನಗುಣವನ್ನು, ಅವಳ ಔದರ್ಯವನ್ನು ತುಂಬು ಹೃದಯದಿಂದ ಬಣ್ಣಿಸಿದೆ. ಈ ನಾಡಿನ ವಿವಿಧ ಭಾಗಗಳಲ್ಲಿ "ಸುಮಾರು 1500 ಜಿನಮಂದಿರಗಳನ್ನು ಕಟ್ಟಿಸಿದಳೆಂದು ಒಂದು ದಾಖಲೆಯು ತಿಳಿಸುತ್ತದೆ."[20] ಈ ದೃಷ್ಠಿಯಿಂದ ಅತ್ತಿಮಬ್ಬೆಯು ಕರ್ನಾಟಕ ಸಂಸ್ಕೃತಿಗೆ ಮಾದರಿಯಾಗಿ ಕಂಡು ಬರುತ್ತಾಳೆ.

## ಬಾದಾಮಿ ಚಾಲುಕ್ಯರು

ಬಾದಾಮಿ ಚಾಲುಕ್ಯರು ಹಿಂದೂ ಧರ್ಮೀಯರಾಗಿದ್ದರೂ ಜೈನಧರ್ಮಕ್ಕೆ ಪ್ರೋತ್ಸಾಹವಿತ್ತು ಸಲಹಿದರು. ಈ ಬಗ್ಗೆ ಆ ಕಾಲದ ಅನೇಕ ಶಿಲಾಲೇಖಗಳು ಕಾಣಸಿಗುತ್ತವೆ. ಕರ್ನಾಟಕ ಇತಿಹಾಸದಲ್ಲಿ, ಸುಮಾರು ಎರಡೂವರೆ ಶತಮಾನಗಳ ಕರ್ನಾಟಕದ ಕೀರ್ತಿಧ್ವಜವನ್ನು ಹಾರಿಸಿದವರು ಇವರು. ಈ ಮನೆತನದಲ್ಲಿ ನಾನಾ ಶಾಖೆಗಳಿದ್ದು, ಅವುಗಳಲ್ಲಿ ಕಲ್ಯಾಣ, ವೆಂಗಿ, ವೇಮುಲವಾಡದ ಶಾಖೆಗಳು ಪ್ರಮುಖವಾದವುಗಳಾಗಿವೆ. ಇಮ್ಮಡಿ ಪುಲಕೇಶಿಯು ಕನೂಜ್‌ನ ಹರ್ಷವರ್ಧನನ ಸಮಕಾಲೀನನಾಗಿದ್ದು, ಅವನಂತೆಯೇ ಶ್ರೇಷ್ಟ ರಾಜನಾಗಿದ್ದನು. ಈತನ ಕಾಲದಲ್ಲಿಯೇ ಪ್ರಸಿದ್ದ ಚೀನೀ ಯಾತ್ರಿಕ ಹ್ಯೂಯನ್‌ತ್ಸಾಂಗ್ ದಕ್ಷಿಣ ಭಾರತಕ್ಕೆ ಬಂದಿದ್ದನು. ಬಾದಾಮಿ ಚಾಲುಕ್ಯರ ಕಾಲದಲ್ಲಿ ಜೈನಧರ್ಮಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆಯಿತು. ಮಂಗಳೇಶನು ವಿಷ್ಣುಗುಹೆಯ ಜೊತೆಗೆ, ನಾಲ್ಕನೆಯದಾದ ಜೈನಗುಹೆಯೊಂದನ್ನು ಬಾದಾಮಿಯಲ್ಲಿ ನಿರ್ಮಿಸಿದನು. ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಜೈನಧರ್ಮವು ಪ್ರಬಲವಾಯಿತೆಂದು ಡಾ. ಭಾಂಡಾರಕರರ ಅಭಿಪ್ರಾಯ.

"ಎರಡನೇ ಪುಲಕೇಶಿಯು ಐಹೊಳೆಯಲ್ಲಿ ಬರೆಯಿಸಿದ ಶಿಲಾಲೇಖವು ಸಾಹಿತ್ಯದಲ್ಲಿ ಹೆಸರಾಗಿದೆ. ಇದನ್ನು ಕಾವ್ಯ ರೂಪದಲ್ಲಿ ರಚಿಸಿದವನು ರವಿಕೀರ್ತಿಯೆಂಬ ಕವಿ. ಇದು ಮೇಘುತಿ ಜಿನದೇವಾಲಯದಲ್ಲಿ ದೊರೆಯುತ್ತದೆ. ಈ ಭಾಗದಲ್ಲಿನ ಅನೇಕ ಜೈನ ದೇವಾಲಯಗಳು ಲಿಂಗ ಪೂಜೆಗಾಗಿ ಪರಿವರ್ತಿಸಲ್ಪಟ್ಟವೆಂದು ಫ್ಲೀಟರು ಹೇಳಿದ್ದಾರೆ."[21] ಐಹೊಳೆಯಲ್ಲಿ ಈ ಕಾಲಕ್ಕೆ ಸೇರಿದ ಇನ್ನೂ ಅನೇಕ ಜಿನಮಂದಿರಗಳಿವೆ. ಲಕ್ಷ್ಮೇಶ್ವರದಲ್ಲಿ ಚಾಲುಕ್ಯರಾಜರಾದ ವಿನಿಯಾದಿತ್ಯ, ವಿಜಯಾದಿತ್ಯ, ವಿಕ್ರಮಾದಿತ್ಯ ಮೊದಲಾದವರು ಅಲ್ಲಿನ ಜೈನಾಚಾರ್ಯರಿಗೆ

ಜೈನಬಸದಿಗಳಿಗೆ ಸಾಕಷ್ಟು ದಾನನೀಡಿದ ಉಲ್ಲೇಖಗಳು ಇವೆ. "ವಿನಿಯಾದಿತ್ಯನಂತೂ ಜೈನಧರ್ಮವನ್ನು ಸ್ವೀಕರಿಸಿ ಜೈನಸಂಸ್ಕೃತಿಯ ಅಭಿವೃದ್ಧಿಗೆ ನೆರವಾದನು. ಇವನ ತಂಗಿ ಕುಂಕುಮದೇವಿಯು, ಜಿನಭವನವೊಂದನ್ನು ನಿರ್ಮಿಸಿ ದತ್ತಿ ನೀಡಿದ್ದಳು"[22], ಈ ಬಗ್ಗೆ ವಿವರಗಳು ಅಲ್ಲಿ ದೊರಕುತ್ತವೆ.

ಎರಡನೇ ತೈಲಪನಿಗೆ ಜೈನಧರ್ಮದಲ್ಲಿ ತುಂಬಾ ಒಲವಿತ್ತು. ಕವಿರತ್ನ ರನ್ನನಿಗೆ ಆಶ್ರಯದಾತನಾಗಿದ್ದ ಈತ "ಕವಿಚಕ್ರವರ್ತಿ"ಎಂಬ ಬಿರುದನ್ನೂ ದಯಪಾಲಿಸಿದ. "ತೈಲಪನ ಮಗನಾದ ಇರಿವಬೆಡಂಗನು (ಕ್ರಿ.ಶ.997–(1009) ತನ್ನ ಜೈನಗುರು ವಿಮಲಚಂದ್ರ ಪಂಡಿತದೇವನ ಸ್ಮರಣಾರ್ಥ ನಿಷಿಧಿಯೊಂದನ್ನು ಕಟ್ಟಿಸಿದನು."[23]

ಇದೇ ವಂಶದ ಅರಿಕೇಸರಿಯು ಪಂಪಭಾರತ ಕರ್ತೃವಾದ ಪಂಪನಿಗೆ ಪೋಷಕನಾಗಿದ್ದನು. ಪಂಪನ "ಆದಿನಾಥಪುರಾಣ" ವು ಪ್ರಸಿದ್ಧವಾದ ಕಾವ್ಯವಾಗಿದೆ. ಅನಂತರ ಆಳಿದ ಅಹವಮಲ್ಲ ಅಥವಾ ಮೊದಲನೇ ಸೋಮೇಶ್ವರನು ಜೈನನಾಗಿದ್ದನೆಂದು ಸಾಲೆತೊರೆಯವರ ಅಭಿಪ್ರಾಯ. ಸೋಮೇಶ್ವರನ ಆಶ್ರಯದಾತನಾಗಿದ್ದ, ಜೈನಕವಿ ಶ್ರೀಧರಾಚಾರ್ಯನು 'ಜಾತಕತಿಲಕ' ಎಂಬ ಜ್ಯೋತಿಷ್ಯಗ್ರಂಥವನ್ನು ಬರೆದನು. ಇವರೇ ಅಲ್ಲದೇ ಯತಿಸಾಗರ, ಅಜಿತಸೇನ, ಭಟ್ಟಾರಕ, ಕುಮಾರಸೇವನದೇವ, ವಾದಿರಾಜ, ದಯಪಾಲ, ಒಡೆಯದೇವ, ಪುಷ್ಪಸೇನ ಮೊದಲಾದ ಜೈನಾಚಾರ್ಯರು ಈ ಕಾಲದಲ್ಲಿ ಗ್ರಂಥ ರಚಿಸಿದ್ದಾರೆ. ಮೊದಲನೆ ಸೋಮೇಶ್ವರನ ಮಗನಾದ 2ನೇ ಸೋಮೇಶ್ವರನು ಕ್ರಿ.ಶ.1075ರಲ್ಲಿ ಮೂಲಸಂಘದ ಕ್ರಾಣೂರ ಗಣದ ಪರಮಾನಂದ ಸಿದ್ಧಾಂತನಿಗೆ ನಗರಖಂಡ ಗ್ರಾಮದಲ್ಲಿಯ ಶಾಂತಿನಾಥ ಬಸದಿಗಾಗಿ ಭೂಮಿಯನ್ನು ದಾನ ಮಾಡಿದನು. 6ನೇ ವಿಕ್ರಮಾದಿತ್ಯನೂ ಸಹ ಜೈನ ಮತಾವಲಂಬಿಯಾಗಿದ್ದು, ಅವನ ದಂಡನಾಯಕನಾದ ಬರ್ಮ್ಮನಾಯಕನು, ಬೆಳವಲನಾಡಿನಲ್ಲಿ ಅನೇಕ ಬಸದಿಗಳನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ.

ಹೀಗೆ ಸುಮಾರು ನಾಲ್ಕನೆಯ ಅಥವಾ ಐದನೆಯ ಶತಮಾನದಿಂದ 12ನೆಯ ಶತಮಾನದವರೆಗೆ ಘನತೆಯಿಂದ ಆಳಿದ ಚಾಲುಕ್ಯರು ಜೈನಧರ್ಮ, ಸಾಹಿತ್ಯ, ಕಲೆಗಳು ಸಮೃದ್ಧವಾಗಿ ಬೆಳೆಯಲು ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ.

## ಹೊಯ್ಸಳರು

ಹೊಯ್ಸಳರು ಕ್ರಿ.ಶ. ಸುಮಾರು 1116ರಿಂದ ಮೂರು ಶತಮಾನಗಳವರೆಗೆ ಶಶಕಪುರ (ಈಗಿನ ಕಡೂರು ಜಿಲ್ಲೆಯ ಅಂಗಡಿ) ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕರ್ನಾಟಕವನ್ನು ಆಳಿದರು. ಹತ್ತನೆ ಶತಮಾನದ ಮಧ್ಯದಲ್ಲಿಯೇ ಶಶಕಪುರವು ಜೈನಧರ್ಮದ ಭದ್ರಕೋಟೆಯಾಗಿ ಮಾರ್ಪಟ್ಟಿತ್ತು. ಆ ಸಂದರ್ಭದಲ್ಲಿ ಜೈನಮುನಿ ಸುದತ್ತಾಚಾರ್ಯರ ಪ್ರೇರಣೆಯಿಂದ ಹೊಯ್ಸಳ ಸಾಮ್ರಾಜ್ಯ ಸ್ಥಾಪನೆಗೊಂಡಿತು. ಅಲ್ಲಿರುವ ಮಕರಜಿನಾಲಯ, ವಾಸಂತಿಕಾ (ಪದ್ಮಾವತಿ) ದೇವಿಯ ಗುಡಿಗಳು ಈಗಲೂ ಪ್ರಸಿದ್ಧಿಯನ್ನು ಪಡೆದಿವೆ. ಅಲ್ಲಿ "ಕುಂದ ಕುಂದಾನ್ವಯವಾದ ಪುಸ್ತಕಗಚ್ಛದ ವಿಮಲಚಂದ್ರಪಂಡಿತದೇವನೆಂಬ ಜೈನಗುರು ಕ್ರಿ. ಶ. 998ರ ಸುಮಾರಕ್ಕೆ ಇಲ್ಲಿ ಸಲ್ಲೇಖನ ವ್ರತವನ್ನು ಸ್ವೀಕರಿಸಿ ಮರಣಹೊಂದಿದನು. ಇಲ್ಲಿದ್ದ ಜಿನಾಲಯಗಳಲ್ಲಿ ಒಂದಕ್ಕೆ "ಮಕರಜಿನಾಲಯ"ವೆಂಬ ಹೆಸರಿತ್ತೆಂದು ಡಾ.ಕೃಷ್ಣಾರವರ ಅಭಿಪ್ರಾಯ. [24]

"ವಾದಿರಾಜನ ಶಿಷ್ಯ ವರ್ಧಮಾನನಿಗೆ ಸುದತ್ತನೆಂಬ ಹೆಸರಿತ್ತು. ಇವರು ವಿನಿಯಾದಿತ್ಯ, ನೃಪಕಾಮರಿಗೆ ಗುರು ಹಾಗೂ ಮಾರ್ಗದರ್ಶಕರಾಗಿದ್ದರು. ಎರಡನೇ ವಿನಿಯಾದಿತ್ಯನು ಸಮೃದ್ಧ ರಾಜ್ಯವನ್ನು ಸ್ಥಾಪಿಸಲು ಶಾಂತಿದೇವನೆಂಬ ಆಚಾರ್ಯರು ಸಹಾಯಕರಾಗಿದ್ದರು ಎನ್ನಲಾಗಿದೆ. ಆ ಸಂದರ್ಭದಲ್ಲಿ ವಿನಿಯಾದಿತ್ಯನು ರಾಜ್ಯಾದ್ಯಂತ ಕೆರೆ–ಹಳ್ಳಗಳು ಹಾಗೂ ಅನೇಕ ಚೈತ್ಯಾಲಯಗಳನ್ನು ನಿರ್ಮಾಣಮಾಡಿದನು.

ಆತನ ತರುಮಯ ಅಧಿಕಾರಕ್ಕೆ ಬಂದ ಎರೆಯಂಗನಿಗೆ ಗೋಪನಂದಿ ಎಂಬ ಜೈನಮುನಿ ಗುರುಗಳಾಗಿದ್ದರು. ಎರೆಯಂಗನ ಮಗನಾದ ಬಲ್ಲಾಳನು ಬಹುಕಾಲ ರಾಜ್ಯವಾಳಲು ವಿಫಲವಾದುದರಿಂದ ಆತನ

ಸಹೋದರರಾದ ವಿಷ್ಣುವರ್ಧನ ಅಧಿಕಾರಕ್ಕೆ ಬಂದು ಚೋಳರಿಂದ ಕರ್ನಾಟಕವನ್ನು ಬಿಡುಗಡೆಗೊಳಿಸಿದನು. ವಿಷ್ಣುವರ್ಧನ ರಾಮಾನುಜಾಚಾರ್ಯರ ಪ್ರಭಾವಕ್ಕೆ ಒಳಗಾಗಿ ಜೈನಧರ್ಮವನ್ನು ಬಿಟ್ಟು ವೈಷ್ಣವ ಧರ್ಮವನ್ನು ಅವಲಂಬಿಸಿದರೂ, ಅವನ ರಾಣಿಯಾದ ಶಾಂತಲೆ ಜೈನಳಾಗಿಯೇ ಇದ್ದು, ಜಿನಭಕ್ತಳಾಗಿಯೇ ಸಲ್ಲೇಖನ ವ್ರತವನ್ನು ಸ್ವೀಕರಿಸಿ ಶಿವಗಂಗೆಯಲ್ಲಿ ಮರಣಹೊಂದಿದಳು. ಮೊದಲನೆ ನರಸಿಂಹನು ಜೈನಧರ್ಮಕ್ಕೆ ಅಷ್ಟಾಗಿ ಪ್ರೋತ್ಸಾಹ ನೀಡಲಿಲ್ಲ, ಆದರೆ ಅವನ ಮಗನಾದ ವೀರಬಲ್ಲಾಳನು (ಕ್ರಿ. ಶ. 1173–1220) ತನ್ನ ಗುರುಗಳಾದ ವಾಸುಪೂಜ್ಯವ್ರತಿಯ ಪ್ರಭಾವದಿಂದ ಜೈನಧರ್ಮದ ಪ್ರಚಾರದಲ್ಲಿ ತೊಡಗಿ ಅವನ ಆಳ್ವಿಕೆಯ ಅವಧಿಯಲ್ಲಿ ದಾಜಧಾನಿಯಾದ ದೋರಸಮುದ್ರವು ಜೈನರ ಭದ್ರಕೋಟೆಯಾಯಿತು. ಮೂರನೇ ಬಲ್ಲಾಳನ ಗುರುವಾದ ಮಾಘನಂದಿಯು ಸಿದ್ಧಾಂತಸಾರ, ಶ್ರಾವಕಾಚಾರ, ಪದಾರ್ಥಸಾರ ಮೊದಲಾದ ಗ್ರಂಥಗಳನ್ನು ರಚಿಸಿರುವುದು ಒಂದು ಉಲ್ಲೇಖನೀಯ ಸಂಗತಿಯಾಗಿದೆ.

ಹೊಯ್ಸಳ ಸಾಮ್ರಾಜ್ಯದ ಅನೇಕ ಸಾಮಂತರು ವಣಿಕರು ಹಾಗೂ ಅಧಿಕಾರಿಗಳು, ದಂಡನಾಯಕರೂ ಸಹ ಜೈನಧರ್ಮದ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಬಿಟ್ಟಿದೇವ ಅಥವಾ ವಿಷ್ಣುವರ್ಧನನ ಪ್ರಧಾನಿ ಹಾಗೂ ಸೇನಾಪತಿಯಾದ ಗಂಗರಾಜನು ಜೈನ ಭಕ್ತನಾಗಿದ್ದು ಅವನಿಗೆ "ಜೈನಧರ್ಮಾಮೃತಾಂಬುಧಿಪ್ರವರ್ಧನಸುಧಾಕರ", 'ಸಮ್ಯಕ್ತರತ್ನಾಕರ', 'ಆಹಾರಅಭಯ ಭೈಷಜ್ಯಶಾಸ್ತ್ರ ವಿನೋದ' ಮುಂತಾದ ಬಿರುದುಬಾವಲಿಗಳು ಇದ್ದವು. ಆತನು ಅನೇಕ ಯುದ್ಧಗಳನ್ನು ಮಾಡಿ ಬಿಟ್ಟಿದೇವನಿಗೆ ಜಯವನ್ನು ತಂದುಕೊಟ್ಟನು. "ಅವನು ಚೋಳ ಸಾಮಂತರನ್ನು ಸೋಲಿಸಿ, ನಾಡನ್ನು ಗೆದ್ದು ಬಂದಾಗ ಬೇಡಿದುದನ್ನು ಕೊಡುವೆನೆಂದು ವಿಷ್ಣುವರ್ಧನನು ಮೆಚ್ಚಿ ನುಡಿಯುತ್ತಾನೆ. ಆದರೆ ಗಂಗಾರಾಜನು ತನಗಾಗಿ ಏನನ್ನು ಬೇಡುವುದಿಲ್ಲ. ಆದರೂ ಗೋವಿಂದವಾಡಿಯನ್ನು ಪಡೆದು, ಗೊಮ್ಮಟದೇವರ ಪೂಜೆಗೆ ಅದನ್ನು ಬಿಡುತ್ತಾನೆ. ಅಲ್ಲಿನ ಅನೇಕ ಬಸದಿಗಳನ್ನು ಜೀರ್ಣೋದ್ಧಾರಗೊಳಿಸುತ್ತಾನೆ. ಗೊಮ್ಮಟನಿಗೆ ಸುತ್ತಾಲಯವನ್ನು ಕಟ್ಟಿಸುತ್ತನೆ."[25] ಇದರಿಂದ ರಾಜನ ಕೀರ್ತಿ ಹೆಚ್ಚಿ, ಜೈನಧರ್ಮ ಬೆಳವಣಿಗೆ ಹೊಂದುವಂತಾಯಿತು.

ಗಂಗರಾಜನ ಹಿರಿಯ ಅಣ್ಣ ಬಮ್ಮುಚಮೂಪತಿ ಮತ್ತು ಅವನ ಗುರುಗಳಾದ ಶುಭಚಂದ್ರ ಸಿದ್ಧಾಂತದೇವ, ಹೆಂಡತಿ ಲಕ್ಷ್ಮೀಮತಿ, ಬಮ್ಮುಚಮೂಪತಿಯ ಹೆಂಡತಿ ಜಕ್ಕಣಬ್ಬೆ ಇವರು ಮಾಡಿದ ಅನೇಕ ಧರ್ಮಕಾರ್ಯಗಳು ಶ್ರವಣಬೆಳಗೊಳದ ಶಾಸನದಲ್ಲಿ ವಿವರಿಸಿದೆ. ಗಂಗಾರಾಜನ ಮಗನಾದ ಬೊಪ್ಪನು ಕಟ್ಟಿಸಿದ ಬಸದಿಯು "ಬೊಪ್ಪಣಜಿನಾಲಯ"ಎಂದು ಕೀರ್ತಿಶಾಲಿಯಾಗಿದೆ. ಗಂಗರಾಜನ ಹೆಂಡತಿಯ ಸೋದರರಾದ ನುರಿಯಣ್ಣ, ಭರತರು, ಹೊಯ್ಸಳ ಸೇನಾಪತಿಗಳಾಗಿದ್ದರು. "ಭರತನು 80 ಜಿನಮಂದಿರಗಳನ್ನು ಕಟ್ಟಿಸಿ, 2100 ಜಿನಾಲಯಗಳನ್ನು ಜೀರ್ಣೋದ್ಧಾರ ಮಾಡಿ ಪ್ರಖ್ಯಾತನಾಗಿದ್ದನು. ಈ ಇಬ್ಬರು ಸಹೋದರರು ಶ್ರವಣಬೆಳಗೊಳದಲ್ಲಿ ಇನ್ನೂ ಅನೇಕ ಜಿನ ಪ್ರತಿಮೆಗಳನ್ನು ಮಾಡಿಸಿದರು. 'ಜಿನಧರ್ಮದೀಪಕ', 'ಜಿನಧರ್ಮಪ್ರತಿಪಾಲಕ'ರೆಂದು ಅಲ್ಲಿಯ ಶಾಸನಗಳು ಇವರನ್ನು ಕೊಂಡಾಡಿವೆ."[26]

ಶ್ರವಣಬೆಳಗೊಳದ ಒಂದು ಶಾಸನವಂತೂ "ನೂರುಜನ ಚಾವುಂಡರಾಯರಿಗಿಂತ ಒಬ್ಬ ಗಂಗಾರಾಜನ ತೂಕ ಹೆಚ್ಚೆಂದು"[27] ವರ್ಣಿಸುತ್ತದೆ. ಇನ್ನೊಬ್ಬ ಅಧಿಕಾರಿ ಹುಲ್ಲ ಎನ್ನುವವನು "ರಾಜ್ಯಾಡಳಿತದಲ್ಲಿ ಯೌಗಂಧ ರಾಯಣನಿಗಿಂತ ಕುಶಲನೆಂದೂ, ರಾಜನೀತಿಯಲ್ಲಿ ಕುಶಲನೆಂದೂ, ರಾಜನೀತಿಯಲ್ಲಿ ಬೃಹಸ್ಪತಿಯನ್ನೂ ಮೀರಿಸುವ ಪ್ರವೀಣನೆಂದೂ ಶಾಸನಗಳು ಕೊಂಡಾಡಿವೆ." [28] ಗಂಗಾರಾಜನಿಗೆ "ಸಮ್ಯಕ್ತ್ವ ಚೂಡಾಮಣಿ" ಎಂಬ ಬಿರುದು ಇತ್ತು. ಇವನು ಕಟ್ಟಿಸಿದ ಬಸದಿಗೆ ರಾಜನಾದ ವೀರನರಸಿಂಹನು "ಭದ್ರಚೂಡಾಮಣಿ" ಎಂಬ ಹೆಸರನ್ನು ಇಟ್ಟು ಕೆಲವು ಊರನ್ನು ದಾನಬಿಟ್ಟನು, ತೆರಿಗೆಯನ್ನು ಮಂದಿರದ ವಿನಿಯೋಗಕ್ಕೆ ಕೊಡುವ ವ್ಯವಸ್ಥೆಯನ್ನು ಮಾಡಿದನು. ಹೀಗೆ ಹೊಯ್ಸಳರ ಕಾಲದಲ್ಲಿ ಜೈನಧರ್ಮವು ನಿರಂತರ ಪ್ರೋತ್ಸಾಹವನ್ನು ಪಡೆದುಕೊಂಡು ಅಭಿವೃದ್ಧಿ ಹೊಂದಿತು ಎನ್ನಲಾಗಿದೆ.

ಕೇವಲ ರಾಜಮನೆತನಗಳಷ್ಟೇ ಅಲ್ಲದೆ, ಗಂಗ ಮತ್ತು ರಾಷ್ಟ್ರಕೂಟರ ಮಾಂಡಲೀಕರೂ ಸಹ ಜೈನಧರ್ಮಕ್ಕೆ ಪುರಸ್ಕಾರವನ್ನು ನೀಡಿ ಪೋಷಿಸಿದ್ದರೆ. ಚೆಂಗಾಳ್ವರು ಮತ್ತು ಕೊಂಗಾಳ್ವರು ಸಹ ಜೈನರಾಗಿದ್ದು, ಈ ಧರ್ಮದ ಪ್ರಚಾರಕ್ಕೆ ತುಂಬಾ ಸಹಕಾರಿಯಾಗಿದ್ದರು. ಕರಹಾಡದ ಶಿಲಾಹಾರರು ಸಹ ಜೈನಧರ್ಮದ ಪೋಷಕರಾಗಿದ್ದರು. ಹೊಯ್ಸಳ ಮನೆತನದ ಎರಡನೇ ಬಲ್ಲಾಳನ ಜೈನ ಸೇನಾಪತಿಗಳು, ಮಂತ್ರಿಗಳೂ ಜೈನ ಧರ್ಮವನ್ನು ಪೋಷಿಸಿದ್ದಾರೆ. ಇವರಲ್ಲಿ ಪ್ರಮುಖನಾದವನೆಂದರೆ 'ವಸುದೈಕ ಬಾಂಧವ' ನೆಂದು ಹೆಸರು ಪಡೆದ ರಾಚಿಮಯ್ಯ. ಇವನು ಮೊದಲ ಕಲಚೂರಿ ಅರಸರಲ್ಲಿ ಸಚಿವನಾಗಿದ್ದು ಬಿಜ್ಜಳದೇವನಿಗೆ ಸಂಪತ್ತನ್ನು ಗಳಿಸಿಕೊಟ್ಟ ಸೇನಾಧಿಪತಿಯಾಗಿದ್ದನು. ಪ್ರೊ. ರಾಮಸ್ವಾಮಿ ಅಯ್ಯಂಗಾರ್‌ವರು ಹೇಳಿರುವಂತೆ, "ಕಲಚೂರಿ ವಂಶದ ಬಿಜ್ಜಳ ರಾಯುಮುರಾರಿ, ಸೋಯಿದೇವ, ಸಂಕಮ ಮೊದಲಾದವರು ಜೈನ ಅರಸರಾಗಿದ್ದಲ್ಲದೆ, ಅವರು ರಾಷ್ಟ್ರಕೂಟರೊಡನೆ ಅನೇಕ ವಿವಾಹ ಸಂಬಂಧಗಳನ್ನು ಹೊಂದಿದ್ದರು. ರಾಚಿಮಯ್ಯನು ಮಹಾಪ್ರಚಂಡ ದಂಡನಾಯಕನೆಂದು ಬಿರುದು ಪಡೆದಿದ್ದನು. ಅವನು ಉದಾರತೆಗೆ ಹೆಸರಾಗಿದ್ದನು".[29]

ಕರ್ನಾಟಕದ ಜೈನಧರ್ಮಕ್ಕೆ ಹೊರನಾಡಿನ ಚೋಳರಿಂದ ಹಾಗೂ ಬಸವಣ್ಣನವರ ವೀರಶೈವ ಕ್ರಾಂತಿಯಿಂದ ಅಪಾರವಾದ ಹಾನಿಯುಂಟಾದಾಗ ಜೈನಧರ್ಮವನ್ನು ರಕ್ಷಿಸಿದ ಕೀರ್ತಿ ವಿಜಯನಗರದ ಅರಸರಿಗೆ ಸಲ್ಲುತ್ತದೆ. "ಜೈನ ಮತ್ತು ವೈಷ್ಣವರಿಗೆ ತಲೆದೋರಿದ ವಿರಸವನ್ನು ಬುಕ್ಕರಾಯನು ಬಗೆಹರಿಸಿದ ಘಟನೆಯನ್ನು ಶ್ರವಣಬೆಳಗೊಳದ ಶಾಸನವು ವರ್ಣಿಸುತ್ತದೆ".[30] ಈ ವ್ಯಾಜ್ಯವನ್ನು ನಿರ್ಣಯಿಸಿದವನು ಮೊದಲನೆ ಬುಕ್ಕರಾಯ ಈತ ಪರಧರ್ಮಸಹಿಷ್ಣುವಾಗಿದ್ದನು. ಈತ ನೀಡಿದ ತೀರ್ಮಾನ ಎಲ್ಲರೂ ಮೆಚ್ಚುವಂತದ್ದಾಗಿತ್ತು. ಮೊದಲನೆ ದೇವರಾಯನರಾಣಿಯಾದ ಭೀಮಾದೇವಿಯು ಶ್ರವಣಬೆಳಗೊಳದಲ್ಲಿರುವ ಮುಂಗಾಯಿ ಬಸದಿಯ ಶಾಂತಿನಾಥ ತೀರ್ಥಕರರ ಮೂರ್ತಿಯನ್ನು ಮಾಡಿಸಿದಳು. ಪಂಡಿತಾಚಾರ್ಯನು ಇವಳ ಗುರುವಾಗಿದ್ದನು. "ದೇವರಾಯನು ತನ್ನ ರತ್ನಖಚಿತ ಕೀರೀಟವನ್ನು ಹೊಂಬುಜ ಪದ್ಮಾವತಿ ದೇವಿಯಪಾದದಲ್ಲಿಟ್ಟು ನಮಸ್ಕರಿಸಿದನೆಂದು, ಆ ದೇವಾಲಯದಲ್ಲಿ ದೊರೆತ ಶಿಲಾಲೇಖದಿಂದ ತಿಳಿಯುತ್ತದೆ"[31]. ಎರಡನೇ ದೇವರಾಯನು ಕ್ರಿ. ಶ 1424ರಲ್ಲಿ ವರಂಗದಲ್ಲಿರುವ ನೇಮಿನಾಥ ತೀರ್ಥಂಕರ ಬಸದಿಗೆ ವರಂಗ ಗ್ರಾಮವನ್ನು ಉಂಬಳಿಯಾಗಿ ಕೊಟ್ಟನು. ಈತನ ಕಾಲದಲ್ಲಿ ವೇಣುಪುರ (ಈಗಿನ ಮೂಡಬಿದಿರೆ) ಜೈನಕೇಂದ್ರವಾಗಿತ್ತು.

ಚೆಂಗಾಳ್ವ ಅರಸನಕಾಲದ ದಂಡನಾಯಕನಾಗಿದ್ದ ಮಂಗರಸ ಕನ್ನಡದ ಕವಿಯಾಗಿಯೂ, ಜೈನಧರ್ಮ ಆರಾಧಕ, ರಕ್ಷಕನಾಗಿಯೂ ಇದ್ದನು. ಇವನು ಜಯನೃಪ ಕಾವ್ಯ, ಪ್ರಭಂಜನಚರಿತೆ, ಶ್ರೀಪಾಲ ಚರಿತೆ, ಸಮ್ಯಕ್ತ್ವಕೌಮುದಿ ಕೃತಿಗಳನ್ನು ರಚಿಸಿದನಲ್ಲದೇ, ಅನೇಕ ಜೈನ ಬಸದಿ, ಕೆರೆ ಕಟ್ಟೆಗಳನ್ನು ಕಟ್ಟಿಸಿದನು. "ಹದಿನಾಲ್ಕನೇ ಶತಮಾನದ ಆರಂಭದಲ್ಲಿ ಶಾಂತರು ಕಾರ್ಕಳವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಅವರು ಕೆಲಕಾಲದ ನಂತರ ವೀರಶೈವ ಮತವನ್ನು ಸ್ವೀಕರಿಸಿದರೂ, ಜೈನಧರ್ಮಕ್ಕೆ ಪೋಷಣೆ ನೀಡಿದರು. ಕ್ರಿ. ಶ 1539ರಲ್ಲಿ ಕಾರ್ಕಳದ ಶ್ರಾವಕರು ಹಿರಿಯಂಗಡಿಯ ಬಸದಿಯಲ್ಲಿ ಶಾಸ್ತ್ರಾಭ್ಯಾಸಕ್ಕಾಗಿ ಭೂಮಿಗಳನ್ನು ದಾನಕೊಟ್ಟರು. ಲಲಿತಕೀರ್ತಿಭಟ್ಟಾರಕರು ಆಗ ಗುರುವಾಗಿದ್ದರು. ಇಮ್ಮಡಿ ಬೈರವೇಂದ್ರನು ಕ್ರಿ ಶ. 1586ರಲ್ಲಿ ಚತುರ್ಮುಖ ಬಸದಿಯನ್ನು ಕಟ್ಟಿಸಿದನು. ಶಾಂತರಸನ ರಾಣಿಯಾಗಿದ್ದ ಕಾಳಲಾದೇವಿಯು (ಕ್ರಿ. ಶ. 1530) ಜಿನಧರ್ಮದ ಪೋಷಕಳಾಗಿದ್ದಳು."[32]

ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ (ಕ್ರಿ. ಶ. 1419–1446) ನ್ಯಾಯಾದೀಶನಾಗಿದ್ದ, ಮಲ್ಲಿನಾಥ ಸೂರಿಯು ಕಾಳಿದಾಸನ ಕೃತಿಗಳಿಗೆ ಟೀಕೆ ಬರೆದನು. ಕ್ರಿ. ಶ. 1444ರ ಸುಮಾರಿನಲ್ಲಿ ಜಿನದೇವಣ್ಣನೆಂಬುವವನು ಶ್ರೇಣಿಕಚರಿತೆಯನ್ನು, ವಿಜಯಣ್ಣನ್ನು ದ್ವಾದಶಾನುಪ್ರೇಕ್ಷೆಯನ್ನು, ವಾದಿವಿದ್ಯಾನಂದ ಕನ್ನಡದಲ್ಲಿ ಕಾವ್ಯಸಾರನ್ನು, ರತ್ನಾಕರವರ್ಣಿ (ಕ್ರಿ. ಶ. 1557) ಭರತೇಶ ವೈಭವ, ಅಪರಾಜಿತೇಶ್ವರ ಶತಕ, ರತ್ನಾಕರದೀಶ್ವರ ಶತಕ, ತ್ರಿಲೋಕ ಶತಕಗಳನ್ನು, ಮೂಡಬಿದರೆಯ ನೇಮಣ್ಣ ಕವಿ ಕ್ರಿ. ಶ. 1559ರಲ್ಲಿ ಜ್ಞಾನಭಾಸ್ಕರ ಚರಿತೆ ಕೃತಿಗಳನ್ನು, ಇವರೇ ಅಲ್ಲದೇ 16ನೇ ಶತಮಾನದ ಅಂತ್ಯದಲ್ಲಿ ವರ್ಧಮಾನ, ಹಂಸರಾಜ, ದೇವೋತ್ತಮ, ಪ್ರಯಣವ್ರತಿ, ಶೃಂಗಾರಕವಿ ಮತ್ತು ಬ್ರಹ್ಮ

ಕವಿಗಳು ಅನೇಕ ಕೃತಿಗಳನ್ನು ರಚಿಸಿದರು. ಕ್ರಿ. ಶ. 1614ರಲ್ಲಿ ಶ್ರವಣಬೆಳಗೊಳದಲ್ಲಿ ಪಂಚಬಾಣನೆಂಬ ಕವಿ 'ಭುಜಬಲಿಚರಿತೆ' ಕೃತಿಯನ್ನು ಬರೆದನು.

ಹೀಗೆ ಈ ಮೇಲಿನ ವಿವರಣೆಯಂತೆ ಕರ್ನಾಟಕದಲ್ಲಿ ಜೈನಧರ್ಮದ ಇತಿಹಾಸ ಮತ್ತು ಬೆಳವಣಿಗೆಯನ್ನು ನೋಡಿದಾಗ ಕೇವಲ ಈ ನಾಡನ್ನು ಆಳಿದ ಅರಸರೇ ಮಾತ್ರವಲ್ಲದೆ, ಅನೇಕ ಗುರುಗಳು, ಆಚಾರ್ಯರು, ಕವಿಗಳು, ಸೇನಾಪತಿಗಳು, ಸಾಮಂತರು, ಮುಂತಾದವರು ನಮ್ಮ ಕನ್ನಡ ನಾಡಿಗೆ ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ, ಶಿಲ್ಪಕಲೆಗಳಲ್ಲಿ ನಾನಾ ರೀತಿಯ ಸೇವೆ ಸಲ್ಲಿಸಿ ಈ ನಾಡಿನಲ್ಲಿ ಧಾರ್ಮಿಕ ಶ್ರದ್ಧೆ, ನೀತಿ, ಕಲೆ ಮತ್ತು ಸಾಹಿತ್ಯ, ಪುರಸ್ಕಾರ ಸೌಂದರ್ಯೋಪಾಸನೆ ಇತ್ಯಾದಿ ಜೀವನ ಶ್ರೇಷ್ಠ ಮೌಲ್ಯಗಳ ಇರುವಿಕೆಗೆ ತಮ್ಮದೇ ಆದ ಮಹತ್ತರ ಸೇವೆ ಮಾಡಿದ್ದಾರೆ ಎಂಬುದು ಸ್ಪಷ್ಟ. ಪಶ್ಚಿಮ ಚಾಲುಕ್ಯರ ಸೇನಾಪತಿಯಾದ ಶಾಂತಿನಾಥನಾದರೂ, "ಜೈನಧರ್ಮದ ಕಮಲದಲ್ಲಿಯ ರಾಜಹಂಸನೆಂದು ವಿವಿಧ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟವನು. ಹೊಯ್ಸಳ ರಾಜ ಬಿಟ್ಟಿದೇವ/ವಿಷ್ಣುವರ್ಧನನಂತು ಎಂಟುಜನ ಸೇನಾಪತಿಗಳನ್ನು ಹೊಂದಿದ್ದನು. ಅವರಲ್ಲಿ ಮಹಾಶೂರನು ಮಹಾಸಾಮಂತಾಧಿಪತಿಯೂ, ಮಹಾಪ್ರಚಂಡ ನಾಯಕ, ವೈರಿಭಯಂಕರನೆಂದು ವಿವಿಧ ಬಿರುದಾಂಕಿತನಾಗಿದ್ದ ಗಂಗರಾಜನನ್ನು ಹೊಗಳುವ ಒಂದು ಶಾಸನ ಹೀಗಿದೆ:

"ಶಿಲಾಲೇಖ (ಇಅ.2 ಪು.495)ದಲ್ಲಿ ಇವನನ್ನು ಜಿನಧರ್ಮದ ಕ್ಷೀರಸಾಗರವನ್ನುಕ್ಕಿಸುವ ಚಂದ್ರನೆಂದೂ, ಜಿನಧರ್ಮ ಶ್ರದ್ಧೆಯಲ್ಲಿ ರತ್ನಾಕರನೆಂದು, ನಾಲ್ಕುತೆರೆದ ದಾನಗಳಲ್ಲಿ ಶೂರನೆಂದು, ಧರ್ಮರಕ್ಷಕ"[33] ನೆಂದು, ವರ್ಣಿಸಲಾಗಿದೆ. ಈತನು ಹೊಯ್ಸಳ ರಾಜ್ಯದ ಆಧಾರಸ್ತಂಭವಾಗಿದ್ದು, ಶರಣಾಗತರ ರಕ್ಷಣೆ, ಪರಸ್ತ್ರೀಯರಲ್ಲಿನ ಗೌರವ ಭಾವನೆಗಳಿಂದ, ಸತ್ಯ, ದಾನ, ಚೈತ್ಯಾಲಯಗಳ ಜೀರ್ಣೋಧ್ದಾರಗಳಿಂದ ಪ್ರಖ್ಯಾತನಾಗಿದ್ದನೆಂದು ತಿಳಿದು ಬರುತ್ತದೆ.

ವಿಷ್ಣುವರ್ಧನನ ಮಿತ್ರನಾದ ಪುಣಿಕ ಅಥವಾ ಪುಣಿಕಮಯ್ಯ ಮತ್ತೊಬ್ಬ ದಂಡನಾಯಕ. ವಿಷ್ಣು, ದೇವರಾಯ, ಹುಳ್ಳ, ಶಾಂತಿಯಣ್ಣ ಮತ್ತು ಈಶ್ವರ ಎಂಬ ದಂಡನಾಯಕರೂ ಶಿವರಾಜ ಮತ್ತು ಸೋಮೆಯರೆಂಬ ಮಂತ್ರಿಗಳೂ ಸಹ ಜೈನಧರ್ಮದ ಬೆಳವಣಿಗೆಗೆ ಕೊಡುಗೈ ದಾನಿಗಳಾಗಿದ್ದರು. ವೀರ ಬಲ್ಲಾಳನ ಇನ್ನೊಬ್ಬ ಶೂರ ಜೈನ ಸೇನಾಧಿಪತಿ ಬೂಚಿರಾಜ ಪ್ರಮುಖ ಸೇನಾಧಿಪತಿಯಾಗಿದ್ದ "ವಸುದೈಕ ಬಾಂಧವ"ನೆಂಬ ಬಿರಿದು ಪಡೆದಿದ್ದ. ರಾಚಿಮಯ್ಯ ಅನೇಕ ಜಿನಾಲಯಗಳನ್ನು ಕಟ್ಟಿಸಿದನು. ಜಿನಧರ್ಮಕ್ಕೆ ಸೇವೆಸಲ್ಲಿಸಿದವರಲ್ಲಿ ಮಹಿಳೆಯರು ಸಾಕಷ್ಟು ಜನರಿದ್ದಾರೆ. ಅವರಲ್ಲಿ ರಾಜ ಮನೆತನ ಮತ್ತು ಮಂತ್ರಿಸೇನಾಧಿಪತಿಗಳ ಕುಟುಂಬಗಳಿಗೆ ಸೇರಿದವರೇ ಹೆಚ್ಚಾಗಿದ್ದಾರೆ. ಕ್ರಿ. ಶ. 336ರಲ್ಲಿ ನಿರ್ಗುಂಥ ಮನೆತನದ ಕಂದಚ್ಚಿಯು ಶ್ರೀಪುರದ ಉತ್ತರದಲ್ಲಿ ಲೋಕತಿಲಕ ಎಂಬ ಜಿನಾಲಯಗಳನ್ನು ಕಟ್ಟಿಸಿದಳು. ರಾಷ್ಟ್ರಕೂಟ 3ನೇ ಕೃಷ್ಣನ ಮಾಂಡಲಿಕನಾಗಿದ್ದ, ನಾಗಕುಮಾರನ ಹೆಂಡತಿ ಜಕ್ಕಿಯಬ್ಬೆ ಕಷ್ಟತರ ಕಾಯಿಲೆಗೆ ಒಳಗಾಗಿ ಸಲ್ಲೇಖನವ್ರತ ಕೈಗೊಂಡು ಮರಣ ಹೊಂದಿದಳು. ಪಶ್ಚಿಮ ಚಾಲುಕ್ಯ ತೈಲಪನ ದಂಡನಾಯಕನ ಮಗಳಾದ ಅತ್ತಿಮಬ್ಬೆ ನಾಗದೇವನ ಹಂಡತಿ. ಈಕೆ ಪೊನ್ನನಿಂದ ಶಾಂತಿಪುರಾಣದ 1000 ಪ್ರತಿಗಳನ್ನು ಮಾಡಿಸಿ ದಾನ ಮಾಡಿದಳು. ಚಿನ್ನ ಮತ್ತು ರತ್ನಗಳಿಂದ 1500 ಜಿನಬಿಂಬಗಳನ್ನು ತಯಾರಿಸಿ ದಾನ ಮಾಡಿದಳು. ರಾಷ್ಟ್ರಕೂಟ ಅರಸ ಕೊಟ್ಟಿಗೆ ದೇವನ ಹೆಂಡತಿ ಜಕ್ಕಸುಂದರಿಯು ಕಾಕಂಬಾಳದಲ್ಲಿ ಜಿನಾಲಯವನ್ನು ಕಟ್ಟಿಸಿದಳು. ಗಂಗರಾಜ ಬೂತುಗನ ಅಕ್ಕ ಪಾಂಬಬ್ಬೆಯು ಕೇಶಲುಂಛನ ಮಾಡಿಕೊಂಡು, 30ವರ್ಷಗಳ ತಪ್ಪಸ್ಸು ಮಾಡಿ ಅಣುವ್ರತವಿಡಿದು ಮರಣ ಹೊಂದಿದ್ದಳು. ರಾಜೇಂದ್ರ ಕೆಂಗಾಳ್ವನ ತಾಯಿಯಾದ ಪೋಚಬ್ಬರಸಿಯು ಕ್ರಿ. ಶ. 1050ರಲ್ಲಿ ಜಿನಾಲಯವನ್ನು ಕಟ್ಟಿಸಿದ್ದಳು. ಕದಂಬ ವಂಶದ ಕೀರ್ತಿದೇವನ ರಾಣಿ ಮಳಾಲಾದೇವಿ ಪಾರ್ಶ್ವನಾಥ ಜಿನಾಲಯಗಳನ್ನು ಕಟ್ಟಿಸಿದಳು. ಶಾಂತರಸನ ರಾಜಧಾನಿಯಾದ ಪೊಂಬುಚಪುರದಲ್ಲಿ ಚಟ್ಟಲದೇವಿಯ ಪಂಚಕೂಟ ಬಸದಿಯನ್ನು (ಕ್ರಿ. ಶ. 1077) ಕಟ್ಟಿಸಿದಳು. ಹಾಗೆಯೇ ಭುಜಬಲನ ರಾಣಿ ಗಂಗಾ ಮಹಾದೇವಿ (ಕ್ರಿ. ಶ. 1112) ತೈಲಪನ ಮಗಳಾದ ಪಂಪಾದೇವಿಯೂ ಪಶ್ಚಿಮ ಚಾಲುಕ್ಯನ ತ್ರಿಭುವನ ಮಲ್ಲನ ದಂಡನಾಯಕನ ಹೆಂಡತಿಯಾದ ಕಾಳಿಯಕ್ಕನೂ, ಮಾರಸಿಂಹನ ತಂಗಿ ಸುಗ್ಗಿಯಬ್ಬರಸಿಯೂ ( ಕ್ರಿ. ಶ. 1150) ಅನೇಕ ಧಾರ್ಮಿಕ ಕಾರ್ಯಗಳನ್ನು ಕೈಗೊಂಡಿದ್ದರು.

ಶಾಂತಲಾದೇವಿ ಜಕ್ಕವ್ವೆ, ಮಾಚೆಯಬ್ಬೆ ಸಿರಿಯಾ ದೇವಿ, ಅಚಲದೇವಿ, ಸೋಮಾಲಾದೇವಿ, ಶಾಂತಿಯಕ್ಕ ಮೊದಲಾದವರು ಶ್ರೇಷ್ಠ ಮಹಿಳೆಯರಾಗಿದ್ದಾರೆ. ಹೀಗೆ ಕರ್ನಾಟಕದಲ್ಲಿ ಜೈನ ಪರಂಪರೆಯು ಶ್ರೀಮಂತವಾಗಿದ್ದು, ರಾಜಕೀಯ, ಧಾರ್ಮಿಕ, ನೈತಿಕ, ಸಾಹಿತ್ಯಕ ಮತ್ತು ಕಲಾಕ್ಷೇತ್ರಗಳಲ್ಲಿ ಅವಿಸ್ಮರಣೀಯವಾದ ಕೊಡುಗೆ ನೀಡಿದೆ. ಈ ಇತಿಹಾಸದಲ್ಲಿ ಕರ್ನಾಟಕದ ಅನೇಕ ಸ್ಥಳಗಳಾದ ಚಂದ್ರಿಕವಾಟ (ಈಗಿನ ಚಾಂದಕವಟೆ, ಜಿಲ್ಲೆ ಬಿಜಾಪುರ) ಸ್ವಾದಿ (ಅಥವಾ ಸೊಂದ, ಕಾರವಾರ ಜಿಲ್ಲೆ) ಲಕ್ಷ್ಮೇಶ್ವರ, ಇಂಗಳಗಿ, ಮಳಖೇಡ, ಸೇಂಡಂ, ಕೊಪಣನಗರ (ಕೊಪ್ಪಳ), ಬನವಾಸಿ, ಬೆಳಗೊಳ, ಪೌದನಪುರ, ಪುನ್ನಾಟ, ಹನಸೋಗೆ, ತಲಕಾಡು, ಹುಂಚ, ಬೆಳಗಾವಿ, ಪುಲಿಗೆರೆ, ವೇಣುಪುರ, ಕಾರ್ಕಳ ಇನ್ನೂ ಮುಂತಾದ ಪಟ್ಟಣಗಳು, ಶಿಕ್ಷಣ ಹಾಗೂ ಜೈನ ಧಾರ್ಮಿಕ ಕೇಂದ್ರಗಳಾಗಿ ಮಾರ್ಪಟ್ಟವು.

ಜೈನ ಆಚಾರ್ಯರು, ಕೆಲ ರಾಜ ಮನೆತನಗಳ ಆಳ್ವಿಕೆಗೆ ಸಹಾಯಕರಾಗಿದ್ದರು. ಜೈನ ಮಂತ್ರಿಗಳು ಸೇನಾಪತಿಗಳ ಪೋಷಣೆಯಿಂದ ಅನೇಕ ಜೈನಶ್ರಾವಕರು, ಆಚಾರ್ಯರ ಮಾರ್ಗದರ್ಶನದಿಂದ ಕರ್ನಾಟಕದಲ್ಲಿ ನೈತಿಕ ಆದರ್ಶಗಳು ಬೆಳೆದವೆಂಬುದಕ್ಕೆ ಅನುಮಾನವಿಲ್ಲ. ಚಾರು ಕರ್ನಾಟಕದ ವರ್ಣನೆಯನ್ನು ಮಾಡುತ್ತಾ ಶಾಸನ ಕವಿಯೋರ್ವನು ಹೇಳುವ ಮಾತುಗಳು ಕರ್ನಾಟಕದಲ್ಲಿ ಜೈನಧರ್ಮದ ಹಿರಿಮೆಗೆ ಹಿಡಿದ ಕನ್ನಡಿಯಂತಿದೆ.

> "ಜಿನಧರ್ಮಾವಾಸವಾದತ್ತಮಳ ವಿನಯದಾಗಾರವಾದತ್ತು ಪದ್ಮಾ
> ಸನ ನಿಷ್ಪಾಸದ್ಮವಾದತ್ತತಿವಿಶದ ಯಶೋಧಾಮವಾದತ್ತು ವಿದ್ಯಾ
> ಧನ ಜನ್ಮಸ್ಥಾನವಾದತ್ತಸಮತರದ ಗಂಬೀರ,ಸದ್ಗೇಹವಾದ
> ತ್ತೆನಿಸಲ್ಕಿಂತುಳ್ಳ ನಾನಾ ಮಹಿಮೆಯೊಳೆಸೆಗುಂ ಚಾರುಕರ್ಣಾಟದೇಶಂ"[38]

ಈ ರೀತಿಯಾಗಿ ಆತನು ಬಣ್ಣಿಸಿದ್ದಾನೆ.

ಇಲ್ಲಿ ನಾವು ಗಮನಿಸಲೇಬೇಕಾದ ಒಂದು ಪ್ರಮುಖವಾದ ಅಂಶವೆಂದರೆ, ಜೈನರು ಅಲ್ಪಸಂಖ್ಯಾತರಾದರೂ ಅವರು ಕರ್ನಾಟಕಕ್ಕೆ ನೀಡಿದ ಕೊಡುಗೆ ಮಾತ್ರ ಶ್ರೀಮಂತವಾದದು. ಇಲ್ಲಿ ಆಳಿಹೋದ ಅರಸರು, ಮಹಾ ಮಂತ್ರಿಗಳು, ಸೇನಾಧಿಪತಿಗಳು, ಆಚಾರ್ಯರು, ಕವಿಪುಂಗವರು, ಶಿಲ್ಪಿಗಳು ವಿಶೇಷವಾಗಿ ಮಹಿಳೆಯರೂ ಸಹ ಅವಿಸ್ಮರಣೀಯ ಸೇವೆ ಸಲ್ಲಿಸಿದ್ದಾರೆ. ಅವರು ನಿರ್ಮಿಸಿದ ಜಿನಾಲಯಗಳು, ಗುಹೆಗಳು, ಶಿಲ್ಪಗಳು ನಯನ ಮನೋಹರ. ಶ್ರವಣಬೆಳಗೊಳದ ಗೊಮ್ಮಟೇಶ್ವರನು ತ್ಯಾಗ ಸಂಯಮ ಮತ್ತು ತಪ್ಪಸ್ಸುಗಳ ಸಂದೇಶವನ್ನು ಹೊತ್ತ ಮೂರ್ತಿಯಾಗಿ ನಿಂತಿದ್ದಾನೆ. ಕನ್ನಡದಲ್ಲಿ ಜೈನ ಕವಿಗಳು ರಚಿಸಿದ ಕಾವ್ಯಗಳು ಜಗತ್ತಿನ ಯಾವ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ, ಒಟ್ಟಾರೆ ಜೈನ ಪರಂಪರೆಯು ಆಧ್ಯಾತ್ಮದ ಅಮರ ಸಂದೇಶವನ್ನು ಪಸರಿಸಿ, ಕನ್ನಡನಾಡಿನ ಹಿರಿಮೆ–ಗರಿಮೆಗೆ ಕಾರಣವಾಗಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿ ಯಾಗುವುದಿಲ್ಲ. ಜೈನ ಹಾಡುಗಳ ಸಂಗ್ರಹ ಹಾಗೂ ಅವುಗಳ ಸಾಂಸ್ಕೃತಿಕ ಮಹತ್ವವನ್ನು ಅರಿಬಲ್ಲ ಅಧ್ಯಯನಕ್ಕೆ ಈ ಹಿನ್ನೆಲೆ ಉಚಿತವಾಗಿರುವುದರಿಂದ ಈ ಅಧ್ಯಾಯದಲ್ಲಿ ಅವುಗಳನ್ನು ಕೊಡಲಾಗಿದೆ.

## ಅಡಿಟಿಪ್ಪಣಿ

1. ಡಾ. ಕಲಘಟಗಿ ಟಿ. ಜಿ(ಸಂ)ಕರ್ನಾಟಕದಲ್ಲಿ ಜೈನಧರ್ಮ ಒಂದು ಅಧ್ಯಯನ ಪು.ಸಂ–1, ಪ್ರ–ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ–1976
2. ಡಾ. ಕಲಘಟಗಿ (ಸಂ) ಅದೇ ಪುಟ ಅದೇ
3. ಡಾ. ಕಲಘಟಗಿ (ಸಂ) ಅದೇ ಪುಟ ಅದೇ
4. ಡಾ. ಶೆಟ್ಟಿ ಎಸ್.ಡಿ (ಸಂ) ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ, ಪು.ಸಂ.27, ಪ್ರ–ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಪ್ರತಿಷ್ಠಾನ ಕೇಂದ್ರ ಉಡುಪಿ 2002
5. ಡಾ. ಕಲಘಟಗಿ ಟಿ.ಜಿ (ಸಂ)ಕರ್ನಾಟಕದಲ್ಲಿ ಜೈನಧರ್ಮ ಒಂದು ಅಧ್ಯಯನ ಪು.ಸಂ 2

ಪ್ರ– ಜೈನಶಾಸ್ತ್ರ ಮತ್ತು ಪ್ರಾಕೃತಿಕ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ –1976

6. ಡಾ. ಕಲಘಟಗಿ ಟಿ.ಜಿ (ಸಂ) ಅದೇ

7. ಹೆರಂಜೆ ಕೃಷ್ಣಭಟ್ಟ, ಮುರಳೀಧರ ಉಪಾದ್ಯ, ಹಿರಿಯಡಕ (ಸಂ) ಗೋವಿಂದ ಪೈ ಸಂಶೋಧನಾ ಸಂಪುಟ, ಪು. ಸಂ–(737) ಪ್ರ–ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ (1995)

8. ಹೆರಂಜೆ ಕೃಷ್ಣಭಟ್ಟ, ಮುರುಳೀಧರ ಉಪಾರ್ಧ್ಯ, ಹಿರಿಯಡಕ(ಸಂ) ಗೋ,ಪೈ ಸಂ.ಸಂಪುಟ, ಪು.ಸಂ–737,ಪು–ರಾ,ಗೋ,ಸಂ.ಕೇ,ಉಡುಪಿ.1995

9. ಡಾ. ಕಲಘಟಗಿ. ಟಿ. ಜಿ. (ಸಂ) ಕರ್ನಾಟಕದಲ್ಲಿ ಜೈನಧರ್ಮ ಒಂದು ಅಧ್ಯಯನ, ಪು.ಸಂ–3, ಪ್ರ–ಜೈನಶಾಸ್ತ್ರ ಮತ್ತು ಪ್ರಾಕೃತವಿಭಾಗ, ಮೈ,ವಿ.ವಿ,1976.

10. ಡಾ. ಶೆಟ್ಟಿ ಎಸ್.ಡಿ (ಸಂ) ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ; ಪು.ಸಂ 28, ಪ್ರ–ರಾಷ್ಟಕವಿ,ಗೋ.ಸಂ.ಕೇ, ಉಡುಪಿ 2002

11. ಡಾ. ಶೆಟ್ಟಿ. ಎಸ್ ಡಿ (ಸಂ) ಅದೇ, ಪು.ಸಂ 29

12. ಡಾ. ಕಲಘಟಗಿ ಟಿ.ಜಿ (ಸಂ) ಕರ್ನಾಟಕದಲ್ಲಿ ಜೈನಧರ್ಮ ಒಂದು ಅಧ್ಯಯನ ಪು.ಸಂ 4 ಪ್ರ– ಜೈನಶಾಸ್ತ್ರ ಮತ್ತು ಪ್ರಾಕ್ರತವಿಭಾಗ ಮೈ.ವಿ.ವಿ 1976

13. ಡಾ. ಶೆಟ್ಟಿ ಎಸ್.ಡಿ (ಸಂ) ತುಳುನಾಡಿನ ಜೈನಧರ್ಮ ಒಂದು ಸಾಂಸ್ಕ್ರತಿಕ ಅಧ್ಯಯನ ಪು.ಸಂ 29 ಪ್ರ–ರಾ.ಕವಿ ಗೋ,ಸಂ.ಕೇ ಉಡುಪಿ 2002

14. ಡಾ. ಶೆಟ್ಟಿ ಎಸ್, ಡಿ (ಸಂ) ಅದೇ ಪು.ಸಂ 29–30

15. ಡಾ. ಕಲಘಟಗಿ ಜಿ.ಟಿ (ಸಂ) ಕರ್ನಾಟಕದಲ್ಲಿ ಜೈನಧರ್ಮ ಒಂದು ಅಧ್ಯಯನ ಪು.ಸಂ–6 ಪ್ರ– ಜೈನಶಾಸ್ತ್ರ ಮತ್ತು ಪ್ರಾಕೃತವಿಭಾಗ ಮೈ.ವಿ.ವಿ 1976

16. ಡಾ. ಶೆಟ್ಟಿ, ಎಸ್. ಡಿ.(ಸಂ)ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ, ಪು.ಸಂ 29–30,ಪ್ರ–ರಾ.ಕವಿ ಗೋ.ಸಂ,ಕೆ, ಉಡುಪಿ 2002

17. ಡಾ. ಶೆಟ್ಟಿ ಎಸ್.ಡಿ (ಸಂ) ತುಳುನಾಡಿನ ಜೈನಧರ್ಮ ಒಂದು ಸಾಂಸ್ಕ್ರತಿಕ ಅಧ್ಯಯನ, ಪು.ಸಂ–31, ಪ್ರ–ರಾ.ಕ.ಗೋ. ಸಂ.ಕೇ.ಉಡುಪಿ 2002

18. ಡಾ. ಕಲಘಟಗಿ, ಜಿ.ಟಿ (ಸಂ) ಕರ್ನಾಟಕದಲ್ಲಿ ಜೈನಧರ್ಮ ಒಂದು ಅಧ್ಯಯನ; ಪು.ಸಂ 7 ಪ್ರ ಜೀವಶಾಸ್ತ್ರ ಮತ್ತು ಪ್ರಾಕೃತ ವಿಭಾಗ, ಮೈ.ವಿ.ವಿ 1976

19. ಡಾ. ಶೆಟ್ಟಿ. ಎಸ್.ಡಿ (ಸಂ) ತುಳುನಾಡಿನ ಜೈನಧರ್ಮ ಒಂದು ಸಂಸ್ಕೃತಿಕ ಅಧ್ಯಯನ; ಪು.ಸಂ 31 ಪ್ರ– ರಾ.ಕ.ಗೋ.ಸಂ ಕೆ ಉಡುಪಿ 2002

20. ಡಾ. ಶೆಟ್ಟಿ ಎಸ್. ಡಿ (ಸಂ) ಅದೇ ಪುಟ ಅದೇ

21. ಡಾ. ಕಲಘಟಗಿ ಜಿ.ಟಿ (ಸಂ) ಕರ್ನಾಟಕದಲ್ಲಿ ಜೈನ ಧರ್ಮ ಒಂದು ಅಧ್ಯಯನ, ಪು.ಸಂ 7 ಪ್ರ– ಜೈನಶಾಸ್ತ್ರ ಮತ್ತು ಪ್ರಾಕೃತಿಕ ವಿಭಾಗ, ಮೈ.ವಿ.ವಿ 1976

22. ಡಾ. ಶೆಟ್ಟಿ. ಎಸ್. ಡಿ (ಸಂ) ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ, ಪು.ಸಂ 30 ಪ್ರ–ರಾ.ಗೋ.ಸಂ.ಕೇ, 2002

23. ಡಾ. ಕಲಘಟಗಿ ಜಿ.ಟಿ (ಸಂ) ಕರ್ನಾಟಕದಲ್ಲಿ ಜೈನಧರ್ಮ ಒಂದು ಅಧ್ಯಯನ; ಪು.ಸಂ 8 ಪ್ರ– ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗ, ಮೈ,ವಿ,ವಿ, 1976

24. ಡಾ. ಕಲಘಟಗಿ(ಸಂ) ಅದೇ ಪು.ಸಂ 8

25. ಡಾ. ಶೆಟ್ಟಿ ಎಸ್.ಡಿ (ಸಂ) ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ; ಪು.ಸಂ 31 –32,ಪ್ರ– ರಾ.ಗೋ.ಸಂ.ಕೇ. ಉಡುಪಿ 2002

26. ಡಾ. ಶೆಟ್ಟಿ. ಎಸ್. ಡಿ (ಸಂ)ಅದೇ ಪು.ಸಂ–32
27. ಡಾ. ಶೆಟ್ಟಿ. ಎಸ್. ಡಿ(ಸಂ)ಅದೇ, ಪು.ಸಂ–32
28. ಡಾ. ಶೆಟ್ಟಿ. ಎಸ್. ಡಿ(ಸಂ)ಅದೇ, ಪು.ಸಂ–32
29. ಡಾ. ಕಲಘಟಗಿ ಜಿ.ಟಿ(ಸಂ)ಕರ್ನಾಟಕದಲ್ಲಿ ಜೈನಧರ್ಮ ಒಂದು ಅಧ್ಯಯನ, ಪು. ಸಂ 10 ಪ್ರ– ಜೈನ ಶಾಸ್ತ್ರ ಮತ್ತು ಪ್ರಾಕೃತಿಕ ವಿಭಾಗ, ಮೈ. ವಿ.ವಿ 1976
30. ಡಾ. ಶೆಟ್ಟಿ ಎಸ್.ಡಿ (ಸಂ) ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ; ಪು.ಸಂ– 32, ಪ್ರ–ರಾ.ಗೋ.ಪೈ.ಸಂ.ಕೇ ಉಡುಪಿ 2002
31. ಡಾ. ಕಲಘಟಗಿ, ಜಿ.ಟಿ(ಸಂ) ಕರ್ನಾಟಕದಲ್ಲಿ ಜೈನಧರ್ಮ ಒಂದು ಅಧ್ಯಯನ, ಪು.ಸಂ 11 ಪ್ರ– ಜೈನಶಾಸ್ತ್ರ ಮತ್ತು ಪ್ರಾಕೃತಿಕ ವಿಭಾಗ, ಮೈ.ವಿ.ವಿ 1976
32. ಡಾ. ಕಲಘಟಗಿ ಜಿ.ಟಿ (ಸಂ) ಕರ್ನಾಟಕದಲ್ಲಿ ಜೈನಧರ್ಮ ಒಂದು ಅಧ್ಯಯನ ಪು.ಸಂ 12 ಪ್ರ ಜೈನಶಾಸ್ತ್ರ ಮತ್ತು ಪ್ರಾಕೃತಿಕ ವಿಭಾಗ, ಮೈ.ವಿ.ವಿ 1976
33. ಡಾ. ಕಲಘಟಗಿ ಜಿ.ಟಿ(ಸಂ) ಅದೇ, ಪು.ಸಂ– 14
34. ಡಾ.ಶೆಟ್ಟಿ ಎಸ್.ಡಿ (ಸಂ) ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ, ಪು.ಸಂ – 33 ಪ್ರ–ರಾ.ಗೋ.ಸಂ.ಕೇ ಉಡುಪಿ 2002

## ಅಧ್ಯಾಯ: ಮೂರು

# ಕನ್ನಡ ಜೈನಹಾಡುಗಳ ವಸ್ತು ವಿಷಯ

ಕನ್ನಡನಾಡು ಮತ್ತು ಜೈನಧರ್ಮ ಅವಿನಾಭಾವ ಸಂಬಂಧವನ್ನು ಹೊಂದಿದ್ದು ಅವುಗಳ ಸಂಬಂಧ ಕ್ರಿ.ಪೂ 2ನೇ ಶತಮಾನದ ಹಿಂದಿನಿಂದಲೂ ಇರುವುದನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಜೈನಧರ್ಮದ ತತ್ವ–ಸಿದ್ಧಾಂತಗಳು ಕನ್ನಡನಾಡಿಗೆ ಮಹತ್ವದ್ದಾಗಿದ್ದು, ಜೈನರು ಕರ್ನಾಟಕದ ಸಂಸ್ಕೃತಿ, ಶಿಲ್ಪಕಲೆ, ಸಾಹಿತ್ಯಗಳ ಬೆಳವಣಿಗೆಗೆ ಶ್ರಮಿಸಿದ್ದಾರೆ. ಇದರಿಂದಾಗಿ ಕರ್ನಾಟಕ ಜೈನಧರ್ಮೀಯರ ಕೇಂದ್ರವೂ ಆಗಿದೆ. ಇಲ್ಲಿ ಅನೇಕ ಜೈನಮುನಿಗಳು ಹುಟ್ಟಿ ತಮ್ಮ ಕಾವ್ಯ ಪುರಾಣಗಳನ್ನು ಬರೆದು ಜೈನಧರ್ಮದ ತತ್ವಗಳನ್ನು ಬಿತ್ತಿ ಪಸರಿಸಿದ್ದಾರೆ. ಇಲ್ಲಿನ ಅನೇಕ ರಾಜಮನೆತನಗಳು ಜನ್ಮತಾಳಿ ಅವರು ಜೈನಧರ್ಮದಿಂದ ಆಕರ್ಷಿತರಾಗಿ ಜೈನಧರ್ಮವನ್ನು ಪೋಷಿಸಿ ಬೆಳೆಸಿದರು. ಆ ಮೂಲಕ ಕನ್ನಡದಲ್ಲಿ ಜೈನ ಸಾಹಿತ್ಯ ಬೆಳವಣಿಗೆ ಹೊಂದಿ ಜೈನಧರ್ಮ ಕನ್ನಡ ಸಾಹಿತ್ಯದಲ್ಲಿ ಒಂದು ಪ್ರಮುಖ ವಸ್ತು ವಿಷಯದ ಆಗರವಾಯಿತು.

ಜೈನಧರ್ಮದ ಅಹಿಂಸಾತತ್ವ, ಮಾನವೀಯ ಸಂಬಂಧಗಳು, ತತ್ವಸಿದ್ಧಾಂತಗಳನ್ನು ಹಿಂದಿನಿಂದಿಂದಲೂ ಕಾವ್ಯ, ಪುರಾಣ,ಕಥೆ, ಐತಿಹ್ಯಗಳ ಮೂಲಕ ಜನರಿಗೆ ತಲುಪಿಸಲು ಅನೇಕ ಕನ್ನಡ ಜೈನಕವಿಗಳು ಪ್ರಯತ್ನಿಸಿದ್ದಾರೆ. ಜೈನ ಧಾರ್ಮಿಕ ತತ್ವಗಳು ಸಾಮಾನ್ಯವಾಗಿ ಕಠಿಣತೆಯಿಂದ ಸರಳತೆಯ ಕಡೆಗೆ ಸಾಗಿರುವುದನ್ನು ನಾವು ಗಮನಿಸಬಹುದು. ಪಂಪನ ಕಾಲವನ್ನು ಅವಲೋಕಿಸುವುದಾದರೆ, ತನ್ನ ಕಾವ್ಯ ರಚನಾ ಸಂದರ್ಭದಲ್ಲಿ ಒಂದನ್ನು ಲೌಕಿಕವನ್ನಾಗಿ, ಹಾಗೂ ಮತ್ತೊಂದನ್ನು ಅಲೌಕಿಕವನ್ನಾಗಿ ಬರೆದು ಕನ್ನಡ ಸಾಹಿತ್ಯಕ್ಕೆ ಹೊಸ ರೂಪವನ್ನು ನೀಡಿದನು. ಒಂದು ಧಾರ್ಮಿಕ ಸಾಂಸ್ಕೃತಿಕ ಮೌಲ್ಯದಿಂದಾದ ಯಾವುದೇ ಕಾವ್ಯ ಆ ಧರ್ಮಾವಲಂಬಿಗಳಿಗೆ ಮಾತ್ರ ಪ್ರಿಯವಾಗುವಂತಿದ್ದರೆ, ಅದು ಲೋಕಮನ್ನಣೆಯನ್ನು ಪಡೆಯುವುದಿಲ್ಲ ಎಂಬ ಸತ್ಯದ ಅರಿವು ಪಂಪನಿಗಿದ್ದಂತೆ ಕಾಣುತ್ತದೆ. ಆದ್ದರಿಂದ ಮುಂದೆ ಬಂದ ಜೈನ ಕವಿಗಳು ಪಂಪನ ಇದೇ ನೀತಿಯನ್ನು ಅನುಸರಿಸಿದ್ದಾರೆ. ಕ್ರಿ.ಶ. 8–9ನೇ ಶತಮಾನದಲ್ಲಿ ಜೈನಧರ್ಮ ಹೆಚ್ಚು ಪ್ರಚಲಿತದಲ್ಲಿದ್ದು 9ನೇ ಶತಮಾನದ ಹೊತ್ತಿಗೆ ಸ್ವಲ್ಪ ಇಳಿಮುಖವಾದರೂ, ಕ್ರಿ. ಶ. 11ನೇ ಶತಮಾನದಲ್ಲಿ ಹಲವಾರು ಧರ್ಮಗಳ ನಡುವೆ ಸಿಲುಕಿ ಜೈನಧರ್ಮ ತನ್ನ ಪ್ರಾಬಲ್ಯವನ್ನು ಸ್ವಲ್ಪ ಮಟ್ಟಿಗೆ ಕಳೆದುಕೊಂಡಿತು. ಇದಕ್ಕೆ ಕಾರಣ ಜೈನಧರ್ಮದಲ್ಲಿದ್ದ ಕಠಿಣ ಆಚರಣೆಗಳು, ವ್ರತಗಳು, ತತ್ವಗಳು. ಇವುಗಳಲ್ಲದೆ ಜೈನಸಾಹಿತ್ಯದಲ್ಲಿ ರಚನೆಗೊಂಡ ಕೇವಲ ಸಂಸ್ಕೃತ ಭೂಯಿಷ್ಟವಾದ ಕಾವ್ಯಗಳು. ಇದನ್ನು ಮನಗಂಡ ಶರಣರು ಮತ್ತು ಹರಿದಾಸರು ವಚನ, ಕೀರ್ತನೆಗಳನ್ನು ಸರಳ ಭಾಷೆಯಲ್ಲಿ ರಚಿಸಿ ಜನಸಾಮಾನ್ಯರ ಬಳಿಗೆ ಒಯ್ಯುವುದರ ಜೊತೆಗೆ ಅವರ ಗಮನವನ್ನು ತಮ್ಮ ಧರ್ಮದ ಕಡೆಗೆ ಸೆಳೆಯಲು ಪ್ರಯತ್ನಿಸಿದರು.

ಇದರಿಂದ ಎಚ್ಚೆತ್ತ ಜೈನಧರ್ಮವೂ ಸಹ ತನ್ನಲ್ಲಿದ್ದ ಜೈನತತ್ವ ಆಚಾರ ವಿಚಾರಗಳನ್ನು, ಸರಳಗೊಳಿಸಿ ಜೈನಧರ್ಮದಲ್ಲಿ ಪ್ರತಿಯೊಬ್ಬರಿಗೂ ಮೋಕ್ಷವಿದೆ ಎಂದು ಸಾರಿತು. ಆದರೂ ವಚನ ಸಾಹಿತ್ಯ, ಕೀರ್ತನ ಸಾಹಿತ್ಯ ಹಾಡುಗಳ ರೂಪದಲ್ಲಿ ಪ್ರಸಾರವಾಗಿ ಜನಸಾಮಾನ್ಯರನ್ನು ಆಕರ್ಷಿಸಿದಂತೆ, ತನ್ನ ಮಾರ್ಗೀಯ ಶೈಲಿಯನ್ನು ಬಿಟ್ಟುಕೊಡದ ಜೈನಸಾಹಿತ್ಯ ಅನೇಕ ಶಾಸ್ತ್ರಗಳು, ವ್ಯಾಕರಣ, ಛಂದಸ್ಸಿಗೆ ಸಂಬಂಧಿಸಿದ ಕೃತಿಗಳನ್ನು ಬರವಣಿಗೆಗೆ ಒಲವು ತೋರಿಸುತ್ತಲೇ ಬಂದಿತು. ಹೀಗಾಗಿ ಈ ಅವಧಿಯಲ್ಲಿ ಜೈನ ಕವಿಗಳು ಸಾಹಿತ್ಯ ಕ್ಷೇತ್ರದಲ್ಲಿ ಹೊಸರೂಪದ ಅಭಿವ್ಯಕ್ತಿಗೆ ಹೊರಳಿಕೊಳ್ಳಲಿಲ್ಲವೆಂದೇ ತೋರುತ್ತದೆ.

ಆದರೆ ಕ್ರಿ. ಶ. 15–16ನೇ ಶತಮಾನದಲ್ಲಿ ರತ್ನಾಕರವರ್ಣಿಯಂತಹ ಜೈನಕವಿಗಳು ಉದಿಸಿದರು. ರತ್ನಾಕರನು 'ಭರತೇಶವೈಭವ' ಎಂಬ ಕೃತಿಯನ್ನು ರಚಿಸುವುದರ ಮೂಲಕ ಜೈನಧರ್ಮದ ಸಂಪ್ರದಾಯ ಮಾರ್ಗವನ್ನು ಮುರಿದು ಹೊಸ ಹಾದಿಯನ್ನು ತೋರಿದನು. ಯೋಗ – ಭೋಗಗಳನ್ನು ಸಮನ್ವಯಿಸಿ, ಆ ಮೂಲಕ ಜೈನ–ತತ್ವಸಿದ್ಧಾಂತಗಳನ್ನು ದರ್ಶಿಸಿದನು. ಆ ಕಾಲಕ್ಕಾಗಲೇ ಶರಣರ ವಚನಗಳು, ದಾಸರಕೀರ್ತನೆ ಸುಳಾದಿ, ಉಗಾಭೋಗಗಳು, ತತ್ವಪದಗಳು ಜನಸಾಮಾನ್ಯರ ಬಾಯಿಯಲ್ಲಿ ಹರಿದಾಡತೊಡಗಿದ್ದವು. ಇದನ್ನು

ಅರಿತ ರತ್ನಾಕರವರ್ಣಿಯು ಹಾಡುಗಳನ್ನು ಬರೆಯಲುತೊಡಗಿದನು. ಇದರಿಂದಾಗಿ ಜೈನಸಾಹಿತ್ಯದಲ್ಲಿ ಹೊಸಗಾಳಿ ಬೀಸಿ, ಜೈನಹಾಡುಗಳ ವಸ್ತುವಿನಲ್ಲೂ ನವನವೀನತೆ ಕಾಣಕೊಡಗಿತು. ಡಾ.ಎಫ್.ಟಿ.ಹಳ್ಳಿಕೇರಿ ಹಾಗೂ ಡಾ.ರವೀಂದ್ರರವರು ಸಂಪಾದಿಸಿರುವ "ಕನ್ನಡ ಜೈನಹಾಡುಗಳು" ಪುಸ್ತಕದಲ್ಲಿ ಜೈನ ಹಾಡುಗಳ ವಸ್ತುವಿಷಯವನ್ನು ಕುರಿತು ಹೀಗೆ ಪ್ರಸ್ತಾಪಿಸಲಾಗಿದೆ: "ಜೈನ ಧಾರ್ಮಿಕ ಆಚಾರವಿಚಾರಗಳಲ್ಲದೆ ಆ ಧರ್ಮದಲ್ಲಿ ಆಗಿಹೋದ ಮಹಾಪುರುಷರ ಜೀವನ ಸಾಧನೆಗಳ ಸ್ತುತಿ ಇಲ್ಲಿಯ ವಸ್ತು ವಚನ ಕೀರ್ತನೆಗಳಂತೆ ಇಲ್ಲಿ ಸಾಮಾಜಿಕ ಅಭಿವ್ಯಕ್ತಿಯ ತೀವ್ರ ಸಂಶೋಧನೆ ಇಲ್ಲಿಲ್ಲವಾದರೂ ಲೋಕಜ್ಞಾನವನ್ನೊಳಗೊಂಡ ಅನುಭಾವದ ಮಾತುಗಳಿಂದ ಧಾರ್ಮಿಕತೆಯ ಕಡೆಗೆ ನಮ್ಮ ಒಲವನ್ನು ಕೇಂದ್ರೀಕರಿಸುವುದು ಪ್ರಸ್ತುತ ಹಾಡುಗಳ ಆಶಯವಾಗಿದೆ. ಅದರೆ ಜಿನಪತಿಗಂ, ಜಿನಮುನಿಗಂ, ಜಿನಾಗಮಕ್ಕಂ, ಜಿನಾಧಿಪತಿಗೆ, ಜಿನಭವನಕ್ಕಂ, ಜಿನಗುಣ ಸಂಪತ್ತಿಗಂ ಮೀಸಲಾದ ಇಲ್ಲಿಯ ಹಾಡುಗಳಲ್ಲಿ ಜಿನಭಕ್ತಿಯ ನಿಷ್ಠೆ ಅವಧಾನಗಳು ಸ್ಥಾನ ಗಳಿಸಿವೆ. ಜನ್ಮಾಂತರಗಳ ಪ್ರಸ್ತಾಪ, ಲೌಕಿಕ ಬದುಕಿನ ದುಃಖಮಯ ಸನ್ನಿವೇಶಗಳು, ಇದರಿಂದ ಪಾರಾಗಲು ಹಂಸನಾಥನ ಧ್ಯಾನ, ದಾನಪೂಜೆ, ಜಪತಪಗಳು ಇಲ್ಲಿನ ಹಾಡುಗಳ ವಸ್ತುವಿಷಯಗಳಾಗಿವೆ." 1

ಅವರ ಹೇಳಿಕೆಯಂತೆ, ಜೈನಹಾಡುಗಳಿಗೆ ಕೇವಲ ಜೈನ ಆಚರಣೆ ಸಂಸ್ಕೃತಿಗಳಷ್ಟೇ ವಸ್ತು ವಿಷಯವಾಗದೆ ಅಲ್ಲಿ ಆಗಿಹೋದಂತಹ ಮಹಾಪುರುಷರು, ತೀರ್ಥಂಕರರು, ಯಕ್ಷಯಕ್ಷಿಣಿಯರು, ಅಹಿಂಸೆ ಜೈನಜೀವನ ಮೌಲ್ಯ, ಶ್ರಾವಕ–ಶ್ರಾವಕಿಯರು, ಸಿದ್ಧರು, ಪರಮೇಷ್ಠಿಗಳು, ಅರಿಹಂತರು ಹೀಗೆ ವಸ್ತು ವಿಷಯದ ಸಾಲು ಬೆಳೆಯುತ್ತಾ ಹೋಗುತ್ತದೆ.

ಈ ಹಿನ್ನೆಲೆಯಲ್ಲಿ ಅನೇಕ ಜೈನ ಕವಿಗಳು ಹಾಡುಗಳನ್ನು ಬರೆಯಲು ಮುಂದಾದರು. ಅವರು ಮೂಲಭೂತವಾಗಿ ಮನುಷ್ಯ ಜೀವನವನ್ನು ತಮ್ಮ ಮತಧರ್ಮದ ಸಂಸ್ಕೃತಿಯ ಮೇಲೆ ನಿರೂಪಿಸಿ, ವ್ಯಾಖ್ಯಾನಿಸಿ, ಅದನ್ನು ಕಾವ್ಯ ಧರ್ಮದ ದಾರಿಯಲ್ಲಿಯೇ ಹರಿಯಬಿಟ್ಟರು. ಈ ನಿಟ್ಟಿನಲ್ಲಿ ಜೈನ ಪೂರ್ವಪುರಾಣಗಳು, ವೈದಿಕ ರಾಮಾಯಣ, ಮಹಾಭಾರತ ಕಥಾವಸ್ತುಗಳ ಜೊತೆಗೆ, ಜಾನಪದೀಯ ಅಂಶಗಳನ್ನು ಪಡೆದುಕೊಂಡು ಅವುಗಳನ್ನು ಮರುಸೃಷ್ಟಿಸುವಲ್ಲಿ ಜೈನ ಕವಿಗಳು ತೋರಿದ ಸಾಧನೆ ಮಹತ್ವವಾದುದಾಗಿದೆ.

"ಜೈನಧರ್ಮ ತನ್ನ ಸಿದ್ಧಾಂತಗಳನ್ನು ಲೋಕಾರ್ಪಣೆ ಮಾಡಲು ಸಾಹಿತ್ಯವನ್ನು ಒಂದು ಸಾಧನವನ್ನಾಗಿ ಮಾಡಿಕೊಂಡಿತು. ಇವರು ಕಾವ್ಯಗಳಲ್ಲಿ, ಜನತೆಗೆ ಮನ ಮುಟ್ಟುವಂತೆ ಮಾಡಲು ಜೈನರು ಬಳಸಿಕೊಂಡ ಬಹಳ ಪ್ರಮುಖವಾದ ತಂತ್ರ 'ಭವಾವಳಿ'. ಈ ಭವಾವಳಿ ತಂತ್ರವನ್ನು ಜೈನರು ಎಷ್ಟರ ಮಟ್ಟಿಗೆ ಬಳಸಿದರು ಎಂದರೆ, ಇಡೀ ಸಾಂಸ್ಕೃತಿಕ ಜಗತ್ತನ್ನೇ ಪರಿಚಯಿಸುವ ಮೂಲಕ ಭವಾವಳಿಗಳನ್ನು ತಮ್ಮ ಕಾವ್ಯ, ಪುರಾಣ, ಕಥೆಗಳಲ್ಲಿ ಬಳಸಿಕೊಂಡರು. ಜೈನ ಕವಿಗಳ ಭವಾವಳಿಯ ತಂತ್ರದ ಮೂಲಕ ಜೈನಧರ್ಮ ಪ್ರತಿಪಾದಿಸುವ ಜೀವದಯೆ, ಪುನರ್ಜನ್ಮಕಲ್ಪನೆ, ಅಹಿಂಸೆಯ ಶ್ರೇಷ್ಠತೆ, ಮೋಕ್ಷ ಮುಂತಾದ ಧಾರ್ಮಿಕ ವಿಚಾರಗಳನ್ನು ಅನೇಕ ಜೀವರಾಶಿಗಳ ಮುಖಾಂತರ ತೋರಿಸುವುದನ್ನು ಜೈನರು ವಿಶೇಷವಾಗಿ ಅರಿತುಕೊಂಡಿದ್ದರು. ಜೈನರ ಭವಾವಳಿಯಿಂದ ಭಾರತೀಯ ಸಂಸ್ಕೃತಿ, ಹಾಗೂ ಸಮಾಜದ ಪರಿಕಲ್ಪನೆಗಳಾದ ಜಾತಿವ್ಯವಸ್ಥೆ, ಧಾರ್ಮಿಕ ಸಂಪ್ರದಾಯ, ಆಚಾರ–ವಿಚಾರ, ಸಮಾಜವ್ಯವಸ್ಥೆ, ಆರ್ಥಿಕವ್ಯವಸ್ಥೆ, ರಾಜಕೀಯವ್ಯವಸ್ಥೆ ಅವುಗಳ ಸಂಘರ್ಷ ಮೊದಲಾದುವು 'ಆತ್ಮ' ಎಂಬ ಕೇಂದ್ರ ಬಿಂದುವಿನ ಸುತ್ತಲೂ ಹಾದು ಹೋಗುತ್ತವೆ"2

ಹೀಗೆ ಜೈನಧರ್ಮದ ಸಾಹಿತ್ಯದ ಮೂಲ ಭವಾವಳಿ. ಅವರು ಇದರ ಮೂಲಕ ಧರ್ಮದ ತತ್ವವಿಚಾರಗಳನ್ನು ಪ್ರಚುರಪಡಿಸಿದರು. ಅಲ್ಲದೇ ಅವರು ಹಲವಾರು ತಂತ್ರಮಾರ್ಗಗಳನ್ನು ಅನುಸರಿಸಿದರು. 15ನೇ ಶತಮಾನದ ಮಧ್ಯಭಾಗದ ಹೊತ್ತಿಗೆ ಜೈನರು ಹೊಸ ಸಿದ್ಧತೆಯ ಮಾರ್ಗವನ್ನು ಪ್ರಚಾರಕ್ಕೆ ಆರಿಸಿಕೊಡಿದ್ದರು. ಈ ಹೊಸ ಗಾಳಿಯನ್ನರಿತು ತಮ್ಮ ಧರ್ಮದ ಉಳಿವಿಗಾಗಿ ಮತ್ತು ಪ್ರಚಾರಕ್ಕಾಗಿ ಅನಿವಾರ್ಯವಾಗಿ ಕೆಲವು ಜೈನ ಕವಿಗಳು ಹಾಡುಗಳನ್ನು ಬರೆಯಲು ಮುಂದಾದರು. ಈ ವೇಳೆಗಾಗಲೇ ಶರಣರ ವಚನಸಾಹಿತ್ಯ, ಕೀರ್ತನೆ, ತತ್ವಪದ ಉಗಾಭೋಗ, ಸುಳಾದಿ, ಸ್ವರವಚನಗಳು ಪ್ರಭಾವ ಬೀರಿದವು ಹಾಗೂ ರತ್ನಾಕರವರ್ಣಿ ಹಾಡುಗಳನ್ನು ಬರೆಯುವ

ಮೂಲಕ ಜೈನಸಾಹಿತ್ಯ ಪರಂಪರೆಯ ನಿರಂತರತೆಗೆ ಅಡಿಪಾಯವನ್ನು ಹಾಕಿದ್ದನು. ಜೈನ ಹಾಡುಗಳು ಆ ಧರ್ಮದ ಸಾರವನ್ನು ಒಳಗೊಂಡಿರುವಂತಹ ಬಿಡಿಬಿಡಿ ಹಾಡುಗಳಲ್ಲಿ ಅಭಿವ್ಯಕ್ತಗೊಂಡಿವೆ. ಈ ಹಾಡುಗಳಲ್ಲಿ ಆಗಿಹೋದಂತಹ ಪುಣ್ಯ ಪುರುಷರಾದ ತೀರ್ಥಂಕರರು, ಜೈನಮುನಿಗಳು, ಚಕ್ರವರ್ತಿಗಳು ಮತ್ತು ಜೈನ ತತ್ವಸಿದ್ಧಾಂತ, ಧಾರ್ಮಿಕ ವಿಚಾರಗಳೂ ಒಳಗೊಂಡವೆ. ಈ ಹಾಡುಗಳು ನಾದ ಮಾಧುರ್ಯದಿಂದ ಕೂಡಿದ ಧರ್ಮ ಪ್ರಚಾರಕ ಹಾಡುಗಳಾಗಿವೆ. ಧರ್ಮಪ್ರಸಾರಕ್ಕಾಗಿ ಹಿಂದಿನಿಂದಲೂ ಹಾಡುಗಳನ್ನು ಒಂದು ಮಾಧ್ಯಮವನ್ನಾಗಿ ಬಳಸಿಕೊಂಡಿರುವುದು ಕಂಡು ಬರುತ್ತದೆ. ಹಾಗೆಯೇ ಜೈನ ಕವಿಗಳು ಕಾಲಕ್ಕೆ ತಕ್ಕಂತೆ ಹೊಸ ಸಾಹಿತ್ಯ ರೂಪವನ್ನು ಅರಿಯಲು ಮುಂದಾದರು. ಏಕೆಂದರೆ ಜೈನಕವಿಗಳಿಗೆ ಹಾಡುಗಳ ಮೂಲಕ ಧರ್ಮ ಪ್ರಚಾರ ಮಾಡುವುದು ಅನಿವಾರ್ಯವಾಗಿತ್ತು.

ಮಧ್ಯಕಾಲೀನ ಕನ್ನಡಸಾಹಿತ್ಯದ ಇತಿಹಾಸವನ್ನು ಮತ್ತೊಮ್ಮೆ ಗಮನಿಸಿದಾಗ ಆ ಕಾಲಕ್ಕಾಗಲೇ ಶರಣ ಹಾಗೂ ವಚನ ಸಾಹಿತ್ಯ, ತತ್ವಪದಗಳು, ದಾಸರ ಕೀರ್ತನೆಗಳು ಪ್ರಸಿದ್ಧಿ ಪಡೆದು ಅವು ಧರ್ಮಜಾಗೃತಿ, ಭಕ್ತಿಯ ಪರಾಕಾಷ್ಠತೆ, ಲೋಕನೀತಿ ತತ್ವಗಳು, ಮಾನವೀಯ ಸಂಬಂಧಗಳು, ಸಮಾಜದ ಸುವ್ಯವಸ್ಥೆ, ಸಮಾನತೆಯ ಆಶಯಗಳನ್ನು ಒಳಗೊಂಡ ಪ್ರಸಾರಗೀತಮಾಧ್ಯಮಗಳಾಗಿದ್ದವು. ಜೈನ ಹಾಡುಗಳೂ ಧರ್ಮ ಪ್ರಚಾರದ ಜೊತೆಗೆ, ನೈತಿಕ ಮೌಲ್ಯಗಳನ್ನು, ವಿಚಾರಗಳನ್ನು ಧಾರಣ ಮಾಡಿಕೊಂಡು ಸರಳ ಹಾಗೂ ಜನಪ್ರಿಯ ಮಾದರಿಯ ಮೂಲಕ ಜನಸಾಮಾನ್ಯರನ್ನು ತಲುಪಿ ಸಾಹಿತ್ಯ ಶ್ರೀಮಂತಿಕೆಗೆ ಕಾರಣವಾದುವು. ಜೈನ ಕವಿಗಳು ಹಾಡುಗಳನ್ನು ಬರೆಯುವುದರ ಮೂಲಕ ಜನಮಾನಸವನ್ನು ಮುಟ್ಟಿ, ಆಕರ್ಶಿಸುವ ಪ್ರಯತ್ನಮಾಡಿದರು.

"ಜೈನ ಹಾಡುಗಳಲ್ಲಿ ಒಂದು ನಿರ್ಧಿಷ್ಟವಾದ ಬಂಧ, ಗೇಯಗುಣ, ಮತ್ತು ಧಾರ್ಮಿಕ ಸಿದ್ಧಾಂತಗಳ ಪ್ರತಿಪಾದನೆಗಳು ಪ್ರಮುಖವಾಗಿ ಕಂಡುಬರುತ್ತವೆ...ಈ ಹಾಡುಗಳಲ್ಲಿ ಸಾಮಾಜಿಕವಾಗಿ ತೀವ್ರವಾದ ಅಭಿವ್ಯಕ್ತಿ ಸಂವೇದನೆಯಿಲ್ಲವಾದರೂ, ಲೋಕಜ್ಞಾನವನ್ನು ಒಳಗೊಂಡ ಅನುಭಾವದ ಮಾತುಗಳಿವೆ. ಧಾರ್ಮಿಕ ವಿಚಾರಗಳ ಕಡೆಗೆ ತಮ್ಮ ಒಲವನ್ನು ಕೇಂದ್ರೀಕರಿಸುತ್ತವೆ. ಈ ಹಾಡುಗಳಲ್ಲಿ ಪ್ರಮುಖವಾಗಿ ಜಿನಭಕ್ತಿಯನಿಷ್ಠೆ, ಹಾವಭಾವಗಳು, ಜನ್ಮಾಂತರಗಳ ಪ್ರಸ್ತಾಪ, ಲೌಖಿಕ ಬದುಕಿನ ದುಃಖಮಯ ಸನ್ನಿವೇಶಗಳು ಇದರಿಂದ ಪಾರಾಗಲು ತೀರ್ಥಂಕರರ ಧ್ಯಾನ, ದಾನ, ಪೂಜೆ, ಜಪ, ತಪ, ಇತ್ಯಾದಿ ಪರಿಕರಗಳನ್ನೊಳಗೊಂಡ ವಸ್ತು ವಿಷಯಗಳಾಗಿವೆ. ಜೊತೆಗೆ ಈ ಹಾಡುಗಳಲ್ಲಿ ಅನೇಕ ಸ್ಥಳ ಹಾಗೂ ತೀರ್ಥಕ್ಷೇತ್ರಗಳು, ದೈವನಾಮಗಳು, ಜೈನಮುನಿಗಳು, ಯಕ್ಷ–ಯಕ್ಷಿಯರನ್ನು ಆರಾಧಿಸುವ ಪರಿ, ಜೈನ ಧರ್ಮದ ಪ್ರಾಚೀನ ಇತಿಹಾಸ–ಈ ಹಾಡುಗಳಲ್ಲಿ ಕಂಡು ಬರುತ್ತವೆ. ಅಂದಿನ ಸಾಂಸ್ಕೃತಿಕ ಬದುಕನ್ನು ಈ ಹಾಡುಗಳು ಅನಾವರಣಗೊಳಿಸುತ್ತವೆ". 3

ಈ ಜೈನ ಹಾಡುಗಳನ್ನು ಸಂಗ್ರಹ ಹಾಗೂ ಅಧ್ಯಯನದ ದೃಷ್ಟಿಯಿಂದ 1. ತೀರ್ಥಂಕರರ ಹಾಡುಗಳು 2. ಯಕ್ಷಿಯರ ಹಾಡುಗಳು 3. ಜೋಗುಳದ ಹಾಡುಗಳು 4. ಶೋಭಾನದ ಹಾಡುಗಳು 5. ಮಂಗಳಾರತಿಯ ಹಾಡುಗಳು ಮೊದಲಾದ ವಿಭಾಗ ಮಾಡಿಕೊಂಡು ಅಧ್ಯಯನ ನಡೆಸಲಾಗಿದೆ.

## ತೀರ್ಥಂಕರರ ಹಾಡುಗಳು

ಜೈನಸಾಹಿತ್ಯಕ್ಕೆ ಮೂಲ ಆಕರವಾಗಿ ನಿಲ್ಲುವುದು ಜಿನಸೇನಾಚಾರ್ಯರ 'ಉತ್ತರಪುರಾಣ' ಮತ್ತು ಗುಣಭದ್ರಾಚಾರ್ಯರ 'ಪೂರ್ವಪುರಾಣ'ಗಳನ್ನೊಳಗೊಂಡ 'ಮಹಾಪುರಾಣ' ಗ್ರಂಥ. ಇದನ್ನು ಆಧಾರ ವಾಗಿಟ್ಟುಕೊಂಡು ಚಾವುಂಡರಾಯನು 'ಶ್ರೀಷಷ್ಠಿಲಕ್ಷ್ಮಣ ಮಹಾಪುರಾಣ' ವನ್ನು ಬರೆದಿದ್ದಾನೆ. ಈ ಕೃತಿಯಲ್ಲಿ ಬರುವ ಒಬ್ಬೊಬ್ಬ ತೀರ್ಥಂಕರರನ್ನು ಕುರಿತು ಪಂಪ, ಪೊನ್ನ, ರನ್ನ, ಜನ್ನ, ಇನ್ನೂ ಮೊದಲಾದವರು ಒಂದೊಂದು ಕಾವ್ಯವನ್ನು ರಚಿಸಿದ್ದಾರೆ. ಹೀಗೆ ಒಬ್ಬ ತೀರ್ಥಂಕರನ ಚರಿತ್ರೆ ಹಲವು ಕವಿಗಳ ಕಾವ್ಯವಸ್ತುವಾಗಿ,

ಸಾರ್ಥಕ್ಯಪಡೆದುಕೊಂಡಿದೆ. ಪ್ರಸ್ತುತ ಜೈನ ಸಾಹಿತ್ಯದಲ್ಲಿ ಅನೇಕ ಹಾಡುಗಳು ರಚನೆಗೊಂಡಿದ್ದು ಅವುಗಳಲ್ಲಿ ಚಿತ್ರಿತವಾದ ತೀರ್ಥಂಕರರ ವಿಷಯಗಳನ್ನು ಅಭ್ಯಸಿಸುವುದು ಸೂಕ್ತವೆನಿಸುತ್ತದೆ.

ಸಂಸಾರವನ್ನು ತ್ಯಾಗ ಮಾಡಿ, ತಪಸ್ಸನ್ನು ಆಚರಿಸಿ, ತಮ್ಮ ಕರ್ಮಗಳನ್ನು ನಷ್ಟಪಡಿಸಿಕೊಂಡು, ಮೋಕ್ಷವನ್ನು ಹೊಂದುವವರಿಗೆ 'ಜಿನ' ಎಂದು ಹೆಸರು. ಹೀಗೆ ಮೋಕ್ಷವನ್ನು ಪಡೆದವರ ಸಾಲು ಅನಂತವಾಗಿದೆ. ಚತುರ್ಥಕಾಲದಲ್ಲಿ ಮುಕ್ತಿಯನ್ನು ಪಡೆದ ಆತ್ಮರನ್ನು ತೀರ್ಥಂಕರರೆಂದು ಕರೆಯುತ್ತಾರೆ. ತೀರ್ಥಂಕರರು, ಕನ್ನಡಸಾಹಿತ್ಯ ಮತ್ತು ಜೈನಧರ್ಮ ಒಂದಕ್ಕೊಂದು ಅವಿನಾಭಾವ ಸಂಬಂಧ ಹೊಂದಿವೆ. ಜೈನಸಾಹಿತ್ಯ, ಅಥವಾ ಜೈನಹಾಡುಗಳ ವಸ್ತುವಿಷಯದಲ್ಲಿ ತೀರ್ಥಂಕರರು ಸಿಂಹಪಾಲನ್ನು ಪಡೆದುಕೊಂಡಿರುವುದೇ ಈ ಮಾತಿಗೆ ನಿದರ್ಶನವಾಗಿದೆ. ಕನ್ನಡಸಾಹಿತ್ಯಕ್ಕೆ ಜೈನರು ಆದ್ಯಪ್ರವರ್ತಕರಾದರೆ, ಜೈನಸಾಹಿತ್ಯಕ್ಕೆ ತೀರ್ಥಂಕರರು ಆದ್ಯವಸ್ತುವಾಗಿದ್ದಾರೆ.

ಜೈನರ ಹಾಡುಗಳ ವಸ್ತುವಿಷಯ ವಿಶಾಲವಾಗಿದ್ದು, ಅದರಲ್ಲಿ ಪ್ರಮುಖವಾದ ವಸ್ತು ವಿಷಯವೆಂದರೆ ಅದು ತೀರ್ಥಂಕರರು. ಜೈನ ಧಾರ್ಮಿಕ ಆಚಾರ ವಿಚಾರಗಳನ್ನು ಬಿಂಬಿಸುವ, ಹಾಗೂ ಆ ಧರ್ಮದಲ್ಲಿ ಆಗಿ ಹೋದ ಮಹಾಪುರುಷರ ಜೀವನ ಸಾಧನೆಗಳ ಸ್ತುತಿ ಇಲ್ಲಿಯ ಪ್ರಮುಖ ವಸ್ತುವಾದ ಕಾರಣ, ಇಲ್ಲಿನ ಹೆಚ್ಚಿನ ಹಾಡುಗಳು ಧಾರ್ಮಿಕತೆಯ ಕಡೆಗೆ ಒಲವು ಹೊಂದಿರುವುದೇ ಆಗಿದೆ. ಜೈನಧರ್ಮ ಆತ್ಮದ ಕಲ್ಪನೆಗೆ ಹೆಚ್ಚಿನ ಒತ್ತು ನೀಡುವುದರಿಂದ, ಮುಕ್ತ ಜೀವಿಗಳ ಪೂಜೆಗೆ ಅವಕಾಶವಿರುವುದರಿಂದ ಅರ್ಹವಾಗಿಯೇ ತೀರ್ಥಂಕರರ ಹಾಡುಗಳಲ್ಲಿ ತೀರ್ಥಂಕರರು ಮೊದಲ ಸ್ಥಾನ ಪಡೆದುಕೊಂಡಿದ್ದಾರೆ.

ತೀರ್ಥಂಕರರು ಸಂಸಾರಿ ಜೀವಿಗಳಿಗೆ ಉಪದೇಶ ಮಾಡಿರುತ್ತಾರೆ. ಸಂಸಾರವೆಂಬ ಸಮುದ್ರವನ್ನು ದಾಟುವಂತಹ ಶಾಸ್ತ್ರಗಳ ಉಪದೇಶ ಮಾಡಿದ್ದರಿಂದ ಇವರಿಗೆ 'ತೀರ್ಥಂಕರ' ಎಂಬ ಹೆಸರು ಉಂಟಾಯಿತು. ಇವರು ಮೂರು ಲೋಕವನ್ನು ಕ್ಷಣಾರ್ಧದಲ್ಲಿ ತಿಳಿಯುವವರಾಗಿ, ಪ್ರಪಂಚದ ರಾಗ–ದ್ವೇಷಗಳನ್ನು ಜಯಿಸಿ, ಅಂತರಂಗವನ್ನು ಮತ್ತು ಬಹಿರಂಗದ ಶತ್ರುಗಳನ್ನು ಜಯಿಸುವುದರಿಂದ ಇವರನ್ನು 'ಜಿನ'ರೆಂದು ಕರೆಯುತ್ತಾರೆ. ಇವರು ಅವತಾರಿ ಪುರುಷರಲ್ಲ. ಇವರಿಗೆ ಗರ್ಭಾವತರಣ, ಜನ್ಮಾಭಿಷೇಕ, ಪರಿನಿಷ್ಕ್ರಮಣ, ಕೇವಲ ಜ್ಞಾನ ಮತ್ತು ಪರಿನಿರ್ವಾಣಗಳೆಂಬ ಪಂಚಕಲ್ಯಾಣಗಳುಂಟು. ಈ 'ತೀರ್ಥಂಕರ' ಶಬ್ದವನ್ನು ಕುರಿತು ಡಾ.ಹಂ.ಪಾ ನಾಗರಾಜಯ್ಯನವರು ಈ ರೀತಿ ಉಲ್ಲೇಖಿಸಿದ್ದಾರೆ:

"ಜೈನ ಪರಿಭಾಷೆಯಲ್ಲಿ ತೀರ್ಥಂಕರ ಶಬ್ದ ಮಹತ್ವದ್ದು. ತೀರ್ಥವೆಂದರೆ ಮಾರ್ಗ, ಜೈನ ಪಥ, ಜೈನಮಾರ್ಗ. ಜಿನೋಪದಿಷ್ಟವಾದ ದಾರಿಯೇ ತೀರ್ಥ; ಅದು ಎಲ್ಲಾ ಆಪತ್ತುಗಳನ್ನು ಹೋಗಲಾಡಿಸುತ್ತದೆಯೆಂದೂ, ಜಿನಧರ್ಮವು ಸರ್ವೋದಯತೀರ್ಥವೆಂದೂ, ಆಚಾರ್ಯ ಸುಮಂತಭದ್ರರು (5–6ನೇ ಶತಮಾನ) ಯುಕ್ತ್ಯನುಶಾಸನದಲ್ಲಿ (ಶ್ಲೋಕ 61) ಹೇಳಿದ್ದಾರೆ; "ಸರ್ವಾಪದಾಂ, ಅಂತಕಂ ನಿರಂತಂಸರ್ವೋದಯ ತೀರ್ಥಮಿದಂತವೈವ॥" ಅಂದರೆ ತೀರ್ಥವನ್ನು, ಮಾರ್ಗವನ್ನು ಸಂಸಾರವನ್ನು ದಾಟುವ ದಾರಿಯನ್ನು ತೋರುವವರು ತೀರ್ಥಂಕರರು. ತೀರ್ಥಂಕರರಬಿಂಬ ಮೂರ್ತಿಶಿಲ್ಪಗಳು ಇರುವ ಜಿನಮಂದಿರಗಳನ್ನು ತೀರ್ಥವೆಂದು ಕರೆಯುವರು: "Any Temple is, in itself, a tirta both as it marks a sacred place and as it ritually acts as a passage, pilagrimage is a chain of tirthas" 4.

ತೀರ್ಥಂಕರರು ಮೋಕ್ಷ ಪಡೆದ ನೆಲ ಮೋಕ್ಷಭೂಮಿ, ನಿರ್ವಾಣ ಹೊಂದಿದ ಸ್ಥಳ ನಿರ್ವಾಣ ಭೂಮಿ. ಹೀಗೆ ಅವರು ತೀರ್ಥ, ತೀರ್ಥಂಕರ ಶಬ್ದದ ಬಗ್ಗೆ ಸ್ಪಷ್ಟವಾಗಿ ವಿವರಿಸಿದ್ದಾರೆ. ತೀರ್ಥಕರರ ಜೀವನ ಮೌಲ್ಯ, ಅದರ ಸಚ್ಚಾರಿತ್ರ್ಯ, ಆಚರಣೆ ಅವರ ಮುಕ್ತಿಯ ಮಾರ್ಗಗಳಿಂದ ಅವರು ಇತರಿಗಿಂತ ಪ್ರತ್ಯೇಕವಾಗಿ ನಿಲ್ಲುತ್ತಾರೆ. "ಜೈನಪರಂಪರೆಯಂತೆ, 24 ಜಿನರು (ಇಂದ್ರಿಯಗಳ ಮೇಲೆ ಜಯಗಳಿಸಿದವರು ಅಥವಾ ತೀರ್ಥಂಕರರು) ಮುಕ್ತಿಯ ಮಾರ್ಗವನ್ನು ಹಾಕಿದವರು. ಕಾಲದ ಈ ಚಕ್ರದಲ್ಲಿ ಪವಿತ್ರ ಜಿನಧರ್ಮವನ್ನು ಬೋಧಿಸಿದವರು. ವೃಷಭದೇವನು

ಅಹಿಂಸಾ ಧರ್ಮವನ್ನು ಮತ್ತು ಮಾನವ ಜೀವನದ ಉಚ್ಚಮೌಲ್ಯಗಳನ್ನು ಶೋಧಿಸುವುದರಲ್ಲಿ ಸಮಾಜದಲ್ಲಿ ಒಂದು ಶಿಸ್ತನ್ನು ಅಳವಡಿಸುವುದರಲ್ಲಿ, ಮತ್ತು ಮುಕ್ತಿಯ ಆದರ್ಶಮಾರ್ಗವನ್ನು ತೋರಿಸಿದವರಲ್ಲಿ ಮೊದಲಿಗನಾಗಿರುವನು. ಮಹಾವೀರ, ಐತಿಹಾಸಿಕ ಯುಗದಲ್ಲಿ ಈ ಧರ್ಮವನ್ನು ಪತಿಪಾದಿಸಿದ ಮತ್ತು ಸ್ಪಷ್ಟೀಕರಿಸಿದ ಕೊನೆಯ ತೀರ್ಥಂಕರನಾಗಿರುವನು"5

ಈ ಮೇಲಿನ ಉಲ್ಲೇಖವನ್ನು ನೋಡಿದಾಗ, ಜೈನಧರ್ಮದ ಮೌಲ್ಯಗಳಾದ, ಅಹಿಂಸೆ, ಮುಕ್ತಿಮಾರ್ಗ, ಅಲ್ಲಿನ ಉಚ್ಚಮೌಲ್ಯ, ಆದರ್ಶಗಳನ್ನು, ಆದಿತೀರ್ಥಂಕರ ಹಾಗೂ ಮಹಾವೀರರ ಬೋಧನೆಯಲ್ಲಿ ಉದಾಹರಿಸಿರುವುದನ್ನು ನಾವು ಕಾಣುತ್ತೇವೆ. ಇದರ ಮೂಲಕ ತೀರ್ಥಂಕರರ ಸಚ್ಚಾರಿತ್ಯ ಮತ್ತು ಅವರ ಮೌಲ್ಯಗಳ ಕೊಡುಗೆಯನ್ನು ಅರಿಯಬಹುದು. "ಎಲ್ಲಕ್ಕೂ ಉತ್ತಮ ಜಿನಧರ್ಮವನ್ನು ಆಚರಿಸಿ ತೋರಿಸಿದವರು ತೀರ್ಥಂಕರರು. ಅವರು ಒಟ್ಟು 72ಮಂದಿ. ಅವರಲ್ಲಿ ವರ್ತಮಾನ ಕಾಲದವರು 24 ಮಂದಿ. ತೀರ್ಥಂಕರರು ಮೋಕ್ಷಕ್ಕೆ ಹೋದ ಸ್ಥಳಗಳು, ಜೈನರಿಗೆ ಪವಿತ್ರಕ್ಷೇತ್ರಗಳಾಗಿವೆ. ವರ್ತಮಾನ ಕಾಲದ 24 ತೀರ್ಥಂಕರರಲ್ಲಿ 20 ತೀರ್ಥಂಕರರು ಶ್ರೀ ಸಮ್ಮೇದ ಶಿಖರದಲ್ಲಿಯೇ ತಪಸ್ಸುಮಾಡಿ ಮೋಕ್ಷಕ್ಕೆ ಹೋದರು. ಅಲ್ಲಿ ಅವರ ಪಾದುಕೆಗಳನ್ನು ಸ್ಥಾಪಿಸಲಾಗಿದೆ. ಆದಿನಾಥ ತೀರ್ಥಂಕರರು ಕೈಲಾಸಗಿರಿಯಲ್ಲಿ ಮೋಕ್ಷಕ್ಕೆ ಹೋದರು. ಮಹಾವೀರರು ಪಾವಾಪುರಿಯಲ್ಲಿ ಮೋಕ್ಷಕ್ಕೆ ಹೋದರು. ಪ್ರತಿಯೊಬ್ಬ ಜೈನನೂ ತನ್ನ ಆಯುಷ್ಯದಲ್ಲಿ ಒಮ್ಮೆಯಾದರೂ ಈ ತೀರ್ಥಕ್ಷೇತ್ರಗಳಿಗೆ ಹೋಗಿ ಬರಬೇಕೆಂದು ಭಾವಿಸುತ್ತಾನೆ. 'ಕ್ಷೇತ್ರರಾಜ'ವೆಂದು ಕರೆಯಲ್ಪಡುವ ಬಿಹಾರ ರಾಜ್ಯದಲ್ಲಿರುವ ಸಮ್ಮೇದ ಶಿಖರಕ್ಕೆ ಹೋಗಿ ಬಂದರೆ, 49 ಭವಗಳಲ್ಲಿ ಮೋಕ್ಷ ನಿಶ್ಚಿತವೆಂದು ಬಲವಾದ ನಂಬಿಕೆಯಿದೆ. ಕೈಲಾಸಗಿರಿಯಲ್ಲಿ ಆದಿನಾಥ ಭಗವಾನರ ಪಾದುಕೆಗಳು ಎಲ್ಲಿವೆ? ಎಂಬುದು ಈಗಿನ ಜನರಿಗೆ ತಿಳಿಯದಾಗಿದೆ. ಹಿಮಚ್ಛಾದಿತ ಪ್ರದೇಶದಲ್ಲಿ ಆ ಪವಿತ್ರ ಕ್ಷೇತ್ರ ಕಣ್ಮರೆಯಾಗಿದೆ. ಆದುದರಿಂದ ಅಲ್ಲಿಗೆ ಹೋಗಿ ಬರುವ ರೂಢಿ ತಪ್ಪಿ ಹೋಗಿದೆ." 6

ಜೈನರಿಗೆ ತೀರ್ಥಂಕರರು ಅಪೇಕ್ಷಿತ ಹಾಗೂ ಅನಿವಾರ್ಯ ವಸ್ತು ವಿಷಯವಾಗಿ ಮಾರ್ಪಟ್ಟಿದ್ದಾರೆ. ಅವರ ಬೋಧನೆ ಜನಜೀವನದ ಮೇಲೆ ಅದೆಂಥ ಪ್ರಭಾವಲಯವನ್ನು ನಿರ್ಮಿಸಿತ್ತೆನ್ನುವುದಕ್ಕೆ ಇಲ್ಲಿ ಒಂದು ನಿದರ್ಶನವನ್ನು ನೋಡಬಹುದು:

"ನುಡಿದುದನಾರೊಳಂ ನುಡಿದು ತಪ್ಪಿದೊಡಂ ಜಿನಶಾಸನಕ್ಕೊಡಂ
ಬಡದೊಡಮನ್ಯನಾರಿಗೆರೆದಟ್ಟಿದೊಡಂ ಮಧುಮಾಂಸ ಸೇವೆಗೆ
ಯ್ದೊಡಮಕುಲೀನರಪ್ಪವರ ಕೊಳ್ಕೊಡೆಯಾದೊಡ ಮರ್ಥಿಗರ್ಥಮಂ
ಕುಡುದೊಡಮಾಹವಾಂಗಣದೊಳೋಡಿದೊಡಂಕಿಡುನುಂಕುಂವ್ರತಂ" 7

ಕೊಟ್ಟ ಮಾತನ್ನು ಮರೆಯದಿರು, ಮದ್ಯಮಾಂಸ ಸೇವಿಸಿದಿರು. ಹೆರವರ ಹೆಣ್ಣಿಗೆ ಮನಸೋಲದಿರು, ಕೀಳುತನಕ್ಕೆ ಇಳಿಯಬೇಡ, ದೀನರಕ್ಷಕನಾಗು, ಕಾಳಗದಲ್ಲಿ ಕಾಲ್ದೆಗೆಯದಿರು, ಜೈನಧರ್ಮವನ್ನು ಬಿಡಬೇಡ, ಇದಕ್ಕೆ ತಪ್ಪಿದರೆ, ನಿನ್ನ ಕುಲವು ಹಾಳಾಗುವುದು ನಿಶ್ಚಿತ– ಎಂಬ ಶಾಸನೋಕ್ತವಾದ ಮಾತು ಆಚಾರ್ಯಸಿಂಹನಂದಿಯು ಗಂಗವಂಶದ ಸ್ಥಾಪಕನಾದ ಮಾಧವನಿಗೆ ಉಪದೇಶಿಸಿದ್ದಾನೆ. ಈ ಬಗೆಯ ಅರಿವನ್ನುಂಟುಮಾಡುವ ಹಾಡುಗಳು ಹೀಗಿವೆ:

**ಕೊಲೆಹುಸಿ ಕಳವು ಬೇಡ**

ಕೊಲೆಹುಸಿ ಕಳವು ಪರದಾರ ಅತಿಕಾಂಕ್ಷೆಗಳು
ಸಲೆವಿಸರ್ಜಿಸಿ ಪಂಚಪರಮೇಷ್ಠಿಗಳ ಪದವ
ನಲಿವಿನಿಂ ಧ್ಯಾನಿಸೆ ಸ್ವಗಾಪವರ್ಗಗಳ
ಸುಲಭದಿಂದ ಪಡೆಯಬಹುದು
ಕೊಲೆಯೆಂಬುದೀಗ ತನ್ನಯ ಕೊಲೆಗೆ ಕೊಟ್ಟ ಬೆಲೆ

ಕೊಲೆ ತನ್ನ ಕೊರಳೆಡೆಯ ಪಿಡಿದೊತ್ತಿ ಕೊಲುವ ಕೊಲೆ
ಕೊಲೆ ಹಿಂಸಾವ್ರತ್ತಿಗೆ ಪೊತ್ತ ಹೊಲೆ ಕೊಲೆಯಂತಕನ ಸಂಕಲೆ
ಕೊಲೆ ಕರ್ಮರಾಜನೆಂದೆಂಬ ಲುಬ್ದಕನ ಬಲೆ
ಕೊಲೆ ಘೋರದುರಿತ ದು:ಖಂಗಳಿಪ್ಪವಲೆ
ಕೊಲೆ ನಿಘೋಧಾಂತ್ಯ ಬಹು ಘೋರನರಕದ ಬಲೆ
ಕೊಲೆಯನದರಿಂದ ಉಳಿ ಭವ್ಯಾ ।
ಹುಸಿ ತನ್ನ ಮುರಿದು ನುಂಗುವ ಮೃತ್ಯು ದೇವಿಯನಸಿ
ಪುಸಿ ನಿಜೈಶ್ವರ್ಯ ಲಕ್ಷ್ಮಿಯ ಮುಖಾಂಬುಜಿಕೆ ತೊಡದ ಮಸಿ
ಪುಸಿ ಪುಣ್ಯಮಾರ್ಗದಲಿ ನಟ್ಟ ಕಬ್ಬಿಣದ ದಸಿ ಮಸಿಯರ್ಲಾದುನಂಬಿಸೆ
ಪುಸಿ ವಿಮಲಕೀರ್ತಿಕಾಂತೆಯ ಮೊಗಕೆ ತೊಡದಮಸಿ।
ಪುಸಿ ಸಕಲ ಸುವ್ರೈತದ ಫಲವ ಕೆಡಿಸುವ ಸಸಿ
ಪುಸಿ ಸೋಲವೆಂದು ನೀಮನದೊಳಗೆ ನಿಶ್ಚೈಸಿ
ಪುಸಿಕನ ನೀ ನೊಳಗೆ ನುಳಿಯೈ ।
ಕಳವು ನಿಂದಲ್ಲಿ ಪೊಕ್ಕೆಡೆಯಲ್ಲಿ ಕಳಕಳವು।
ಕಳವು ಕೇಳದ ನೀನು ಲೋಕದಲಿ ಕಡು ಅಳಿವು
ಕಳವು ಕೈಕಾಲು ಕಿವಿ ಮೂಗು ಕಣ್ಣಾಲಿಯಳಿವು
ಕಳವನರ್ಥಸುಳಿವು ಕಳವು ಸಂಸಾರ ಘೋರಾಂಬು ರಾಶಿಯ ಸೆಳವು
ಕಳವು ಕಡು ದು:ಖ ಚಿಂತೆಯಲಿ ತುದಿಯುಮ್ಮಳವು
ಕಳವನದರಿಂದ ಉಳಿಯೈ।
ಪರಧಾರದೊಳು ಸ್ನೇಹ ಪರಮ ಪಾಪದ ಗೇಹ
ಪರ ವಧುವಿನೊಳು ನೋಟ ಪರಗತಿಗೆ ತೆಗದೋಟ
ಪರನಾರಿಯರ ಸಂಗ ಪರಮಾಯುವಿಗೆ ಭಂಗ
ಪರವನಿತೆಯರ ನಗೆ ಹಗೆ।

**ಜಿನವಚನ ಶೋಭಾನೆ**

ಭಾವಿಸಿಕೇಳಲೆ ಜೀವಾಭಾವ ಹರಜಿನವಚನವನು।
ಶ್ರೀ ಜಿನ ಶಾಸನದೋಜೆಯ ಮಾರಿಯೆ।
ಜೂಜಂ ಪಾಂಡವರೊಲಿದಾಡಿ। ರಾಜಾರ್ಥಕಾಗಿ ಅಡವಿಯ ಪೊಕ್ಕರು ॥ ಶೋಭಾನೆ ॥ 1 ॥
ವಿದ್ಯೆಯು ಬುದ್ಧಿಯು ಮೂರೇಯು ಧರ್ಮವು।
ವಿದ್ದೆಡೆಯ ನೆರೆ ತೊಲಗಿಸುವ ।
ಮದ್ಯದ ದೆಸೆಯಿಂ ಯಾದವರಳಿದರು।
ಮದ್ಯದದೆಸೆಯಂ ಬಿಡುಜೀವಾ ॥ಶೋ॥ 2 ॥
ಮಾಂಸದ ದೆಸೆಯಿಂದ ಬಕನೆಂಬರಸನು।
ಹಿಂಸೆಯ ನೆಸಗಿದ ಪಾತಕದಿ।
ಸಂಸಾರದಿ ಅತಿ ದು:ಖವನುಂಡನು।
ಮಾಂಸದ ದೆಸೆಯಂಬಿಡು ಜೀವಾ ॥ ಶೋ ॥ 4 ॥

ಪರಬಲ ಜಲಧಿಗೆ ವಡಭಾನೆನಿಸುವ ।
ಉರು ಪರಾಕ್ರಮಯುತ ರಾವಣನು।
ಪರಸತಿಗಳುಪಿಯೇ ನರಕಕ್ಕಿಳಿದನು।
ಪರಸತಿಕಾಂಕ್ಷೆಯ ಬಿಡುಜೀವಾ ॥ಶೋ॥ 5 ॥
ಕಳವಿನದೆಸೆಯಿಂದ ಶಿವಭೂತಾಖ್ಯನು।
ಹುಳುವಿನ ಪಾಪಕ್ಕೆ ನೆಲೆಯಾಗಿ।
ಇಳಿದುದುರ್ಗತಿಯೊಳು ಅತಿ ದು:ಖವನುಂಡನು।
ಕಳುವಿನ ದೆಸೆಯಂ ಬಿಡು ಜೀವಾ ॥ ಶೋ ॥ 6 ॥
ಈ ಸಪ್ತ ವ್ಯಸನವನುಳಿದವರ್ಗ ।
ಉಸುರ ಪದವಿಯನನುಭವಿಸಿ ।
ಭಾಸುರ ಸಿದ್ಧ ನಿರಂಜನ ಪದವಿಯ ।
ವಾಸುಖಗಳಪ್ಪುದು ಕ್ರಮದಿಂದಾ ಭಾ ।
ವಿಸಿ ಕೇಳೆಲೆ ಜೀವಾ ॥ 7 ॥
ಇಂತೀ ಪದಗಳ ನೋಡುವ ಕೇಳುವ ।
ಸಂತತ ಭವ್ಯ ಜನಂಗಳಿಗೆ ।
ಕಂತು ಮದಹರ ಪಾರಿಶ್ವಜಿನಪತಿ ।
ಚಿಂತಿತ ಪದವಿಯ ಕೊಡು ಜಿನನೆ ಭಾ
ವಿಸಿ ಕೇಳೆಲೆ ಜೀವಾ ॥ ಶೋ ॥ 8 ॥

ಜೈನತೀರ್ಥಂಕರರುಗಳಿಗೆ ಅವರದ್ದೇ ಆದ ಲಾಂಛನಗಳಿದ್ದು, ಅವುಗಳಿಂದ ಆಯಾ ತೀರ್ಥಂಕರರುಗಳನ್ನು ಗುರುತಿಸಬಹುದಾಗಿದೆ. "ಪ್ರತಿ ತೀರ್ಥಂಕರರಿಗೂ ಒಂದು ಲಾಂಛನವಿದೆ. ತೀರ್ಥಂಕರರು ಹುಟ್ಟುವಾಗಲೇ ಅವರ ಪಾದದಡಿಯಲ್ಲಿ ಒಂದು ಚಿನ್ಹೆ ಇರುತ್ತದೆ. ಅದನ್ನೇ ನಾವು ಲಾಂಛನವೆನ್ನುವುದು. ಆ ಲಾಂಛನವನ್ನು ಮೂರ್ತಿಯ ಪೀಠದಲ್ಲಿ ದೊಡ್ಡದಾಗಿ ಕೆತ್ತುವರು. 24 ತೀರ್ಥಂಕರರಿಗೆ 24 ಲಾಂಛನಗಳಿವೆ. ಅದನ್ನು ನೋಡಿದರೆ ನಮಗೆ ಯಾವ ತೀರ್ಥಂಕರರ ಮೂರ್ತಿಯೆಂದು ಗೊತ್ತಾಗುವುದು. ಅದಕ್ಕಾಗಿ ಪ್ರತಿ ತೀರ್ಥಂಕರರ ಲಾಂಛನಗಳನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದರೆ. ಈ ಕೆಳಗಿನ ಪದ್ಯವನ್ನು ಕಂಠಪಾಠ ಮಾಡುವುದರಿಂದ ಸುಲಭಗ್ರಾಹವಾಗುತ್ತದೆ.

"ಎತ್ತು ಆನೆ ಕುದುರೆ ಕಪಿಯು ಚಕ್ರ ಕಮಲ ಸ್ವಸ್ತಿಕ ।
ಚಂದ್ರ ಮಕರ ವೃಕ್ಷ ಗಂಡ ಕೋಣ ಹಂದಿ ಕರಡಿಯುಂ ॥
ವಜ್ರ ಎರಳೆ ಟಗರು ಮೀನ ಕುಂಭ ಆಮೆ ನೈದಿಲಂ।
ಶಕ ಸರ್ಪ ಸಿಂಹ ಚವ್ವೀಸ ತೀರ್ಥ ಲಾಂಛನಂ॥"8

ಈ ತೀರ್ಥಂಕರರು, ಪರಿಶುದ್ಧರೂ, ಶುಭ್ರ ದೇಹಿಗಳೂ, ಅನಂತಜ್ಞಾನ ಉಳ್ಳವರೂ ಆಗಿ, ನಾಲ್ಕು ಘಾತಿ ಕರ್ಮಗಳನ್ನು ನಾಶಮಾಡಿಕೊಂಡು, ಕ್ಷುಧೆ, ತೃಷೆ, ಜನ್ಮ, ನಿದ್ರೆ, ವಿಷಾದ, ಭಯ, ದ್ವೇಷ, ರಾಗ, ಮೋಹ, ಚಿಂತೆ, ಮೃತ್ಯು, ರೋಗ, ಖೇದ, ಸ್ವೇದ, ಮದ ಇವೇ ಮೊದಲಾದ 18 ರೀತಿಯ ದೋಷಗಳಿಂದ ಮುಕ್ತರಾಗಿದ್ದಾರೆ. ಭೂಮಿಯ ಪಾಪದ ಭಾರವನ್ನು ಕಡಿಮೆ ಮಾಡಿ, ಹೃದಯದ ತಾಮಸ ಹೋಗಲಾಡಿಸಿ, ಜ್ಯೋತಿಯನ್ನು ಬೆಳಗಲು ಕಲ್ಪಕಲ್ಪದಲ್ಲಿ ತೀರ್ಥಂಕರರು ಉದಯಿಸುವರೆಂಬ ನಂಬಿಕೆ ಇದೆ. ಆದುದರಿಂದ ತೀರ್ಥಂಕರಿಗೆ ಪಂಚಕಲ್ಯಾಣಗಳೆಂಬ ಮಹೋತ್ಸವಗಳು ಜರಗುತ್ತವೆ.

"ತೀರ್ಥಂಕರರಿಗೆ ಅಪಾಯಾಗಮಾತಿಶಯ, ಜ್ಞಾನಾತಿಶಯ, ಪೂಜಾತಿಶಯ, ವಚನಾತಿಶಯಗಳೆಂಬ ಚತುಷ್ಟಾತಿಶಯಗಳಲ್ಲದೆ, ಬೇರೆಯೇ ಆದ 34 ಅತಿಶಯಗಳಿರುವುವು. ಕೇವಲಜ್ಞಾನ ಉಂಟಾದ ತರುವಾಯ ಬರುವ ಅತಿಶಯಗಳು ಹತ್ತು. ಇನ್ನು 14 ಅತಿಶಯಗಳು ದೇವತೆಗಳಿಂದ ಮಾಡಲ್ಪಡುವವು. ಅವರ ಇದಿರಿನಲ್ಲಿ ಧರ್ಮ ಚಕ್ರವು ತಿರುಗುವುದು ಹಾಗೂ ಛತ್ರಚಾಮರ ಘಂಟೆ ಮೂದಲಾದ 8 ಮಂಗಲ ವಸ್ತುಗಳು ಯಾವಾಗಲೂ ಹತ್ತಿರ ಇರುವವು."9

ಸಾಮಾನ್ಯವಾಗಿ ನಾವು ಜೈನಹಾಡುಗಳನ್ನು ಗಮನಿಸಿದಾಗ ನಮಗೆ ಕಾಣುವ ಪ್ರಮುಖ ಅಂಶಗಳೆಂದರೆ, ಕಾವ್ಯಾರಂಭದಲ್ಲಿ ದೇವತಾಸ್ತೋತ್ರ ಹಾಗೂ ಪ್ರಾರ್ಥನೆಗಾಗಿಯೇ ಸಾಹಿತ್ಯ ಪ್ರಕಾರಗಳನ್ನು ದುಡಿಸಿಕೊಂಡ ಅದ್ಭುತ ಉದಾಹರಣೆಗಳು. ಹರಿಹರ ಕವಿ ಬರಿಯ ಪ್ರಾರ್ಥನೆಗಾಗಿಯೇ ಇಡಿಯಾಗಿ ರಗಳೆಯನ್ನು ಬರೆದು, ಭಕ್ತಿಗಾಗಿಯೇ ಮೀಸಲಾಗಿರಿಸಿದನು. ವೀರಶೈವ ಸಾಹಿತ್ಯದಲ್ಲಿಯೂ ಈ ಪ್ರಕಾರ ವಿಫುಲವಾಗಿ ದೊರಕಿವೆ. ಕಾವ್ಯಗಳ ಪ್ರಾರಂಭದಲ್ಲಿ ದೈವಿಕೃಪೆಗಾಗಿ ಸ್ತೋತ್ರಗಳು ಮೀಸಲಾಗಿದ್ದವು. ನಂತರ ಬರಬರುತ್ತಾ ಇದರ ವಸ್ತುವ್ಯಾಪ್ತಿಗೆ ಪುಣ್ಯಪುರುಷರು ಒಳಗಾಗಿದ್ದಾರೆ.

ಜೈನಸಂಪ್ರದಾಯದ ಹಾಡುಗಳಲ್ಲಿ ತೀರ್ಥಂಕರರ ಹಾಡುಗಳು ಸ್ತೋತ್ರ ಸಾಹಿತ್ಯ ಪರಂಪರೆಗೆ ಸೇರಿದವುಗಳಾಗಿವೆ. ಕೆಲವು ಹಾಡುಗಳು 24 ತೀರ್ಥಂಕರರನ್ನು ಕುರಿತು ಬಣ್ಣಿಸುವ, ನಮಿಸುವ ಹಾಡುಗಳಾಗಿದ್ದು, ಅವೆಲ್ಲಾ ಮೋಕ್ಷಕ್ಕೆ ಹಾದಿಯನ್ನು ತೋರಿಸುವಂತೆ, ಬೇಡಿಕೊಳ್ಳುವ ಹಾಡುಗಳಾಗಿವೆ. ಕೆಲವು ಹಾಡುಗಳು ತೀರ್ಥಂಕರರ ಜನನ, ಯೌವ್ವನ–ನಿರ್ವಾಣ ಮುಂತಾದ ಚರಿತ್ರೆಯನ್ನು ಕುರಿತ ಹಾಡುಗಳಾಗಿವೆ. ಜೀವನದುದ್ದಕ್ಕೂ ಜಿನರಿಗೆ ನಡೆಯುವ ಪಂಚ ಕಲ್ಯಾಣ ಮಹೋತ್ಸವಗಳ ವರ್ಣನೆಯನ್ನು ಸೊಗಸಾಗಿ ಪ್ರತಿಪಾದಿಸುವಂತಹ ಹಾಡುಗಳಾಗಿವೆ. ಉದಾ ಜೋಜೋಜೋ ಎಂಬ ಹಾಡು ಆದಿಜಿನೇಶನಾದ ವೃಷಭನನ್ನು ಕುರಿತು 20 ನುಡಿಗಳಲ್ಲಿ ಆತನ ಇತಿವೃತ್ತಿಯನ್ನೇ ಪಟ್ಟಿಮಾಡುತ್ತಾ ಹೋಗುತ್ತದೆ.

"ಸರ್ವಾರ್ಥಸಿದ್ಧಿಯ ಬಿಟ್ಟು ನೀ ಬಂದು
ಮರುದೇವಿಯ ಶುದ್ಧ ಉ
ದರದೊಳೊಂದಿದಂ ಇಂದ್ರನರಿದು ವಿದತ್ತಪತಿ
ಕರೆದಂದು ಅನುಜ್ಞೆಯನಮಳೆ ಪೇಳ್ವರಿಂದು"10

ಎಂಬ 2ನೇ ನುಡಿಯಿಂದ ಪ್ರಾರಂಭವಾಗುವ ಹಾಡು, ಅಯೋಧ್ಯೆಯ ನಾಭಿರಾಜನ ಮನೆಯ ಸುತ್ತೆಲ್ಲಾ ರತ್ನದಾ ಮಳೆಗರೆಯಲು, ಇಂದ್ರನು ವಿದತ್ತಪತಿಯನ್ನು ಕಳಿಸುವುದು, ಶಚಿದೇವಿ ಸಹಿತ ಇಂದ್ರನು ಪ್ರಸೂತಿ ಗೃಹವನ್ನು ಪ್ರವೇಶಮಾಡುವುದು, ಮಗುವಿಗೆ ಸ್ನಾನ ಮಾಡಿಸುವುದು, ಅಂಗ ವಸ್ತ್ರಗಳಿಂದ ಮೈಯನೊರೆಸುವುದು, ವಿಶ್ವಕರ್ಮರು ಚಿತ್ತಚಿತ್ತಾರದ ತೊಟ್ಟಿಲನ್ನು ಮಾಡಿಕೊಡುವುದು, ನಾರಿಯರೆಲ್ಲ ಕೂಡಿ ಜೋಜೋ ಹಾಡುವುದು, ಆ ನೆಪದಲ್ಲಿ 24 ತೀರ್ಥಂಕರರ ಗುಣಗಳನ್ನು ಕೊಂಡಾಡುವುದು ಇಡೀ ಹಾಡಿನ ತುಂಬಾ ಓತೋಪ್ರೋತವಾಗಿ ಹರಿದು ಬಂದಿದೆ.

ಪ್ರಾಚೀನ ಕಾಲದಿಂದಲೂ ಜೈನರು ತಮ್ಮ ಸಾಹಿತ್ಯದ ಮೂಲಕ ತೀರ್ಥಂಕರರನ್ನು ತಮ್ಮ ಜೀವವಿಕಾಸ ಕ್ರಮದಲ್ಲಿ ಬಂದ ಚರಿತ್ರೆಯನ್ನೇ ಧರ್ಮ ಪ್ರಚಾರದ ಸಾಧನವಾಗಿ ಉಪಯೋಗಿಸಿಕೊಂಡು, ಪುರಾಣ ರಚನೆ ಮಾಡಿದ್ದಾರೆ. ತಮ್ಮದೇ ಆದ ಲೋಕಕಾರಕಕಥನ, ತೀರ್ಥಮಹಿಮಾ ಸಮರ್ಥನ, ಚರಮಗತಿ, ತಪೋದಾನವಿಧಾನ, ವರ್ಣನ ಮತ್ತು ತತ್ಫಲಪ್ರಾಪ್ತಿ, ಪ್ರಕಟಣೆಯ ಪಂಚಲಕ್ಷಣಗಳನ್ನು ಇಟ್ಟುಕೊಂಡರು. ತಮ್ಮ ಸಾಹಿತ್ಯದ ಜೊತೆಗೆ, ಹಾಡುಗಳ ಮುಖಾಂತರ ತೀರ್ಥಂಕರರ ಚರಿತ್ರೆಯನ್ನು ಸಮಾಜಮುಖಿಯಾಗಿಸುತ್ತ ಬಂದಿದ್ದಾರೆ.

ಬಹುತೇಕ ಎಲ್ಲಾ ಜೈನ ಕವಿಗಳು ತೀರ್ಥಂಕರರ ಚರಿತ್ರೆಯನ್ನು ಎರಡು ಭಾಗಗಳಾಗಿ ನಿರ್ಮಿಸುತ್ತಾ ಹೋದರು. ತೀರ್ಥಂಕರನಾಗುವವರೆಗಿನ ಸಾಧನೆಯ ಕಥೆ, ಇನ್ನೊಂದು ತೀರ್ಥಂಕರನಾಗಿ ಜೀವನವನ್ನು ತ್ಯಜಿಸಿ ವೈರಾಗ್ಯವನ್ನು ಪಡೆಯುವ ಕಥೆಯಾಗಿದೆ. ಇಂತಹ ಕಥೆಗಳನ್ನು ನಾವು ದೀರ್ಘಕಾಲದ ಕಥೆಗಳಿಂದ ನೊಡುತಿದ್ದೆವು.

ಆದರೆ ಕಾಲಸರಿದಂತೆ ನಮ್ಮ ಕವಿಗಳ ನೂತನವಾದ ಮಾರ್ಗವನ್ನು ಅಳವಡಿಸಿಕೊಂಡು ಅದುವೇ ಹಾಡುಗಬ್ಬ ಸಾಹಿತ್ಯ ಅಥವಾ ಹಾಡುಗಳಾದವು. ಈ ಹಾಡುಗಳ ಮುಖಾಂತರ ಜೈನಧರ್ಮದ ತತ್ವಸಿದ್ಧಾಂತ, ಧಾರ್ಮಿಕ ವಿಚಾರಗಳು, ತೀರ್ಥಂಕರರ ಚರಿತ್ರೆ ಜೈನಮುನಿಗಳು ಹೀಗೆ ಮುಂತಾದ ವಿಷಯಗಳನ್ನು ವಿಚಾರಗಳನ್ನು ಒಳಗೊಂಡ ಬಿಡಿಬಿಡಿಯಾದ ಹಾಡುಗಳೇ ಈ ಜೈನ ಹಾಡುಗಳಾಗಿವೆ.  ಈ ಹಾಡುಗಳು ಕಿರಿದಾದರೂ ಹಿರಿದರ್ಥವನ್ನು ತಿಳಿಸುವ ಮಹತ್ವಪೂರ್ಣವಾದ ಹಾಡುಗಳಾಗಿವೆ. ನಿದರ್ಶನಕ್ಕಾಗಿ ಇವುಗಳನ್ನು ಗಮಿನಿಸಬಹುದು:

**ಕಂಡು ನಾ ಧನ್ಯನಾದೆ**

ಧನ್ಯವಾದೆನು ನಾ ಕಂಡು ಜಿನೇಂದ್ರನಾ
ಮಾನ್ಯನಾದೆನು ನಾ ಕಂಡು ಜಿನಪನಾ ॥ ಪ॥
ಪಂಕಜನೇತ್ರನಾ ಸಂಕಟ ಹರನಾ
ಕಿಂಕರ ಪಾಲನಾ ಭವ್ಯಾಂಕ ಸೇವ್ಯನಾ ॥ 1 ॥
ಒಂದು ಪೀಠವು ಅಪರಂಜಿ ಚಿನ್ನಾಮೇ
ಲೊಂದು ಪೀಠವು ವೃಢೂರ್ಯರತುನಾಮ
ತ್ತೊಂದು ಪೀಠವು ನವರತ್ನರನ್ನಾ ॥ 2 ॥
ಮೇಲಿನ ಪೀಠದ ಮೇಲೆ ನಾನಾರತ್ನ
ಕೀಲಿತ ನಾಲ್ಕು ಅರಿರಾಜರುನಾ
ಅಲಿದೆರೆಯುತ್ತಾ ಬಾಲವೆತ್ತುತನಾ ॥ 3 ॥
ಮೂಡು ಬಡು ತೆಂಕು ಬಡಗು ನಾಲ್ದೆಸೆ
ನೋಡುತ್ತಲಿಹವು ಮೋರೆಯೆತ್ತುತವು ॥ 4 ॥
ಕ್ರೂರಹರಿಗಳ ಮಸ್ತಕಾಗ್ರದೊಳು ಸಾ
ವಿರದೆಸಳು ಕೆದರಿ ಸುತ್ತಲು
ಸೂಸುತ್ತಲಿಹುದು ಸುಗಂಧ ನೋಡಲು ॥ 5 ॥
ಪದ್ಮದೆಸಳನು ಬಿಟ್ಟು ನಾಲ್ಬೆರಳ
ಒಪ್ಪಿಹನವನು ಪದುಮಾಸನನು
ಶ್ರೀ ಆದಿಜಿನನು ॥ 6 ॥
ಮೂರ್ಲೋಕ ಕೀತನು ದೇವನು ಜನನು
ಮೂರ್ಲೋಕಕರಿಕೆ ಮಾಳ್ಪಂತೆಯಿಹನು ॥7॥
ಮುತ್ತಿನ ಸತ್ತಿಗೆ ಮೂರು ನೆರಳೊಳು
ವಿಸ್ತಾರದೋಲಗದೊಳುತಾನಿಹನು ॥ 8 ॥
ಢಾಳಿಸುತಿಹುದು ಅರವತ್ತನಾಲ್ಕು
ಚಾಮರ ಶರಧಿ ತೆರೆಯಂತೆ ನೋಡು ॥ 9 ॥
ಶೋಕವಿಲ್ಲ ಜನಪನ ಕಂಡವರಿಗೆ
ಬೇಕಾದಭೀಷ್ಟವ ಸಾಲಿಸ ಬೇಡ್ವರ್ಗೆ ॥ 10 ॥
ಸಮವ ಶರಣದಿ ಪಟಹ ಶಂಕವು
ಅಮರ ವಾದ್ಯವು ಘೂರ್ನಿಸುತಿಹುದು ॥ 11 ॥
ನವ್ಯಮೃದು ಗಾಂಭೀರ್ಯದಿಂದ ಜಿನಪನಾ
ದಿವ್ಯವದನದಿಂದ ದಿವ್ಯಧ್ವನಿ ಚಂದಾ ॥ 12 ॥

ನೋಡೊಂದು ಆಶ್ಚರ್ಯತೋರುತ್ತಲಿಹುದು
ನಾಲ್ದೆಸೆ ನೋಡಲು ನಾಲ್ಕು ಮುಖಗಳು ॥ 13 ॥
ಹ್ಯಾಗೆವಿವರಿಸುವೆ ಜಿನನ ವಿಭವಾ
ಭೋಗಿರಾಜನು ತನ್ನಾ ದಿವ್ಯಾ ಸೌಂದರ್ಯವಾ ॥ 14 ॥
ಶರಣನಲ್ಲವೇ ನಾ ಕರುಣವಿಲ್ಲವೇ
ಚರಣವ ನಂಬಿಹ ಶರಣನ ಮೇಲೆ ॥ 15 ॥

**ಚಂದ್ರಪ್ರಭ ಕಾಪಾಡು**

ಶ್ರೀ ಚಂದ್ರಪ್ರಭನೇ ಕೊಡು ಕಾಮಿತ ವರ ನೀನೇ
ಕಾಮವಿಜಯಸುರ ಸೋಮವಂದಿತ
ತಾಮರ ಸಾಕ್ಷನೇ ಕೋಮಲ ರೂಪನೇ ॥ 1 ॥
ಜಿನಮತಾಬ್ದಿ ಚಂದ್ರಾ ಸದ್ಗುಣನದಿ ಸುಗುಣ ಸಾಂದ್ರಾ
ಜಿನಪತಿ ನಿನ್ನಯ ಶರಣನ ಮೋಹದಿ ಚ
ರಣವ ಸೇವಿಪ ಶರಗೆ ಕರುಣದಿ ॥ 2 ॥
ಇಕ್ಷುಚಾಪನಾಶಾ ಎನ್ನನು ರಕ್ಷಿಸು ಪರಮೇಶಾ
ಕುಕ್ಷಿಯೊಳಿಹ ಭವ್ಯರ್ಕಳ ರಾಶಿಯಾ
ರಕ್ಷಿಸಿ ಕೀರ್ತಿಯ ಧರಿಸಿದ ದೇವನೇ ॥ 3 ॥
ಮಂಗಳಾಂಗರೂಪಾ ಎನಗಾ ಹಿಂಗಿಸು ಶ್ರೀಜಿನಪಾ
ಲಿಂಗಮರ್ದನ ಸಂಗವ ಪಾಲಿಸು
ತುಂಗ ಸೌಖ್ಯಾಪ್ರದ ಭೃಂಗಗೆ ಮೋಹದಿ ॥ 4 ॥
ವಸುಧೆಗಧಿಕವೆನಿಪಾ ಶ್ರೀ ಜಿನಕಾಶಿಮೆರೆವಾ
ಪಸರಿಸಿರ್ಪ ಹೊಸಬಸದಿ ನಿವಾಸನೆ
ಕುಸುಮಾಕ್ಷನೇ ಪದನುತಿಪ ನೃಸಿಂಹನಾ ॥ 5 ॥

ತೀರ್ಥಂಕರರ ಸಾಧನೆಯ ವೈಭವೀಕರಣ ಪಠಣ, ಈ ಹಾಡುಗಳ ಆಶಯ. ಭಕ್ತನ ಅಂತರಂಗದ ಭಕ್ತಿಯ ಆವೇಶ, ತೀರ್ಥಂಕರರ ಲಾಂಛನ, ತಂದೆ, ತಾಯಿ, ಜನ್ಮಸ್ಥಳ, ನಿರ್ವಾಣಸಮಯ, ಧರ್ಮಬೋಧೆ, ಪಂಚಕಲ್ಯಾಣ, ಸಮವಸರಣ ರಚನಾಪರಿಕಲ್ಪನೆ ಮುಂತಾದವುಗಳಾಗಿವೆ. ಹಾಗೆಯೇ ಬಿಡಿಬಿಡಿಯಾದ ಹಾಡುಗಳಲ್ಲಿ ಜೈನಧರ್ಮದ ಸಾಂಸ್ಕೃತಿಕ ಆಯಾಮಗಳನ್ನು ಅನಾವರಣ ಗೊಳಿಸುತ್ತವೆ. ಇಂತಹ ಹಾಡುಗಳನ್ನು ಸ್ಥೂಲವಾಗಿ ವೀವೇಚಿಸುವುದರ ಮೂಲಕ ಜೈನಧರ್ಮದ ಸಾಂಸ್ಕೃತಿಕ ಪರಂಪರೆಯ ವಿವಿಧ ಆಯಾಮಗಳನ್ನು ಪರಿಚಯಿಸಿಕೊಳ್ಳಬಹುದು. ನಿದರ್ಶನಕ್ಕಾಗಿ ಈ ಹಾಡನ್ನು ಗಮನಿಸಬಹುದು:

### ನೇಮಿಜಿನಪ ರಕ್ಷಿಸು

ರಕ್ಷಿಸೆನ್ನನು ನೇಮಿಜಿನಪಾ। ಹರಿಪುತ್ರನ ಪೋಲುವ ಸದ್ಗುಣ ರೂಪ ।
ರಕ್ಷಿಸೆನ್ನನು ನೇಮಿಜಿನಪಾ ॥ ಪಲ್ಲವಿ॥
ಮೆರೆವ ಶೌರಿಯ ಪುರವರದಾ। ಗುಣಭರಿತ ಸಮುದ್ರವಿಜಯ ಸತಿಯಾದ ।
ಶಿವದೇವಿ ಗರ್ಭದ ಭವನದಿ ಬೆಳೆದಿಹಾ। ಚಲುವ ಮಂಗಲರೂಪ ವಲಿದು ಎನ್ನನು ಕಾಯೋ
॥ರ॥ 1 ॥
ಪಂಕಜಾಸನ ದೇವ ನಿನ್ನಾ। ಪದಕಿಂಕರನೆನಿಪೆ ನಾ ಮುನ್ನ ।

ಶಂಕರರೂಪನಲಂಕ್ರತ ಮಹಿಮ। ಭವ್ಯಾಂಕ ಸೇವಿತ ಪಾದಲಂಕ್ರತ ಮೂರುತಿ॥ ರ ॥ 2॥
ಕೃಷ್ಣನು ಮೋಸದೊಳಂದು । ನಿನ್ನ ವಕ್ರಿಸ ಬೇಕೆಂದು ನೆನೆದು ।
ತಕ್ಷಣದೊಳು ಕಲ್ಯಾಣಕೆ ಪೋಪ ಸಮಯದಿ । ವಕ್ರಿಸಿ ಪಶುಗಳ ಕಟ್ಟಿತಾನಿರಿಸಿದ ॥ ರ ॥ 3 ॥
ಪಶುಗಳನೋಡಿದಾಕ್ಷಣದಿ । ತನಗೆಸೆವ ಕಲ್ಯಾಣವ ಭರದಿ ।
ಬಿಸುಟು ಮುಕ್ತ್ಯಾಂಗನೆ ಗೊಶವಾಗಿಪೋದ ಶ್ರೀ ।
ಬಿಸಜದಳಾಕ್ಷನೆ ಝುಷ ಕೇತ ನಾಶನೇ ॥ ರ ॥ 4॥
ಧರಣಿಗಧಿಕವಾಗಿ ಮೆರೆವಾ। ಜಿನವರ ಕಾಶಿಯೊಳಗೆ ಶೋಭಿಸುವಾ।
ವರ ಕೋಟಿಬಸದಿಯ ಪುರನಿವಾಸನೆ ಸ್ವಾಮಿ ।
ಚರಣದಾಶ್ರಿತನಾದ ಕುವರ ನ್ರಸಿಂಹನಾ ॥ ರ ॥ 5 ॥

ಹೀಗೆ ತೀರ್ಥಂಕರರ ಚರಿತ್ರೆಗಳನ್ನು ಪ್ರಸಾರಮಾಡಲು ಅನೇಕ ಜೈನ ಮುನಿಗಳು ಮತ್ತು ಜೈನಕವಿಗಳು ಸಂಸ್ಕೃತ, ಪ್ರಾಕೃತ, ಮತ್ತು ಕನ್ನಡದಲ್ಲಿ ಮಹತ್ವದ ಕೃತಿಗಳನ್ನು ರಚಿಸಿದರು. ಜೈನ ಧರ್ಮದ ತತ್ವ ವಿಚಾರಗಳನ್ನು ಸರಳವಾಗಿ ಲಯಾನ್ವಿತವಾಗಿ ಹಾಡುಗಳ ಮುಖಂತಾರ ಜನಸಾಮಾನ್ಯರನ್ನು ತಲುಪಿಸಿದ್ದು, ಮತ್ತೊಂದು ವಿಶೇಷವಾದ ಸಂಗತಿ. ಇಂತಹ 24 ತೀರ್ಥಂಕರರ ಚರಿತ್ರೆಯನ್ನು ಶಿಷ್ಠ ಕಾವ್ಯಗಳಲ್ಲಿ ನಿರೂಪಿಸಿರುವಂತಹ ಚಿತ್ರಣವನ್ನು ಒಬ್ಬ ಹಾಡುಗಾರ ಸಮರ್ಥವಾಗಿ ಓದಿಕೊಂಡು ಅವರ ಜೀವನ ಚರಿತ್ರೆಯ ಸಂಗತಿಗಳನ್ನು ಹಾಡುಗಳ ಮುಖಾಂತರ ಕಟ್ಟಿಕೊಟ್ಟಿದಾನೆ. ಜೈನರಲ್ಲಿ ಒಟ್ಟು ಎಪ್ಪತ್ತೆರಡು ಜನ ತೀರ್ಥಂಕರರಿದ್ದು, ಅವರಲ್ಲಿ 24 ಜನ ತೀರ್ಥಂಕರರನ್ನು ಭೂತಕಾಲದ ತೀರ್ಥಂಕರರೆಂದೂ, 24 ಜನರನ್ನು ವರ್ತಮಾನಕಾಲದ ತೀರ್ಥಂಕರರೆಂದೂ, ಉಳಿದ 24 ಜನ ತೀರ್ಥಂಕರರನ್ನು ಭವಿಷ್ಯತ್ ಕಾಲದ ತೀರ್ಥಂಕರರೆಂದು ಮೂರು ಭಾಗಗಳಾಗಿ ವಿಂಗಡಿಸಿ ಗಗುರುತಿಸಿದ್ದಾರೆ.

ವರ್ತಮಾನಕಾಲದ ತೀರ್ಥಂಕರರಲ್ಲಿ ಪ್ರಮುಖರಾದ ಕೆಲವು ತೀರ್ಥಂಕರರ ಕುರಿತು ಹಾಡುಗಳು ರಚನೆಯಾಗಿವೆ. ಅಂಥ ಕೆಲವನ್ನು ಗಮನಿಸೋಣ.

"ಕೈಲಾಸ ಗಿರಿಯಲ್ಲಿ ಆದಿಜಿನರೆವಂಗೆ
ಚಂಪಾಪುರದ ವಾಸುಪೂಜ್ಯನಾಥನು ಮತ್ತೆ।
ಪಾವಾಪುರದ ವರ್ಧಮಾನವು ಜಂತಗಿರಿ ನೇಮಿಜಿನಗೆ ವಂದಿಸುತಲಿ।
ಸಮ್ಮೇದಶಿಖರದಲ್ಲಿ ಪುಪ್ಪುತ್ತು ಚೂಳಿಕಿಯ ।
ಇಪ್ಪತ್ತು ತೀರ್ಥಕರು ಮೊದಲಾನಿಲಗಣಿತರು।
ಲೆಕ್ಕವಿಲ್ಲಿಲ್ಲಸಂಖ್ಯಾತ ಮುಕ್ತಿಗೆ ಹಾದ।
ಅವರ ಮಹಿಮೆಯ ಧ್ಯಾನಿಸು॥ಭವ್ಯ॥"11

ಈ ಹಾಡು ಶ್ರೀಕ್ಷೇತ್ರ ಧರ್ಮಸ್ಥಳ ಸಂಶೋಧನಾ ಪ್ರತಿಷ್ಠಾನದ ತಾಡೋಲೆ ಸಂಖ್ಯೆ 879ರ ಮೂರನೇ ಹಾಡು 'ಏಳು ಮನೋಹರ ಜಾವದಲಿ' ಎಂಬ ಹಾಡಾಗಿದೆ. ಇದರ ಅರ್ಥ ಆದಿತೀರ್ಥಂಕರರಾದ ವೃಷಭ ದೇವನ ನಿರ್ವಾಣಭೂಮಿ ಕೈಲಾಸಪರ್ವತವೂ, ಮಹಾವೀರರ ನಿರ್ವಾಣಭೂಮಿಯಾದ ಪಾವಾಪುರಿಯೂ, ವಾಸುಪೂಜ್ಯನಾಥರ ನಿರ್ವಾಣಭೂಮಿಯದ ಚಂಪಾಪುರಿಯೂ, ನೇಮಿನಾಥರ ನಿರ್ವಾಣಭೂಮಿಯಾದ ಗಿರಿನಾಥಗಿರಿಯೂ ಉಳಿದ ಇಪ್ಪತ್ತು ತಿರ್ಥಂಕರರ ನಿರ್ವಾಣ ಭೂಮಿಯಾದ ಸಮ್ಮೇದ ಪರ್ವತವೂ ಈ ಎಲ್ಲಾ ವೈಭವದಿಂದ ಕೂಡಿದ ನಿರ್ವಾಣಭೂಮಿಗಳು ಇತರ ಗಣಧರರೂ ನಿಮಗೆ ಸನ್ಮಂಗಳವನ್ನುಂಟು ಮಾಡಲಿ ಎಂಬುದಾಗಿದೆ. ಈ ಪ್ರಮುಖ ತೀರ್ಥಂಕರರ ಗುಣಲಕ್ಷಣ ಹಾಗೂ ಅವರ ಸಂಕ್ಷಿಪ್ತ ವಿವರವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

## ವೃಷಭನಾಥ ತೀರ್ಥಂಕರ

ಶ್ರಮಣ ಪರಂಪರೆಯಲ್ಲಿ ಬಹು ಪ್ರಾಚೀನ ಕಾಲದಲ್ಲಿ ಆಗಿಹೋದ ಸಿದ್ಧಪುರುಷ ವೃಷಭದೇವ. ಇವರು ಜೈನಪರಂಪರೆಯಲ್ಲಿ ಹೇಳಿದ ತ್ರಿಷಷ್ಠಿ ಶಲಾಕಾ ಪುರುಷರಲ್ಲಿ ಮೊಟ್ಟಮೊದಲಿಗರು. ಇವರಿಂದಲೇ ಜೈನಧರ್ಮ ಪ್ರಾರಂಭವಾಯಿತೆಂದು ಹೇಳಲಾಗಿದೆ. ಈ ಮಹಾಪುರುಷನ ಬಗ್ಗೆ ವೈದಿಕ ಧರ್ಮದ ಶ್ರೀಮದ್ಭಾಗವತ ಗ್ರಂಥದ 5ನೆಯ ಸ್ಕಂದ 2ರಿಂದ 6ನೆಯ ಅಧ್ಯಾಯದವರೆಗೆ ಈ ರೀತಿ ವಿವರಿಸಲಾಗಿದೆ. "ಬ್ರಹ್ಮನು ಮಾನವ ಸಂಖ್ಯೆ ಹೆಚ್ಚದಿರುವುದನ್ನು ಕಂಡುಕೊಂಡನು. ಆಗ ಅವನು ಸ್ವಯಂಭೂ ಮನು ಮತ್ತು ಸತ್ಯರೂಪ ಇವರನ್ನು ಉತ್ಪನ್ನ ಮಾಡಿದನು. ಇವರಿಗೆ ಪ್ರಿಯವ್ರತ ಎಂಬ ಪುತ್ರನು ಜನಿಸಿದನು. ಪ್ರಿಯವ್ರತನ ಮಗನು ಅಗ್ನೀಂಧ್ರನೆಂಬುವನು. ಈ ಅಗ್ನೀಂಧ್ರನ ಮನೆಯಲ್ಲಿ ನಾಭಿಯ ಜನ್ಮವಾಯಿತು."12 ಈ ನಾಭಿರಾಜನು ಹದಿನಾಲ್ಕನೆಯ ಮನುವಾಗಿದ್ದನು. ನಾಭಿರಾಜ ಹಾಗೂ ಮರುದೇವಿಯರ ಮಗನೇ ಆದಿತೀರ್ಥಂಕರ ವೃಷಭನಾಥರು.

ವೃಷಭನನ್ನು ಕುರಿತು ವೈದಿಕ ಹಾಗೂ ಜೈನಪುರಾಣಗಳಲ್ಲಿ ಕೆಲವು ಉಲ್ಲೇಖಗಳು ಪ್ರಸ್ತಾಪಗೊಂಡಿದೆ. ಡಾ.ದ.ರಾ. ಬೇಂದ್ರೆಯವರು ಒಂದು ಕಡೆ ಈ ರೀತಿ ಹೇಳಿದ್ದಾರೆ. "ಜೈನದರ್ಶನಕ್ಕೆ ಮೂಲರಾದ ಆದಿ ತೀರ್ಥಂಕರರು ಋಷಭದೇವರು. ಅವರು ವೈಷ್ಣವ ಆಗಮಗಳಿಗೂ ನಿತಾಂತವಂದ್ಯರಾಗಿರುವರೆಂಬುದು ನಮಗೆ ಕಂಡುಬರುವುದು. ಇಷ್ಟೆ ಅಲ್ಲ, ನಾಭಿ–ಋಷಭ–ಭರತ ಈ ತ್ರಿಕೂಟವು ವೈಷ್ಣವ ಶಿರೋಮಣಿಯಾದ ಧ್ರುವನ ತಂದೆ ಉತ್ತಾನ ಪಾದರಾಯನ ಭ್ರಾತೃವಂಶದಲ್ಲಿ ಮೆರೆಯುವುದು. ವೈಷ್ಣವಪುರಾಣ ದೃಷ್ಟಿಯಿಂದಲೂ ಸದ್ಯದ ವೈದಿಕ ಕಾಲವು ವೈವಸ್ವತಮನ್ವಂತಕಾಂತರ್ಗತವು, ಋಷಭದೇವನ ಕಾಲವು ತತ್ಪೂರ್ವದ್ದು13" ಎಂದು ಹೇಳಿರುವುದು ಗಮನಿಸಬೇಕಾದ ಅಂಶ. ಹಾಗೆಯೇ "ಹೇ ರುದ್ರತುಲ್ಯದೇವ! ನೀನು ನಮ್ಮ ಉಚ್ಚಕುಲದಲ್ಲಿ ಋಷಭದೇವನಿಗೆ ಸಮಾನರಾದ ಶ್ರೇಷ್ಠ ಆತ್ಮರನ್ನು ಹುಟ್ಟಿಸಲಾರೆಯಾ? ಅವನ ಅರ್ಹತ್ ಉಪಾದಿಯು ಧರ್ಮಸ್ಥಾಪನೆಯ ದ್ಯೋತಕವಾಗಿದೆ."14 ಎಂದು ಋಷಭದೇವನ ಸ್ತುತಿಯನ್ನು ಎತ್ತಿತೋರಿಸುವ ಈ ಉಲ್ಲೇಖ ಋಗ್ವೇದದಲ್ಲಿ ಕಂಡುಬರುತ್ತದೆ. ಇದನ್ನು ವೈದಿಕ ವಿದ್ವಾಂಸರಾದ ಪ್ರೊ. ವಿರೂಪಾಕ್ಷ ಎಂ.ಎ ವೇದತೀರ್ಥ ಅವರು ಸ್ಪಷ್ಟಪಡಿಸಿದ್ದಾರೆ.

ಜೈನಪುರಾಣದಲ್ಲಿ ಋಷಭನ ಜಡೆಗಳ ವರ್ಣನೆಯು ಎಲ್ಲೆಲ್ಲಿಯೂ ನೋಡಲಿಕ್ಕೆ ದೊರೆಯುತ್ತವೆ. "ಪದ್ಮಪುರಾಣದಲ್ಲಿ 'ವಾತೋದ್ಧತಾ ಜಟಾಸ್ತಸ್ಯರೇಜುರಾಕುಲ ಮೂರ್ತಯಃ'(3288) ಮತ್ತು ಹರಿವಂಶ ಪುರಾಣದಲ್ಲಿ 'ಸಪ್ರಲಂಬ ಜಟಾಭಾರ–ಭ್ರಾಜಿವಿಷ್ಣುಃ'15 (9204) ಎಂದು ವರ್ಣಿಸಿದ್ದುಂಟು". ಹೀಗೆ ಈ ಎಲ್ಲಾ ಉಲ್ಲೇಖಗಳನ್ನು ಗಮನಿಸಿದಾಗ ಋಷಭನಾಥನರು ಕೇವಲ ಜೈನಧರ್ಮಕ್ಕೆ ಮಾತ್ರ ಸೀಮಿತವಾದ ಮಾನವತಾದಿಯಲ್ಲ. ಅವರು ತಮ್ಮ ಶ್ರೇಷ್ಠವಾದ ಗುಣಗಳಿಂದ ಇತರರಿಗಿಂತ ಭಿನ್ನವಾಗಿ ನಿಲ್ಲುವ ಚೇತನ ಎಂದೆನಿಸುತ್ತದಲ್ಲದೇ ಜೈನಧರ್ಮದ ಶ್ರೇಷ್ಠತೆಗೂ ಕಾರಣಕರ್ತರಾದವರೆಂದು ಹೇಳಬಹುದು.

ಅವರು ಮೊದಲನೇ ತೀರ್ಥಂಕರರಾಗಿದ್ದುದರಿಂದ ಅವರಿಗೆ ಆದಿ ತೀರ್ಥಂಕರರೆಂಬ ಹೆಸರುಂಟಾಯಿತು. ಸಕಲ ಶುಭಲಕ್ಷಣಗಳಿಂದ ವೃಷಭನಾಥರು ಬಾಲ್ಯದಲ್ಲಿ ಶೋಭಿಸುತ್ತಿದ್ದರು. ಅವರ ಸಮಯದಲ್ಲಿ ಅವರು ಜನಗಳಿಗೆ ಅಸಿ,ಮಸಿ, ಕೃಷಿ, ವ್ಯಾಪಾರ, ಶಿಲ್ಪಕಲೆ, ವಿದ್ಯೆ ಮೊದಲಾದ ಜೀವನಕ್ಕೆ ಅನುಕೂಲವಾದ ವಿಚಾರಗಳನ್ನು ತಿಳಿಸಿಕೊಟ್ಟರು. ಇದರಿಂದ ಇವರಿಗೆ 'ಆದಿಬ್ರಹ್ಮ' ಎಂಬ ಹೆಸರು ಬಂದಿತು. ಇವರು ಉದ್ಯೋಗಗಳನ್ನು ಮಾಡುವ ದೃಷ್ಠಿಯಿಂದ ಜನರಿಗೆ ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ಮೂರು ವರ್ಣಾಶ್ರಮ ಧರ್ಮಗಳನ್ನು ಆಷಾಢ ಬಹುಳ ಪಾಡ್ಯದ ದಿವಸ ಬೋಧಿಸಿದರು.

ಪ್ರಜೆಗಳಿಗೆ ಸೌಕರ್ಯಗಳನ್ನು ಒದಗಿಸಿಕೊಡಲು ವೃಷಭನಾಥರು ಹರಿ, ಅಕಂಪನ, ಕಾಶ್ಯಪ ಮತ್ತು ಸೋಮಪ್ರಭರೆಂಬ ನಾಲ್ವರು ಅಧಿಕಾರಿಗಳನ್ನು ನೇಮಿಸಿದ್ದರು. ಅಂದಿನಿಂದ ಹರಿಯಿಂದ ಹರಿವಂಶವೂ, ಅಕಂಪನದಿಂದ ನಾಥವಂಶವೂ, ಸೋಮಪ್ರಭನಿಂದ ಕುರುವಂಶವೂ ಪ್ರಸಿದ್ಧಿಯಾಯಿತು. ಹೊಟ್ಟೆಯ ಹಸಿವಿನ ನಿವಾರಣೆಗೆ ಕಬ್ಬಿನ ರಸವನ್ನು ಸೇವಿಸುವ ಕ್ರಮವನ್ನು ಇವರು ಜನರಿಗೆ ತಿಳಿಸಿದುದರಿಂದ ಇಕ್ಷ್ವಾಕುವಂಶವು

ಪ್ರಸಿದ್ಧಿಯಾಯಿತು. ಅನಂತರ ಅವರ ಮೊಮ್ಮಕ್ಕಳಾದ ಅರ್ಕಕೀರ್ತಿಯಿಂದ ಸೂರ್ಯವಂಶವೂ ಸೋಮಪ್ರಭನಿಂದ ಚಂದ್ರವಂಶವೂ ಪ್ರಸಿದ್ಧಿಯಾದುವು.

ಆದಿನಾಥರಿಗೆ ಯಶಸ್ವತೀ ಮತ್ತು ಸುನಂದರೆಯೆಂಬ ಇಬ್ಬರು ಪತ್ನಿಯರಿದ್ದರು. ಯಶಸ್ವತಿಯ ಗರ್ಭದಿಂದ ಭರತಚಕ್ರವರ್ತಿ, ವೃಷಭಸೇನರೇ ಮೊದಲಾದ ನೂರು ಜನ ಗಂಡು ಮಕ್ಕಳು, ಬ್ರಾಹ್ಮಿದೇವಿಯೆಂಬ ಮಗಳೂ ಇದ್ದರು. ಎರಡನೇ ಹೆಂಡತಿ ಸುನಂದಾ ದೇವಿಯ ಗರ್ಭದಿಂದ ಬಾಹುಬಲಿಯೆಂಬ ಪುತ್ರನೂ ಮತ್ತು ಸುಂದರಿಯೆಂಬ ಮಗಳು ಜನಿಸಿದರು. ವೃಷಭನಾಥನು ಬ್ರಾಹ್ಮಿಗೆ ಸಾಹಿತ್ಯವನ್ನು, ಸುಂದರಿಗೆ ಗಣಿತವನ್ನು ತಿಳಿಸಿದರು. ಈಗಲೂ ಬ್ರಾಹ್ಮೀಲಿಪಿಯ ವಿಚಾರವು ಪ್ರಚಲಿತವಿರುವುದನ್ನು ಗಮನಿಸಬಹುದು.

'ನೀಲಾಂಜನೆ' ಎಂಬ ದೇವನರ್ತಕಿ ನರ್ತಿಸುತ್ತಿದ್ದಂತೆಯೇ, ಆಯುಷ್ಯವು ಮುಕ್ತಾಯವಾಗಿ ಮಾಯವಾದುದನ್ನು ವೃಷಭನಾಥರು ಗಮನಿಸಿದರು. ಮನುಷ್ಯಜೀವನವು ಅಶಾಶ್ವತ, ಯಾವ ಸಮಯದಲ್ಲಾದರೂ ಕೊನೆಗೊಳ್ಳಬಹುದೆಂದು ಅವರ ಮನಸ್ಸಿನ ವೈರಾಗ್ಯವು ಅಂಕುರಿಸಿತು. ಕೂಡಲೇ ರಾಜ್ಯ ಅರಮನೆ ಹೆಂಡತಿಯರು ಮಕ್ಕಳು, ಎಲ್ಲರನ್ನೂ ತ್ಯಾಗಮಾಡಿ, ಅಲಹಾಬಾದಿನ ಸಮೀಪದಲ್ಲಿರುವ ಸಿದ್ಧಾರ್ಥವನದಲ್ಲಿ ಒಂದು ಆಲದಮರದಡಿಯಲ್ಲಿ ಕುಳಿತು ತಮ್ಮ ವಸ್ತ್ರಾಭರಣಗಳನ್ನು ಕಳಚಿಬಿಡುವರು. ಅನಂತರ 'ನಮಸಿದ್ಧೇಭ್ಯಃ' ಎಂದು ಹೇಳಿ ಪಂಚಮುಷ್ಠಿಯಿಂದ ತಮ್ಮ ತಲೆಗೂದಲನ್ನು ಕಿತ್ತು ಹಾಕಿದರು. ಆಷಾಢ ಬಹುಳ ನವಮಿಯ ದಿನ ದೀಕ್ಷೆಯನ್ನು ಕೈಗೊಂಡರು. ಅವರ ಸಂಗಡ ನಾಲ್ಕು ಸಹಸ್ರ ರಾಜರು ದಿಂಗಬರ ದೀಕ್ಷೆಯನ್ನು ತೆಗೆದುಕೊಂಡರು.

ಸ್ಥಿರ ಚಿತ್ತದಿಂದ ತಪಸ್ಸು ಮಾಡಿದರು. ಹೀಗೆ ಆರು ತಿಂಗಳು ಕಳೆದ ನಂತರ ಆಹಾರಕ್ಕಾಗಿ ನಗರಕ್ಕೆ ಬಂದರು. ಆದರೆ ಅವರಿಗೆ ಆಹಾರವನ್ನು ಹೇಗೆ ನೀಡಬೇಕೆಂಬುದು ಜನರಿಗೆ ತಿಳಿಯದೇ ಇದ್ದುದರಿಂದ ಮತ್ತೂ ಆರು ತಿಂಗಳವರೆಗೆ ಅವರು ನಿರಶನರಾಗಿದ್ದರು. ಕೊನೆಗೆ ಹಸ್ತಿನಾಪುರದ ಶ್ರೇಯಾಂಸ ರಾಜನು ವೈಶಾಖ ಶುದ್ಧ ತದಿಗೆಯ ದಿನ ಕಬ್ಬಿನ ಹಾಲನ್ನು ಆಹಾರವನ್ನಾಗಿ ವಿಧಿವತ್ತಾಗಿ ನೀಡಿದನು. ಆಗ ದೇವತೆಗಳು ರತ್ನವೃಷ್ಠಿ, ಪುಷ್ಪವೃಷ್ಠಿ, ಗಂಧೋದಕವೃಷ್ಠಿ, ದೇವದುಂದುಭಿ ಮತ್ತು ಜಯಜಯ ಧನಿಯೆಂಬ ಪಂಚಾಶ್ಚರ್ಯಗಳನ್ನು ಮಾಡಿದರು. ಅಂದಿನಿಂದ ವೈಶಾಖ ತದಿಗೆಯ ದಿನ ಪ್ರಸಿದ್ಧಿಯಾಯಿತು. ತಪಸ್ಸನ್ನು ಮುಂದುವರಿಸಿದ ವೃಷಭ ಸ್ವಾಮಿಗಳಿಗೆ ಪಾಲ್ಗುಣ, ಕೃಷ್ಣ, ಏಕಾದಶಿಯಂದು 'ಪುರಿಮತಾಲ' ನಗರದ ಶಕಟೋದ್ಯಾನದಲ್ಲಿ ಕೇವಲ ಜ್ಞಾನ ಉಂಟಾಯಿತು ಅನಂತರ ಅವರಿಗೆ ಸಮವಸರಣ ಸಭೆಯುಂಟಾಗಿ ಅಲ್ಲಿ ಧರ್ಮೋಪದೇಶ ಮಾಡಿದರು.

ಈ ಮದ್ಯೆ ಭರತಚಕ್ರವರ್ತಿಗೆ ಅವನ ಪುಣ್ಯದಿಂದ ಚಕ್ರರತ್ನವು ಉದ್ಭವಿಸಿತು. ಅದೇ ದಿನ ಪುತ್ರರತ್ನವೂ ಜನಿಸಿತು. ತಂದೆಯ ಕೇವಲ ಜ್ಞಾನೋತ್ಪತ್ತಿಯೂ ಅದೇ ದಿನ ಆಗಿತ್ತು. ಈ ಮೂರು ಪೂಜೆಗಳನ್ನು ಭರತಚಕ್ರವರ್ತಿ ವೈಭವದಿಂದ ನೆರವೇರಿಸಿದನು. ಅನಂತರ ದಿಗ್ವಿಜಯವನ್ನು ಸಾರಿದನು. ಅವನಿಗೆ ಅವನ ತಮ್ಮಂದಿರಾದ ವೃಷಭಸೇನಾದಿಗಳು ಶರಣಾಗತರಾಗಲಿಚ್ಛಿಸದೆ, ದೀಕ್ಷಾಬದ್ಧರಾದರು. ಬಾಹುಬಲಿ ಮಾತ್ರ ಶರಣಾಗಲು ಬಯಸದೇ ದೃಷ್ಟಿ, ಜಲ ಮತ್ತು ಮಲ್ಲಯುದ್ಧಗಳನ್ನು ಮಾಡಿ ಭರತಚಕ್ರವರ್ತಿಯನ್ನು ಸೋಲಿಸಿದನು. ಇದರಿಂದ ಸಿಟ್ಟುಗೊಂಡ ಭರತನು ಬಾಹುಬಲಿಯ ಸಂಹಾರಕ್ಕೆಂದು ಚಕ್ರವನ್ನು ಪ್ರಯೋಗಿಸಿದನು. ಆದರೆ ಬಾಹುಬಲಿಯ ಪ್ರಭಾವದಿಂದ ಚಕ್ರವು ಏನೂ ಮಾಡಲಿಲ್ಲ. ಆದರೆ ಗೆದ್ದ ಬಾಹುಬಲಿಯೇ ವೈರಾಗ್ಯವನ್ನು ಹೊಂದಿ ತಪಸ್ಸು ಮಾಡಿ ಗೋಮಟೇಶ್ವರನೆಂದು ಪ್ರಸಿದ್ಧನಾದನು.

ವೃಷಭಸ್ವಾಮಿಯು ಬಹುಕಾಲ ತಪಸ್ಸು ಮಾಡಿ ಮಾಘ ಬಹುಳ ಅಮಾವಾಸ್ಯೆಯ ದಿನ ಕೈಲಾಸ ಪರ್ವತದಲ್ಲಿ ಮುಕ್ತಿಯನ್ನು ಪಡೆದರು. ಅಂದಿನಿಂದ ಅವರು ಆದಿತೀರ್ಥಂಕರರೆಂದೂ, ವೃಷಭ ತೀರ್ಥಂಕರರೆಂದು ಪ್ರಸಿದ್ಧರಾದರು.

ಇವರನ್ನು ಕುರಿತು ಸಾಕಷ್ಟು ಸ್ತುತಿಗೀತೆಗಳು, ಭಕ್ತಿಗೀತೆಗಳು, ಸೋಬಾನೆಹಾಡುಗಳು, ಮಂಗಳಾರತಿಹಾಡುಗಳು, ಲಾವಣಿಗಳು ರಚನೆಗೊಂಡಿವೆ. ಶ್ರೀ ಧರ್ಮಸ್ಥಳದ ಮಂಜುನಾಥೇಶ್ವರ ಸಂಶೋಧನಾ

ಪ್ರತಿಷ್ಠಾನದಲ್ಲಿ ತುಂಬಾ ಹಳೆಯ ತಾಡೋಲೆಪ್ರತಿಗಳನ್ನು ಶೋಧಿಸಿದಾಗ ಆದಿ ತೀರ್ಥಂಕರರನ್ನು ಕುರಿತ ಸಾಕಷ್ಟು ಹಾಡುಗಳು ದೊರೆತವು. ಅವುಗಳಲ್ಲಿ ದೊರೆತ ಲಾವಣಿ ಹಾಡೊಂದನ್ನು ಇಲ್ಲಿ ಉದಾಹರಿಸಲಾಗಿದೆ.

"ಸಾಕೇತಪುರಿ ಪಟ್ಟಣದಲ್ಲಿ ನಾಭಿರಾಜ ಭೂಪತಿ।
ಆತನ ವಲ್ಲಭೆವೆತ್ತಮೆಯಾದ ಮರುದೇವಿ ಮಹಸತಿ।
ಅವರ ಉದರದಿ ಉದ್ಭವಿಸಿದ ಆದಿನಾಥ ಜಿನಪತಿ।
ಚಾರು ಸುಲಕ್ಷಣ ಕನಕಾ ಶರೀರ ಕಮನೀಯ ಮೂರುತಿ।
ಮೂರುಲೋಕಕೆ ತಾನಧಿಪತಿ। ಅಂತಾತನ ಪದಸ್ತುತಿ
ಜಿನರಜ ಧೀರವಂದಿತ ಸುರನಭವ್ಯ ಮನೋರಥಪುರ।
ವೃಷಭ ಜಿನೇಶ್ವರ ಸ್ವಾಮಿಯ ಸರಸಿ ಪಾದಕ್ಕೆ ನಮಸ್ಕರಿಸಿ"16

ಸಾಕೇತಪುರ ಪಟ್ಟಣದ ನಾಭಿರಾಜಮಹಾರಾಜ ಹಾಗೂ ಮಹಾಸತಿ ಮರುದೇವಿಯ ಗರ್ಭದಲ್ಲಿ ಜನಿಸಿದ ಜಿನಪತಿಯೇ, ಚೆಲುವ ಸರ್ವ ಸುಲಕ್ಷಣವುಳ್ಳ ಹೇಮವರ್ಣದ ಶರೀರವುಳ್ಳ ಮೂರ್ತಿ ಸ್ವರೂಪನೆ, ಮೂರು ಲೋಕಕ್ಕೂ ಒಡೆಯನೆಂದು ಸ್ತುತಿಸಿಕೊಳ್ಳುವವನೆ ಜಿನಧರ್ಮದಲ್ಲಿ ಶ್ರೇಷ್ಠ ರತ್ನವೆಂದು ಹೊಗಳಿಸಿಕೊಳ್ಳುವ ಸುರ ಜನ್ಮದ ಮನೋರಥವನ್ನು ಪಡೆದಿರುವ ವೃಷಭನಾಥನೆ ನಿನ್ನ ಪಾದಗಳಿಗೆ ನಮಿಸುವೆವು ಎಂದು ಲಾವಣಿಯಲ್ಲಿ ವೃಷಭನನ್ನು ಸ್ತುತಿಸಲಾಗಿದೆ.

ಹೀಗೆ ಕೃತಯುಗದ ಆರಂಭದ ಕಾಲದಲ್ಲಿ ಧರ್ಮ, ದರ್ಶನಗಳು ರೂಪುಗೊಳ್ಳುವ ಸಮಯದಲ್ಲಿ ಮಾನವನ ಆಧ್ಯಾತ್ಮ ಜೀವನಕ್ಕೊಂದು ಭದ್ರವಾದ ಬುನಾದಿಯನ್ನು ಆದಿದೇವ ಹಾಕಿದನು. ಆತ್ಮ ಸ್ವಾತಂತ್ರ್ಯರೂಪ ಸಿದ್ಧಾಂತದ ವಿಚಾರವನ್ನು ಪ್ರತಿಪಾದಿಸುವ ಜೈನಧರ್ಮವನ್ನು ಆದಿ ತೀರ್ಥಂಕರನು ಬಹುಪುರಾತನ ಕಾಲದಲ್ಲಿಯೇ ಪ್ರಚುರಗೊಳಿಸಿದನು. ಅದಕ್ಕೆ ಶುದ್ಧಾಚರಣೆ, ಆತ್ಮಧ್ಯಾನ, ತಪಸ್ಸುಗಳೆಂಬ ಸಾಧನಾ ಪಥವನ್ನು ನಿರ್ಮಿಸಿದನು. ಅದರಿಂದ ಭಾರತದಲ್ಲಿ ಒಂದು ಜೈನ ಸಮಾಜವೇ ರೂಪುಗೊಂಡಿತು. ಇದರಿಂದಾಗಿ ಜೈನ ಪರಂಪರೆಯಲ್ಲಿ ಮೂರ್ತಿಶಿಲ್ಪ ಬೆಳಯಿತು. ಮಂದಿರಗಳು ರೂಪುಗೊಂಡವು. ತೀರ್ಥಕ್ಷೇತ್ರಗಳು ನಿರ್ಮಾಣವಾದವು. ತೀರ್ಥಂಕರರ ಮುಕ್ತಿ ಸ್ಥಾನಗಳಾದ ಕೈಲಾಸಗಿರಿ, ಸಮ್ಮೇದಶಿಖರ, ಊರ್ಜಯಂತಗಿರಿ, ಚಂಪಾಪುರಿ, ಪಾವಾಪುರಿಗಳಂಥವು ಸಿದ್ಧಕ್ಷೇತ್ರಗಳೆನಿಸಿದವು.

**ಆದಿಜಿನಪನ ಪಂಚಕಲ್ಯಾಣ ಉದಯರಾಗಾ।**

ನಂಬುನಂಬೆಲೆ ಜೀವ ಸುರನರೋರುಗರಳಿದರೊ
ಡಂಬಕದ ಕಾಯವಿದ ನೆಚ್ಚಿ ನೀಕೆಡಬೇಡ
ಶಂಬರಾರಿಯಗೆಲ್ದ ಸರ್ವಜ್ಞನಂಘ್ರಿಗಳ
ಬೆಂಬಿಡದೆ ಭಜಿಸು ಕಂಡ್ಯಾ ।
ಮರುದೇವಿ ಗರ್ಭದಿಂನಾರುತಿಂಗಳೆಂದೆನಲು
ಸುರಾಜನವಧಿಯಿಂ ಕುಬೇರಂಗೆ ಬೆಸಸಲು
ಸತಿ ಮೂರುವರೆ ಕೋಟಿರತ್ನ ವೃಷ್ಟಿಗಳಾದಿ
ಪರಮ ವೈಭವದಿಂದ ಸುರಭೇರಿ ಶಂಖ ದುಂದುಭಿವಾದ್ಯ
ಮೊಳಗುತಿರೆ ಸುರನಾರಿಯರು ಬಂದು ನರ್ತನಗಳಾಡು
ತಿರೆ ಪುರುಷಪರಮೇಶ್ವರನ ಗರ್ಭಾವತರಣದ
ಪರಿಯ ಭಾವಿಸು ಭವ್ಯಾ ॥ 1 ॥
ಜಗದೊಳತಿಶಯವಾದ ಜಂಬೂದ್ವೀಪದಿ

ಮಿಗೆ ಶೋಭಿಸುವ ಮಹಮೇರು ಪರ್ವತದಿ
ಸೊಗಯಿಸುವ ಪಾಂಡುಕಾ ಶಿಲೆಯಲ್ಲಿ
ಸುರರಾಜ ನಘಹರನ ಪೂಜಿಸುತ್ತ
ಗಗನಮಾರ್ಗದಿ ಚತುರ್ನಿಕಾಯದಮರರು
ಬಂದು ಮಘಮಘಿಸುವ ಸುವರ್ಣ ಕುಂಭದ
ಪಾಲ್ಗಡಲ ಜಲತಂದು ನಿಗಮಗೋಚರಜಿ
ನಗೆ ಜನ್ಮಾಭಿಷೇಕದ ಬಗೆಯ
ಭಾವಿಸು ಭವ್ಯಾ ॥ 2 ॥
ಸಕಲಸಂಪದ ಗೂಡಿ ಸುಖಮಿರ್ದು
ಯುಕುತಿಯಿಂ ಶ್ರೀ ಪುತ್ರ ಮಿತ್ರ ಕಳತ್ರ
ಯಕೆ ಸಿಲ್ಕಿದ್ ಕಲಂಕ ಶ್ರೀ ಜಿನಮಾರ್ಗದೋಜೆಯ ಪಿಡಿದು
ಪ್ರಕಟಿಸಿದ ತ್ರಿಭುವನದೊಳು ಭರತ ರಾಜೇಂದ್ರಗೆ ಪಟ್ಟ
ವಂಕಟ್ಟಿ ತ್ರಿಕರಣಶುದ್ಧಿಯಿಂ ಪರಮದೀಕ್ಷೆಯ ನಾಂತು
ಮುಕ್ತಿಮಾರ್ಗವನೈದಿದ ಪರಿನಿಷ್ಕ್ರಿಮಣ ಸುಗತಿಗ
ಳ ಕೇಳುಕಂಡ್ಯಾ ॥ 3 ॥
ವಸುಧೆಯಿಂದೈದು ಸಾಸಿರ ಬಲ್ಲಿನುದ್ದದಲಿ
ಯೆಸೆವ ಸಮವಶರಣ ದ್ವಾದಶಯೋಜನದಗಲ
ಕುಶಲಲತೆಗಳು ಯಿಂದ್ರ ನೀಲದ ನೆಲಗಟ್ಟು
ಅಸಮಾನಗೋಪುರಗಳು ದೆಸೆ
ದೆಸೆಗೆ ಸುವರ್ಣ ವಜ್ರ ಬೀದಿಯ ಕೋಟೆ ಧ್ವಜವು ಪತಾಕೆ ಮಾ
ನ ಸ್ತಂಭ ವೃಷಭ ಗಣಧರರೊಡೆಯ ಕೇವಲ ಜ್ಞಾನ ಸಮಯಾ
ದ್ಯ ಸಕವನು ಕೇಳು ಕಂಡ್ಯಾ ॥ 4 ॥
ನಿರುತಿಯೀರಾರು ತಪವೆಂಬಂತ್ರೈವಾಗ್ನಿಯಲಿ
ಉರವಣಿಸಿ ಘಾತಿ ಆಘಾತಿಗಳ ಕರ್ಮವನುರುಪಿ
ಜರೆ ಜನನ ಮರಣಾದಿ ದೋಷಗಳ ಪರಿಹರಿಸಿ
ಪರಮಾತ್ಮನೆಂದೆನಿಸಿದೈ ವರಮೋಕ್ಷ ಲಕ್ಷ್ಮೀಪತಿ ಆದಿ
ಪರಮೇಶ್ವರನ ಚರಣಕಮಲಯುಗ್ಮ ಮಧುಕ
ರರೆನಿಪ ಭವ್ಯರಿಗೆ ಸುರುಚಿರಮಿಷ್ಟಾರ್ಥಗಳ ನೀವ
ಶ್ರೀ ಪಂಚಕಲ್ಯಾಣದಿರವ ಭಾವಿಸು ಭವ್ಯಾ ॥
ನಂಬುನಂಬೆಲೆ ಜೀವ ॥

## ನೇಮಿನಾಥ ತೀರ್ಥಂಕರರು

ಮಥುರಾನಗರದಲ್ಲಿ ಹರಿವಂಶದ ಕ್ಷತ್ರಿಯ ರಾಜರು ಆಳುತ್ತಿದ್ದರು. ಹರಿವಂಶದಲ್ಲಿ 'ಯದು' ಎಂಬುವನೊಬ್ಬ ರಾಜನು ಶೌರ್ಯದಿಂದ ಪ್ರಸಿದ್ಧನಾಗಿದ್ದುದರಿಂದ ಅವರನನ್ನು 'ಯಾದವರು' ಎಂದು ಕರೆಯುತ್ತಿದ್ದರು. ಯಾದವರು ಮಧುರೆಯಿಂದ 'ಸೌವೀರ' ಎಂಬ ನಗರಕ್ಕೆ ವಲಸೆ ಹೋದರು. ಅಲ್ಲಿ ಒಮ್ಮೆ ಉಗ್ರಸೇನನೆಂಬ ರಾಜನು

ಪ್ರಸಿದ್ಧನಾಗಿದ್ದನು. ಅವನು ಭೋಜಕವೃಷ್ಣಿಯ ಮಗನಾಗಿದ್ದನು. ಆ ಉಗ್ರ ಸೇನನಿಗೆ ಕಂಸನೆಂಬ ಪುತ್ರನು ಜನಿಸಿದನು.

ಭೋಜಕವೃಷ್ಣಿಯ ಅಣ್ಣ ಅಂಧಕವೃಷ್ಠಿಯು, ಅವನಿಗೆ ಸಮುದ್ರವಿಜಯ, ಅಕ್ಷೋಭಯ, ಸ್ತಿಮಿತ, ಸಗರ, ಹಿಮವನ, ಅಚಲ, ಧಾರಣ, ಪೂರ್ಣ, ಅಭಿಚಂದ್ರ ಮತ್ತು ವಸುದೇವರೆಂಬ ಹತ್ತು ಮಂದಿ ಗಂಡು ಮಕ್ಕಳು, ಕುಂತಿ ಮತ್ತು ಮಾದ್ರಿಯರೆಂಬ ಇಬ್ಬರು ಹೆಣ್ಣು ಮಕ್ಕಳು ಇದ್ದರು. ಕುಂತಿಯನ್ನು ಪಾಂಡುರಾಜನಿಗೂ, ಮಾದ್ರಿಯನ್ನು ಧರ್ಮಘೋಷನಿಗೂ ಕೊಟ್ಟು ವಿವಾಹವನ್ನು ಮಾಡಿದ್ದರು. ಶ್ರೀಕೃಷ್ಣ ವಸುದೇವನ ಮಗ, ಕಂಸನ ತಂಗಿ ದೇವಕಿ ಆತನ ತಾಯಿ ಕೃಷ್ಣನಿಂದ ತನಗೆ ಮರಣವಾಗುವುದೆಂದು ತಿಳಿದ ಕಂಸ ಆತನನ್ನು ಕೊಲ್ಲಿಸಲು ಹಲವಾರು ಪ್ರಯತ್ನಗಳನ್ನು ನಡೆಸಿದನು. ಕೊನೆಗೆ ಕೃಷ್ಣ ಮತ್ತು ಬಲರಾಮರು ಸೇರಿ ಕಂಸನನ್ನು ಕೊಂದು ಹಾಕಿದರು.

ವಸುದೇವನ ಅಣ್ಣ ಸಮುದ್ರವಿಜಯ. ಅವನ ಪಟ್ಟದ ರಾಣಿ ಶಿವದೇವಿ. ಆಕೆಯ ಗರ್ಭದಲ್ಲಿ ಶ್ರಾವಣ ಶುದ್ಧ ಪಂಚಮಿಯ ದಿನ ಇಪ್ಪತ್ತೆರಡನೇ ತೀರ್ಥಂಕರರಾದ ಭಗವಾನ್ ನೇಮಿನಾಥ ತೀರ್ಥಂಕರರು ಜನಿಸಿದರು. ವಿಧಿವತ್ತಾಗಿ ದೇವೇಂದ್ರನು ಬಂದು ಜನ್ಮಾಭಿಷೇಕ ಕಲ್ಯಾಣ ಮಹೋತ್ಸವವನ್ನು ನೇರವೇರಿಸಿದನು. ಶ್ರೀಕೃಷ್ಣ ಮತ್ತು ನೇಮಿನಾಥರು ಅಣ್ಣತಮ್ಮಂದಿರಾಗಿದ್ದುದರಿಂದ ಯಾವಾಗಲೂ ಸಹೋದರ ವಾತ್ಸಲ್ಯದಿಂದ ಇರುತ್ತಿದ್ದರು.

ನೇಮಿನಾಥರು ಆಸನ್ನಭವ್ಯ ಜೀವಿಗಳಾಗಿದ್ದರು. ಅವರು ಸುಂದರವಾದ ಶರೀರವನ್ನು ಪಡೆದಿದ್ದರು. ಬಹುಬಲಿಷ್ಠರೂ ಅಗಿದ್ದರು. ಆದರೂ ಅವರು ಯಾವ ವಸ್ತುವಿನಲ್ಲೂ ವಿಶೇಷ ವ್ಯಾಮೋಹ ಪಡದೇ ವೈರಾಗ್ಯವನ್ನೇ ಬಯಸುತ್ತಿದ್ದರು. ವಿಷಯ ಭೋಗಾಭಿಲಾಷೆಯು ಅವರ ಬಳಿ ಸುಳಿಯುವಂತೆಯೇ ಇರಲಿಲ್ಲ.

ಶ್ರೀಕೃಷ್ಣನಿಗೆ ನೇಮಿನಾಥರ ವಿಚಾರದಲ್ಲಿ ಸಂದೇಹವಿದ್ದೇ ಇತ್ತು. ಒಂದು ವೇಳೆ ನೇಮಿನಾಥರು ರಾಜ್ಯವನ್ನು ಅಪೇಕ್ಷಿಸಿದರೆ, ಯುದ್ಧದಲ್ಲಿ ಅವರನ್ನು ಗೆಲ್ಲುವುದು ನಡೆಯದ ಮಾತು. ಬಲಿಷ್ಠರಾದ ಅವರಿಂದ ತನಗೆ ಸೋಲು ಶತಸಿದ್ಧ. ಇದಕ್ಕಾಗಿ ಯೋಗಿ ಮುಕ್ತಿಯಿಂದಲಾದರೂ ಅವರಲ್ಲಿ ವೈರಾಗ್ಯ ಹುಟ್ಟುವಂತೆ ಮಾಡಬೇಕೆಂದು ಅಲೋಚಿಸಿದನು. ಅದಕ್ಕಾಗಿ ನೇಮಿನಾಥರ ಮದುವೆ ಏರ್ಪಡಿಸಿದನು.

ಗಿರಿನಾರಿನಲ್ಲಿ ಉಗ್ರಸೇನನು ಮಹಾರಾಜನಾಗಿದ್ದನು. ಆತನ ಮಗಳು ರಾಜಮತಿ ಅತಿ ಚೆಲುವೆಯೂ, ಜಿನಭಕ್ತಳೂ, ಸುಗುಣೆಯೂ, ಆಗಿದ್ದಳು. ಅವಳೊಂದಿಗೆ ನೇಮಿನಾಥರ ವಿವಾಹ ನಿಶ್ಚಿತವಾಯಿತು. ಮದುವೆಯ ಗಂಡನ್ನು ಗಿರಿನಾರಿಗೆ ವೈಭವದ ಮೆರವಣಿಗೆಯಲ್ಲಿ ಕರೆದೊಯ್ದರು. ದಾರಿಯಲ್ಲಿ ಎರಡು ಕಡೆಗಳಲ್ಲೂ, ಅನೇಕ ಹಸು, ಜಿಂಕೆ, ಮೊದಲಾದ ಪ್ರಾಣಿಗಳನ್ನು ರೊಪ್ಪಗಳಲ್ಲಿ ಕೂಡಿದ್ದರು. ಅವಕ್ಕೆ ಆಹಾರವನ್ನು ನೀಡದಿದ್ದರಿಂದ ಹಸಿವಿನಿಂದ ಅವು ಆರ್ತ ಸ್ವರವನ್ನು ಮಾಡುತ್ತಿದ್ದವು. ಕೃಷ್ಣನು ಬೇಕೆಂದೇ ಈ ಏರ್ಪಾಡನ್ನು ಮಾಡಿಸಿದ್ದನು.

"ಈ ಪಶುಗಳನ್ನೇಕೆ ಬಂಧಿಸಿದ್ದಾರೆ? ಅವು ದುಃಖದಿಂದ ಏಕೆ ಕೂಗುತ್ತಿವೆ?" ಎಂದು ನೇಮಿನಾಥರು ಸಾರಥಿಯನ್ನು ಕೇಳಲು "ತಮ್ಮ ಮದುವೆಗೆ ಬರುವ ಅತಿಥಿಗಳನ್ನು ಮಾಂಸದ ಅಡುಗೆಯಿಂದ ಸತ್ಕರಿಸಲು ಅವನ್ನು ಬಂದಿಸಿದ್ದಾರೆ. ಅವಕ್ಕೆ ಆಹಾರವನ್ನು ನೀಡದಿರುವುದರಿಂದ ಹಸಿವು ಬಾಯಾರಿಕೆಯಿಂದ ಬಾಧೆಯಿಂದ ಅವು ಕೂಗುತ್ತಿವೆ" ಎಂದು ಸಾರಥಿ ಉತ್ತರಿಸಿದನು.

ಕೂಡಲೇ ನೇಮಿನಾಥರ ಮನಸ್ಸಿನಲ್ಲಿ ಬಹು ಸಂಕಟವಾಯಿತು"ಇಷ್ಟು ನಿರಪರಾಧಿ ಪ್ರಾಣಿಗಳನ್ನು ಕೊಂದು ನಾನು ಮದುವೆ ಮಾಡಿಕೊಂಡು ಸುಖಪಡಬೇಕೇ? ನನ್ನೊಬ್ಬನ ಸುಖಕ್ಕಾಗಿ ಇಷ್ಟೊಂದು ಜೀವಿಗಳು ಅನ್ಯಾಯವಾಗಿ ಹತವಾಗಬೇಕೇ? ಇದು ಎಂದಿಗೂ ಕೂಡದು. ನನಗೆ ಮದುವೆಯೇ ಬೇಡ! ಸಂಸಾರದ ಯಾವ ಸುಖವೂ ನನಗೆ ಬೇಡ" ಎಂದು ಹೇಳಿ ರಥದಿಂದ ಇಳಿದು ತಮ್ಮ ವಸ್ತ್ರಾಭರಣಗಳನ್ನು ಕಳಿಚಿ ಬಿಸುಟರು, ರಾಜ್ಯ ಸಂಪತ್ತನ್ನು ತೊರೆದರು. ಅಲ್ಲಿಂದ ಗಿರಿನಾರ್ ಪರ್ವತದ ಶಿಖರಕ್ಕೆ ಹೋಗಿ ಕಠಿಣ ತಪಸ್ಸು ಮಾಡತೊಡಗಿದರು.

ಮದುವಣ ಗಿತ್ತಿಯಾಗಿದ್ದ 'ರಾಜೀಮತಿಗೆ' ಈ ವಿಚಾರ ತಿಳಿಯಿತು. ಕೂಡಲೇ ಸಖಿಯರೊಂದಿಗೆ ಅವಳು ನೇಮಿನಾಥರು ತಪಸ್ಸು ಮಾಡುತ್ತಿದ್ದಲ್ಲಿಗೆ ಹೋದಳು. ತನ್ನ ಸೌಂದರ್ಯವನ್ನು ಅವರ ಎದುರಿನಲ್ಲಿ ವರ್ಣಿಸಿ ತನ್ನನ್ನು ಕೈ ಬಿಡಬಾರದೆಂದು ಪ್ರಾರ್ಥಿಸಿದಳು. ಆದರೆ ನೇಮಿನಾಥರು ಇದರಿಂದ ಸ್ವಲ್ಪವೂ ಚಂಚಲರಾಗಲಿಲ್ಲ ಅವಳಿಗೇ

ವೈರಾಗ್ಯ ಬರುವಂತೆ ಬೋಧಿಸಿದರು. ರಾಜೀಮತಿ ಸಹ ಸಂಸಾರದ ವ್ಯಾಮೋಹವನ್ನು ಬಿಟ್ಟು ಗಿರಿನಾರ್ ಬೆಟ್ಟದ ಬುಡದಲ್ಲಿದ್ದ ಗುಹೆಯಲ್ಲಿ ತಪಸ್ಸನ್ನು ಮಾಡಿದಳು. ಇಂದಿಗೂ ಅದು ರಾಜೀಮತಿ ಗುಹೆಯೆಂದೇ ಪ್ರಸಿದ್ಧವಾಗಿದೆ.

ಭಗವಾನ್ ನೇಮಿನಾಥರು ತಪಸ್ಸಿನಿಂದ ಪಾಪಕರ್ಮಗಳನ್ನು ನಷ್ಟ ಪಡಿಸಿಕೊಂಡರು. ಕೇವಲ ಜ್ಞಾನಪ್ರಾಪ್ತಿಯಾಯಿತು. ಅನಂತರ ಆಷಾಢ–ಶುದ್ಧ– ಅಷ್ಟಮಿ ದಿನ ಮುಕ್ತಿಯನ್ನು ಪಡೆದರು. ಅಂದಿನಿಂದ ಭಗವಾನ್ ನೇಮಿತೀರ್ಥಂಕರರಾದರು. ಜೈನಧರ್ಮದಲ್ಲಿ ಭಗವಾನ್ ನೇಮಿನಾಥರ ಕುರಿತ ಹಾಡುಗಳೂ ಪ್ರಸಿದ್ಧವಾಗಿವೆ. ಶ್ರೀ ನೇಮಿನಾಥರ ಸ್ತುತಿ ಪದ್ಯ ಹೀಗಿದೆ:

**ನೇಮೀಶ್ವರ ಸ್ವಾಮಿ ದೀಕ್ಷೆ – ಶೋಭಾನೆ**

ಮದಗಜ ನಡೆ–ನುಡಿ ಮೃದು ಚೊಕ್ಕಪದಗಳ
ವದಗಿನಿಂ ಪಾಡುವ ಸುಗಣೆಯಲ್ಲಿಗೆಯೇ ಧ
ಗಧಗಿಸುವ ಸಿಂಹಪೀಠದಿ ರಾಜಿಪ
ಮದನಾರಿ ವಿಜಯನೇಮೀಶನೋಲಗಕಮ್ಮಾ
ಮದಗಜ ಗಮನೆಯರು ನಡೇದಾರೂ। ಶೋ ॥ 1 ॥
ಬಾಲೆಯೌವ್ವನದ ಸುಶೀಲೆ ಮನ್ಮಥರತಿ
ಪೋಲುವರು ಪುವಿ ಶಾಲೆಯಲ್ಲಿಗೆಯೇ
ಬಾಲತನದಿ ದೀಕ್ಷೆಯ ಪಡೆದು ಮೆರೆವ ಮೋಕ್ಷ
ಲೋಲ ಸರ್ವಜ್ಞನೇಮೀಶನೋಲಗಕಮ್ಮ
ಲೋಲಲೋಚನೆಯರು ನಡೆದಾರು । ಶೋ ॥2॥
ಕೊಂಕಿದ ಕುರುಳು ಕೋಮಲೆ ಕಾಮನರ್ಧಾಂಗಿ
ಶಂಖುಗೊರಳ ಸುಪ್ರವೇಣಿಯೆಲ್ಲಿಗೆಯೇ
ಶಂಖ ಚಕ್ರಾಧೀಶ ಕಡಲು ತಲ್ಲಣಿಪಂತೇ
ಶಂಖನಾಡಿಸಿದ ನೇಮೀಶನೋಲಗಕಮ್ಮ
ಪಂಕಜವದನೆಯರು ನಡೇದಾರು । ಶೋ ॥ 3॥
ಇಂದುವದನೆಯರು ಚಂದಕ್ಕೆ ರತಿಪಾಡೆ
ಬಂದ ಲಾವಣ್ಯದ ಬೊಂಬೇ ಎಲ್ಲಿಗೆಯೇ
ಮಂದರಗಿರಿಯೊಳು ನಿಂದು ದೇವೇಂದ್ರನ
ನಂದಾವನಿತ್ತ ನೇಮೀಶನೋಲಗಕಮ್ಮ
ಚಂದಿರ ವದನೆಯರೂ ನಡೆದಾರೂ । ಶೋ ॥4॥
ಹಸ್ತ ಕಡಗ ಅರಳೋಲೆ ಮುತ್ತಿನ ಬೊಟ್ಟು
ಕಸ್ತೂರಿ ತಿಲಕ ಈ ಸಿಸ್ತುಯೆಲ್ಲಿಗೆಯೇ
ಹಸ್ತಿನಿ ಹಸ್ತಿಗಮನೆ ಕೇಳು ಹರಿಣಾಕ್ಷಿ
ಆಸ್ಥಾನ ಪೂಜ್ಯ ನೇಮೀಶನೋಲಗಕಮ್ಮ
ಹಸ್ತಿಗಮನೆಯರು ನಡೇದಾರೂ ॥ ಶೋ ॥ 5 ॥
ತೋರ ಮುಡಿಯ ಸಡಲಿಸಿ ಜಡೆಯ ಮರಸಿ
ಸಾರಂಗ ನಯನೆ ಈ ಪಾರಿ ಎಲ್ಲಿಗೆಯೇ
ಮೇರು ಮಂದಿರ ಗಿರಿಯೊಳುನಿಂದು ಮೋಕ್ಷಕೆ
ಸಾರಿದ ಶ್ರೀ ನೇಮೀಶನೋಲಗಕಮ್ಮ

ಸಾರಂಗನಯನೆಯರು ನಡೇದಾರು ॥ ಶೋ ॥ 6 ॥
ಬಗಸೆಗಂಗಳು ಬಟ್ಟಕುಚದ ಬಾವಕೀ ರನ್ನೆ
ನಗೆಮೊಖ ಸೊಗಸುಗಂಧಿಯೆಲ್ಲಿಗೆಯೇ
ಜಗದೊಳುಜ್ಜಂತಗಿರಿಯೊಳು ನೆಲಸಿ ಮೋಕ್ಷ
ಮಿಗೆ ಪದವೀವ ನೇಮಿಶನೊಲಗಕಮ್ಮ
ಮೃಗ ಮದಗಂಧಿಯರು ನಡೇದಾರೂ ॥ ಶೋ ॥ 7 ॥

## ಪಾರ್ಶ್ವನಾಥ ತೀರ್ಥಂಕರರು

ಜೈನ ತೀರ್ಥಂಕರರಲ್ಲಿ ಅತಿ ಹೆಚ್ಚು ಆರಾದನೆಗೆ ಒಳಗಾದವರಲ್ಲಿ ಪಾಶ್ವನಾಥ ತೀರ್ಥಂಕರರೂ ಸಹ ಒಬ್ಬರು. ಜೈನಸಾಹಿತ್ಯದಲ್ಲಿ ಅವರನ್ನು ಕುರಿತು ಹಾಡುಗಳು ಹೇರಳವಾಗಿ ದೊರೆಯುತ್ತವೆ. ಅವರ ಕುರಿತ ಸ್ತುತಿಗಳು ಜನಪದರ ಸಾಂಸ್ಕೃತಿಕ ಜೀವನದಲ್ಲಿ ಧಾರ್ಮಿಕ ಆಚರಣೆ, ಆರಾದನೆಗಳಲ್ಲಿ ಹಾಡುಗಳಾಗಿ ಹೊರಹೊಮ್ಮಿವೆ. ಜೈನ ಜನಪದ ಹಾಗೂ ಗ್ರಂಥಸ್ಥಪರಂಪರೆಗಳಲ್ಲಿ ಇವರ ಕುರಿತ ಹಾಡುಗಳು ಸಾಕಷ್ಟು ಕಾಣಸಿಗುತ್ತವೆ.

ವಾರಣಾಸಿಯಲ್ಲಿ ವಿಶ್ವಸೇನರಾಜ ಮತ್ತು ಮಾಯಾದೇವಿಯರ ಮಗನಾಗಿ ಜನಿಸಿ ವಿಶ್ವಶಾಂತಿಗಾಗಿ ಮುಕ್ತಿಯ ಆನಂದವನ್ನು ಪಡೆದ ಪರಮಾತ್ಮನೆ, ಕಠಿಣ ವ್ರತವನ್ನು ಕೈಗೊಂಡು ಕಮಠನ ಉಪಟಳವನ್ನು ಸಹಿಸಿ ಸರ್ಪಲಾಂಛನನಾದವನೇ, ಪದ್ಮಾಂಭೆಯನ್ನು ಯಕ್ಷಿಯನ್ನಾಗಿ ಪಡೆದು ಅವಳೊಡನೆ ಮಹಾಭಕ್ತ ಸಾಗರವನ್ನು ಪಡೆದವನೆ, ಜಿನಮತೋದ್ಧಾರಕ್ಕಾಗಿ ಜನ್ಮತಾಳಿ ಸಮ್ಮೇದ ಶಿಖರದಲ್ಲಿ ನಿರ್ವಾಣ ಹೊಂದಿ ಸಿದ್ಧಿಯನ್ನು ಪಡೆದ ಲೋಕಪಾಲನೆ, ಭಕ್ತರನ್ನು ಪೊರೆದು ಅವರ ದು:ಖದ ಸಾಗರವನ್ನು ತೊಡೆದು, ಧರೆಯೊಳಗೆ ಅಧಿಕನಾಗಿರುವ, ಜ್ಞಾನಪೂರ್ಣನಾದ ಪಾರ್ಶ್ವನಾಥನೇ ನಮ್ಮನ್ನು ಕಾಪಾಡು ಎಂದು ಮೊರೆಯುಡುತ್ತಿರುವುದು ಅನೇಕ ಸ್ತುತಿಗೀತೆಗಳಲ್ಲಿ ಕಂಡುಬರುತ್ತದೆ.

ವಾರಣಾಸಿಯಲ್ಲಿ ವಿಶ್ವಸೇನನೆಂಬ ಮಹಾರಾಜನು ಆಳುತ್ತಿದ್ದನು. ಆತನ ಹೆಂಡತಿ ಬ್ರಾಹ್ಮಿಲಾದೇವಿ ಈ ದಂಪತಿಗಳ ಗರ್ಭದಲ್ಲಿ ಇಪ್ಪತ್ತು ಮೂರನೇ ತೀರ್ಥಂಕರರಿಗೆ ಪಾರ್ಶ್ವನಾಥ ಸ್ವಾಮಿಯವರು ಜನಿಸಿದರು. ಇವರಿಗೂ ತೀರ್ಥಂಕರರಿಗೆ ಆಗುವ ಗರ್ಭಾವತರಣ ಮತ್ತು ಜನ್ಮಾಭಿಷೇಕ ಕಲ್ಯಾಣ ಮಹೋತ್ಸವಗಳು ಆದವು. ಪ್ರಾರ್ಶ್ವನಾಥರು ಬಾಲ್ಯದಿಂದಲೇ ವೈರಾಗ್ಯವನ್ನು ಪಡೆದವರು. ಆದುದರಿಂದ ಅವರು ಮದುವೆಯನ್ನೂ ಮಾಡಿಕೊಳ್ಳದೆ ಬ್ರಹ್ಮಚಾರಿಗಳಾಗಿಯೇ ಉಳಿದರು. ಒಂದು ದಿನ ಅವರು ಒಬ್ಬ ಸನ್ಯಾಸಿ ಪಂಚಾಗ್ನಿಯ ಮಧ್ಯದಲ್ಲಿ ಕುಳಿತು ಹಠಯೋಗವನ್ನು ಸಾಧಿಸುತ್ತಿದ್ದುವನ್ನು ಕಂಡರು.

ಆ ಬೆಂಕಿಯಲ್ಲಿ ಉರಿಯುತ್ತಿದ್ದ ಸೌದೆಯ ಕಟ್ಟಿಗೆಯ ಒಳಗೆ ಎರಡು ಸರ್ಪಗಳು ದಹಿಸುತ್ತಿದ್ದುದನ್ನು ಕಂಡು ಪಾರ್ಶ್ವನಾಥರ ಮನಸ್ಸಿನಲ್ಲಿ ದಯೆಯುಂಟಾಯಿತು. ಆಗ ಆ ಸಾಧುವನ್ನು ಕುರಿತು "ನೀನು ಮಾಡುತ್ತಿರುವ ತಪಸ್ಸು ಪಾಪಕ್ಕೆ ಕಾರಣವಾದುದು. ಸುತ್ತಲೂ ಉರಿಯುತ್ತಿರುವ ಕಟ್ಟಿಗೆಗಳಿಂದ ಅನೇಕ ಜೀವಿಗಳು ನಾಶವಾಗುತ್ತದೆ" ಎಂದರು. ಆದರೆ ಆ ಸನ್ಯಾಸಿಯು ಪಾರ್ಶ್ವನಾಥನ ಮಾತನ್ನು ಕೇಳಿಲಿಲ್ಲ. ದುರಹಂಕಾರದಿಂದ ಆತನು ಅವರ ಮಾತನ್ನು ತಿರಸ್ಕರಿಸಿದನು. ಸಹನೆಯ ಗಣಿಯಾಗಿದ್ದ ಪಾರ್ಶ್ವನಾಥರು ಅವನ ವರ್ತನೆಯಿಂದ ಕೋಪಗೊಳ್ಳಿಲಿಲ್ಲ. ಕೂಡಲೇ ಎದ್ದು ಒಂದು ಕೊಡಲಿಯಿಂದ ಅರ್ಧದಹಿಸುತ್ತಿದ್ದ ಕಟ್ಟಿಗೆಯನ್ನು ಸೀಳಿದರು ಅದರ ಒಳಗಿನಿಂದ ಬೆಂದು ಬಳಲಿದ್ದ ಎರಡು ಸರ್ಪಗಳು ಹೊರಕ್ಕೆ ಬಂದವು. ಆಗ ಪಾರ್ಶ್ವನಾಥರು ಅವುಗಳಿಗೆ ಧರ್ಮೋಪದೇಶ ಮಾಡಿದರು. ಅವರ ಉಪದೇಶದ ಪ್ರಭಾವದಿಂದ ಆ ಎರಡು ಸರ್ಪಗಳು ಸತ್ತು ಧರಣೇಂದ್ರ ಮತ್ತು ಪದ್ಮಾವತಿ ದೇವತೆಗಳಾಗಿ

ಜನಿಸಿದರು. ಇದರಿಂದಲೂ ಆ ಹಠಯೋಗದ ಸನ್ಯಾಸಿಗೆ ಪಶ್ಚಾತ್ತಾಪವಾಗದೇ ಕೋಪವೇ ಬಂದಿತು. ಮೂರ್ಖರಿಗೆ ಒಳ್ಳೆಯ ಮಾತು ಹೇಳಿದರೂ, ಕೋಪವು ಹೆಚ್ಚುವುದೇ ಹೊರತು ತಮ್ಮ ತಪ್ಪಿನ ತಿಳಿವಳಿಕೆ ಅವರಲ್ಲಿ ಆಗಲಾರವು.

ಪಾರ್ಶ್ವನಾಥರಲ್ಲಿ ವೈರಾಗ್ಯವು ಹೆಚ್ಚುತ್ತಾ ಬಂದಿತು. ಅದರ ಪರಿಣಾಮವಾಗಿ ಮಾರ್ಗಶಿರ ಬಹುಳ ಏಕಾದಶಿಯ ದಿನ ಅವರು ದೀಕ್ಷೆಯನ್ನು ಕೈಗೊಂಡರು. ಆಗ ದೇವೇಂದ್ರನು "ಪರಿನಿಷ್ಕ್ರಮಣ ಕಲ್ಯಾಣ" ಪೂಜೆಯನ್ನು ವೈಭವದಿಂದ ನೆರವೇರಿಸಿದರು. ಆಗ ವನದಲ್ಲಿ ತಪಸ್ಸು ಮಾಡುತ್ತಿದ್ದಾಗ ಪೂರ್ವಜನ್ಮದ ವೈರಿಯಾಗಿದ್ದ "ಸಂವರದೇವ" ಎಂಬ ವ್ಯಂತರನು ಪಾಶ್ವನಾಥರಿಗೆ ಉಪಸರ್ಗವನ್ನು ಕೊಡಲಾರಂಭಿಸಿದನು. ಅದು 'ಕಮಠೋಪಸರ್ಪ' ಎಂಬ ಹೆಸರಿನಿಂದ ಪ್ರಸಿದ್ಧಿಯಾಯಿತು. ಏಕೆಂದರೆ ಆ ವ್ಯಂತರ ದೇವನಿಗೆ "ಕಮಠ" ಎಂಬ ಹೆಸರೂ ಸಹ ಇದ್ದಿತು. ಆಗ ಧರಣೇಂದ್ರ ಮತ್ತು ಪದ್ಮಾವತಿಯರು ಬಂದು ಪಾರ್ಶ್ವನಾಥರ ತಲೆಯ ಮೇಲೆ ಕೊಡೆಯನ್ನು ಹಿಡಿದು ಆ ದುಷ್ಟನ ಉಪಸರ್ಗ ಭಾದೆಯಿಂದ ರಕ್ಷಿಸಿದರು.

ದೀಕ್ಷೆಯನ್ನು ಕೈಗೊಂಡ ನಂತರ ನಾಲ್ಕು ತಿಂಗಳು ಕಠಿಣ ತಪಸ್ಸನ್ನು ಮಾಡಿದ ನಂತರ, ಚೈತ್ರಬಹುಳ ಚತುರ್ದಶಿಯ ದಿನ, ಪಾರ್ಶ್ವನಾಥರಿಗೆ ಕೇವಲ ಜ್ಞಾನವು ಪ್ರಾಪ್ತಿವಾಯಿತು. ಅನಂತರ ಅವರು ಜನರಿಗೆ ಅಹಿಂಸೆ, ಸತ್ಯ, ಆಸ್ತೇಯ, ಅಪರಿಗ್ರಹಗಳೆಂಬ ನಾಲ್ಕು ವ್ರತಗಳನ್ನು ಉಪದೇಶಿಸಿದರು. ಧರ್ಮೋಪದೇಶ ಮಾಡಲು ಅವರು ಕುರು, ಕೌಶಲ, ಕಾಶಿ, ಆವಂತಿ, ಪುಂಡ್ರ, ಮಾಲವಾ, ಅಂಗ, ವಂಗ, ಕಲಿಂಗ ಪಾಂಚಾಲ, ಮಗಧ, ವಿದರ್ಭ ಭದ್ರ, ದಶಾಣ್ಯ ಕರ್ನಾಟಕ, ದ್ರಾವಿಡ ಮತ್ತು ಕಾಶ್ಮೀರ ಮೊದಲಾದ ದೇಶಗಳಲ್ಲೆಲ್ಲಾ ವಿಹರಿಸಿದರು.

ಪಾರ್ಶ್ವತೀರ್ಥಂಕರರ ಸಮವಸರಣ ಸಭೆಯಲ್ಲಿ ಹದಿನಾರು ಸಹಸ್ರ ಮುನಿಗಳೂ ಮೂವತ್ತಾರು ಸಹಸ್ರ ಆರ್ಜಿಕೆಯರೂ, ಒಂದು ಲಕ್ಷ ಶಾನಕರೂ ಮತ್ತು ಮೂರುಲಕ್ಷ ಶ್ರಾವಿಕೆಯರೂ ಇದ್ದರು. ಇದಲ್ಲದೆ ಗಣಧರರೂ ಇದ್ದರು. ಹೀಗೆ ತಪಸ್ಸು ಮಾಡುತ್ತಿದ್ದ ಪಾರ್ಶ್ವನಾಥರಿಗೆ ಸಮ್ಮೇದ ಶಿಖರಿಯಲ್ಲಿ ಶ್ರಾವಣಶುದ್ಧ ಸಪ್ತಮಿಯ ದಿನ ಮೋಕ್ಷವು ಲಭಿಸಿತು ಅಂದಿನಿಂದ ಭಗವಾನ್ ಪಾರ್ಶ್ವನಾಥ ತೀರ್ಥಂಕರರೆನಿಸಿದರು. ಪಾರ್ಶ್ವನಾಥರ ಕುರಿತ ಸ್ತುತಿಗೀತೆಗಳು ಹೀಗಿವೆ:

**ವಾರಣಾಸಿಪುರವರಾದೀಶ ಶ್ರೀ ಪಾರಿಶ್ವನಾಥ**

"ಪರಮಾತ್ಮ ಭಕ್ತಪಾಲ ಪಾರ್ಶ್ವನಾಥ ಪಾಲಿಸೋ।
ಸುರಸೇವ್ಯ ನಿನ್ನನುತಿಪೆ ಮುಕ್ತಿಪಥವ ತೋರಿಸೋ॥ಪ॥
ವಾರಾಣಾಸಿಪುರದ ಪುಣ್ಯಜಿನೇಕ
ಪಾರುಮಾಡೊ ದುಃಖ ಶರಧಿಯಿಂದ ಮಹೇಶ॥1॥
ವಿಶ್ವಸೇನ ವಾಮಾದೇವಿಯ ಕಂದ।
ವಿಶ್ವಶಾಂತಿ ಕೋರಿ ಪಡೆದೆ ಮುಕ್ತಿಯಾನಂದ॥2॥
ಘೋರ ಕಮಠೋಪಸರ್ಗ ವಿಜಯಿ ವಿಶೇಷ।
ಶ್ರೀ ರಮೇಶ ಸರ್ಪಲಾಂಭನೇಶ ಜಿನೇಶ॥3॥
ಉರಗರಾಜನರಸಿ ಪದ್ಮಾಂಬೆಯೊಂದಿತಾ॥
ಧರೆಯೊಳಧಿಕರಾದ ಜೈನ ಭಕ್ತ ಪೂಜಿತಾ॥4॥
ಕಾಮಬಾಣನಾಶ ನಿನ್ನ ಪಾದ ಪಾವನ ।
ಸ್ವಾಮಿ ನಿನ್ನ ನಾಮಧ್ಯಾನ ಮುಕ್ತಿ ಸಾಧನ ॥5॥
ಜ್ಞಾನ ಪೂರ್ಣ ಪೊರೆಯೋ ಪಾರ್ಶ್ವನಾದ ಜಿನೇಶ।
ಜೈನ ಮತೋಧ್ಧಾರಕ ಸಮ್ಮೇದ ಗಿರೀಶ ॥6॥

**ಶೋಕವಿನಾಶಕ ಪಾರ್ಶ್ವನಾಥ**

ಶ್ರೀ ಪದ್ಮಪ್ರಭ ಲೋಕತ್ರಯಾದಿಪ । ನೀ ಪಾಲಿಸು ಎನ್ನಾ ।
ಮೋಹನಾ ಪಾಪ ವಿನಾಶನ । ಶ್ರೀಪತಿ ಪಾವನ ರೂಪನೇ ॥ 1 ॥
ಅನುದಿನ ಶೋಕವಿನಾಶನ । ಶ್ರೀ ಪಂಕಜಾಸನ ದೇವಾ ।
ನುತಭವ್ಯಂಕ ಸೇವ್ಯ ಜೀವಾ। ಸಂಕಟನಾಶನಾ ಕಿಂಕರ ಪಾಲನಾಲಂ ।
ಕ್ರತ ಮೂರ್ತಿಶ್ರೀ ವ್ರೋಂಕಾರ ರೂಪಿತ ॥ ಶ್ರೀ ॥ 2 ॥
ಪರತರ ಮಹಿಮದೇವಾ । ನಿನ್ನಯ ಪಾದಸರಸಿಜ ತೋರೋ ಜೀವಾ ।
ಪರಮ ಶರೀರನೆ । ಸುರಚಿರರೂಪನೆ।
ನಿರತ ನಿನ್ನಯ ಪಾದ। ಸರಸಿಜಭೃಂಗನಾ ॥ ಶ್ರೀ ॥ 3 ॥
ಮದಗಳೆಂಟನು ಗೆಲಿದೆ । ಷಡ್ದೈತ್ಯರ ಮದಗರ್ವವ್ರೊಡೆವ್ರೊಡೆದು ।
ಮುದದಿ ನಾಲುವತ್ತೆಂಟು । ಕರ್ಮವೆಂಬ ಸುರರ ।
ಸದೆದಸ್ತ್ರವಿಲ್ಲದೆ ಗೆಲಿದ ಮಹಾತ್ಮನೆ ॥ ಶ್ರೀ ॥ 4 ॥
ನಿತ್ಯ ಸಮಂಗಲನೆ । ಹೇದೇವನೆ ಭೃತ್ಯವಿಪಾಲಕನೆ ।
ನಿತ್ಯಾನಂದನೆ ಕರ್ತೃ ಶ್ರೀ ಜಿನಪನೆ
ಆರ್ತಿಯೊಳನುದಿನ ಕೀರ್ತಿಸುವಂತೆನ್ನ ॥ ಶ್ರೀ॥ 5 ॥
ಕರ್ಮವೆಂಬ ಸುರರನುನಾಶಮಾಡಿ । ಪೆರ್ಮೆಯಿಂ ಭವ್ಯರನು ।
ನಿರ್ಮಲಚಿತ್ತದಿ ಪೆರ್ಮೆಯೊಳಿರಿಸುತ್ತಾ ।
ಕರ್ಮಜನರ ಹ್ರದಯಾರ್ಣವವಡಬನೆ ॥ ಶ್ರೀ ॥ 5 ॥
ತರಳ ಬುದ್ಧಿಯಿಂದ ನಿನ್ನಯ । ಗುಣಗಳನು ವರ್ಣಿಸಿದಂದ ।
ನೊರವೆನು ಎನ್ನಯ ಮೆರೆಯುವ ನಾಮವ ।
ಚರಣನಾಶ್ರಿತನಾದ ಕುವರ ನ್ರಸಿಂಹನಾ ॥ ಶ್ರೀ ॥ 6 ॥
ಧರಣಿಗಧಿಕವೆನಿಪಾ । ಶ್ರೀ ಜಿನಕಾಶಿಪುರದೊಳು ನೆಲೆಸುತ್ತಿರ್ಪಾ ।
ವರಕಲ್ಲು ಬಸದಿಯ ಪುರದೊಳು ನಿಂತಿಹ ।
ಪರಮಾತ್ಮರೂಪ ಶ್ರೀ ಶರಣನ ಕರುಣದಿ ॥ ಶ್ರೀ ॥ 7 ॥

**ಪಾರ್ಶ್ವಜಿನರಾಜ ರಕ್ಷಿಸು**

ಸುಖದ ಸ್ವರೂಪನೆ ದು:ಖವಿದೂರನೆ
ಸಕಲ ತತ್ವವನರಿತವನೇ
ಅಕಳಂಕ ಚರಿತನೆ ಪಾರಿಶ್ವ ಜಿನಪನೆ
ಸುಖವಿತ್ತು ಜನರ ರಕ್ಷಿಪನೇ ॥ 1 ॥
ಕಾಡುವ ಬೇಡುವ ದೈವ ನೀನಲ್ಲದೆ
ಆಡಲು ಬದಲುಂಟೆ ದೇವಾ
ನೋಡಿ ಎನ್ನಯ ಮೋಹದಿಂದ ರಕ್ಷಿಸೋ
ಮುಕ್ತಿ ಗೂಡಿದ ಶ್ರೀ ಜಿನರಾಜಾ ॥ 2 ॥
ಹುಟ್ಟುವ ಹೊಂದುವ ದಂದುಗ ನಿನಗಿಲ್ಲ
ಮೆಟ್ಟುವನಲ್ಲಿ ಭೂಮಿಯನು
ಸುಟ್ಟು ಕರ್ಮದ ಬೇರ ಕೆಡಿಸಿದಮಹಿಮನೆ

ಕೊಟ್ಟು ರಕ್ಷಿಸು ಶಿವಪದವಾ ॥ 3 ॥
ಪರಬ್ರಹ್ಮರೂಪನೆ ಪರತತ್ವಕಾಯನೆ
ಪರಮ ಮುಕ್ತಿಗೆ ಪ್ರಾಣದೆರೆಯ
ಪರಮದಯಾಂಬುಧಿ ಪಾರಿಶ್ವಜಿನಪತಿ
ಕರುಣಿಸು ಮತೀಯ ನೀನೆನಗೆ ॥ 4॥
ಕರ್ಕಶವೆನಿಪಷ್ಟದಶಾದೋಷಗಳ
ನುಗ್ಗು ಗುಟ್ಟಿದ ಪರಮಾತ್ಮರೂಪಾ
ಸೃಷ್ಟಿ ಭವ್ಯದ ಪಾಲಪಾರಿಶ್ವ ಜಿನಪನೆ
ಕೊಟ್ಟು ರಕ್ಷಿಸು ಮುಕ್ತಿಪದವಾ ॥ 5 ॥
ಹೃದಯದೊಳಡಗಿರ್ದ ಪುದಿದ
ಕರ್ಮದ ಪಡೆಯನೆಲ್ಲವನೊಡೆದೊಡೆದು
ಮುದದಿ ಸಾಮ್ರಾಜ್ಯ ಸಂಪದವಾಳ್ದಶ್ರೀಜಿನ
ವದಗಿನಿಂದೆಮ್ಮ ರಕ್ಷಿಪುದು ॥ 6॥

## ಮಹಾವೀರ ತೀರ್ಥಂಕರರು

ವಿಶ್ವವಂದ್ಯ ಭಗವಾನ್ ಮಹಾವೀರರು ಜೈನರ ಆರಾಧ್ಯದೈವ. ಇವರು ಜೈನಧರ್ಮದ 24 ತೀರ್ಥಂಕರರಲ್ಲಿ ಕಡೆಯವರು. ಇವರು ಐತಿಹಾಸಿಕ ಪುರುಷರೂ ಹೌದು. ಇವರು ಜೈನ ಧರ್ಮದ ಸ್ಥಾಪಕರಲ್ಲ. ಮೊದಲ ತೀರ್ಥಂಕರ ಆದಿನಾಥರ ಕಾಲದಲ್ಲಿಯೇ ಜೈನಧರ್ಮ ಸ್ಥಾಪನೆಯಾಗಿದೆ. ಮಹಾವೀರರು ಜೈನಧರ್ಮವನ್ನು ಪುನರುತ್ಥಾನಗೊಳಿಸಿದ ಒಬ್ಬ ತೀರ್ಥಂಕರರಾಗಿದ್ದಾರೆ. ಕ್ರಿ. ಪೂ. 6ನೇ ಶತಮಾನದಲ್ಲಿ ವಿಶ್ವದ ವಿವಿಧ ಕಡೆಗಳಲ್ಲಿ ಜನ್ಮತಾಳಿದ ತತ್ವಜ್ಞಾನಿಗಳು ದಾರ್ಶನಿಕರು, ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ಸುಧಾರಣೆ ನಡೆಸಿದ್ದಾರೆ. ಮೂಢನಂಬಿಕೆಗಳನ್ನು ಹೋಗಲಾಡಿಸಲು ಧರ್ಮೋಪದೇಶ ಹಾಗೂ ಸುಧಾರಣೆ ಮಾಡಿದ್ದಾರೆ. ಉದಾ. ಚೀನಾದಲ್ಲಿ ಲಾವ್ರೋತ್ಸೆ ಕನ್‌ಫ್ಯೂಶಿಯಸ್, ಗ್ರೀಸ್‌ನಲ್ಲಿ ಹಿರಾಕ್ಲೀಟಸ್, ಪರ್ಶಿಯಾದಲ್ಲಿ ಜೊರಾಸ್ಟರ್, ಪ್ಯಾಲಸ್ಟೈನ್‌ನಲ್ಲಿ ಆಪ್ರೋಸ್ ಮುಂತಾದವರು. ಈ ಸಂದರ್ಭದಲ್ಲಿ ಭಾರತದಲ್ಲಿ ಪುರೋಹಿತಶಾಹಿ ವೈದಿಕಧರ್ಮದ ಪ್ರಾಬಲ್ಯದಿಂದಾಗಿ ಕೆಲವು ಗೊಡ್ಡು ರೂಢಿಸಂಪ್ರದಾಯಗಳು, ಅವಾಸ್ತವತೆಯ ಆಚರಣ, ಅವೈಜ್ಞಾನಿಕತೆ, ಬಲಿಪದ್ಧತಿಯಂತಹ ಕ್ರೌರ್ಯದ ಹಿಂಸಾಚರಣೆಗಳಿಂದಾಗಿ ನಲುಗಿ ಹೋಗಿತ್ತು. ಇವುಗಳನ್ನೆಲ್ಲಾ ತೊಡೆದು ಹಾಕಲು ಜೈನಧರ್ಮ, ಬೌದ್ಧ ಧರ್ಮಗಳ ಪುನರುತ್ಥಾನವಾಗಲೇ ಬೇಕಾದ ಸಂದರ್ಭದಲ್ಲಿ ಮಹಾನ್ ಮಾನವತಾವಾದಿ, ಅಹಿಂಸಾಮೂರ್ತಿಯಾಗಿ ಉದ್ಭವಿಸಿ ಸಮಾಜವನ್ನು ಸುಧಾರಿಸಿದವನೇ ಭಗವಾನ್ಮಹಾವೀರರು.

ಕುಂಡಲಿಪುರದಲ್ಲಿ ಸಿದ್ಧಾರ್ಥನು ಮಹಾರಾಜನಾಗಿದ್ದನು. ಆತನ ಹೆಂಡತಿ ತ್ರಿಶಲಾದೇವಿ. ಅವಳು ವೈಶಾಲಿರಾಜನಾಗಿದ್ದ ಚೇಟಕನ ಮಗಳಾಗಿದ್ದಳು. ಈ ಸಿದ್ಧಾರ್ಥ ಮತ್ತು ತ್ರಿಶಲೆಯರಲ್ಲಿ ಚೈತ್ರಶುದ್ಧ ತ್ರಯೋದಶಿಯ ದಿನ ಮಹಾವೀರ ಸ್ವಾಮಿಯು ಜನಿಸಿದರು. ಆ ದಿನವನ್ನು ಇಂದಿಗೂ 'ಮಹಾವೀರ ಜಯಂತಿ'ಯ ದಿನವನ್ನಾಗಿ ಆಚರಿಸುತ್ತಾ ಬರುತ್ತಿದ್ದಾರೆ. ಮಾಹಾವೀರರು ಜನಿಸುತ್ತಿದ್ದಂತೆಯೇ ರಾಜ್ಯದಲ್ಲಿ ಸುಭೀಕ್ಷವು ತಲೆದೋರಿ, ಮಳೆಬೆಳೆಗಳಿಂದ ನಾಡು ಸಮೃದ್ಧವಾಯಿತು. ಆದುದರಿಂದ ಅವರಿಗೆ ವರ್ಧಮಾನವೆಂಬ ಹೆಸರನ್ನಿಟ್ಟರು. ಮುಂದೆ ಕ್ರಮವಾಗಿ ಅವರ ಮಹಿಮೆಗೆ ಅನುಗುಣವಾಗಿ ವೀರ, ಮಹಾವೀರ, ಸನ್ಮತಿ ಮೊದಲಾದ ಹೆಸರುಗಳುಂಟಾದವು. ಇವುಗಳ ಜೊತೆಗೆ ಇವರ ವಂಶ 'ಜ್ಞಾತ' ವಂಶ ವಾದುದರಿಂದ 'ಜ್ಞಾತಪುತ್ರ' ಎಂಬ ಹೆಸರೂ ಉಂಟಾಯಿತು.

ಸಂಜಯ ಮತ್ತು ವಿಜಯರೆಂಬ ಚಾರಣ ಮುನಿಗಳಿಗೆ ಶಾಸ್ತ್ರದ ವಿಚಾರದಲ್ಲಿ ಉಂಟಾಗಿದ್ದ ಸಂದೇಹವು ಮಹಾವೀರರ ದರ್ಶನದಿಂದ ಮಾತ್ರವೇ ನಿವಾರಣೆಯಾದುದರಿಂದ ಇವರಿಗೆ 'ಸನ್ಮತಿ' ಎಂಬ ಹೆಸರುಂಟಾಯಿತು.

ಮದಿಸಿ ಬಂದ ಒಂದು ಘಟಸರ್ಪದ ಮದವನ್ನು ಇಳಿಸಿದುದರಿಂದ ಮಹಾವೀರರ ಎಂಬ ಹೆಸರಾಯಿತು ಎಂದು ಕೆಲವರು ಹೇಳುತ್ತಾರೆ.

ಮಹಾವೀರರು ಮದುವೆಯನ್ನು ಮಾಡಿಕೊಳ್ಳಲಿಲ್ಲ. ಮೂವತ್ತನೆ ವಯಸ್ಸಿನಲ್ಲಿ ದೀಕ್ಷೆಯನ್ನು ಕೈಗೊಂಡರು ಅವರ ದೀಕ್ಷಾ ಮಹೋತ್ಸವ ಮಾರ್ಗಶಿರ ಬಹುಳ ದಶಮಿಯ ಅನಂತರ. ಅವರು ಹದಿಮೂರು ವರ್ಷಗಳವರೆಗೆ ಕಠಿಣವಾದ ತಪಸ್ಸನ್ನು ಮಾಡಿ ವೈಶಾಖ ಶುದ್ಧ ತದಿಗೆಯ ದಿನ ಮೂರನೇ ಜಾವದಲ್ಲಿ ಕೇವಲ ಜ್ಞಾನವನ್ನು ಪಡೆದರು.

ಕೇವಲ ಜ್ಞಾನವನ್ನು ಹೊಂದಿದ ಮಹಾವೀರರಿಗೆ ಸಮವಸರಣ ಸಭೆ ರಚನೆಯಾಯಿತು. ವಿಹಾರ ಮಾಡುತ್ತಾ, ಮುಂದಿನ ಮೂವತ್ತು ವರ್ಷಗಳವರೆಗೆ ಧರ್ಮೋಪದೇಶವನ್ನು ಮಾಡಿದರು. ಜೈನಧರ್ಮದ ಪ್ರಭಾವವನ್ನು ಹೆಚ್ಚಿಸಿದರು. ಪಾರ್ಶ್ವತೀರ್ಥಂಕರರು ಅಹಿಂಸೆ,ಸತ್ಯ, ಆಸ್ತೇಯ, ಮತ್ತು ಅಪರಿಗ್ರಹ ಎಂಬ ನಾಲ್ಕು ವ್ರತಗಳನ್ನು ಉಪದೇಶಿಸಿದರೆಂದು, ಈಗಾಗಲೇ ಮಹಾವೀರರು ಆ ನಾಲ್ಕು ವ್ರತಗಳ ಜೊತೆಗೆ 'ಬ್ರಹ್ಮಚರ್ಯೇ' ಎಂಬ ಮತ್ತೊಂದು ವ್ರತವನ್ನು ಸೇರಿಸಿ ಐದು ವ್ರತಗಳನ್ನು ಬೋಧಿಸಿದರು.

ಶ್ರೇಣಿಕ ಮಹಾರಾಜನು ಮಹಾವೀರರ ಸಮವಸರಣ ಸಭೆಯಲ್ಲಿ ಮುಖ್ಯವಾದ ಪ್ರಶ್ನೆ ಕೇಳತಕ್ಕವನಾಗಿದ್ದನು. ಅವನನ್ನು 'ಶ್ರೋತೃ' ಎಂದು ಹೇಳುತ್ತಾರೆ ಅವನಿಗೆ ಬಿಂಬಸಾರನೆಂಬ ಹೆಸರೂ ಇದ್ದಿತು. ಇವನ ಹೆಂಡತಿ 'ಚೇಳಿನೀದೇವಿ'. ಈಕೆ ಚೇಟಕನ ಪುತ್ರಿಯಾಗಿದ್ದು ತ್ರಿಶಲಾದೇವಿಯ ಸಹೋದರಿಯಾಗಿದ್ದಳು.

ಮಹಾವೀರರ ಸಭೆಯಲ್ಲಿ 'ಗೌತಮ' ಎಂಬ ಗಣಧರಿದ್ದರು. ಬ್ರಾಹ್ಮಣ ವಿದ್ವಾಂಸರಾಗಿದ್ದ ಅವರು ಅಹಂಕಾರದಿಂದ ಮಹಾವೀರರ ಉಪದೇಶಗಳನ್ನು ಖಂಡಿಸುತ್ತಿದ್ದರು. ಅವರಿಗೆ 'ಇಂದ್ರಭೂತಿ' ಎಂಬ ಮತ್ತೊಂದು ಹೆಸರಿದ್ದಿತು. ಮಹಾವೀರರ ಉಪದೇಶದಿಂದ ಪ್ರಭಾವಿತರಾದ ಅವರು ಕೊನೆಗೆ ಜೈನ ದೀಕ್ಷೆಯನ್ನು ಕೈಗೊಂಡರು.

ಹೀಗೆ ತಮ್ಮ ಕಠಿಣ ತಪಸ್ಸಿನಿಂದ ಮಹಾವೀರರು ಕಾರ್ತಿಕ ಬಹುಳ ಅಮಾವಾಸ್ಯೆಯ ದಿನ ಬೆಳಗಿನ ಜಾವದ ಸ್ವಾತಿ ನಕ್ಷತ್ರದಲ್ಲಿ ಪಾವಾಪುರಿಯ ಉಪವನದಲ್ಲಿ ಮೋಕ್ಷವನ್ನು ಪಡೆದರು. ಆಗ ಅವರಿಗೆ ಎಪ್ಪತ್ತೆರಡು ವರ್ಷ ವಯಸ್ಸಾಗಿದ್ದಿತು. ಅಂದಿನಿಂದ ಮಹಾವೀರ ಶಕ ಆರಂಭವಾಯಿತು. ಅವರು ಉಪದೇಶಿಸಿದ ತತ್ವಗಳು ದಿವ್ಯಜ್ಯೋತಿಯಂತೆ ಈಗಲೂ ಜನಗಳ ಅಜ್ಞಾನವೆಂಬ ಕತ್ತಲೆಯನ್ನು ತೊಡೆದು ಹಾಕುತ್ತಿದೆ.

ಇವರನ್ನು ಕುರಿತ ಒಂದು ಜೋಗುಳದ ಹಾಡನ್ನು ಉಲ್ಲೇಖಿಸಬಹುದು.

ಜೋ,ಜೋ,ಜೋ,ಜೋ, ಮಹಾವೀರಸ್ವಾಮಿ ।
ಜೋ,ಜೋ,ಜೋ,ಜೋ,ತೀರ್ಥೇಶ ಭವನಾಶ ॥ಪ॥
ದೇವಿ ತ್ರಿಶಲಾಮಾತೆ ಮುದ್ದುಕಂದ ।
ರಾಜ ಸಿದ್ಧಾರ್ಥನ ನೇತ್ರಾನಂದ ।
ಲೋಕದ ಬೆಳಕಿಗೆ ಆನಂದ ಸಿರಿಗಂಧ ।
ಗುರುವರ ಶುಭಕರ ತೀರ್ಥಂಕರನೇ ॥ಜೋ॥
ಕಟ್ಟಿದ ಸುಮಸುಂದರ ಮಂಟಪದಲ್ಲಿ ।
ಇಟ್ಟರು ಮಣಿಕನಕ ಸಮೆದತೊಟ್ಟಿಲನು ।
ಪಟ್ಟೆ ಪೀತಾಂಬರ ಹಾಸುತ್ತ ಮಗುವನ್ನು ।
ತೊಟ್ಟಿಲೊಳಿಟ್ಟು ತೂಗಿದರು ।
ಗೌಳಗುಜ್ಜರ ನಾಟಿ,ಜಂಪೆ ರಾಗಗಳಿಂದ ।
ಮಾಳವ, ಕಾಂಬೋಧಿ, ಕಲ್ಯಾಣಿಯಿಂದಲಿ ।
ವಿಧವಿಧ ಸ್ವರವೆತ್ತಿ ಮುದದಿಂದ ಪಾಡುತ್ತಂ ।
ಭವ ಕೋಟಲೆಗಳ ಪರಿಹರಿಸೆನ್ನುತ್ತ ಜೋ, ಜೋ ॥

ದಿಟ್ಟಿಯತೆಗೆದರು ದೇವಾಂಗನೆಯರು ।
ನಲಿದರು ಯಕ್ಷ ಯಕ್ಷಿಯರು ದೇವಗಣ ।
ಸತ್ಯ ಅಹಿಂಸೆಯ ವಿಶ್ವಸೌಭಾಗ್ಯವು ।
ಕರುಣಿಸು ಎನ್ನುತ ಮುದದಿ ತೂಗಿದರು ಜೋ, ಜೋ ॥
ದೇವದುಂದುಭಿಗಳು ಮೊಳಗಿದವು ।
ಪಾವನ ಹೋಮಳೆ ವರ್ಷಿಸಿತು ।
ಪಾವನ ಮೂರುತಿ ಮಹಾವೀರಸ್ವಾಮಿ ।
ಜಯ ಜಯವೆನ್ನುತ ಲೋಕವೇ ನಲಿಯಿತು ॥ಜೋ, ಜೋ॥ಪ॥
ಭಕ್ತರ ಹೃದಯ ತೊಟ್ಟಿಲ ಶೋಭೆ ಈ ಕಂದ ।
ಆನಂದ । ಪರಮಾನಂದ ಭವ್ಯಾನಂದ ।
ದಿನಕರ ಶುಭಕರ । ಗುರುವರ ಭವಹರ ।
ಮಹಾವೀರ ಕಂದ ಆನಂದ ॥ ಜ್ಯೋತಿ ॥ಜೋ ಜೋ॥"18॥

ಈ ಹಾಡು ಮಹಾವೀರ ಸ್ವಾಮಿಯನ್ನು ತೊಟ್ಟಿಲಲ್ಲಿ ಮಲಗಿಸಿ, ತೂಗಿ ಹಾಡುವ, ಜೋಗುಳದ ಹಾಡಾಗಿದೆ. ತ್ರಿಶಲಾ ಮಾತೆಯ ಮುದ್ದು ಕಂದನಾಗಿ, ಸಿದ್ಧಾರ್ಥ ಮಹಾರಾಜನ ಕಣ್ಣಾಲಿಗೆ ಆನಂದವನ್ನುಂಟುಮಾಡುವ, ಜಗದ ಅಂಧಕಾರವನ್ನು ತೊಳೆವ ಗುರು ಶುಭಕರನಾದ ಮಹಾವೀರಸ್ವಾಮಿಯನ್ನು ಪುಷ್ಪಮಂಟಪದಲ್ಲಿ ಚಿನ್ನದ ತೊಟ್ಟಲು ಕಟ್ಟಿ, ಪಟ್ಟೆಪೀತಾಂಬರಗಳನ್ನು ಹಾಸಿ, ಮಗುವನ್ನು ಮಲಗಿಸಿ ಜೋ ಜೋ ಎಂದು ಹಾಡುತ್ತಾ ತೂಗಿದರು. ಆಗ ವಿವಿಧ ಪ್ರಸಿದ್ಧ ಸಂಗೀತ,ಸ್ವರ,ನಾದ,ತಾಳಗಳ ಸಮೇತ ಹಾಡುತ್ತಾ ಜನ್ಮದ ಕಷ್ಟಕೋಟಲೆಗಳನ್ನು ಪರಿಹರಿಸೆನ್ನುತ್ತಾ ಬೇಡುವರು. ಮಹಾವೀರಸ್ವಾಮಿಯ ಅಂದಕ್ಕೆ ದೇವಾಂಗನೆಯರು ದೃಷ್ಟಿಯನ್ನು ತೆಗೆದರು. ಯಕ್ಷ–ಯಕ್ಷಿಯರು,ದೇವಗಣಧರರೆಲ್ಲರೂ ಕುಣಿದು ನಲಿದರು. ಸತ್ಯ ಅಹಿಂಸೆಗಳೆಂಬ ಸೌಭಾಗ್ಯವನ್ನು ಕರುಣಿಸೆಂದು ಸ್ತುತಿಸುತ್ತಾ ಕಂದನನ್ನು ತೂಗಿದರು. ಆ ಸಂದರ್ಭದಲ್ಲಿ ದೇವ ದುಂದುಂಭಿಗಳು ಮೊಳಗಿ, ಪುಷ್ಪವೃಷ್ಟಿಯಾಗಿ, ಮಹಾವೀರನಿಗೆ ಜಯಜಯವೆನ್ನುತ್ತಾ ಜಗವೇ ನಲಿಯಿತು. ಆ ಮೂಲಕ ಭಕ್ತರಿಗೆ ಪರಮಾನಂದ ನೀಡೆಂದು ಭವನಾಶ, ತೀರ್ಥೇಶ ಮಹಾವೀರರನ್ನು ಜೋ ಜೋ ಎಂದು ತೂಗುತ್ತಾ ಹಾಡುವರು. ಹೀಗೆ ಇಷ್ಟೇ ಅಲ್ಲದೇ ಸ್ತುತಿಗೀತೆಗಳು, ಕೀರ್ತನೆಗಳು, ಸೋಭಾನೆ ಹಾಡುಗಳು, ಮುಕ್ತಕಗಳು, ಲಾವಣಿಗಳು ಇನ್ನೂ ಅನೇಕ ಪ್ರಕಾರದ ಹಾಡುಗಳು ಮಹಾವೀರರನ್ನು ಕುರಿತು ದೊರಕುತ್ತವೆ.

ತೀರ್ಥಂಕರರ ಕುರಿತ ಹಾಡುಗಳಲ್ಲಿನ ವೈವಿಧ್ಯಕ್ಕೆ ಈ ಕೆಳಗಿನ ಹಾಡುಗಳನ್ನು ನಿದರ್ಶನವಾಗಿ ನೀಡಬಹುದು:

**ತುಂಡುಪದಗಳು**

ಪಾಲಿಸೆನ್ನನ್ನು ಆದಿನಾಥನೆ । ಕಾಲ ಕಾಲ ದೇವನೆ
ಪಾಲಿಸೆನ್ನನು॥
ಸಾಕೇತಾಧಿಪ ನಾಭಿರಾಜನ ಸುಕುಮಾರ ಸರ್ವವಿ
ಲೋಕವಂತ ಕಾಕುಸ್ತನ್ವಯನಾ
ಶ್ರೀ ಸತಿಯು ಮರುದೇವಿ ಮಾನಸ
ಶೋಕನಾಶನದೇವಾ ತ್ರಿಭುವನ ಪಾತಶಾಸನಾಮುಖ್ಯ
ಸಕಲ ಸುರಾಸುರಾದಿ ಸ್ತೋತ್ರ ದೇವನೆ ॥ ಪಾ ॥ 1 ॥
ಶಂಕರಾಕರಕಪದೇವನೆ ಭವ್ಯಾಂಕ ಸೇವ್ಯನ

ಲಂಕ್ರತಮಳ ದಿವ್ಯಕಾಯನೆ
ಪಂಕಜಾಸನಕಿಂತರವಿಜನ ಮಂಕುಜನರ್ತಳ
ಬಿಂಕವಿಳುಹುವ ಓಂಕಾರ ಸ್ವರೂಪ ಶಶಾಂ
ಕಕೋಟಿ ಪ್ರಕಾಶ ದೇವನಾ ॥ ಪಾ ॥ 2 ॥
ವೀರರಜತಾದ್ರಿ ನಿವಾಸನೆ ಶ್ರೀ ಆದಿನಾಥನೆ
ಕಾರುಣ್ಯಾಕರಮೂರ್ತಿ ದೇವನೆ
ಪಾರಗಾಣಿಸು ಘೋರ ಜಲ್ಮದಿ ಸೇರಿನೊಂದೆನು
ವೀರಜಿನಪನೇ ತೋರೋನಿನ್ನ ಪಾದಾರವಿಂದವ
ಪಾರವಾರ ಗಭೀರ ದೇವನೆ ॥ಪಾ॥ 3॥
ಧಾರುಣಿಯೊಳಧಿಕವಾಗಿರುವಾ ಭಾವಂತಬೆಟ್ಟಿನ
ಚಾರುಪುರದೊಳು ವಾಸವಾಗಿರುವಾ
ಸೇರಿವಂದಿಪ ಭೂರಿ ಭವ್ಯರ
ಚಾರುಚಿತ್ತಕ್ಕಾನಂದ ಪಾಲಿಪ
ವೀರಶ್ರೀ ಭುವನೋದ್ಧಾರ ದಿವ್ಯಸು
ಸಾರವಂದಿಪ ನಾರಸಿಂಹನಾ ॥ ಪಾ ॥ 4॥

**ಪಂಚಪರಮೇಷ್ಟಿ ಶೋಭಾನೆ**

ದೇವರ ದೇವನೇ ಕೈವಲ್ಯ ಭೋದನೆ
ಪಾವನಮೂರ್ತಿರಮಣೀಯ
ಕೈವಿಡದ ಶ್ರೀವೀರ ಜಿನದೇವಾ ಸಲಹೆನ್ನಾ ॥ ಶೋ ॥ 1 ॥
ಎಂಟುಕರ್ಮವ ಗೆಲಿದು ಎಂಟುಗುಣವ ಪಡೆದೂ
ಎಂಟನೆಯ ಭೂಮಿಗರಸಾದ ಅರಸಾದಸಿದ್ದರ್ಗೆ
ಎಂಟುಗುಣಗಳನ್ನು ಬಲಗೊಂಬೆ ॥ ಶೋ ॥ 2 ॥
ಆಚಾರಮೈದನು ಆಚರಿಸಿ ಭವ್ಯರ್ಗೆ
ಗೋಚರವಪ್ಪಂತೆ ನಡಸುವ । ನಡಸುವ ಆಚಾರ್ಯ
ಶ್ರೀ ಚರಣಗಳೇ ಶರಣೆನಗೆ ॥ ಶೋ ॥ 3 ॥
ಓದಿಶಾಸ್ತ್ರಂಗಳ ಓದಿಸಿ ಭವ್ಯರ್ಗೆ
ಮೇಧಿನಿಯೊಳಗೆ ಪೆಸರಾದ । ಪೆಸರಾದಬಲು
ಪದೇಶ ಶ್ರೀಚರಣಗಳ ಬಲಗೊಂಬೆ ॥ ಶೋ ॥ 4॥
ಸರ್ವಜ್ಞ ಸಾದ್ರತ ವರ್ತಸರ್ವಸ
ಭವವಾಸರ್ವೇಜ್ಞ ವಚನ । ಭರದಿಂದಾಒಲಿದ
ಸರ್ವಸಾಧುಗಳೇ ಶರಣೆನಗೇ ॥ ಶೋ ॥ 5 ॥
ವಾಣೀಯ ಪಲ್ಲವ ಪಾಣೀಯ ಮುತ್ತಿನಾ
ಶ್ರೇಣಿಯ ಕವಿತೆ ಮೊದಗುವ । ಮೊದಗುವ ಬ್ರಹ್ಮನ
ರಾಣಿಯ ನೆನೆದು ಬಲಗೊಂಬೇ ॥ ಶೋ ॥ 6 ॥
ಸುರಲೋಕದೊಳಗಿಲ್ಲ ನರಲೋಕದೊಳಗಿಲ್ಲ

ಧರಣೇಂದ್ರನ ಲೋಕದೊಳಗಿಲ್ಲಾ। ಒಳಗಿಲ್ಲಾ ಪದ್ಮಾವತಿಗೆ
ಸರಿಯಾದ ರೂಪಿನ ಸುದತಿಯರು ॥ ಶೋ ॥ 7॥
ಬಾಯೆಲ್ಲಿನರಸಿಯನ್ನು ಭಾವವನೊಲಿಸುವ
ದೇವದರಣೇಂದ್ರನರಸೀಯಾ। ಅರಸಿ ಪದ್ಮಾವತಿಯಾ
ಭಾವ ಶುದ್ಧಿಯಲ್ಲಿ ಬಲಗೊಂಬೇ ॥ಶೋ॥ 8 ॥
ಅಂಗನೆಯರರಸಿಗೇ ಮಂಗಲ ಮಜ್ಜನಕ್ಕೆಂದೂ
ಗಂಗಾದೇವಿಯು ಜಲಕಳುಹಿದಳೂ । ಕಳುಹಿದಳು ಪದ್ಮಾವತಿಯಾ
ಮಂಗಲ ಮಜ್ಜನಕ್ಕೆ ಅನುವಾಯ್ತು ॥ ಶೋ ॥ 9॥
ತಾವರೆಕೊಳದಿಂದಾ ಪಾವನ ಜಲದೊಳು।
ದೇವೇಂದ್ರನರಸಿ ಕಳುಹಿದಳು । ಕಳುಹಿದಳು ಪದ್ಮಾವತಿಯಾ
ಮಂಗಲ ಮಜ್ಜನಕ್ಕೆ ಅನುವಾಯ್ತು ॥ ಶೋ ॥ 10 ॥
ಮಂಗಳ ಮಜ್ಜನವನ್ನು ಅಂಗನೆಮಾಟಿಸಿ
ಅಂಗದಾಟಿಕಿಯ ಲಲನೆಯರು ಸೊಬಗಿಂದ
ಶೃಂಗಾರವ ಮಾಡಲೆಸದಿಹರು ॥ ಶೋ ॥ 11 ॥
ಪದ್ಮಾದಿ ಜಾತಿಯ ಪದ್ಮಗಂಧಿಯರೆಲ್ಲ
ಪದ್ಮಾಕರದಿಂದ ಜಲಗಳ । ಜಲಗಳ ತಂದರು
ಪದ್ಮಾವತಿಯಮ್ಮನಾ ಜಲಕಕ್ಕೆ ॥ ಶೋ ॥ 12 ॥
ಚಂದ್ರಿಕೆ ಶೀಕೆಯ ಇಂದ್ರನರನೆ ನಿರಿಬಿಡಿದು
ಚಂದ್ರ ಮಂಡಲದ ಸೊಬಗಾನೂ । ಸೊಬಗಾನು ಜರೆವನಾ
ಗೇಂದ್ರನ ರಾಣೆಗುಡಿಸೀದಾರೂ॥ ಶೋ ॥ 13 ॥
ನಾಗಲೋಕದೊಳುಳ್ಳ ನಾಗಕನ್ನಿಕೆಯನು ।
ನಾಗಕನ್ನಿಕೆಯರು ನಿರಿವಿಡಿದುಡಿಸಿದರು ।
ನಾಗರಾಜೇಂದ್ರನರಾಸೀಗೇ ॥ ಶೋ ॥ 14 ॥
ದೇವಲೋಕದೊಳುಳ್ಳ ದೇವಂಗವಸ್ತ್ರವ
ದೇವಕಾಂತೆಯರೂ ನಿರಿಬಿಡಿದೂ । ನಿರಿಬಿಡಿದು ಉಡುಸಿದರು
ದೇವ ಧರಣೇಂದ್ರ ನರಸೀಗೇ ॥ ಶೋ ॥ 15 ॥
ಪಟ್ಟೆಯ ಶೀರೆಯ ಪಟ್ಟಾಣೆ ಹೆಣ್ಣುಗಳು
ಪುಟ್ಟ ನೆರಿವಿಡದು ಸೊಬಗಿಂದ । ಸೊಬಗಿಂದ ಧರಣೇಂದ್ರ
ಪಟ್ಟದರಾಣಿ ಗುಡಿಸೀದಾರೂ ॥ ಶೋ॥ 16 ॥
ಕೋಲಾಟ ಪಾತ್ರದ ತಾಳಮದ್ದಳೆಯವರು
ಸಾಲಾಗಿ ಬರದಾಬರಹದ । ಬರಹದ ಸೀರೆಯ
ಬಾಲೇರರಸಿಗುಡಿಸೀದಾರೂ ॥ ಶೋ ॥ 17 ॥
ಪಲ್ಲವ ದೇಶದ ವಲ್ಲಭ ಕಳುಹಿದ
ಪುಲ್ಲಿಯ ಶೀರೆಗಳ ತಂದು । ಗಳತಂದು ನೆರಿಬಿಡಿದು
ಪಲ್ಲವಾಧರೆಗೆ ಉಡುಸೀದಾರೂ ॥ ಶೋ ॥ 18 ॥
ಕರ್ನಾಟಕ ದೇಶದ ಮನ್ನೆಯರು ಕಳುಹಿದ

ಚಿನ್ನದ ಸೆರಗು ಬರದ ಶೀರೆಯ
[ರನ್ನದ] ರಸಿ ಗುಡಿಸಿದಾರೂ ॥ ಶೋ॥ 19 ॥
ಉತ್ತರಮಧುರೆಯ ಕರ್ತಕಳುಹಿದಾ।
ಮುತ್ತಿನಾಸೆರಗು ಬರಹದ । ಬರಹದ ಶೀರೆಯ
ಮುತ್ತೈದೆಯರರ್ಸೀಗುಡಿಸೀದಾರೂ ॥ ಶೋ ॥ 20 ॥

**ತೀರ್ಥಂಕರರ ಶೋಭಾನೆ**

ಶ್ರೀಮದಮರಪತಿ ಭೂಮಿಪಾಲ ವಂದ್ಯ
ಸೋಮಾರ್ಕಕೋಟಿ ಕಿರಣನೇ । ಕಿರಣನೇ
ಶ್ರೀಮಂದರ ಸ್ವಾಮಿಗಳ ಬಲಗೊಂಬೇ ॥ ಶೋ ॥ 1 ॥
ಸುರನರೋರುಗವಂದ್ಯ ಪರಮಪಾವನ ಬಂಧು ।
ನಿರುತನಿರ್ದೋಷಾಯೆನೀಸಿದಾ। ಏನಿಸಿದಾ ವೃಷಭ
ಚರಣಪಂಕಜಗಳ ಬಲಗೊಂಬೇ ॥ ಶೋ ॥ 2 ॥
ನಿಜವಾದ ಶೋಭಾನಕೇ ಮದಗಜಗಮನೆಯರು ।
ತ್ರಿಜಗದೊಳಧಿಕ ಚೆಲುವೆಯರು। ಚೆಲುವೆಯರು ನೀಬನ್ನಿ।
ಅಜಿತ ತೀರ್ಥಂಕರ ಬಲಗೊಂಬಾ ॥ ಶೋ ॥ 3 ॥
ತುಂಬುದಿಂಗಳ ಮೊಗದಾ ಪೊಂಬಣ್ಣದ ಮೈಯವಳೇ
ಕೆಂಬಲ್ಲ ಹೊಳವಾ ಕದಾಪೀನಾ। ಕದಾಪೀನಾ ಕಾಮಿನೀ ಬಾರೇ
ಶಂಭವ ತೀರ್ಥಂಕರ ಬಲಗೊಂಬ ॥ ಶೋ ॥ 4 ॥
ಇಂದುವದನೆಯರೆಲ್ಲ ಚಂದದಾ ಚರಣವ
ಚಂದವಾಗಿಟ್ಟು ಗೆಲಾವಿಂದ । ಸತಿಯರು ಬನ್ನೀ ಅಭಿ
ನಂದನನಾ ಬಲಗೊಂಬ ॥ ಶೋ॥ 5॥
ಕಮಲಹಸ್ತವನುಳ್ಳ ಅಮಿತ ಕೋವಿದೆ ಕೇಳು
ರಮಣೀಯ ನೊಸಲಾ ಕಿಲಕಾಳೆ । ಬಾರಮ್ಮ ।
ಸುಮತಿ ತೀರ್ಥಂಕರ ಬಲಗೊಂಬಾ ॥ ಶೋ ॥ 6 ॥
ಪದ್ಮಹಸ್ತವನುಳ್ಳ ಪದ್ಮಮುಖಿ ಕೇಳಕ್ಕ
ಪದ್ಮವ ಹೂವ ಸರಗಳ । ಕಾಣಿಕಿಯಿಕ್ಕಿ ।
ಪದ್ಮಪ್ರಭಜಿನರಾ ಬಲಗೊಂಬಾ ॥ ಶೋ ॥ 7 ॥
ಹಾರಪದಕವಿಟ್ಟ ನೀರಾಜ ಮುಖಿಕೇಳೇ
ಪಾರಿಜಾತಗಳ ಕುಸುಮಾವ । ಕಾಣಿಕೆಯಿಕ್ಕಿ । ಸು
ಪಾರಿಶ್ವ ಜಿನರ ಬಲಗೊಂಬಾ ॥ ಶೋ ॥ 8 ॥
ಚಂದ್ರವದನೆಯರೆಲ್ಲಾ ಚಂದದಾಭರಣವನಿಟ್ಟು
ಇಂದ್ರನರಾಣಿ ವಡಾಗೊಂಡು । ಸತಿಯರು ಬನ್ನೀ ।
ಚಂದ್ರಪ್ರಭ ಜಿನರಾ ಬಲಗೊಂಬೇ ॥ ಶೋ ॥ 9 ॥
ಕರ್ಮಗಂಧಿನಿಕೇಳು ತಪ್ಪದೇ ಶ್ರಂಗಾರವಾಗೀಷು
ಷ್ಠ ಮಲ್ಲಿಗೆಯ ಸರಗಳ। ಸರಗಳ ಕಾಣಿಕೆಯಿಕ್ಕೀ

ಪುಷ್ಪದಂತ ಜಿನರ ಬಲಗೊಂಬ ॥ ಶೋ ॥ 10 ॥
ಭೂತಳಗೊಳಗುಳ್ಳ ನೀತಿಕೋವಿದೆಕೇಳು ಜಾಜಿ
ರತ್ನಗಳ ಸರಾಗಳಾ । ಕಾಣಿಕೆಯಿಕ್ಕೀ ।
ಶೀತಳ ಜಿನರ ಬಲಗೊಂಬ ॥ ಶೋ ॥ 11 ॥
ಕಾಯಜ ಸತಿಯರು ಆಯದಿ ಶೃಂಗಾರವಾಗಿ
ಕಾಯಜಕಾಂತೀಮೆರೆವುತ್ತ । ಸತಿಯರುಬನ್ನೀ।
ಶ್ರೇಯಾಂಶ ಜಿನರಾ ಬಲಾಗೊಂಬಾ ॥ ಶೋ ॥ 12 ॥
ಪೊಸರವ ಮುಡಿದವರು ಪೋಷದ ಮೈಯವರು
ಬೇಸರವನುಳಿದು ಮದಾದಿಂದ । ಸತಿಯರು ಬನ್ನೀ ।
ವಾಸುಪೂಜ್ಯ ಜಿನರಾ ಬಲಗೊಂಬಾ ॥ ಶೋ ॥ 13 ॥
ತರುಣಿ ರನ್ನಳೆ ಕೇಳು ವಿಮಲಾಭರಣಗಳಿಂದ
ರಮಣೀಯ ನೊಸಲಾ ತಿಲಕಾಳೇ । ಬಾರಮ್ಮಾ
ವಿಮಲ ತೀರ್ಥಕರ ಬಲಗೊಂಬ ॥ ಶೋ ॥ 14 ॥
ಹುಸಿನಡುವಿನ ನೀರೆಯರು ಕುಶಲಕೋಮಲೆಯರು
ಕುಸುಮವ ಮುಡಿದಾ ಸುಧಾತಿಯರು। ಸುದತಿಯರೆಲ್ಲರು ಬನ್ನೀ।
ಎಸೆವನಂತ ಜಿನರಾ ಬಲಗೊಂಬಾ ॥ ಶೋ॥ 15 ॥
ಅರಗಿಣಿ ನುಡಿಯವರು ಸರದುಂಬಿಗುರುಳವರು
ಸುರಗಿಯ ಹೂವ್ವಾ ಮುಡಿದವರೇ। ಮುಡಿದವರೆಲ್ಲರು ಬನ್ನೀ ।
ವರಧರ್ಮಜಿನರಾ ಬಲಗೊಂಬಾ ॥ ಶೋ ॥ 16 ॥
ವರಮುಕ್ತಿಲಲನೆಯ ವಲಿಸಿದ ವಲ್ಲಭಗೆ ಜ
ಲರುಹ ಮಿತ್ರ ಕಿರಣನೇ। ಕಿರಣನೇ ಮೂರ್ಲೋಕಕ್ಕೆ ।
ವರಶಾಂತಿ ಜಿನರಾ ಬಲಗೊಂಬೆ। ॥ಶೋ॥ 17॥
ಅಂತಪಂಥಗಳುಳ್ಳ ಪಂಥದ ಚೆಲುವೆಯರು।
ಸಂತೋಷದಲಿ ನೀವು ಮುದಾದಿಂದ। ಸತಿಯರು ಬನ್ನೀ ।
ಕುಂಥು ತೀರ್ಥಂಕರ ಬಲಗೊಂಬಾ ॥ ಶೋ ॥ 18 ॥
ಸಿರಿಗೆ ಶೃಂಗರವಾಗಿ ಮರಿಸಿಂಹ ಮಧ್ಯೆಯರು
ಚರಣದಂದುಗೆಯ ಚದುರೆಯರು। ಚದುರೆಯರು ನೀಬನ್ನೀ।
ಅರತೀರ್ಥಂಕರ ಬಲಗೊಂಬ ॥ 19 ॥
ಪುಲ್ಲೆಗಂಗಳ ಹೊಸ ಮಲ್ಲಿಗೆ ಮುಡಿಯವರು
ಸಲ್ಲಲಿತಾಂಗಿಯರು ನೆರಿವಿಡಿದು। ನೆರಿವಿಡಿದು ಬಾಲೆಯರು।
ಮಲ್ಲಿತೀರ್ಥಕರಾ ಬಲಗೊಂಬಾ ॥ ಶೋ ॥ 20 ॥
ಮನಸಿಜ ಸಮರೂಪ ವಿನುತ ವಿಖ್ಯಾತನು
ಮುನಿಜನ ವಂದ್ಯಾನೆನಿಸುವನೆ । ನೆನಿಸುವ ಸುಜ್ಞಾನ।
ಮುನಿಸೂವ್ರತ ಜಿನರಾ ಬಲಗೊಂಬ ॥ ಶೋ॥ 21 ॥
ಹೇಮವರ್ಣವನುಳ್ಳ ಕೋಮಲಾಂಗಿಯರೆಲ್ಲ
ಕಾಮಿತಾರ್ಥವನು ಬಯಸುವ । ಬಯಸುವರೆಲ್ಲ ಬನ್ನಿ ।

ನಮಿಜಿನರನು ಬಲಗೊಂಬ ॥ ಶೋ॥ 22 ॥
ಕಾಲ ಪೆಂಡೆಯ ಕಂಠಮಾಲೆ ಉಂಗುರವಿಟ್ಟ
ಬಾಲೆಯರೆಲ್ಲಾ ವಡಗೊಂಡು । ವಡಗೊಂಡು ಸತಿಯರು ಬನ್ನೀ ।
ವರನೇಮಿ ಜಿನರಾ ಬಲಗೊಂಬ ॥ ಶೋ ॥ 23 ॥
ವಾರಿಜಾಕ್ಷಿಯರೆಲ್ಲ ಸಾರಮುತ್ತಿನ ಸರವಿಟ್ಟು
ಸಾರಸಂಪಿಗೆಯ ಸರಾಗಳ । ಸರಾಗಳ ಕಣಿಕೆಯಿಟ್ಟು ।
ಪಾರಿಶ್ವಜಿನರಾ ಬಲಗೊಂಬಾ ॥ ಶೋ ॥ 24 ॥
ತಿದ್ದಿದ ತಿಲಕವನಿಟ್ಟು ಮುದ್ದು ಮುಖದ ಬಾಲೆಯರು
ಶುದ್ಧ ಮಡಿವಾಳಾ ಸುರಾರೆಲ್ಲ । ಸುರಾರೆಲ್ಲ ಪಾಡುತ್ತ
ವರ್ಧಮಾನ ಜಿನರ ಬಲಗೊಂಬ ॥ ಶೋ ॥ 25॥
ದಿವ್ಯ ರೂಪಿನ ಚೆಲ್ವೆಯರು ಯವ್ವನೆಯರು
ಸೇವ್ಯ ಕೃಪೆಯ ಧರೆನಿಸುವ । ರೆನಿಸುವ ಸುಜ್ಞಾನ ।
ಶ್ರೀಜಿನರಾಜರಾ ಬಲಗೊಂಬಾ ॥ ಶೋ ॥ 26॥

## ಅಡಿಟಿಪ್ಪಣಿ

1. (ಸಂ) ಡಾ ಹಳ್ಳಿಕೇರಿ ಎಫ್.ಟಿ ಹಾಗೂ ಡಾ॥ರವೀಂದ್ರನಾಥ, ಕನ್ನಡ ಜೈನಹಾಡುಗಳು, ಪು.ಸಂ15 ಪ್ರ–ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2001
2. ಡಾ। ರಮೇಶ.ಕೆ.(ಸಂ), ಕನ್ನಡ ಜೈನ ಹಾಡುಗಳು ಸಾಂಸ್ಕೃತಿಕ ಅಧ್ಯಯನ ಪು.ಸಂ.52. ಪ್ರ–ಮಂಗಳ ಪ್ರಕಾಶನ, ಹೊಸಪೇಟೆ 2015
3. ಮೇಲಿನ ಅದೇ, ಪು.ಸಂ. 53
4. ಡಾ॥ ಹಂಪನಾಗರಾಜಯ್ಯ(ಸಂ) ಪು.ಸಂ 2 ಪ್ರ.ಪಂಡಿತರತ್ನ ಎ.ಶಾಂತಿ ರಾಶಾಸ್ತ್ರಿಟ್ರಸ್ಟ್ ಜಯನಗರ, ಬೆಂಗಳೂರು –560082, 1998
5. (ಸಂ).ಡಾ ಖಡಬಡಿ ಬಿ.ಕೆ. ಶ್ರಾವಕಾಚಾರ (ಜೈನ ಗೃಹಸ್ಥ– ಗೃಹಿಣಿಯರ ನೀತಿಸಂಹಿಂತೆ) ಪು.ಸಂ–2ರಿಂದ 3 ಪ್ರ–ರತ್ನತ್ರಯ ಪ್ರಕಾಶನ, 713 ಚಿತ್ರಭಾನು ರಸ್ತೆ ಕುವೆಂಪನಗರ, ಮೈಸೂರು 570023.1937
6. ಪ್ರೊ ಭುಜೇಂದ್ರ ಮಹೀಶವಾಡಿ ಶ್ರೀ ಸಿದ್ಧಸಾಗರಚರಿತ್ರೆ, ಪು.ಸಂ 22–23 ಪ್ರ–ಭುಜೇಂದ್ರ ಮಹೀಶವಾಡಿ ಪ್ರತಿಷ್ಠಾನ 2876, ಆರ್.ಕೆ.ಕಾಲಿನಿ, ಚಿಕ್ಕೋಡಿ 591201 ಬೆಳಗಾವಿಜಿಲ್ಲೆ 1995
7. (ಸಂ) ಡಾ॥ ಹಳಹಳ್ಳಿಕೇರಿ ಎಫ್.ಟಿ ಮತ್ತು ಡಾ॥ರವೀಂದ್ರನಾಥ ಕೆ. ಕನ್ನಡ ಜೈನಹಾಡುಗಳು, ಪು.ಸಂ. 12 ಪ್ರ –ಕನ್ನಡ ವಿಶ್ವವಿದ್ಯಾಲಯ, ಹಂಪಿ 2001
8. ಪುಟ್ಟಸ್ವಾಮಿ ಡಿ(ಸಂ), ಬಾಲಿಕರ ಜೈನಧರ್ಮ (ಅಣ್ಣನ ಓರ್ಲೋಲ) ಪು.ಸ.6.ಪ್ರ– ವಿವೇಕಾಭ್ಯುದಯ ಕಾರ್ಯಾಲಯ ವೀರಭವನ– ಮಂಗಳೂರು – 3 1964
9. ಸಂ. ಡಾ॥ ಹಳ್ಳಿಕೇರಿ ಎಫ್.ಟಿ. ಡಾ॥ರವೀಂದ್ರನಾಥ. ಕೆ. ಕನ್ನಡ ಜೈನಹಾಡುಗಳು ಪ್ರ.ಸಂ. 18–19. ಪ್ರ ಕನ್ನಡ ವಿಶ್ವವಿದ್ಯಾಲಯ, ಹಂಪಿ 2001
10. ಮೇಲಿನ ಅದೇ, ಪು.ಸಂ.21

11. ಶ್ರೀ ಕ್ಷೇತ್ರ ಧರ್ಮಸ್ಥಳ ಸಂಶೋಧನಾ ಪ್ರತಿಷ್ಠಾನ, ತಾಡೋಲೆ ಸಂಖ್ಯೆ 879,3ನೇ ಹಾಡು. ಹಾಡು–ಏಳು ಮನೋಹರ ಜಾವದಲಿ.
12. ಮಿರ್ಜಿ ಅಣ್ಣಾರಾಯ(ಲೇ)ಆದಿ ತೀರ್ಥಂಕರ ಋಷಭದೇವ, ಪು.ಸಂ.5 ಪೀಠಿಕಾಭಾಗ, ಪ್ರಕಾಶಕರು –ಅಜಿತ ಅಣ್ಣಾರಾಯ ಮಿರ್ಜಿ ಶಾಂತಿಸೇವಾಸದನ, ಸೇಡಬಾಳ, ಬೆಳಗಾವ ಜಿಲ್ಲೆ 1971&1998
13. ಮೇಲಿನ ಅದೇ ಪು.ಸಂ.6
14. ಮೇಲಿನ ಅದೇ ಪು.ಸಂ.7
15. ಮೇಲಿನ ಅದೇ ಪು.ಸಂ.12
16. ಶ್ರೀ ಕ್ಷೇತ್ರ ಧರ್ಮಸ್ಥಳ ಸಂಶೋಧನ ಪ್ರತಿಷ್ಠಾನ ತಾಡೋಲೆ ಸಂ 2155
17. ರಾಮಚಂದ್ರ ಸ್ಯಾದ್ವಾದಿನಿ (ಲೇ) ಶ್ರೀ ಪಾರ್ಶ್ವನಾಥಚರಿತೆ&ಶ್ರೀ ಪದ್ಮಾವತಿ ಚರಿತೆ ಪು.ಸಂ.28(ಲಾವಣಿದಾಟಿ) ಪ್ರ–ರತ್ನತ್ರಯಪ್ರಕಾಶನ 713 ಚಿತ್ರಭಾನು ರಸ್ತೆ, ಕುವೆಂಪು ನಗರ ಮೈಸೂರು –1997–1999,
18. ಪ್ರೊ.ರಂಗಸ್ವಾಮಿ ಟಿ.ಡಿ ಎಂ.ಎ(ಸಂ)ಶ್ರೀ ಭಗವಾನ್ ಮಹಾವೀರ ತೀರ್ಥಂಕರ (ಜೀವನ ಸಂಗೀತ,ಸುಪ್ರಭಾತ, ಭಕ್ತಿಗೀತೆಗಳು) ಪು.ಸಂ30–31 ಪ್ರ–ಚಿನ್ಮೂಲಾದ್ರಿ ಪ್ರಕಾಶನ, ಚಿತ್ರದುರ್ಗ,2002

# ಅಧ್ಯಾಯ: ನಾಲ್ಕು

# ಯಕ್ಷ-ಯಕ್ಷಿಯರ ಹಾಡುಗಳು

'ದಕ್ಷಿಣ ಭಾರತದ ಇತಿಹಾಸವೆಂದರೆ ಅದು ಜೈನಧರ್ಮದ ಇತಿಹಾಸ' ಎನ್ನುವುದು ಚರಿತ್ರಾಕಾರರ ಉಲ್ಲೇಖಾರ್ಹವಾದ ಮಾತು. ಕಾರಣ ಜೈನಧರ್ಮ ಭಾರತದ ಸಂಸ್ಕೃತಿಗೆ ಮಹತ್ವದ ಕೊಡುಗೆ ನೀಡಿದೆ. ಅದರಲ್ಲೂ ಮುಖ್ಯವಾಗಿ ಕರ್ನಾಟಕದ ಸಾಹಿತ್ಯ, ಕಲೆಗಳಿಗೆ ತನ್ನದೇ ಆದ ಶ್ರೀಮಂತ ಕೊಡುಗೆಯನ್ನು ಧರ್ಮ ನೀಡಿದೆ. ಜೈನ ಸಂಪ್ರದಾಯದ ಆಚರಣೆ, ಆಚಾರ–ವಿಚಾರಗಳು ಕರ್ನಾಟಕದ ಮೇಲೆ ಪ್ರಭಾವವನ್ನು ಬೀರಿ, ಕನ್ನಡ ಸಾಹಿತ್ಯವನ್ನು ಅಘಾದವಾಗಿ ಬೆಳೆಸಿವೆ. ಜೈನ ಸಂಪ್ರದಾಯದಲ್ಲಿ ತೀರ್ಥಂಕರರಿಗೆ ವಿಶೇಷ ಸ್ಥಾನಮಾನಗಳಿವೆ. ಅದರೊಂದಿಗೆ ಯಕ್ಷ–ಯಕ್ಷಿಯರ ಪರಿಕಲ್ಪನೆಯೂ ಸಹ ಮತ್ತಷ್ಟು ವಿಶಿಷ್ಟವೆನಿಸಿದ್ದು, ಅದರ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ. ಇವರು ತೀರ್ಥಂಕರ ರಕ್ಷಕರಾಗಿದ್ದು, ಅವರ ಜೊತೆಯಲ್ಲಿಯೇ ಇವರೂ ಸಹ ದೇವತಾಸ್ಥಾನವನ್ನು ಪಡೆದುಕೊಂಡಿದ್ದು, ಪೂಜೆಗೆ ಅರ್ಹರಾಗಿದ್ದಾರೆ. ಇಂತಹ ಯಕ್ಷ – ಯಕ್ಷಿಯರನ್ನು ಕುರಿತು ಜೈನ ಸಾಹಿತ್ಯದಲ್ಲಿ ಅನೇಕ ಹಾಡುಗಳು ರಚನೆಗೊಂಡಿರುವುದು ಗಮನಾರ್ಹವಾದ ಅಂಶವಾಗಿದೆ.

ಜೈನ ಹಾಡುಗಳು ಸಾಮಾನ್ಯವಾಗಿ ಅನುಭಾವಗೀತೆ, ಹಾಡು, ಕೈವಲ್ಯಪದ, ಭಜನೆಹಾಡುಗಳು, ವೀರಶೈವ ವಚನ, ದಾಸರ ಕೀರ್ತನೆಗಳ ಪರಂಪರೆಗೆ ಸೇರಿದವುಗಳಾಗಿವೆ. ಈ ಹಾಡುಗಳಲ್ಲಿ ಜೈನ ಧರ್ಮದ ಆಚಾರ–ವಿಚಾರ ಮತ್ತು ಸಿದ್ಧ ಪುರುಷರ ಜೀವನ ಸಾಧನೆಗಳ ಸ್ತುತಿ ಪ್ರಮುಖವಾದವುಗಳಾಗಿವೆ. ಇಲ್ಲಿ ಜಿನಭಕ್ತಿಯ ನಿಷ್ಠೆ–ಅವಧಾನಗಳು ಸ್ಥಾನಗಳಿಸಿವೆ. ಧ್ಯಾನ–ದಾನ–ಪೂಜೆ ಜಪತಪಗಳ ಪರಿಕರಗಳನ್ನೊಳಗೊಂಡ ಹಾಡುಗಳು ರಚನೆಗೊಂಡಿವೆ. ಅಧ್ಯಯನದ ದೃಷ್ಟಿಯಿಂದ ಜೈನ ಹಾಡುಗಳನ್ನು ತೀರ್ಥಂಕರರ ಹಾಡುಗಳು, ಯಕ್ಷ–ಯಕ್ಷಿಯರ ಹಾಡುಗಳು, ಜೋಗುಳ ಹಾಡುಗಳು, ಶೋಭಾನದ ಹಾಡುಗಳು, ಮಂಗಳಾರತಿಯ ಹಾಡುಗಳು, ಹಾಗೂ ಇತರ ಹಾಡುಗಳೆಂದು ವರ್ಗೀಕರಿಸಬಹುದು. ಇವುಗಳಲ್ಲಿ ಯಕ್ಷಯಕ್ಷಿಯರ ಹಾಡುಗಳು ಗಣನೀಯ ಸಂಖ್ಯೆಯಲ್ಲಿವೆ. ಯಕ್ಷ – ಯಕ್ಷಿಯರ ಹಾಡುಗಳು ಜೈನರಲ್ಲಿ ಮಾತ್ರವಲ್ಲದೆ, ಜೈನೇತರರಲ್ಲಿಯೂ ಇದ್ದು, ಜೈನರಲ್ಲಿ ಮಾತ್ರ ಸಿಂಹಪಾಲು ಪಡೆದುಕೊಂಡಿವೆ.

ಯಕ್ಷ – ಯಕ್ಷಿಯರಿಗೆ ಜೈನ ಸಂಪ್ರದಾಯದಲ್ಲಿ ಉನ್ನತ ಸ್ಥಾನ ದೊರೆಯಲು, ಅವರು ಪೂಜೆಗೆ ಅರ್ಹಗೊಂಡು ಅವರ ಬಗೆಗಿನ ಸ್ತುತಿ, ಸ್ತೋತ್ರ, ಹಾಡುಗಳು ರಚನೆಯಾಗಲು, ಆ ಧರ್ಮದ ಮೂಲ ತತ್ವಗಳಲ್ಲುಂಟಾದ ಬದಲಾವಣೆಯೇ ಕಾರಣವೆನ್ನಬಹುದು. ಜೈನಧರ್ಮದ ಮೂಲ ತತ್ವಗಳ ಪ್ರಕಾರ ಅದರಲ್ಲೂ ದಿಗಂಬರರ ಪ್ರಕಾರ ಮುಕ್ತಿಯನ್ನು ಪಡೆಯುವವರು ಪುರುಷರು. ಪುರುಷರು ಮಾತ್ರವೇ ಗೌರವ, ಆರಾಧನೆಗಳಿಗೆ ಅರ್ಹರೆಂಬ ದೃಢ ನಂಬಿಕೆಯೊಂದಿತ್ತು. ಆದರೆ ಜನಸಾಮಾನ್ಯರಿಗೆ ಉಪಕಾರಿಗಳಾಗಿ ಅವರ ಪೂಜೆಯನ್ನು ಕೈಗೊಳ್ಳುವ ದೈವಗಳೆಂದರೆ, ಸಾಮಾನ್ಯವಾಗಿ ಸ್ತ್ರೀದೇವತೆಗಳಾಗಿದ್ದಾರೆ. ಯಾವುದೇ ಧರ್ಮ ತನ್ನ ಆದರ್ಶಗಳ ಮೇಲ್ಮಟ್ಟಕ್ಕೆ ಏರಬೇಕೆಂದು ಬಯಸುವುದು ಸಹಜ. ಆದರೆ ಧರ್ಮವೆಂಬುದು ಕೇವಲ ಹಿರಿಯ ಚೇತನಗಳ, ಮುಕ್ತಿ ಹೊಂದಿದ ಜೀವಿಗಳ, ಕೇವಲ ಪುರುಷರಿಗೆ ಮೀಸಲಿಟ್ಟ ಧರ್ಮವಾಗದೆಂಬುದೂ ಅಷ್ಟೇ ಸತ್ಯ. ಜನಸಾಮಾನ್ಯರನ್ನು ತನ್ನ ಮಟ್ಟಕ್ಕಲ್ಲದಿದ್ದರೂ ಸ್ವಲ್ಪ ಮೇಲಕ್ಕಾದರೂ ಕೊಂಡೊಯ್ಯುವುದು ಆ ಧರ್ಮದ ಉದ್ದೇಶವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಜೈನ ಧರ್ಮವೂ ಕೂಡ ಜನಸಾಮಾನ್ಯರ ದೌರ್ಬಲ್ಯಗಳಲ್ಲಿ ಎಲ್ಲವನ್ನೂ ತಿರಸ್ಕರಿಸದೇ, ಒಪ್ಪಿ ಪುರಸ್ಕರಿಸಿತು. ಆದ್ದರಿಂದ ಮಾತೃದೇವತಾ ಆರಾಧನೆಗಳು ಜೈನರಿಗೆ ಹೊಸದಾದರೂ, ಜನಸಾಮಾನ್ಯರ ದೃಷ್ಟಿಯಿಂದ ಜೈನಧರ್ಮವು ಬಹು ಹಿಂದೆಯೇ ಮಾತೃದೇವತಾರಾಧನೆಯನ್ನು ಆರಂಭಿಸಿತ್ತು. ಆದ್ದರಿಂದ ತೀರ್ಥಂಕರರಿಗೆ ಸಲ್ಲಬೇಕಾದ ಪೂಜೆಯ ಜೊತೆಯಲ್ಲಿ ಅವನ ಪಕ್ಕದ ಶಾಸನದೇವತೆಗಳಿಗೂ ಪೂಜೆ ಸಲ್ಲಿಸಲು ಆರಂಭವಾಯಿತು.

"ತಮಿಳುನಾಡಿನಲ್ಲಿ ತೀರ್ಥಂಕರರಿಗೆ ಸಮಾನವಾದ ಗೌರವವು ಯಕ್ಷಯಕ್ಷಿಯರಿಗೆ ಸಿಕ್ಕಿದೆ. ಕರ್ನಾಟಕದಲ್ಲಿ ಇಷ್ಟು ಅತಿರೇಕಕ್ಕೆ ಹೋಗಿಲ್ಲ"[1] ಎಂಬ ಡಾ। ಎಂ. ಚಿದಾನಂದ ಮೂರ್ತಿಯವರ ಮಾತನ್ನು ಈ ಸಂದರ್ಭದಲ್ಲಿ ಉಲ್ಲೇಖಿಸುವುದು ಉಚಿತವೆನಿಸುತ್ತದೆ.

## ಜೈನ ತೀರ್ಥಂಕರರು ಹಾಗೂ ಯಕ್ಷ ಯಕ್ಷಿಯರು

ಜೈನರು ಲೌಕಿಕ ಧರ್ಮವನ್ನು ಅನುಸರಿಸಿ ದೇವತೆಗಳನ್ನು ಸತತ ದೇವತೆಗಳು ಸತ್ಕ್ರಿಯಾದೇವತೆಗಳು, ಗೃಹದೇವತೆಗಳು ಹಾಗೂ ಕುಲದೇವತೆಗಳೆಂದು ನಾಲ್ಕು ವಿಧಗಳಾಗಿ ವಿಂಗಡಿಸಿದ್ದಾರೆ. ಅವುಗಳಲ್ಲಿ ಯಕ್ಷ–ಯಕ್ಷಿಯರು ಕುಲದೇವತೆಗಳಾಗಿದ್ದಾರೆ. "ಕುಲದೇವತೆಗಳೆಂದರೆ –ಪದ್ಮಾವತಿ, ಜ್ವಾಲಾಮಾಲಿನಿ, ಚಕ್ರೇಶ್ವರಿ ಮೊದಲಾದ ಅವರವರ ವಂಶಗಳಲ್ಲಿ ಪರಂಪರಾಗತವಾಗಿ ಪೂಜಿಸಿಕೊಂಡು ಬರುತ್ತಿರುವ ತೀರ್ಥಂಕರರ ಯಕ್ಷ–ಯಕ್ಷಿ ದೇವತೆಗಳು"[2] ಅಂದರೆ ವರ್ತಮಾನಕಾಲದ 24 ತೀರ್ಥಂಕರರಿಗೆ 24 ಜನ ಯಕ್ಷರು – ಮತ್ತು 24 ಜನ ಯಕ್ಷಿಯರು ಇದ್ದಾರೆ. ಇವರು ತೀರ್ಥಂಕರರ ಸಿದ್ಧಿಯ ಸಮಯದಲ್ಲಿ ಅವರಿಗೆ ಯಾವುದೇ ಆಪತ್ತು ಬರದಂತೆ ರಕ್ಷಕರಾಗಿ ಸ್ವಇಚ್ಛೆಯಿಂದ ನಿಲ್ಲುತ್ತಾರೆ. ಅಂತಹ 24 ತೀರ್ಥಂಕರರು ಹಾಗೂ ಅವರ ಯಕ್ಷ ಯಕ್ಷಿಯರ ಪಟ್ಟಿಯನ್ನು ಮಾಡಬಹುದಾಗಿದೆ.

| ಕ್ರ.ಸಂ. | ತೀರ್ಥಂಕರರು | | ಯಕ್ಷರು | | ಯಕ್ಷಿಣಿಯರು |
|---|---|---|---|---|---|
| 01. | ವೃಷಭ | – | ಗೋಮುಖ | – | ಚಕ್ರೇಶ್ವರಿ |
| 02. | ಅಜಿತ | – | ಮಹಾಯಕ್ಷ | – | ರೋಹಿಣಿ |
| 03. | ಶಂಭವ | – | ತ್ರಿಮುಖ | – | ಪ್ರಜ್ಞಪ್ತಿ |
| 04. | ಅಬಿನಂದನ | – | ಯಕ್ಷೇಶ್ವರ | – | ವಜ್ರಶೃಂಖಲಾ |
| 05. | ಸುಮತಿ | – | ತುಂಬುರ | – | ಪುರುಷದತ್ತ |
| 06. | ಪದ್ಮಪ್ರಭ | – | ಕುಸುಮ | – | ಮನೋವೇಗಿ |
| 07. | ಸುಪಾರ್ಶ್ವ | – | ವರನಂದಿ | – | ಕಾಳಿ |
| 08. | ಚಂದ್ರಪ್ರಭ | – | ವಿಜಯ | – | ಜ್ವಾಲಾಮಾಲಿನಿ |
| 09. | ಪುಷ್ಪದಂತ | – | ಅಜಿತ | – | ಮಹಾಕಾಳಿ |
| 10. | ಶೀತಲ | – | ಬ್ರಹ್ಮ | – | ಮಾನವಿ |
| 11. | ಶ್ರೇಯಾಂಸ | – | ಈಶ್ವರ | – | ಗೌರಿ |
| 12. | ವಾಸುಪೂಜ್ಯ | – | ಕುಮಾರ | – | ಗಾಂಧಾರಿ |
| 13. | ವಿಮಲ | – | ಷಣ್ಮುಖ | – | ವೈರೋಟಿ |
| 14. | ಅನಂತ | – | ಪಾತಾಳ | – | ಅನಂತಮತಿ |
| 15. | ಧರ್ಮ | – | ಕಿನ್ನರ | – | ಮಾನಸಿ |
| 16. | ಶಾಂತಿ | – | ಗರುಡ | – | ಮಹಾಮಾನಸಿ |
| 17. | ಕುಂಥು | – | ಗಂಧರ್ವ | – | ಜಯಾ |
| 18. | ಅರ | – | ಮಹೇಂದ್ರ | – | ವಿಜಯಾ |
| 19. | ಮಲ್ಲಿ | – | ಕುಬೇರ | – | ಅಪರಾಜಿತಾ |
| 20. | ಮುನಿಸುವ್ರತ | – | ಪುರುಷವರ | – | ಬಹುರೂಪಿಣಿ |

| | | | | | |
|---|---|---|---|---|---|
| 21. | ನಮಿ | – | ವಿದ್ಯುತ್ಪ್ರಭ | – | ಚಾಮುಂಡಿ |
| 22. | ನೇಮಿ | – | ಸರ್ವಾಹ್ಣ | – | ಕೂಷ್ಮಾಂಡಿನಿ |
| 23. | ಪಾರ್ಶ್ವ | – | ಧರಣೇಂದ್ರ | – | ಪದ್ಮಾವತಿ |
| 24. | ಮಹಾವೀರ | – | ಮಾತಂಗ | – | ಸಿದ್ಧಾಯಿನಿ |

## ಜೈನ ಸಂಪ್ರದಾಯದಲ್ಲಿ ಯಕ್ಷ–ಯಕ್ಷಿಯರ ಪರಿಕಲ್ಪನೆ, ಸ್ವರೂಪ ಹಾಗೂ ಹಿನ್ನೆಲೆ

ಜೈನ ಧರ್ಮದಲ್ಲಿ ಯಕ್ಷ–ಯಕ್ಷಿಯರಿಗೆ ಉನ್ನತ ಸ್ಥಾನವನ್ನು ನೀಡಲಾಗಿದೆ. ಯಕ್ಷ–ಯಕ್ಷಿಯರ ಪರಿಕಲ್ಪನೆಯನ್ನು ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಶಾಸನಗಳು, ಪುರಾಣ ಕಾವ್ಯಗಳಲ್ಲಿ ಉಲ್ಲೇಖಿಸಲಾಗಿದೆ. “ಋಗ್ವೇದದಲ್ಲಿ ಯಕ್ಷರ ಬಗ್ಗೆ ಭಯಭೀತಿಯಿಂದ ಉಪೇಕ್ಷೆ ವ್ಯಕ್ತವಾಗಿತ್ತು. ಅಥರ್ವಣವೇದದಲ್ಲೂ ಯಕ್ಷನನ್ನು ಕುರಿತ ಧೋರಣೆಯಲ್ಲಾದ ಪರಿವರ್ತನೆಗೆ ಅಂಕುರಾರ್ಪಣೆಯಾಗಿರಬಹುದು. ಏಕೆಂದರೆ ಯಕ್ಷರು ವೃಕ್ಷ ದೇವತೆಗಳೆಂದು ಜೈನ, ಬೌದ್ಧ, ವೈದಿಕ ವಾಙ್ಮಯದಲ್ಲೂ ಕರೆದಿರುವುದು ಕಂಡು ಬರುತ್ತವೆ. ಯಕ್ಷ ಎಂಬ ಶಬ್ದಕ್ಕೆ ಋಗ್ವೇದದಲ್ಲಿ ಭಯಾನಕ, ದೃಶ್ಯ, ದೈವಿಕ ಶತ್ರು ಎಂಬ ಅರ್ಥಗಳಿವೆ” [3]

ಈ ರೀತಿಯ ಕಲ್ಪನೆ ಬೌದ್ಧ ಗ್ರಂಥಗಳಲ್ಲೂ ಉಲ್ಲೇಖವಾಗಿರುವುದು ವಿಶೇಷವಾದುದು. ಬೌದ್ಧ ಗ್ರಂಥಗಳಲ್ಲಿ ದೀರ್ಘಸಕಾಯದಲ್ಲೂ, ಅಂಗುತ್ತರ ಕಾಯದಲ್ಲೂ ಯಕ್ಷರ ನಿರ್ದೇಶನವಿದೆ. ಇವರ ಈ ಬಗೆಗಿನ ಧೋರಣೆಗಳು ತೀರ್ಥಂಕರರು ಹಾಗೂ ಅವರ ರಕ್ಷಕರಾದ ಯಕ್ಷ ಯಕ್ಷಿಯರ ಆರಾಧನೆಗೆ ಜೈನಧರ್ಮವು ನೀಡಿರುವ ಸ್ಥಾನಮಾನದ ಮಹತ್ವವನ್ನು ತಿಳಿಸುತ್ತದೆ. ಜೈನರಲ್ಲಿ ಪ್ರಚಲಿತವಿರುವ ಶ್ವೇತಾಂಬರ, ದಿಗಂಬರಗಳೆಂಬ ಎರಡು ಸಂಪ್ರದಾಯಗಳ ವ್ಯತ್ಯಾಸ ಯಕ್ಷಿಯರ ವಿವರಣೆಯಿಂದ ಕಂಡು ಬರುತ್ತದೆಯೆಂಬುದನ್ನು ತಿಳಿದಾಗಲಂತೂ ಇದರ ಮಹತ್ವವೆಷ್ಟೆಂಬುದು ಮನವರಿಕೆಯಾಗುತ್ತದೆ.

ಮಹಾಭಾರತ, ಉಪನಿಷತ್‌ಗಳಲ್ಲೂ ಯಕ್ಷ–ಯಕ್ಷಿಯರ ಬಗ್ಗೆ ಪ್ರಸ್ತಾಪಿಸಲಾಗಿದೆ. “ಗೋಪಥಾ (1–1) ತೈತರೀಯ (3–12–3) ಇತರ ಬ್ರಾಹ್ಮಣ ಉಪನಿಷತ್ತುಗಳಲ್ಲಿ ಯಕ್ಷ ಶಬ್ದದ ಪ್ರಯೋಗವಿದೆ. (1–4–5–6–8) ದೇವಸೂಚಿಯಲ್ಲಿ ಇದನ್ನು ಸೂಚಿಸಲಾಗಿದೆ”. [4]

ಮಹಾಭಾರತದಲ್ಲಿ ಬರುವ ಉಲ್ಲೇಖವೊಂದು ಹೀಗಿದೆ: “ಹೇ ಸುಂದರಿ, ನೀನು ಯಕ್ಷಿ, ದಾನವೀ, ಅಪ್ಸರಾ, ದೈಶ್ಯಾ, ನಾಗಕನ್ಯಾ, ರಾಕ್ಷಸೀ – ಇವರಲ್ಲಿ ಯಾರಾಗಿರುವೆ?” [5] ಅಂದರೆ ಯಕ್ಷಿ ಮನುಷ್ಯಾತೀತವಾದ ಶಕ್ತಿಯನ್ನು ಪಡೆಯುವಳೆಂದು ಇದರಿಂದ ತಿಳಿಯುತ್ತದೆ. “ಜೈನ, ಬೌದ್ಧ– ವಾಙ್ಮಯದಲ್ಲಿ ಯಕ್ಷರ ಶುಭದ ಉಲ್ಲೇಖಗಳು ಹೇರಳವಾಗಿದ್ದರೂ ಆಶುಭದ ಮುಖ ಪರಿಚಯವೂ ಉಂಟು................. ಯಕ್ಷಿಯರೂ ಕ್ರಮೇಣ ಸ್ತ್ರೀ ಸೌಭಾಗ್ಯದ ಸಂಕೇತವಾಗಿ ಪರಿಣಮಿಸಿದರು”. [6]

ಹಾಗೆಯೇ ಯಕ್ಷ–ಯಕ್ಷಿಯರಿಗೆ ಭಾರತೀಯ ಜೈನ ಪುರಾಣದಲ್ಲಿ ಮಹತ್ವದ ಸ್ಥಾನಮಾನವನ್ನು ಕಲ್ಪಿಸಿಕೊಟ್ಟಿದ್ದು ಅವರನ್ನು ತೀರ್ಥಂಕರ ಸೇವಕರೆಂದು ಹೇಳಿ, ಅವರಿಗೆ ಪ್ರತ್ಯೇಕವಾದ ಪ್ರಾರ್ಥನಾ ಪದ್ಯಗಳು ಅಥವಾ ಸ್ತೋತ್ರಗಳು ರಚನೆಗೊಂಡಿವೆ. ಇದಕ್ಕೆ ಉದಾಹರಣೆಯಾಗಿ ರನ್ನನ ಅಜಿತಪುರಾಣದಲ್ಲಿ ಬಂದಿರುವ ಒಂದು ಸ್ತುತಿ ಪದ್ಯವನ್ನು ಪ್ರಸ್ತಾಪಿಸಲಾಗಿದೆ.

> “ಜಿನ ವೃಂದಾಕರಿರ್ಪ
> ತ್ತು ನಾಲ್ವರಾ ತೀರ್ಥನಾಥ ಸಮುದಾಯ ದಶಾ॥
> ಸನ ದೇವಿಯರ್ಕಳಿರ್ಪ
> ತ್ತು ನಾಲ್ವರೀಗೆಮಗೆ ಯಕ್ಷ ರಕ್ಷಯ ಸುಖಮಂ” [7]

ಹೀಗೆ 24 ಯಕ್ಷ–ಯಕ್ಷಿಯರನ್ನು ಸ್ತುತಿಸಿರುವುದನ್ನು ಕಾಣಬಹುದು.

ತೀರ್ಥಂಕರರಿಗೆ ಕೇವಲ ಜ್ಞಾನವಾದ ನಂತರ ಸಮವಸರಣ ಸಂದರ್ಭದಲ್ಲಿ ಕಾಣಿಸಿಕೊಳ್ಳುವ 'ಧರ್ಮಚಕ್ರ' ಮಂಗಳ ಸೂಚಕ ಚಿಹ್ನೆಯಾಗಿದೆ. ಧರ್ಮೋಪದೇಶ ನಿಮಿತ್ತ ತೀರ್ಥಂಕರರು ಹೊರಟ ಕಡೆಗಳಲ್ಲೆಲ್ಲಾ ಅವರ ಮುಂದೆ ಮುಂದೆ 'ಧರ್ಮಚಕ್ರ'ವು ಇರುತ್ತದೆ. ಇದನ್ನು ಪೂರ್ವಪುರಾಣದಲ್ಲಿ ಈ ರೀತಿ ಉಲ್ಲೇಖಿಸಿದ್ದಾರೆ.

"ಶ್ರೀಮತೇ ಸಕಲ ಜ್ಞಾನ
ಸಾಮ್ರಾಜ್ಯ ಪದ ಮೀಯುಷೇ
ಧರ್ಮ ಚಕ್ರಬೃತ್ ಭರ್ತೇ
ನಮಃ ಸಂಸಾರ ಭೀಮುಕೋ" [8]

ತೀರ್ಥಂಕರರು ಧರ್ಮೋಪದೇಶ ನೀಡುವ ಸಭೆಗೆ ಸಮವಸರಣ ಎಂದು ಕರೆಯುವರು. ಈ ಸಮವಸರಣ ಮಂಟಪದ ನಾಲ್ಕು ಕಡೆಗಳಲ್ಲಿ ಒಂದೇ ರೀತಿಯ ನಾಲ್ಕು ಮಹಾದ್ವಾರಗಳಿದ್ದು, ಆ ನಾಲ್ಕೂ ಮಹಾದ್ವಾರಗಳ ಮುಂದೆ ನಾಲ್ಕು ಮಾನಸ್ತಂಭಗಳಿದ್ದು ಅವುಗಳ ಮೇಲೆ ಒಬ್ಬ ಯಕ್ಷನು ಕಿರೀಟಧಾರಿಯಾಗಿ ನೆತ್ತಿಯಲ್ಲಿ ಧರ್ಮಚಕ್ರವನ್ನು ಹೊತ್ತಿರುತ್ತಾನೆ. ಅವನೇ ಸರ್ವಾಹ್ಣಯಕ್ಷನೆಂದು ಉಲ್ಲೇಖವೊಂದಿದೆ.

"ಧರ್ಮಚಕ್ರಂ ನಾಮ ಸರ್ವಾಹ್ಣ ಯಕ್ಷೋದ್ಧೃತಂ
ಸಹಸ್ರಾರ ಮತಿಶಯಿತಂ ರಥಾಂಗಂ
ಬಿಭರ್ತೀತಿ ಧರ್ಮ ಚಕ್ರ ಭೃತ್ ತಸ್ಮೈ" [9]

ಎಂದು ಜೈನ ಸಾಹಿತ್ಯ ಕೃತಿಗಳಲ್ಲಿ ಪ್ರಾಚೀನವೆನಿಸಿರುವ ತಿಲೋಯ ಪಣ್ಣತ್ತಿ (550) ಎಂಬ ಗ್ರಂಥದಲ್ಲಿ ಪ್ರಸ್ತಾಪಿಸಲಾಗಿದೆ. ಮಹಾಪುರಾಣದ ಈ ಉಲ್ಲೇಖವನ್ನು ಗಮನಿಸೋಣ:

"ತಾಂ ಪೀಠಿಕಾ ಮೂಲಂ ಚಕ್ರುರಷ್ಟಮಂಗಲ ಸಂಪದಃ ।
ಧರ್ಮಚಕ್ರಾಣಿ ಚೋಢಾ ನಿಪ್ರಾಂಶು ಭಿಯಕ್ಷ ಮೂರ್ಧಭೀಃ ॥
ಸಹಸ್ರಾರಾಣಿ ತಾನುದ್ಯದ್ರತ್ಯ ರಶ್ಮೀನಿರೇಜಿರೇ
ಬಾನು ಬಿಂಬಿನಿವ್ಯೋದ್ಯಂತಿ ಪೀಠಿಕೋದಯ ಪರ್ವತಾತ್ ॥[10]

ಅಂದರೆ ತೀರ್ಥಂಕರರು ವಿರಾಜಿಸುತ್ತಿರುವ ಸಮವಸರಣ ಮಂಟಪದಲ್ಲಿ ಮೊದಲನೆಯ ಪೀಠದಲ್ಲಿ ಅಷ್ಟಮಂಗಲ ದ್ರವ್ಯಗಳು ಹೊಳೆಯುತ್ತಿರುತ್ತವೆ. ಯಕ್ಷರುಗಳು ತಲೆಯ ಮೇಲೆ ಧರ್ಮಚಕ್ರವನ್ನು ಹಿಡಿದು ನಿಂತಿರುತ್ತಾರೆ. ಆ ಧರ್ಮ ಚಕ್ರವಾದರೇ ಸಹಸ್ರ ಆಕರಗಳಿಂದ ಕೂಡಿದ್ದಾಗಿ ಆಗತಾನೆ ಹುಟ್ಟುತ್ತಿರುವ ಸೂರ್ಯನಂತೆ ಪಕಾಶಿಸುತ್ತಿರುತ್ತದೆ ಎಂಬುದಾಗಿ ತಿಳಿಸಿದೆ.

24ಜನ ಯಕ್ಷಯಕ್ಷಿಯರನ್ನು ಕುರಿತ ಜೈನ ಸಂಪ್ರದಾಯದಲ್ಲಿ ಅದರ ಸ್ಥಾನ, ಬಣ್ಣ ಆಯುಧ, ಲಾಂಛನ, ವೇಷಭೂಷಣ, ಮುಂತಾದವುಗಳ ಕುರಿತು ಸಾಕಷ್ಟು ಮಾಹಿತಿಗಳು ದೊರಕುತ್ತವೆ. ಪಂಪನ ಸರಳ 'ಆದಿಪುರಾಣ' ಗ್ರಂಥದಲ್ಲಿ ಡಾ॥ ಎಲ್. ಬಸವರಾಜುರವರು 'ಮಹಾಬಳ ಕುಮಾರವರ್ಣನಂ' ಎಂಬ ಮೊದಲ ಅಧ್ಯಾಯದಲ್ಲಿ ಯಕ್ಷ ಯಕ್ಷಿಯರು ಮತ್ತು ಯಕ್ಷ ವೃಷಭನನ್ನು ಕುರಿತು 1.761.8 ಪದ್ಯಗಳಲ್ಲಿ ಈ ರೀತಿ ವರ್ಣಿಸಿದ್ದಾರೆ.

ವರದಂ–ಪದ್ಮಾಂಕಿತಂ ತೋಳ್ ಎರಡು
ನಿಶಿತ ವಜ್ರ ಪ್ರಭಾ ಭಾಸುರಂ ತೋಳ್ ಎರಡು
ವಿದ್ಯುತ್ ಚಕ್ರಿ ಚಕ್ರೋಜ್ವಳ ತರಳತರ ಜ್ಯೋತಿ
ತೋಳ್ ಎಂಟು ಅಗುರ್ವಾಗಿರೆ,
ಬಣ್ಣಂ ಪೊನ್ನ ಬಣ್ಣಕ್ಕೆ ಎಣೆಯನೆ
ಗರುಡಂ ಮಹಮ್ ಆಗಿರ್ಪ ಚಕ್ರೇಶ್ವರಿ

ಭಾಸ್ವದ್ ಧರ್ಮ ಚಕ್ರಾಕ್ರಮಿಗಳನ್

ಅಲೆದು ಆಟರ್ಕೆ ವಿಕ್ರಾಂತದಿಂದಂ"[11]

ಈ ಉಲ್ಲೇಖದಲ್ಲಿ ಯಕ್ಷಿ ಚಕ್ರೇಶ್ವರಿಯ, ಆಕಾರ, ಬಣ್ಣ ಸ್ವಭಾವ ಲಕ್ಷಣಗಳ ಚಿತ್ರಣವಿದೆ. ಇದು ನಮಗೆ ದೊರೆತಿರುವ ಒಂದೇ ಒಂದು ಚಕ್ರೇಶ್ವರಿ ಶಿಲ್ಪದ ವರ್ಣನೆಯಾಗಿದ್ದು, ಆಶಿಲ್ಪಕ್ಕೆ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಅದೇ ರೀತಿ ವೃಷಭಯಕ್ಷನ ಸ್ವರೂಪವನ್ನೂ ಸಹ ಕವಿ ಈ ರೀತಿ ವರ್ಣಿಸಿದ್ದಾನೆ.

"ಪರಶು–ಫಳ–ಅಕ್ಷ ಸೂತ್ರ–ವರದೋಚಿತ ಚಿಹ್ನ ಚತುರ್ಭುಜ

ಮನೋಹರ ವೃಷಲಾಂಛನಂ, ವೃಷಮುಖಂ, ವೃಷವಾಹನನ್,

ಇಂದು–ಕುಂದ ಸುಂದರತರ ವರ್ಣನ್

ಈ ವೃಷಭನಾಥ ಕಥಾ ರಚನೋಕ್ತಿಯಲ್ಲಿ ಮಾಜ್ಕೆ ಇರದೆ

ಎಮಗೆ.

ಆಗುಳಂ

ವೃಷಭಯಕ್ಷನ್

ಅವಿಘ್ನ ಮನಃ ಪ್ರವೃತ್ತಿಯಂ"[12]

ಎಂದು ವೃಷಭ ಯಕ್ಷನನ್ನು ಕುರಿತ ಸ್ವಾರಸ್ಯಕರವಾದ ಸ್ತುತಿ ಪದ್ಯವು ಡಾ। ಎಲ್. ಬಸವರಾಜು ರವರ 'ಪಂಪನ ಸರಳ ಆದಿಪುರಾಣ'ದ 1.8ರಲ್ಲಿ ಬಂದಿದೆ.

ಕವಡೆಯ ಬೊಪ್ಪನಿಗೆ ಸಂಬಂಧಿಸಿದ ಅಪ್ರಕಟಿತ ಶಾಸನವೊಂದು ಈಗ ಬೆಳಕಿಗೆ ಬಂದಿದೆ. ಈ ಶಾಸನ ಹೊಯ್ಸಳ ವೀರಬಲ್ಲಾಳನ ಕಾಲಕ್ಕೆ ಸಂಬಂಧಿಸಿದ್ದು (ಕ್ರಿ. ಶ. 1204) ಬೊಪ್ಪನು ಕುಪಣ ತೀರ್ಥದಲ್ಲಿ ಜನಿಸಿ, ಜಿನಧರ್ಮವನ್ನು ಬೆಳಗಿ ಸಮಾಧಿವಿಧಿಯಿಂದ ಮುಡುಪಿದ ವಿಚಾರ ಬರುತ್ತದೆ. ಚಂದ್ರನಂದಿ ಭಟ್ಟಾರಕರ ಶಿಷ್ಯ; ಅರ್ಹನಂದಿಯು ಬೊಪ್ಪನ ಗುರುಗಳಾಗಿದ್ದು ಅವನು ಜಿನಧರ್ಮವನ್ನು ಪ್ರಚಾರ ಮಾಡಿದನೆಂದು ಈ ಶಾಸನ ತಿಳಿಸುತ್ತದೆ. ಅಲ್ಲದೆ ಜಿನಶಾಸನ ದೇವಿಯರಾದ ರುಗ್ಮಿಣಿ, ಮಹಾಕಾಳಿ, ಜಿನರಾದ ಚಂದನ, ಚಂದ್ರನಾಥದೇವನ ಉಪದೇಶದಂತೆ, ಸಾಗರದತ್ತ ಸೆಟ್ಟಿಯು ಮಾಡಿದ ಬಸದಿಗಳನ್ನು ಈ ಬೊಪ್ಪನು ಜೀರ್ಣೋದ್ಧಾರಗೊಳಿಸಿ ಮರುಪ್ರತಿಷ್ಠೆ ಮಾಡಿಸಿದನೆಂದು ಈ ಶಾಸನ ವಿವರಿಸುತ್ತದೆ. ಈ ಶಾಸನದಲ್ಲಿ ಉಲ್ಲೇಖವಾಗಿರುವ "ಮಹಾಕಾಳಿ ಯಕ್ಷಿಯ ಉಪದೇಶ"[13] ಎನ್ನುವ ಮಾತು ಗಮನಾರ್ಹವಾದುದು. ಏಕೆಂದರೆ ಮಹಾಕಾಳಿಯು ಪುಷ್ಪದಂತ ತೀರ್ಥಂಕರನ ಯಕ್ಷಿಯಾಗಿದ್ದು ಅಜಿತ ಯಕ್ಷನಾಗಿದ್ದಾನೆ. ಕಾರಣ ಶಾಸನ ಲೋಕದಲ್ಲಿ ಈ ಯಕ್ಷಿಯ ಉಲ್ಲೇಖ ತೀರ ಕಡಿಮೆ. ಆದ್ದರಿಂದ ಈ ಶಾಸನಕ್ಕೆ ವಿಶೇಷ ಮಹತ್ವವಿದೆ.

ಕ್ರಿ. ಶ. 1204ರ ಹೊಯ್ಸಳ ವೀರಬಲ್ಲಾಳನ ಕಾಲದ ವೆಣ್ಣಲಸೆಟ್ಟಿ ಕವ್ವೆಯ ಶಾಸನದಲ್ಲಿ ಮಧ್ಯಮಲೋಕದ ವರ್ಣನಾ ಸಂದರ್ಭದಲ್ಲಿ ಧರಣೇಂದ್ರ ಮತ್ತು ಬ್ರಹ್ಮನ ಉಲ್ಲೇಖ ಇದೆ. ".......ಧರಣೀಂದ್ರಂ ಕಂಬವಂತಾ ಕಮಠನೆ ತಬಿಕಲು ದಿಗ್ಗಜಂ......"[14] ಎಂದು ಉಲ್ಲೇಖಿಸಲಾಗಿದೆ. ಧರಣೇಂದ್ರನು ಪಾರ್ಶ್ವನಾಥನ ಯಕ್ಷನಾಗಿದ್ದಾನೆ. ಪದ್ಮಾವತಿ ಯಕ್ಷಿಯಾಗಿದ್ದಾಳೆ. ಅಂತೆಯೇ ಬ್ರಹ್ಮನು ಹತ್ತನೆಯ ತೀರ್ಥಂಕರ ಶೀತಲನಾಥನ ಯಕ್ಷನಾಗಿದ್ದಾನೆ. ಆತನ ಯಕ್ಷಿಯ ಹೆಸರು ಮಾನವಿ. ಬ್ರಹ್ಮಯಕ್ಷನ ವ್ಯಕ್ತಿತ್ವವನ್ನು ವರ್ಣಿಸುವ ಶಾಸನವೊಂದು ಅರಸೀಕೆರೆಯಲ್ಲಿ ದೊರಕಿದ್ದು (ಕ್ರಿ. ಶ. 1184) ಆ ಶಾಸನದಲ್ಲಿ ವರ್ಣನೆ ಹೀಗಿದೆ.

"ಕತ್ತುರಿಯ ಗುಂಪು ಕೈಕುಸುರಿಗೆ ಹೊನ್ನೆಚೆ ಸಣ್ಣ ಗಗ್ಗರಂ

ಮುತ್ತಿನ ದಂಡೆ ತೋಲಮಣೆ ಬಯ್ತತೆ ನೆಯ್ದಲೆ ತೂಲಜನ್ನಂ

ಬೆತ್ತದ ಸೆಂಡುಗೋಲ್ ಮೊರೆವ ದಂತದ ಪಾವುಗೆ ಭೃಂಗ ದೋಲೆಮೆ

ಯ್ವಿತ್ತಿರೆ ರಾತ್ರಿಯೊಳ್ ಸುಳಟಿವ ಬ್ರಹ್ಮ ದೇವನಿಗೆಮಗಿಷ್ಟ ಸಿದ್ಧಿಯಂ"[15]

ಈ ಶಾಸನದಲ್ಲಿ ಹೊಯ್ಸಳ ರಾಜ ಇಮ್ಮಡಿ ವೀರಬಲ್ಲಾಳನ ಆಜ್ಞೆಯಂತೆ, ಹೆಗ್ಗಡೆ ರೇವಣ್ಣ ಎಂಬ ರಾಜ್ಯಾಧ್ಯಕ್ಷನು ಬ್ರಹ್ಮದೇವನ ಆರಾಧನೆಗಾಗಿ ಭೂಮಿಯನ್ನು ದಾನ ನೀಡಿದ ವಿವರಗಳು ದೊರಕುತ್ತವೆ. ಇಲ್ಲಿ ಬ್ರಹ್ಮ ದೇವನ ಲಕ್ಷಣ, ಸ್ವರೂಪದ ಚಿತ್ರಣವಿದೆ.

ಹೀಗೆ ಜೈನ ಸಂಪ್ರದಾಯದಲ್ಲಿ ಯಕ್ಷ ಯಕ್ಷಿಯರ ಪರಿಕಲ್ಪನೆ ಪುರಾತನವಾದುದಾಗಿದೆ. ಇವೇ ಅಲ್ಲದೆ ಅನೇಕ ಜೈನ ಪುರಾಣ, ಶಾಸನ ಹಾಗೂ ಜೈನೇತರ ಸಾಹಿತ್ಯ ಹಾಗೂ ಶಾಸನಗಳಲ್ಲೂ ಯಕ್ಷ ಯಕ್ಷಿಯರ ಸ್ವರೂಪ, ಪರಿಕಲ್ಪನೆಗಳ ಪ್ರಸ್ತಾಪಗಳನ್ನು ನೋಡಬಹುದಾಗಿದೆ.

## ಯಕ್ಷ ಯಕ್ಷಿಯರ ಆರಾಧನೆ

ಜೈನಧರ್ಮೀಯರು ತಮ್ಮ ಮೇಲ್ಮಟ್ಟದ ಆದರ್ಶಗಳನ್ನು ಸಡಿಲಿಸಿ ಜನಸಾಮಾನ್ಯರ ದೌರ್ಬಲ್ಯಗಳನ್ನು ಪುರಸ್ಕರಿಸಿ, ತಮ್ಮ ಧರ್ಮದ ಬೆಳವಣಿಗೆಗಾಗಿ, ತೀರ್ಥಂಕರರ ಜೊತೆಯಲ್ಲಿ ಜನಸಾಮಾನ್ಯರ ದೇವತೆಗಳಾದ ಯಕ್ಷ –ಯಕ್ಷಿಯರ ಆರಾಧನೆಗೆ ಪ್ರೋತ್ಸಾಹಿಸಿದರು. "ತೀರ್ಥಂಕರರಿಗೆ ಸಲ್ಲಬೇಕಾದ ಪೂಜೆಯ ಜೊತೆಯಲ್ಲಿ ಅವರ ಪಕ್ಕದ ಶಾಸನದೇವತೆಗಳಿಗೂ ಪೂಜೆ ಸಲ್ಲಿಸಲು ಪ್ರಾರಂಭವಾಗಿ ಮುಂದೆ ಶಾಸನದೇವತೆಗಳಿಗೇ ಸ್ವತಂತ್ರವಾಗಿ ಪೂಜೆ ಸಲ್ಲಿಸಲು ಮೊದಲಾಯಿತು. ಇದನ್ನೇ ಡಾ॥ ದೇಸಾಯಿಯವರು 'ಯಕ್ಷೀ ಆರಾಧನಾ (Yakshi cult) ಎಂದು ಕರೆಯುವರು".[16] ಇದಕ್ಕೆ ಮೊದಲು ಸಿದ್ಧಿ ಪುರುಷರು ಮುಕ್ತ ಜೀವಿಗಳಾದ ತೀರ್ಥಂಕರರು ಕೇವಲ ಪುರುಷರು ಮಾತ್ರವೇ ಪೂಜೆಗೆ ಅರ್ಹರಾಗಿದ್ದರು.

ಪದ್ಮಾವತಿ ಯಕ್ಷಿಯು ಸಾಂತರರ ಮನೆದೇವತೆಯಾಗಿದ್ದು, "ನನ್ನಿಯಂಗ ಮತ್ತು ಆತನ ಪಟ್ಟ ಮಹಾದೇವಿ, ಕುಂಚಲ ದೇವಿಯರು ಪದ್ಮಾವತಿಗೆ ಹರಸಿಕೊಂಡು ಹೆಮ್ಮಾಡಿ ದೇವನನ್ನು ಪಡೆದರೆಂದು ಶಾಸನವೊಂದು ಹೇಳುತ್ತದೆ."[17] ಯಕ್ಷ ಯಕ್ಷಿಯರ ಆರಾಧನೆ ಆರಂಭವಾದ ನಂತರ ಜೈನಧರ್ಮದಲ್ಲಿ ತಾಂತ್ರಿಕ ಆರಾಧನೆ ಪ್ರಾಬಲ್ಯ ಹೊಂದಿ ಕೆಲವು ಮಠಾಧಿಪತಿಗಳು ಹಾಗೂ ಜೈನ ಭಟ್ಟಾರಕರು ಮಂತ್ರತಂತ್ರಗಳಲ್ಲಿ ನಿಷ್ಣಾತರಾದರು. ಕರ್ನಾಟಕದಲ್ಲಿ ಪದ್ಮಾವತಿ ಮತ್ತು ಜ್ವಾಲಾಮಾಲಿನಿ ಯಕ್ಷಿಯರಿಗೆ ವಿಶೇಷ ಗೌರವವಿದ್ದು ಇವರನ್ನು ಆರಾಧಿಸುವ ಅನೇಕ ನಿದರ್ಶನಗಳು ಸಿಗುತ್ತವೆ. ಗಂಗವಂಶದ ಪದ್ಮನಾಭ ತನಗೆ ಮಕ್ಕಳಿಲ್ಲದಿರಲು ಚಿಂತಾಕ್ರಾಂತನಾಗಿ ಅರ್ಪಿನಕಣಿ ಶಾಸನ ದೇವತೆಯಂ ಪೂಜಿಸಿ ದಿವ್ಯ ಮಂತ್ರದಿಂದ ರಾಮಲಕ್ಷ್ಮಣರೆಂಬ ಮಕ್ಕಳನ್ನು ಪಡೆಯುತ್ತಾನೆ.

ಹಾಗೆಯೇ ಗದಗಿನ ಒಂದು ಶಾಸನವು ಯಕ್ಷಿ ಜ್ವಾಳಿನೀಯನ್ನು ವಿಶೇಷವಾಗಿ ಕೀರ್ತಿಸುತ್ತದೆ. "ಜ್ವಾಳಿನೀ ಸಮಗ್ರಗುಣ....... ಮಣಿಮಾಳಿನೀ ಸಾಧಕವಿನಯ ಸುಬ್ರತಿ ಜನತಾಪಾಳಿನೀ ದುರಿತಮಳ ಪ್ರಕ್ಷಾಳಿನೀ ಸಂವಿದೆಯನಿಪ್ಪಳಂತಾ ಪುರದೊಳ್" ಕೆಂಚಗನೆಂಬುವನು ಜ್ವಾಲಿನೀ ದೇವಿಗೆ ನಿಂನಂ ಬಲಿಗೊಂಡೆನಾವಗವೆನ್ನಿಷ್ಟಮನೀವುದೆಂದುಕಾರಣಕ್ಕಾನಮಾನಾಗಿರ್ಪುದು"[18] ಎಂದು ಹೇಳಿರುವುದು ಕಂಡು ಬರುತ್ತದೆ. "ಗುಂಡಕರ್ಜಿಯ ಜೈನ ಪ್ರತಿಮೆಯ ಮೇಲೆ ಅಪರಾಜಿತಾ ದೇವಿ ವಿಷಭಯಕ್ಷ, ಪಾತಾಳಯಕ್ಷ, ಕುಬೇರಯಕ್ಷ, ಮಹಾಮಾನನೀ ಯಕ್ಷ, ಅನಂತಮತಿ, ಚಕ್ರೇಶ್ವರಿ, ಶಾಂತಿನಾಥಸ್ವಾಮಿ ಎಂದು ಲಿಖಿತವಾಗಿರುವ ಶಾಸನದಲ್ಲಿ ಯಕ್ಷ–ಯಕ್ಷಿಯರ ಹೆಸರನ್ನು ಕಾಣಬಹುದು"[19]

ಯಕ್ಷ –ಯಕ್ಷಿಯರು ತೀರ್ಥಂಕರರ ಕೇವಲ ರಕ್ಷಕರೂ ಮತ್ತು ಜನರ ಮನೆದೇವತೆಗಳು ಮಾತ್ರವೇ ಅಲ್ಲದೇ ಮಂತ್ರ–ತಂತ್ರದಿಂದ ಶನಿಕಾಟ ಇತರ ಭೂತ ಪ್ರೇತಾದಿಗಳ ತೊಂದರೆಯನ್ನು ಹೋಗಲಾಡಿಸುವ ಜನಸಾಮಾನ್ಯರ ಶಕ್ತಿದೇವತೆಗಳಾಗಿ ಪೂಜೆಗೆ ಅರ್ಹರಾಗಿದ್ದಾರೆ. ಎಂದು ಹಲವಾರು ತಾಮ್ರ ಪಟಶಾಸನಗಳಿಂದ ತಿಳಿದುಬರುತ್ತದೆ. ಜೈನಧರ್ಮದಲ್ಲಿ ಯಕ್ಷಿ ಆರಾಧನೆ ಪ್ರಬಲವಾದಂತೆ ಮಾಟ, ಮಾಯ ಇಂಥ ತಾಂತ್ರಿಕ ಶಕ್ತಿಗಳನ್ನು ಜೈನಯತಿಗಳು ಪಡೆದ ಬಗ್ಗೆ ಶಾಸನಗಳಲ್ಲಿ ಉಲ್ಲೇಖ ದೊರಕುತ್ತವೆ. ಶ್ರವಣಬೆಳಗೊಳದ ಒಂದು ಶಾಸನ ಕಲ್ಯಾಣಕೀರ್ತಿಮುನಿಯನ್ನು

ಶಾಕಿನಿ ಮೊದಲಾದ ದುಷ್ಟಶಕ್ತಿಗಳನ್ನು ಉಪಯೋಗಿಸಿಕೊಳ್ಳುವಲ್ಲಿ ಪರಿಣತರೆಂದು ಕರೆದಿದೆ[20]. ಭಾನುಕೀರ್ತಿ ಎಂಬ ಜೈನಮುನಿಯನ್ನು 'ಉರಗೋಗ್ರಹ ಶಾಕಿನೀ ನಿವಹಗ್ರ ಭೂತ ಪ್ರೇತ ಝೋಟ್ಟಿಂಗ ಭೀಕರ ಬೇತಾ...ನಿನಾಥೋಗ್ರಜ್ಞೆ ಸಾಮಾನ್ಯಮೇ' ಎಂದು ಹೊಗಳಿರುವುದುಂಟು. ಶ್ರವಣಬೆಳಗೊಳದ ಚಿಕ್ಕಬೆಟ್ಟದ ಶಾಸನವೊಂದರಲ್ಲಿ ಅನಂತಕೀರ್ತಿ ಮುನಿಯನ್ನು ಹಾವಿನ ವಿಷ ನಿವಾರಿಸಬಲ್ಲವನೆಂದೂ ವಿಷಯುಕ್ತ ಹಾವಿನ ಹಲ್ಲನ್ನು ಕೀಳಬಲ್ಲವನೆಂದೂ ಹೊಗಳಲಾಗಿದೆ[21]. ಹನ್ನೊಂದನೆಯ ಶತಮಾನದಲ್ಲಿದ್ದ ಜೈನ ಆಚಾರ್ಯ ಮಲ್ಲಿಶೇಣಸೂರಿ ಮುಳಗುಂದದಲ್ಲಿದ್ದು ಮಂತ್ರ ತಂತ್ರಗಳಿಗೆ ಸಂಬಂಧಿಸಿದ ಭೈರವ ಪದ್ಮಾವತೀ ಕಲ್ಪ, ಜಾಲಿನೀಕಲ್ಪ, ಸರಸ್ವತೀ ಕಲ್ಪ ಎಂಬ ಕೃತಿಗಳನ್ನು ಬರೆದಂತೆ ತಿಳಿದುಬರುತ್ತದೆ[22].

"ಹೇಲಾಚಾರ್ಯ (ದ್ರಾವಿಡ ಸಂಘಕ್ಕೆ ಸೇರಿದವನು) ಮೊದಲು ನೀಲಗಿರಿ ಬೆಟ್ಟದ ಹೇಮಗ್ರಾಮದಲ್ಲಿ ಜ್ವಾಲಿನಿಯನ್ನು ಪೂಜಿಸಲು ಕಾರಣ ಕಮಲಶ್ರೀ ಎಂಬ ತನ್ನ ಸ್ತ್ರೀ ಅನುಯಾಯಿಗೆ ಹಿಡಿದ ಬ್ರಹ್ಮರಾಕ್ಷಸನನ್ನು ಬಿಡಿಸುವುದಾಗಿತ್ತು"[23] ಜ್ವಾಲಾಮಾಲಿನಿಗಾಗಿ ದೇವಾಲಯವೊಂದು ಧಾರವಾಡ ಜಿಲ್ಲೆ ನವಗುಂದ ತಾಲ್ಲೂಕಿನ ಜಾವೂರಿನಲ್ಲಿ ಕ್ರಿ.ಶ. 1059ಕ್ಕಿಂತ ಮೊದಲು ನಿರ್ಮಾಣವಾದಂತಿದೆ".[24] ಇದು ಯಾಪನೀಯ ಪಂಥದ ಯತಿಯೊಬ್ಬರಿಂದ ಬಹುಶ: ಪ್ರತಿಷ್ಠಾಪಿತವಾಯಿತೆಂದೂ ಯಾಪನೀಯ ಸಂಘದ ಜೈನರು ಮೈಸೂರಿನಲ್ಲಿ ತಾಂತ್ರಿಕ ಆರಾಧನೆ ಮತ್ತು ದೇವತಾರಾಧನೆಗಳನ್ನು ವೈಭವೀಕರಿಸಿದರೆಂಬ ಅಭಿಪ್ರಾಯವಿದೆ"[25] "ಕೂಷ್ಮಾಂಡಿನಿಗೆ ಅಂಬಿಕಾ ಎಂಬ ಹೆಸರೂ ಇದೆ. ಇವಳು 22ನೇ ತೀರ್ಥಂಕರನ ಯಕ್ಷಿ. ಶ್ರವಣಬೆಳಗೊಳದ ದೊಡ್ಡ ಬೆಟ್ಟದ ಸುತ್ತಾಲಯದ ಕೊನೆಯ ಗುಡಿಯಲ್ಲಿರುವ ಕೂಷ್ಮಾಂಡಿನಿಯ ಪೀಠದಲ್ಲಿ ಆಲವ್ವೆಯ ಮಗ ಬಸವಣ್ಣಂಗೆ, ರಾಚಮಲ್ಲಸೆಟ್ಟಿ ವಿನಯವಾಗಿ ಯಕ್ಷಿ ದೇವತೆಯ ವಿಗ್ರಹ ಮಾಡಿಸಿದ ವಿಷಯವನ್ನು ಆ ಪೀಠ ಶಾಸನ ತಿಳಿಸುತ್ತದೆ"[26]

ಹೀಗೆ ಜನಸಾಮಾನ್ಯರು ಅಲೌಕಿಕ ಶಕ್ತಿಗಳನ್ನು ತಮ್ಮತ್ತ ಒಲಿಸಿಕೊಳ್ಳಲು ಮಂತ್ರ–ತಂತ್ರಗಳ ಕಡೆ ಹೆಜ್ಜೆ ಹಾಕಲಾರಂಭಿಸಿದರು. ಈ ಉಲ್ಲೇಖಗಳು ಮಾತ್ರವಲ್ಲದೆ, ಇನ್ನೂ ಅನೇಕ ಸಾಹಿತ್ಯ, ಶಾಸನಗಳಲ್ಲಿ ಸಾಕಷ್ಟು ಆಧಾರಗಳು ಕಂಡು ಬರುವುದರಿಂದ, ಯಕ್ಷ–ಯಕ್ಷಿಯರು ಮಂತ್ರ–ತಂತ್ರಗಳ ಸಿದ್ಧಿ ದೇವತೆಗಳಾಗಿಯೂ, ಶಕ್ತಿದೇವತೆಗಳಾಗಿಯೂ, ವರದೇವತೆಗಳಾಗಿಯೂ ಜೈನಸಂಪ್ರದಾಯದಲ್ಲಿ, ಜನಸಾಮಾನ್ಯರ ಆರಾಧನೆಗೆ ಒಳಗಾಗಿದ್ದಾರೆ. ಇದರಿಂದ ಯಕ್ಷ–ಯಕ್ಷಿಯರ ಕುರಿತ ಹಾಡುಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

## ಯಕ್ಷ ಯಕ್ಷಿಯರ ಹಾಡುಗಳು

ಜೈನ ಸಾಹಿತ್ಯ ಹಾಗೂ ಸಂಸ್ಕೃತಿಗಳ ಕುರಿತು ಆ.ನೆ.ಉಪಾಧ್ಯ ಹಾಗೂ ಇನ್ನಿತರ ಅನೇಕ ವಿದ್ವಾಂಸರು ಚರ್ಚಿಸಿದ್ದಾರೆ. ಡಾ.ಹಂ.ಪಾ ನಾಗರಾಜಯ್ಯ, ಡಾ.ಎಫ್.ಟಿ.ಹಳ್ಳಿಕೇರಿ, ಡಾ.ಕೆ ರವೀಂದ್ರನಾಥ, ಡಾ.ರಮೇಶ ಕೆ. ಮುಂತಾದವರು ಜೈನಹಾಡುಗಳ ಸಂಗ್ರಹ–ಸಂಪಾದನೆ ಹಾಗೂ ಪ್ರಕಟಣಾ ಇತಿಹಾಸವನ್ನು ಸೈದ್ಧಾಂತಿಕವಾಗಿ ನಿರೂಪಿಸಿರುವ ಪ್ರಯತ್ನ ಮಾಡಿದ್ದಾರೆ. ಕರ್ನಾಟಕದ ನಾನಾ ಪ್ರದೇಶಗಳಲ್ಲಿ ದೊರಕಿರುವ ಹಸ್ತಪ್ರತಿಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಹಾಡುಗಳು ದೊರೆಯುತ್ತವೆ. ಅವುಗಳು "ಜೈನ ತೀರ್ಥಂಕರರನ್ನು, ಯಕ್ಷ–ಯಕ್ಷಿಯರನ್ನು ಪುಣ್ಯಕ್ಷೇತ್ರಗಳನ್ನು ಹಾಗೂ ಧಾರ್ಮಿಕ ನೋಂಪಿಗಳನ್ನು ಕುರಿತು ಹೇರಳವಾದ ಜೈನ ಸಾಹಿತ್ಯ ಪರಂಪರೆ ನಿರ್ಮಾಣಗೊಂಡಿವೆ"[27] ಜೈನ ಸಾಹಿತ್ಯದಲ್ಲಿ ಯಕ್ಷ – ಯಕ್ಷಿಯರ ಹಾಡುಗಳು ಗ್ರಂಥಸ್ಥ ಮತ್ತು ಮೌಖಿಕ ಸಾಹಿತ್ಯ ಎರಡರಲ್ಲೂ ದೊರಕಿವೆ. ಈ ಹಾಡುಗಳಲ್ಲಿ ಎರಡೂ ಪ್ರಕಾರಗಳಲ್ಲಿಯೂ ಅಧ್ಯಯನ ದೃಷ್ಟಿಯಿಂದ ವಿವೇಚಿಸಲು ಪ್ರಯತ್ನಿಸಲಾಗಿದೆ. ಧವಳಾ ಪದವನ್ನು, ಧವಲ, ಡವಳ, ಡವಳಾರ, ದವಳಹಾಡು, ದವಳ ಶೋಭಾನೆ, ಶೋಭಾನೆ ಹಾಡು, ಪದ ಮುಂತಾದ ಹೆಸರುಗಳಿಂದ ಕರೆಯಬಹುದು. ಡಾ.ಡಿ.ಎಲ್ ನರಸಿಂಹಾಚಾರ್ಯರು ಇದು ಒಂದು ರಾಗದ ಹೆಸರೆಂದೂ, ಸಂಗೀತ ಶಾಸ್ತ್ರದಲ್ಲಿ "ಧವಲಃ ರಾಗವಿಶೇಷಃ ಭರತಮತೇ ಹಿಂದೋಲರಾಗಸ್ಯಾ

ಸ್ಟಮಮುತ್ರ"[28] ಎಂದು ಹೇಳಿದ್ದಾರೆ. ಅಂದರೆ ಇದು ಹಿಂದೋಲರಾಗದಿಂದ ಜನ್ಯವಾದ ರಾಗಗಳಲ್ಲಿ ಎಂಟನೆಯದೆಂದು ಕಾಣುತ್ತದೆ ಎಂದಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ (ಸಂ.4.ಪು.4214) ಧವಲ ಒಂದು ಬಗೆಯ ಗೀತ ಪ್ರಬಂಧವೆಂದು ಹೇಳಿದೆ. "ವಿವಾಹ ಮೊದಲಾದ ಮಂಗಳ ಕಾರ್ಯದಲ್ಲಿ ಹಾಡುವ ಆಶೀರ್ವಾದ ಪರವಾದ ಹಾಡು"[29] ಎಂದು ಧವಳದ ಸ್ವರೂಪವನ್ನು ವಿವರಿಸಲಾಗಿದೆ.

ಇನ್ನು ಮೌಖಿಕ ಪರಂಪರೆಯನ್ನು ನೋಡುವುದಾದರೆ, ಜೈನ ಸಂಪ್ರದಾಯದಿಂದ ವರ್ತಮಾನಕಾಲದ 24 ತೀರ್ಥಂಕರಿಗೂ ಯಕ್ಷ–ಯಕ್ಷಿಯರಿದ್ದು, ಅವರ ಬಗ್ಗೆ ಬಹಳಷ್ಟು ಜನಪದ ಹಾಡುಗಳು ಪ್ರಚಾರದಲ್ಲಿವೆ. ಇವರುಗಳಲ್ಲಿ ಯಕ್ಷರಿಗಿಂತ ಯಕ್ಷಿಯರಿಗೇ ಹೆಚ್ಚು ಮಹತ್ವ ನೀಡಲಾಗಿದೆ. ವಧೂ ವರರನ್ನು ಯಕ್ಷ ಯಕ್ಷಿಯರಿಗೆ ಹೋಲಿಸುವ ಆರತಿ ಹಾಡುಗಳು, ಯಕ್ಷಿಯರಲ್ಲಿ ಪ್ರಸಾದ ಬೇಡುವ ಹಾಡುಗಳು, ಪ್ರಾರ್ಥನೆಯ ಹಾಡುಗಳು, ಸ್ತುತಿಗೀತೆಗಳು, ಕೆಲಸದ ಹಾಡುಗಳು, ಕೋಲಾಟದ ಹಾಡುಗಳೂ ಸಹ ಪ್ರಚಾರದಲ್ಲಿವೆ. ಜೈನ ಜನಪದ ಸಾಹಿತ್ಯದಲ್ಲಿ ಧರಣೇಂದ್ರ ಪದ್ಮಾವತಿ ಶ್ಯಾಮ, ಜ್ವಾಲಾಮಾಲಿನಿ, ಬ್ರಹ್ಮಯಕ್ಷ –ಯಕ್ಷಿಯರು ಪ್ರಧಾನವಾಗಿ ಕಾಣಿಸಿಕೊಂಡಿದ್ದಾರೆ. ನಾವು ಇಲ್ಲಿ ಪದ್ಮಾವತಿಯ ಕುರಿತ ಗ್ರಂಥಸ್ಥ ಹಾಗೂ ಮೌಖಿಕ ಪರಂಪರೆಯ ಕೆಲವು ಹಾಡುಗಳನ್ನು ಉಲ್ಲೇಖಿಸಿದ್ದೇವೆ.

ಪದ್ಮಾವತಿ ದೇವಿಯ ದರ್ಶನ ಮಾಡುವುದೇ ಒಂದು ಭಾಗ್ಯ, ಭಾಗ್ಯವಿದ್ದವರಿಗೆ ಮಾತ್ರ ದರ್ಶನ ಪ್ರಾಪ್ತಿಯೋಗ. ಆದ್ದರಿಂದ ಜೈನರಲ್ಲಿ ದರ್ಶನಕ್ಕೆ ಮಹತ್ತರವಾದ ಸ್ಥಾನವಿದೆ. ಆದುದರಿಂದ ತಿಳಿದವರು,

"ದರ್ಶನಂ ದೇವದೇವಸ್ಯ
ದರ್ಶನಂ ಪಾಪನಾಶನಂ
ದರ್ಶನಂ ಸ್ವರ್ಗ ಸೋಪಾನಂ
ದರ್ಶನಂ ಮೋಕ್ಷ ಸಾಧನಂ"[30] ಎಂದು ಹೇಳಿದ್ದಾರೆ.

ಪದ್ಮಾವತಿ ದೇವಿಯ ಭಕ್ತನೊಬ್ಬ ತಾಯಿಯನ್ನು ಹೊಗಳುತ್ತಾ ತನ್ನ ಮನದಾಳದ ನಿಜಭಕ್ತಿಯನ್ನು ಅದ್ಭುತವಾಗಿ ಅಭಿವ್ಯಕ್ತಿಗೊಳಿಸಿರುವ ಈ ಪರಿಯನ್ನು ನೋಡಿ. ರಾಗ: ನೀನೆಲ್ಲಿನಡೆವೆ ...... ದೂರ ಎಲ್ಲೆಲ್ಲೂ ಲೋಕವೆ ..... ದೂರ

"ಪದುಮಾಂಬೆ ನಿನ್ನ ದರ್ಶನ
ಬಯಸುತ್ತಾ ಬಂದೆ ನಾ
ಕರುಣಾಮಯಿ ನೀನೆಂದು
ಹರಸುತ್ತಾ ಬಂದೆವು ॥ಪದು॥
ಕನಸಲ್ಲಿ ಕಂಡೆ ನಿನ್ನ । ಮನದಲ್ಲಿ
ನೆನೆಯುತ್ತಾ ಬಂದೆ । ನೀಯನ್ನ
ಮರೆಯದೆ ಸಲಹು ತಾಯೆ ॥ಪದು॥
ಹೊಳಲ್ಕೆರೆ ಪುರದಿ ನೆಲೆಸಿ
ಹೊಳೆಯುವ ತಾಯಿಯಾಗಿ
ಮನದಲ್ಲಿ ನಿಂತೆ ನೀನು
ಮನವತಣಿಸೆ ಕಾಯೇ ॥ಪದು॥2॥
ಧರೆಯೊಳಧಿಕವಾದ ಹೊಳಲ್ಕೆರೆ
ಪುರದೊಳು ನೆಲೆಸಿಹ ತಾಯೆ
ಬಂದೆಲ್ಲಾ ಭಕ್ತರನ್ನು ಪೊರೆದು ಕಾಯೆ ನೀನು ॥ಪದು॥3॥
ಯನಗಿಲ್ಲ ಮತಿಯು ತಾಯೆ

ಗತಿತೋರು ತಾಯೆ ನೀನು  ಮತಿಹೀನ ನಾನು ಪೊರೆಯಮ್ಮ ನೀಯೆನ್ನ

॥ಪದು॥4॥ಎಲ್ಲೆಲ್ಲೂ ಕಾಣದಾದ ಹುಡುಕುತಾನ ಬಂದೆ"[31]

ಹೀಗೆ ತಾಯಿ ದರ್ಶನಕ್ಕೆ ಬಂದ ಭಕ್ತ ಅನನ್ಯ ಭಕ್ತಿಯಿಂದ ತನ್ನ ಕಷ್ಟ ಸುಖ ಹಾಗೂ ದುಃಖ ದುಮ್ಮಾನಗಳನ್ನು ತಾಯಿಯಲ್ಲಿ ನಿವೇದಿಸುತ್ತಾ ತನ್ನ ಅಂತರಂಗವನ್ನು, ಆತ್ಮವನ್ನು ಶುದ್ಧಿಮಾಡಿಕೊಳ್ಳುವುದು ಕಂಡು ಬರುತ್ತದೆ. ಅಳಲ್ಕೆರೆ ಶ್ರೀಪಾಲಶ್ರೇಷ್ಠ ವಸಂತಕುಮಾರ್‌ರವರು ಬರೆದಿರುವ ದರ್ಶನಾ ಕೃತಿಯಲ್ಲಿ ಬಂದಿರುವ "ದರ್ಶನದ ಭಕ್ತರ ಮೊರೆ" ಎಂಬ ಹಾಡಿನಲ್ಲಿ ಪದ್ಮಾವತಿಯ ಸ್ತುತ್ಯವನ್ನು ನೋಡಬಹುದು.

## ದರ್ಶನದ ಭಕ್ತರ ಮೊರೆ

ದೇವಿದರ್ಶನ ಮಾಡುವ ಯೋಗ
ಬಂದಿದೆ ನಮಗೀಗ, ಶುಭಯೋಗ ॥ ದೇವಿ॥
ನಾನು ಮಾಡಿದ ಕರ್ಮದ ಹೊರೆಯ।
ಇನ್ನಿತರಿಗೆ ನಾನು ಹೇಳಲಿ ತಾಯೆ
ಬಾರಿ ಬಾರಿ ಕಂಬನಿ ಬಂದು
ಪಾಪಿಯು ನಾನು ವರ ಕರುಣಿಸೆ ಎಂದು
ಪ್ರೇಮದಿಂದಲಿ ಭಜಿಸಿ ನಮ್ಮ
ಶಾಂತಿಯಿನೆಲೆಯೊಂದು ಸಿಗದೆ ॥ದೇವಿ॥ 1॥
ವೇದ ಸಾರುವ ದೇವರೇ ತಾಯಿ ನಾನು
ಜ್ಞಾನದಾತ ಗುರುದೇವನೇ ತಂದೆ ಜಿನನು"[32]

ಹೀಗೆ ಪದ್ಮಾವತಿಯನ್ನು ಸ್ತುತಿಸುವುದರಿಂದ ಮಾಂಗಲ್ಯ ಭಾಗ್ಯ ಗಟ್ಟಿಯಾಗುತ್ತದೆ, ಆಕೆ ತಾಯಿ ಮಗುವನ್ನು ಸಾಕಿ ಸಲಹುವಂತೆ ಕೈಹಿಡಿದು ಕಾಪಾಡುತ್ತಾಳೆ, ಕಷ್ಟಕಾರ್ಪಣ್ಯಗಳು ದೂರವಾಗುತ್ತವೆ, ಸಂಸಾರದ ಜಂಜಾಟಗಳು ದೂರವಾಗಿ ಸಂಸಾರದಲ್ಲಿ ಸುಖ ಗೋಚರಿಸುತ್ತವೆ,  ಆಕೆ ಕರುಣಾಮಯಿ ಎಂದು ಹೇಳಿದೆ.

ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿರುವ ಶ್ರೀ ಧ.ಮಂ. ಸಂಶೋಧನಾ ಪ್ರತಿಷ್ಠಾಪನದಲ್ಲಿರುವ ಕೆಲವು ತಾಡೋಲೆಗಳಲ್ಲಿರುವ ಜೈನ ಗ್ರಂಥಸ್ಥ ಹಾಡುಗಳಲ್ಲಿ ಮಂಗಳಾರತಿ ಪದಗಳು, ಸೋಬಾನೆ ಪದಗಳು, ಜೈನಬಿಡಿಪದಗಳು ಕಂಡು ಬಂದವು. ಇಂತಃ ಅಪರೂಪದ ಪ್ರತಿಗಳಲ್ಲಿ ದೊರೆತ ಯಕ್ಷಿ ಪದ್ಮಾವತಿಯನ್ನು ಕುರಿತ ಒಂದೆರಡು ಮಂಗಳಾರತಿಯ ಹಾಡುಗಳನ್ನು ಅಧ್ಯಯನಕ್ಕಾಗಿ ಎತ್ತಿಕೊಂಡಿದ್ದೇವೆ.

"ಜಯಮಂಗಳಂ ನಿತ್ಯ ಶುಭ ಮಂಗಳಂ ।
ಜಯ ನಿರ್ಮಲಕಾಂಗಿ ನಿತ್ಯೋತ್ಸಾಹಿಗೆ ॥ಜಯ॥ ಪಲ್ಲವಿ॥
ನೀಲಕುಂತಳೆ ನಿಬಿಡ ಹಸ್ತಯುಗ್ಮ ಚಂದ್ರಮುಖಿ । ಬಾಲೆಂದು ನಿಟಿಲೆ ವರಕುಂಭ ಕಂಠೇ॥
ಬಾಲಕೋಗಿಲೆ ಬುಜವನ ಕಲ್ಯಾಣಿ ಗುಣಜಾಣೆ । ಫಣಿವೇಣಿ ಶ್ರೀ ಪದ್ಮಾಂಬೆಗೆ ॥1
ಮಣಿಮಕುಟ ಕೈಯ್ಯೂರ ಹಾರಕಟಕಟಿ ಸೂತ್ರನವ । ಮಣಿಕಾಂತಿ ಬುಜಿಕೀರ್ತಿ ಹಾರಪದಕಾ ॥
ಠಣಝಣಿಕ ಕಿಂಕಿಣಿ ಸ್ವರ ವಿರೆದು ನೂಪುರ । ರನಗೊಳಿಸಿ ಮೆರೆವ ಶ್ರೀಪದ್ಮಾಂಬೆಗೆ ॥ಜಯ॥ 2
ಮುಕುರ ನಿಭಗಂದೆಚನ ನಿತ್ಯಮೈಯೊಳಗೆ । ಸುಕುಮಾರಕಾಂಗೇ ॥
ಸಕಲಗಾಜನ್ಯಾಂತರಂಗೇ । ಬುವನೋಕ್ತುಂಗೆ ನಿಖಿಲ ಜನನುತೆ ಶ್ರೀಪದ್ಮಾಂಬೆಗೆ ॥
ಜಯಮಂಗಳಂ ನಿತ್ಯಶುಭ ॥3॥ 33

ಹಾಗೂ ಪ್ರತಿಷ್ಠಾನದ ಅದೇ ತಾಡೋಲೆ ಗ್ರಂಥದಲ್ಲಿ ದೊರೆತ ಯಕ್ಷಿ ಪದ್ಮಾಂಬೆಯನ್ನು ಕುರಿತ ಮತ್ತೊಂದು "ಪದ್ಮಾವತಿ ಅಮ್ಮನವರ ಮಂಗಳಾರತಿ" ಹಾಡು ಹೀಗಿದೆ:

"ಮಂಗಲಂ ಮಂಗಲಂ ದಯಾವಿದೆ ಮಂಗಳಂ । ಪದ್ಮಾವತೆ ಮಂಗಳಮ ಮಂಗಳಂ ॥ಪ॥
ಕಲಾಕಡಗಕಂಡಮಾಲೆ ಮೂಗುತ್ತಿನೊಲೆಯಿಂದಲಿ ಇನ್ನು ಶೋಭಿಸುವ ॥
ಲೀಲೆ ಗತಿಯಾರು ಪುಪ್ಪಾಂಜಲಿಯನು ಸೂಸಿ ॥
ಒಲೆಯಕೊಲಿದಾರತಿ ಮೆತ್ತಿರೆ ॥ಮಂಗಳಾ॥
ಮಿಂಚುವ ಸುರಿಪಲೂ ॥ ಮಿನುಗುವ ಚಂದ್ರಷ್ಟಿ ॥
ಎಳೆನಗೆದೊರುವ ನಿರೆಯೂರು ॥
ಚಳಕಿಕಂಕಣ ಕಂಠಾಮಾಲೆಶೋಭಿಸುತಿರ್ಪ ॥
ಬೆಲೆವೆಳ್ಗಳೊಲಿದಾರತಿ ಮತ್ತಿರೆ ॥ಮಂಗಳಂ॥ 2 ॥ 34

ಮೌಖಿಕ ಸಾಹಿತ್ಯದಲ್ಲಿ ಧರಣೇಂದ್ರ–ಪದ್ಮಾವತಿಯರ ಹಾಡುಗಳು ಹೇರಳವಾಗಿದ್ದು, ಆರತಿಯ ಹಾಡುಗಳು ಉಡಿ ತುಂಬುವ ಹಾಡುಗಳು, ಪದ್ಮಾವತಿ ಧರೆಗಿಳಿವ ಹಾಡುಗಳು, ಬಳೆತೊಡುವ ಹಾಡುಗಳು, ಬಾಸಿಂಗ ಕಟ್ಟುವ ಹಾಡುಗಳು, ಪ್ರಚಾರದಲ್ಲಿವೆ. ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಬಾಸಿಂಗ ಕಟ್ಟುವಾಗಿನ ಸಂದರ್ಭದಲ್ಲಿ ವಧೂವರರನ್ನು ಪದ್ಮಾವತಿಗೆ ಹೋಲಿಸುವ ಮತ್ತು ನೆನೆಯುವ ಒಂದು ಹಾಡು ಹೀಗಿದೆ.

"ಹರಿವಾಣದೊಳಗಿರುವ ಹಳದಿಮಣಿ ಬಾಸಿಂಗ! ಈಗ್ಯಾರು ಕೊಟ್ಟು ಕಳುಹ್ಯಾರೆ॥
ಈಗ್ಯಾರು ಕೊಟ್ಟು ಕಳುಹ್ಯಾರೆ ಹುಮ್ಮುಚದ। ತಾಯಿ ಪದ್ಮಮ್ಮ ಕಳುಹ್ಯಾರೆ॥ಸೋಬಾನೆ॥
ಕಣ್ಣಿನೊಳಗಿನ ಸಣ್ಣಮಣಿ ಬಾಸಿಂಗ! ಈಗ್ಯಾರು ಹರಸಿಕಳುಹ್ಯಾರೆ। ಈಗ್ಯಾರು ಕೊಟ್ಟು
ಕಳುಹ್ಯಾರು। ಹುಮ್ಮುಚದ ಅಮ್ಮಾರು ಹರಸಿ ಕಳೀಸ್ಯಾರೆ॥
ಅಮ್ಮಾರು ಪದ್ಮಮ್ಮ ಏನೆಂದು ಕಳಿಸ್ಯಾರೆ
ಮೂರೇದಿನ ಮುಡಿದು ಮೆರಿಲೆಂದೇ
ಮೂರೇ ದಿನ ಮುಡಿದು ಮೆರಲೆಂದಾರಂಭ ದಿನಕೆ।
ಅಮ್ಮೂರು ಹರಸಿ ಕಳಿಸ್ಯಾರೆ॥ ಸೋಬಾನ॥
ತಾಯಿ ಪದ್ಮಮ್ಮ ಏನೆಂದು ಕಳುಹ್ಯಾರೆ
ಮೂರೇ ದಿನ ಮುಡಿದು ಮೆರಿಲೆಂದೇ।
ಮೂರೇ ದಿನ ಮುಡಿದು ಮೆರಿಲೆಂದಾರಂಭಾ ದಿನಕೆ।
ರತ್ನದ ಕಂಭಕೆ ರಥವೇರಿ॥ ಸೋಬಾನ॥" 35

ಈ ರೀತಿ ಮದುವೆಯ ಸಮಯದಲ್ಲಿ ವಧೂವರರಿಗೆ ಬಾಸಿಂಗವನ್ನು ತಾಯಿ ಪದ್ಮಾವತಿಯೇ ಹರಸಿ ಕಳುಹಿಸಿಕೊಟ್ಟಿರುವಂತೆ ಪದ್ಮಾವತಿಯನ್ನು ನೆನೆಯುತ್ತಾ, ಬಾಸಿಂಗದ ಮಹತ್ವ ಮತ್ತು ಅದರ ಮೌಲ್ಯವನ್ನು ಜನಪದರು ಕಟ್ಟಿ ಹಾಡಿರುವುದು ಜೈನ ಮೌಖಿಕ ಸಾಹಿತ್ಯದ ಶ್ರೀಮಂತಿಕೆಯನ್ನು ತಿಳಿಸುತ್ತದೆ. ಜನಪದರು ಇಂತಹ ಹಾಡುಗಳನ್ನು ಕಟ್ಟಿ ಹಾಡುವಾಗ, ವಧೂವರರನ್ನು ಯಕ್ಷ–ಯಕ್ಷಿಯರಿಗೆ ಹೋಲಿಸುವುದರ ಜೊತೆಗೆ ಆ ಯಕ್ಷಯಕ್ಷಿಯರು ನೆಲೆಸಿರುವ ಕ್ಷೇತ್ರಗಳು, ಅಂದರೆ ಹೊಂಬುಜ, ಸ್ತವನಿಧಿ, ಗೇರುಸೊಪ್ಪೆ, ಬೆಳ್ಗೊಳ ಮುಂತಾದ ಸ್ಥಳಗಳನ್ನು ಹಾಡುಗಳಲ್ಲಿ ಪ್ರಸ್ತಾಪಿಸುವುದು ಜೈನ ಜನಪದ ಹಾಡುಗಳ ಒಂದು ವಿಶೇಷತೆಯೂ ಹೌದು.

ಹೀಗೆ ಯಕ್ಷ–ಯಕ್ಷಿಯರನ್ನು ಕುರಿತು ಜೈನರಲ್ಲಿ ಹೇರಳವಾಗಿ ಹಾಡುಗಳು ರಚನೆಗೊಂಡಿದ್ದು, ಅವುಗಳಲ್ಲಿ ಪಾರ್ಶ್ವನಾಥನ ಯಕ್ಷಿಯಾದ ಪದ್ಮಾವತಿಯ ಹಾಡುಗಳು ಹೆಚ್ಚಾಗಿರುವುದು ಕಂಡುಬರುತ್ತದೆ. ಪದ್ಮಾವತಿಯನ್ನು ಹೊರತುಪಡಿಸಿದರೆ, ಜ್ವಾಲಾಮಾಲಿನಿ ಮತ್ತು ಕೂಷ್ಮಾಂಡಿನಿ, ಯಕ್ಷಿಯರನ್ನು ಕುರಿತ ಹಾಡುಗಳು ಹೆಚ್ಚಿವೆ. ಹಾಗೆಯೇ ಯಕ್ಷರಲ್ಲಿ ಬ್ರಹ್ಮಯಕ್ಷನ ಬಗೆಗೆ ಅಪರಿಮಿತವಾದ ಗೌರವವಿದೆ. ಯಕ್ಷಿಯರಲ್ಲಿ ಪದ್ಮಾವತಿ ಬಗ್ಗೆ ಇರುವಷ್ಟೇ ಭಕ್ತಿ ಗೌರವ, ಯಕ್ಷರ ಪೈಕಿ ಬ್ರಹ್ಮನಿಗೆ ಸಂದಿದೆ. ಇವನು 10ನೇ ತೀರ್ಥಂಕರನಾದ ಶೀಥಲನಾಥನ ಯಕ್ಷನಾಗಿದ್ದಾನೆ. ಜೈನರ ಹಾಡುಗಳಲ್ಲಿ ಮುಖ್ಯವಾಗಿ ಯಕ್ಷಿಯರ ಸೌಂದರ್ಯದ ವರ್ಣನೆ, ಆಭರಣಗಳ ವರ್ಣನೆ, ಅವರ ಮೈಮಾಟ,

ನೋಟ, ವಯ್ಯಾರಗಳ ವರ್ಣನೆ ಇರುತ್ತವೆ. ಈ ಯಕ್ಷ – ಯಕ್ಷಿಯರ ಹಾಡುಗಳು ಜೈನಧರ್ಮದ ಧಾರ್ಮಿಕ ಆಚಾರ, ವಿಚಾರ, ಸಂಪ್ರದಾಯ, ಸಂಸ್ಕೃತಿಯನ್ನು ಅರಿಯುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇಂದು ಜೈನ ಸಾಹಿತ್ಯದಲ್ಲಿ ಯಕ್ಷ–ಯಕ್ಷಿಯರ ಹಾಡುಗಳು ತೀರ್ಥಂಕರರ ಹಾಡುಗಳನ್ನು ಹೊರತುಪಡಿಸಿದರೆ ನಂತರದ ಸ್ಥಾನವನ್ನು ಆಕ್ರಮಿಸಿಕೊಂಡಿರುವುದು ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

## ಅಡಿ ಟಿಪ್ಪಣಿಗಳು

1. ಡಾ. ಚಿದಾನಂದಮೂರ್ತಿ ಎಂ.(ಸಂ) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕ್ರಿ.ಶ. 450 – 1150 ಪು.ಸಂ. 111 ಪ್ರ – ಸ್ವಪ್ನ ಬುಕ್ ಹೌಸ್, ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ ಬೆಂಗಳೂರು 2002
2. ಪದ್ಮನಾಭಶರ್ಮ ಡಿ.(ಸಂ) ಜೈನಧರ್ಮಬೋಧೆ – ಭಾಗ – 1 ಪು.ಸಂ. 31.ಪ್ರ.ರತ್ನತ್ರಯ ಪ್ರಕಾಶನ 713 ಇ ಮತ್ತು ಎಫ್ ಬ್ಲಾಕ್, ಚಿತ್ರಭಾನು ರಸ್ತೆ, ಕುವೆಂಪು ನಗರ ಮೈಸೂರು
3. ಡಾ.ರಮೇಶ ಕೆ. (ಸಂ) ಕನ್ನಡ ಜೈನ ಹಾಡುಗಳು ಸಾಂಸ್ಕೃತಿಕ ಅಧ್ಯಯನ ಪು.ಸಂ. 109 ಪ್ರ–ಮಂಗಳ ಪ್ರಕಾಶನ, ಹೊಸಪೇಟೆ 2005
4. ಡಾ.ರಮೇಶ ಕೆ. (ಸಂ) ಕನ್ನಡ ಜೈನ ಹಾಡುಗಳು ಸಾಂಸ್ಕೃತಿಕ ಅಧ್ಯಯನ ಪು.ಸಂ. 109 ಪ್ರ–ಮಂಗಳ ಪ್ರಕಾಶನ, ಹೊಸಪೇಟೆ 2005
5. ಡಾ. ಚಿನ್ನಸ್ವಾಮಿ ಸೋಸಲೆ ಎನ್. ಜೈನಧರ್ಮದಲ್ಲಿ ಯಕ್ಷ ಯಕ್ಷಿಯರು, ಪ್ರೇರಣೆ, ಪರಿಕಲ್ಪನೆ ಪು.ಸಂ.2 ಪ್ರಸರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ 2015
6. ಮೇಲಿನ ಅದೇ ಪು.ಸಂ. ಅದೇ
7. ಡಾ. ಹಳ್ಳಿಗೇರಿ ಎಫ್.ಟಿ ಹಾಗೂ ಡಾ. ರವೀಂದ್ರನಾಥ ಕೆ (ಪಂ), ಕನ್ನಡ ಜೈನ ಹಾಡುಗಳು, ಪು.ಸಂ. 24 ಪ್ರ – ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
8. ಡಾ. ಚಿನ್ನಸ್ವಾಮಿ ಸೋಸಲೆ ಎನ್. ಜೈನಧರ್ಮದಲ್ಲಿ ಯಕ್ಷ – ಯಕ್ಷಿಯರು ಪ್ರೇರಣೆ ಮತ್ತು ಪರಿಕಲ್ಪನೆ ಪು.ಸಂ. 16 ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. 2015
9. ಮೇಲಿನ ಅದೇ ಪು.ಸಂ. 16
10. ಮೇಲಿನ ಅದೇ ಪು.ಸಂ. 18
11. ಡಾ. ಬಸವರಾಜು ಎಲ್ (ಸಂ) ಪಂಪನ ಸರಳ ಆದಿಪುರಾಣ ಪು.ಸಂ. 2 ಪದ್ಯದ ಸಂಖ್ಯೆ 1.2) ಪ್ರ. ಅಭಿರುಚಿ ಪ್ರಕಾಶನ ಮೈಸೂರು 2002
12. ಮೇಲಿನ ಅದೇ ಪು.ಸಂ. ಅದೇ (ಪದ್ಯದ ಸಂಖ್ಯೆ 1.8)
13. ಡಾ. ಎಸ್.ಡಿ. ಶೆಟ್ಟಿ (ಸಂ) ಶೋಧ (ಸಂಶೋಧನ ನಿಯತಕಾಲಿಕೆ) ಸಂಪುಟ – 3 ಸಂಚಿಕೆ – 2 ಪು.ಸಂ. 46 ಪ್ರ.ಡಾ.ಹಾ.ಮಾ.ನ ಸಂಶೋಧನಾ ಕೇಂದ್ರ ಶ್ರೀ.ಧ.ಮಂ. ಕಾಲೇಜು, ಉಜಿರೆ ದ.ಕ. ಜನವರಿ 2014
14. ಮೇಲಿನ ಅದೇ ಪು.ಸಂ. 42
15. ಮೇಲಿನ ಅದೇ ಪು.ಸಂಖ್ಯೆ. ಅದೇ
16. ಮೇಲಿನ ಅದೇ ಪು.ಸಂಖ್ಯೆ. 42 – 48

17. ಡಾ ಚಿದಾನಂದ ಮೂರ್ತಿ ಎಂ. (ಸಂ) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕ್ರಿ.ಶ. 450 –1150 ಪು.ಸಂ. 111 ಪ್ರ– ಸ್ವಪ್ನ ಬುಕ್ ಹೌಸ್ ತುಂಗಾಕಾಂಪ್ಲೆಕ್ಸ್ ಗಾಂಧಿನಗರ ಬೆಂಗಳೂರು – 2002.
18. ಮೇಲಿನ ಅದೇ ಪು.ಸಂ. 112
19. ಡಾ. ಮಂಜುನಾಥ್ ಸಿ.ಯು (ಸಂ) ಶಾಸನಗಳ ಪ್ರ. ಕರ್ನಾಟಕ ಸಾಹಿತ್ಯ ಪು.ಸಂ. 89 – 90 ಚಿತ್ಕಲಾ ಪ್ರಕಾಶನ ಕುಪ್ಪಂ 2012
20. ಮೇಲಿನ ಅದೇ ಪು.ಸಂಖ್ಯೆ. ಅದೇ 91
21. ಮೇಲಿನ ಅದೇ ಪು.ಸಂಖ್ಯೆ.
22. ಮೇಲಿನ ಅದೇ ಪು.ಸಂಖ್ಯೆ.
23. ಮೇಲಿನ ಅದೇ ಪು.ಸಂಖ್ಯೆ. 89
24. ಡಾ. ಮಯೂಷ್ ಸಿ.ಯು. (ಸಂ. ಕ್ರಿ.ಶ. 1150 – 1340) ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ ಪು.ಸಂ. 89 ಚಿತ್ಕಲಾ ಪ್ರಕಾಶನ, ಕುಪ್ಪಂ 2002
25. ಮೇಲಿನ ಅದೇ ಪು.ಸಂಖ್ಯೆ. ಅದೇ
26. ಮೇಲಿನ ಅದೇ ಪು.ಸಂಖ್ಯೆ. ಅದೇ
27. ಮೇಲಿನ ಅದೇ ಪು.ಸಂಖ್ಯೆ. 90
28. ಡಾ. ಶಾಂತ ಕುಮಾರ ಶೆಟ್ಟಿ (ಸಂ) ಜೈನ ಗ್ರಂಥಸ್ಥ ಹಾಡುಗಳು ಪು.ಸಂ ೮೩ ಪ್ರ. ಮಂಜು ಶ್ರೀ ಪ್ರಿಂಟರ್ಸ್ ಉಜಿರೆ ದ.ಕ. 2011
29. ಮೇಲಿನ ಅದೇ ಅದೇ ಪುಟ
30. ಲೇ. ಹೊಳಲ್ಕೆರೆ ಶ್ರೀಪಾಲಶ್ರೇಷ್ಠಿ, ವಸಂತಕುಮಾರ್, ದರ್ಶನಾ (ಪವಿತ್ರ, ಹೊಳಲ್ಕೆರೆ ಚಿತ್ರದುರ್ಗ ಜಿಲ್ಲೆ) ಪು.ಸಂ. 69 ಪ್ರ. ಸಹನಾ ಪ್ರಕಾಶನ 2010
31. ಮೇಲಿನ ಅದೇ ಪು.ಸಂ 69–70
32. ಮೇಲಿನ ಅದೇ ಪು.ಸಂ. 73
33. ಜೈನ ಗ್ರಂಥಸ್ಥ ಹಾಡುಗಳು ತಾಡೋಲೆ ಪ್ರತಿಗಳು, ಶ್ರೀ.ಧ.ಮಂ, ಸಂಶೋಧನಾ ಪ್ರತಿಷ್ಠಾನ, ಧರ್ಮಸ್ಥಳ, ತಾಡೋಲೆ ಸಂಖ್ಯೆ 807 ಮಂಗಳಾರತಿ ಪದಗಳು
34. ಮೇಲಿನ ಅದೇ ತಾಡೋಲೆ ಸಂಖ್ಯೆ ಅದೇ. ಪದ್ಮಾವತಿ ಅಮ್ಮನವರ ಮಂಗಳಾರತಿ ಹಾಡು
35. ಕ್ಷೇತ್ರಕಾರ್ಯದ ಮೂಲಕ ಸಂಪಾದನೆ, ಚಿ.ಸಂ. ಶ್ರದ್ಧಾ ಮತ್ತು ಚೇರಾ ಅಮಿತ್‌ರವರ ವಿವಾಹ ಸಮಾರಂಭದ ಸೋಬಾನೆ ಹಾಡುಗಳು.

## ಅಧ್ಯಾಯ: ಐದು

# ಜೈನರ ಪರ್ವಗಳನ್ನು ಕುರಿತ ಹಾಡುಗಳು

ಹಬ್ಬಗಳು ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವಿಶಿಷ್ಟವಾದ ಆಚರಣೆಗಳು. ಈ ಕುರಿತು ಪಾಶ್ಚಾತ್ಯನೊಬ್ಬ "ಭಾರತದ ಅವಿಭಕ್ತ ಕುಟುಂಬ ಹಾಗೂ ಸತಿ–ಪತಿ ಮಕ್ಕಳ ಸಾಮರಸ್ಯಕ್ಕೆ ವರ್ಷವಿಡೀ ಹೆಣೆದುಕೊಂಡಿರುವ ಹಬ್ಬಗಳೇ ಕಾರಣ" ಎಂದು ಅಭಿಪ್ರಾಯ ಪಟ್ಟಿರುವುದು ಹಬ್ಬಗಳ ಮಹತ್ವವನ್ನು ಸಾರುತ್ತದೆ. ಹಬ್ಬ–ಹರಿದಿನ, ತೇರು, ಜಾತ್ರೆಗಳನ್ನೆಲ್ಲಾ ಇಷ್ಟಪಡುವ ಮನುಷ್ಯ ಉತ್ಸವ ಪ್ರಿಯನಾಗಿದ್ದಾನೆ. ಇದನ್ನು ಅರಿತೇ ಕವಿಕುಲಗುರು ಕಾಳಿದಾಸರು "ಉತ್ಸವ ಪ್ರಿಯಾಃ ಖಲು ಮಾನವಾಃ"ಎಂದು ಹೇಳಿರುವುದು ಅಕ್ಷರಶಃ ಸತ್ಯವೆನಿಸುತ್ತದೆ. ಏಕೆಂದರೆ ನಾವು ವಾಸಿಸುವ ಈ ಪ್ರಪಂಚ ಧರ್ಮಕ್ಷೇತ್ರವೂ ಹೌದು. ಕರ್ಮಕ್ಷೇತ್ರವೂ ಹೌದು. ಇಲ್ಲಿ ವಾಸಿಸುವ ನಾವು ನಮ್ಮ ಒಳಿತಿಗಾಗಿ, ಸುಖ–ಸಂತೋಷಕ್ಕಾಗಿ ಬಾಳಿನಲ್ಲಿನ ಜೀವನ ಕ್ರಮದ ಉನ್ನತ ಬದಲಾವಣೆಗಾಗಿ ಸಾಧನೆಗಾಗಿ ಸಿದ್ಧಿಯನ್ನು ಪಡೆಯುವುದಕ್ಕಾಗಿ, ಸಂಘಟನೆಗಾಗಿ, ಆತ್ಮೀಯರೊಂದಿಗೆ ಸಂಬಂಧಿಕರೊಡನೆ ಬೆರೆಯುವುದಕ್ಕಾಗಿ ಮಾನವ ಹಲವು ಹಬ್ಬ–ಹರಿದಿನಗಳನ್ನು ಆಚರಿಸುತ್ತಾ ಬಂದಿದ್ದಾನೆ. ಇಂದು ಭಾರತವು ತನ್ನ ಆಧ್ಯಾತ್ಮದ ಮಹತ್ವವನ್ನು ಮತ್ತು ಕೌಟುಂಬಿಕ ಶಕ್ತಿಯನ್ನು ಜಗತ್ತಿನಾದ್ಯಂತ ಪಸರಿಸಿ ಆಕರ್ಷಣೆಯ ಬಿಂದುವಾಗಿದೆ. ಈ ನಿಟ್ಟಿನಲ್ಲಿ ಕುಟುಂಬವನ್ನು ಮೂಲ ಘಟಕವನ್ನಾಗಿ ಉಳ್ಳ, ಸಂಬಂಧವೇ ಪ್ರಧಾನ ಶಕ್ತಿಯಾಗಿರುವ ನೆಲೆಗಟ್ಟಿನ ಸಮಾಜ ನಿರ್ಮಾಣವಾಗಬೇಕು. ಈ ಸಮಾಜದ ಅಂತಸ್ಸತ್ವ ಆಧ್ಯಾತ್ಮದ ಬೆಳಕನ್ನು ಹೊತ್ತಿಸಬೇಕು. ಇಂತಹ ಸದುದ್ದೇಶದಿಂದ ನಮ್ಮಲ್ಲಿ ಹಬ್ಬಗಳ ವಿಶೇಷ ದಿನಗಳ ಆಚರಣೆಗಳು ಬಳಕೆಗೆ ಬಂದವು.

ಹಬ್ಬ ಎಂದರೆ ಗಮ್ಮತ್ತು, ಭರ್ಜರಿ ಊಟ, ಆಡಂಬರ ಎಂಬ ಸದ್ಯದ ಈ ಪರಿಸ್ಥಿತಿಯಲ್ಲಿ ವಿಶೇಷ ದಿನಗಳನ್ನು ಆಚರಿಸುವ ಅಗತ್ಯ ಮತ್ತು ಅನುಸರಿಸಬೇಕಾದ ರೀತಿ ನೀತಿಗಳನ್ನು ಮೊದಲೇ ತಿಳಿದುಕೊಂಡು ಬಂದಿದ್ದೇವೆ. ನಾವು ಆಚರಿಸುವ ವ್ರತ, ನಿಯಮ, ಪೂಜೆ, ಪುರಸ್ಕಾರಗಳನ್ನು ಎಲ್ಲಾ ದಿನಗಳಲ್ಲೂ ಆಚರಿಸಲು ಸಾಧ್ಯವಿಲ್ಲ. ಆದುದರಿಂದ ಕಡೆಯ ಪಕ್ಷ ಇಂಥಹ ದಿನಗಳಲ್ಲಾದರೂ ಸ್ವಲ್ಪ ದೇಹದಂಡನೆ, ಆತ್ಮ ಚಿಂತನೆ ಮಾಡಿದಾಗ ಎಲ್ಲೋ ಒಂದು ಕಡೆ ಮಾನವ ಮಾಧವನಾಗುವ ಅವಕಾಶ. ಸಾಮಾನ್ಯವಾಗಿ ಎಲ್ಲಾ ಹಬ್ಬಗಳಲ್ಲೂ ಕಂಡು ಬರುವ ಸಮಾನ ಅಂಶವೆಂದರೆ ಪ್ರಾತಃಕಾಲದ ತೈಲಾಭ್ಯಂಜನ ಸ್ನಾನ, ಹೊಸ ಉಡುಗೆ ತೊಡುಗೆಗಳ ಧಾರಣೆ, ಶುಚಿ–ರುಚಿಯಿಂದ ಪುಷ್ಕಳ ಭೋಜನ ಮಿಗಿಲಾಗಿ ಬಂಧು–ಬಾಂಧವರ ಸ್ನೇಹಿತರ, ಹಿತೈಷಿಗಳ ಸುಮಧುರ ಮಿಲನ, ಜಪ–ತಪ ಪೂಜೆ –ಪುರಸ್ಕಾರ, ದಾನ–ಧರ್ಮ, ಹೋಮ–ನೇಮ, ನೃತ್ಯ–ಸಂಗೀತ, ಭಜನೆ ಮುಂತಾದ ಮನರಂಜನೆಗಳು ಇವೆಲ್ಲ ಮನಸ್ಸಿಗೆ ಸಂತೋಷವನ್ನುಂಟು ಮಾಡುತ್ತವೆ. ಸ್ನಾನ–ಮಾನ–ದಾನ ಇವು ಭಾರತೀಯ ಹಬ್ಬಗಳ ತ್ರಿಪದಿಗಳೆನ್ನಬಹುದು. ನಮ್ಮ ಅಂತರಂಗ–ಬಹಿರಂಗ ಮತ್ತು ಪರಿಸರವನ್ನು ಶುಚಿಯಾಗಿ ಸುಂದರವಾಗಿಟ್ಟುಕೊಳ್ಳುವುದು ಸ್ನಾನ, ಹಿರಿಯರನ್ನು ಗೌರವಿಸುವುದು ದೇವತಾರ್ಚನೆ ಇತ್ಯಾದಿಗಳು ಮಾನ, ಹಂಚಿ ಬಾಳುವುದು ದಾನ ಈ ಮೂರರ ಮಹತ್ವದ ಬಗ್ಗೆ ತಿಳಿಸುವುದೇ ಹಬ್ಬಗಳ ವಿಶೇಷತೆ. ಈ ಹಬ್ಬಗಳ ಸಡಗರ, ಸಂಭ್ರಮ, ಚಟುವಟಿಕೆಗಳಲ್ಲಿ ಮಹಿಳೆಯರ ಪಾತ್ರ ಬಲು ಹಿರಿದು. ಅದಕ್ಕಾಗಿಯೇ "ಗೃಹಿಣಿ ಗೃಹಮುಚ್ಯತೇ" ಎಂಬ ವಾಕ್ಯ ಈ ಸಂದರ್ಭದಲ್ಲಿ ಸಾರ್ಥಕ್ಯ ಪಡೆದುಕೊಂಡಿದೆ.

ಆದ್ದರಿಂದಲೇ "ನನ್ನ ಹರಣ ನಿನಗೆ ಶರಣ ಸಕಲ ಕಾರ್ಯ ಕಾರಣ" ಎಂದು ಕವಿ ಬೇಂದ್ರೆಯವರ ಮಾತು ಉಚಿತವೆನಿಸುತ್ತದೆ. ನಮ್ಮ ಹರಣ ಎಂದರೆ ಪ್ರಾಣ, ಭಗವಂತನಿಗೆ ಶರಣ ಬರುವುದು. ಸಕಲ ಕಾರ್ಯಎಂದರೆ ಕೆಲಸಗಳಿಗೆ ಕಾರಣೀಭೂತವಾಗುತ್ತದೆ. ನಾವು ಮಾಡುವ ಎಲ್ಲಾ ಕೆಲಸಗಳನ್ನು ಆ ಭಗವಂತನಿಂದ ಮಾಡಿಸಲ್ಪಡುತ್ತದೆ.

ಇಂದು ಇಂತಹ ಹಬ್ಬಗಳು ಭಾರತೀಯ ಸಂಸ್ಕೃತಿಯ, ಹಿನ್ನೆಲೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದು, ಸಂಸ್ಕೃತಿಯ ಜೀವಾಳವಾಗಿ ಮಾರ್ಪಟ್ಟಿವೆ. ಭಾರತವು ಹಲವು ಧರ್ಮ, ಜಾತಿ, ಮತ ಪಂಗಡಗಳ ಜಾತ್ಯಾತೀತ

ರಾಷ್ಟ್ರವಾಗಿದ್ದು, ಇಲ್ಲಿರುವ ಪ್ರತಿಯೊಂದು ಸಮುದಾಯವೂ ಕೂಡ ಸಮಾಜದ ಧಾರ್ಮಿಕ ಜೀವನದ ಒಡಲಿನಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಪ್ರತಿಯೊಂದು ಧರ್ಮವೂ ಕೂಡ ತನ್ನ ಧಾರ್ಮಿಕ, ತತ್ವ ಮಹತ್ವಗಳ ಹಿನ್ನೆಲೆಯಲ್ಲಿ ತಮ್ಮದೇ ಆದ ರೀತಿಯಲ್ಲಿ ತಂತಮ್ಮ ನಂಬಿಕೆಗಳ ಆಧಾರದ ಮೇಲೆ ಹಬ್ಬ–ಹರಿದಿನ ಉತ್ಸವಗಳನ್ನು ಆಚರಿಸಿಕೊಂಡು ಬರುತ್ತಿವೆ. ಅವುಗಳನ್ನು ನಮ್ಮ ರಾಷ್ಟ್ರದ ಪ್ರಮುಖ ಧರ್ಮಗಳಲ್ಲಿ ಒಂದಾದ ಜೈನಧರ್ಮದ ಬಗ್ಗೆ ಹೇಳುವುದಾದರೆ ಅವರುಗಳು ತಮ್ಮ ಧರ್ಮದ, ಧಾರ್ಮಿಕ ಮಹತ್ವವನ್ನು ಸ್ಮರಣೀಯ ಸಂದರ್ಭಗಳನ್ನು ನೆನಪಿಸುವ ಹಾಗೆ ಅವರದ್ದೇ ಆದ ಹಲವು ಹಬ್ಬಗಳು–ಉತ್ಸವಗಳನ್ನು ಆಚರಿಸುತ್ತಾ ಬಂದಿದ್ದಾರೆ. ಜೈನ ಹಬ್ಬಗಳ ಆಚರಣೆಯ ವಿಶೇಷತೆಯದರೆ, ಇವರು ಕೇವಲ ಸಂತೋಷಕ್ಕಾಗಿ ಅಥವಾ ವಿನೋದಕ್ಕಾಗಿ ಮಾತ್ರವೇ ಹಬ್ಬಗಳನ್ನು ಆಚರಿಸುವುದಿಲ್ಲ. ಬದಲಾಗಿ ಜನರ ಶ್ರದ್ಧೆ, ಭಕ್ತಿ ಭಾವನೆಗಳನ್ನು ಬಲಪಡಿಸುವ ಮುಖೇನ, ತಮ್ಮ ಆಧ್ಯಾತ್ಮಿಕ ಉನ್ನತಿಗಾಗಿ ಆಚರಿಸುವರು. ಅಂದರೆ ಜೈನರ ಬಹುತೇಕ ಹಬ್ಬಗಳ ಆಚರಣೆಗಳು ಧಾರ್ಮಿಕ ಮಹತ್ವವುಳ್ಳ ಮೂಲದವುಗಳಾಗಿರುತ್ತವೆ. ತಮ್ಮ ಧರ್ಮದ ನೀತಿ, ನಿಯಮ, ತತ್ವ ಸಿದ್ಧಾಂತಗಳನ್ನು ಮೀರದೆ ಕರ್ನಾಟಕದ ಧಾರ್ಮಿಕ ಕೇಂದ್ರಗಳಲ್ಲಿ ಹಬ್ಬಗಳನ್ನು ಆಚರಿಸುತ್ತಾರೆ. ಇಂತಹ ಧಾರ್ಮಿಕ ಹಿನ್ನೆಲೆಯುಳ್ಳ ಹಬ್ಬಗಳನ್ನು (ಪರ್ವ) ನಿತ್ಯ ಪರ್ವ, ನೈಮಿತ್ತಿಕ ಪರ್ವಗಳೆಂದು ವಿಂಗಡಿಸಬಹುದು. ಅಂದರೆ ಪ್ರತಿ ತಿಂಗಳ ಬಿದಿಗೆ, ಪಂಚಮಿ, ಅಷ್ಟಮಿ, ಏಕಾದಶಿ ಮತ್ತು ಚತುರ್ದಶಿ ತಿಥಿಗಳು ಪಂಚಪರ್ವಗಳು. ಇವನ್ನು ನಿತ್ಯ ಪರ್ವಗಳೆನ್ನುವರು. ಈ ತಿಥಿಗಳಲ್ಲಿ ಶ್ರಾವಕರು ಏಕಭುಕ್ತ, ಉಪವಾಸ, ಧ್ಯಾನ, ತಪ–ಪೂಜೆ ವ್ರತಾಚರಣೆಗಳಲ್ಲಿ ತೊಡಗುತ್ತಾರೆ. ಆದರೆ ಈ ಪರ್ವಗಳನ್ನು ಹಬ್ಬಗಳೆಂದು ಕರೆಯುವ ರೂಢಿಯಿದ್ದಂತೆ ಕಾಣುವುದಿಲ್ಲ. ನೈಮಿತ್ತಿಕ ಪರ್ವಗಳಾದ ಯುಗಾದಿ, ಮಹಾವೀರ ಜಯಂತಿ, ನವರಾತ್ರಿ, ದೀಪಾವಳಿ ಮೊದಲಾದವುಗಳನ್ನು ಹಬ್ಬಗಳೆಂದು ಕರೆಯಬಹುದಾಗಿದೆ. ಈ ಅಧ್ಯಯನದ ಅವಧಿಯಲ್ಲಿ ಧಾರ್ಮಿಕ ಹಿನ್ನೆಲೆಯಲ್ಲಿ ಆಚರಿಸುವ ಕೆಲವು ಹಬ್ಬಗಳು ಹಾಗೂ ಆ ಹಬ್ಬಗಳ ಸಂದರ್ಭದಲ್ಲಿ ಆಯಾ ಹಬ್ಬಗಳ ವಿಶೇಷತೆ ಅವುಗಳ ಆಚರಣೆಯ ಹಿನ್ನೆಲೆಯಲ್ಲಿ ರಚನೆಯಾಗಿರುವಂತಹ ಹಾಡುಗಳನ್ನು ಕ್ಷೇತ್ರಕಾರ್ಯ ಮತ್ತು ಸಂಶೋಧನೆಯಲ್ಲಿ ಸಂಗ್ರಹಿಸಿದ್ದು, ಪ್ರತಿಯೊಂದು ಹಬ್ಬಗಳ ವಿವರಣೆಯ ಕೊನೆಯಲ್ಲಿ, ಈ ಮಹಾಪ್ರಬಂಧದ ಅಧ್ಯಯನದ ಉದ್ದೇಶದಿಂದ ಅನುಕೂಲವಾಗಲೆಂದು ಒಂದೊಂದು ಹಾಡುಗಳನ್ನು ಉದಾಹರಣೆಗಾಗಿ ಕೊಡಲು ಪ್ರಯತ್ನ ಮಾಡಿದ್ದೇವೆ.

ನಮ್ಮ ದೇಶದಲ್ಲಿ ಜೈನಧರ್ಮ ಸಾವಿರಾರು ವರ್ಷಗಳ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದು, ಒಂದು ಕಾಲಕ್ಕೆ ಬಲಿಷ್ಠವಾಗಿತ್ತು. ಆದರೆ ಇಂದು ಸಂಖ್ಯಾ ಬಲದಿಂದ ಕಡಿಮೆಯಾಗಿದ್ದರೂ ತನ್ನ ಪರಂಪರೆಯನ್ನು ಮಾತ್ರ ಕಾಯ್ದುಕೊಂಡು ಬಂದಿದೆ. ಇಂತಹ ಆಚರಣೆಗಳಲ್ಲಿ ಹಬ್ಬಗಳು ಜೈನಧರ್ಮ ಸಂಸ್ಕೃತಿ ಪರಂಪರೆಯ ಅವಿಭಾಜ್ಯ ಅಂಗಗಳಂತೆ ಬಿಂಬಿತವಾಗಿದ್ದು, ಇಂದೂ ಸಹ ಜನಮಾನಸದಲ್ಲಿ ಭದ್ರವಾಗಿ ನೆಲೆಯೂರಿವೆ. ಆದರೆ ಎಷ್ಟೋ ವೇಳೆ ಈ ಹಬ್ಬಗಳ ಆಚರಣೆಯ ಉದ್ದೇಶಗಳು ಮಾತ್ರ ತಿಳಿಯದೇ ಹೋಗುವ ಸಂಭವವಿದೆ. ಜೈನರು ಆಚರಿಸುವ ಪ್ರತಿಯೊಂದು ಹಬ್ಬಗಳಿಗೂ ಒಂದೊಂದು ಮಹತ್ವ, ಕಾರಣ, ಉದ್ದೇಶವುಂಟು. ಬಹುತೇಕ ಹೆಚ್ಚಿನ ಹಬ್ಬಗಳು ಹಿಂದೂಗಳು ಆಚರಿಸುವ ಹಬ್ಬಗಳಂತೆಯೇ ಇದ್ದರೂ ಕೆಲವೊಂದು ಹಬ್ಬಗಳ ಆಚರಣೆಯಲ್ಲಿ ಪ್ರತ್ಯೇಕತೆ ಕಂಡು ಬರುತ್ತವೆ. ಮಹಾವೀರ ಮುಕ್ತಿಗೆ ತೆರಳಿದ ದಿನ ದೀಪಾವಳಿ ಹಬ್ಬ ಎಂದು ಆಚರಿಸಿ ಮಹಾವೀರ ತೀರ್ಥಂಕರರಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ನವರಾತ್ರಿಯ ಬಗ್ಗೆಯೂ ಸಹ ಬೇರೆಯೇ ಅರ್ಥವಿದೆ.

"ನವರಾತ್ರಿಯ ಹತ್ತು ದಿನಗಳಲ್ಲಿ ಬೇರೆ ಬೇರೆ ಯಕ್ಷ ಯಕ್ಷಿಯರು ತಮ್ಮ ಮನೆಗೆ ಬಂದು ಪೂಜೆ ಸ್ವೀಕರಿಸುತ್ತಾರೆಂಬ ನಂಬಿಕೆ ಇದೆ. ಇದಕ್ಕಾಗಿ ಹತ್ತು ದಿನಗಳು ವಿಶೇಷ ಪೂಜೆಗಳನ್ನು ನಡೆಸುತ್ತಾರೆ" [1]. "ಯುಗಾದಿಯಂದು ಬೆಳಿಗ್ಗೆ ಎದ್ದೊಡನೆ ದೇವರ ಚಿತ್ರವನ್ನು ನೋಡುತ್ತಲೇ ಏಳಬೇಕೆಂಬ ವಿಧಿಯಿದೆ. ಇದನ್ನು "ಶ್ರೀ ಮುಖದರ್ಶನ" ಎನ್ನುವರು" [2] ಯುಗಾದಿಯ ಹಿಂದಿನ ರಾತ್ರಿ ಬಸದಿಗಳಿರುವ ಕಡೆ ಜೈನರು ಮಲಗುವುದು ರೂಢಿ. ಶ್ರವಣಬೆಳಗೊಳದಲ್ಲಿ ಅನೇಕ ಜನ ಆ ರಾತ್ರಿ ವಿಂದ್ಯಗಿರಿಯ ಮೇಲೆ ಬಾಹುಬಲಿಯ ಸಾನಿಧ್ಯದಲ್ಲಿ ಮಲಗುತ್ತಾರೆ.

ಈ ಮೇಲಿನ ಹಬ್ಬಗಳಲ್ಲದೆ ಜೈನರಿಗೆ ವಿಶಿಷ್ಠವಾಗಿರುವ ಅನೇಕ ಹಬ್ಬಗಳಿವೆ. ಈ ಸಂದರ್ಭದಲ್ಲಿ ಡಾ॥ ಜ್ಯೋತಿ ಪ್ರಸಾದ್ ಜೈನರ ಈ ಮಾತುಗಳು ಯಥಾರ್ಥವಾಗಿವೆ. (Dr. Jyothiprasad Jain op.cit: book p. 119–120)

"ಕನಿಷ್ಠಪಕ್ಷ ಒಂದಾದರೂ ಜೈನಪರ್ವದಿನಗಳು, ಉಪವಾಸದ ದಿನಗಳು ಇತ್ಯಾದಿಗಳನ್ನು ಹೊಂದಿರದ ಯಾವ ದಿನವೂ ಇಲ್ಲ. ಇವುಗಳನ್ನು (1) ನಿಯತಕಾಲಿಕಗಳು (2) ತೀರ್ಥಂಕರರ ಕಲ್ಯಾಣಗಳು (3) ಐತಿಹಾಸಿಕಗಳು (4) ಸ್ಥಳೀಯ ಮತ್ತು (5) ವಿಶಿಷ್ಠಗಳೆಂದು ಐದು ಭಾಗಮಾಡಬಹುದು" [3]

ಈ ಮೇಲಿನ ವಿಭಾಗಗಳಲ್ಲಿ ಒಂದಲ್ಲ ಒಂದಕ್ಕೆ ಸೇರುವ ಶ್ರುತಪಂಚಮಿ, ಅಕ್ಷಯತೃತೀಯಾದಂತಹ ಮೊದಲಾದ ಹಬ್ಬಗಳೂ ಇವೆ. ಆದರೆ ಇವುಗಳಲ್ಲಿನ ಅನೇಕ ಹಬ್ಬಗಳೂ ಗ್ರಾಮೀಣ ಜೈನರಿಂದ ಆಚರಿಸ್ಪಡುತ್ತಿಲ್ಲ. ಪಟ್ಟಣ ಪ್ರದೇಶದ ಜೈನರು ಮಾತ್ರ ಸ್ವಲ್ಪಮಟ್ಟಿಗೆ ಆಚರಿಸುವುದುಂಟು.

ಡಾ॥ ಜ್ಯೋತಿ ಪ್ರಸಾದ್ ಜೈನ್‌ರವರ ಮೇಲಿನ ಈ ಹಬ್ಬಗಳ ವಿಭಾಗಕ್ರಮದಲ್ಲಿ ಅಧ್ಯಯನ ದೃಷ್ಠಿಯಿಂದ ಸುಲಭೀಕರಿಸಿ ಈ ಕೆಳಕಂಡಂತೆ ವಿವರಿಸಬಹುದು.

## 1. ಯುಗಾದಿ

"ಯುಗ" ಎಂದರೆ ನೂತನವರ್ಷ 'ಆದಿ' ಎಂದರೆ ಆರಂಭ ಎಂದರ್ಥ. ಹಬ್ಬಗಳ ಸರಣಿ ಯುಗಾದಿಯಿಂದ ಪ್ರಾರಂಭವಾಗುತ್ತವೆ. ಹೊಸವರ್ಷ ಹರ್ಷದಾಯಕವಾಗಲೆಂದು ಒಳ್ಳೆಯ ಸದುದ್ದೇಶ ಇಚ್ಛೆಯನ್ನರಿತು ಆಚರಿಸುವ ಹಬ್ಬವೇ ಯುಗಾದಿ. ಈ ಹಬ್ಬ ವಸಂತ ಋತುವಿನಲ್ಲಿ ಬರುತ್ತದೆ. ಅಂದರೆ ಋತುಗಳ ರಾಜ ವಸಂತ ಋತುವಿನ ಕಾಲ. ಮರಗಳು ಚಿಗುರೊಡೆದು ಹೊಸತನವು ಅಂದಿಗೇ ಸೀಮಿತವಾಗದೇ ಇಡೀ ವರ್ಷ ಸಂತೋಷವಾಗಿರುವಂತೆ ಮಾಡುತ್ತದೆ. ಈ ಹಬ್ಬವನ್ನು ಸಾಮಾನ್ಯವಾಗಿ ಎಲ್ಲಾ ಹಿಂದೂಗಳು ಆಚರಿಸುತ್ತಾರೆ. ಏಕೆಂದರೆ ಅಂದು ಹಿಂದೂ ಪಂಚಾಂಗದ ಪ್ರಕಾರ ಮೊದಲ ದಿನವಾಗಿದೆ. ಆದರೆ ಜೈನರು ಚೈತ್ರಮಾಸದ (ಮಾರ್ಚ್) ಮೊದಲನೆಯ ದಿನವನ್ನು ಹೊಸವರ್ಷದ ದಿನವೆಂದು ಪರಿಗಣಿಸುವುದಲ್ಲದೆ ಈ ದಿನವನ್ನು ವೃಷಭ ತೀರ್ಥಂಕರರ ಮಗನಾದ ಭರತ ಚಕ್ರವರ್ತಿಯು ದಿಗ್ವಿಜಯವನ್ನು ಯಶಸ್ವಿಯಾಗಿ ಮುಗಿಸಿದ ದಿನವೆಂದು ಮಾನ್ಯ ಮಾಡುತ್ತಾರೆ"[4]. ಭರತ ಚಕ್ರವರ್ತಿಯು ತನ್ನ ರಾಜಧಾನಿಗೆ ಹಿಂದಿರುಗಿದ್ದು ಮಹತ್ವದ ದಿನವೆಂದು ಭಾವಿಸಲಾಗಿತ್ತು.[5] ಭಾರತೀಯ ಕಾಲಗಣನೆಗೆ ಅನುಸರಿಸಿ ನಮ್ಮ ದೇಶದಲ್ಲಿ ವರ್ಷದ ಆರಂಭವು ಎರಡು ವೇಳೆ ಬರುವುದು ಉತ್ತರ ಭಾರತದಲ್ಲಿ ವಿಕ್ರಮ ಸಂವತ್ಸರದ ಪ್ರಕಾರ ಕಾರ್ತಿಕ ಶುದ್ಧ ಪ್ರತಿಪದೆಯಂದು ವರ್ಷಾರಂಭವಾಗುವುದು. ವ್ಯಾಪಾರಸ್ಥರು ಇದನ್ನೇ ನೂತನ ವರ್ಷದ ಪ್ರಾರಂಭದ ದಿನವೆಂದು ಪರಿಗಣಿಸುವರು. ಅದೇ ದಕ್ಷಿಣ ಭಾರತದಲ್ಲಿ ಶಾಲಿವಾಹನ ಶಕೆಯ ಪ್ರಕಾರ ಚೈತ್ರ ಶುದ್ಧ ಪ್ರತಿಪದೆಯಿಂದ ವರ್ಷಾರಂಭವಾಗುವುದು"[6] ಆದ್ದರಿಂದ ಚೈತ್ರವೇ ಹೊಸವರ್ಷದ ಮೊದಲನೆಯತಿಗಳು. ಅದರ ಮೊದಲನೆ ದಿನವೇ ಹೊಸವರ್ಷದ ಮೊದಲ ದಿನ.

ಜೈನ ಧರ್ಮದ ಆಚರಣೆಯ ಪ್ರಕಾರ ಯುಗಾದಿ ಹಬ್ಬದ ಆಚರಣೆಯ ಹಿನ್ನೆಲೆಗೆ ಪ್ರಮುಖವಾದ ಮೂರು ಕಾರಣಗಳನ್ನು ಹೇಳಬಹುದಾಗಿದೆ. ಜೈನರು ಷಟ್‌ಖಂಡಾಧಿಪತಿ ಋಷಭದೇವರ ಹಿರಿಯ ಮಗನಾದ ಭರತಚಕ್ರವರ್ತಿಯ, ಆಯುಧಾಗಾರದಲ್ಲಿ ದಿಗ್ವಿಜಯದ ಸಂಕೇತವಾಗಿ ಆವಿರ್ಭವಿಸಿದ ಚಕ್ರರತ್ನದ ಸಹಾಯದಿಂದ ಇಡೀ ಭೂಮಂಡಲವನ್ನೇ ಗೆದ್ದು ಅಯೋಧ್ಯೆಗೆ ಹಿಂದಿರುಗಿದ ಸಂಭ್ರಮದ ಸೂಚಕವಾಗಿ ಆ ದಿಗ್ವಿಜಯ ಮಹೋತ್ಸವದ ಸ್ಮರಣಾರ್ಥವಾಗಿ ಆಚರಿಸುವ ಹಬ್ಬವೇ ಈ ಯುಗಾದಿ. ಭರತ ಚಕ್ರವರ್ತಿಯಿಂದಲೇ ನಮ್ಮ ದೇಶಕ್ಕೆ ಭಾರತ ಎಂಬ ಹೆಸರು ಬಂತೆಂಬುದು ಉಲ್ಲೇಖನೀಯ.

ಹೀಗೆ ಭರತನ ದಿಗ್ವಿಜಯ ಉತ್ಸವದ ಸ್ಮರಣಾರ್ಥವಾಗಿ ಯುಗಾದಿಯನ್ನು ಆಚರಿಸಬಹುದಾದರೂ ಅದಕ್ಕಿಂತ ಮಹತ್ವವಾದ ಇನ್ನೊಂದು ಕಾರಣವಿರುವುದು ಕಂಡುಬರುತ್ತದೆ.

"ಸೃಷ್ಠಿಯ ಆರಂಭ ಕಾಲದಲ್ಲಿ ಸುಷಮ–ದುಃಷಮಾ ಅವನತಿಯ ಕಾಲದಲ್ಲಿ ಪ್ರತಿಶ್ರುತಿ, ಸನ್ಮತಿ, ಕ್ಷೇಮಂಕರ, ಕ್ಷೇಮಂಧರ, ಸೀಮಂಕರ, ಸೀಮಂಕರ, ವಿಮಲವಾಹನ, ಚಕ್ಷುಸ್ಮಾನ್, ಯಶಸ್ವಾನ್ –ಅಭಿಚಂದ್ರ ಚಂದ್ರಾಭಿ ಮರುದೇವ, ಪ್ರಸೇನಜಿತ ಹಾಗೂ ನಾಭಿರಾಜ ಎಂಬ 14ಜನ ಕುಲಂಕರರಲ್ಲಿ (ಮನುಗಳು) ಒಬ್ಬೊಬ್ಬರು ಸೃಷ್ಠಿಯ ಒಂದೊಂದು ವೈಚಿತ್ರ್ಯವನ್ನು ಜನರಿಗೆ ತಿಳಿಸಿಕೊಟ್ಟರು."[7] ಅವರಲ್ಲಿ ಕೊನೆಯ ಮನುವಾದ ನಾಭಿರಾಜನು ಮಕ್ಕಳ ಹುರಿಯನ್ನು ಕತ್ತರಿಸುವ ಬಗೆಯನ್ನು ತಿಳಿಸಿದನು. ಆದ್ದರಿಂದ ಅವನನ್ನು ನಾಭಿರಾಜನೆಂದು ಕರೆಯುತ್ತಾರೆ. ನಾಭಿರಾಜನ ಪುತ್ರನಾದ ಆದಿತೀರ್ಥಂಕರರಾದ ವೃಷಭನಾಥರು ಅಸಿ, ಮಸಿ, ವಿದ್ಯಾ, ವಾಣಿಜ್ಯ ಹಾಗೂ ಶಿಲ್ಪಗಳೆಂಬ ಷಟಕರ್ಮಗಳನ್ನು ಬೋಧಿಸಿದರು. ಸಮಾಜದ ಸುವ್ಯವಸ್ಥೆಗಾಗಿ ವರ್ಣಾಶ್ರಮ ಪದ್ಧತಿಯನ್ನು ನಿರೂಪಿಸಿದರು.

"ದಯೆ, ದರ್ಮಂ, ದಾನಂ, ತಪಂ, ಶೀಲಂ"[8] ಎಂಬುದೇ ಧರ್ಮದ ಸ್ವರೂಪ ಅದನ್ನು ಆಚರಿಸಿದರೆ ಮುಕ್ತಿ ಲಭಿಸುವುದೆಂದು ಹೇಳಿ ಸಮಾಜದ ವ್ಯವಸ್ಥೆಗೆ ಭದ್ರ ಬುನಾದಿ ಹಾಕಿದರು. ಆದ್ದರಿಂದ ಜೈನಪುರಾಣಗಳು ವೃಷಭದೇವನಿಗೆ ಆದಿಪುರುಷ, ಆದಿಬ್ರಹ್ಮ ಯುಗಾದಿ ಪುರುಷನೆಂದು ಕರೆದು ಗೌರವಿಸುತ್ತಿವೆ. "ಜೈನ ಪರಂಪರೆಯಂತೆ ವರ್ತಮಾನಕಾಲ (ಕಲಿಯುಗ)ದ ಆರಂಭದಲ್ಲಿ ಹುಟ್ಟಿ ಜನತೆಗೆ ಧರ್ಮವನ್ನು ಬೋಧಿಸಿದವನು ವೃಷಭದೇವ. ಜನತೆಗೆ ನಾಗರಿಕತೆಯ ಕಲ್ಪನೆಯೇ ಇಲ್ಲದ ಕಾಲದಲ್ಲಿ ಕುಟುಂಬ ವ್ಯವಸ್ಥೆಯನ್ನು ವೃತ್ತಿ ವಿಧಾನವನ್ನು ತಿಳಿಹೇಳಿ ಮಾನವ ವಿಕಾಸದ ಆರಂಭಕ್ಕೆ ನಾಂದಿ ಹಾಡಿದನೆಂದು ಹೇಳಲಾಗುತ್ತಿದೆ. ಇವನು ಪ್ರಥಮ ತೀರ್ಥಂಕರನಾಗಿ ಧರ್ಮವನ್ನು ಬೆಳಗಿದನು. ಈ ಕಾರಣದಿಂದ ಆತನನ್ನು ಯುಗದ ಆದಿಪುರುಷ (ಯುಗಾದಿ ಪುರುಷ)ನೆಂದು ಜೈನರು ಕರೆಯುತ್ತಾರೆ".[9] ಈ ಹಿನ್ನೆಲೆಯಲ್ಲಿ ಜೈನ ಮತೀಯರೂ ತಮ್ಮದೇ ಆದ ಧಾರ್ಮಿಕ ತಳಹದಿಯ ನೆಲೆಯಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ. ಈ ದಿನ ಶ್ರೀಮುಖದರ್ಶನದ ಪದ್ಧತಿ ರೂಢಿಯಲ್ಲಿದೆ. ಅಂದರೆ ಹೊಸ ಸಂವತ್ಸರದ ಆರಂಭವು ತಮಗೆ ವರ್ಷವಿಡೀ ಶುಭವನ್ನುಂಟು ಮಾಡಬೇಕೆಂದು ಹಾಗೂ ಸಕಲ ಐಶ್ವರ್ಯದ ಪ್ರಾಪ್ತಿಗಾಗಿ ಶ್ರೀಮುಖದರ್ಶನವೆಂಬ ಆಚರಣೆಯನ್ನು ಆಚರಿಸುವುದು ಈ ದಿನದ ವಿಶೇಷವಾಗಿದೆ. "ಹಬ್ಬದ ಹಿಂದಿನ ರಾತ್ರಿಯಂದು ಶ್ರಾವಕರ ಮನೆಗಳಲ್ಲಿ ಹಬ್ಬದ ಸಿದ್ಧತೆಗಳು ನಡೆಯುತ್ತವೆ. ವೃಷಭ ತೀರ್ಥಂಕರನ ಬಿಂಬವಿದ್ದರೆ ಅದರ ಎದುರುಗಡೆಯಲ್ಲಿ ಕಲಶ ಸ್ಥಾಪನೆ ಮಾಡುತ್ತಾರೆ. ಒಂದೊಮ್ಮೆ ವೃಷಭ ತೀರ್ಥಂಕರರ ಬಿಂಬವಿಲ್ಲದಿದ್ದರೂ ಕೂಡ ಅದರ ಪ್ರತಿಕೃತಿಯಾಗಿ ಕಲಶ ಸ್ಥಾಪನೆ ಮಾಡಿ ಪುಷ್ಪಾದಿಗಳಿಂದ ಅಲಂಕರಿಸುತ್ತಾರೆ. ಯುಗಾದಿಯಂದು ಸೂರ್ಯೋದಯವಾಗುವ ಮುನ್ನವೇ ಎದ್ದು ಸ್ನಾನಾದಿಗಳಿಂದ ಶುಚಿರ್ಭೂತರಾಗಿ, ಆ ಕಲಶದ ಎದುರು ದೀಪವನ್ನು ಬೆಳಗಿಸಿ ನಮಸ್ಕರಿಸುತ್ತಾರೆ. ಇದಕ್ಕೆ ಶ್ರೀಮುಖದರ್ಶನವೆಂದು ಹೆಸರು"[10] ಆದಿನ ಈ ಪದ್ಧತಿಯಂತೆ ಪ್ರಾತಃಕಾಲದಲ್ಲಿ ಎದ್ದು ಬಸದಿಗೆ ಹೋಗಿ ನಮಸ್ಕರಿಸಿ ಬೇವು ಬೆಲ್ಲವನ್ನು ಹಂಚುವುದು, ಹಿರಿಯರು, ಕಿರಿಯರಿಗೆ ಆಶೀರ್ವಾದ ಮಾಡಿ ಸಿಹಿ–ಕಹಿಗಳ ಸಮಾನಗುಣವನ್ನು ತಿಳಿಹೇಳುವುದು ರೂಢಿ. ಹಾಗೆಯೇ ನೂತನವಾಗಿ ವಿವಾಹವಾದ ದಂಪತಿಗಳು ಮೊದಲನೆಯ ಯುಗಾದಿಯನ್ನು ವಧುವಿನ ತಂದೆ ತಾಯಿಗಳ ಮನೆಯಲ್ಲಿ ಆಚರಿಸುತ್ತಿದ್ದರು.

ಇದೇ ರೀತಿಯಲ್ಲಿ ಮಲ್ಲಿನಾಥ ತೀರ್ಥಂಕರರ ಗರ್ಭಕಲ್ಯಾಣದ ದಿವಸವೂ ಚೈತ್ರ ಶುದ್ಧ ಪ್ರತಿಪದೆಯಾಗಿದ್ದು ಅದರ ಸ್ಮರಣಾರ್ಥವಾಗಿಯೂ ಯುಗಾದಿಯನ್ನು ಆಚರಿಸುವ ಸಂಪ್ರದಾಯವಿದೆ. ಭರತಕ್ಷೇತ್ರದ ವಂಗದೇಶದ, ಮಿಥಿಲಾನಗರದ ರಾಜನಾದ ಕುಂಭರಾಜನ ಪತ್ನಿ ಪ್ರಜಾಪತಿ ಚೈತ್ರ ಶುದ್ಧ ಪ್ರತಿಪದೆಯ ಈ ದಿನ ಬೆಳಗಿನ ಜಾವ ಹದಿನಾರು ಸ್ವಪ್ನಗಳನ್ನು ಕಾಣುತ್ತಾಳೆ. ಅದು 19ನೇ ತೀರ್ಥಂಕರನಾದ ಮಲ್ಲಿನಾಥನು ಅವಳ ಗರ್ಭದಲ್ಲಿ ಮೂಡಿದ ಸೂಚಕವಾದುದು. ತೀರ್ಥಂಕರರು ತಾಯಿಯ ಗರ್ಭದಲ್ಲಿ ಮೂಡಿದಾಗಿನಿಂದ ಮೋಕ್ಷ ಪ್ರಾಪ್ತವಾಗುವವರೆಗೆ ಇಂದ್ರಾದಿ ದೇವತೆಗಳು, ಗರ್ಭ ಜನ್ಮ, ದೀಕ್ಷಾ, ಕೇವಲಜ್ಞಾನ ಮೋಕ್ಷಗಳೆಂಬ ಪಂಚಕಲ್ಯಾಣೋತ್ಸವಗಳನ್ನು ಆಚರಿಸುವರು. ಇದರಲ್ಲಿ ಮಲ್ಲಿನಾಥರ ಗರ್ಭಾವತರಣ ಮಹೋತ್ಸವವು ಸ್ಮರಣಾರ್ಥ ಯುಗಾದಿ ಆಚರಿಸುವುದೂ ಇನ್ನೊಂದು ಆಚರಣೆಯ ಹಿನ್ನೆಲೆ ಹಾಗೂ ಉದ್ದೇಶವಾಗಿದೆ.

ಹೀಗೆ ಜೈನಧರ್ಮೀಯರಲ್ಲಿ ಪ್ರಥಮ ಚಕ್ರವರ್ತಿ ಭರತೇಶನ ದಿಗ್ವಿಜಯದ ಉತ್ಸವ, ಯುಗಪ್ರವರ್ತಕ ಪ್ರಥಮ ತೀರ್ಥಂಕರ ವೃಷಭ ದೇವರ ಸ್ಮರಣೆ ಹಾಗೂ 19ನೆಯ ತೀರ್ಥಂಕರ ಮಲ್ಲಿನಾಥರ ಗರ್ಭಾವತರಣ ಕಲ್ಯಾಣದಿಂದ ಉತ್ಸವವಾದ "ಯುಗಾದಿ"ಯು ಹಲವು ರೀತಿಯಿಂದ ಮಹತ್ವಪೂರ್ಣ ಜೈನ ಪರ್ವವಾಗಿದೆ.

ಈ ಯುಗಾದಿ ಹಬ್ಬದ ಸಂದರ್ಭದಲ್ಲಿ ಆ ಹಬ್ಬದ ಹಿನ್ನೆಲೆಯ ಆಚರಣೆಗೆ ಕಾರಣವಾದ ಆದಿಪ್ರವರ್ತಕ, ಆದಿಬ್ರಹ್ಮ, ಆದಿಪುರುಷನಾಗಿ ಯುಗದ ಪ್ರವರ್ತಕನಾಗಿರುವ ವೃಷಭದೇವನನ್ನು ಸ್ತುತಿಸುವ ಹಾಡುಗಳಲ್ಲಿ ಒಂದೆರಡು ಪದ್ಯಗಳನ್ನು/ಸ್ತುತಿಗಳನ್ನು ನೀಡಲಾಗಿದೆ.

ರಾಗ: ಕಲ್ಯಾಣಿ ಅಷ್ಟತಾಳ

ದೇವ। ತ್ರೈಭುವನೇಶ್ವರ, ವೃಷಭೇಶ್ವರ। ಪಾವನ ಗುಣ ಮಂದಿರ ॥ಪಲ್ಲ॥
ಕೇವಲಾಮಲಬೋಧ ನಿನ್ನಯ। ಪಾವನಾಂಘ್ರಿಯ ನಮಿಸಿ ಪೂಜಿಪೆ।
ಭಾವಜಾರಿ ಸಮಸ್ತ ಸಂಸ್ಕೃತಿ, ಜೀವರಕ್ಷಕ, ಪಾಹಿ ಸಂತತ ॥ಅ.ಪ॥
ಮೂರಮದೇಭ ಹರ। ನಿನ್ನಯ ಪಾದ। ವಾರಿಜಾತಕೆ ಮುದದಿ॥
ಸಾರ ಸೌರಭ, ಕಲಿತ ನಿರ್ಮಲ। ವಾರಿಧಾರೆಯನೆರೆವೆ ಶ್ರೀಪದ।
ಘೋರತರ ಸಂಸಾರ ತಾಪನಿ – ವಾರಗೈಯ್ಯು ತಲೆನ್ನರಕ್ಷಿಸು ॥ದೇವ....॥ಜಲಂ॥
ಭವ ದುಃಖ ತಾಪವನು। ಸಂತೈಸೆಂದು ತವ ಪದಯುಗಲಕೆಂದು॥
ಭುವನ ಮೋಹನ, ಸಾರಸೌರಭ। ಗಂಧದಿಂ ಪರಪೂಜಿಸುವೆ ನಾಂ।
ವಿವಿಧ ಕರ್ಮವಿಧೂರ ಜಯ–ಜಯ। ಶರಣರಕ್ಷಕ ಮಂಗಲಾತ್ಮಕ॥[11]
ದೇವ.....॥ಗಂಧ॥ (ಸ್ವ ಚಂದಯ್ಯ ಶಾಸ್ತ್ರಿ)

ಇದೇ ರೀತಿ ಯುಗಾದಿ ಹಬ್ಬದಂದು ಋಷಭದೇವರನ್ನು ಅಷ್ಟಾರ್ಚನೆಗೈಯುತ್ತಾ ಹಾಡುವ ಹಾಡು ಹೀಗಿವೆ.

ಮೋಕ್ಷ ಲಕ್ಷ್ಮೀಶ ವಿಭೋ ಪರಂಜ್ಯೋತಿ। ಅಕ್ಷಯ ಸುಖವನೀಯೋ॥
ಲಕ್ಷಣಾಂಗ ಮನೋಜ ಭಂಜನ। ಯಕ್ಷರಿಂ ಪರಿಸೇವ್ಯ ಚಿನ್ಮಯ।
ಅಕ್ಷತಾವಳಿಯಿಂದ ಪೂಜಿಪೆ। ರಕ್ಷ ಮಾಂ ಗುಣ ರತ್ನಸಾಗರ॥
ದೇವ.... ॥ಅಕ್ಷತಂ॥
ವೀತರಾಗಾದಿ ಮೆರೆವ। ನಿನ್ನಯ ಮಹಾ, ಖ್ಯಾತಿಯು ಜಗ ಬಂಧುರ॥
ಜಾತಿ ಚಂಪಕ ಮಲ್ಲಿಕಾದಿ ಸು–/ಜಾತ ಕೇತಕಿ ಪಾರಿಜಾತ ಸ/–
ಮೇತ ಪುಷ್ಪ ಸಮೂಹವಂ ಮನ–ಪ್ರೀತಿಯಿಂ ತವ ಪಾದಕರ್ಚಿಪೆ॥ ದೇವ.....॥ಪುಷ್ಪಂ॥
ರಾಗಾಂಗಭೋಗಗಳ। ತೊರೆದು ಕ್ಷುಧಾ–ರೋಗವ ನುರೆ ಗೆಲಿದು॥
ಯೋಗದಿಂ ಪರಮೋಕ್ಷ ಪದವನು, ತಾಳ್ದ ಶ್ರೀತವ ಪಾದ ಪದ್ಮಕೆ।
ರಾಗದಿಂ ಪರಮಾನ್ನ ಚರುಗಳ – ನೀಗ ನಾಂ ನಲ–ವಿಂದ ಲರ್ಚಿಪೆ॥ ದೇವ....॥ಚರುಂ॥
ರತ್ನತ್ರಯ ಶುದ್ಧದಿ। ಕೇವಲಜ್ಞಾನ – ನೇತ್ರದಿ ಜಗಬೆಳಗಿ॥
ಸ್ವಾರ್ಥವಿಲ್ಲದೆ ಮೋಕ್ಷ ಮಾರ್ಗವ। ಧಾತ್ರಿಗರುಹಿದ ದೇವದೇವನೆ।
ರತ್ನದಾರತಿ ಎತ್ತುವೆನು ಮನ। ದರ್ತಿಯಿಂ ವರ ದಿವ್ಯ ಚರಣಕೆ॥ ದೇವ ..... ॥ದೀಪಂ॥
ಅಘವೆಂಬ ವಿಪಿನವನು ।ದಹಿಸಿ ಮತ್ತೆ ಜಗದೈಕವೀರನಾದೆ॥
ವಿಗತಮೋಹ ಸುರೇಶ ವಂದಿತ। ಪರಮಪದ ಕಂಜಾತಯುಗಲಕೆ
ಅಗರುಚಂದನ ಧೂಪಮಂಕರ–। ಯುಗಲದಿಂ ಪಿಡಿದೆತ್ತಿ ತೋಷಿಪೆ॥ ದೇವ॥ ॥ಧೂಪಂ॥

ಸದ್ಧರ್ಮವೆಂದೆಂಬುವ। ಭೂರುಹಕಿದು ಸಿದ್ಧಾತ್ಮ ಸುಖ ಫಲವು॥
ಶುದ್ಧ ಯೋಗದೊಳದನು ಸಾಧಿಪ। ಬುದ್ಧಿಯಿಂದೆನಗೀವುದೈ ಬಲು।
ಶ್ರದ್ಧೆಯಿಂ ಪರಿಪಕ್ವ ಪ್ರಾಸುಕ। ಶುದ್ಧ ಫಲಗಳ ನರ್ಪಿಸುವೆನು॥ ದೇವ....॥ಫಲಂ॥
ಸುಲಲಿತವಾಗಿರುವ। ಮನೋಹರ। ಜಲಗಂಧ ಕಲಮಾಕ್ಷತ॥
ಚೆಲುವ ಪುಷ್ಪ ಸಮೂಹ ಭಕ್ಷ್ಯವ। ಪೊಳೆವ ದೀಪ ಸುದೀಪ ಮಂಜುಳ
ಫಲ ಸಹಿತ ಮಹದರ್ಘ್ಯವೆತ್ತುವೆ। ನಳಿನ ಸದೃಶದ ಚರಣಯುಗಲಕೆ॥ ದೇವ... ॥ಅರ್ಘ್ಯಂ॥
ಶಾಂತಿಯಾಗಲಿ ಜಗಕೆ ।ಸಂಸಾರದ, ಭ್ರಾಂತಿಯು ಕೆಡಲೆನುತ॥
ಧ್ವಾಂತ ವೈರವ ತೊರೆದು ಸಂತತ । ಸ್ವಾಂತ ಶುದ್ಧಿಯ ಪೊಂದುತಲಿ ನಲ –।
ವಾಂತು ಸುಖಿಸಲಿಯೆಂದು ಸ್ಮರಿಸುತ। ಶಾಂತಿಧಾರೆಯ – ನೆರೆವೆ ಶ್ರೀ ಜಿನ॥ ದೇವ ... ॥ಶಾಂತಿಧಾರಾ॥
ಸಮವಸರಣಾಧೀಶ್ವರ। ಸರ್ವೋತ್ತಮ। ದ್ಯುಮಣೀಂದುನಿಭ ಭಾಸುರ
ಕುಮುದ ಕುಡ್ಮಲ ಕುಂದ ಚಂಪಕಕಮಲ ಕೇತಕಿ ಪಾರಿಜಾತವ।
ಭ್ರಮರ ಮೋಹಿತ ದಿವ್ಯ ಮಾಲತಿ। ಸುಮನಸಾಂಜಲಿ ದಿವ್ಯಪಾದಕೆ॥
ದೇವತ್ರೈ ಭುವನೇಶ್ವರ... ॥ಪುಷ್ಪಾಂಜಲಿಃ॥[12]

## ದಶಲಕ್ಷಣ ಪರ್ವ

ಪರ್ವವೆಂದರೆ ಹಬ್ಬ. ಹಬ್ಬವೆಂದರೆ ಸಡಗರ, ಸಂಭ್ರಮ, ಸಂತೋಷ. ವಿವಿಧ ಉಡುಗೆ ತೊಡುಗೆಗಳು, ಬಗೆ ಬಗೆಯ ತಿಂಡಿ ತಿನಿಸುಗಳು, ಆಮೋದ ಪ್ರಮೋದಗಳು ನೆನಪಾಗುತ್ತವೆ. ಕಣ್ಣಮುಂದೆ ಭೋಗ ವಿಭವ ನಿಲ್ಲುತ್ತದೆ. ಆದರೆ ದಶಲಕ್ಷಣ ಪರ್ವ, ಭೋಗದ ಪರ್ವವಲ್ಲ. ತ್ಯಾಗದ ಪರ್ವ, ವೀತರಾಗಿ ಪರ್ವ. ವೈರಾಗ್ಯದ ಕಡೆಗೆ ಮನಸ್ಸನ್ನು ಬಾಗಿಸುವ ಪರ್ವ. ಇದು ವರ್ಷದಲ್ಲಿ ಮೂರು ಬಾರಿ ಬರುವುದು. ಆದರೆ ಚಾತುರ್ಮಾಸ್ಯದ ನಿಮಿತ್ತ ದಿಗಂಬರ ಮುನಿಗಳ ಸಾನ್ನಿಧ್ಯ, ಮಾರ್ಗದರ್ಶನ ದೊರೆಯುವ ಭಾದ್ರಪದ ಮಾಸದಲ್ಲಿ ಬರುವ ಪರ್ವಕ್ಕೆ ವಿಶೇಷ ಮಹತ್ವ ಬಂದಿದೆ. ಈ ಮಾಸದ ಶುದ್ಧ ಪಂಚಮಿಯಿಂದ ಚತುರ್ದಶಿಯವರೆಗೆ–10 ದಿನಗಳ ಕಾಲ ಆಚರಿಸಲಾಗುವುದು ಅಲ್ಲದೆ ಪರ್ವದ ಮುಕ್ತಾಯದ ಮಾರನೆಯ ದಿನ ಕ್ಷಮೆಕೇಳುವ ದಿನವಾಗಿದೆ. ಈ ಪರ್ವ ಯಾವ ವ್ಯಕ್ತಿಯಾಗಲಿ, ಯಾವುದೇ ಘಟನೆಗಾಗಲಿ ಸಂಬಂಧಿಸಿದ್ದಲ್ಲ. ಎಲ್ಲಾ ಕಾಲದ, ಎಲ್ಲ ಪ್ರದೇಶದ ಎಲ್ಲ ಜೀವಗಳಿಗೆ ಸಂಬಂಧಿಸಿದ ಆಂತರಿಕವಾದ ಆಧ್ಯಾತ್ಮಿಕ ಪರ್ವ. ಇದು ನಮ್ಮ ನಮ್ಮ ಭಾವನೆಗಳನ್ನು ತಿದ್ದಿ, ತೀಡಿ, ಸೋಸಿ ಪರಿಶುದ್ಧಗೊಳಿಸಿಕೊಳ್ಳುವ ಹಬ್ಬ. ವಿಕಾರಿ ಭಾವನೆಗಳನ್ನು ಪರಿತ್ಯಜಿಸಿ, ಉದಾತ್ತಭಾವನೆಗಳನ್ನು ಸ್ವೀಕರಿಸುವುದೇ ಈ ಪರ್ವದ ಮೂಲ ಉದ್ದೇಶ.

ಜೈನಧರ್ಮೀಯರು ಆಚರಿಸುವ ಎಲ್ಲಾ ಪರ್ವಗಳಿಗಿಂತಲೂ ದಶಲಕ್ಷಣ ಪರ್ವಕ್ಕೆ ಪ್ರಧಾನ ಆದ್ಯತೆ ಕೊಡುತ್ತಾರೆ. ಕಾರಣವೆಂದರೆ ಅವರು ಆಚರಿಸುವ ಹಬ್ಬಗಳಲ್ಲಿ ಲೋಕರಂಜನೆ, ಮನೋರಂಜನೆ, ಊಟ, ಉಡುಗೆ ಇವುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇರದೆ ಆಧ್ಯಾತ್ಮಕ ತಾತ್ವಿಕ ಆಚಾರ ವಿಚಾರ, ವ್ರತಾಚರಣೆ ಹಾಗೂ ಆಹಾರ, ಕಷಾಯಗಳನ್ನು ಕಡಿಮೆಮಾಡುವ, ಆತ್ಮಚಿಂತನೆ, ವಿಕಾಸಗಳಿಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ಸ್ವಾರ್ಥ, ದುಷ್ಟಪ್ರವೃತ್ತಿ, ಇಂತಹ ಸಾಧಕನಿಗೆ ಎದುರಾಗುವ ದೌರ್ಬಲ್ಯಗಳನ್ನು ತೊಡೆದು ಹಾಕುವಲ್ಲಿ ಈ ದಶಲಕ್ಷಣಪರ್ವವು ಸಹಕಾರಿಯಾಗಿದೆ. "ಇದು ಉಪವಾಸ ಮತ್ತು ಆತ್ಮಶುದ್ಧೀಕರಣದ ಒಂದು ಉತ್ಸವ. ಇದನ್ನು ಭಾದ್ರಪದ ಮಾಸದ (ಸೆಪ್ಟೆಂಬರ್) ಶುಕ್ಲ ಪಕ್ಷದಲ್ಲಿ ಆಚರಿಸಲಾಗುವುದು. ಇದನ್ನು ಈ ಮಾಸದ ಪಂಚಮಿಯಿಂದ ಚತುರ್ದಶಿಯವರೆಗೆ 10 ದಿನಗಳ ಕಾಲ ಆಚರಿಸಲಾಗುವುದು."[13] ದಶಲಕ್ಷಣ ಪರ್ಯೂಷಣಪರ್ವ ಎಂಬ ಮತ್ತೊಂದು ಹೆಸರೂ ಇದೆ.

ಪರ್ಯೂಷಣ ಎಂಬ ಪದವು ಸಂಸ್ಕೃತ ಪದವಾಗಿದ್ದು ಪರಿ ಉಷಣ ಎಂಬ ಎರಡು ಪದಗಳಿಂದಾಗಿದೆ. ಪರಿ ಉಷಣ ಎಂದರೆ ಪೂರ್ಣರೂಪದಲ್ಲಿ ಆತ್ಮನನ್ನು ಒಂದೇ ಸ್ಥಳದಲ್ಲಿ (ವಿಷಯದಲ್ಲಿ) ಸ್ಥಿರಗೊಳಿಸುವುದು ಎಂದರ್ಥ. ಅಲ್ಲದೆ ಷಡ್ ವೈರಿಗಳನ್ನು ಮನೋವಿಕಾರವನ್ನು ಇಲ್ಲದಂತೆ ಮಾಡುವುದು ಎಂಬ ಮತ್ತೊಂದು ಅರ್ಥವೂ ಕೂಡ ಇದೆ. ಇವುಗಳಲ್ಲಿ ಯಾವ ಅರ್ಥದಲ್ಲಾದರೂ ಬಳಸಿದರೂ ಸಹ ಕರ್ಮಬಂಧದಿಂದ ಮುಕ್ತರಾಗಲು ಆತ್ಮದ ಗುಣಗಳ ವಿಕಾಸ ಮಾಡಿಕೊಳ್ಳುವುದೇ ಮುಖ್ಯವಾದುದೆಂಬ ಅರ್ಥ ವೇದ್ಯವಾಗುತ್ತದೆ.

ಈ ಪರ್ವದಲ್ಲಿ ಶ್ರದ್ಧಾವಂತರು ಸಂಯಮಿಗಳಾಗುತ್ತಾರೆ. ಪೂಜಾ ಪಾಠಗಳಲ್ಲಿ ನಿರತರಾಗುತ್ತಾರೆ. ತಮಗೆ ಶಕ್ತ ಇದ್ದಷ್ಟು ಉಪವಾಸ ಮಾಡುತ್ತಾರೆ. ಸ್ವಾಧ್ಯಾಯ, ತತ್ವ ಚರ್ಚೆಯಲ್ಲಿ ತೊಡಗುತ್ತಾರೆ. ವಿದ್ವಾಂಶ ಪ್ರವಚನ ಕೇಳುತ್ತಾರೆ. ಶ್ರಮಣರಿದ್ದರೆ ಧರ್ಮಶ್ರವಣ ಮಾಡುತ್ತಾರೆ. ಒಟ್ಟಿನಲ್ಲಿ ಶ್ರಾವಕರು ಭಾವತಪಸ್ವಿಗಳಾಗುತ್ತಾರೆ. ಅಲ್ಲದೆ ದಶಲಕ್ಷಣ ಹೆಸರಿನ ನೋಂಪಿಯೊಂದಿಗೆ, ಅದನ್ನು ಕೆಲವರು ಹಿಡಿಯುತ್ತಾರೆ. ಧರ್ಮವನ್ನು ಅನೇಕ ಮಗ್ಗಲುಗಳಿಂದ ಆಚಾರ್ಯರು ಹೀಗೆ ಸೂತ್ರೀಕರಿಸಿದ್ದಾರೆ.

1. ಧರ್ಮವಸ್ತು ಸ್ವಭಾವವಾಗಿದೆ
2. ಧರ್ಮರತ್ನತ್ರಯ ಧರ್ಮವಾಗಿದೆ.
3. ಧರ್ಮ ಎಲ್ಲ ಜೀವಗಳ ರಕ್ಷಣೆಯಾಗಿದೆ.
4. ಧರ್ಮವು ಕ್ಷಮಾದಿ ಭಾವನೆಗಳ ದೃಷ್ಟಿಯಿಂದ ದಶವಿಧವಾಗಿದೆ. ಕೊನೆಯ ಈ ದಶಧರ್ಮಗಳ ಆರಾಧನೆಯೇ ದಶಲಕ್ಷಣ ಪರ್ವದ ಪರಮಲಕ್ಷ್ಯವಾಗಿದೆ.[14] ಧರ್ಮದ ಆ ದಶಲಕ್ಷಣಗಳು ಹೀಗಿವೆ.

ಆತ್ಮನ ಅನಂತ ಗುಣಗಳಲ್ಲಿಯೇ ದಶಲಕ್ಷಣ ಗುಣಗಳಿವೆ. ಆ ಹತ್ತು ಧರ್ಮದ ತತ್ವಗಳನ್ನು ವಿಶೇಷವಾಗಿ ಪಾಲಿಸುವುದಾಗಿದೆ. ಶ್ರಾವಕರ ಆತ್ಮವಿರೋಧಿ, ಶತ್ರುಗಳಾದ ಕಾಮ, ಕ್ರೋಧ, ಮದ, ಮಾತ್ಸರ್ಯ, ಲೋಭ, ಹಿಂಸೆ, ಮಾನ, ಮಾಯೆ, ಸುಳ್ಳು, ಕಳ್ಳತನ ಪರಿಗ್ರಹ ಮೊದಲಾದವುಗಳನ್ನು ಗೆದ್ದಾಗ ಮಾತ್ರ ಧರ್ಮವನ್ನು ಸರಿಯಾಗಿ ಪಾಲಿಸಲು ಸಾಧ್ಯವಾಗುತ್ತದೆ. ಆದ್ದರಿಂದ ದಶಲಕ್ಷಣ ವಿವರಿಸಿರುವ ಹತ್ತು ತತ್ವಗಳನ್ನು ಹತ್ತು ದಿನಗಳ ಕಾಲ ಭಕ್ತಿಯಿಂದ ಆಚರಿಸಬೇಕಾಗುತ್ತದೆ. ಈ ಹಿಂದೆಯೇ ಸೂಚಿಸಿರುವಂತೆ ದಶಧರ್ಮವು ಆತ್ಮನ 10 ಮೂಲಗುಣಗಳನ್ನು ಸೂಚಿಸುತ್ತದೆ. ಅವೆಂದರೆ,

ಉತ್ತಮ ಖಮ–ಮದ್ದಜ್ಜವ–ಸ್ವಚ್ಚ–ಸುಚ್ಚಂ ಚ ಸಂಜಮಂ ಚೇವ। ತವ–ಚಾಗಮಕರಂಚಣ್ಣಂ, ಬಂಹ ಇದಿ ದಸವಿಹೋ ಧಮೋ॥[15]

ಉತ್ತಮ ಕ್ಷಮೆ, ಮಾರ್ಧವ, ಆರ್ಜವ, ಶೌಚ, ಸತ್ಯ, ಸಂಯಮ, ತಪ, ತ್ಯಾಗ, ಆಕಿಂಚನ್ಯ ಹಾಗೂ ಬ್ರಹ್ಮಚರ್ಯ–ಇವು ಹತ್ತು ಧರ್ಮಗಳಾಗಿವೆ. ಈ ಒಂದೊಂದು ಧರ್ಮಗಳು ಪರ್ವದ ಒಂದೊಂದು ದಿನಗಳಿಗೆ ಮೀಸಲಾಗಿದೆ. ಆ ದಿನ ಆಯಾ ಧರ್ಮದ ಸ್ವಭಾವ ಹಾಗೂ ಅದನ್ನು ಕೆಡಿಸುವ ವಿಭಾವದ ಬಗ್ಗೆ ಚರ್ಚಿಸಲಾಗುವುದು. ಧರ್ಮದ ಈ ಲಕ್ಷಣಗಳನ್ನು ತಿಳಿಯುವುದರ ಮೂಲಕ ಧರ್ಮ (ಎಂದರೆ ಆತ್ಮಧರ್ಮ)ವನ್ನು ಅರಿಯಲು ಪ್ರಯತ್ನಿಸಲಾಗುವುದು. ಇದೇ ಈ ಪರ್ವದ ಪ್ರಯೋಜನ. ಇವುಗಳ ವಿವರ ಹೀಗಿದೆ.

1. "ಉತ್ತಮ ಕ್ಷಮಾ – ಅತ್ಯುತ್ತಮ ಬಗೆಯ ಕ್ಷಮಾಗುಣ, ರಾಗ–ದ್ವೇಷ ಇಲ್ಲದಿರುವುದು, ಕೋಪವನ್ನು ಸಂಪೂರ್ಣವಾಗಿ ನಾಶಮಾಡುವುದು.
2. ಉತ್ತಮಮಾರ್ದವ – ಮೃದುವಾದ ಗುಣ ಅಥವಾ ವಿನಯಶೀಲತೆ
3. ಉತ್ತಮ ಆರ್ಜವ – ಬಿಚ್ಚು ಮನಸ್ಸು ಅಥವಾ ನೇರವಾಗಿರುವುದು.
4. ಉತ್ತಮ ಸತ್ಯ – ಮನಸ್ಸು, ಮಾತು ಮತ್ತು ಕೃತಿ ಅಥವಾ ನಡತೆಯಲ್ಲಿ ಸತ್ಯವಾಗಿರುವುದು.
5. ಉತ್ತಮಶೌಚ – ಹೊಟ್ಟೆಕಿಚ್ಚು ಮತ್ತು ದ್ವೇಷವೇ ಮೊದಲಾದ ಪಾಪದ ಭಾವನೆಗಳಿಲ್ಲದೆ ಶುಚಿಯಾಗಿರುವುದು.

6. ಉತ್ತಮ ಸಂಯಮ – ಇಂದ್ರಿಯಗಳ ನಿಗ್ರಹ
7. ಉತ್ತಮ ತಪ – ಶ್ರೇಷ್ಠವಾದ ತಪಸ್ಸು
8. ಉತ್ತಮ ತ್ಯಾಗ – ಎಲ್ಲವನ್ನೂ ತ್ಯಾಗಮಾಡುವುದು
9. ಉತ್ತಮ ಅಂಕಿಚನ – ಲೌಕಿಕ ಪರಿಗ್ರಹ ಮತ್ತು ಮೋಹ ಇಲ್ಲದಿರುವಿಕೆಯ ಭಾವವನ್ನು ಬೆಳೆಸಿಕೊಳ್ಳುವುದು.
10. ಉತ್ತಮ ಬ್ರಹ್ಮಚರ್ಯ – ನೈಷ್ಠಿಕ ಬ್ರಹ್ಮಚರ್ಯವನ್ನು ಪಾಲಿಸುವುದು"[16]

(ಇಲ್ಲಿ ಉತ್ತಮ ಎಂಬ ಪದವನ್ನು ಖ್ಯಾತಿ, ಲಾಭ, ಗೌರವಾದಿಗಳ ನಿವೃತ್ತ್ಯರ್ಥವಾಗಿ ಹೇಳಲಾಗಿದೆ. ಅಂದರೆ ಖ್ಯಾತಿ ಮೊದಲಾದವುಗಳ ಅಪೇಕ್ಷೆ ಇಲ್ಲದೆ ಧರ್ಮದ ಲಕ್ಷಣಗಳಾದ ಕ್ಷಮಾದಿ ಗುಣಗಳನ್ನು ಪಾಲಿಸುವುದು)

ಜೈನಶಾಸ್ತ್ರ ಗ್ರಂಥಗಳು ಈ ಹತ್ತೂ ತತ್ವಗಳ ಸ್ವರೂಪವನ್ನು ಹೀಗೆ ವಿವರಿಸುತ್ತವೆ. ದಶಲಕ್ಷಣ ಧರ್ಮವು ಪರವಸ್ತುವಲ್ಲ; ಅದು ಆತ್ಮನ ಸ್ವಭಾವವಾಗಿದೆ ಕ್ರೋಧ, ಮಾನ ಕಷಾಯವೇ ಮೊದಲಾದ ಕರ್ಮ ಜನಿತ ಉಪಾಧಿಗಳು ಇಲ್ಲದಂತಾದಾಗ, ಆತ್ಮನ ಯಥಾರ್ಥ ಸ್ವರೂಪವು ಪ್ರಕಟಗೊಳ್ಳುತ್ತದೆ. ಕ್ರೋಧವನ್ನು ಕ್ಷಮೆಯ ಮೂಲಕ ಗೆಲ್ಲಬಹುದು. ಅಭಿಮಾನವನ್ನು ಮಾರ್ದವದಿಂದ (ಮೃದು ಸ್ವಭಾವ) ನಾಶಪಡಿಸಬಹುದು. ಕಪಟವಿಲ್ಲದಲ್ಲಿ ಆರ್ಜವ, ಲೋಭ ನಾಶವಾದಾಗ ಶೌಚಗುಣ, ಅಸತ್ಯ ಕಳೆದು ಹೋದಾಗ ಸತ್ಯ, ಕಷಾಯಗಳು ನಷ್ಟವಾದರೆ ಸಂಯಮ, ಇಚ್ಛೆ ಇಲ್ಲದಿದ್ದಲ್ಲಿ ತಪ ಮಮತ್ವವು ದೂರವಾದಾಗ ತ್ಯಾಗ, ಪರದ್ರವ್ಯದ ಮೇಲಿನ ಆಸೆಯನ್ನು ಪೂರ್ತಿಯಾಗಿ ತ್ಯಜಿಸಿದಾಗ ಆಕಿಂಚನ್ಯ, ವೇದನೀಯ ಕರ್ಮದ ಅಭಾವವಾಗುವುದರಿಂದ ಬ್ರಹ್ಮಚರ್ಯದ ಪಾಲನೆ ಸಾಧ್ಯವಾಗುತ್ತದೆ. ಈ ಧರ್ಮದ ಸಂಪತ್ತನ್ನು ಕಳ್ಳರು ಕದಿಯಲಾರರು. ರಾಜನು ಬಲಾತ್ಕಾರದಿಂದ ಕಸಿದುಕೊಳ್ಳಲಾರ. ಯಾರಿಂದಲೂ ಈ ಧರ್ಮವನ್ನು ಕೆಡಿಸಲು ಸಾಧ್ಯವಿಲ್ಲ. ಈ ಧರ್ಮಪಾಲನೆ ಬಹು ಸುಲಭವಾದುದು. ಬಾಲಕ, ವೃದ್ಧ, ತರುಣ, ರೋಗಿ, ನಿರೋಗಿ ಎಲ್ಲರೂ ಸಹಜವಾಗಿ ಧಾರಣೆ ಮಾಡಿಕೊಂಡು ದುಃಖ ಅಪಮಾನ, ಕ್ಲೇಶ, ಭಯ, ವಿಷಾದ, ಕಲಹ ಮೊದಲಾದವುಗಳನ್ನು ಗೆಲ್ಲಬಹುದು. ಹಾಗೂ ಅತ್ಯಂತ ಸುಲಭವಾಗಿ ಸಮ್ಯಗ್ ದರ್ಶನ, ಜ್ಞಾನ, ಚಾರಿತ್ರ್ಯಗಳನ್ನು ಸಾಧಿಸಿ ಮೋಕ್ಷವನ್ನು ಪಡೆಯಬಹುದು. ಈ ರೀತಿ ಹೇಳಲಾಗಿದೆ.

ಈ ಹಬ್ಬವನ್ನು ಜೈನರು ತಮ್ಮ ತಮ್ಮ ಬಸದಿಗಳಲ್ಲಿ ಸಾಮೂಹಿಕವಾಗಿ ಆಚರಿಸುವರು. ಈ ಮಾಸದಲ್ಲಿಯೇ ಪುಷ್ಪಾಂಜಲಿ, ಸುಗಂಧದಶಮಿ, ರತ್ನತ್ರಯ, ಷೋಡಶಭಾವನೆ – ಮುಂತಾದ ಆಚರಣೆಗಳೂ ಬರುವುದರಿಂದ ಈ ಮಾಸವನ್ನು "ಹಬ್ಬಗಳ ರಾಜ" ಎಂದೂ ಕರೆಯುತ್ತಾರೆ. ಈ ವೇಳೆಗೆ ಮಳೆಗಾಲವು ಆರಂಭವಾಗುವುದರಿಂದ, ಜೈನ ಮುನಿಗಳು ಮಳೆಗಾಲದ ನಾಲ್ಕೂ ತಿಂಗಳು ಸಂಚರಿಸಬಾರದೆಂಬ ನಿಯಮವಿರುವುದರಿಂದ ಬಹುತೇಕ ಅವರು ಬಸದಿಗಳಲ್ಲಿ ನೆಲೆಸುವುದು ಸಾಮಾನ್ಯವಾಗಿರುತ್ತದೆ. ಅಂತಹ ಸಮಯದಲ್ಲಿ ಶ್ರಾವಕರಿಗೆ ಮುನಿಗಳ ಧರ್ಮೋಪದೇಶವನ್ನು ಆಲಿಸುವ ಸುಯೋಗ ಪ್ರಾಪ್ತವಾಗುತ್ತದೆ. ಆ ಸಮಯದಲ್ಲಿ ಶ್ರಾವಕರು ಜೈನಮುನಿಗಳಿಗೆ ಭಕ್ತಿ ಪೂರಕವಾಗಿ ಆಹಾರಾದಿಗಳನ್ನು ದಾನ ನೀಡುವರು. ಹಾಗೆ ಸಾಯಂಕಾಲದ ಸಮಯದಲ್ಲಿ ಮುನಿಗಳಿಂದ ದಾರ್ಮಿಕ ತತ್ವದ ಆಚರಣೆಯ ಸಾದ್ಯಂತ ವಿವರಣೆ, ಅಷ್ಟಮಂಗಳ ಪೂಜೆ, ಪಂಚನಮಸ್ಕಾರ ಪಠಣ, ವಿದ್ವಾಂಸರಿಂದ ಧಾರ್ಮಿಕ ಸಭೆ ಸಮಾರಂಭಗಳ ಏರ್ಪಾಡು, ಉಪವಾಸ ವ್ರತಗಳು ಜರುಗುತ್ತವೆ. ಹೀಗೆ ಈ ಹಬ್ಬವನ್ನು ಪ್ರತಿಯೊಂದು ಜೀವಿಯೂ ಆಚರಿಸಲು ಅವಕಾಶವಿದೆ. ಅದರಂತೆ ಆತ್ಮದ ವಿವಿಧ ಗುಣಗಳ ಉಪಾಸನೆಯನ್ನು ಮಾಡಿದರೆ ಮನಸ್ಸಿನ ಎಲ್ಲಾ ವಿಕಾರಗಳು ಶುದ್ಧಗೊಳ್ಳುತ್ತವೆ. ಆದುದರಿಂದ ಇದೇ ಧರ್ಮ ದಶಧರ್ಮ ಹಾಗೂ ಆತ್ಮಧರ್ಮ. ಈ ಪರ್ವದಲ್ಲಿ ಹತ್ತೂ ದಿನಗಳ ಕಾಲವೂ ತತ್ವಸೂತ್ರದ ಪ್ರಕಾರ ಪಾಲಿಸಬೇಕಾದ ಮೇಲಿನ ಹತ್ತೂ ಧರ್ಮಗಳ ಮೇಲೆ ಪ್ರವಚನ ನಡೆಯುತ್ತದೆ. ಈ ಪರ್ವದ ಕೊನೆಯ ದಿನ ಸಾಮೂಹಿಕವಾಗಿ "ಕ್ಷಮಾವಳಿ" ಕಾರ್ಯಕ್ರಮವಾಗುತ್ತವೆ. ಅಂದರೆ ನಮಗೆ ತಿಳಿದೋ ಅಥವಾ ತಿಳಿಯದೆಯೇ ಕೆಲವು ವೇಳೆ ಅನ್ಯರ ಮನಸ್ಸಿಗೆ

ನೋವಾಗುವಂತೆ ನಡೆದಿದ್ದಾರೆ ಅದಕ್ಕೆ ಅವರೆಲ್ಲರೂ ಕ್ಷಮಿಸಬೇಕೆಂದು ಕೇಳಿಕೊಳ್ಳುವುದು ಒಂದು ಪ್ರಾಯಶ್ಚಿತ್ತವೇ ಆಗಿದೆ. ಇದು ಆತ್ಮಶುದ್ಧಿ ಆತ್ಮೋದ್ಧಾರಕ್ಕೆ ಸಹಕಾರಿಯಾಗಿದೆ. ಇದರಿಂದಾಗಿ ಪರ್ಯೂಷಣ (ದಶಲಕ್ಷಣ) ಪರ್ವವೆಂದರೆ ಅಧಿಕಾಧಿಕ ತ್ಯಾಗ, ಆತ್ಮಶುದ್ಧಿ ಮತ್ತು ಮಾನಸಿಕ ಶಾಂತಿಗಳನ್ನು ಪಡೆಯುವುದಾಗಿದೆ.

## ಉತ್ತಮ ಕ್ಷಮಾದಿ ದಶಧರ್ಮದ ಲಕ್ಷಣ ಮತ್ತು ಪೂಜಾ

**ಒಂದನೆಯ ದಿನ ಉತ್ತಮ ಕ್ಷಮಾ**

ಕೋಪಾದಿರಹಿತಾಂ ಸಾರಾಂ। ಸರ್ವಸೌಖ್ಯಕರಾಂ ಕ್ಷಮಾಂ॥

ಪೂಜಯಾ ಪರಯಾ ಭಕ್ತ್ಯಾ। ಪೂಜಯಾಮಿತ ದಾಪ್ತಯೇ॥

ಓಂ ಹ್ರೀಂ ಅರ್ಹ ಉತ್ತಮ ಕ್ಷಮಾ ಅತ್ರ ಅವತರ 2 ಸಂವೌಷಟ್॥

ಓಂ ಹ್ರೀಂ ಉತ್ತಮ ಕ್ಷಮಾಯ್ಯೆ ಜಲಂ, ಗಂಧಂ, ಅಕ್ಷತಂ ಇತ್ಯಾದಿ॥ 1 ॥

**ಎರಡನೆಯ ದಿನ ಉತ್ತಮ ಮಾರ್ಧವಂ ಕೃಪಯಾನ್ವಿತಂ।**

ಪೂಜಯಾ..... ಓಂ ಹ್ರೀಂ ಅರ್ಹಂ ಉತ್ತಮ ಮಾರ್ದವ ಧರ್ಮ!

ಅತ್ರ ಅವತರ ಓಂ ಹ್ರೀಂ ಉತ್ತಮ ಮಾರ್ದವಧರ್ಮಾಯ

ಜಲಂ, ಗಂಧಂ ಅಕ್ಷತಂ..... ಇತ್ಯಾದಿ ॥ 2 ॥

**ಮೂರನೆಯ ದಿನ ಉತ್ತಮ ಆರ್ಜವ ಧರ್ಮಃ**

ಆರ್ಜವಂ ಸ್ವರ್ಗಸೋಪಾನಂ । ಕೌಟಿಲ್ಯಾದಿ ವಿವರ್ಜಿತಂ॥

ಪೂಜಯಾ ಪರಯಾ....॥

ಓಂ ಹ್ರೀಂ ಅರ್ಹಂ ಉತ್ತಮ ಆರ್ಜವ ಧರ್ಮ ಅತ್ರ ಅವತರ ಇತ್ಯಾದಿ॥

ಓಂ ಹ್ರೀಂ ಉತ್ತಮ ಆರ್ಜವ ಧರ್ಮಯ ಜಲಂ, ಗಂಧಂ, ಅಕ್ಷತಂ....॥ 3 ॥

**ನಾಲ್ಕನೆಯ ದಿನಃ ಉತ್ತಮ ಸತ್ಯಧರ್ಮಃ**

ಅಸತ್ಯದೂರ ಸಾಂಗತ್ಯಂ । ವಚಃ ಸರ್ವಹಿತಾವಹಂ ॥ ಪೂಜಯಾ ಪರಯಾ.....॥

ಓಂ ಹ್ರೀಂ ಅರ್ಹಂ ಉತ್ತಮ ಸತ್ಯಧರ್ಮ! ಅತ್ರ ಅವರತ 2 ॥ ಇತ್ಯಾದಿ ॥

ಓಂ ಹ್ರೀಂ ಉತ್ತಮ ಸತ್ಯಧರ್ಮಾಯ ಜಲಂ, ಗಂಧಮ ಅಕ್ಷತಂ....ಇತ್ಯಾದಿ ॥ 4 ॥

**ಐದನೆಯ ದಿನ: ಉತ್ತಮ ಶೌಚಧರ್ಮಃ**

ಶೌಚಂ ಲೋಭವಿನಿರ್ಮುಕ್ತಂ । ಮುಕ್ತಿ ಶ್ರೀ ಚಿತ್ತರಂಜನಂ ॥

ಪೂಜಯಾ ಪರಯಾ....।

ಓಂ ಹ್ರೀಂ ಅರ್ಹಂ ಉತ್ತಮ ಶೌಚಧರ್ಮ! ಅತ್ರ ಅವತರ 2 ॥

ಸೌಂವಷಟ್....ಇತ್ಯಾದಿ॥

ಓಂ ಹ್ರೀಂ ಅರ್ಹಂ ಉತ್ತಮ ಶೌಚ ಧರ್ಮಾಯ ಜಲಂ, ಗಂಧಂ.....॥ಇತ್ಯಾದಿ ॥ 5 ॥

**ಆರನೆಯ ದಿನ ಉತ್ತಮ ಸಂಯಮ ಧರ್ಮ**

ದಯಾಢ್ಯಂ ಸಂಯಮಂ ಮುಕ್ತಿ – । ಭರ್ತಾರಸ್ಯೇಂದ್ರಿಯಾತೀಗಂ ॥ ಪೂಜಯಾ.....॥

ಓಂ ಹ್ರೀಂ ಅರ್ಹಂ ಉತ್ತಮ ಸಂಯಮ ಧರ್ಮ! ಅತ್ರ ಅವತರ 2 ॥ ಇತ್ಯಾದಿ ॥

ಓಂ ಹ್ರೀಂ ಉತ್ತಮ ಸಂಯಮ ಧರ್ಮಾಯ ಜಲಂ, ಗಂಧಂ, ಅಕ್ಷತಂ.....ಇತ್ಯಾದಿ ॥ 6 ॥

**ಏಳನೆಯ ದಿನ – ಉತ್ತಮ ತಪೋಧರ್ಮಃ**

ಕಾಯೇಂದ್ರಿಯ ದಮಂ ಸಾರಂ । ತಪಃ ಕರ್ಮಾರಿ ನಾಶನಂ ॥ ಪೂಜಯಾ....॥

ಓಂ ಹ್ರೀಂ ಅರ್ಹಂ ಉತಮ ತಪೋಧರ್ಮ! . ॥ ಅತ್ರ ಅವತರ 2 ಸಂವೌಷಟ್ ಇತ್ಯಾದಿ ॥

ಓಂ ಹ್ರೀಂ ಅರ್ಹಂ ಉತ್ತಮ ತಪೋಧರ್ಮಾಯ ಜಲಂ, ಗಂಧಂ..... ॥ 7 ॥

**ಎಂಟನೆಯ ದಿನ – ಉತ್ತಮ ತ್ಯಾಗ ಧರ್ಮ**

ತ್ಯಕ್ತಸಂಗಂ ಸುದಾನಂ ವಾ । ತ್ಯಕ್ತಸಂಗಂ ಸುಖಾರ್ಣವಂ ॥ ಪೂಜಯಾ......॥

ಓಂ ಹ್ರೀಂ ಅರ್ಹಂ ಉತ್ತಮ ತ್ಯಾಗಧರ್ಮ! ಅತ್ರ ಅವತರ 2 ॥ ಸಂವೌಷಟ್ ಇತ್ಯಾದಿ ॥

ಓಂ ಹ್ರೀಂ ಅರ್ಹಂ ಉತ್ತಮ ತ್ಯಾಗ ಧರ್ಮಾಯ ಜಲಂ ಗಂಧಂ....ಇತ್ಯಾದಿ ॥ 8 ॥

**ಒಂಭತ್ತನೆಯ ದಿನ – ಉತ್ತಮ ಆಕಿಂಚನ್ಯ ಧರ್ಮಃ**

ಆಕಿಂಚನ್ಯ ಮಮತ್ವಾದಿ – । ದೂರಂ ಕೃತ್ಸ್ನಂ ಸುಖಾರ್ಣವಂ ॥ಪೂಜಯಾ ......॥

ಓಂ ಹ್ರೀಂ ಅರ್ಹಂ ಉತ್ತಮ ಆಕಿಂಚನ್ಯ ಧರ್ಮ!

ಅತ್ರ ಅವತರ 2 । ಸಂವೌಷಟ್ ॥

ಓಂ ಹ್ರೀಂ ಅರ್ಹಂ ಉತ್ತಮ ಆಂಕಿಚನ್ಯ ಧರ್ಮಾಯ ಜಲಂ, ಗಂಧಂ.....ಇತ್ಯಾದಿ ॥ 9 ॥

ಹತ್ತನೆಯ ದಿನ – ಉತ್ತಮ ಬ್ರಹ್ಮಚರ್ಯ ಧರ್ಮಃ

ಸ್ತ್ರೀ ತ್ಯಕ್ತಂ ತ್ರಿಜಗತ್ ಪೂಜ್ಯಂ । ಬ್ರಹ್ಮಚರ್ಯಂ ಗುಣಾರ್ಣವಂ ॥ ಪೂಜಯಾ.....॥

ಓಂ ಹ್ರೀಂ ಅರ್ಹಂ ಉತ್ತಮ ಬ್ರಹ್ಮಚರ್ಯ ಧರ್ಮ!

ಅತ್ರ ಅವತರ 2 ॥ ಸಂವೌಷಟ್ ಇತ್ಯಾದಿ ॥

ಓಂ ಹ್ರೀಂ ಅರ್ಹಂ ಉತ್ತಮ ಬ್ರಹ್ಮಚರ್ಯ ಧರ್ಮಾಯ ಜಲಂ, ಗಂಧಂ....ಇತ್ಯಾದಿ ॥ 10 ॥

**ಕೊನೆಯ ದಿನ ಕ್ಷಮಾವಣಿ ಅಥವಾ ಕ್ಷಮಾವಾಣಿ**

ಧರ್ಮಬಂಧುಗಳು ಪರಸ್ಪರ ಮಿಲನಗೊಂಡು ಕ್ಷಮೆಯನ್ನು ಪ್ರಾರ್ಥಿಸಿ,

ಕ್ಷಮಾಭಾವವನ್ನು ತಾಳುವುದು – ಕ್ಷಮಿಸುವುದು. ಇದೊಂದು

ವಿಶ್ವಮೈತ್ರೀಭಾವವನ್ನು ಭಾವಿಸುವದಿನ. ಕ್ಷಮಾವಣಿಯ ಶುಭದಿನ.

ಖಮಾಮಿ ಸವ್ವಜೀವಾಣಾಂ । ಸವ್ವೇಜೀವಾ ಖಮಂತು ಮೇ॥

ಮೈತ್ತೀ ಮೇ ಸವ್ವಭೂದೇಸು। ವೈರಂ ಮಜ್ಝಂಣ ಕೇಣ ವಿ ॥ [17]

## ಅಷ್ಟಾಹ್ನಿಕ ಪರ್ವ

ಜೈನರು ಪ್ರತೀವರ್ಷ ಬರುವ ಆಷಾಡ, ಕಾರ್ತಿಕ, ಪಾಲ್ಗುಣ, ಮಾಸಗಳ ಶುಕ್ಲ ಪಕ್ಷದ ಅಷ್ಟಮಿಯಿಂದ ಹುಣ್ಣಿಮೆಯವರೆಗೆ ಅಷ್ಟಾಹ್ನಿಕ ಪರ್ವವನ್ನು ಆಚರಿಸುತ್ತಾರೆ. ಈ ಎಂಟು ದಿನಗಳಲ್ಲಿ ಇಂದ್ರ ಹಾಗೂ ಆತನ ದೇವತಾ ಪರಿವಾರಗಳು ಅಷ್ಟಮ ನಂದೀಶ್ವರನ ದ್ವೀಪಗಳಿಗೆ ತೆರಳಿ ಅಲ್ಲಿಯ ಜಿನೇಶ್ವರರ ಪ್ರತಿಮೆಗಳನ್ನು ಮಹಾವೈಭವದಿಂದ ಪೂಜಿಸುತ್ತಾರೆ. ''ಆಷಾಡ ಮತ್ತು ಫಾಲ್ಗುಣ ಮಾಸಗಳಲ್ಲಿ ಆಚರಿಸುವ ಪರ್ವದಲ್ಲಿ ನಂದೀಶ್ವರ ದ್ವೀಪದ ಪೂಜೆಯನ್ನು ಮಾಡುವುದರಿಂದ ಇದನ್ನು ''ನಂದೀಶ್ವರಾಷ್ಟಾಹ್ನಿಕ'ವೆಂದು ಕರೆಯುವರು. ಅದರಂತೆ ಕಾರ್ತಿಕ ಮಾಸದ ಅಷ್ಟಾಹ್ನಿಕದಲ್ಲಿ ಪಂಚಮೇರುವಿನ ಪೂಜೆಯನ್ನು ಮಾಡುವುದರಿಂದ ಅದನ್ನು ಪಂಚಮೇರು ಅಷ್ಟಾಹ್ನಿಕವೆಂದು ಕರೆಯುವರು. ಅಲ್ಲದೆ ಆಷಾಡ ಮಾಸದ ಅಷ್ಟಾಹ್ನಿಕದ ನಂತರ ಕಾರ್ತಿಕ ಮಾಸದ ಅಷ್ಟಾಹ್ನಿಕದವರೆಗಿನ ನಾಲ್ಕು ತಿಂಗಳ ಕಾಲದಲ್ಲಿ ವಿಶೇಷ ಮಳೆ ಇರುವುದರಿಂದ ಮುನಿಗಳು ವ್ರತಿಕರು ಸಾಧುಗಳು ವಿಹಾರವನ್ನು ಬಿಟ್ಟು ಒಂದೇ ಸ್ಥಳದಲ್ಲಿದ್ದು ವ್ರತಾದಿಗಳನ್ನು ಆಚರಿಸುವರು. ಅದೇ 'ಚಾತುರ್ಮಾಸಪರ್ವವರ್ಷಯೋಗ'ವೆಂದು ಪ್ರಸಿದ್ಧವಾಗಿದೆ''.

“ಸಾಮಾನ್ಯವಾಗಿ ಚಾತುರ್ಮಾಸ ಅವಧಿಯಲ್ಲಿ ಜೈನ ಆಚಾರ್ಯರು ಜೈನ ಬಸದಿಗಳಲ್ಲಿ ತಂಗುತ್ತಿದ್ದರು. ಆಗ ಆ ಸ್ಥಳದಲ್ಲಿ ವಾಸಿಸುವ ಶ್ರಾವಕರು ಆಚಾರ್ಯರ ಸೇವೆಮಾಡಿ, ಅವರ ಪ್ರವಚನಗಳನ್ನು ಕೇಳುತ್ತಿದ್ದರು ಆ ಸ್ಥಳದ ಬಸದಿಗಳಲ್ಲಿ ವಿಶೇಷಪೂಜೆ ಮತ್ತು ಆರಾಧನೆಗಳನ್ನು ಮಾಡುತ್ತಿದ್ದರು”[18]

ಅಷ್ಟಾಹ್ನಿಕ ಪರ್ವದ ಪ್ರಾಚೀನತೆಯನ್ನು ಬನವಾಸಿಯ ಕದಂಬರ ಕಾಲದಲ್ಲಿ ಗುರುತಿಸಬಹುದಾಗಿದೆ. ಕದಂಬ ರಾಜನಾದ ರವಿವರ್ಮನು ಅಷ್ಟಾಹ್ನಿಕ ಪರ್ವದ ಪ್ರಾವಿತ್ರ್ಯವನ್ನು ಎತ್ತಿ ಹಿಡಿದು ಒಂದು ಆದೇಶವನ್ನು ಹೊರಡಿಸಿದನು. ಕೆಲವು ಜೈನರೂ ಸೇರಿದಂತೆ ತನ್ನ ಪ್ರಜೆಗಳು ಕಾರ್ತಿಕ ಪೂರ್ಣಿಮೆಯ ಮಾಸದಲ್ಲಿ ಎಂಟು ದಿವಸಗಳ ಕಾಲ ಅಷ್ಟಾಹ್ನಿಕ ಪರ್ವವನ್ನು ಆಚರಿಸಬೇಕೆಂದು ಆತನು ಆದೇಶ ಹೊರಡಿಸಿದನು”[19] ಈ ಉತ್ಸವದ ವೆಚ್ಚಗಳಿಗಾಗಿ ರಾಜನು ಒಂದು ಗ್ರಾಮವನ್ನು ದತ್ತಿ ನೀಡಿದನು. ಎಂಬುದು ಗಮನಾರ್ಹ. ರಾಜನ ಜೈನಧರ್ಮ ನಿಷ್ಠೆಯು ಈ ಶಾಸನದಿಂದ ವ್ಯಕ್ತವಾಗುತ್ತದೆ.

ಜಿನೇಂದ್ರನ ಪೂಜೆ ನೆರವೇರಿದಾಗಲೆಲ್ಲ ದೇಶದ ಏಳಿಗೆಯಾಗಿದೆ; ನಗರಗಳಲ್ಲಿ ಭಯ ನಿವಾರಣೆಯಾಗಿದೆ. ಆ ದೇಶದ ರಾಜರುಗಳಿಗೆ ಬಲಬಂದಿದೆ, ಗೌರವಬಂದಿದೆ”[20]

ನಂದೀಶ್ವರ ಪೂಜೆಯು ಅಷ್ಟಾಹ್ನಿಕಪರ್ವದ ಒಂದು ಪ್ರಮುಖವಾದ ಅಂಗವಾಗಿದೆ. ಹಾಗಾದರೆ ಈ ದಿನ ನಂದೀಶನನ್ನೇ ಏಕೆ ಪೂಜಿಸಬೇಕು? ಆ ನಂದೀಶ್ವರ ದ್ವೀಪ ಎಲ್ಲಿದೆ? ಹೇಗಿದೆ; ಈ ಪೂಜೆಯ ಮಹತ್ವವವೇನು? ಅದರ ಪರಿಣಾಮಗಳೇನು? ಎಂಬಿತ್ಯಾದಿ ಪ್ರಶ್ನೆಗಳು ಮೂಡುವುದು ಸಹಜ.

“ನಾವು ವಾಸಿಸುವ ದ್ವೀಪ ಮೊದಲನೆಯ ಜಂಬೂದ್ವೀಪ. ಅಲ್ಲಿಂದ ಮುಂದೆ ಅದನ್ನು ಬಳಸಿ ಏಳು ದ್ವೀಪಗಳೂ ಏಳು ಸಮುದ್ರಗಳೂ ಇವೆ. ಎಂಟನೇ ದ್ವೀಪವೇ ನಂದೀಶ್ವರ ದ್ವೀಪ. ಅದನ್ನು ಬಳಸಿಕೊಂಡು ನಂದೀಶ್ವರ ಸಮುದ್ರವಿದೆ. ಈ ದ್ವೀಪದ ವಿಸ್ತಾರ 163 ಕೋಟಿ 84ಲಕ್ಷ ಯೋಜನೆಗಳು. ದ್ವೀಪದ ನಾಲ್ಕು ದಿಕ್ಕುಗಳಲ್ಲಿ 1 ಅಂಜನ ಪರ್ವತ; 4 ದಧಿಮುಖಪರ್ವತಗಳು ಹಾಗೂ 8 ರತಿಕರ ಪರ್ವತಗಳೂ ಸೇರಿದಂತೆ 13 ಪರ್ವತಗಳು ಪ್ರತಿ ದಿಕ್ಕಿನಲ್ಲಿ ವಿರಾಜಮಾನವಾಗಿದೆ.[21] ಹೀಗೆ ನಾಲ್ಕು ದಿಕ್ಕುಗಳಲ್ಲಿರುವ ಪರ್ವತ ಶಿಖರಗಳಲ್ಲಿ ಒಂದೊಂದು ಅಕೃತ್ರಿಮ ಜಿನ ಚೈತ್ಯಾಲಯ (ಬಸದಿ)ಗಳಿವೆ. ಪ್ರತಿಯೊಂದು ಬಸದಿಯಲ್ಲಿ 108–108 ಅರಹಂತ ಪರಮೇಷ್ಠಿಗಳ ರತ್ನಮಯವಾದ ಅಕೃತ್ರಿಮ ಜಿನ ಬಿಂಬಗಳು ವಿರಾಜಮಾನವಾಗಿದೆ” “ಇಂತಹ ನಂದೀಶ್ವರ ದ್ವೀಪಕ್ಕೆ ಪ್ರತಿವರ್ಷದ ಆಷಾಢ, ಕಾರ್ತಿಕ ಮತ್ತು ಫಾಲ್ಗುಣ ಮಾಸಗಳಲ್ಲಿ ಶುಕ್ಲಪಕ್ಷದ ಅಷ್ಟಮಿಯ ದಿನದಂದು ಪೌರ್ಣಮಿಯವರೆಗೆ ದೇವತೆಗಳು ವಿಮಾನದಲ್ಲಿ ಬಂದು ದರ್ಶನ ಪೂಜೆಗಳನ್ನು ಸಲ್ಲಿಸುವರೆಂದು ಜೈನಶಾಸ್ತ್ರಗಳು ತಿಳಿಸುತ್ತವೆ. ಆದುದರಿಂದ ನಾವು ಸಹ ಆ ದಿನಗಳಲ್ಲಿ ನಂದೀಶ್ವರ ದ್ವೀಪವನ್ನು ಪೂಜಿಸಿ ಅಷ್ಟಾಹ್ನಿಕ ಪರ್ವವನ್ನು ಆಚರಿಸುತ್ತೇವೆ”[22] (ಶ್ರೀ ಡಿ. ಪದ್ಮನಾಭ ಶರ್ಮ, ಜೈನ ಸಂಸ್ಕೃತಿಯ ಪರ್ವಗಳು, ಪು.ಬಿ) “ಈ ದ್ವೀಪದಲ್ಲಿ ಅನೇಕಾನೇಕ ಪರ್ವತಗಳೂ, ಆನಂದ ಧಾಮಗಳು, ಚೈತ್ಯಾಲಯಗಳೂ ಸೇರಿದಂತೆ ಅನೇಕ ಬಸದಿಗಳು, ರಂಗಮಂದಿರಗಳು, ಉದ್ಯಾನ ಗೃಹಗಳು, ರತ್ನಖಚಿತ ವೇದಿಕೆಗಳು, ಸುಂದರ ಸ್ತೂಪಗಳು, ಚೈತ್ಯ ವೃಕ್ಷಗಳು, ಇಂದ್ರಧ್ವಜಗಳು, ದಿವ್ಯವಾದ ತಾವರೆಗಳು, ಸರೋವರಗಳೂ ಇವೆ” ಇಂತಹ ಅದ್ಭುತ ದ್ವೀಪಕ್ಕೆ ಸ್ವರ್ಗದ ದೇವತೆಗಳು ವರ್ಷದಲ್ಲಿ ಮೂರು ಬಾರಿ ಬಂದು 8 –8 ದಿನಗಳಿದ್ದು ವೈಭವದ ಪೂಜೆಯನ್ನು ನೆರವೇರಿಸುವರು.

ಈ ಅಷ್ಟಾಹ್ನಿಕ ಪರ್ವವನ್ನು ಆಚರಿಸುವುದರಿಂದ ಆಗುವ ಪರಿಣಾಮ ಹಾಗೂ ಮಹತ್ವವನ್ನು ಕುರಿತ ಕೆಲವು ಉದಾಹರಣೆಗಳು ನಮಗೆ ಕಾಣಸಿಗುತ್ತವೆ. ಚಾವುಂಡರಾಯ ಪುರಾಣ ದಲ್ಲಿಯ ಚಂದ್ರಪ್ರಭ ತೀರ್ಥಂಕರ ಪುರಾಣದಲ್ಲಿ ಬರುವ ಒಂದು ಉಲ್ಲೇಖ ಹೀಗಿದೆ.

“ಗಂಧೀಳ ವಿಷಯದ ಶ್ರೀಷೇಣನೆಂಬರಸನಾತನರಸಿ ಶ್ರೀ ಕಾಂತೆಯಂಬೊಳಂತೀರ್ವರುಂ ಮಕ್ಕಳಿಲ್ಲದುಬ್ಬೇಗದೊಳ್ ಅಷ್ಟಾಹ್ನಿಕ ಮಹಾಪೂಜೆಯಂ ಪುತ್ರಾರ್ಥಕರಾಗಿ ವಿವಿಧ ಮಂತ್ರ ಪೂತುಸುಗಂಧ

ಸಲಿಲಂಗಳಿಂಜಿನಬಿಂಬಗಳನಭಿಷೇಕಂಗೆಯ್ದು ಅವರವರ ಶ್ರೀಪಾದದ ಕೆಳಗೆ ತಾವೀರ್ವರುಮಿಂದು ರತ್ನತ್ರಯ ಪ್ರತುಮೆಗಳುಮುಪಕರಣಂಗಳುಮನುತ್ತುಂಗ ಜಿನಾಲಯಂಗಳೊಳ್ ಇರಿಸಿ ಕೆಲವು ಕಾಲಂ ಸಲೆ ಸುಭ ಸ್ವಪ್ನದರ್ಶನ ಪೂರ್ವಕಂ ಗರ್ಭಂ ತಾಳ್ದಿ ನವಮಾಸಂ ನೆರೆಯ ಮಗನ ಪಡೆದಾತಂಗೆ ಶ್ರೀವರ್ಮನೆಂದು ಪೆಸರನಿಟ್ಟು .......[23]" ಎಂದಿದೆ ಅಂದರೆ ಗಂಢೀಶ ವಿಷಯದ ರಾಜನಾದ ಶ್ರೀಷೇಣನಿಗೆ ಅಷ್ಟಾಹ್ನಿಕ ಪೂಜೆಯ ಫಲದಿಂದ ಪುತ್ರ ಸಂತಾನ ಲಾಭವಾಯಿತಂತೆ.

"ರವಿಷೇಚಾರ್ಯನು ತನ್ನ ಪದ್ಮಪುರಾಣ ಗ್ರಂಥದಲ್ಲಿ "ರಾಮಾಯಣ ಮಹಾಕಾವ್ಯದ ನಾಯಕ ಶ್ರೀರಾಮನ ತಂದೆಯಾದ ದಶರಥನು ಅಷ್ಟಾಹ್ನಿಕ ಪೂಜೆಯನ್ನು ಮಾಡಿದನೆಂದು ಹೇಳಲಾಗಿದೆ"[24] ಹಾಗೆಯೇ ಮೈನಾದೇವಿ ಎಂಬಾಕೆ ಅಷ್ಟಾಹ್ನಿಕ ಪೂಜೆಯನ್ನು ಮಾಡಿದ ನಂತರ (ಸಿದ್ಧ ಚಕ್ರ ಆರಾಧನೆ) ಆಕೆಯ ಪತಿ ಕುಷ್ಟರೋಗದಿಂದ ಮುಕ್ತನಾದನೆಂದು ಶ್ರೀಪಾಲಚರಿತ್ರೆಯಲ್ಲಿ ಹೇಳಲಾಗಿದೆ. ಅಷ್ಟಾಹ್ನಿಕ ಪರ್ವಾಚರಣೆಯ ಸಂದರ್ಭದಲ್ಲಿ ಸಾಮಾನ್ಯವಾಗಿ ಸಿದ್ಧಚಕ್ರ ಆರಾಧನೆಯನ್ನು ಮಾಡುತ್ತಿದ್ದರು.[25] ಈ ಉಲ್ಲೇಖಗಳನ್ನು ಗಮನಿಸಿದಾಗ ಪುಣ್ಯಬಂಧವಾಗಿ ಕರ್ಮವು ಕ್ಷಯವಾಗುತ್ತದೆ ಎಂಬ ನಂಬಿಕೆ ಇದೆ. ಅಷ್ಟಾಹ್ನಿಕ ಪರ್ವ ದಿನಗಳಲ್ಲಿ ಸಾಧನೆ ಮಾಡಿದ ತಾರ್ಕಿಕ ಚೂಡಾಮಣಿ ಅಕಲಂಕದೇವನು ಬೌದ್ಧರನ್ನು ವಾದದಲ್ಲಿ ಸೋಲಿಸಿದನೆಂದು ಹೇಳಲಾಗಿದೆ. ಹೀಗಾಗಿ ಜೈನ ಶ್ರಾವಕರಿಗೆ ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳಲು ಈ ಪರ್ವವು ಮಹತ್ವದ ಪಾತ್ರವನ್ನು ವಹಿಸುತ್ತದೆ. ಒಟ್ಟಿನಲ್ಲಿ ಜೈನರಿಗೆ ಅಷ್ಟಾಹ್ನಿಕ ಪರ್ವವು ಒಂದು ಪ್ರಮುಖವಾದ ಹಬ್ಬವಾಗಿದೆ. ಈ ಪರ್ವದ ಆಚರಣೆಯನ್ನು ನಂದೀಶ್ವರನನ್ನು ಆರಾಧಿಸುವ ಮೂಲಕ ಆಚರಿಸುವುದು ವಿಶಿಷ್ಟವಾದುದಾಗಿದೆ. ಆದುದರಿಂದ ನಂದೀಶ್ವರನ ಆರಾಧನೆ ಈ ಹಬ್ಬದ ಒಂದು ಭಾಗವೇ ಆಗಿರುವುದರಿಂದ ನಂದೀಶ್ವರನ ಮಂಗಳಾರತಿಯ ಹಾಡೊಂದನ್ನು ಇಲ್ಲಿ ಕೊಡಲಾಗಿದೆ.

"ಜಯಮಂಗಲಂ। ನಿತ್ಯ ಶುಭ ಮಂಗಲಂ॥
ಜಯ ಮಹಾ ನಂದೀಶ್ವರಾದ್ರಿ ಜಿನರವರಿಗೆ
ಜಯ ಮಂಗಲಂ ನಿತ್ಯ ಶುಭಮಂಗಲಂ ॥ಪಲ್ಲವಿ॥
ಮುದದಿ ಜಿನನಿಲಯ ವಂಜನ ನಾಲ್ಕರೊಳು ನಾಲ್ಕು ।
ದಧಿಮುಖಗಳೀರೆಂಟು ನಿಲಯವನಿತೇ॥
ಅದರಿಂದ ಮುಂದೆ ರತಿಕರಕೆ ಮೂವತ್ತೆರಡು ।
ಸದನ ದ್ವಾಪಂಚಶ್ರೀ ನಿಲಯಗಳಿಗೆ ॥ಜಯ॥1॥
ಮಣಿಮಾಡ ಗೋಪುರ ದ್ವಾರ ಮಾನಸ್ತಂಭ ।
ಗಣನೆಯಿಲ್ಲದ ಧ್ವಜಾವಲಿ ತೋರಣ॥
ಘನವೆತ್ತ ಮೃದುವಿಧ ವಾದ್ಯ ಮಂಗಲ ದ್ರವ್ಯ ।
ಮಿನುಗೆ ನಗೆ ಮಿನುಗುತಿಹ ಜಿನವರರಿಗೆ ॥ಜಯ॥ 2॥
ಜನನಾತಿಶಯ ಪತ್ತು, ಘಾತಿಕ್ಷಯಜ ಪತ್ತು ।
ಅನಿಮಿಷರು ರಚಿತ ಪದಿನಾಲ್ಕತಿಶಯ॥
ಮಿನುತಾಷ್ಟ ಪ್ರಾತಿಹಾರ್ಯಗಳಿಂದ ರಾಜಿಸುವ।
ಚಿನುಮಯಾತ್ಮಕ ಚಾರು ಚರಣಗಳಿಗೆ ॥ಜಯ॥3॥
ಇಂದು – ರವಿ – ಕೋಟಿ ಕಿರಣವ ಮಿಗುವ ಜಿನಬಿಂಬ।
ಅಂದವಡೆದೈನೂರು ಚಾಪೋನ್ನತ ॥
ಮಂದಿರಕೆ ನೂರೆಂಟು ಇಂತು ಐಸಾಸಿರದ ।
ಮುಂದೆ ಆರ್ನೂರ ಈ ರೇಣ್ಬರರಿಗೆ ॥ಜಯ॥ 4॥

ಹರಿಯಾದಿ ಸರ್ವ ವಾಹನವೇರಿ ನಾಲ್ತೆರದ ।
ಸುರರು ನಂದೀಶ್ವರ ಮಹಾದ್ವೀಪಕೆ॥
ವರಸುದಾಷಾಢ – ಕಾರ್ತಿಕ – ಸುಫಾಲ್ಗುಣ ಮಾಸ॥
ವರ ಶುಕ್ಲ ಪಕ್ಷದಷ್ಟಮಿಯೊಳೈದಿ ಮುದದಿ ॥ಜಯ॥ 5 ॥
ಗಿರಿವಸತಿ ಜಿನರುಗಳ ತ್ರಿಃಪ್ರದಕ್ಷಿಣೆಗೊಂಡು ।
ಸುರರು ಸ್ತುತಿಯಿಸಿ ಮಣಿದೆಂಟು ದಿವಸಾ ॥
ಪರಿಪರಿಯೊಳರ್ಹತಾ ಪೂಜೆಗಳನೆಸಗಿ ದು – ॥
ರ್ಧರ ದುರಿತವಂ ಕೆಳದೆಸೆವ ಅರಹಂತ ಜಿನರಿಗೆ ॥ಜಯ॥ 6 ॥
ಇಳೆಗಧಿಕವಾದ ಶ್ರೀ ಬೆಳ್ಗೊಳದ ಪುರಚೈತ್ಯ ।
ನಿಲಯದೊಳು ನಳಿನವಿಷ್ಟದಿ ನೆಲಸೀ॥
ನಲವಿತ್ತು ಅನುಗಾಲವೆಡೆಬಿಡದೆ ಸತ್ಪೂಜೆ – ।
ಗೊಳುವ ಶ್ರೀಮಂದರದ ಜಿನವರರಿಗೆ ॥ಜಯ॥ 7 ॥ [26]

ಈ ಹಾಡಿನಲ್ಲಿ ನಂದೀಶ್ವರನು ವಿರಾಜಮಾನವಾಗಿರುವ ದ್ವೀಪದ ವರ್ಣನೆ ಇದೆ. ದ್ವೀಪದ ನಾಲ್ಕು ದಿಕ್ಕುಗಳಲ್ಲಿ 1 ಅಂಜನ ಪರ್ವತ; 4 ದಧಿಮುಖಪರ್ವತಗಳು, ಹಾಗೂ 8 ರತಿಕ ಪರ್ವತವನ್ನೊಳಗೊಂಡು, ವಿಧವಿಧ ಮಾದರಿಯ ಉದ್ಯಾನಗಳು, ಬಸದಿಗಳು ರಂಗಮಂದಿರಗಳು, ಉದ್ಯಾನಗೃಹಗಳು, ರತ್ನಖಚಿತ ವೇದಿಕೆಗಳು ಸುಂದರ ಸ್ತೂಪಗಳು, ಚೈತ್ಯವೃಕ್ಷಗಳು, ಇಂದ್ರ ಸ್ವರಗಳು ದಿವ್ಯವಾದ ತಾವರೆ ಸರೋವರಗಳಿಂದ ನಂದೀಶ್ವರ ದ್ವೀಪವು ನಯನಮನೋಹರವಾಗಿದ್ದು ಅಲ್ಲಿನ ನಂದೀಶ್ವರನ ಪ್ರತಿಮೆಯು ಕಂಗೊಳಿಸುತ್ತಿದೆ. ಅದಕ್ಕೆ ಆಷಾಢ, ಕಾರ್ತಿಕ, ಫಾಲ್ಗುಣ ಮಾಸಗಳ ಶುಕ್ಲಪಕ್ಷದ ಅಷ್ಟಮಿಯಂದು ಸ್ವರ್ಗಾಧಿದೇವತೆಗಳು ಪೂಜೆಯನ್ನು ವೈಭವದಿಂದ ನೆರವೇರಿಸುವರು ಎಂಬುದಾಗಿದೆ.[27] ಹಾಗೆಯೇ ನಂದೀಶ್ವರನನ್ನು ಕುರಿತ ಅಷ್ಟಾರ್ಚನೆ ಸ್ತುತಿ ಗೀತೆ ಹೀಗಿದೆ:

**ಶ್ರೀ ನಂದೀಶ್ವರ ಪೂಜಾ**

ಶ್ರೀ ಮದ್ದೇವೇಂದ್ರ ವೃಂದಾರ್ಚಿತ ವಿನುಪದಾಃ ಭವ್ಯಕಲ್ಪಾವನೀಜಾಃ॥
ಸಂಸಾರಾರ್ತ್ಯುಗ್ರವಾರ್ಧೌ ಪತಿತನುಭೃತಾಂ ಕಾರಣೇರ್ತ್ಯುದ್ಧನಾವಾಃ॥
ಶ್ರೀ ಮಾನ್ನಾಭೇಯ ಮುಖ್ಯಾಃ ಪ್ರವರಗಣಾಃ ವೀರನಾಥಾವಸಾನಾಃ॥
ತೀರ್ಥೇಶಾಃ ಪಾಂತು ನಿತ್ಯಂ ಭಜಕಯಜಕ ಸಂಪೂಜಕಾನ್ ಸರ್ವಸಂಘಾನ್
ಜಂಭೂದ್ವೀಪಸ್ಯಾಷ್ಟಮಃ ಸುಪ್ರಸಿದ್ಧಃ ಸೋಯಂ ದ್ವೀಪೋ ಭಾತಿ ನಂದೀಶ್ವರಾಖ್ಯಃ
ಯದ್ವಿಸ್ತಾರೋಬ್ಜರ್ತುವಹ್ನಿದ್ವಿಪಾಬ್ಧಿ ಪ್ರಾಂಚತ್ಪಂಚವ್ಯೋಮ ಸದ್ಯೋಜನಾನಿ॥
ದ್ವೀಪಸ್ಯಾಸ್ಯಯ ಚತುರ್ದಿಶಾಂ ಪ್ರವಿಲಸನ್ಮಧ್ಯೇಷು ಭೂಮಿಧರಾ–।
ಶ್ಚತ್ವಾರೋ ಹರಿನೀಲ ಕಾಂತಿಕಲಿಕಾ ಭಾಂತ್ಯಂಜನಾಖ್ಯಾಶ್ಚ ತೇ॥
ದೇವೇಂದ್ರಾಂಬಕ ಯೋಜನಾನಿ ದಧತೇ ಯೇ ಚಾವಗಾಡಂ ದೃಢಂ।
ವೇದಾಶೀತಿ ಸಹಸ್ರಯೋಜಿತ ಮಿತಿ ವ್ಯಾಸೋನ್ನತ ಶ್ರೀಭರಾಃ ॥ 3 ॥
ಭವನ–ವ್ಯಂತರ ಜ್ಯೋತಿಃ, ಸ್ವರ್ಗ–ಭೂಲೋಕ–ಪೂಜಿತಾನ್॥
ಈನಬಿಂಬಾನ ಹಂ ಚಾಯೆ, ಶಂಬರಾರಿನಿಷೂದನಾನ್ ॥ 4 ॥
ಓಂ ಹ್ರೀಂ ಶ್ರೀಂ ಕ್ಲೀಂ ಐಂ ಅರ್ಹಂ ಅಷ್ಟಮನಂದೀರ್ಶವರ ದ್ವೀಪಗತಾಂಜನ–
ದಧಿ ಮುಖ–ರತಿಕರಾಗ್ರಸ್ಥಿತ ಪೂರ್ವ–ದಕ್ಷಿಣ ಪಶ್ಚಿಮೋತ್ತರದಿಶಾವರ–
ದ್ವಾಪಂಚಾಶತ್ ಜಿನಚೈತ್ಯಾಲಯಸ್ಥಿತ ಜಿನಬಿಂಬಾ। ಅತ್ರ ಅವತರತ ಅವತರತ,

ಸಂವೌಷಟ್ ॥ ಆಹ್ವಾನಂ ॥

ಅತ್ರ ತಿಷ್ಠತ ತಿಷ್ಠತಠಠ ॥ ಸ್ಥಾಪನಂ ॥

ಅತ್ರ ಮಮ ಸನ್ನಿಹಿತಾ ಭವತ, ಭವತ ॥ ಸನ್ನಿಧೀಕರಣಂ ॥

ಸ್ವಚ್ಛೈರಘು ಪ್ರವಹರ್ಯೆ ಸ್ತನುಭೃದ್ಗುಣಾನಾಂ।

ಕರ್ಪೂರ ಧೂಳಿ ಪರಿಮಿಶ್ರಿತ ದಿವ್ಯತೋಯೈಃ ॥

ನಂದೀಶ್ವರರಾಖ್ಯ ವರಪರ್ವಣಿ ಸಂಯಜೇಸ್ಮಿನ್ ।

ಅಷ್ಟೌ ದಿನಾನಿ ವಿಧಿನಾ ಪ್ರತಿಮಾ ಜಿನಾನಾಂ॥

ಓಂ ಹ್ರೀಂ ಅರ್ಹಂ ಅಷ್ಟಮ ನಂದೀಶ್ವರ ದ್ವೀಪೇ ಅಚೆಜನ–ದಧಿಮುಖ ರತಿಕರಾಗ್ರಸ್ಥಿತ ಪೂರ್ವ–ದಕ್ಷಿಣ ಪಶ್ಚಿಮೋತ್ತರ ದಿಶಾವರ ದ್ವಾಪಂಚಾಂಶತ್ ಜಿನ ಚೈತ್ಯಾಲಯ ಸ್ಥಿತ ಜಿನ ಬಿಂಬೇಭ್ಯೋ ಜಲಂ ನಿರ್ವಪಾಮಿ ಸ್ವಾಹಾ ॥ ಜಲಂ ॥

ಸತ್ಕುಂಕುಮಾಗರು ವಿಧೂತ್ತಮ ಚಂದನಾನಾಂ ।

ಗಂಧೈರ್ಮನೋ ಹರತಮೈಃ ಸುಕೃತಾಭಗಂಧೈಃ ॥ ನಂದೀಶ್ವರಾಖ್ಯ.......॥ ಗಂಧಂ ॥

ಚಂದ್ರಾಂಶು ಜಾಲವಿಶದೈರಮಲೈರ್ಮನೋಜ್ಞೈ। ಸದ್ಗಂಧಶಾಲಿ ಲಸದಕ್ಷತ ಪೂತಪುಂಜೈಃ

॥ನಂದೀಶ್ವರಾಖ್ಯ......॥ ಅಕ್ಷತಾನ್ ॥

ಪಂಕೇಜ – ಕುಂದ –ವಕುಲೋತ್ಪಲ. ಮಾಲತೀನಾಂ।

ಪುಷ್ಪೈರ್ದ್ವಿರೇಫ ನಿನದೈಃ ಪರಿಪೂರಿತಾಶೈಃ॥ ನಂದೀರ್ಶವರಾಖ್ಯ......॥ ಪುಷ್ಪಂ ॥

ಸದ್ಧೇಮ ಭಾಜನ ಗತೈರಮೃತೋಪಮಾನೈ ಃ ।

ಹರ್ವ್ಯೇಃ ಸುಗಮಧ – ದಧಿ–ಭಕ್ಷ್ಯ ಸುಶರ್ಕರಾಜ್ಯೈಃ ॥ ನಂದೀಶ್ವರಾಖ್ಯಃ॥ಚರುಂ॥

ಧ್ವಸ್ತಪ್ರಮೋಹತಿಮಿರೈಸ್ತನುಭೃದ್ಗುಣಾನಾಂ।

ಸತ್ ಸೋಮದೀಪನಿಕರೈರ್ಮಣಿಭಾಜನಸ್ಥೈಃ ॥ ನಂದೀಶ್ವರಾಖ್ಯ ......॥ ದೀಪಂ ॥

ಶ್ರೀಖಂಡ ರೇಣುಕಲಿತಾಗರುಖಂಡಧೂಪೈ–।

ರಂಗಾಂಗ ಸಂಗಸುಭೀಕೃತ ದಿಕ್ತಟಾಂತೈಃ ॥ ನಂದೀಶ್ವರಾಖ್ಯ......॥ ಧೂಪಂ ॥

ಮೋಚಾಂಶುಚೋಚ – ರುಚಕ –ಕ್ರಮುಕಾಮ್ರ ಸಾರ್ದ – ।

ನಾರಂಗ –ಜಂಬು ಫನಸಾದಿಫಲೈಃ ಸುಪಕ್ವೈಃ। ನಂದೀಶ್ವರಾಖ್ಯ.....॥ಫಲಂ॥

ಪಾನೀಯ ಗಂಧ ಕಲಮಾಕ್ಷತ ಪುಷ್ಪ ಹವ್ಯ–।

ದೀಪ ಪ್ರದೂಪ ವರಚಾರು ಫಲೈಃ ಕೃತಾ–ರ್ಘ್ಯೈಃ॥

ನಂದೀಶ್ವರಾಖ್ಯ.......॥ಅರ್ಘ್ಯಂ॥

ಅಷ್ಟಮದ್ವೀಪ ಸೌಭಾಗ್ಯ। ಸಂಭಾವಿತ ಜಿನಾವಲಿಃ॥

ಅಷ್ಟಮಾವನಿಮಾ ನಿತ್ಯಂ।ಪಾಪತಾಪಂ ನಿಹಂತು ಯಾ ॥ ಶಾಂತಿಧಾರಾಂ॥

ನಂದೀಶ್ವರಾಭಿಮೂರ್ಧನ್ಯ – ।ಶೃಂಗಾರಜಿನವೃಂದಕೇ॥

ಕುಂದ ಕಂಕೇಲಿ ಕಲ್ಹಾರ। ಕುಸುಮಾಂಜಲಿರಸ್ತ್ವಯಂ॥ ಪುಷ್ಪಾಂಜಲಿ ॥[28]

## ಶ್ರುತ ಪಂಚಮಿ

ಶ್ರುತಪಂಚಮಿ ಜೈನರಿಗೆ ಪವಿತ್ರವಾದ ದಿನ. ಇದನ್ನು ಜೇಷ್ಠ ಶುದ್ಧ ಪಂಚಮಿಯಂದು ಆಚರಿಸುತ್ತಾರೆ. ಈ ದಿನ ಜಿನಮಂದಿರಗಳಲ್ಲಿರುವ ಶ್ರುತ ಸ್ಕಂದ ಶಾಸ್ತ್ರಗಳ ಪೂಜೆಯನ್ನು ನಡೆಸುತ್ತಾರೆ.

"ಸತ್ತರಿ ಸಹಸ್ಸಧವಳೋ। ಜಯಧವಳೋ ಸಟ್ಠಿ ಸಹಸ್ಸ ಬೋದ್ದವ್ವೋ।

ಮಹಬಂಧೋ ಚಾಳೀ ಸಹ। ಸಿದ್ಧಂತತಯ ಅಹಂವಂದೇ॥"

ಶ್ರುತ ಪಂಚಮಿಯಂದು ಶಾಸ್ತ್ರಗ್ರಂಥಗಳಿಗೆ ಭಕ್ತಿಯಿಂದ ಶ್ರುತಪೂಜೆ ಮತ್ತು ಗಣಧರ ಪೂಜೆಯನ್ನು ಮಾಡಿ ಸ್ವಾಧ್ಯಾಯ ಪ್ರವಚನ ಮಾಡಬೇಕು. ತೀರ್ಥಂಕರರ ವಾಣಿಯೇ ಸರಸ್ವತಿ ವಾಣಿ ಎಂದು ಜೈನರು ಭಾವಿಸುತ್ತಾರೆ. ಈ ಹಬ್ಬದ ಹಿನ್ನೆಲೆಯು ಬಹಳ ಸ್ವಾರಸ್ಯಕರವಾದುದು. ಸಾಮಾನ್ಯವಾಗಿ ಬೌದ್ಧರು ತ್ರಿಪಿಟಕಗಳಿಗೆ ಮನ್ನಣೆ ನೀಡುವಂತೆ, ವೈದಿಕರು ವೇದಾಗಮಗಳನ್ನು ಮನ್ನಿಸುವಂತೆ, ಜೈನಧರ್ಮವು ಆಗಮಗಳನ್ನು ಮನ್ನಿಸಿ ಗೌರವಿಸಿ ಆರಾಧಿಸುತ್ತದೆ. "ಆಗಮವೆನ್ನುವುದು ಜೈನ ಶಾಸ್ತ್ರ ಗ್ರಂಥಗಳ ಸಮೂಹ. ಇದರ ಹನ್ನೆರಡು ಅಂಗಗಳೇ ಮೂಲವಲ್ಲ. ಈ ಅಂಗಗಳ ಮುಂಚಿನಿಂದಲೂ ಶಾಸ್ತ್ರಜ್ಞಾನವು ಶ್ರುತ ರೂಪದ 14 ಪೂರ್ವಗಳ ರೂಪದಲ್ಲಿ ಪ್ರಚಾರದಲ್ಲಿತ್ತು. ಈ ಪೂರ್ವಗಳನ್ನು ಗಣಧರರು ವಿವರಿಸಿದರು ಇವುಗಳ ಆಧಾರದಿಂದ ಭಗವಾನ್ ಮಹಾವೀರರ ಉಪದೇಶವನ್ನು ಲಕ್ಷದಲ್ಲಿರಿಸಿಕೊಂಡು ಹನ್ನೆರಡು ಅಂಗಗಳ ರಚನೆಯಾಯಿತು.

ಹನ್ನೆರಡು ಅಂಗಗಳು: 1. ಆಚಾರ 2. ಸೂತಕೃತ 3. ಸ್ಥಾನ 4. ಸಮುದಾಯ 5. ವ್ಯಾಖ್ಯಾ ಪ್ರಜ್ಞಪ್ತ 6.ನಾಥಧರ್ಮ ಕಥಾ 7. ಉಪವಾಸಕಾಧ್ಯಯನ 8. ಅಂತಃಕೃದ್ದಶಾಂಗ 9. ಅನುತ್ತರೌಪಪಾದಿಕದಶಾಂಗ 10. ಪ್ರಶ್ನಾವ್ಯಾಕರಣ 11. ವಿಪಾಕ ಸೂತ್ರ 12. ದೃಷ್ಟಿವಾದ" [29]

ಈ ಆಗಮಗಳು ಬಹುಕಾಲದವರೆಗೆ ಶ್ರುತಗಳಾಗಿಯೇ ಉಳಿದು ಗುರುಮುಖರಿಂದ ಶಿಷ್ಯರು ಗ್ರಹಿಸುತ್ತಾ ಬಂದರು. ಮಹಾವೀರ ತೀರ್ಥಂಕರರ ನಿರ್ವಾಣದ ಆರುನೂರು ಎಂಬತ್ತು ವರ್ಷಗಳಾದ ನಂತರ, ಅಂದರೆ ಕ್ರಿ.ಶ ಒಂದನೆಯ ಶತಮಾನ ಕೊನೆಗೆ ಅಥವಾ ಎರಡನೆ ಶತಮಾನದಲ್ಲಿ, ಧರಸೇನರೆಂಬ ಆಚಾರ್ಯ ಶ್ರೇಷ್ಠರು ತಮ್ಮ ಶಿಷ್ಯರಾದ ಆಚಾರ್ಯ ಭೂತಬಲಿ ಮತ್ತು ಆಚಾರ್ಯ ಪುಷ್ಪದಂತರಿಗೆ ತಮ್ಮ ಎಲ್ಲಾ ಜ್ಞಾನವನ್ನೂ ಧಾರೆಯೆರೆದರು! "ಆಚಾರ್ಯ ಭೂತ ಬಲಿ ಮತ್ತು ಪುಷ್ಪದಂತರು ಈ ಜ್ಞಾನವನ್ನೆಲ್ಲಾ ಷಟ್ಖಂಡಾಗಮವೆಂಬ ಕೃತಿಯಲ್ಲಿ ದಾಖಲಿಸಿದರು. ಈ ಆಚಾರ್ಯರುಗಳು ಪವಿತ್ರ ಶಾಸ್ತ್ರವನ್ನು ಗಿರ್ನಾರ್ ಬಳಿ ಚಂದ್ರಗಿರಿ ಗುಹೆಯಲ್ಲಿ ಕಲಿತರು ಮತ್ತು ಜೇಷ್ಠಮಾಸದ ಶುಕ್ಲಪಕ್ಷದ ಪಂಚಮಿಯಂದು ಈ ಗ್ರಂಥರಚನೆಯನ್ನು ಮುಗಿಸಿದರು. ಆ ದಿನ ದಿಗಂಬರರ ಪವಿತ್ರ ಗ್ರಂಥವನ್ನು ಲಿಪಿಬದ್ಧಗೊಳಿಸಲಾಯಿತು. ಶ್ರುತಪಂಚಮಿ ಉತ್ಸವವನ್ನು ಈ ಘಟನೆಯ ಸ್ಮರಣಾರ್ಥವಾಗಿ ಆಚರಿಸಲಾಗುವುದು".[30] ಕ್ರಿ.ಶ. 1028ರ ಷಟ್ಖಂಡಾಗಮನದ ಪ್ರಾಚೀನತಮ ಪ್ರತಿಯೊಂದು ಮೂಡಬಿದ್ರೆಯ ಶ್ರೀ ಜೈನ ಮಠದಲ್ಲಿ ರಕ್ಷಿಸಿಡಲಾಗಿದೆ. ಈ ಧರ್ಮಗ್ರಂಥದ ಪ್ರತಿ ತಯಾರಿಸಲು ಧಾರಾಳವಾಗಿ ಹಣವನ್ನು ಕೊಡುಗೆಯಾಗಿ ನೀಡಲಾಯಿತು ಎಂದು ದಾಖಲೆಗಳು ಹೇಳುತ್ತವೆ. ಹೀಗೆ ಸಂಗ್ರಹವಾದ ಹಣವನ್ನು ಧಾರ್ಮಿಕ ಪ್ರವಚನಗಳನ್ನು ಏರ್ಪಡಿಸಲು ಜೈನಧರ್ಮ ಗ್ರಂಥಗಳನ್ನು ಬಸದಿಗಳಲ್ಲಿ ಸೇರುವ ಜೈನರಿಗೆ ಓದಿ ಹೇಳಲು ಮತ್ತು ಜೈನಸಮುದಾಯದ ಸಾಹಿತಿಗಳ ಬಳಕೆಗಾಗಿ ಉಪಯೋಗಿಸಲಾಯಿತು".[31] ಈ ಗ್ರಂಥವನ್ನು ಧವಳಾಗ್ರಂಥವೆಂದು ಕರೆಯುತ್ತಾರೆ. ಇದು ಸುಮಾರು 800 ವರ್ಷಗಳಿಂದ ಸಂರಕ್ಷಿಸಿಕೊಂಡು ಬಂದಿರುವ ಅಖಿಲ ಭಾರತೀಯ ಏಕೈಕ ಹಸ್ತಪ್ರತಿಯೆಂಬ ಮನ್ನಣೆಗೆ ಪಾತ್ರವಾಗಿದೆ. ಜಗತ್ತಿನ ಗ್ರಂಥ ಸಂಪಾದನಾಶಾಸ್ತ್ರಕ್ಕೆ ಧವಳಾ ಹಸ್ತಪ್ರತಿಯು ಅಮೂಲ್ಯವಾದ ಕಾಣಿಕೆಯನ್ನು ಕೊಟ್ಟಿದೆ ಎಂಬುದನ್ನು ನಾವಿಲ್ಲಿ ನೆನೆಯಬಹುದಾಗಿದೆ.

ಕರ್ನಾಟಕದ ದಕ್ಷಿಣ ಭಾಗದಲ್ಲಿ ಜೈನರು ಸರಸ್ವತಿಯನ್ನು ಆರಾಧಿಸುವುದರ ಮೂಲಕ ಶ್ರುತಪಂಚಮಿಯನ್ನು ಆಚರಿಸುವರು. ಆಕೆಯನ್ನು ಶ್ರುತದೇವತೆಯೆಂದು ಕರೆದು ಆರಾಧಿಸುವರು. ಸರಸ್ವತಿಯನ್ನು ಶಾರದೆ, ಭಾರತಿ ಎಂಬ

ನಾನಾ ಹೆಸರುಗಳಿಂದ ಕರೆದಿದ್ದಾರೆ. "ಆಕೆಯನ್ನು ವಿದ್ಯಾರ್ಥಿ ದೇವತೆಯೆಂದು ಸ್ತುತಿಸಲಾಗಿದೆ. ಜಿನಾಗಮದ ದ್ವಾದಶಾಂಗಗಳನ್ನು ಶ್ರುತದೇವತೆಯ ನಾನಾ ಅಂಗಗಳೆಂದು 14 ಪೂರ್ವಗಳನ್ನು ಆಕೆಯ ಆಭರಣಗಳೆಂದೂ ವಿವರಿಸಲಾಗಿದೆ"[32] ಸಾಹಿತ್ಯದಲ್ಲಿ ಮತ್ತು ಶಾಸನಗಳಲ್ಲಿ ಬಳಸಿರುವ ಜಿನಶಾಸನ, ಜಿನಮಾತೆ, ಜಿನಮಣಿ ಎಂಬ ಪದಗಳು ಆಕೆಯ ಮೂರ್ತ ಮತ್ತು ಅಮೂರ್ತ ರೂಪಗಳನ್ನು ಸೂಚಿಸುತ್ತವೆ. ಆಕೆಯನ್ನು ಶ್ರುತದೇವಿ ಎಂದು ಶ್ರುತಪಂಚಮಿಯಂದು ಆಗಮಗ್ರಂಥಗಳನ್ನಿಟ್ಟು ಪೂಜಿಸುತ್ತಿದ್ದರು."[33] ಜೈನರ ದೃಷ್ಟಿಯಲ್ಲಿ ಸರಸ್ವತಿಯೆಂದರೆ ಕೇವಲ ಸ್ತ್ರೀ ರೂಪವಲ್ಲ ಅದು ಪರಮ ಜಿನವಾಣಿಯೇ ಎಂಬುದನ್ನು ಮಹಾಕವಿ ಪಂಪನ ಈ ಪದ್ಯ ಸ್ಪಷ್ಟಪಡಿಸುತ್ತದೆ.

"ಪರಮ ಜಿನೇಂದ್ರವಾಣಿಯೇ ಸರಸ್ವತಿ ಬೇರದು ಪೆಣ್ಣರೂಪಮಂ
ಧರಿಯಿಸಿ ನಿಂದುದಲ್ಲದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ
ದರಿಸುವ ಭವ್ಯ ಕೋಟಿಗೆ ನಿರಂತರ ಸೌಖ್ಯಮನೀವುದಾನದ
ರ್ಕೆರೆದಪೆನಾ ಸರಸ್ವತಿಯೆ ಮಾಲ್ಕೆಮಗಿಲ್ಲಿಯೇ ವಾಗ್ವಿಳಾಸಮಂ"[34] (ಪಂಪಃ ಆದಿಪುರಾಣ 1–9)

ಆದುದರಿಂದ ಸಮ್ಯಕ್ ಜ್ಞಾನದ ಸ್ವರೂಪವಾದ ಶಾಸ್ತ್ರಗಳನ್ನು ಗೌರವಿಸಿ, ಪೂಜಿಸುವುದಲ್ಲದೆ ಅದನ್ನು ತಿಳಿಯಲು ಪ್ರಯತ್ನಿಸುವುದರಲ್ಲಿ ಈ ಶ್ರುತಪಂಚಮಿಯ ಸಾರ್ಥಕತೆಯಿದೆ. ಆದುದರಿಂದ ಈ ಹಬ್ಬವು ಜೈನರಲ್ಲಿ ವಿಶೇಷತೆ ಪಡೆದುಕೊಂಡಿದೆ. ಶ್ರುತಪಂಚಮಿಯ ಆಚರಣೆ, ಆರಾಧನೆಗೆ ಸಂಬಂಧಿಸಿದಂತೆ ಕೆಲವು ಶಾಸನ, ಐತಿಹ್ಯಗಳಲ್ಲಿ ಸಾಕ್ಷ್ಯಾಧಾರಗಳು ದೊರೆತಿದ್ದು ಅದರ ಮಹತ್ವವನ್ನು ವಿವರಿಸುತ್ತವೆ. ಅಂತಹ ಒಂದೆರಡು ಉಲ್ಲೇಖಗಳನ್ನು ಈ ಸಂದರ್ಭದಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ.

"ಕ್ರಿ.ಶ. ಸುಮಾರು 1116 ಮತ್ತು 1120ರಲ್ಲಿ ಮಹಾಮಂಡಲೇಶ್ವರನಾದ ಭುಜಬಲ ಗಂಗ ಪೆರ್ಮಾಡಿಯ ಅತ್ತೆಯಾದ ರವಿದೇವಿಯ ಮಕ್ಕಳು ಶ್ರುತಪಂಚಮಿ ಉತ್ಸವವನ್ನು ಆಚರಿಸಿ ತನ್ನ ಗುರುವಾದ ಶುಭಚಂದ್ರ ಸಿದ್ಧಾಂತ ದೇವರಿಗೆ ಷಟ್ಖಂಡಾಗಮದ ಪ್ರತಿಗಳನ್ನು ಮಾಡಿಸಿಕೊಟ್ಟಳು. ಆಕೆಯು ತನ್ನ ಗುರುವಾದ ಶುಭಚಂದ್ರ ಸಿದ್ಧಾಂತ ದೇವರ ಸಮ್ಮುಖದಲ್ಲಿ ಶ್ರುತ ಪೂಜೆಯನ್ನು ಮಾಡಿದಳು"[35]

"ಶ್ರವಣಬೆಳಗೊಳದ ಒಂದು ಶಾಸನವು ದೇಮವತಿ (ದೇವಿಯಕ್ಕ) ಸರಸ್ವತಿಯನ್ನು ಸ್ತುತಿಸಿ ಕ್ರಿ.ಶ. 1120ರಲ್ಲಿ ಆಕೆ ಸನ್ಯಸನ ವಿಧಿಯಿಂದ ಮೃತಳಾದದ್ದನ್ನು ಉಲ್ಲೇಖಿಸುತ್ತದೆ. ದೇಮವತಿಯು ರಾಜವರ್ತಕ ಚಾಮುಂಡನ ಪತ್ನಿ ಮತ್ತು ಲಕ್ಕಲೆ (ಲಕ್ಷ್ಮೀಮತಿ)ಯ ಸೋದರಿ ಈ ಲಕ್ಷ್ಮೀಮತಿಯು ವಿಷ್ಣುವರ್ಧನನ ಪ್ರಧಾನ ಸೇನಾಪತಿಯಾದ ಗಂಗರಾಜನ ಹೆಂಡತಿ ಸನ್ಯಸನ ವಿಧಿಯನ್ನು ಸ್ವೀಕರಿಸಿ ದೇಮವತಿಯು ಮೃತಳಾದಾಗ ಆಕೆಯ ಸೋದರಿಯೂ ಗಂಗರಾಜನ ರಾಣಿಯೂ ಆದ ಲಕ್ಷ್ಮೀಮತಿಯು ದೇಮವತಿಯ ಸ್ಮಾರಕಾರ್ಥವಾಗಿ ಒಂದು ಮಾನಸ್ತಂಭವನ್ನು ನಿರ್ಮಿಸಿದಳು"[36]

"ಶ್ರುತ ಪಂಚಮಿಯದಿನ ಪವಿತ್ರ ಗ್ರಂಥಗಳನ್ನು ಪೂಜಿಸುವುದು ಮಾತ್ರವಲ್ಲದೆ ಆ ಪವಿತ್ರ ಗ್ರಂಥಗಳನ್ನು ವಿದ್ವಾಂಸರ ಬಳಕೆಗಾಗಿ ಬರೆಸಿ ಪ್ರತಿಗಳನ್ನು ಮಾಡಿಸುತ್ತಿದ್ದರು ಎಂಬ ಅಂಶ ಮೇಲಿನ ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಶಾಸ್ತ್ರದಾನದ ಮೂಲಕ ಜೈನ ಸಮಾಜದ ಮೇಲ್ವರ್ಗದವರು ಜೈನಧರ್ಮದ ಪವಿತ್ರ ಗ್ರಂಥಗಳಾದ ಜ್ಞಾನವನ್ನು ರಕ್ಷಿಸುವ ಮತ್ತು ಪ್ರಚಾರ ಮಾಡುವ ಪವಿತ್ರ ಕರ್ತವ್ಯವನ್ನು ಮಾಡುತ್ತಿದ್ದರು."[37]

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸಂಶೋಧನಾ ಪ್ರತಿಷ್ಠಾನದ ಶೋಧನಾ ಕಾರ್ಯದಲ್ಲಿ ಅಪೂರ್ವವೆಂಬಂತೆ, ದೊರಕಿದ 'ಜೈನ ಗ್ರಂಥಸ್ಥಹಾಡುಗಳು' ಎಂಬ ತಾಡೋಲೆ ಪ್ರತಿಯಲ್ಲಿರುವ, ಶ್ರುತಪಂಚಮಿಯ ಹಬ್ಬಕ್ಕೆ ಸಂಬಂಧಿಸಿದ "ಕೊಲೆಯ ಸ್ರ(ಶ್ರು)ತ ಪಂಚಾಮಿ ವ್ರತದ ಉದಯರಾಗ ಎಂಬ ಹಾಡೊಂದು ಹೀಗಿದೆ.

''ಕೊಲೆಯ ನೃತಕವು ಪರದಾರ ಅತಿಕಾಂಕ್ಷಿಗಳ।
ಸಲೆವಿಸರ್ಜಿಸಿ ಪಂಚಪರಮೇಷ್ಟಿಗಳ ಪದವ
ನಲವಿನಿಂ ಧ್ಯಾನಿಸೈಸ್ವರ್ಗಾಪ ವರ್ಗಾಗಸುಲಭದಿಂ ಪಡೆಯಬಹುದ್ಯೆ
ಕೊಲೆಯ ನೃತ ಕಗವು ॥ಪಲ್ಲ॥

ಕೊಲೆಯಂಬುದಿಗತನ್ನಯ ಕೊಲೆಗೆ ಕೊಟ್ಟ ಬೆಲೆ।
ಕೊಲೆ ತನ್ನ ಕೊರಳೆದೆಯ ಮುರಿದೊತ್ತಿಣಲುವ ಕೊಲೆ।
ಕೊಲೆ ಅಹಿಂಸಾ ವೃತದ ಚರಣಕ್ಕ ಹೊತ್ತಮಾಲೆ।
ಕೊಲೆ ಜನ್ಮಗಳ ಕೊಡಿಲೆ।
ಕೊಲೆಗೊಂದಾತ ಬಲು ಸಪ್ತ ನರಕಗಳ ನೆಲೆ।
ಕೊಲೆ ಜೈನ ಮಾರ್ಗದಲಿ ಬಿಡತಕ್ಕ ಮೊದಲನೆಲೆ।
ಕೊಲೆಯ ನದರಿಂದ ನುಳಿಯ್ತೋ॥ ಮನುಜಾ॥
ಕೊಲೆಯ ನೃತ ಕಗವು.
ಪುಸಿ ತನ್ನ ಮುರಿದುನುಂಗುವ ಮೃತ್ಯುದೇವಿಯಸಿ।
ಪುಸಿ ನಿಜೈಶ್ವರ್ಯಲಕ್ಷ್ಮೀ ಮುಖಾಂಬುಜಕೆ ಸಸಿ।
ಪುಸಿ ಪುಣ್ಯ ಮಾರ್ಗದಲಿ ನಟ್ಟಕಬ್ಬನದವಸಿ।
ಪುಸಿಯಲಾಗದು ನಂಬಿಸಿ।
ಪುಸಿ ವಿಮಲಕೀರ್ತಿಕಾಂತೆಯ ಮುಖಕೆ ತೊಡೆದ ಮಸಿ।
ಪುಸಿ ಸಕಲಸುವೃತದ ಫಲವ ಕೆಡಿಸುವ ಸಹಸಿ।
ಪುಸಿ ಬಾಲ್ಯದೆಂದು ಮನದೊಳಗೆ ನಿಶ್ಚಯಸಿ ।
ಪುಸಿಯ ಕವ(ನ)ಸಿನೊಳು ಮೆರೆಯ್ಯೆ ॥ಮನುಜಾ॥''[38]

ಇದೇ ರೀತಿ ಶ್ರುತ ಪಂಚಮಿಯು ಶಾಸ್ತ್ರಗ್ರಂಥಗಳ, ಜಿನವಾಣಿ, ಶಾರದಾವಾಣಿ, ವೀಣಾದಾಣಿಯೆನಿಸಿರುವ ಶ್ರೀ ಸರಸ್ವತಿಯ ಆರಾಧನೆಯಾಗಿರುವುದರಿಂದ ''ಶ್ರೀ ಸರಸ್ವತೀ (ಶ್ರುತ) ಪೂಜೆ'' ಎಂಬ ಹಾಡನ್ನು ಈ ಸಂದರ್ಭದಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. ಆದ್ದರಿಂದ ಅಧ್ಯಯನದ ದೃಷ್ಟಿಯಿಂದ ಈ ಹಾಡನ್ನು ಇಲ್ಲಿ ಪ್ರಸ್ತಾಪಿಸುವ ಪ್ರಯತ್ನ ಮಾಡಿದ್ದೇವೆ.

''ದೇವಿಯೇ ಶ್ರೀ ವಾಣಿಯೆ ನಿನ್ನಯ। ಪಾವನ ಪದಗಳ ಪೂಜಿಪೆನು।
ಭಾವಶುದ್ಧಿಯಲಿ ಸ್ಮರಿಸುತ ಅನುದಿನ। ಸೇವಿಪ ಸನ್ಮತಿ ಕೊಡು ನೀನು ॥ಪಲ್ಲವಿ॥
ಹಲವು ಜನುಮದಲಿ ಗಳಿಸಿಹ ಪಾಪದ। ಕೊಳೆಯನು ನೀಗಲು ನಾ ನಿನ್ನ॥
ಇಳೆಯೊಳಗುತ್ತಮವೆನಿಸಿಹ ನದಿಗಳ। ಜಲವನು ಎರೆಯುವೆ ಸಲಹೆನ್ನಾ॥ ದೇವಿ....॥ಜಲಂ॥
ಹಿಂದು – ಮುಂದು ಇದನೊಂದನು ಅರಿಯದೇ। ನೊಂದು ಬಾಡಿಹೆನು ಜೀವನದಿ॥
ಅಂದದ ತನು – ಮನ–ಹೊಂದಲು ಕೇಸರಿ। ಗಂಧಗಳಿಂದಲಿ ಪೂಜಿಪೆನು ॥ಗಂಧ॥
ಮುನಿಜನ ನಿರತವು ಸ್ಮರಿಸುವ। ಪರಮಾಗಮಗಳ ನಾಯಕಿಯೇ।
ಮರುಳು ಮನದ ಈ ಕೊರತೆಯ ನೀಗಲು। ಹರುಷದೊಳರ್ಚಿಪೆ ಅಕ್ಷತೆಯ ॥ಅಕ್ಷತಂ॥
ಸರಸಿಜ ಆಸನ ಒಡೆಯನ ಮುಖದಿಂ। ಪೊರಟಿಹ ವಾಣಿ ಸರಸ್ವತಿಯೇ॥
ದೊರಕಿದ ಜೀವನ ಹರುಷದಿ ಬಾಳಲು। ವರ ಸುಮರಾಶಿಯ ಅರ್ಚಿಪೆನು ॥ಪುಷ್ಪಂ॥
ನರನಾರಕ ಮೊದಲಾದ ಗತಿಗಳಲಿ। ತಿರುಗಿ ತಿರುಗಿ ನಾ ಬಳಲಿಹೆನು॥

ಚಿರಸುಖ ದಾರಿಯ ಪಡೆಯಲು ನಿನ್ನಡಿ। ವರಭಕ್ಷ್ಯಗಳನು ಅರ್ಚಿಪೆನು ॥ದೇವಿ॥ ಚರು೦॥
ಸತ್ಯ-ಧರ್ಮಗಳ ಸೊತ್ತನು ಕೈಯೊಳು। ಎತ್ತಿ ಪಿಡಿದು ನೀ ಸಜ್ಜನರಾ॥
ಚಿತ್ತದಿ ಬೆಳಗುವೆನುತ್ತಮ ತವ-ಪದ। ಕೆತ್ತುವೆ ದೀಪ ಸಮೂಹದಲಿ ॥ದೇವಿಯೇ.....॥ದೀಪಂ॥
ಪಾಪಸಮೂಹದ ತಾಪದಿ ಬೆಂದಿಹ। ಪಾಪಿಯಾದೆನ್ನನು ಮಮತೆಯಲಿ॥
ಕಾಪಾಡೆನ್ನುತ ನಿನ್ನಯ ಚರಣಕೆ। ಧೂಪವನರ್ಚಿಪೆ ಭಕ್ತಿಯಲಿ ॥ದೇವಿಯೇ......॥ಧೂಪಂ॥
ವಾಣಿಯ ವರದ ಕಲ್ಯಾಣಿಯೆ ಅನುದಿನ। ನೀನೆನಗೊಲಿಯೆಂದೆನ್ನುತಲಿ॥
ದೀನನೆನ್ನ ಮತಿಹೀನತೆ ನೀಗಲು ನಾನರ್ಚಿಪೆ ಸತ್ಫಲಗಳನು ॥ದೇವಿಯೆ.... ಫಲಂ॥
ವೀಣಾಪಾಣಿ ಸರಸ್ವತಿ ನೀನು। ಜ್ಞಾನವ ವರ್ಧಿಸು ಎನ್ನುತಲಿ॥
ವಾಣಿಯೇ ಕರ್ಮ ಕೃಪಾಣಿಯೇ ಪಟ್ಟೆಯೇ। ವಸ್ತ್ರವನರ್ಚಿಪೆನಾತುರದಿ। ದೇವಿಯೇ......॥ವಸ್ತ್ರಾಭರಣಂ॥
ಜಲಗಂಧಾಕ್ಷತೆ – ಸುಮ – ಚರು – ದೀಪವ। ಬೆಳಗುವ ಧೂಪ –ಸತ್ಫಲಗಳನು॥
ಒಳ–ಹೊರಗಡೆ ಇಹ ಮಲಿನವ ನೀಗಲು। ಚೆಲುವಾಂತರ್ಘ್ಯ ವನರ್ಚಿಪೆನು॥ಅರ್ಘ್ಯಂ॥
ಇಳೆಯೊಳಗಿನ ಜನರೊಳಗಿನ ದ್ವೇಷವು। ಅಳಿಯುತ ಮತ್ಸರ ತೊಲಗುತಲಿ॥
ಗೆಲುವಿನ ಶಾಂತಿಯು ದೊರಕಲು ನಿರ್ಮಲ।
ಜಲದಲಿ ಶಾಂತಿಯ ಧಾರೆಯ ನೆರೆಯುವೆ ॥ದೇವಿ......॥ಶಾಂತಿಧಾರಾ॥
ವರಜಿನವಾಣಿಯೇ ಸದ್ಗುಣ ಶ್ರೇಣಿಯೇ। ನಿರುಪಮವೆನಿಪ ಪಂಚಾಕ್ಷರಿಯೇ॥
ಧರೆಯೊಳಗುತ್ತಮ ಪರಿಮಳ ಬೀರುವ। ತರತರ ಪುಷ್ಪವನರ್ಚಿಪೆನು॥
ದೇವಿಯೇ ಶ್ರೀ ಜಿನವಾಣಿಯೇ ನಿನ್ನಯ। ಪಾವನಪದಗಳ ಪೂಜಿಪೆನು॥॥ಪುಷ್ಪಾಂಜಲಿಃ॥[39]
(ರಚಿತರು: ಜ್ಯೋತಿಷಿ ಜಗತ್ಪಾಲಯ್ಯ)

## ಸರಸ್ವತಿಯ ಸ್ತೋತ್ರ

**ಚಾಲ ॥ ಸರಸಿಜಾ ಸರಸುಂದರಾ ॥**

ಪಾಲಿಸು ಶಾರದಿಯೇ ।
ದಯಾನಿಧಿಯೇ ಅರಿಯನ್ನು ಮನೋಹಾರಿಯೇ ॥ಪಲ್ಲ॥
ಚಾರುಮತಿಯೇ । ತಾರ ತಾಯೆ।
ಯಾರುಗತಿಯೇ । ಸರ್ವಕಾಲ ॥
ಅರುವ ಇರಲಿ । ಮರುವ ಬೇಡಾ ॥
ವರವಕೊಡು । ಕರಿಯಗಮನೆ ॥ 1 ॥ ಪಾ ॥
ಕಾಮಧೇನು ಕಲ್ಪವೃಕ್ಷ ನೀ ।
ಸಮಾಜಕ್ಕೆ ಪರಮಪವಿತ್ರೆ ಜನನಿ ॥
ವಿದ್ಯಾದಾಯಿನಿ । ಬುದ್ಧಿವಂತಿ ।
ಸರ್ದ್ಯ ನಡೆದು ಬೋಧನ ಪದ ॥
ಶುದ್ಧವಾಗಿ । ಸಿದ್ಧಪಡಿಸು ।
ಪಾದಪದ್ಮ ಮುದದಿ ಪೂಜಿಪೆ ॥ 2 ॥ ಪಾ ॥
ಕೋಮಲಾಂಗಿ ಘನಚರಿತ್ರೆ।
ಜಗನ್ಮಿತ್ರೆ ಸುರವರಗೆ ಸುಖಪಾತ್ರೆ॥

ಅವನಿಯೊಳು। ರವಿಯಸೋ ಮಾದಿ ।
ದೇವಲೋಕದ । ಭಾವಿಕರಿಗೆ ॥
ಸವಿಯು ಆಗಿ । ಕವಿಯು ತೋರಲಿ
ಸುವಿಚಾರಿಣಿ। ದೇವಿ ನೀನು ॥ 3 ॥ ಪಾ ॥
ನಂಬಿದೆ ನಂಬಿದೆ ನಾ ।
ಯರಕದ ಗೊಂಬಿ ಸುಖಕರ ನಿನ್ನ ದರ್ಶನಾ ॥
ಒಂದಕೊಂದು । ಹೊಂದಿ ಪ್ರಾಸವ ।
ಚಂದವಾಗಿ । ಸಂದುಕೂಡಲಿ॥
ಕಂದ ನಾನು । ಮಂದ ಮತಿಯೇ ।
ಬಂದುಕಾಯೆ। ಇಂದು ವದನೆ ॥ 4 ॥ ಪಾ॥
ಧನ್ಯ ಧನ್ಯ ಧನ್ಯ ಗುಣಮಣಿ ।
ರತ್ನದ ಖಣಿ ಪಾಹೆ ನಾಗವೇಣಿ।
ಬಾರೆ ಬ್ರಹ್ಮಾಣಿ । ಶ್ರುತವಾಣಿ ।
ಧೃತವೇಣಾ । ಕೃತಪಾಣಿ।
ಶರಣತರುಣಿ । ದುರಿತ ಹರಿಣಿ ।
ಕೃಪಾಣಿ ತೋರ ಕರುಣಿ ॥ 5 ॥ ಪಾ ॥
ಹಲವು ಹಂಬಲ ಹರಿಯೆ ।
ಗುರುವರಿಯೆ ಕಾರ್ಯಕ್ಕೆ ಸಹಾಯಕಾರಿಯೇ ॥
ಎಳಿಯನಗಿಯೇ । ಸುಳಿಯಬಾಳೀ ।
ಹೊಳೆವ ಕಳೆಯೇ । ನಳಿಯನಾಕ್ಷಿ ॥
ಬಾಳ ಬಹಳ । ಬಳಲುವೆನು ।
ಕಾಳಕೆಟ್ಟ । ಕಳಿಯಜಾಣಿ ॥ 6 ॥ ಪಾ ॥
ಅನುದಿನ ಸೇವಿಸುವಾ ।
ಮಾಯಕಾರತಿ ಸಸಿಯಂತೆ ನಿನ್ನ ಶಿಶುವಾ ॥
ಹರುಷದಿಂದ । ದ್ವಾರಪಾಲ ।
ಶಿರಸವ್ರೂರಿ । ಅರಸಿಪಾದಕೆ ।
ಸರಸವಾದ । ಪ್ರಾಸದಪದ ।
ಮೆರಸುವನು । ಧರಿಯ ಮೇಲೆ ॥ 7 ॥[40]

## ಅಕ್ಷಯ ತದಿಗೆ/ಅಕ್ಷಯ ತೃತೀಯ

ಭಾರತೀಯ ಸಂಪ್ರದಾಯದಲ್ಲಿ ಅಕ್ಷಯತದಿಗೆ ಹತ್ತುಹಲವು ಮಹಾಪುರುಷರ ಜನ್ಮ ದಿನವಾಗಿದೆ. ಕನ್ನಡನಾಡಿನ ಪರಶುರಾಮ, ಔರಂಗಜೇಬನಂಥ ಬಲಿಷ್ಠ ರಾಜನನ್ನು ಮಣಿಸಿ ಹಿಂದೂ ಧರ್ಮ ಧ್ವಜವನ್ನು ಬಾನೆತ್ತರಕ್ಕೆ ಹಾರಿಸಿದ ಛತ್ರಪತಿ ಶಿವಾಜಿಯ, ಬಸವೇಶ್ವರ ಹೀಗೆ ಅನೇಕರ ಜನ್ಮದಿನ, ಈ ದಿನ ಹತ್ತು ಹಲವು ಹೊಸ – ಹೊಸ ಕಾರ್ಯಕ್ರಮಗಳನ್ನು ಆರಂಭಿಸುತ್ತಾರೆ. ನಮ್ಮ ರೈತರು ಹೊಲದಲ್ಲಿ ಮೊತ್ತಮೊದಲು ಉತ್ತು ಬಿತ್ತುವುದಕ್ಕೆ ಅಕ್ಷಯ ತದಿಗೆ ಪುಣ್ಯ ಮುಹೂರ್ತವಾಗಿದೆ. ಆದರೆ ಜೈನ ಸಂಪ್ರದಾಯದಲ್ಲಿ ಈ ಹಬ್ಬದ ಆಚರಣೆಯ ಹಿಂದಿನ ಉದ್ದೇಶವೇ ಬೇರೆಯಾಗಿದೆ. ಹನ್ನೆರಡು ತಿಂಗಳು ಸುದೀರ್ಘವಾದ ಉಪವಾಸದ ನಂತರ ಶ್ರೇಯಾಂಶ ರಾಜನು

ವೈಶಾಖ ಶುದ್ಧ ತದಿಗೆಯ ದಿನ ಭಕ್ತಿ ಭಾವದಿಂದ ಆದಿ ತೀರ್ಥಂಕರರಿಗೆ ಆಹಾರ ನೀಡುವ ಕ್ರಮವರಿತು ಇಕ್ಷುರಸವನ್ನು ನೀಡಿದರು. ಆಹಾರ ದಾನದ ಮಹಿಮೆಗಾಗಿ ಅದನ್ನು ಅಕ್ಷಯದಾನವೆಂದೂ ಆತನನ್ನು ದಾನ ಶ್ರೇಯಾಂಸನೆಂದೂ ಶಾಸ್ತ್ರಗಳಲ್ಲಿ ಹೊಗಳಲಾಗಿದೆ. ಅಂದಿನಿಂದ ಈ ದಿನವನ್ನು ಅಕ್ಷಯ ತದಿಗೆ ಪರ್ವವನ್ನಾಗಿ ಜೈನರು ಆಚರಿಸಿಕೊಂಡು ಬರುತ್ತಿದ್ದಾರೆ.

ಹಸ್ತಿನಾಪುರದ ಅರಸು ಸೋಮಪ್ರಭನ ಬಂಧು ಶ್ರೇಯಾಂಸ ಕುಮಾರನೆಂಬುವನು ಒಂದು ಬೆಳಗಿನ ಜಾವ ಶುಭ ಕನಸನ್ನು ಕಂಡನು. ಅದರಲ್ಲಿ ಸಿಂಹ, ವೃಷಭ, ಸೂರ್ಯ, ಚಂದ್ರ, ಸಮುದ್ರ, ಮೇರುಪರ್ವತ ಹಾಗೂ ಅಷ್ಟಮಂಗಲ ದ್ರವ್ಯಪೋಷಿತರಾದ ವ್ಯಂತರ ದೇವತೆಗಳನ್ನು ಕಂಡನು. ಅದರಿಂದ ಆದಿನಾಥ ಋಷಭನಾಥರಿಗೆ ಆಹಾರ ನೀಡಬೇಕೆಂಬ ಬಯಕೆ ಉಂಟಾಯಿತು. ಋಷಭನಾಥರ ವಜ್ರಜಂಘ ಭವದಲ್ಲಿ ಶ್ರೇಯಾಂಸ ಕುಮಾರನು ಅವರ ರಾಣಿ ಶ್ರೀಮತಿಯಾಗಿದ್ದು, ಅವರಿಬ್ಬರೂ ಕೂಡಿ ಒಬ್ಬ ಗಗನವಿಹಾರಿ ಮುನಿಗಳಿಗೆ ಆಹಾರ ವಿತ್ತ ಕ್ರಮವು ನೆನಪಿಗೆ ಬಂದು, ಕೃತಯುಗದಲ್ಲಿ ಆದಿತೀರ್ಥಂಕರರಿಗೆ ಆಹಾರ ನೀಡುವಂತ ಭಾಗ್ಯವೊದಗಿಬಂತು. ಹೀಗೆ ನೀಡಿದ ಆಹಾರದಲ್ಲಿ ಇಕ್ಷುರಸವೇ ಇತ್ತು ಅದರಿಂದಾಗಿ ಇಂದಿಗೂ ಅಕ್ಷಯ ತೃತೀಯ ಶುಭದಿವಸ. ಜಿನಮಂದಿರಗಳಲ್ಲಿ ತೀರ್ಥಂಕರರಿಗೆ ಕಬ್ಬಿನ ರಸದ ಅಭಿಷೇಕ ಮಾಡುವರು.

ಪಂಪನು ಆದಿಪುರಾಣದಲ್ಲಿ ಹೇಳಿದ ಮಾತು ಈ ರೀತಿ ಇದೆ:

"ಶ್ರೀದಾನ ತೀರ್ಥಮೀತನಿ।
ನಾದುದು ಪೆರರ್ ಆದಿ ತೀರ್ಥಂಕರನಂ ನಿರಿಸ॥
ಲ್ಕೇ ದೊರೆಯದೀಗಳೀ ಯುಗ –
ದಾದಿಯೊಳೀತನೆ ಸರಸ್ವತಿ ಮಣಿಹಾರಂ॥ ವಚನ ॥
ಎಂಬಿನ ಆದಿತೀರ್ಥಕರ್ತಾರನಂ ಶ್ರದ್ಧಾದಿ ಸಪ್ತ ಗುಣ
ಸಂಪನ್ನನುಂ ಪ್ರತಿಗಹಾದಿ ನವವಿಧ ಪುಣ್ಯ ಪುರಸ್ಸರನುಮಾಗಿ
ನಿಲಿಸಿ ಕರ್ಮ ಭೂಮಿಯ ಮೊದಲೊಳು ಆದಿದಾನ ತೀರ್ಥ ಪ್ರವರ್ತಕಂ
ಶ್ರೇಯಾಂಸ ಮಹಾರಾಜಂ ಕನಕ ಕಳಸದೊಳ್ ತೀವಿದ ಅಮೃತರಸಸಮಾನ
ಧವಳೇ ಕ್ಷುಧಾರೆಯಂತೆ ಸೊಗಯಿಸುವಿನಂ ವಿಶಾಲ ಪಾಣಿಪಾತ್ರದೊಳೆರೆದಂ"[41]॥

ಈ ರೀತಿ ಪಂಪನು ಉಲ್ಲೇಖಿಸಿದ್ದಾನೆ. ಹೀಗೆ ಪ್ರಥಮ ತೀರ್ಥಂಕರ ವೃಷಭನಾಥರಿಗೆ ವಿಧಿಪೂರ್ವಕ ಆಹಾರವು ವೈಶಾಖ ಶುದ್ಧ ತೃತೀಯೆಯಂದು ಲಭಿಸಿತು. ವೃಷಭ ದೇವರು ಪ್ರಥಮ ತೀರ್ಥಂಕರರಾಗಿರುವಂತೆ, ಶ್ರೇಯಾಂಸ ರಾಜನು ಪ್ರಥಮ ದಾನ ಪ್ರವರ್ತಕನಾದನು. ಶ್ರೇಯಾಂಸನ ವಿಧಿಪೂರ್ವಕ ಆಹಾರ ದಾನ ಕಂಡು ಆಶ್ಚರ್ಯ ಚಕಿತರಾದವರಲ್ಲಿ ಆದಿನಾಥರ ಹಿರಿಯ ಪುತ್ರ ಭರತನೂ ಕೂಡ ಒಬ್ಬನು. ಭರತನು ಶ್ರೇಯಾಂಸ ರಾಜನನ್ನು ಆತ್ಮಪೂರಕವಾಗಿ ಅಭಿನಂದನೆಗೈದನು.

ಅಭಯದಾನ, ಶಾಸ್ತ್ರದಾನ, ಔಷಧದಾನ ಹಾಗೂ ಆಹಾರದಾನ ಈ ಚತುರ್ವಿಧ ದಾನಗಳಲ್ಲಿ ಆಹಾರದಾನವೇ ಶ್ರೇಷ್ಠವಾದುದು. ದಾನದ ಮಹತ್ವವನ್ನು ಕುರಿತ ಈ ಕೆಳಗಿನ ಪದ್ಯವನ್ನು ಗಮನಿಸಬಹುದು.

ಅನ್ನವು ಶಾಸ್ತ್ರವು ಭೈಷಜವು ಮನ್ನಿಸಿಕೊಡುವುದು ಮತ್ತೆ
ಚೆನ್ನಾಗಭಯವ ಮಾಡುವುದು ಇನ್ನಾಗಲಿ ಜನಕ್ಕೆಲ್ಲ
ಕಾವ್ಯರಸಾಮೃತ ಧಾರೆಗಳಿಂ ದಿವ್ಯ ಸುಖಾಂಬುಧಿಯಲ್ಲಿ
ಭವ್ಯರು ತಣ್ಣ ತಣಿದಿರಲಿ ಸೇವ್ಯರು ಬುಧರುಗಳಿಂದ"[42]
(ಕಲ್ಯಾಣಕೀರ್ತಿ; ಚಿನ್ಮಯ ಚಿಂತಾಮಣಿ 101–2)

ಆದ್ದರಿಂದ ಅಕ್ಷಯ ತದಿಗೆಯ ದಿನ ವೃಷಭನಾಥರಿಗೆ ಅಭಿಷೇಕ ಮಾಡುತ್ತಾ ಇಕ್ಷುರಸ (ಕಬ್ಬಿನರಸ)ದ ಅಭಿಷೇಕವನ್ನು ಮಾಡುತ್ತಾರೆ. ಆ ಕಬ್ಬಿನ ರಸ ಹೀಗಿತ್ತಂತೆ:

"ಪ್ರಾಣಿನಾಂ ಪ್ರೀಣನಂ ಕರ್ತುಂ ದಕ್ಷೈಃ ಇಕ್ಷುರಸೈರ್ಮುದಾ॥
ಸೌವರ್ಣಕಲಶೈಃ ಪೂರ್ಣೈಃ ಸ್ನಾಪಯೇಽಹಂ ನಿರಂಜನಂ॥

ಸಮಸ್ತ ಪ್ರಾಣಿಗಳಿಗೆ ಸಂತೋಷವನ್ನುಂಟು ಮಾಡುವುದಕ್ಕೆ ಸಮರ್ಥವಾದ ಕಬ್ಬಿನ ರಸದಿಂದ ತುಂಬಿದ ಬಂಗಾರದ ಕಲಸಗಳಿಂದ ಭಗವಾನ್ ವೃಷಭನಾಥನಿಗೆ ಅಭಿಷೇಕ ಮಾಡುತ್ತೇನೆ ಎಂದು ದೇವೇಂದ್ರನು ಕಬ್ಬಿನ ರಸದಿಂದ ಸ್ನಾನ ಮಾಡಿಸಿದನಂತೆ. ಹೀಗೆ ಪಂಚಾಮೃತ ಅಭಿಷೇಕ ಮಾಡಿ ವೃಷಭನಾಥ ಸ್ವಾಮಿಯ ಅಷ್ಟಕವನ್ನು ಹೇಳುತ್ತಾ ಪೂಜೆ ಮಾಡುವುದು"[43].

ಹೀಗೆ ಆರು ತಿಂಗಳು ಕಾಲ ಅನಶನ ವ್ರತವನ್ನು ಕೈಗೊಂಡಿದ್ದ ವೃಷಭನಾಥನಿಗೆ ಇಕ್ಷುರಸವನ್ನು ನೀಡಿ ಆಹಾರ ದಾನವನ್ನು ಮಾಡಿ ಆ ಶ್ರೇಯಾಂಸನು ಅಕ್ಷಯ ಸುಖವನ್ನು ಪಡೆದನೆಂದು ಜೈನಪುರಾಣಗಳು ವಿವರಿಸುತ್ತವೆ. ಈ ಘಟನೆಯ ಸ್ಮರಣೆಯ ರೂಪದಲ್ಲಿ ಶ್ರಾವಕರು, ವೃಷಭ ತೀರ್ಥಂಕರರಿಗೆ ವಿಶೇಷವಾಗಿ ಪೂಜೆ, ಅಭಿಷೇಕಗಳನ್ನು ನಡೆಸುತ್ತಾರಲ್ಲದೆ, ಅಭಿಷೇಕದಲ್ಲಿ ಕಬ್ಬಿನ ಹಾಲನ್ನು ವಿಶೇಷವಾಗಿ ಉಪಯೋಗಿಸುತ್ತಾರೆ. ವೃಷಭ ದೇವನ ಚರಿತ್ರೆಯ ಮನನ, ಉತ್ಸವಗಳನ್ನು ನಡೆಸುವುದರ ಜೊತೆಗೆ ಮುನಿಗಳಿಗೆ ಆಹಾರದಾನ ಮಾಡಲು ಶ್ರಾವಕರು ವಿಶೇಷ ಆಸಕ್ತಿಯನ್ನು ವಹಿಸುತ್ತಾರೆ. ಆಹಾರದಾನ ಮಾಡಬೇಕೆಂಬುದು ಈ ಹಬ್ಬದ ಉದ್ದೇಶವಾಗಿರುವುದರಿಂದ ಶ್ರಾವಕರು, ಆಹಾರ ದಾನದ ಜೊತೆಗೆ, ಶಾಸ್ತ್ರಾದಾನ, ಔಷಧದಾನ, ಅಭಯದಾನಗಳನ್ನು ನಡೆಸುತ್ತಾರೆ.

## ಮಹಾವೀರ ಜಯಂತಿ

"ಮಂಗಳಂ ಭಗವಾನ್ ವೀರೋ
ಮಂಗಳಂ ಗೌತಮೋ ಗಣೀ
ಮಂಗಳಂ ಕುಂದ ಕುಂದಾಚಾರ್ಯೋ
ಜೈನ ಧರ್ಮೋಸ್ತು ಮಂಗಳಂ"[44]

ಭಗವಾನ್ ಮಹಾವೀರರ ಜನ್ಮದಂದು ಅವರು ವಿಶ್ವಕ್ಕೆ ಸಾರಿ ಹೇಳಿದ ಅವರ ಸಂದೇಶ ಜೀವನ, ವಿಚಾರ, ಆಚಾರಗಳನ್ನು ಅರಿತು ಆಚರಿಸುವಲ್ಲಿ ಪ್ರಯತ್ನಿಸುವುದಾದರೆ, ಬ್ರಾತೃತ್ವ, ವಿಶ್ವಪ್ರೇಮ, ವಿಶ್ವಬಂಧುತ್ವಗಳು ನೆಲೆನಿಲ್ಲುವುದರಲ್ಲಿ ಒಂದಿಷ್ಟು ಸಂದೇಹವಿಲ್ಲ. ಈ ಕಾರಣಕ್ಕಾಗಿ ಮಹಾವೀರರ ಸಂದೇಶವು ನಮಗೆಲ್ಲರಿಗೂ ಆದರ್ಶವಾಗಬೇಕು. ಆದುದರಿಂದ 24ನೆಯ ಹಾಗೂ ಕೊನೆಯ ತೀರ್ಥಂಕರ ಮಹಾವೀರರು ಜನಿಸಿದ ದಿನವನ್ನು ಮಹಾವೀರ ಜಯಂತಿಯಾಗಿ ಆಚರಿಸುವರು. ಇದು ಚೈತ್ರ ಶುದ್ಧ ತ್ರಯೋದಶಿ (13)ಯಂದು ಬರುತ್ತದೆ. ಇದು ಜೈನರ ಪವಿತ್ರವಾದ ಹಬ್ಬವಾಗಿದೆ. ಜೈನಧರ್ಮದಲ್ಲಿ ಸಂಘವ್ಯವಸ್ಥೆ, ಸಮತಾಭಾವ, ಸತ್ಯ, ಅಹಿಂಸೆ, ಅಪರಿಗ್ರಹ, ಸಂಯಮ, ತಪ ಬ್ರಹ್ಮಚರ್ಯ, ತತ್ವಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಿ ಜಯಂತಿಯನ್ನು ಸಡಗರದಿಂದ ಎಲ್ಲರೂ ಸಾಮೂಹಿಕವಾಗಿ ಆಚರಿಸುತ್ತಾರೆ. ಏಕೆಂದರೆ ಮಹಾವೀರರು ಜೈನಧರ್ಮದ ಸಂಸ್ಥಾಪಕರಲ್ಲದಿದ್ದರೂ ಜೈನಧರ್ಮಕ್ಕೆ ತಮ್ಮ ಉಪದೇಶ ಸಂದೇಶಗಳಿಂದ ಭದ್ರ ಬುನಾದಿಯನ್ನು ಹಾಕಿದವರು. ಇದರಿಂದಾಗಿಯೇ ಜೈನಧರ್ಮದ ಸ್ಥಾಪಕನೆಂಬಂತೆಯೇ ಜನಮಾನಸದಲ್ಲಿ ಬಿಂಬಿತರಾಗಿದ್ದಾರೆ. ಅವರು ಧರ್ಮದ ಬಗ್ಗೆ ಅದರ ಮಹತ್ವ, ಶ್ರೇಷ್ಠತೆ, ಸರ್ವಕಾಲಿಕವಾದ ಸಂದೇಶ ಉಪದೇಶಗಳೇ ಅವರನ್ನು ಅತಿ ಎತ್ತರಕ್ಕೆ ಕೊಂಡೊಯ್ದಿದೆ. ಧರ್ಮದ ಶ್ರೇಷ್ಠತೆ

ಏನೆಂಬುದನ್ನು ಧರ್ಮ–ಕರ್ಮ ಎಂಬ ಒಂದು ಹಾಡನ್ನು ಗಮನಿಸಿದಾಗ ನಮಗೆ ಸ್ಪಷ್ಟವಾಗುತ್ತದೆ. ಆ ಹಾಡು ಹೀಗಿದೆ.

(ಬಾಡಿ ಹೋದ ಬಳ್ಳಿಯಿಂದ.......ಎಂಬಂತೆ)
ಜಾರಿಹೋದ ಜನ್ಮದಿಂದ। ಧರ್ಮ ಅರಳ ಬಲ್ಲದೇ?
ಕರ್ಮ ಪಡೆದ ಜೀವದಿಂದ । ಜ್ಞಾನ ಹರಿಯ ಬಲ್ಲದೇ?
ಮನುಜಕಂಡ ಆಸೆಯಲ್ಲ। ಕನಸಿನಂತೆ ಕರಗಿತಲ್ಲ ಉಲ್ಲಾಸ ಇನ್ನೆಲ್ಲಿದೇ ॥1॥
ಧರ್ಮದಲ್ಲಿ ಜೀವ ಉಳಿಯೆ। ಬೆಳಕಿನಲ್ಲಿ ಬಾಳುವೆ।
ಪಡೆದ ಕರ್ಮ ಉರಿಸುವಾಗ। ಕಳೆಯಲೆಲ್ಲಿ ಓಡುವೆ ॥ಕರ್ಮ॥
ಧರ್ಮದಲ್ಲಿ ಜೀವ ಮುಳುಗೆ। ಈಜಿ ಮುಕುತಿ ಸೇರುವೆ।
ಭ್ರಮೆಗೆ ಜೀವ ಸಿಲುಕಿದಾಗ। ಮುಕುತಿ ಸಿಗಲು ಸಾಧ್ಯವೇ?
ಬಾಳ ಮಮತೆಯೂಟದಲ್ಲಿ। ಬರಿಯ ಮೋಹ ಎಲ್ಲವು।
ಅರಿಯುವಾತ ಬೇರೆ ಅವನ। ಇಚ್ಛೆ ಯಾರು ಬಲ್ಲರು ॥2॥[45]

ಈ ಹಾಡು ಧರ್ಮದ ಮಹತ್ವವನ್ನು ಮುಕ್ತಿಯನ್ನು ಪಡೆಯುವಲ್ಲಿ, ಧರ್ಮಕ್ಕೆ ಅಡ್ಡಿಯಾಗುವ ಕರ್ಮದ ಎಡರು ತೊಡರುಗಳನ್ನು ನಿವಾರಿಸಲು ಅನುಸರಿಸುವ ಮಾರ್ಗವನ್ನು ಸಾರಿಹೇಳುತ್ತದೆ. ಇಂತಹ ಮಹಾನ್ ಸಂದೇಶವನ್ನು ಜಗತ್ತಿಗೇ ಸಾರಿದ ಮಹಾವೀರರ ಜಯಂತಿ ಅರ್ಥಪೂರ್ಣವಾದುದಾಗಿದೆ. ಆದುದರಿಂದ ಇತ್ತೀಚಿನ ದಶಕಗಳಿಂದೀಚೆಗಂತೂ ಜೈನರು ಮಹಾವೀರ ಜಯಂತಿಯನ್ನು ಬಹಳ ಸಂಭ್ರಮ ಸಡಗರದಿಂದ ಆಚರಿಸುವರು. ಬಸದಿಯಲ್ಲಿ ಮಹಾವೀರ ಪ್ರತಿಮೆಗೆ ವಿಶೇಷ ಪೂಜೆ, ಹಲವು ಬಗೆಯ ಅಭಿಷೇಕಗಳು ನೆರವೇರುತ್ತವೆ. ಮಹಾವೀರರ ತತ್ವಸಿದ್ಧಾಂತಗಳನ್ನು ಕುರಿತು ಉಪನ್ಯಾಸಗಳನ್ನೇರ್ಪಡಿಸುತ್ತಾರೆ. ಸಾರ್ವಜನಿಕ ಸಭೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ವಿಜೃಂಭಣೆಯಿಂದ ಜರುಗುತ್ತವೆ. ಅಲ್ಲದೆ ಸಭೆ ಸಮಾರಂಭ ಉತ್ಸವಗಳನ್ನು ನಡೆಸುತ್ತಾರೆ. ಶ್ರಾವಕರು ಉಪವಾಸ, ಏಕಭುಕ್ತ ಮುಂತಾದ ವ್ರತಾಚರಣೆಗಳಲ್ಲಿ ತೊಡಗುತ್ತಾರೆ. ದೀನಾನಾಥರಿಗೆ ದಾನವನ್ನು ರೋಗಿಗಳಿಗೆ ಉಪಚಾರ, ಸೇವೆ, ಉಚಿತವಾಗಿ ಹಣ್ಣು ಹಂಪಲುಗಳನ್ನು ವಿತರಿಸಿ, ಅವರ ದುಃಖದಲ್ಲಿ ಸಹಭಾಗಿಗಳಾಗಿ ಜೊತೆಗೆ ಅಹಿಂಸಾ ವ್ರತವನ್ನು ವಿಶೇಷ ಎಚ್ಚರಿಕೆಯಿಂದ ಪಾಲಿಸುತ್ತಾರೆ. ಈ ಹಬ್ಬ ದೇಶ–ವಿದೇಶಗಳಲ್ಲಿ ಅತೀ ವೈಭವದಿಂದ ನಡೆಯುವ ಹಬ್ಬವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಂದು ಸಾರ್ವಜನಿಕ ರಜೆ ಎಂದು ಘೋಷಿಸಿವೆ.

ಈ ಹಬ್ಬದ ದಿನ ಜೈನರು ಮಹಾವೀರ ಪ್ರತಿಮೆಗೆ ವಿಶೇಷ ಪೂಜೆಯನ್ನು ಕೈಗೊಂಡು ಅಷ್ಟಕಗಳಿಂದ ಅರ್ಚಿಸುವ ಒಂದು ಹಾಡನ್ನು ಪ್ರಸ್ತುತ ಪಡಿಸಲಾಗಿದೆ.

''ಪಾರಮಾರ್ಥದ ಸಾರತತ್ವವ। ಭೂರಿ ಜಗದೊಳು ಬೀರಿದಾ॥
ಧೀರ ಶ್ರೀ ಮಹಾವೀರ ಜನಪದ। ಚಾರು ಚರಣವ ಪೂಜಿಪೆಂ ॥ಪಲ್ಲವಿ॥
ಭೂತಳದೊಳತಿ। ಖ್ಯಾತಿ ಪಡೆದಿಹ। ವ್ರಾತನದನದಿ ನಿರ್ಮಲ॥
ತೀರ್ಥ ಪರಿಮಳಯುಕ್ತ ಪ್ರಾಸುಕ। ಶೀತಳೋದಕ ಧಾರೆಯಿಂ॥
ಜಾತಿ ಜನ್ಮವ ಮೃತ್ಯು ಹರಿಯಲು। ಪ್ರೀತಿಯಿಂದಲಿ ತ್ರಿಭುವನ॥
ನಾಥಶ್ರೀ ಮಹಾವೀರ ಜನಪನ ಪೂತ ಚರಣವ ಪೂಜಿಪೆಂ ॥ಜಲಂ॥
ಕರ್ಪೂರಾದಿ ಸುವಸ್ತುಗಳ ಬೆಳಸಿರ್ಪ ಕೇಸರ ಸಕಲ ದಿ–॥
ಕ್ಕೋಪದಿಕ್ಕಿಗೆ ದಿವ್ಯ ಪರಿಮಳ। ಪೋಪ ಚಂದನ ಗಂಧದಿಂ॥
ಪಾಪಲೇಪವ ತೊಳೆದು ಸಂಸ್ಕೃತಿ। ತಾಪಲೋಪವ ಗೈಯಲು॥
ಭೂಪಶ್ರೀ ಮಹಾವೀರ ಜಿನಪನ। ಶ್ರೀ ಪದುಬ್ಜವ ಪೂಜಿಪೆಂ ॥ಗಂಧಂ॥

ಸಣ್ಣ ಮಲುತ್ತಿನ ಮಣಿಗಳೋ ನವ। ರತ್ನ ಮಣಿಗಳ ಪುಂಜವೋ।
ಎನ್ನುವಂದದ ಅಕ್ಷತೆಯ ಹೊಸ। ಹೊನ್ನ ತಟ್ಟೆಯೊಳಿಟ್ಟು ನಾಂ॥
ಮಾನ್ಯ ಮುಕ್ತಿಯ ಪಡೆಯಲನುಭವ। ಬನ್ನವನು ಪರಿಹರಿಸಲು॥
ಧನ್ಯಶ್ರೀ ಮಹಾವೀರ ಜನಪದ। ಚೆನ್ನ ಚರಣವ ಪೂಜಿಪೆಂ ॥ಅಕ್ಷತಂ॥
ಕ್ರೂರ ಬಾಣವ ಬಿಟ್ಟು ಶೀಘ್ರದಿ। ಮೂರು ಲೋಕದ ಚಿತ್ತವ।
ಜಾರಿಸುವ ದುರ್ಮರಶರನ ವಿ–। ದೂರಗೈಯಲು ಬೇಗದಿಂ॥
ಪಾರಿಜಾತ ಸಿಕೇತಕೀ ವರ। ವಾರಿಜಾದಿಯ ಸುಮಗಳಿಂ॥
ಮಾರಮರ್ದನ ವೀರ ಜಿನಪನ। ನೀರಜಾಂಘ್ರಿಯ ಪೂಜಿಪೆಂ ॥ಪುಷ್ಪಂ॥
ನಿರುತ ಬಾಧೆಯ ನೀಡುತಿಹ ಅತೀದುರಿತ ವ್ಯಾಧಿ ಕ್ಷುಧಾ ತೃಷಾ॥
ತ್ವರಿತದಿಂ ಪರಿಹರಿಸಲೋಸುಗ। ಸುರುಚಿರಾಮಲ ಭಕ್ತಿಯಿಂ।
ಸುರತ ಕಂಪಿನ ಭಕ್ಷ್ಯ ಬಹುವಿದ। ಚರುವಿನಿಂ ನೆರೆ ಹರುಷದಿಂ।
ಕರುಣಾಸಾಗರ ವೀರ ಜಿನಪನ। ಚರಣ ಕಮಲದ ಪೂಜಿಪೆಂ ॥ಚರುಂ॥
ಭಾನುರಾಜನು ಬಾನೊಳುದಿಸಲು। ಹೀನ ತಮ ಪರಿವಂದದಿಂ।
ಜ್ಞಾನ ಕೇವಲ ಜ್ಯೋತಿಯಂ ಅ–। ಜ್ಞಾನ ತಮವನು ಹರಿಯಲು॥
ರನ್ನ ಮೌಕ್ತಿಕ ದಿವ್ಯ ಕಾಂತಿಗ–ಳನ್ನು ಮೀರುವ ದೀಪದಿಂ।
ಜ್ಞಾನ ದಿನಕರ ವೀರ ಜಿನಪನ। ಸನ್ನುತಾಂಘ್ರಿಯ ಪೂಜೆಪೆಂ ॥ದೀಪಂ॥
ಗಗನಮಂಡಲವರೆಗೆ ಸೌರಭ। ಹೊಗೆಯ ಸೂಸುವ ತೆರದಲಿ ।
ಅಗರು ಚಂದನ ಕಾಷ್ಠ ಪರಿಮಳ। ಗುಗ್ಗುಳಾದಿ ಸಧೂಪದಿಂ॥
ಅಘ ನಿವಾರಣೆ ಗೈದು ಮುಕ್ತಿಯ। ಸೊಗವ ಬಗೆಯಲು ಬೇಗದಿಂ।
ಸುಗುಣದಾಗರ ವೀರ ಜಿನಪನ। ಯುಗಲ ಚರಣವ ಪೂಜಿಪೆಂ ॥ಧೂಪಂ॥
ಪರಮ ದಾಡಿಮ ದ್ರಾಕ್ಷಾ ಫಲ ಜಂ–। ಬೀರ ಕದಳೀ ಮಾದಳ॥
ಸುರತ ಪೂರಿತ ಪಕ್ವ ಸುಮಧುರ। ಪರಿಪರಿಯ ಸತ್ಫಲಗಳಿಂ ॥
ಸಿರಿಯ ಮುಕ್ತಿಯ ಮರೆಯೊಳಿರ್ದನ। ಪರಮ ಸೌಖ್ಯವ ಪಡೆಯಲು।
ಅರುಹ ಶ್ರೀ ಮಹಾವೀರ ಜಿನಪನ। ಚರಣ ಪಂಕಜ ಪೂಜಿಪೆಂ ॥ಫಲಂ॥
ವಾರಿಸೌರಭ ಗಂಧ ತಂಡುಲ। ಭಾರಿ ಪರಿಮಳ ಸುಮಗಳಿಂ।
ಚಾರುತರ ನೈವೇದ್ಯ ದೀಪಸು–। ಭೂರಿ ಧೂಪ ಫಲಾರ್ಘದಿಂ॥
ಸಾರ ಸಿದ್ಧರ ಸೇರಿ ಶಿಲೆಯನಪಾರ ಸುಖವನು ಪೊಂದಲು।
ಧೀರ ಮುಕ್ತಿಯ ವೀರ ಜಿನಪನ। ವಾರಿ ಜಾಂಘ್ರಿಯ ಪೂಜಿಪೆಂ ॥ಅರ್ಘ್ಯಂ॥
ಧರೆಯೊಳೆಲ್ಲೆಡೆ ಶಾಂತಿ ಸುಖಗಳು। ನಿರುತವಿರಲೆಂಬಾಸೆಯಿಂ।
ಪರಮ ನಿರ್ಮಲ ಶಾಂತಿ ಧಾರೆಯನೆರೆವೆ ಪ್ರಾಸುಕ ವಾರಿಯಿಂ॥
ದುರಿತ ಕರ್ಮಕಾಳೆಂಟು ಬೇಗದಿ। ಹರಿದು ಮುಕ್ತಿಯ ನಗರದೊಳ್॥
ಇರುವ ಶ್ರೀ ಮಹಾವೀರ ಜಿನಪನ। ಚರಣವಾರಿಜ ಪೂಜಿಪೆಂ
॥ಶಾಂತಿಧಾರಾಂ॥
ಸಮವಸರಣದೊಳಮರ ವೃಂದವು। ಹೂಮಳೆಯ ಗರೆವಂದದಿಂ।
ಕಮಲ ಮಲ್ಲಿಗೆ ಜಾಜಿ ಸಂಪಿಗೆ। ಸುಮಗಳಿಂದಲರಾಂಜಲಿಂ॥
ಅಮಲ ಭಾವದಿ ಗೈವೆ ಸ್ವಾತ್ಮನ। ಅಮರ ಸುಖದಾಪೇಕ್ಷೆಯಿಂ।

ಅಮರವಂದಿತ ವೀರಜಿನಪನ। ವಿಮಲ ಚರಣವ ಪೂಜಿಪೆಂ

॥ಪುಷ್ಪಾಂಜಲಿಃ॥

ನಮಃ ಶ್ರೀ ವರ್ಧಮಾನಾಯ। ನಿರ್ಧೂತ ಕಲಿಲಾತ್ಮನೇ॥

ಸಾಲೋಕಾನಾಂ ತ್ರಿಲೋಕಾನಾಂ। ಯದ್ವಿದ್ಯಾ ದರ್ಪಣಾಯತೇ॥[46]

ಹೀಗೆ ಜಲ, ಗಂಧ, ಅಕ್ಷತ, ಪುಷ್ಪ, ಚರು, ದೀಪ, ಧೂಪ, ಫಲಗಳೆಂಬ ಸುಂದರ ಅಷ್ಟಕಗಳಿಂದ ಮಹಾವೀರ ಸ್ವಾಮಿಯ ಪ್ರತಿಮೆಗೆ ಅರ್ಚನೆಯನ್ನು ಮಾಡುತ್ತಾ ಅರ್ಘ್ಯವನ್ನು ಅರ್ಪಿಸುತ್ತಾ ಮಹಾವೀರ ಜಯಂತಿಯನ್ನು ಭಕ್ತಿಭಾವದಿಂದ ಆಚರಿಸುತ್ತಾ ಪುಣ್ಯ ಪುನೀತರಾಗುತ್ತಾರೆ.

## ವಿಜಯದಶಮಿ

''ವಿಜಯದಶಮಿ'' ಈ ಸುಸಮಯದಲ್ಲಿ ಆಚರಿಸುವ ನವರಾತ್ರಿ ಹಾಗೂ ವಿಜಯದಶಮಿಯು ಪ್ರಕೃತಿ ಮಾತೆಯ ಪೂಜೆಗಾಗಿ, ದುಷ್ಟಶಕ್ತಿಯ ಮೇಲೆ, ಶಿಷ್ಟ ಶಕ್ತಿಯ ವಿಜಯದ ಸಂಕೇತವಾಗಿ, ನಾಡಿನ ನಾಡಿಮಿಡಿಯುವ ಕಲೆ–ಸಂಸ್ಕೃತಿಯ ಪ್ರಚಾರ ಸಾಧನವಾಗಿ, ಆಧ್ಯಾತ್ಮಿಕ ವೃದ್ಧಿಯ ಕುರುಹಾಗಿ, ನಿಲ್ಲಬಲ್ಲ, ಕನ್ನಡಿಗರ ನಾಡಹಬ್ಬವಾಗಿದೆ ಎನ್ನಬಹುದು. ದೇವಿಯು ದುಷ್ಟ ರಾಕ್ಷಸರ ಸಂಹಾರ ಮಾಡಿ ವಿಜಯವನ್ನು ಸಾಧಿಸಿದ ದಿನ ಇದು ಎನ್ನುತ್ತಾರೆ. ಇದು ಕರ್ನಾಟಕದ ನಾಡಹಬ್ಬವಾಗಿ ಜಗತ್ಪ್ರಸಿದ್ಧಿಯನ್ನು ಪಡೆದಿದ್ದು, ಆಶ್ವಿಜ ಶುದ್ಧ ಪ್ರತಿಪದೆಯಿಂದ ದಶಮಿಯವರೆಗಿನ 10 ದಿನಗಳವರೆಗೆ ಬಹಳ ವಿಜೃಂಭಣೆಯಿಂದ ಆಚರಿಸ್ಪಡುತ್ತದೆ. ಈ ಹಬ್ಬವನ್ನು ಹಿಂದೂಗಳು ಆಚರಿಸುವಂತೆ ಜೈನರೂ ಕೂಡ ಆಚರಿಸುತ್ತಾರೆ. ಆದರೆ ಹಬ್ಬದ ಆಚರಣೆಯ ಉದ್ದೇಶ, ಹಿನ್ನೆಲೆ, ರೀತಿ, ವಿಧಾನಗಳು ಮಾತ್ರ ಜೈನರಲ್ಲಿ ವಿಶಿಷ್ಠತೆಯಿಂದ ಕೂಡಿದೆ.

ಜೈನರು 'ವಿಜಯದಶಮಿ' ಹಬ್ಬವನ್ನು ಪ್ರಮುಖ ಮೂರು ಕಾರಣಗಳನ್ನು ಹಿನ್ನಲೆಯನ್ನಾಗಿಟ್ಟುಕೊಂಡು ಬಹಳ ವಿಜೃಂಭಣೆಯಿಂದ ಆಚರಿಸುವರು. ಮೊದಲನೆಯ ಕಾರಣವೆಂದರೆ, ಆದಿತೀರ್ಥಂಕರ ವೃಷಭನಾಥರು, ಭರತ, ಬಾಹುಬಲಿಯಾದಿಯಾಗಿ ತನ್ನ 100 ಜನ ಮಕ್ಕಳನ್ನು ತ್ಯಜಿಸಿ, ಚಕ್ರವರ್ತಿ ಪದವಿಯ ರಾಜವೈಭೋಗವನ್ನು ತ್ಯಜಿಸಿ ಸನ್ಯಾಸವನ್ನು ಸ್ವೀಕರಿಸಿ ಅನೇಕ ವರ್ಷಗಳ ಕಾಲ ಘೋರ ತಪಸ್ಸನ್ನಾಚರಿಸಿದಾಗ ಅವರಿಗೆ ಕೇವಲಜ್ಞಾನ ಪ್ರಾಪ್ತವಾಯಿತು. ಅದೇ ಸಮಯದಲ್ಲಿ ಭರತಚಕ್ರವರ್ತಿಯ ದಿಗ್ವಿಜಯ ಯಾತ್ರೆಗೆ ಕಾರಣವಾದ ಆಯುಧಾಗಾರದಲ್ಲಿ ಚಕ್ರರತ್ನದ ಉದಯವಾಯಿತು. ಹಾಗೆಯೇ ಅಂತಃಪುರದಲ್ಲಿ ಭರತನಿಗೆ ಪುತ್ರರತ್ನವೂ ಜನಿಸಿತು. ಹೀಗೆ ಈ ಮೂರೂ ಸಂತೋಷದ ಸುದ್ದಿಗಳು ಭರತ ಚಕ್ರವರ್ತಿಗೆ ಆಶ್ವೀಜ ಶುದ್ಧ ವಿಜಯದಶಮಿಯ ದಿವಸವೇ ತಿಳಿದುದರಿಂದ ಈ ಶುಭ ದಿವಸವನ್ನು ಜೈನರು ಪೂಜ್ಯ ಭಾವನೆಯಿಂದಲೂ, ಸಂತೋಷ ಸಡಗರಗಳಿಂದಲೂ ಆಚರಿಸುತ್ತಾರೆ.

ಅಷ್ಟಮಿಯನ್ನು ಜೀವದಯಾಷ್ಟಮಿಯೆಂದು ಆಚರಿಸಲಾಗುತ್ತದೆ. ಯಜ್ಞಯಾಗಾದಿಗಳಿಗೆ ಆದ್ಯತೆ ನೀಡಿ ದುರ್ಗಾಮಾತೆಯ ಪೂಜೆಯ ನಿಮಿತ್ತದಿಂದ ನಿರಪರಾಧಿ ಪಶುಗಳು ಬಲಿಯಾಗಿ, ಅಷ್ಟಮಿ, ದುರ್ಗಾಷ್ಟಮಿಯ ದಿನದಂದು ಹಿಂಸೆಯು ಪರಾಕಾಷ್ಠತೆಯನ್ನು ತಲುಪಿತ್ತು. ಆದುದರಿಂದ ಇದಕ್ಕೆ ವ್ಯತಿರಿಕ್ತವಾಗಿ ಹಿಂಸೆ ಸಂಭವಿಸದಂತೆ, ಜೀವಹಿಂಸೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂಬುದು ಈ ಆಚರಣೆಯ ಹಿಂದಿನ ಉದ್ದೇಶ. ಈ ಹಿಂಸೆಯನ್ನು ತಡೆಗಟ್ಟಲು ಅಷ್ಟಮಿಯ ದಿನವನ್ನು ಜೀವದಯಾಷ್ಟಮಿಯಾಗಿ ಪರಿವರ್ತಿಸಿ ಪರ್ವರೂಪದಲ್ಲಿ ಇದನ್ನು ಜೈನರು ಆಚರಿಸುತ್ತಾ ಬಂದಿದ್ದಾರೆ. ಈ ದಿವಸ ಕೆಲವು ಜೀವದಯಾಷ್ಟಮಿ ನೋಂಪಿಯನ್ನು ಆಚರಿಸುತ್ತಾರೆ. ಜೀವದಯಾಷ್ಟಮಿಯ ಮಹತ್ವವನ್ನು ಸಾರುವ 'ಯಶೋಧರ ಚರಿತ್ರೆ' ಮುಂತಾದ ಗ್ರಂಥಗಳನ್ನು ಆ ದಿವಸ ಮನನ ಮಾಡುತ್ತಾರೆ. ಕಾರಣ ಸಂಕಲ್ಪ ಹಿಂಸೆಯ ಫಲವಾಗಿ ಅನೇಕ ಭವಗಳಲ್ಲಿ ಪ್ರಾಯಶ್ಚಿತ್ತಪಟ್ಟ ಯಶೋಧರನ ಕಥೆ ಕವಿ ಜನ್ನನ ಕಾವ್ಯದ ವಸ್ತುವಾಗಿದೆ. ಕವಿ ಜನ್ನ ತನ್ನ ಕಾವ್ಯದ ಆರಂಭದಲ್ಲಿಯೇ ಈ ರೀತಿ ಹೇಳುತ್ತಾನೆ.

''ಶ್ರಾವಕ ಜನದುಪವಾಸಂ

ಜೀವದಯಾಷ್ಟಮಿಯೊಳಾಗೆ ಪಾರಣೆ ಕಿವಿಗ

ಳ್ಗೀವಸ್ತು ಕಥನದಿಂದುದ್ ಭಾವಿಸೆ ಕವಿಭಾಳಲೋಚನಂ ವಿರಚಿಸಿದಂ 1–2''[47]

ಅಹಿಂಸೆಯೇ ಪರಮಧರ್ಮವೆಂದು ಸಾರುವ ಜೈನ ತತ್ವವನ್ನು ಜೀವದಯಾಷ್ಟಮಿ ನೋಂಪಿಯ ಕಥೆಯಲ್ಲಿಯೂ ಸುಂದರವಾಗಿ ನಿರೂಪಿಸಲಾಗಿದೆ.

''ಜೀವದಯೆಯೊಂದೆ ಧರ್ಮ

ಜೀವದಯಾಷ್ಟಮಿಯ ಮಾದುದರಿಂ ಭವ್ಯರ್

ಜೀವ ದಯದಲ್ಲಿ ನೆಗಳ್ದೀ

ಜೀವದಯಾಷ್ಟಮಿಯ ನೋಂತು ಸುಖಮಂ ಪಡೆವರ್''[48]

ಒಂದೇ ವ್ರತವನ್ನು ಸ್ವೀಕರಿಸಿ ಆಚರಿಸುವುದಾದರೆ ಮಾನವನಿಗೆ ನಿತ್ಯ ಸುಖ ಲಭಿಸುವುದೆಂದು ಇದರಿಂದ ತಿಳಿಯುತ್ತದೆ. ಇದೇ ಅಲ್ಲದೆ

''ಆವಾದ ದೋಷಮೆಲ್ಲಮ

ನೋವದೆ ಪರಿಹರಿಸ ಜೀವದಯಾಷ್ಟಮಿಯಂ

ಭಾವಿಸಿ ನೋಂಪವರೆಲ್ಲಂ

ಭೂವಳಯದ ಸುಖಮನುಂಡು ಮುಕ್ತಿಯ ಪಡೆವರ್''[49]

ಈ ಎಲ್ಲಾ ದೋಷಗಳ ನಿವಾರಣೆಯಾಗುವುದಷ್ಟೇ ಅಲ್ಲ ಭೂಲೋಕದ ಸುಖ ದೊರೆಯುವುದಲ್ಲದೆ ಮುಕ್ತಿಯೂ ಲಭಿಸುವುದೆಂದು ತಿಳಿಯುವುದು. ಅದಕ್ಕೆ ಉದಾಹರಣೆಯಾಗಿ ಮಾರಿದತ್ತನು ದೇವೇಂದ್ರನಾದ ವಿವರವನ್ನು ಹೀಗೆ ತಿಳಿಸುತ್ತದೆ.

''ಆವಾದ ಜೀವವೆಲ್ಲವ

ನೋವದೆ ವಧೆಗೆಯ್ದು ಮಾರಿದತ್ತ ನರೇಂದ್ರ

ದೇವೇಂದ್ರನಾದನೆಂದೊಡೆ

ಜೀವದಯಾಷ್ಟಮಿಯ ನೋಂಪಿ ಸಾಧಾರಣವೇ''[50]

ಎಂದು 'ಜೀವದಯಾಷ್ಟಮಿಯ ನೋಂಪಿ'ಯ ಪರಮ ಪ್ರಯೋಜನೆಯನ್ನು ಹೇಳಲಾಗಿದೆ. ಹೀಗೆ ಈ ಪ್ರಸಂಗದಲ್ಲಿ ಅಹಿಂಸೆಯನ್ನು ಪ್ರತಿಪಾದಿಸುವಲ್ಲಿ ಜೈನಧರ್ಮದ ವಿಶೇಷತೆ ಇದೆ.

ಸಾಮಾನ್ಯ ಭಕ್ತರು ನವರಾತ್ರಿಯ ಶಕ್ತಿ ದೇವಿಯರಾದ ಜಿನಶಾಸನ ಯಕ್ಷಿಯರನ್ನು ಆರಾಧಿಸುವ ರೂಢಿ ಇದೆ. ಮಹಾಮಾತೆಯರಾದ ಪದ್ಮಾವತಿ, ಜ್ವಾಲಾಮಾಲಿನಿ, ಕೂಷ್ಮಾಂಡಿನಿ, ಚಕ್ರೇಶ್ವರಿ ಮೊದಲಾದವರನ್ನು ಅಷ್ಟಾವಧಾನ, ಷೋಢಶೋಪಚಾರ, ಪೂಜೆ, ಮಂತ್ರಪುಷ್ಪ, ಶತಾಷ್ಟನಾಮಾವಲೀ, ಕುಂಕುಮಾರ್ಚನೆಗಳಿಂದ ಪೂಜಿಸಿ, ಅನುಗ್ರಹವನ್ನು ಪಡೆಯುವರು. ಮಹಾಮಂಗಳಾರತಿ ಎತ್ತಿ ಸ್ತುತಿ ಸ್ತುತಿಸ್ತೋತ್ರಗಳಿಂದ ತೃಪ್ತಿಪಡಿಸಿ ಪುಣ್ಯೋಪಾರ್ಜನೆ ಗೈಯ್ಯುವರು.

ವಿಜಯದಶಮಿಗೆ ಸೀಮೋಲ್ಲಂಘನೆ ಎಂದೂ ಕರೆಯುವುದುಂಟು. ಏಕೆಂದರೆ ಭರತನ ಆಯುಧಾಗಾರದಲ್ಲಿ ಕಾಣಿಸಿಕೊಂಡ ಚಕ್ರರತ್ನವು, ಭರತನ ದಿಗ್ವಿಜಯಯಾತ್ರೆಯ ಸೂಚಕವಾಗಿದ್ದು, ಅದಕ್ಕಾಗಿ ಅವನು ಸೀಮೋಲ್ಲಂಘನೆಯನ್ನು ಮಾಡಿದ ಸಂಕೇತವಾಗಿದೆ. ಆ ದಿನ ಭರತಚಕ್ರವರ್ತಿಯು ಬನ್ನಿಯ ಮಂಟಪದ ಕೆಳಗೆ ಬಿಡಾರವನ್ನು ಹೂಡುವುದು ಮತ್ತು ಬಡಬಗ್ಗರಿಗೆ ಧನಧಾನ್ಯಗಳನ್ನು ಬಂಗಾರವನ್ನು ಹಂಚುವುದು ಇಂದಿನ ಆಚರಣೆ ರೂಢಿಗಳ ಉಗಮದ ಬಗ್ಗೆ ತಿಳಿಯಲು ಸಹಕಾರಿಯಾಗಿದೆ.

ಮೂಢನಂಬಿಕೆ, ಸಂಪ್ರದಾಯ ಪರಂಪರೆಗಳ ಆಚರಣೆಗಳ ಪಾಷಕ್ಕೆ ಸಿಕ್ಕಿ ನಿರಪರಾಧಿ ಪ್ರಾಣಿಗಳ ಹಿಂಸಾ ಪ್ರವೃತ್ತಿಗಳನ್ನು ತಡೆಯುವುದೇ ನಿಜವಾದ ಸೀಮೋಲ್ಲಂಘನೆಯಾಗಿದೆ. ಇದನ್ನೇ ವರಕವಿ ಬೇಂದ್ರೆಯವರು ತಮ್ಮ ಕವನದಲ್ಲಿ ಮಾರ್ಮಿಕವಾಗಿ ಸೂಚಿಸಿದ್ದಾರೆ.

ಹಿಂದಿರುವ ಹಗೆಯೀಗ ಅಂಗಾರವಾಯ್ತು
ಮುಂದಿರುವ ಗೆಳೆತನದ ಸಿಂಗಾರವಾಯ್ತು[51]

ಅಂದರೆ ಮಧಮತ್ಸರ ಲೋಭ, ಮೋಹ ತೊರೆದು, ಉದಾತ್ತ ಹೃದಯದಿಂದ ಆತ್ಮ ಶುದ್ಧಿ ಮಾಡಿಕೊಂಡು ಮುನ್ನಡೆಯುವುದೇ ನಿಜವಾದ ಸೀಮೋಲ್ಲಂಘನೆ. ಇದೇ ಅರ್ಥದಲ್ಲಿ ಸೀಮೋಲ್ಲಂಘನೆಯನ್ನು ಆಚರಿಸುವಲ್ಲಿ ಆತ್ಮ ಕಲ್ಯಾಣವುಂಟಾಗುತ್ತದೆ. ಜೈನರು ಹುಂಚ ಕ್ಷೇತ್ರದಲ್ಲಿ ಮಹಾನವಮಿ ಉತ್ಸವ ಎಂಬುದಾಗಿ ಈ ಸಂದರ್ಭದಲ್ಲಿ ಆಚರಿಸುತ್ತಾರೆ. ಈ ಉತ್ಸವ ವಿಜಯನಗರ ಸಾಮ್ರಾಜ್ಯದ ಅರಸರೊಂದಿಗೆ ಹುಂಚದ ಜೈನಮಠದ ಅಧಿಪತಿಗಳಿಗಿದ್ದ ನಿಕಟವಾದ ಸಂಬಂಧವನ್ನು ಸೂಚಿಸುತ್ತದೆ. ಕಾರಣ ವಿಜಯನಗರ ಸಾಮ್ರಾಟರು ಸರ್ವಮತಸಹಿಷ್ಣುಗಳಾಗಿದ್ದು, ಜೈನಧರ್ಮಕ್ಕೆ ಮತ್ತು ಹುಂಚದ ಶ್ರೀ ಜೈನಮಠಕ್ಕೆ ಧಾರಾಳವಾಗಿ ದಾನ–ದತ್ತಿಗಳನ್ನು ನೀಡಿ ಪ್ರೋತ್ಸಾಹಿಸಿ ಪೋಷಿಸುತ್ತಿದ್ದರು. ಮಹಾನವಮಿ ಉತ್ಸವದ ಸಂದರ್ಭದಲ್ಲಿ 9 ದಿನಗಳ ಕಾಲ ಈ ಕ್ಷೇತ್ರದ ಎಲ್ಲ ಬಸದಿಗಳಲ್ಲೂ ವಿಶೇಷಪೂಜೆಯನ್ನು ಮಾಡುವುದು ಪದ್ಧತಿಯಾಗಿತ್ತು. ಈ ಉತ್ಸವದ ಕೊನೆಯ ದಿನ ಭಟ್ಟಾರಕರು – ಬನ್ನಿ ವೃಕ್ಷಕ್ಕೆ ಪೂಜೆ ಸಲ್ಲಿಸುತ್ತಿದ್ದರು. ಈ ಎಲ್ಲಾ ಧಾರ್ಮಿಕ ವಿಧಿಗಳನ್ನು ರಾಜರ ಮತ್ತು ರಾಜ್ಯದ ಗೌರವಾರ್ಥ ಮಾಡುತ್ತಿದ್ದರು. ಈ ಸಂಪ್ರದಾಯವನ್ನು ಇಂದಿಗೂ ಅನುಸರಿಸಲಾಗುತ್ತಿದೆ.

ಶ್ರವಣಬೆಳಗೊಳದಲ್ಲಿ ಮಹಾನವಮಿ ಉತ್ಸವವನ್ನು ವೈಭವದಿಂದ ಆಚರಿಸುತ್ತಿದ್ದಾರೆಂಬುದಕ್ಕೆ ಅಲ್ಲಿನ ಮಹಾನವಮಿ ಮಂಟಪವು ಸಾಕ್ಷಿಯಾಗಿದೆ''[52] ಸಾಮಾನ್ಯವಾಗಿ ರಥೋತ್ಸವಗಳಲ್ಲಿ ಸಾರ್ವಜನಿಕರು ಸಂಭ್ರಮ ಸಡಗರಗಳಿಂದ ಭಾಗವಹಿಸುತ್ತಿದ್ದರು. ಭಾರಿ ಭಾರಿ ಗಾಲಿಗಳುಳ್ಳ ಮರದ ರಥದಲ್ಲಿ ವಿಗ್ರಹವನ್ನು ಇಟ್ಟು ಆನಂದಾತಿರೇಕದಿಂದ ಜನಸಮೂಹ ರಥವನ್ನು ಎಳೆಯುತ್ತದೆ. ಹೀಗೆ ರಥವನ್ನೆಳೆಯುವುದರಿಂದ ತಮಗೆ ಪುಣ್ಯ ಲಭಿಸುತ್ತದೆಂದು ಅವರು ಭಾವಿಸುತ್ತಾರೆ''[53] ಯಾವುದೇ ವಿಶೇಷ ಉತ್ಸವ ಸಮಾರಂಭದಲ್ಲೂ ರಥದ ಮುಖ ಮಂಟಪವನ್ನು ಧಾರ್ಮಿಕ ಸಂಕೇತಗಳುಳ್ಳ ಧ್ವಜಗಳಿಂದಲೂ ತಳಿರು ತೋರಣಗಳಿಂದಲೂ ಮತ್ತಿತ್ತರ ಅಲಂಕಾರಗಳಿಂದಲೂ ಅಲಂಕರಿಸುತ್ತಿದ್ದರು. ಈ ಉತ್ಸವಗಳಲ್ಲಿ ಸಂಗೀತ, ನೃತ್ಯಗಳಿದ್ದುದರಿಂದ ನೆರೆದ ಜನರಲ್ಲಿ ಅಪಾರ ಉತ್ಸಾಹವನ್ನು ಚಿಮ್ಮಿಸುತ್ತಿತ್ತು''[54]

ಶ್ರವಣಬೆಳಗೊಳದ ಶ್ರೀ ಜೈನಮಠದ ಭಿತ್ತಿಯ ಮೇಲಿರುವ ವರ್ಣಚಿತ್ರದಲ್ಲಿ ಮಹಾನವಮಿ ಉತ್ಸವದ ದಸರಾ ದರ್ಬಾರಿನ ಚಿತ್ರವೊಂದಿದೆ''[55] ಈ ಉತ್ಸವವನ್ನು ಕರ್ನಾಟಕದ ದಕ್ಷಿಣಭಾಗದಲ್ಲಿ ರಾಜ್ಯದ ಹಬ್ಬವಾಗಿ ಆಚರಿಸಲಾಗುವುದು. ಜಾತಿ, ಮತ ಭೇದಗಳಿಲ್ಲದೆ ಇಡೀದೇಶವು ಈ ಉತ್ಸವದ ಆಚರಣೆಗಳಲ್ಲಿ ಸಂತೋಷದಿಂದ ಭಾಗವಹಿಸುತ್ತದೆ. ಎಂಬುದು ಗಮನಾರ್ಹ''[56] ಜೈನಕುಟುಂಬಗಳು ರಾಜನ ಉಡುಪು ತೊಟ್ಟ ಪಟ್ಟದ ರಾಜ ಮತ್ತು ಪಟ್ಟದ ರಾಣಿ ಎಂದು ಕರೆಯುವ ಮರದ ಬೊಂಬೆಗಳನ್ನು ಹಾಗೂ ನಾನಾ ಬಗೆಯ ಬೊಂಬೆಗಳನ್ನು ಪ್ರದರ್ಶಿಸುತ್ತವೆ. ಈ ಉತ್ಸವಕ್ಕೆ ಚಂತುರ್ಥವರ್ಗವೂ ವಿಶೇಷ ಪ್ರಾಮುಖ್ಯ ನೀಡುತ್ತದೆ. ಮದುವೆಯ ಸಂದರ್ಭದಲ್ಲಿ ವಧೂವರರಿಗೆ ರಾಜರಾಣಿಯರ ಉಡುಪುತೊಡಿಸಿದ ಚಂದನ ಬೊಂಬೆಯೆಂದು ಕರೆಯುಲಾದ ಮರದ ಬೊಂಬೆಗಳನ್ನು ಉಡುಗೊರೆಯಾಗಿ ಕೊಡುತ್ತಿದ್ದರು ಎಂಬುದು ಗಮನಾರ್ಹ. ಮಹಾನವಮಿ ಉತ್ಸವವು ಕರ್ನಾಟಕದಲ್ಲಿನ ಜೈನ ಸಮುದಾಯದ ಸಮಾಜೋ ಧಾರ್ಮಿಕ ಜೀವನದ ಅವಿಭಾಜ್ಯ ಅಂಗವಾಗಿತ್ತು ಎಂಬುದಕ್ಕೆ ಈ ಆಚರಣೆಗಳು ಸಾಕ್ಷಿಯಾಗಿವೆ. ಶತಮಾನಗಳ ಕಾಲ ರಾಜಕೀಯ ಅಧಿಕಾರವು ಜೈನ ಅರಸರ ವಶದಲ್ಲಿ ಇದ್ದುದರಿಂದ ಈ ಹಬ್ಬಕ್ಕೆ ಇಷ್ಟು ಪ್ರಾಮುಖ್ಯತೆ ದೊರೆತಿತ್ತು. ಕರ್ನಾಟಕದ ಜೈನರು ಮಹಾನವಮಿ ಉತ್ಸವದ 8ನೆಯ (ಅಷ್ಟಮಿ) ದಿನ ಜೀವದಯಾಷ್ಟಮಿಯನ್ನಾಗಿ ಅಂದರೆ ಜೀವಿಗಳಿಗೆ ದಯೆಯನ್ನು ತೋರಿಸುವ ದಿನ ಎಂದು

ಆಚರಿಸುತ್ತಿದ್ದರು ಎಂಬುದು ಗಮನಾರ್ಹ”[57] ಅಂದು ಹಾಗೆ ಆಚರಿಸುವವರು ಉಪವಾಸ, ಏಕಭುಕ್ತವನ್ನು ಮಾಡುವುದು ರೂಢಿಯಲ್ಲಿದೆ ಎಂಬುದನ್ನು ಈ ಹಿಂದೆಯೇ ಗಮನಿಸಲಾಗಿದೆ.

ನವರಾತ್ರಿಯಲ್ಲಿ ಶಾಸನದೇವತೆಗಳ ಮಂಗಳಾರತಿ
ಜಯಮಂಗಳಂ ನಿತ್ಯ ಶುಭ ಮಂಗಳಂ ॥
ಶುಭಮಂಗಳಂ ನಿತ್ಯ ಶ್ರುತದೇವಿಗೆ ॥ಜಯ॥
ಮೂರನೆಯ ತೃತಿಯೆಯೊಳು । ವಾರಿಜಾಕ್ಷಿಯು ಗೌರಿ ।
ವಾರಣದ ಮೇಲೇರಿ ವಾದ್ಯ ಘೋಷದಲಿ । ಭೂರಿವಿಭವದಿ ಛತ್ರ – ಚಾ
ಮರವಿರಾಜಿಸಲು । ನಾರಿಯರ ಅರಸಿ ಶ್ರೀಗೌರಿ ।
ಬಂದರೈ ನಮ್ಮ ಮನೆಗೆ ॥ ಜಯ ॥ 6 ॥
ನಾಲ್ಕನೆಯ ಚೌತಿಯಲಿ । ಕಾಲಭವನಾ ರಥಧ ।
ಮೇಲೇರಿ ನಡೆತಂದು । ಸುಜನರೆಲ್ಲರಿಗೆ ॥
ಲೇಸ್ಕೊಟ್ಟು ರಕ್ಷಿಸುವ । ಮೂಕಣ್ಣ ಮಾಂಕಾಳಿ ।
ನೌಕೆಯಲಿ ಬಂದರೈ ನಮ್ಮ ಮನೆಗೆ ॥ ಜಯ ॥ 7 ॥
ಪಂಚಮ್ಮೈದನೆ ದಿನದಿ ।
ವಾಂಛಿತಾರ್ಥವಭವ್ಯ – ಸಂಚಯಕೆ ಒಲಿದಿತ್ತು ನಿತ್ಯ ರಕ್ಷಿಸುವ ॥
ಪಂಚಬಾಣನ ಗೆಲಿದ –, ನಂತ ಜಿನಪನ ಯಕ್ಷಿ ।
ಕೆಂಚೆಯೂ ಬಂದರೈ ನಮ್ಮ ಮನೆಗೆ ॥ ಜಯ ॥ 8 ॥
ಷಷ್ಠಿ ಆರನೆದಿನದಿ । ಸೃಷ್ಟಿ ಸರಿಜನರಿಗೆಲ್ಲ॥
ಅಷ್ಟಮಹದೈಶ್ವರ್ಯ । ಕೊಟ್ಟು ರಕ್ಷಿಸುವ ॥
ಅಷ್ಟಭುಜದಿಂದಿರುವ ।
ಇಷ್ಟೇ ಜ್ವಾಲಿನಿದೇವೀ ದುಷ್ಟ ಮಹಿಶನ ಏರಿ ಜಗಜ್ಯೇಷ್ಠೆ ಬಂದರೈ ನಮ್ಮ
ಮನೆಗೆ ॥ ಜಯ ॥ 9 ॥
ಏಳನೆಯ ಸಪ್ತಕದಿ । ವ್ಯಾಳರಾಜನ ರಾಣಿ ।
ಭಾಲದಲಿ ಲೋಚನೆಯು ಭಾಗ್ಯದಾಯಕಿಯು।
ವ್ಯಾಳ ಕುಕ್ಕುಟಾರೂಢೇ ಲೋಲೆ ಪದ್ಮಾವತಿಯು ।
ಲೀಲೆಯಲಿ ಬಂದರೈ ನಮ್ಮ ಮನೆಗೆ ॥ ಜಯ ॥ 10 ॥
ಅಷ್ಟಮೆಂಟನೆ ದಿನದಿ ಪಟ್ಟದಾನೆಯನೇರಿ ।
ದಿಟ್ಟಿಸುತ ನಾಲ್ದೆಸೆಯ । ಸುಜನರೆಲ್ಲರಿಗೆ
ಇಷ್ಟ ಸುಖ ಸಂಪದವ । ಕೊಟ್ಟು ರಕ್ಷಿಪ ಮಾತೇ ।
ಇಷ್ಟ ಮೂರುತಿ ಬಹುರೂಪಿಣೀ ಬಂದರೈ ನಮ್ಮ ಮನೆಗೆ ॥ ಜಯ ॥ 11 ॥
ಸದಮಲದ ನವಮಿ ದಿನ । ಮದಗಜದ ಮೇಲೇರಿ ।
ಒದಗಿ ನಡೆಯುತವಾದ್ಯ । ವಿವಿಧ ವೈಭವದಿ ।
ಸುದತಿಯರ ಕುಲದರಸಿ । ಸಿದ್ಧಾಯಿನೀ ಯಕ್ಷಿಸಂ ।
ಮುದದೊಳೈತಂದರೈ ನಮ್ಮ ಮನೆಗೆ ॥ ಜಯ ॥ 12 ॥
ದಶಮಿ ಹತ್ತನೆಯ ದಿನದಿ । ದೆಸೆದೆಸೆಗೆ ವಾದ್ಯರವ ।

ಪಸರಿಸಲು ಜಪಮಾಲೆ ಪುಸ್ತಕವು ಸಹಿತಾ ॥
ಎಸೆವ ಹಂಸೆಯನೇರಿ ಶಶಿಮುಖಿಯು ಶಶಿವಾಗ್ದೇವಿ ।
ಬಿಸಜಾಕ್ಷಿಯೂ ಬಂದರೈ ನಮ್ಮ ಮನೆಗೆ ॥ ಜಯ ॥ 13 ॥
ಇಂತು ನವರಾತ್ರಿಯಲಿ । ಕಂತುಹರ ಯಕ್ಷಿಯರು ।
ಅಂತರಿಸದೈತಂದು । ನವನಿಧಿಗಳಂತೆ ॥ ಸಂತೋಷ – ಸೌಭಾಗ್ಯ – ।
ಸಂಪದವ ನಮಗಿತ್ತು । ಚಿಂತಿತಾರ್ಥವು ಕೈಗೆ ದೊರಕಿದಂತಾಯ್ತು ॥
ಜಯಮಂಗಳಂ ನಿತ್ಯ ಶೂಭಮಂಗಳಂ ॥ ಶುಭಮಂಗಳಂ ನಿತ್ಯ ಶ್ರುತ ದೇವಿಗೆ
॥ ಜಯಮಂಗಳಂ ॥ 14 ॥”[58]

**ಜಿನವಾಣಿ ಮಂಗಳಂ**

ವಾಣಿ । ವರಕಲ್ಯಾಣ । ಮಂಗಳಂ ।
ಏಣನಯನೆ, ಜಾಣೆ ಜಯಕೃಪಾಣಿ ಮಂಗಳಂ ।
ಕ್ಷೋಣಿಗಧಿಕ ತ್ರಾಣಿ ನಿಃಶ್ರೇಯ। ಶ್ರೇಣಿ ಮಧುರವಾಣಿ ಪನ್ನಗ ।
ವಿಣಾಪಾಣಿ ಸುರಸುಪಾಣಿ । ರಮಣಿಮಣಿ ಕಟ್ಟಾಣಿ ವೇಣಿ । ॥ ವಾಣಿ ॥ 1 ॥
ಇಂದ್ರ ಇಂದ್ರ ಇಂದ್ರ ವಂದಿತೇ ॥
ಕಲ್ಪತರು ಜಿನೇಂದ್ರ ಚಂದ್ರಮುಖ ಸುಬೋಧಿತೇ ॥
ಸಾಂದ್ರ ಸರಸಸುಕವಿ ಹೃದಯ । ಮಂದಿರೇ ಸುಗಂಧ ಭರಿತೇ ॥
ಇಂದಿರಾಕ್ಷಿ, ಮಂದ್ರನಿನದೆ । ಬಂಧುರಾಂಗಿ ಪಾಹಿ, ಪಾಹಿ ॥ ವಾಣಿ ॥ 2 ॥
ಅರುಣ ಚರಣ ಕಿರಣರಂಜಿತೇ ।
ಮರಕತಾಭ ಭರಿತ ನವ್ಯ ದಿವೌಭೂಷಿತೇ ।
ಪರಮಶುಭ್ರವಸನಯುಕ್ತೆ । ಸ್ಥಿರ ಗುಣೌಘ ಚರಿತೆ ಪೂತೆ! ।
ನಿರಘ ನಿರ್ಮಲ ನಿತ್ಯ ತೃಪ್ತೇ । ಶರಣು ಶರಣು ಪಾಹಿ ಪಾಹಿ ॥ ವಾಣಿ ॥ 3 ॥
ಧರೆಯೊಳಧಿಕ ವೇಣ್ಪುರಾದ್ರಿಯ ।
ಶಾಂತಿನಾಥ ಚರಣಭಕ್ತ ಚಾರುಕೀರ್ತಿಯ ॥
ವರದಛಾತ್ರ ನಿಲಯದಲ್ಲಿ । ಸ್ಥಿರದಿ ನೆಲಸಿ ಮೆರೆವ ಗುರುವೇ ।
ತರಳ ಬಾಲರನ್ನು ಸುಳದೊಳಿರಿಸು ವಾಣಿ । ಪಾಹಿ ಪಾಹಿ ॥ ವಾಣಿ ॥ 4 ॥
ವಾಣಿ! ವರಕಲ್ಯಾಣಿ! ಮಂಗಳಂ! ಏಣನಯನೆ!
ಜಾಣ್ಮೆಜಯಕೃಪಾಣಿ ಮಂಗಳಂ॥[59]

## ನೂಲುಹುಣ್ಣಿಮೆ

ಭಾರತೀಯ ಹಬ್ಬಗಳ ಹಿನ್ನೆಲೆಯನ್ನು ಸಮಗ್ರ ದೃಷ್ಟಿಯಲ್ಲಿ ನೋಡಿದಾಗ ‘ನೂಲಹುಣ್ಣಿಮೆ’ ಹಬ್ಬವನ್ನು ರಕ್ಷಾಬಂಧನ ಎಂದೂ ಕರೆಯುತ್ತಾರೆ. ಪ್ರಾಂತ ಭೇದ, ಭಾಷಾಭೇದ, ಪಕ್ಷ, ಜಾತಿ, ಧರ್ಮ–ಪಂಥಗಳ ಹೆಸರಿನಲ್ಲಿ ರಾಷ್ಟ್ರದ ಐಕ್ಯತೆ ರಾಷ್ಟ್ರದ ಮಕ್ಕಳಲ್ಲಿ ಅಭೇದ್ಯ ಸ್ನೇಹ–ಸಹಕಾರ ಮನೋಭಾವ ರಾಷ್ಟ್ರ ರಕ್ಷಣೆಗಾಗಿ ಸರ್ವಸ್ವವನ್ನು ಅರ್ಪಿಸುವ ಸಿದ್ಧತೆ, ಪರಸ್ತ್ರೀ–ಪುರುಷರಲ್ಲಿ ಸೋದರ ಮನೋಭಾವ ಬೆಳೆಸಿಕೊಳ್ಳಬೇಕಾದದ್ದು ಅತೀ ಅಗತ್ಯವಾಗಿದೆ. ಇದಕ್ಕೆ ಸಂಕೇತವಾಗಿ ರಕ್ಷೆಯನ್ನು ಕಟ್ಟುತ್ತಾರೆ. ಬ್ರಾಹ್ಮಣರು ಮತ್ತು ಜನಿವಾರಧಾರಿಗಳು ಈ ದಿನ ತಮ್ಮ ಜನಿವಾರವನ್ನು ಬದಲಿಸಿ ಹಾಕುತ್ತಾರೆ. ಐಕ್ಯತೆಯ ಸಂಕೇತ ರಕ್ಷೆಯನ್ನು ಎಲ್ಲರೂ ಪರಸ್ಪರ ಕಟ್ಟಿಕೊಳ್ಳುವುದೇ ಈ

ಹಬ್ಬದ ವಿಶೇಷತೆ. ಅಂದರೆ ಶ್ರಾವಣವನ್ನು ಶುದ್ಧ ಹುಣ್ಣಿಮೆಯಂದು ಈ ಹಬ್ಬ ಬರುತ್ತದೆ. ಅಂದು ಬ್ರಾಹ್ಮಣ, ಜೈನರು ಹೊಸ ಯಜ್ಞೋಪವೀತವನ್ನು ಧರಿಸುತ್ತಾರೆ. ಇದು ಜೈನ ಮತ್ತು ಬ್ರಾಹ್ಮಣರು ವಿಶೇಷವಾಗಿ ಆಚರಿಸುವಂತಹ ಹಬ್ಬವಾಗಿದೆ. ಈ ಹಬ್ಬವು ಪುರಾತನ ಕಾಲದಲ್ಲಿಯೇ ಆಚರಿಸಿಕೊಂಡು ಬಂದಂತಹ ಹಬ್ಬವಾಗಿದೆ. ಇದಕ್ಕೆ ಸಾಕಷ್ಟು ಆಧಾರಗಳು ನಮಗೆ ಲಭ್ಯವಾಗುತ್ತವೆ. ಇದಕ್ಕೆ ಇಂಬುಗೊಡುವಂತೆ ಡಾ| ಎಸ್.ಡಿ.ಶೆಟ್ಟಿಯವರು ಬರೆದಿರುವ 'ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಅವರ ಪಿ.ಹೆಚ್.ಡಿ ಮಹಾ ಪ್ರಬಂಧದಲ್ಲಿ ತುಳುನಾಡಿನ ಧಾರ್ಮಿಕ ಆಚರಣೆಗಳ ವಿವರದ ಸಂದರ್ಭದಲ್ಲಿ ಈ ರೀತಿ ಹೇಳಿದ್ದಾರೆ. ''ಈ ಭಾಗದ ಶಾಸನದಲ್ಲಿ ಈ ಹಬ್ಬವನ್ನು ಆಚರಿಸುತ್ತಿದ್ದ ಬಗ್ಗೆ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಈ ಹಬ್ಬದ ಆಚರಣೆಗಾಗಿಯೇ ಬಸದಿಗಳಿಗೆ ದಾನನೀಡಿದ ಹಲವಾರು ದೃಷ್ಟಾಂತಗಳು ಕಂಡುಬರುತ್ತವೆ.''[60] ಈ ಹಬ್ಬಕ್ಕೆ ಸ್ಥಳೀಯರು ಜನಿವಾರದ ಹಬ್ಬ, ಉಪಾಕರ್ಮವೆಂತಲೂ ಕರೆಯುತ್ತಾರೆ. ಇದನ್ನು ಶ್ರವಣ ನಕ್ಷತ್ರದಂದೇ ಆಚರಿಸುವ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಹುಣ್ಣಿಮೆಯ ದಿನ ಶ್ರವಣ ನಕ್ಷತ್ರ ಬಂದರಂತೂ ತುಂಬಾ ಪ್ರಶಸ್ತ. ಆದರೆ ಕೆಲವೊಮ್ಮೆ ಈ ನಕ್ಷತ್ರವು ಹುಣ್ಣಿಮೆಯ ಮೊದಲನೆಯ ದಿನ ಅಥವಾ ಮಾರನೆಯ ದಿನ ಬಂದಾಗ ಹುಣ್ಣಿಮೆಯ ದಿನವನ್ನು ಬಿಟ್ಟು ಶ್ರವಣ ನಕ್ಷತ್ರವನ್ನೇ ಆಯ್ದುಕೊಳ್ಳುತ್ತಾರೆ.[61]

ಜೈನ ಸಂಪ್ರದಾಯದಲ್ಲಿ ಈ ಹಬ್ಬದ ಹಿನ್ನೆಲೆಗೆ ಸ್ವಾರಸ್ಯಕರವಾದ ಕಥೆಯೊಂದಿದೆ. ಭರತಖಂಡದ ಮೊದಲ ಚಕ್ರವರ್ತಿ ಭರತನು ಷಟ್‌ಖಂಡಗಳನ್ನು ಜಯಿಸಿ ಬಂದನು. ಆಗ ಅವನಿಗೆ ಸತ್ಪುರುಷರಿಗೆ ದಾನ ನೀಡಬೇಕೆಂಬ ಹಂಬಲ ಉಂಟಾಗಿ ನಿಜವಾದ ಸತ್ಪುರುಷರ ಹುಡುಕಾಟದಲ್ಲಿ ತೊಡಗಿದನು. ಅವನು ಅರಮನೆಯ ಅಂಗಳದಲ್ಲಿ ಸಸಿಗಳನ್ನು ನೆಟ್ಟು, ದಾನಪಡೆಯಬೇಕಾದ ಸತ್ಪುರುಷರು ಅದೇ ಮಾರ್ಗದಲ್ಲಿ ಬರಬೇಕೆಂದು ಆದೇಶವಿತ್ತನು. ಆದರೆ ವ್ರತಾದಿಗಳನ್ನು ಪಾಲಿಸುತ್ತಿದ್ದ ಕೆಲವರು ಮಾತ್ರ ಆ ಸಸಿಗಳನ್ನು ತುಳಿದರೆ ಹಿಂಸೆಯಾಗುವುದೆಂದು ಅರಿತು ಭರಲೊಪ್ಪದೆ ಅಲ್ಲೇ ಉಳಿದುಕೊಂಡರು. ಆಗ ಭರತ ಅಂಥವರನ್ನು ಗುರುತಿಸಿ ಸ್ವಾಗತಿಸಿ ಪದ್ಮನಿಧಿಯಿಂದ ಯಜ್ಞೋಪವೀತಗಳನ್ನು ಧರಿಸಲು ಕೊಟ್ಟು ಸತ್ಕರಿಸಿದನು. ಈ ರೀತಿ ಯಜ್ಞೋಪವೀತಗಳನ್ನು ಧರಿಸುವ ಪದ್ಧತಿಯನ್ನು ಭರತ ಚಕ್ರವರ್ತಿಯಂ ಶ್ರಾವಣ ಮಾಸದ ಹುಣ್ಣಿಮೆಯ ದಿವಸ ಆರಂಭಿಸಿದನೆಂಬ ಹೇಳಿಕೆ ಇದೆ.

ಹೀಗೆ ಈ ಹಬ್ಬದ ಅಂದರೆ ಶ್ರಾವಣ ಸಂಕಲ್ಪವಿಧಿಗೆ ಕಾರಣವಾದ ಈ ಕಥಾಸ್ವಾರಸ್ಯವನ್ನು ಪಂಡಿತ, ದೇವಕುಮಾರ್ ಶಾಸ್ತ್ರಿ, ಮೂಡಬಿದಿರೆ ಹಾಗೂ ಡಾ| ಎಸ್.ಡಿ.ಶೆಟ್ಟಿ, ಉಜಿರೆ ಅವರು ಸಂಪಾದಿಸಿರುವ ''ಜೈನರ ಹಬ್ಬಗಳು'' ಎಂಬ ಪುಸ್ತಕದಲ್ಲಿ ಈ ರೀತಿ ವಿವರಿಸಲಾಗಿದೆ. ಅಂದರೆ ಶ್ರಾವಣ ಮಾಸದ ಪೂರ್ಣಮೀ ತಿಥಿಯಲ್ಲಿ ಸ್ನಾನ – ಸಂಧ್ಯಾವಂದನೆಯನ್ನು ಮಾಡಿ ನಿತ್ಯಸಂಕಲ್ಪವನ್ನು ಮಾಡಿಕೊಂಡು ತಿಥಿಯ ಸ್ಥಳದಲ್ಲಿ ''ಪೌರ್ಣಮ್ಯಾಂತಿಥೌ, ಶ್ರವಣ ನಕ್ಷತ್ರಯುಕ್ತಾಭಿಧಾನ ತುರೀಯ ಕಾಲ ಪ್ರಾರಂಭೇ, ಅಧ್ಯಯನಾ–ದ್ಯಾಪನಾದಿ ವಿಶಿಷ್ಟ ಕರ್ಮಾನುಷ್ಠಾನ, ನಿಷ್ಠಾಪರಾಯಣ ಬ್ರಾಹ್ಮಣಾ ಬಿಜನ ವಿಧಿತ್ಸಾಯಾಂ, ಆದ್ಯೇನ ಚಕ್ರೇಣಾ, ಅಂತ್ಯೇನ ವೇಧಸಾ, ಷೋಡಶ ತಮೇನ ಕುಲಧರೇಣ ರಾಜರ್ಷಿಣಾ ಭರತೇಶ್ವರೇಣ, ಮಂಗಲಾರ್ಥಂ ಪರೀಕ್ಷಾರ್ಥಂ ವಾಸಮುತ್ಪಾದಿತ ಸರ್ವಧಾನ್ಯಾಂಕುರ ಪ್ರಸಾರಿತ ಪ್ರದೇಶೇ ಪರಿಕ್ಷ್ಯಯೇನ ಸಮ್ಯಗ್ ದೃಶೋ ಬ್ರಾಹ್ಮಣ, ಬ್ರಹ್ಮೋಪಲಕ್ಷಿತ ಯಜ್ಞ ಸೂತ್ರ ಸಂಧಾರಣಾರ್ಥಂ ವಿಧೀಯ ಮಾನಸ್ಯ, ಹೋಮಕರ್ಮಣೋ ನಾಂದಿಮುಖೇ ಪುಣ್ಯಾಹವಾಚನಾಂ ಕರಿಷ್ಯೇ||''[62]

ಇದರ ಅರ್ಥ ವಿವರಣೆ ಹೀಗಿದೆ. ಶ್ರವಣ ನಕ್ಷತ್ರಯುಕ್ತವಾದ ಹುಣ್ಣಿಮೆಯ ತಿಥಿಯಲ್ಲಿ ಶ್ರೇಷ್ಠವಾದ ಹಬ್ಬದಲ್ಲಿ ದುಃಷಮ ಸುಷಮಾ ಎಂಬ ನಾಲ್ಕನೆಯ ಕಾಲದ ಪ್ರಾರಂಭದಲ್ಲಿ ಅಧ್ಯಯನ, ಅಧ್ಯಾಪನ ಮೊದಲಾದ ಕ್ರಿಯೆಗಳಲ್ಲಿ ಪಾರಾಯಣರಾದ ಬ್ರಾಹ್ಮಣ ಆಶ್ರಮವನ್ನು ಸ್ಥಾಪಿಸಲಾಯಿತು. ಇಂತಹ ಕರ್ಮಠರಾದ ಬ್ರಾಹ್ಮಣ ವರ್ಣಾಶ್ರಮವನ್ನು ಮೊದಲ ಚಕ್ರವರ್ತಿಯೂ, ಕೊನೆಯ ಬ್ರಹ್ಮನೂ, ಹದಿನಾರನೆಯ ಮನುವೂ ರಾಜರ್ಷಿಯೂ ಆದ ಭರತೇಶ್ವರನು ಸ್ಥಾಪಿಸಿದನು. ಅರಮನೆಯ ಮುಂಭಾಗದ ಬಯಲಲ್ಲಿ ಧಾನ್ಯದ ಅಂಕುರಗಳನ್ನು ಬೆಳೆಸಿದಾಗ ಆ ಅಂಕುರಗಳು ಏಕಕೇಂದ್ರೀಯ ಜೀವಿಗಳೆಂದೂ, ಅವುಗಳನ್ನು ಮೆಟ್ಟಿ ಬಂದರೆ ಪಾಪ ಆಶ್ರವವಾಗುವುದೆಂದೂ ತಿಳಿದ

ಸಮ್ಯಗ್ ದೃಷ್ಟಿಗಳಿಗೆ ಯಜ್ಞೋಪವೀತವನ್ನು ಇತ್ತು ಮನ್ನಿಸಿದರು. ಅವರೇ ದ್ವಿಜರು. ಅವರು ಯಜ್ಞೋಪವೀತ ಧರಿಸಲು ಮಾಡುವ ಹೋಮಕಾರ್ಯದ ನಾಂದಿಯಲ್ಲಿ ಈ ಪುಣ್ಯಾಹವಾಚನೆಯನ್ನು ಮಾಡುತ್ತೇವೆ''[63] ಎಂದು ಕಲ್ಪಿಸಿ ಹೋಮವನ್ನು ಮಾಡಬೇಕು.

ಈ ಹೋಮವನ್ನು ಮಾಡುವಾಗ ಅಗ್ನಿಗೆ ಆರ್ಜ್ಯ, ಲವಂಗ, ಸವಿದಾಹುತಿ, ಅನ್ನಹುತಿಗಳೆಂಬ ನಾಲ್ಕು ಆಹುತಿಗಳನ್ನು ಮಾಡಿ ಮೂರು ಬಾರಿ ಪ್ರದಕ್ಷಿಣೆಗೈದು ಯಜ್ಞೋಪವೀತವನ್ನು ಧರಿಸಬೇಕು. ಮತ್ತೆ ತತ್ವಾರ್ಥ ಸೂತ್ರವನ್ನು ಹೇಳಬೇಕು. ಈ ರೀತಿಯ ವಿವರ ಉಲ್ಲೇಖಿತವಾಗಿದೆ.

ಇದನ್ನೇ ಭಾರತದಲ್ಲಿ ರಕ್ಷಾಬಂಧನವೆಂದು ಆಚರಿಸುವರು. ರಕ್ಷಾಬಂಧನ ಎಂಬ ವಿಷಯದ ಮೇಲೆ ಇರುವ ಪ್ರಸಿದ್ಧವಾದ ಹೇಳಿಕೆಯೊಂದನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ''ಉಜ್ಜಯಿನಿಯಲ್ಲಿದ್ದು ಶ್ರೀ ಧರ್ಮರಾಜನೆಲ್ಲಿ ಬಲಿ ಎಂಬ ವಿದ್ಯಾದೃಷ್ಟಿಯುಳ್ಳ ಮಂತ್ರಿಯು ಬಂದು ದಿವಸ ಅಕಂಪನಾಚಾರ್ಯರು ಮೊದಲಾದ ಏಳುನೂರು ಮುನಿಗಳಿಗೆ ಉಪಸರ್ಗವನ್ನುಂಟು ಮಾಡಿದನು. ಇದನ್ನು ತಿಳಿದ ರಾಜನು ಅವನನ್ನು ಹಾಗೂ ಇನ್ನುಳಿದ ವಿದ್ಯಾದೃಷ್ಟಿಯ ಮಂತ್ರಿಗಳನ್ನು ರಾಜ್ಯದಿಂದ ಹೊರಗೆ ಹಾಕಿದನು. ಅವರು ಹಸ್ತಿನಾಪುರದ ಪದ್ಮರಾಜನಲ್ಲಿ ಆಶ್ರಯ ಪಡೆದರು. ಮುಂದೆ ಮುನಿಸಂಘವು ಹಸ್ತಿನಾಪುರಕ್ಕೆ ಬರಲು ಮತ್ತೆ ಉಪಸರ್ಗವನ್ನುಂಟುಮಾಡಿದರು. ಇದನ್ನು ತಿಳಿದ ವಿಷ್ಣುಕುಮಾರ ಮುನಿಯು ಮಿಥಿಲೆಯಿಂದ ಆಗಮಿಸಿ ಅಕಂಪನಾಚಾರ್ಯರ ಸಂಘಕ್ಕೆ ಒದಗಿದ ಉಪಸರ್ಗವನ್ನು ದೂರಮಾಡಿದರು. ಈ ವಿವರಣೆ ಕೆಳಗಿನ ಸೂತ್ರದಿಂದ ವಿದಿತವಾಗುವುದು''

''ಯೇನ ಬದ್ಧೋ ಬಲೀ ರಾಜಾ, ದಾನವೇಂದ್ರೋ ಮಹಾಬಲೀ
ತೇನತ್ವಾಮಪಿ ಬಧ್ನಾಮಿ ರಕ್ಷ ಮಾಚಲ ಮಾಚಲ॥[64]

ಈ ಘಟನೆ ಜರುಗಿದ ದಿವಸ ಶ್ರಾವಣ ಮಾಸದ ಹುಣ್ಣಿಮೆಯದಿನ. ಅಂದು ಜೈನಮುನಿಗಳಿಗೆ ಬಂದೊದಗಿದ ವಿಪತ್ತನ್ನು ದೂರಮಾಡಿ ಅವರ ಹಾಗೂ ಧರ್ಮದ ರಕ್ಷಣೆಗಾಗಿ ವಿಷ್ಣುಕುಮಾರ ಮುನಿಯು ದೀಕ್ಷಾಬದ್ಧನಾದನು. ಇದನ್ನೇ 'ರಕ್ಷಾಬಂಧನ'ವೆಂದು ಆಚರಿಸುತ್ತಿದ್ದರು. ಈ ಹಬ್ಬದಲ್ಲಿ ಜೈನಧರ್ಮೀಯರು ತ್ರೀರತ್ನಗಳ (ಸಮ್ಯಕ್‌ಜ್ಞಾನ, ಸಮ್ಯಕ್‌ದರ್ಶನ, ಸಮ್ಯಕ್‌ಚಾರಿತ್ರ್ಯ) ಪ್ರತೀಕವಾಗಿ ಜನಿವಾರವನ್ನು ಧರಿಸುತ್ತಾರೆ. ಹೀಗೆ ಧರಿಸುವ ಜನಿವಾರದ ಮೂರು ಎಳೆಗಳು ರತ್ನತ್ರಯಗಳಾದ ಸಮ್ಯಕ್‌ಜ್ಞಾನ, ಸಮ್ಯಕ್‌ದರ್ಶನ, ಸಮ್ಯಕ್‌ಚಾರಿತ್ರ್ಯಗಳನ್ನು ಸೂಚಿಸುತ್ತವೆ. ಆದುದರಿಂದಲೇ ''ರತ್ನತ್ರಯಾತ್ಮಕ ಯಜ್ಞಸೂತ್ರಃ ಎಂದು ಹೇಳಿದ್ದಾರೆ. ''ಸಮ್ಯಕ್‌ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷ ಮಾರ್ಗ''[65] ಎಂಬ ಮೋಕ್ಷ ಮಾರ್ಗವನ್ನು ತೋರುವ ಈ ರತ್ನತ್ರಯಗಳು ಅಪೂರ್ಣವಾಗಿವೆ. ಅವನ್ನು ಪ್ರತಿನಿಧಿಸುವ ಈ ಯಜ್ಞೋಪವೀತವೂ ಅಷ್ಟೇ ಮಹತ್ವಪೂರ್ಣವಾಗಿದೆ. ಕರ್ನಾಟಕದಲ್ಲಿ ಎಲ್ಲಾ ಜೈನಪಂಥವರೂ ಜನಿವಾರ ಧರಿಸುತ್ತಿದ್ದರು. ಆದುದರಿಂದಲೇ ಈ ಉತ್ಸವವನ್ನು ಜನಿವಾರದ ಹಬ್ಬ ಅಥವಾ ಶ್ರಾವಣದ ಪೌರ್ಣಮಿ ಎಂದು ಕರೆಯುತ್ತಿದ್ದರು. ಯಜ್ಞೋಪವೀತ ಧಾರಣೆಯ ಪದ್ಧತಿ ತುಂಬ ಪ್ರಾಚೀನವಾದುದು ಮತ್ತು ಮೇಲೆ ಹೇಳಿದ ಅವಧಿಯ ಸಾಹಿತ್ಯವು ಹೊನ್ನ ಯಜ್ಞೋಪವೀತ ಎಂಬುದನ್ನು ಉಲ್ಲೇಖಿಸುತ್ತವೆ''

ಯಜ್ಞೋಪವೀತದ ಲಕ್ಷಣದ ಬಗೆಗಿನ ಉಲ್ಲೇಖವನ್ನು ನೋಡಿ
ಷಣ್ಣವತಿ ಮುಷ್ಠಿಯುಕ್ತಂ ಸೂತ್ರತ್ರಿಯಂ ಪುನಸ್ತ್ರಯಂ ಕುರ್ಯಾತ್॥
ರತ್ನತ್ರಯಮಿತಿ ಮತ್ವಾ ಕರೋಮಿ ಕಲುಷಾಪಹರಣ ಮಾಭರಣಂ॥
ಓಂ ಹ್ರೀಂ ಅರ್ಹಂ ಸಮ್ಯಗ್ದರ್ಶನ-ಜ್ಞಾನ ಚಾರಿತಾಯ ನಮ: ಸ್ವಾಹಾ॥
ಇತಿ ಯಜ್ಞೋಪವೀತ ಸಂದಾರಣಂ॥[66]

ಅವರವರ ಮುಷ್ಠಿಯಲ್ಲಿ 96 ಮುಷ್ಠಿ ಹತ್ತಿಯ ನೂಲನ್ನು ತೆಗೆದು ಮುನ್ನೂಲು ಮಾಡಿ ಹೊಸೆದು ಪುನಃ ಮುಪ್ಪಿರಿಗೊಳಿಸಿ ಹೊಸೆದು ಮೂರೆಳೆಯ ಜನಿವಾರವನ್ನು ಸಿದ್ಧಗೊಳಿಸಿ ಪವಿತ್ರಗಂಟು ಮತ್ತು ಬ್ರಹ್ಮಗಂಟಿನಿಂದ

ಬಿಗಿದು ತಯಾರಿಸಿ 'ಜನಿವಾರ' ತಯಾರಿಸಬೇಕು ಎಂದಿದೆ. ಉಪಾಕರ್ಮದ ಮೂರು ಎಳೆಯ ಜನಿವಾರವನ್ನು ಧರಿಸುವುದು. ಈ ಮೂರು ಎಳೆಯ ರತ್ನತ್ರಯ ಸಂಕೇತವಾದ ಸಮ್ಯಕ್‌ಜ್ಞಾನ, ಸಮ್ಯಕ್‌ದರ್ಶನ, ಸಮ್ಯಕ್‌ಚಾರಿತ್ರ್ಯವನ್ನು ಸೂಚಿಸುತ್ತದೆ. ಒಂದೊಂದು ಎಳೆಯಲ್ಲಿಯೂ 9 ದಾರಗಳಿರುತ್ತವೆ. ಮೂರು ಎಳೆಗಳಿಂದ ಒಟ್ಟು 27 ದಾರಗಳಾಗುತ್ತವೆ. ಇವು ಜೈನಧರ್ಮದ ತತ್ವಗಳನ್ನು ಮುಂದೆ ನಮೂದಿಸುವಂತೆ ಸೂಚಿಸುತ್ತವೆ. ಷಡ್ದ್ರವ್ಯಗಳು–6, ಪಂಚಾಸ್ತಿಕಾಯ–5, ಸಪ್ತತತ್ವಗಳು–7 ನವಪದಾರ್ಥಗಳು–9 ಒಟ್ಟು 27" ಆದರೆ ಜೈನ ಸಿದ್ಧಾಂತದಲ್ಲಿ ಹೇಳಿರುವ "ಜಿವಾಸ್ತಿಕಾಯ, ಪುದ್ಗಲಾಸ್ತಿಕಾಯ, ಧರ್ಮಾಸ್ತಿಕಾಯ, ಆಕಾಶಾಸ್ತಿಕಾಯಗಳೆಂಬ ಪಂಚಾಸ್ತಿಕಾಯಗಳೂ, ಜೀವದ್ರವ್ಯ, ಪುದ್ಗಲದ್ರವ್ಯ, ಧರ್ಮದ್ರವ್ಯ, ಅಧರ್ಮದ್ರವ್ಯ, ಆಕಾಶದ್ರವ್ಯ, ಕಾಲದ್ರವ್ಯಗಳೆಂಬ ಷಡ್ದ್ರವ್ಯಗಳೂ, ಜೀವತತ್ವ, ಅಜೀವತತ್ವ, ಅಸ್ರವತತ್ವ, ಬಂಧತತ್ವ, ಸಂವರತತ್ವ, ನಿರ್ಜರಾತತ್ವ, ಮೋಕ್ಷತತ್ವಗಳೆಂಬ ಸಪ್ತತತ್ವಗಳೂ, ಜೀವಪದಾರ್ಥ ಅಜೀವಪದಾರ್ಥ, ಆಸ್ರವಪದಾರ್ಥ, ಬಂಧ ಪದಾರ್ಥ ಸಂವರಪದಾರ್ಥ ನಿರ್ಜರ ಪದಾರ್ಥ, ಮೋಕ್ಷಪದಾರ್ಥ, ಪಾಪಪದಾರ್ಥ, ಪುಣ್ಯಪದಾರ್ಥಗಳೆಂಬ ನವಪದಾರ್ಥಗಳೂ ಸೇರಿ (5+6+7+9=27) ತತ್ವಗಳ ಸ್ಮಾರಕಗಳಾಗಿರುತ್ತವೆ. ಜೈನ ಸಿದ್ಧಾಂತದಲ್ಲಿ ಇಷ್ಟೇ ಮುಖ್ಯ ತತ್ವಗಳು.[67]

"ವ್ರತಸ್ವೀಕಾರ ಮಾಡಿದ ಬಾಲಕರು ವ್ರತ ಸ್ವೀಕಾರದ ನಂತರ ಜನಿವಾರವನ್ನು ಧರಿಸಲು ಅರ್ಹತೆ ಪಡೆಯುತ್ತಾರೆ. ಜೈನಧರ್ಮದಲ್ಲಿ ಮಹಾಪುರಾಣದಲ್ಲಿ ಹೇಳಿರುವಂತೆ ವಸ್ತ್ರಗಳನ್ನು ಆಚರಿಸುವವರೆಲ್ಲರೂ ಮತ್ತು ರತ್ನತ್ರಯಗಳನ್ನು ಪಾಲಿಸುವವರೆಲ್ಲರನ್ನೂ ದ್ವಿಜರೆಂದೇ ಪರಿಗಣಿಸಲಾಗಿದೆ"[68] ಹೀಗಾಗಿ ಯಜ್ಞೋಪವೀತವನ್ನು ಈ ಪ್ರದೇಶದ ಜೈನ ಸಮುದಾಯದ ಎಲ್ಲ ಪಂಥಗಳೂ ಧರಿಸುತ್ತಿದ್ದವು ಎಂದು ಊಹಿಸಬಹುದು.

ಈ ವಿಧಿಯನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ವರ್ಣಾಶ್ರಮದವರು ಮಾಡಲು ಯೋಗ್ಯರೆಂದು ಹೇಳಲಾಗಿದೆ.

## ಗೌರೀ ಹಬ್ಬ

ಹಬ್ಬ ಅದೊಂದು ಸಂಭ್ರಮ. ಅದಕ್ಕೊಂದು ಆಧ್ಯಾತ್ಮಿಕತೆಯ ಸ್ಪರ್ಶ. ದೇವರ ಪೂಜೆ ಕೇಂದ್ರ ಬಿಂದು. ಪೂಜೆಗೊಂದು ಹಿನ್ನೆಲೆಯ ರಂಗೋಲಿ. ಹಿನ್ನೆಲೆಗೊಂದು ತೋರಣ. ಕಥೆಗೊಂದು ನಿವೇದನೆಯ ಪರಿಮಳ. ಫಲ ಸ್ತುತಿಯ ಮಂಗಳಾರತಿ. ನಾವು ಆಚರಿಸುವ ಒಂದೊಂದು ಹಬ್ಬಕ್ಕೆ ಒಂದೊಂದು ವಿಶೇಷತೆ. ಅವರವರ ಮನೆಯ ಸಂಪ್ರದಾಯಕ್ಕನುಗುಣವಾಗಿ ಒಂದೊಂದು ಬಗೆಯ ಆಚರಣೆ, ನಿಯಮ, ತಯಾರಿ, ಕೆಲಸ, ವ್ಯಾಪಾರ ವಿದ್ಯಾಭ್ಯಾಸದ ನಿಮಿತ್ತ ಬೇರೆ ಬೇರೆ ಊರುಗಳಿಗೆ ತೆರಳಲಿರುವ ಅಕ್ಕ–ತಂಗಿ ಅಣ್ಣ ತಮ್ಮಂದಿರು, ಬಂಧುಗಳು, ಸ್ನೇಹಿತರು ಒಂದೆಡೆ ಸೇರಬೇಕೆನ್ನುವ ಭಾವಕ್ಕೆ ಹಬ್ಬದ ಬೆಸುಗೆ.

ಗೌರಿ ಮತ್ತು ಗಣೇಶ ಹಬ್ಬಗಳು ಮುಖ್ಯವಾದ ಹಬ್ಬಗಳು. ಇವನ್ನು ಕರ್ನಾಟಕದ ದಕ್ಷಿಣ ಭಾಗದಲ್ಲಿ ವೈಷ್ಣವ ಮತದವರು ಹೊರತಾಗಿ ಇತರ ಎಲ್ಲ ಹಿಂದೂಗಳು ಆಚರಿಸುತ್ತಾರೆ. ಈ ಹಬ್ಬವನ್ನು ಸೆಪ್ಟೆಂಬರ್ ತಿಂಗಳಿನಲ್ಲಿ ಆಚರಿಸುತ್ತಾರೆ. ಜೈನರು ಆ ದಿನ ಗೌರಿಯನ್ನು ಶ್ರೇಯಾಂಸ ತೀರ್ಥಂಕರರ ಯಕ್ಷಿಯಾಗಿ ಪೂಜಿಸುತ್ತಾರೆ. ಹಿಂದೂ ಕಲ್ಪನೆಯ ಗೌರಿಪೂಜೆ ಅಥವಾ ಶಿವನ ಹೆಂಡತಿ ಗೌರಿ ಮತ್ತು ಆಕೆಯ ಮಗ ಗಣೇಶನ ಪೂಜೆಗೂ ಜೈನ ಕಲ್ಪನೆಗೂ ವ್ಯತ್ಯಾಸವಿದೆ"[69] ಜೈನರಲ್ಲಿ ಈ ಹಬ್ಬವು ಭಾದ್ರಪದ ಮಾಸದ ಶುಕ್ಲ ತದಿಗೆಯಂದು ಆಚರಿಸುವ ಪದ್ಧತಿ ಇದೆ. ಅಂದು 11ನೆಯ ತೀರ್ಥಂಕರ ಭಗವಾನ್ ಶ್ರೇಯಾಂಸರ ಯಕ್ಷ ಈಶ್ವರ, ಯಕ್ಷಿ ಗೌರಿಯನ್ನು ಪೂಜಿಸುವರು. ಈ ಯಕ್ಷ–ಯಕ್ಷಿಯರ ಕಾರ್ಯವೆಂದರೆ ಶ್ರೇಯಾಂಸ ತೀರ್ಥಂಕರರಿಗೆ ಉಪಸರ್ಗ ಉಂಟಾಗದಂತೆ ನೋಡಿಕೊಳ್ಳುವುದೇ ಆಗಿದೆ. ಆದುದರಿಂದ ಇವರನ್ನು ಪೂಜಿಸುವುದರಿಂದ ಸಮ್ಯಕ್ತ್ವಭಾವವುಂಟಾಗುವುದೆಂಬ ನಂಬಿಕೆ ಇದೆ. ಇದರಿಂದಾಗಿ ಬಾದ್ರಪದ ಶುದ್ಧ ತೃತೀಯದಂದು ಗೌರಿ ಯಕ್ಷಿಯ ಪೂಜೆಯು ಕೆಲವೆಡೆ ಪ್ರಚಾರದಲ್ಲಿದೆ. ಇದನ್ನು

ಸುಮಂಗಲೆಯರೇ ಆಚರಿಸುವರು. ಸೌಮಾಂಗಲ್ಯ ಯೋಗ ಪ್ರಾಪ್ತವಾಗಲೆಂದು ಹೊಸದಾಗಿ ಮದುವೆಯಾದ ಹೆಣ್ಣು ಮಕ್ಕಳು ಗೌರಿಯಕ್ಷಿಯನ್ನು ಪೂಜಿಸಿ ವ್ರತಾದಿಗಳನ್ನು ಆಚರಿಸುತ್ತಾರೆ.

ಜೈನರಲ್ಲಿ ಗೌರೀಹಬ್ಬದ ಹಿನ್ನೆಲೆಯಾಗಿ ಇರುವ ಕಥೆಯೊಂದು ಪ್ರಚಲಿತದಲ್ಲಿದೆ. ಆ ಕಥೆಯನ್ನು ಪಂ। ದೇವಕುಮಾರ್ ಶಾಸ್ತ್ರಿ; ಮೂಡಬಿದಿರೆ ಹಾಗೂ ಡಾ।ಎಸ್.ಡಿ.ಶೆಟ್ಟಿ, ಉಜಿರೆ ರವರು ಸಂಪಾದಿಸಿರುವ ''ಜೈನರ ಹಬ್ಬಗಳು'' ಎಂಬ ಪುಸ್ತಕದಲ್ಲಿರುವ ಕಥೆಯ ವಿವರ ಹೀಗಿದೆ.

''ಶ್ರೇಯೋತ್ಕರಮುಂ ಲೋಕ।
ಕೃಪೆಯಂ ಮಾಳ್ಪೊಡೆ ಕಥೆಯ ಗೌರಿಯನೊಲವಿಂ॥
ಕಾಯ್ವಳಿವಳೆಂದು ಪೂಜಿಸಿ।
ಶ್ರೇಯೋ ನಿಃಶ್ರೇಯಸಂ ತಳೆದಳೆನಚ್ಚಯೇ?॥[70]

ಭರತ ಕ್ಷೇತ್ರದಲ್ಲಿ ಸಿಂಹಪುರವೆಂಬ ಪಟ್ಟಣದ ಅರಸ ಧರ್ಮಶರ್ಮ ಅವನ ಪತ್ನಿ ನಂದಮಹಾದೇವಿ. ಒಂದು ದಿನ 1ನೇ ತೀರ್ಥಂಕರರಾದ ಶ್ರೇಯಾಂಸರ ಸಮಸರಣ ಆ ಪುರದ ಉದ್ಯಾನಕ್ಕೆ ಬಂದಿತ್ತು. ವನಪಾಲಕರಿಂದ ಈ ಸುವಾರ್ತೆಯನ್ನು ತಿಳಿದ ರಾಜ ದಂಪತಿಗಳು ಸಮಸವರಣಕ್ಕೆ ಬಂದು ಅವರಿಗೆ ನಮಿಸಿ ಆರಾಧಿಸಿದರು. ಆ ಸಂದರ್ಭದಲ್ಲಿ ನಂದ ಮಹಾದೇವಿಯು ಸ್ವಾಮಿಯ ಗಣಧರರಾದ ಕುಂಥು ಭಟ್ಟಾರಕರನ್ನು ಪ್ರಾರ್ಥಿಸುತ್ತಾ ''ಸ್ವಾಮಿ! ನಮ್ಮ ಸೌಭಾಗ್ಯವನ್ನು ಪೆರ್ಚಿಸುವ ಮತ್ತು ಸೌಮಾಂಗಲ್ಯ ಯೋಗವಾದ ಕುಂಕುಮಭಾಗ್ಯ ಮುತ್ತೈದೆತನವು ಶಾಶ್ವತವಾಗುಳಿಯುವ ನೋಂಪಿಯನ್ನು ಕರುಣಿಸಿ''[71] ಎಂದು ಬೇಡಿಕೊಂಡಳು.

ರಾಣಿಯ ಈ ಮೊರೆಯನ್ನು ಮನ್ನಿಸಿ ಕುಂಥುಭಟ್ಟಾರಕರು ಭಾದ್ರಪದ ಮಾಸದ ತದಿಗೆಯಂದು ಶ್ರೇಯಾಂಸ ತೀರ್ಥಂಕರರನ್ನು ಈಶ್ವರ–ಗೌರೀ ಯಕ್ಷ ಯಕ್ಷಿಯರ ಸವೇತ ಅಭಿಷೇಕ ಮಾಡಿ, ಒಡ್ಡಚರು ಬೆಲ್ಲ, ತುಪ್ಪ, ಬಾಳೆಹಣ್ಣುಗಳ ನೈವೇದ್ಯದಿಂದ ಯಕ್ಷಿ–ಗೌರಿದೇವಿಯನ್ನು ಪೂಜಿಸಿ ಬಾಯಿನವನ್ನು ನೀಡುವುದು. ಆ ಬಾಗೀನಕ್ಕೆ ಬೆಲ್ಲದಚ್ಚು, ಬಾಳೆಯಹಣ್ಣು, ತೆಂಗಿನಕಾಯಿ, ಕಡಲೆ, ತಂಬಿಟ್ಟು ಚಗುಳಿ, ಎಲೆ ಅಡಿಕೆ, ಫಲ–ಪುಷ್ಪಗಳನ್ನು ಒಟ್ಟು 16 ಮೊದದಲ್ಲಿಟ್ಟು ಹೊನ್ನೂಲನ್ನು ಸುತ್ತಿ ಸೀರೆ, ರವಿಕೆ, ಕರಿಮಣಿ ಕರಿಬಲೆ, ಕನ್ನಡಿ, ಕುಂಕುಮ, ಕಟ್ಟೋಲೆ, ಅರಿಸಿನ, ಗಂಧ, ಚಂದನ ಅಕ್ಷತೆಗಳನ್ನಿರಿಸಿ ಮುನ್ನೂಲನ್ನು ಸುತ್ತಿ ಗೌರಿದೇವಿಗೆ ಅರ್ಪಿಸಿ ''ಓಂ ಹ್ರೀಂ ಧಾತೃರಭೀಪ್ಸಿತ ಫಲದೇವ್ಯಃ ಸ್ವಾಹಾ''[72] ಎಂದು ಅರ್ಘ್ಯವನ್ನೆತ್ತಬೇಕು. ಒಂದು ಬಾಗಿನವನ್ನು ಗೌರಿಗೆ ಇನ್ನೊಂದನ್ನು ಶ್ರುತದೇವಿಗೆ 1ರಿಂದ 108 ಬಾಯಿನಗಳನ್ನು ಶಕ್ತ್ಯನುಸಾರ ಮುತ್ತೈದೆಯರಿಗೆ ನೀಡಬೇಕು. ಆಹಾರವನ್ನಿತ್ತು ಏಕಭುಕ್ತವನ್ನು ಮಾಡುವುದು. ಮರುದಿನವೂ ಇದೇ ಕ್ರಮದಿಂದ ನೋಂಪಿ ಆಚರಿಸುವುದು. ಹೀಗೆ ಹನ್ನೊಂದು ವರ್ಷಗಳ ಪರ್ಯಂತ ನೋಂಪಿಯಿಡಿದು ಉದ್ಯಾಪನೆ ಮಾಡುವ ಕ್ರಮ:–

ಮೊದಲಿನಂತೆ ಭಾದ್ರಪದ ಮಾಸದ ಶುಕ್ಲಪಕ್ಷದ ತದಿಗೆಯಂದು ಅಭಿಷೇಕ, ಪೂಜೆ, ನೋಂಪಿ, ಬಾಯಿನ, ದಾನ, ಧರ್ಮದೊಂದಿಗೆ 11ತಂಡ ಜೈನದಂಪತಿಗಳಿಗೆ ಬಾಯಿನ, ಆಹಾರದಾನ ನೀಡುವುದು''[73] ಎಂದರು. ''ಪೂಜ್ಯರೇ। ಈ ಮೊದಲು ಈ ಗೌರಿನೋಂಪಿಯನ್ನು ಯಾರು ಮಾಡಿ ತನ್ನ ಮುತ್ತೈದೆತನವನ್ನು ಶಾಶ್ವತವಾಗಿ ಪಡೆದರು?'' ಎಂದು ಮಹದೇವಿಯು ಕೇಳಿದಾಗ ಕುಂಥುಭಟ್ಟಾರಕರು. ಕಾಂಭೋಜ ನಾಡಿನ ಉಜ್ಜೈನಿಯ ಅರಸ ಶ್ರೇಯೋರಾಜ ಶ್ರೀಮತಿ ದಂಪತಿಗಳ ಕಥೆಯನ್ನು ಹೇಳುತ್ತಾರೆ.

ಶ್ರೇಯೋರಾಜ ಹಾಗೂ ಶ್ರೀಮತಿ ರಾಜದಂಪತಿಗಳು ಶತ್ರುಗಳಿಂದ ತಮ್ಮ ರಾಜ್ಯವನ್ನು ಕಳೆದುಕೊಂಡು ರಾಜಭ್ರಷ್ಟರಾಗಿ, ರಾಜಾಪುರ ಎಂಬಲ್ಲಿ ಅಲೆದಾಡುತ್ತಿರುವಾಗ ಆ ಪುರದ ಉದ್ಯಾನದಲ್ಲಿ 'ಸ್ವಯಂಭೂ' ಎಂಬ ಅವಧಿ ಜ್ಞಾನಿಗಳ ಭೇಟಿಯಾಗುತ್ತದೆ. ಶ್ರೀಮತಿಯ ಅಳನ್ನು ಕೇಳಿದ ಅವಧಾನಿಗಳು 'ಮಗಳೇ! ಭಾದ್ರಪದ ಶುಕ್ಲತದಿಗೆಯಂದು ಗೌರಿವ್ರತವನ್ನು ಪಾಲಿಸು. ನಿನ್ನ ಭಾಗ್ಯ ಹೆಚ್ಚುವುದು, ಕರಿಮಣಿಯ ಮಾಂಗಲ್ಯಭಾಗ್ಯ

ಉಳಿಯುವುದು ಎಂದು ಹೇಳಿದರು. ಅದರಂತೆ ಶ್ರೀಮತಿಯು ನೋಂಪಿಯನ್ನು ಹಿಡಿದು ಹೊಂಗನೂಲನ್ನು ಪತಿಯ ಕೈಗೆ ಕಟ್ಟಿದಾಗ ಧನಕನಕ ಪ್ರಾಪ್ತವಾಯಿತು. ಬಡತನದ ಬವಣೆಯಲ್ಲಿ ಮಳಲ ಪುಂಜವನ್ನು ಮಾಡಿ ಶ್ರೇಯಾಂಸ ಜಿನರೆಂದು ಸಂಕಲ್ಪಿಸಿ ಪೂಜಿಸಿದಾಗ ಆಶ್ಚರ್ಯವೆಂಬಂತೆ ಸಕಲ ಸಂಪತ್ತು ರಾಜವೈಭವ ಪ್ರಾಪ್ತವಾಯಿತು. ಬಡತನದಿಂದ ಮಳಲಿನ ಮೂರ್ತಿ ಮಾಡಿದ್ದನ್ನು ಅರಿಯದೆ ಎಲ್ಲರೂ ಭ್ರಾಂತಿಯಿಂದ ಮಳಲಿನ ಪುಂಜವನ್ನೇ ತಂದು ''ಗೌರೀ ದೇವಿಯು ಹೊಳೆಯಲ್ಲಿ ಬಂದಳು, ಆಕೆಯನ್ನು ವಿನಾಯಕ ಕರೆತಂದನು ಎಂಬ ವಿದ್ಯಾಭ್ರಾಂತಿಯಿಂದ ಈಶ್ವರನ ಪತ್ನಿ ಗೌರಿಯನ್ನು ಪೂಜಿಸಿದರು''[74]

ಇದರ ಬದಲಾಗಿ ಶ್ರೇಯಾಂಸ ಹಾಗೂ ಅವರ ಯಕ್ಷ–ಯಕ್ಷಿಯರಾದ ಈಶ್ವರ ಯಕ್ಷ–ಗೌರೀಯಕ್ಷಿಯರನ್ನು ಭಕ್ತಿಯಿಂದ ಭಜಿಸಿ, ಪೂಜಿಸಿ ಸ್ವರ್ಗಾಪವರ್ಗಗಳನ್ನು ಪಡೆಯುವ ಈ ನೋಂಪಿ ಎಲ್ಲರಿಗೂ ಸನ್ಮಂಗಳವನ್ನುಂಟು ಮಾಡಲಿ ಹೀಗೆ ಗೌರೀಹಬ್ಬದಂದು ಶ್ರೇಯಾಂಸ ತೀರ್ಥಂಕರರಿಗೆ ಅಭಿಷೇಕ, ಪೂಜೆ, ಅರ್ಚನೆಗಳು ನೆರವೇರುವುದರ ಜೊತೆಗೆ ಗೌರಿದೇವಿಗೆ ಷೋಡಶೋಪಚಾರ ಪೂಜೆಯನ್ನು ಸುಮಂಗಲೆಯರಿಗೆ ಬಾಗಿನ ವಿತರಣೆಯನ್ನು ಮಾಡುತ್ತಾರೆ. ಕೆಲವು ಸ್ತ್ರೀಯರು ಗೌರೀನೋಂಪಿ ವ್ರತವನ್ನು ಕೈಗೊಳ್ಳುತ್ತಾರೆ. ಜೈನೇತರರಲ್ಲಿ ಗೌರೀಪೂಜೆ, ಗೌರೀವ್ರತ, ಮಂಗಳಗೌರೀವ್ರತ ರೂಢಿಯಲ್ಲಿರುವಂತೆ ಇದಕ್ಕೆ ಸಂವಾದಿಯಾಗಿ ಇಲ್ಲಿ ಗೌರೀಯಕ್ಷಿಯನ್ನು ಜೈನರು ಪೂಜಿಸುವುದು, ಸಾಂಸ್ಕೃತಿಕ ಸಮನ್ವಯದ ದೃಷ್ಟಿಯಿಂದ ಗಮನಿಸಬೇಕಾದ ಅಂಶವಾಗಿದೆ.

## ನಾಗರಪಂಚಮಿ

### ಇತಿಹಾಸ

ಯಾವುದೇ ಧರ್ಮ, ಭಾಷೆ ಮತ್ತು ಜಾತಿ, ಜನಾಂಗಕ್ಕೆ ಸೀಮಿತಗೊಳಿಸದೇ ಒಟ್ಟಾರೆ ಭಾರತದ ಸಂಸ್ಕೃತಿಯನ್ನು ಸಮಗ್ರ ದೃಷ್ಟಿಯಲ್ಲಿ ಗಮನಿಸಿದರೆ ಆಚರಿಸುತ್ತಿರುವ ನಾಗರಪಂಚಮಿಯ ಇತಿಹಾಸ ಕ್ರಿ.ಪೂ.ವರೆಗೆ ವಿಸ್ತರಿಸಿದೆ. ನಾಗಾರಾಧನೆ ಭಾರತದಲ್ಲಿ ಮಾತ್ರವಲ್ಲದೆ ಜಗತ್ತಿನಲ್ಲಿಯೇ ಇದೊಂದು ಪುರಾತನದ ಸಂಸ್ಕೃತಿ. ಕ್ರಿ.ಪೂ. 2600 ವರ್ಷಗಳ ಮೊದಲೇ ಸುಮೇರಿಯನ್ನು ದೊರೆ 'ಗುದಿಯನ್' ಎನ್ನುವವ ಬಳಸುತ್ತಿದ್ದ ಮಣ್ಣಿನ ಸಾರಾಯಿ ಮಡಿಕೆಯಲ್ಲಿ ಜೋಡಿನಾಗರದ ಚಿತ್ರವಿತ್ತಂತೆ. ಗ್ರೀಕರ ರಾಷ್ಟ್ರ ಲಾಂಛನ ಸರ್ಪವಾಗಿತ್ತು. ಗ್ರೀಕರ ವೈದ್ಯವಿಜ್ಞಾನದ ಲಾಂಛನವಾಗಿತ್ತು. ಗ್ರೀಕ್ ವೀರರು ಸತ್ತಮೇಲೆ ನಾಗಗಳು ಆಗುತ್ತಾರೆ ಎಂಬ ನಂಬಿಕೆ ಇದೆ. ಹಾಗೆಯ ಅಥೆನ್ಸ್ ಪಟ್ಟಣದಲ್ಲಿ ಸರ್ಪದೇವಾಲಯವಿದೆ. ಗ್ರೀಕ್ ಜಾನಪದದಲ್ಲಿ ಒಲಂಪಿಯ ಹಾಗೂ ಸರ್ಪರಾಜನ ಮಗ ಅಲೆಗ್ಸಾಂಡರ್ ಎನ್ನುವ ಉಲ್ಲೇಖವಿದೆ. ಮೆಸಪಟೋಮಿಯಾ, ಬ್ಯಾಬಿಲೋನಿಯಾ, ಈಜಿಪ್ಟ್‌ನ ಎಲ್ಲಾ ಕಡೆಯಲ್ಲೂ ಸರ್ಪಾರಾಧನೆ ಇದೆ. ಶ್ರೀಲಂಕಾ, ಕಾಂಬೋಡಿಯಾ, ಫಿಜಿದ್ವೀಪ, ಬರ್ಮಾ, ಜಾವಾ, ಬೋರ್ನಿಯಾ, ಚೀನಾ ಹೀಗೆ ಎಲ್ಲಾ ದೇಶಗಳಲ್ಲೂ ನಾಗಗಳನ್ನು ನಂಬುತ್ತಿದ್ದರು.

ಹರ್ಷವರ್ಧನ ರಾಜ ದಕ್ಷಿಣ ಭಾರತದಲ್ಲಿ ಆಳ್ವಿಕೆ ಮಾಡುತ್ತಿದ್ದನು. ಆತ ಸ್ವತಃ ಕವಿ, ನಾಟಕಕಾರ ಆಗಿದ್ದ. ಅವನು ನಾಗನಂದಿ ಎಂಬ ನಾಟಕವನ್ನು ಬರೆದಿದ್ದ. ಈ ನಾಟಕ ನಿಜವಾಗಿದ್ದು, ನಾಗಾರಾಧನೆ ಕ್ರಿ.ಶ. 6ನೇ ಶತಮಾನದಲ್ಲಿಯೇ ಇತ್ತೆಂದು ಸ್ಪಷ್ಟವಾಗುತ್ತದೆ. ಚಾಲುಕ್ಯ ವಂಶದ ಕುಲದವರು ನಾಗಾರಾಧಕರಾಗಿದ್ದು ಅವರ ಕುಟುಂಬದ ಒಂದು ಪಾಲು ಆಳುಪ ವಂಶದವರಾಗಿದ್ದು ಅವರೂ ನಾಗಾರಾಧಕರೇ ''ಆಳುಪ'' ಎನ್ನುವ ಶಬ್ಧದಲ್ಲಿಯೇ ಆಲೂಕಡ್ಡೆ'' ಬಂತು. ''ಆಲುಕ'' ಎನ್ನುವ ಶಬ್ಧ ಮಹಾಶೇಷನ ಪರ್ಯಾಯ ಶಬ್ಧ. ಹೀಗೆ ಆಳುಪರಿಂದಲೇ ನಾಗಾರಾಧನೆ ಶುರುವಾಯಿತು ಎಮದು ಕೆಲವು ಇತಿಹಾಸಕಾರರ ನಂಬಿಕೆ. ಪಶ್ಚಿಮ ಕಡಲ ಬದಿಯಲ್ಲಿ 'ಚಂಗ' ಎನ್ನುವ ಒಂದು ಜಾತಿಯ ಮೀನುಗಾರರಿದ್ದರು. ಇವರು ನಾಗಕುಲದವರು. 'ಚಂಗ' ಹೇಳುವ ಶಬ್ದವೇ ಮುಂದೆ 'ಸಂಕ' ಆಯಿತು. ಈಗಲೂ ತುಳುವಿನಲ್ಲಿ ದೊಡ್ಡ ಸರ್ಪವನ್ನು 'ಸಂಕಪಾಲೆ' ಎಂದು

ಕರೆಯುತ್ತಾರೆ. ಈ ಚಂಗ ಜಾತಿಯವರು ಕೇರಳದಿಂದ ಗೋಕರ್ಣದವರೆಗೂ ಇದ್ದರು. ಅವರಿದ್ದ ನಾಡು ಸರ್ಪರಾಧಕರ ನಾಡಾಯಿತು. ಮಾನವ ಮನೆಕಟ್ಟಿ ಬದುಕು ಆರಂಭಿಸಿದ ಕಾಲದಿಂದಲೂ ನಾಗಾರಾಧನೆ ಅಸ್ತಿತ್ವದಲ್ಲಿದೆ. ಕ್ರಮ–ವಿದಾನಗಳಲ್ಲಿ ಬದಲಾವಣೆಗಳಾಗಿದ್ದರೂ ನಾಗಶ್ರದ್ಧೆ, ಬಲಗುಂದಲಿಲ್ಲ. ಮಾನವನಿಂದ ಮೊದಲು ಪೂಜಿಸಲ್ಪಟ್ಟ ಪ್ರಾಣಿ ನಾಗ. ವೈದಿಕರ ಪರಮೋಚ್ಛ ಅಲೆ ರೂಢಿಯಲ್ಲಿದೆ. ಉದ್ಯಾನದಲ್ಲಿ ಪೂಜಿಸಲ್ಪಟ್ಟ ನಾಗಾರಾಧನೆ ಇನ್ನೂ ರೂಢಿಯಲ್ಲಿದೆ. ಶ್ರಾವಣ ಮಾಸದ ಆರಂಭದ ಹಬ್ಬವೆಂದರೆ ನಾಗರಪಂಚಮಿ ಶ್ರದ್ಧೆ ಉತ್ಸಾಹದಿಂದ ಆಚರಿಸುವ ಹಬ್ಬ. ಅಲ್ಲದೇ ಆಚರಣೆಗಳಲ್ಲಿ ಮೊದಲು ಆರಂಭವಾಗುವ ಮೊದಲ ಹಬ್ಬ ಎಂಬ ಪ್ರತೀತಿ ಇದೆ.

ನಾಗ ಮಾನವನ ಸಂಬಂಧ ಪ್ರಾಚೀನವಾದುದು. ಇಲ್ಲಿ ವಿವಿಧ ಮೂಲದ ಅನಾವರಣವಿದೆ. ಅಂದರೆ ವಿವಿಧ ಸ್ಥಳಗಳಲ್ಲಿ ನಾಗನ ಪ್ರತಿಯಾದ ಶಿಲ್ಪಕಲೆಗಳಿವೆ. ಈ ಶಿಲ್ಪಕೃತಿಯ ಕಲ್ಲಿಗೆ ಇಂದು ಹಾಲು ಎರೆದು ಪೂಜೆ ಸಲ್ಲಿಸುವುದು ರೂಢಿಯಲ್ಲಿದೆ. ಈ ನಾಗರಪಂಚಮಿಯನ್ನು ಸ್ತ್ರೀ ಕುಲವು ಇನ್ನೂ ಮುಂದುವರೆಸಿಕೊಂಡು ಹೋಗುತ್ತಿದೆ. ಈ ನಾಗರ ಪಂಚಮಿಯು ಶ್ರಾವಣ ಶುದ್ಧ ನಾಲ್ಕನೆಯ ದಿವಸ ಬರುತ್ತದೆ. ಶ್ರಾವಣದ ಹಬ್ಬಗಳಲ್ಲಿ ನಾಗರಪಂಚಮಿಯೇ ಮುಖ್ಯ. ಪ್ರಸ್ತುತ ನಾಗಪೂಜೆ ದ್ರಾವಿಡ ಜನಾಂಗದ ಹಬ್ಬವೆಂಬ ಪ್ರತೀತಿ ಇದೆ. ಏಕೆಂದರೆ ಆರ್ಯರಿಗಿಂತಲೂ ಮೊದಲು ದ್ರಾವಡರೇ ಭಾರತದಲ್ಲಿದ್ದವರು. ಆ ಕಾಲದಲ್ಲಿಯೇ ನಾಗನನ್ನು ನಂಬಿ ಆರಾಧಿಸುತ್ತಿದ್ದರು. ತಮ್ಮ ನಾಗದೋಷಗಳ ಪರಿಹಾರಕ್ಕಾಗಿ ನಾಗಮಂಡಲವನ್ನು ಮಾಡಿ ಪರಿಹರಿಸಿಕೊಳ್ಳುತ್ತಿದ್ದರು ಎಂಬ ಅಭಿಪ್ರಾಯವಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಹ್ಮಣ್ಯ ನಾಗಸ್ಥಾನವೆಂಬ ಪ್ರತೀತಿಯನ್ನು ಪಡೆದುಕೊಂಡಿದೆ. ಇಲ್ಲಿ ಪ್ರತಿನಿತ್ಯವೂ ಸಾವಿರಾರು ನಾಗಶಿಲ್ಪಕ್ಕೆ ಪೂಜೆಯನ್ನು ಸಲ್ಲಿಸುತ್ತಾರೆ. ಆದರೆ ವರ್ಷದಲ್ಲಿ ಒಮ್ಮೆ ಬರುವ ನಾಗರಪಂಚಮಿಯಂದು ಅತಿ ವಿಜೃಂಭಣೆಯಿಂದ ಪೂಜೆಯನ್ನು ಸಲ್ಲಿಸುತ್ತಾರೆ. ಇದನ್ನು ಅನಾದಿಕಾಲದಿಂದಲೂ ನಡೆಸಿಕೊಂಡು ಬರಲಾಗುತ್ತಿದೆ.

ನಾಗಪೂಜೆಯನ್ನು ಸ್ತ್ರೀಯರು ಅತಿ ನಂಬಿಕೆಯಿಂದ ಆಚರಿಸುತ್ತಾರೆ. ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ಸಮೀಪದಲ್ಲಿರುವ ವಿಧುರಾಶ್ವತ್ಥ ದೇವಾಲಯದಲ್ಲಿ ಅತಿ ದೈವೀಶಕ್ತಿಯಿಂದ ಪೂಜೆ ನೆರವೇರಿಸುತ್ತಾರೆ. ಇದು ಕರ್ನಾಟಕದಲ್ಲಿ ಎರಡನೇ ದೈವೀಶಕ್ತಿ ಹೊಂದಿದ ನಾಗಶಿಲ್ಪ ಎಂಬ ಹೆಸರು ಪಡೆದುಕೊಂಡಿದೆ. ನಾಗನನ್ನು ಶುದ್ಧ ಮನಸ್ಸಿನಿಂದ ಬೇಡಿಕೊಂಡರೆ ಸಂತಾನಭಾಗ್ಯ, ಆಸ್ತಿ ವಿಚಾರಗಳು ಮುಂತಾದ ಸಮಸ್ಯೆಗಳು ಬಗೆಹರಿಯುತ್ತವೆ. ಸರ್ಪದೋಷವನ್ನು ಬಗೆಹರಿಸಿಕೊಳ್ಳಲು ಶಾಸ್ತ್ರೋಕ್ತವಾಗಿ ವಿಧಿ ವಿಧಾನಗಳನ್ನು ಅನುಸರಿಸಿ ಪೂಜೆ ಸಲ್ಲಿಸಿದರೆ ದೋಷವನ್ನು ನಿವಾರಿಸಿಕೊಳ್ಳಬಹುದು.

ಪಂಚಮಿಯಂದು ಜನಮೇಜಯ ಮಹಾರಾಜನು ಮಾಡುತ್ತಿದ್ದ ಸರ್ಪಯಜ್ಞವನ್ನು ನಿಲ್ಲಿಸಿ, ಮಹಾರಾಭಾರತ ಕಥೆಯನ್ನು ಕೇಳಲು ಪ್ರಾರಂಭಿಸಿದನಂತೆ. ಇದರಿಂದ ಆತನ ತೊನ್ನುರೋಗ ಗುಣವಾಯಿತಂತೆ. ಈ ದಿನ ಹುತ್ತಗಳಿಗೆ ಹಾಲೆರೆದು ಹುತ್ತವನ್ನು ಪೂಜಿಸುತ್ತಾರೆ.

ಬಸವಣ್ಣನವರು ತಮ್ಮ ವಚನದಲ್ಲಿ ಹೀಗೆಂದಿದ್ದಾರೆ:

ಕಲ್ಲನಾಗನ ಕಂಡರೆ ಹಾಲೆರೆಯೆಂಬರು
ಜೀವದ ನಾಗನ ಕಂಡರೆ ಕೊಲ್ಲೆಂಬರಯ್ಯ

ನಾಗಕಲ್ಲಿಗೆ ಹಾಲೆರೆದು, ಜೀವಂತ ನಾಗರಹಾವನ್ನು ಕೊಲ್ಲುವುದನ್ನು ವಿಡಂಬಿಸಿದ್ದಾರೆ.

ಇನ್ನು ಜೈನಧರ್ಮದಲ್ಲಿನ ನಾಗಾರಾಧನೆಯ ಇತಿಹಾಸವನ್ನು ನೋಡುವುದಾದರೆ ಕನ್ನಡದ ಪ್ರಥಮ ಗದ್ಯಕೃತಿ ಅಥವಾ ಪ್ರಾಚೀನ ಜೈನಗ್ರಂಥವಾಗಿರುವ 'ವಡ್ಡಾರಾಧನೆ'ಯಲ್ಲಿ ಸುಕುಮಾರಸ್ವಾಮಿಯ ಕಥೆಯೊಂದಿದ್ದು ಅದರಲ್ಲಿ ನಾಗನಿಗೆ ಹೆಸರಿಟ್ಟ ಒಂದು ಪ್ರಸಂಗ ಬರುತ್ತದೆ.

''ಚಂಪಾನಗರದ ರಾಜಪುರೋಹಿತ ಸೋಮಶರ್ಮ ಅವನ ಮಡದಿ ತ್ರಿವೇದಿಯೆಂಬ ದಂಪತಿಗಳು, ಆ ನಗರದ ಉದ್ಯಾನದ ನಾಗರನನ್ನು ಪೂಜಿಸಿ, ಹರಕೆ ಸಲ್ಲಿಸಿ ಮಗಳನ್ನು ಪಡೆದುದಾಗಿಯೂ ಆ ಮಗಳಿಗೆ

ನಾಗಶ್ರೀಯೆಂಬ ಹೆಸರಿಟ್ಟಂತೆಯೂ ಹೇಳಲಾಗಿದೆ. ಆ ಉದ್ಯಾನದಲ್ಲಿ ಕಂಬಳನಾಗ ಶಂಬರನಾಗ, ಪಾಂಡುಕನಾಗನೆಂಬ ನಾಗಪ್ರತಿಮೆಗಳಿದ್ದುದಾಗಿಯೂ ಹೇಳಿದೆ''[75]

ಹಾಗೆಯೇ ಜೈನರ ನಾಗರಪಂಚಮಿಯ ನೋಂಪಿ ವ್ರತದ ಕಥಾಪಾತ್ರದಲ್ಲಿ ಬರುವ ಒಂದು ವರ್ಣನೆ ಹೀಗಿದೆ. ''ವರ್ಧಮಾನ ಮಹಾವೀರ ಸ್ವಾಮಿಯ ಸಮವಸರಣವು ವಿಪುಲಾಚಲಕ್ಕೆ ಬಂದಿರುತ್ತದೆ. ಆ ಶ್ರೇಣಿಕ ಮಹಾರಾಜನ ಹೆಂಡತಿಯಾದ ಚೇಳಿನೀ ದೇವಿಯು ಸ್ವಾಮಿಯ ದರ್ಶನ ಪಡೆದು ಅಲ್ಲಿದ್ದ ಗೌತಮ ಗಣಧರರಿಗೆ ಕೈಮುಗಿದು ಯಾವುದಾದರೂ ನೋಂಪಿಯನ್ನು ಬೆಸೆಸಿಯೆಂದು ಕೇಳುತ್ತಾಳೆ. ಅದಕ್ಕೆ ಗಣಧರರು ''ಕಮಠನ ಉಪಸರ್ಗವನ್ನು ನಿವಾರಿಸಿದಾಗ ಧರಣೇಂದ್ರ ಪದ್ಮಾವತಿಯನ್ನೂ ಪಾರ್ಶ್ವನಾಥ ತೀರ್ಥಂಕರರನ್ನೂ ಗರುಡ ಪಂಚಮಿಯಲ್ಲಿ ನೋಂಪುವುದು''[76] ಎಂದು ವ್ರತವನ್ನು ಉಪದೇಶಿಸುತ್ತಾರೆ. ಈ ವ್ರತವನ್ನು ಕೈಗೊಂಡ ಚೇಳಿನಿದೇವಿಯು ದೇವಕುಮಾರರಿಗೆ ಸಮಾನರಾದ ಮಕ್ಕಳನ್ನು ಪಡೆದು, ಅಪರಿಮಿತ ಸುಖವನ್ನು ಅನುಭವಿಸಿದಳೆಂದು ಹೇಳಲಾಗಿದೆ. ಇದೇ ರೀತಿಯ ಚಾರಿತ್ರಿಕ ಘಟನೆಯೊಂದು ಶಾಸನದಲ್ಲಿ ಬಂದಿದೆ. ನನ್ನಿಯಂಗ ಮತ್ತು ಆತನ ಹೆಂಡತಿ ಕಂಚಲದೇವಿಯರು, ಪದ್ಮಾವತಿಗೆ ಹರಸಿಕೊಂಡು ಹೆಮ್ಮಾಡಿ ದೇವನನ್ನು ಪಡೆದಂತೆ ಹೇಳಿದೆ'[77] ಇದರಿಂದ ತಿಳಿದು ಬರುವ ಅಂಶವೆಂದರೆ ಜೈನೇತರರಂತೆ ಜೈನರೂ ಸಹ ನಾಗನಿಗೆ ಹರಕ್ಕೆ ಹೊತ್ತು ಸಂತಾನಭಾಗ್ಯವನ್ನು ಪಡೆಯುತ್ತಿದ್ದರೆಂಬುದು ವಿಧಿತವಾಗುತ್ತವೆ. ಇಲ್ಲಿ ನಡೆಯುವ ಜೈನ ಮತೀಯರ ವಿವಾಹ ಪದ್ಧತಿಯಲ್ಲಿ ವಧುವಿನ ತಾಯಿಯು ಕೈಗೊಳ್ಳುವ ನಾಗಬಲಿ ಶಾಸ್ತ್ರವಂತೂ ನೇರವಾಗಿ ನಾಗನಿಗೆ ಸಲ್ಲುವ ಪೂಜೆಯೇ ಆಗಿದೆ. ಪಂಚವರ್ಣದಿಂದ ಬರೆದ ಮಂಡಲದಲ್ಲಿ ಅಷ್ಟನಾಗ ದೇವತೆಯರಿಗೆ ಪೂಜೆಯನ್ನು ಮಾಡಿ ಆಕೆ ಸಂತಾನಭಾಗ್ಯವನ್ನು ಕೋರುತ್ತಾಳೆ.[78]

ಜೈನಪುರಾಣಗಳಲ್ಲಿ ಧರಣೇಂದ್ರ ಪದ್ಮಾವತಿಯರು, ಭಗವಾನ್ ಪಾರ್ಶ್ವನಾಥರ 'ತಪಸ್ಸಿನ ಸಮಯದಲ್ಲಿ ಕಮಠನಿಂದ ಉಂಟಾದ ಉಪಸರ್ಗವನ್ನು ನಿವಾರಿಸಿ ಅವರನ್ನು ರಕ್ಷಿಸುತ್ತಾರೆ. (ಈ ಪ್ರಸಂಗವನ್ನು ಈ ಹಿಂದೆಯೇ ವಿವರಿಸಲಾಗಿದೆ) ಹೀಗಾಗಿ ನಾಗನನ್ನು ತಮ್ಮ ಕಷ್ಟಗಳನ್ನು ನಿವಾರಿಸುವ ದೈವವೆಂದು ಜೈನರು ನಂಬುತ್ತಾರೆ. ಮುಲ್ಕಿಯ ಪದ್ಮನಾಭ ಕವಿಯು ತನ್ನ ''ಪದ್ಮಾವತೀ ಮಹಾತ್ಮೆ'' ಗ್ರಂಥದಲ್ಲಿ ಒಂದು ಚಾರಿತ್ರಿಕ ಘಟನೆಯನ್ನು ಈ ರೀತಿ ವರ್ಣಿಸಿದ್ದಾರೆ. ಶಾಂತರರ ರಾಜ್ಯಸ್ಥಾಪಕನಾದ ಜಿನದತ್ತರಾಯನು, ಪದ್ಮಾವತಿಯ ಕಟಾಕ್ಷದಿಂದ, ತನ್ನ ತಂದೆಯ ಸೈನಿಕರನ್ನು ಸೋಲಿಸಿ ಪಟ್ಟ ಪೊಂಬುಚ್ಚಪುರದಲ್ಲಿ ರಾಜ್ಯ ಸ್ಥಾಪನೆ ಮಾಡಿದನೆಂದು ಹೇಳಿದ್ದಾರೆ. ಈ ಘಟನೆಯೂ ಕೂಡ ಜೈನರು ನಾಗನನ್ನು ಇನ್ನಷ್ಟು ನಂಬಲು ಕಾರಣವಾಗಿರಬಹುದು.

ನಾಗನನ್ನು ಆರಾಧಿಸುವ ಕ್ರಮವು ಪ್ರಾಗೈತಿಹಾಸಿಕ ಕಾಲದಿಂದಲೂ ರೂಢಿಯಲ್ಲಿದೆ. ಸಿಂಧು ಸಂಸ್ಕೃತಿಯ ಅವಶೇಷದಲ್ಲಿಯೇ ನಾಗಮಿಥುನವಿದೆ. ಋಗ್ವೇದದ ಪ್ರಧಾನದೈವ ಸರ್ಪವೆನ್ನಲಾಗುತ್ತದೆ. ಭಾರತದಲ್ಲಷ್ಟೇ ಅಲ್ಲ ಈಜಿಪ್ಟ್, ಗ್ರೀಸ್, ಅಸೀರಿಯಾ ಮುಂತಾದ ಸಂಸ್ಕೃತಿಗಳಲ್ಲಿ ನಾಗನೇ ಅಧಿದೈವ''[79] ಕರ್ನಾಟಕದ ತುಳುನಾಡಿನ ಭಾಗದಲ್ಲಿ ನಾಗಬನ, ನಾಗಪ್ರತಿಮೆಗಳು ಹೇರಳವಾಗಿ ದೊರಕುತ್ತವೆ. ಈ ನಾಡಿನ ತುಂಬೆಲ್ಲಾ ಜೈನವಾಸ್ತುಶಿಲ್ಪಗಳಲ್ಲಿ ನಾಗಶಿಲ್ಪದ ಕೆತ್ತನೆಯು ಪ್ರಧಾನವಾಗಿ ಗೋಚರವಾಗುತ್ತದೆ. ತುಳುನಾಡಿನ ಭಾಗಗಳಾದ ಮೂಡಬಿದಿರೆಯ ತ್ರಿಭುವನತಿಲಕಬಸದಿ, ಕಾರ್ಕಳ, ಗೇರುಸೊಪ್ಪೆಗಳಲ್ಲಿರುವ ಚತುರ್ಮುಖ ಬಸದಿಗಳ ಮೂಲ ಕಟ್ಟಡಗಳ ಮೇಲೆ ನಾಗಶಿಲ್ಪದ ಕೆತ್ತನೆ ಇದೆ. ಒಟ್ಟಾರೆಯಾಗಿ ನಾಗರಪಂಚಮಿಯ ಹಬ್ಬವು ಜೈನರಲ್ಲಿ ಕಂಡುಬರುವ ಒಂದು ಪ್ರಮುಖವಾದ ಹಬ್ಬವಾಗಿದೆ. ಈ ಆಚರಣೆಗೆ ಈ ಮೇಲಿನ ಹಲವಾರು ಕಾರಣಗಳಿದ್ದರೂ, ಜೈನರು ಪ್ರಬಲವಾಗಿ ಪ್ರತಿಪಾದಿಸುವುದೆಂದರೆ ಪಾಶ್ವನಾಥನಿಗೆ ನಿವಾರಣೆಯಾದ ಕಮಠೋಪಸರ್ಗದ ಕಥೆ. ಅಂದರೆ ''ಜೈನರು ನಾಗರಪಂಚಮಿಯಂದು ಭಗವಾನ್ ಶ್ರೀ ಪಾರ್ಶ್ವನಾಥರಿಗೆ ಕಮಠನು ಮಾಡಿದ ಉಪಸರ್ಗವನ್ನು ಧರಣೇಂದ್ರ ಪದ್ಮಾವತಿಯರು ದೂರಗೊಳಿಸಿದುದರಿಂದ ಶ್ರಾವಣ ಶುದ್ಧ ಪಂಚಮಿಯ ದಿನ ಆ ಯಕ್ಷ ಯಕ್ಷಿಯರ ಸಹಿತವಾದ

ಪಾರ್ಶ್ವನಾಥರಿಗೆ ಕ್ಷೀರಾಭಿಷೇಕ, ಪೂಜೆ ನೋಂಪಿಯನ್ನು ಮಾಡುತ್ತಾರೆ. ಇದು ನಾಗರಪಂಚಮಿ ಎಂಬ ತಿಥಿಯಾಯಿತು''[80] (ನಾಗರ ಪಂಚಮಿ ಆಚರಣೆಯು ಉತ್ತರಕರ್ನಾಟಕದ ಭಾಗದ ಜೈನರಲ್ಲಿ ಕಂಡುಬರುತ್ತದೆ. ಆದರೆ ದಕ್ಷಿಣ ಭಾಗದ ಜೈನರಲ್ಲಿ ಇದರ ಆಚರಣೆಗೆ ಅಷ್ಟಾಗಿ ಈಗ ಕಂಡು ಬರುವುದಿಲ್ಲ.

ನಾಗರಪಂಚಮಿಯಂದು ಜೈನರು ವ್ರತವನ್ನು ಕೈಗೊಂಡು, ಶುಭ್ರಗೊಂಡು ಬಸದಿಗಳಿಗೆ ತೆರಳಿ ಧರಣೇಂದ್ರ, ಪದ್ಮಾವತಿಯರಿಗೆ ವಿವಿಧ ಅಭಿಷೇಕ ಮಾಡಿ ಭಕ್ತಿಯಿಂದ ಆರಾಧಿಸುತ್ತಾರೆ. ಆದಿನ ಸುಮಂಗಲೆಯರಿಗೆ ಅರಳು, ಕಡಲೆಕಾಯಿ, ಸೌತೇಕಾಯಿ, ಮುಷ್ಟಿಕಡಬು, ಹಾಲು, ತುಪ್ಪ, ಬೆಲ್ಲ, ಬೆರಸಿ ಗಂಧ, ಅಕ್ಷತೆ ತಾಂಬೂಲಗಳನ್ನು ಬಾಗಿನ ಕೊಡುತ್ತಾರೆ. ಅದೇ ದಿನ ಏಕಭುಕ್ತವಿದ್ದು, ಮಾರನೆಯದಿನ ಶೀಯಳೆ ಷಷ್ಠಿಯನ್ನು ಮಾಡುತ್ತಾರೆ. ಅದೇ ದಿನ ಬಸದಿಗೆ ತೆರಳಿ ನೇಮಿನಾಥ ತೀರ್ಥಂಕರರಿಗೂ, ಅಂಬಿಕಾ ಯಕ್ಷಿಗೂ ಅಭಿಷೇಕ ಮಾಡಿ ಅಂಬಲಿಯನ್ನು ಸೌತೆಕಾಯಿ ಸಮೇತ ಎಕ್ಕೆ ಎಲೆಯೊಳಗಿಟ್ಟು, ಕೆನೆಮೊಸರು, ಚಿಗುಳಿ, ತಂಬಿಟ್ಟು, ನೆಲಗಡಲೆಯನ್ನು ಜಲ ಗಂಧಾಕ್ಷಿಯೊಡನೆ ಐದು ಜನ ಸಮಂಗಲೆಯರಿಗೆ ದಾನ ಮಾಡುತ್ತಾರೆ. ವ್ರತಿಕರು ಮನೆಗೆ ತೆರಳಿ ಆ ದಿನ ಅಂಬಲಿಯನ್ನು ಸೌತೆಕಾಯಿಯನ್ನು ಊಟಮಾಡುತ್ತಾರೆ. ಇದರಿಂದ ನಾಗನಿಗೆ ತೃಪ್ತಿಯಾಗುವುದೆಂದೂ ಅವರು ಭಾವಿಸುತ್ತಾರೆ. ಹೀಗೆ ಮಾಡುವುದರಿಂದ ನಾಗದೋಷ (ಪ್ರಸೂತಿಕಾದೋಷ) ಪರಿಹಾರವಾಗಿ ಸಂತಾನ, ಐಶ್ವರ್ಯ ಪ್ರಾಪ್ತಿಯಾಗುವುದೆಂದು ಭಾವಿಸುತ್ತಾರೆ.

**ಈ ನಾಗರಪಂಚಮಿಯನ್ನು ಕುರಿತಾದ ಹಾಡೊಂದು ಹೀಗಿದೆ:**

ಪಂಚಮಿ ಮುಂದಿರತ । ಗೆಳೆತೀರ ಮಾಡ್ಯಾರ ಮಸಲತ್ತ ।
ಜಿನಧ್ಯಾನ ಮಾಡುತ್ತಾ । ಜೋಕಾಲಿ ಆಡೋನರಿ ಕೂತ ॥ 1 ॥
ಪಡದಮಾನುಜನ್ಮಾ ಬಂದರೆ ಮಾಡಬೇಕನೇಮಾ ।
ಕಟ್ಟೇತಿಭವಕರ್ಮ । ಅದನಕೆಡಸೋನ ಮಾಡಿ ಧರ್ಮ ॥ 2 ॥
ಬಸ್ತಿಗೆ ಹೋಗಿ । ಸಿದ್ಧಚಕ್ರನೋಪಿ ಬೆಳಗಿ ।
ಬರುವೊನರೆ ತಿರುಗಿ । ಶ್ರೀ ಪಾರ್ಶ್ವನಾಥಗೆರಿಗಿ ಕೋ ॥3॥
ಆಗೋನು ಶ್ರೀಂಗಾರಾ । ಬೇಕಷ್ಟಯಿಡವೋನು ಬಂಗಾರಾ ।
ಉಟ್ಟಪಿತಾಂಬರ । ಹಾಡುತ ಹೋಗೋನು ಗೆಳತೀರಾ ಕೋ ॥ 4 ॥
ಅಳ್ಳನೆನಿಗಡಲಿ । ಹಾಲುತೆಂಬಿಟ್ಟತಾಟಿನಲ್ಲಿ ।
ತುಂಬಿ ಅಡಿಕೆ ಎಲಿ । ಬೆಳಿಕಾಗ ಹೋಗೋನು ಭಕ್ತೀಲಿ ॥ 5 ॥
ಶುದ್ಧಮಾಡಿ ಮನಸ್ಸಾ । ತಕ್ಕೊಂಡ ಹೋಗೋನು ಫಲಜೀನಸಾ ।
ಇರಬಾರದ ಹೊಲಸಾ । ನಮಗಸಿಗಕ್ಕಿಲ್ಲ ಮೋಕ್ಷ ॥ 6 ॥
ಮಹಾವೀರನಾಥಾ । ಜನರಿಗೆ ಕೊಟ್ಟ ನೋಪಿವೃತಾ ।
ಆದ ಧರ್ಮಕೃತಾ । ಅವನ ಸ್ಮರಿಸಬೇಕು ತ್ವರಿತಾ ॥ 7 ॥
ಚೇಳಿನಾದೇವಿತಾಯಿ । ಬೆಳಗ್ಯಾಳಂದ ಹಂಣಕಾಯಿ ।
ಬಿಟ್ಟ ನಾರದೇಹಿ । ಸೇರ್‍ಯಾಳಹೋಗಿ ಸ್ವರ್ಗಾಲಯಿ ॥ 8 ॥
ಶ್ರೇಣಿಕ ಮಹಾರಾಯಾ । ಸತಿಗೆ ಆಗಿದನು ಸಹಾಯಾ ।
ಹೋಗಲಿಲ್ಲ ವಾಯಾ । ಲಕ್ಷಹಿಡದಾಳು ಕೈಯಾ ॥ 9 ॥
ಮುನ್ನೂರು ಅರವತ್ತ । ನೋಪಿ ಬೆಳಗಿದಳು ನಿಂತಾ ।
ಪುಣ್ಯ ಅಗಣಿತಾ । ಜಿನರಾಯಾಯಿಟ್ಟ ವರದಹಸ್ತಾ ॥ 10 ॥
ಚೇಳಿನಾ ದೇವಿ ಅಂಬಾ । ಆಕಿಯ ಹೆಸರಾ ನಾಡತುಂಬಾ ।
ವಲದಾನರೆ ಸಾಂಬಾ । ಬಸ್ತಿಯಲ್ಲಿ ಇಟ್ಟಾಳ ಜಿನಬಿಂಬಾ ॥ 11 ॥
ತುಂಬಿದರು ತಾಟಾ । ಹೊರಟಾಗ ಆಗಿ ಒಂದಗುಟ್ಟಾ ।

ಮಂತ್ರ ಮುಖಪಾಟಾ । ಮಿಥ್ಯಾ ಹಾಕಿದರು ಸುತ್ತಾ ॥ 12 ॥
ಜಲಗಂಧ ಅಕ್ಷತಿ । ದೀಪಧೂಪ ಊದಬತ್ತಿ ।
ಫಲಪುಷ್ಪ ಎತ್ತಿ । ಬೆಳಗತಾರ್ ಪೂರ್ಣ ಇಟ್ಟಭಕ್ತಿ ॥ 13 ॥
ಮಂಗಳಾರತಿ ಮಾಡಿ । ಮನಸ್ಸಿಗೆ ಬೇಕಾದ್ದನಿಂತ ಬೇಡಿ ।
ಆನಂದದಿಂದ ಹಾಡಿ । ತಿರುಗಿ ಬಂದರು ಮನಿಕಡಿ ॥ 14 ॥
ಜೋಕಾಲಿ ಹತ್ತಿ । ಕೂತ ಹಾಡೊಂದು ಅಕ್ಕರತಿ ।
ಹಾಡಿನ ಭರತಿ । ತಿರಲಿಲ್ಲ ಎಷ್ಟರೇ ತುಂಬೇತಿ ॥ 15 ॥
ಗೆಳೆತೇರಕೂಡಿ । ದಣದಾರ ಮೂರು ದಿವಸ ಆಡಿ ।
ಧ್ವನಿಯು ಬಿದ್ದು । ನಕ್ಕಾರು ಓಣಿ ಜನರು ನೋಡಿ ॥ 16 ॥
ಪಂಚಮಿಯ ಹಬ್ಬಾ । ಬಡವರದ ಕೆತ್ತ ತೈದುಬ್ಬಾ ।
ಇದ್ದವರಿಗೆ ಲಾಭಾ । ಯಿಟ್ಟ ತೊಟ್ಟ ಮಾಡತಾರಸೋಬಾ ॥ 17 ॥
ದ್ವಾರಪಾಲ ಅಂದಾ । ಹುಡುಗರಿಗೆ ಪಂಚಮಿಯು ಚಂದಾ ।
ತಂಬಿಟ್ಟ ಹುರಕಡ್ಲಿ ತಿಂದಾ ॥ 18 ॥[81]

## ದೀಪಾವಳಿ

ಭಾರತೀಯ ಪರಂಪರೆ, ಸಂಸ್ಕೃತಿಯ ಅವಿಭಾಜ್ಯ ಅಂಗಗಳೆಂದರೆ ಅವು ಹಬ್ಬಗಳೇ ಆಗಿವೆ. ವರ್ಷದ ಎಲ್ಲಾ ತಿಂಗಳುಗಳಲ್ಲೂ ಒಂದಲ್ಲ ಒಂದು ಹಬ್ಬಗಳ ಆಗಮನವಾಗಿ, ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತವೆ. ಕೇವಲ ಸಂತೋಷ, ಸಡಗರ ನಲಿವುಗಳೇ ಹಬ್ಬಗಳ ಉದ್ದೇಶವಲ್ಲ, ಜನರ ಮರಣಗಳಾಚೆ ಹುಡುಕುವ ಮುಕ್ತಿಯ ಮಾರ್ಗವೂ ಆಗಿ ಪರಿಣಮಿಸಿದೆ. ಈ ಮುಕ್ತಿ ಸಾಧನಗಳಾಗಿರುವ ಹಬ್ಬಗಳ ಧ್ಯೇಯ ಗುರಿ. ಕೇವಲ ಒಂದು ಧರ್ಮ, ಜನಾಂಗಕ್ಕೆ ಸೀಮಿತವಾಗಿರದೆ, ಎಲ್ಲಾ ಧರ್ಮಗಳಿಗೂ ಅನ್ವಯವಾಗುತ್ತದೆ. ಆದ್ದರಿಂದ ಹಬ್ಬಗಳು ಮಾನವನ ಕಲ್ಯಾಣದ ಮಾರ್ಗಕ್ಕೆ ದಾರಿದೀಪವಾಗಿದೆ. ಆದ್ದರಿಂದ ಹಬ್ಬಗಳು ಮಾನವನ ಕಲ್ಯಾಣದ ಮಾರ್ಗಕ್ಕೆ ದಾರಿದೀಪವಾಗಿದೆ. ಇಂತಹ ಹಬ್ಬಗಳಲ್ಲಿ ದೀಪಾವಳಿಯು ಪ್ರಮುಖವಾದ ಹಬ್ಬವಾಗಿದೆ. ದೀಪಾವಳಿಯಷ್ಟು ಸಡಗರ, ಸಂಭ್ರಮಗಳಿಂದ ಆಚರಿಸುವ ಹಬ್ಬ ಮತ್ತೊಂದಿಲ್ಲ ಎಂದರೆ ತಪ್ಪಾಗಲಾರದು. ಈ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಹಲವಾರು ಹೇಳಿಕೆಗಳು ಇವೆ. ಶ್ರೀರಾಮಚಂದ್ರ ವನವಾಸದಿಂದ ಅಯೋಧ್ಯೆಗೆ ಹಿಂತಿರುಗಿದ ದಿನವೆಂದು ಇದರೊಂದಿಗೆ ಸಂಬಂಧವನ್ನು ಜೋಡಿಸುತ್ತಾರೆ. ಇನ್ನು ಕೆಲವರು ಸಾಮ್ರಾಟ ಅಶೋಕನ ದಿಗ್ವಿಜಯದ ಸೂಚಕವೆಂದು ಭಾವಿಸುತ್ತಾರೆ.

ಜೈನ ಧರ್ಮದ ದೃಷ್ಟಿಯಿಂದ ದೀಪಾವಳಿಯನ್ನು ಆಚರಿಸುವ ಹಿನ್ನೆಲೆ ವಿಶಿಷ್ಠವಾಗಿದೆ. ಭಗವಾನ್ ಮಹಾವೀರರು ಬಿಹಾರರಾಜ್ಯದ ಪಾವಾಪುರಿ ಕ್ಷೇತ್ರದ ಕೆರೆಯ ಮಧ್ಯದಲ್ಲಿರುವ ಬಂಡೆಯ ಮೇಲೆ ಧ್ಯಾನ ಮಾಡಿ ಅಘಾತಿ ಕರ್ಮಗಳನ್ನು ನಾಶಮಾಡಿ ಮೋಕ್ಷಪಡೆದರು. ಅದು ಕಾರ್ತಿಕ ಬಹುಳ ಚತುರ್ದಶಿ ರಾತ್ರಿ ಕೊನೆಯಾಗುತ್ತಿರುವಾಗ ಸ್ವಾತಿ ನಕ್ಷತ್ರದಲ್ಲಿ ಅವರ ನಿರ್ವಾಣವಾಗುತ್ತದೆ. ಶಾಲಿವಾಹನ ಶಕೆಯ ಮಾನಗಳ ಗಣನೆಯ ಆಧಾರದಂತೆ ಈ ಸಮಯವು ಅಶ್ವೀಜ ಬಹುಳ ಚತುರ್ದಶಿ ಕಳೆದ ಬೆಳಗಿನ ಜಾವದೊಡನೆ ಕೂಡಿಬರುತ್ತದೆ. ಸುಮಾರು ಮೂವತ್ತು ವರ್ಷಗಳ ಕಾಲ ತನ್ನ ಜ್ಞಾನಜ್ಯೋತಿಯಿಂದ ಸತ್ಯ, ಅಹಿಂಸೆಗಳ ದಿವ್ಯ ಸಂದೇಶವನ್ನು ಜನತೆಗೆ ಸಾರಿ, ಲೋಕದ ಅಜ್ಞಾನವೆಂಬ ಕತ್ತಲನ್ನು ನಿವಾರಣೆ ಮಾಡಿದ ಈ ತೀರ್ಥಂಕರನ ಸ್ಮರಣೆಯ ನಿಮಿತ್ತವಾಗಿ ದೀಪಗಳನ್ನು ಉರಿಸಿ ಹಬ್ಬವನ್ನು ಆಚರಿಸುತ್ತಾರೆ. ಈ ದಿನವೇ ದೀಪಾವಳಿ.

ತೀರ್ಥಂಕರರಿಗೆ ಕೇವಲಜ್ಞಾನ ಪ್ರಾಪ್ತವಾದ ಮೇಲೆ ಇಂದ್ರನು ಸಮವಸರಣ ಸಭಾಮಂಟಪವನ್ನು ನಿರ್ಮಾಣ ಮಾಡಿದನು. ಆ ಸಭಾ ಮಂಟಪವನ್ನು ನಿರ್ಮಾಣ ಮಾಡಿದನು. ಆ ಸಭಾಮಂಟಪದಲ್ಲಿ ನೆರೆದು ಎಲ್ಲಾ ಪ್ರಾಣ ಮನುಷ್ಯರೆಲ್ಲರಿಗೂ ತಿಳಿಯುವ ಭಾಷೆಯಲ್ಲಿ ತೀರ್ಥಂಕಕರರ ದಿವ್ಯಧ್ವನಿಯನ್ನು ಅರ್ಥೈಸುವ ಗಣಧರನಿರುತ್ತಾನೆ. ಅವನೇ ಗೌತಮ. ಈ ಗೌತಮಗಣಧರನಿಗೆ ಕೇವಲ ಜ್ಞಾನವಾನವಾದುದು ಕಾರ್ತಿಕ ಪ್ರತಿಮದೆಯ ದಿವಸ. ಭಗವಾನ್ ಮಹಾವೀರನಿಗೆ ಮೋಕ್ಷ ಪ್ರಾಪ್ತಿಯಾದ ಹಾಗೂ ಅವರ ಪ್ರಮುಖ ಶಿಷ್ಯನಾದ ಗೌತಮ ಗಣಧರರಿಗೆ ಕೇವಲಜ್ಞಾನ ಪ್ರಾಪ್ತವಾದ ಈ ಸಂತೋಷವನ್ನು ಅಂದು ಜನ ವೈಭವದಿಂದ ಆಚರಿಸಿತು. ಇಂದಿಗೂ ಅದನ್ನು ಆಚರಿಸುವಲ್ಲಿ ಈ ಮಹಾಆತ್ಮಗಳ ಸ್ಮರಣೆಯನ್ನುಂಟು ಮಾಡಿಕೊಳ್ಳುವುದೇ ಪರಮ ಉದ್ದೇಶವಲ್ಲವೇ? ಅದಕ್ಕಾಗಿ ಮುಕ್ತಿಲಕ್ಷ್ಮಿ ಹಾಗೂ ಜ್ಞಾನಲಕ್ಷ್ಮಿಯರ ಪೂಜೆ ಈ ಸಂದರ್ಭದಲ್ಲಿ ಆಗುವುದು ಉಚಿತವೇ ಸರಿ.

ಅಂದರೆ ದೀಪಾವಳಿಯ ಆಚರಣೆಯು ಧಾರ್ಮಿಕತೆಯ ಸ್ವರೂಪ ಪಡೆಯಿತೆಂಬುದು ಸುಸ್ಪಷ್ಟ. ಭಗವಾನ್ ಮಹಾವೀರರು ತಮ್ಮ ಸರ್ವ, ಸುಖ, ಸಮೃದ್ಧಿಗಳ ಮಧ್ಯೆ ಜನ್ಮ ತಳೆದು ಅದೆಲ್ಲವನ್ನೂ ತೊರೆದು, ಮಳೆ, ಗಾಳಿ, ಬಿಸಿಲು, ಹಿಂಸಾಪಶು ಪ್ರಾಣಿಗಳನ್ನು ಲೆಕ್ಕಿಸದೆ ಅನೇಕ ವರ್ಷಗಳ ಕಾಲ ತಪಸ್ಸನ್ನಾಚರಿಸಿ, ಅವುಗಳನ್ನೆಲ್ಲ ಎದುರಿಸಿ ಆತ್ಮಶುದ್ಧೀಕರಣ ಮಾಡಿಕೊಂಡು, ರತ್ನತ್ರಯಗಳನ್ನು ಧರಿಸಿದರು. ಆತ್ಮಕಲ್ಯಾಣ ಸಾಧಿಸಿಕೊಂಡರು. ಅವರು ಕೈಗೊಂಡ ಘೋರ ತಪಸ್ಸು ಆಧ್ಯಾತ್ಮಿಕ ಉನ್ನತಿಗೆ ಸಾಧನವಾಯಿತು. ಆದುದರಿಂದ ಅವರ ಮೋಕ್ಷಕಲ್ಯಾಣದ ಸಾಧನೆಯ ಸ್ಮರಣೆಯಾಗಿ ದೀಪಾವಳಿಯನ್ನು ಆಚರಿಸುವ ನಮಗೆ ಅದು ವ್ಯಕ್ತಿಯ ಆಧ್ಯಾತ್ಮಿಕ ಉನ್ನತಿಯ ಪ್ರತೀಕವಾಗಿ ಕಾಣುತ್ತದೆ. ಹಾಗೆಯೇ ಅದೇ ಸಮಯದಲ್ಲಿ ಗೌತಮ ಗಣಧರನಿಗೆ ಕೇವಲ (ಪೂರ್ಣ) ಜ್ಞಾನವೂ ಲಭಿಸುತ್ತದೆ. ಆದುದರಿಂದ ಈ ಎರಡರ ಅಂದರೆ ಮುಕ್ತಿಲಕ್ಷ್ಮಿ & ಜ್ಞಾನಲಕ್ಷ್ಮಿಯರ ಪೂಜೆ ನೆರವೇರಿಸಲಾಗುತ್ತದೆ. ಇತ್ತೀಚೆಗೆ ಈ ಆಚರಣೆಯು ತನ್ನ ಸ್ವರೂಪವನ್ನು ಕಳೆದುಕೊಳ್ಳುತ್ತಿರುವುದು ವಿಷಾದನೀಯ ಸಂಗತಿ. ಏಕೆಂದರೆ ಇಂದು ಮುಕ್ತಿ ಲಕ್ಷ್ಮೀ, ಜ್ಞಾನಲಕ್ಷ್ಮೀ ಆಧ್ಯಾತ್ಮಿಕ ಲಕ್ಷ್ಮಿಯು ಸ್ಥಾನವನ್ನು ಧನಲಕ್ಷ್ಮಿ ಆಕ್ರಮಿಸಿಕೊಂಡಂತೆ ತೋರುತ್ತದೆ. ಈ ವೊಂದು ಭಾವನೆಗೆ ಮನುಷ್ಯನಿಗೆ ಸಂಪತ್ತಿನ ಬಗೆಗಿರುವ ಮೋಹವೇ ಕಾರಣವೆನ್ನಬಹುದು. ಅದಕ್ಕಾಗಿ ಸಂಪತ್ತಿನ ಲಕ್ಷ್ಮಿಯ ಪೂಜೆಮಾಡಿ ಅದನ್ನು ಇನ್ನಷ್ಟು ಪಡೆಯಬೇಕೆಂಬ ಭಾವನೆಯುಂಟಾಗಿದೆ. ಎಂದರೆ ಅಡ್ಡಿಯಲ್ಲ ಆದರೆ ಜೈನದರ್ಶನದ ಪ್ರಕಾರ ಧನಪ್ರಾಪ್ತಿಗಾಗಿ ಇಂತಹ ಪೂಜೆಗೆ ಮಾನ್ಯತೆ ದೊರೆಯುವುದಿಲ್ಲ. ಕರ್ಮಸಿದ್ಧಾಂತವನ್ನು ಪುಷ್ಟೀಕರಿಸುವ ಜೈನ ಸಿದ್ಧಾಂತ ಇಂಥ ಸುಲಭೋಪಾಯಗಳಿಗೆ ಆಶ್ರಯ ಕೊಡುವುದಿಲ್ಲ. ಧನಪ್ರಾಪ್ತಿ ವ್ಯಕ್ತಿಯ ಶ್ರಮಕ್ಕನುಗುಣವಾಗಿಯೇ ಆಗಬೇಕು. ಅವನ ಪುಣ್ಯೋದಯದಿಂದ ಮಾತ್ರ ಸುಖ ಸಂಪತ್ತು ದೊರೆಯಲು ಸಾಧ್ಯ. ಇಂಥ ಪುಣ್ಯೋದಯವಾಗಬೇಕಾದರೆ ಶುಭ ಭಾವನೆಗಳಿರುವುದು ಅವಶ್ಯ. ಆದುದರಿಂದ ಈ ಆಧ್ಯಾತ್ಮಿಕ ಹಿನ್ನೆಲೆಯಲ್ಲಿಯೇ ದೀಪಾವಳಿಯನ್ನು ಆಚರಿಸುವ ವಿಧಾನ ಸೂಕ್ತವಾದುದಾಗಿದೆ. ಹಾಗೆಯೇ ಜೈನಧರ್ಮ ತ್ಯಾಗ ಹಾಗೂ ಜ್ಞಾನ ಸಾಧನೆಯ ಮಹತ್ವವನ್ನು ಪ್ರತಿಪಾದಿಸುತ್ತದೆ. ಮಹಾವೀರರ ತ್ಯಾಗ, ಸಾಧನೆ ಸಿದ್ಧಿಯ ಮೂಲ ಆಧಾರಗಳಾಗಿವೆ. ಹೀಗೆ ತ್ಯಾಗ ಹಾಗೂ ಸಾಧನೆಯ ಮಹತ್ವವನ್ನು ದೀಪಾವಳಿ ಸೂಚಿಸುತ್ತದೆ.

ಆತ್ಮದ ನಿಜಸ್ವರೂಪವೇ ಧರ್ಮದ ಉನ್ನತಿ ಆತ್ಮದ ವಾರ್ಧ್ಯಮುಖ ಬೆಳವಣಿಗೆಯಲ್ಲಿ ಅಡಗಿದೆ. ಆದುದರಿಂದ ಮಾನವ ಮೊದಲು ತನ್ನ ಆತ್ಮವಿಕಾಸವನ್ನು ಮಾಡಿಕೊಳ್ಳುವತ್ತ ಚಿತ್ತ ಹರಿಸಬೇಕು. ಆತ್ಮೋನ್ನತಿಯೆಲ್ಲಾ ಧರ್ಮದ ಉನ್ನತ ಗುರಿ ಮುಕ್ತಿಯ ಕಡೆಗಿನ ದಾರಿ. ಮುಕ್ತಿ ಪಡೆಯಬೇಕಾದರೆ ಮನುಷ್ಯನಲ್ಲಿ ಸಮ್ಯಕ್ ದೃಷ್ಟಿ ಅವಶ್ಯಕವಾಗಿದೆ. ಆದುದರಿಂದ ಈ ಸಮ್ಯಕ್‌ದೃಷ್ಟಿ ಬರಲು ಮನ, ವಚನ, ಕ್ರಿಯೆಗಳಲ್ಲಿನ ದೋಷಗಳನ್ನು ನಿವಾರಿಸಿ ಅದನ್ನು ಶುಭ್ರಗೊಳಿಸಲು ಬೇಕು.ಅಲ್ಲಿ ಬೆಳಕನ್ನುಂಟು ಮಾಡಬೇಕು. 'ಹೊರಗಿನ ದೀಪಗಳಿಂದ ಮನೆಗಳನ್ನು ಬೆಳಗುವುದಕ್ಕಿಂತ ಇಂಥ ದೀಪದಿಂದ ಆತ್ಮವನ್ನು ಬೆಳಗಿಸಿ ಶುದ್ಧಗೊಳಿಸುವುದು ಉಚಿತ. ಸಮ್ಯಕ್ ದರ್ಶನ್, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ್ಯ ಈ ರತ್ನತ್ರಯಗಳೇ ಆತ್ಮನ ನಿಜವಾದ ಅಲಂಕಾರಗಳು. ಆದುದರಿಂದ ಶರೀರ ಹಾಗೂ ಮನೆಯನ್ನು ವಿವಿಧ ವಸ್ತುಗಳಿಂದ ಅಲಂಕರಿಸುವುದಕ್ಕಿಂತ ರತ್ನತ್ರಯಗಳಿಂದ ಅಲಂಕರಿಸಬೇಕು.

ಇದರಿಂದಾಗಿ ಜ್ಞಾನಜ್ಯೋತಿ ಬೆಳಗುವುದು. ಆದುದರಿಂದ ಹೃದಯವೆಂಬ ಹಣತೆಯಲ್ಲಿ, ಆಧ್ಯಾತ್ಮಿಕ ಎಣ್ಣೆಯನ್ನು ಹೊಯ್ದು, ಧರ್ಮ ಜ್ಯೋತಿಯನ್ನು ಬೆಳಗಿಸುವುದು ಅವಶ್ಯಕ. ಈ ಜ್ಯೋತಿಯೇ ಗಾಢಾಂಧಕ್ಕಾರದಲ್ಲಿದ್ದ ಆತ್ಮನನ್ನು ಬೆಳಗಿಸಿ ಮುನ್ನಡೆಸಬೇಕು. ಅದಕ್ಕಾಗಿ ಅದನ್ನು ಬೆಳಗಿಸಲು ಹಾಗೂ ಜ್ಞಾನಜ್ಯೋತಿಯನ್ನು ಪಡೆಯಲು ಭಗವಾನ್ ಮಹಾವೀರರ ಜೀವನ ಸಾಧನೆ ಸಂದೇಶವನ್ನು ಅರಿತು ಪ್ರಯತ್ನಿಸಬೇಕೆಂಬುದೇ ಈ 'ದೀಪಾವಳಿ'ಯ ಸಂದೇಶವೆಂದರೆ ಉಚಿತವಾಗಬಹುದು!"[82] ಅಂದರೆ ದೀಪಹಚ್ಚುವ ಈ ದೀಪಾವಳಿ ಆತ್ಮವಿಕಾಸದ ಗುರಿಯೆಡೆಗೆ ನಡೆಸುವ ಹಬ್ಬವಾಗಿದೆ.

ಬಸದಿಗಳಲ್ಲಿ ಮಹಾವೀರ ತೀರ್ಥಂಕರನಿಗೆ ಪಂಚಾಮೃತ ಅಭಿಷೇಕ ಪೂಜೆಗಳನ್ನು ಶ್ರಾವಕರು ನಡೆಸುತ್ತಾರೆ. ಚತುರ್ವಿಧ ದಾನಗಳನ್ನು ಮಾಡಿ, ಉತ್ಸವ–ಮೆರವಣಿಗೆಗಳನ್ನು ನಡೆಸಿ ಮಹಾವೀರನ ಉಪದೇಶವನ್ನು ಮನನ ಮಆಡುತ್ತಾರೆ. ಈ ದಿನ ಉಪವಾಸ ಏಕಭುಕ್ತ ವ್ರತವನ್ನು ಕೈಗೊಂಡು ಅಹಿಂಸಾ ವ್ರತವನ್ನು ನಡೆಸಲಾಗುತ್ತದೆ.

ತುಳುನಾಡಿನಲ್ಲಿ ದೀಪಾವಳಿಯನ್ನು ಸಾರ್ವತ್ರಿಕವಾಗಿ ಹಾಗೂ ಬಹು ವಿಜೃಂಭಣೆಯಿಂದ ಆಚರಿಸುತ್ತಿದ್ದ ಬಗ್ಗೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಅನೇಕ ಶಾಸನಗಳಲ್ಲಿ ದೀಪಾವಳಿ ಹಬ್ಬಕ್ಕೆ ದಾನದೀಪ ಉಲ್ಲೇಖಗಳು ಕಂಡುಬರುತ್ತವೆ. ಮೂಡಬಿದಿರೆಯ ಬಸದಿಗಳಲ್ಲಿ ದೀಪಾವಳಿಯ ಆಚರಣೆಯು ನಡೆಯುತ್ತಿದ್ದ ಸುಂದರವಾದ ಚಿತ್ರವನ್ನು ರತ್ನಾಕರವರ್ಣೀಯು ನೀಡಿದ್ದಾನೆ.

ಆಲಯಗಳ ಮುಂದೆ ಮಿರುಮಿರುಗುವ ಪಟ್ಟ
ಶಾಲೆಯ ಮದನ ಕೈಗಳೊಳು
ಚೋಲುವ ದೀಪ ಸಾಲುಗಳೊಳು
ಕೇರಿ ದೀಪಾವಳಿಯ ಹಬ್ಬದಂತಿಹುದು
ಎಂದು ಜನರ ಸಂಭ್ರಮವನ್ನು ವರ್ಣಿಸುತ್ತಾನೆ".[83]

ಇಡೀ ನಗರವೇ ದೀಪಾವಳಿಯ ಸಂಭ್ರಮದಿಂದ ಹೇಗೆ ಕಂಗೊಳಿಸುತ್ತಿತ್ತೆಂದು ಇನ್ನೊಂದೆಡೆ ಹೀಗೆ ವರ್ಣಿಸುತ್ತಾನೆ.

ನಗರಿಪನ್ನೆರಡುಗಾವುದವದು
ಸಾಲುದೀವಿಗೆ ಪಂಜಿನಿಂದ ಥಾಳಿಸಿತು
ನಗರಿಗೊಡೆಯನ ಗೃಹದ ಮುಂದೆ
ಗಾವುದ ಹಗಲಾಯ್ತು..........."[84]
ಎಂದು ಕಣ್ಣಿಗೆ ಕಟ್ಟುವಂತೆ ದೀಪಾವಳಿಯ ಸಡಗರದ ಚಿತ್ರವನ್ನಿ ನೀಡುತ್ತಾನೆ.

ಕ್ರಿ. ಶ. 1632ರ ಮೂಡಬಿದಿರೆಯ ತಾಮ್ರಶಾಸನವು ದೀಪಾವಳಿ ಹಬ್ಬದಲ್ಲಿ ನಡೆದ ಅಹಿತಕರ ಘಟನೆಯೊಂದನ್ನು ಪ್ರಸ್ತಾವಿಸುತ್ತದೆ."[85] ಆ ಕಾಲದಲ್ಲಿ ದೀಪಾವಳಿ ಹಬ್ಬದ ಮೂರು ದಿನಗಳ ಉತ್ಸವದ ಅಂಗವಾಗಿ ಕೈಯಲ್ಲಿ ಪಂಜು ಹಿಡಿದು ಮೆರವಣಿಗೆ ಹೋಗುವ ವಾಡಿಕೆಯಿತ್ತು. ಯಾವುದೋ ಕಾರಣದಿಂದ ಮೂಡಬಿದಿರೆ ನಗರದ ಬೆಟ್ಟಕ್ಕೇರಿಯವರಿಗೂ ಮಡಲಂಗಡಿ ಕೇರಿಯವರಿಗೂ, ಕಲಹ ಹುಟ್ಟಿ ಕಲ್ಲು, ಕವಣೆ, ಹಾರೆಗಳಲ್ಲಿ ಬಡಿದಾಡಿಕೊಂಡರು. ಇದನ್ನು ಕಂಡು ಬಿದಿರೆಯ ನಗರದಲ್ಲಿ ಹುಟ್ಟಿ, ಸಕಲ ಶಾಸ್ತ್ರಭ್ಯಾಸ ಮಾಡಿ ಕುಮಾರ ದೀಕ್ಷೆಯನ್ನು ಮಾಡಿಕೊಂಡ ತುಳು ಸುಮಣತ ಭದ್ರದೇವರೆಂಬ ಮುನಿಗಳು ಉಪವಾಸ ವ್ರತವನ್ನು ಕೈಗೊಳ್ಳುತ್ತಾರೆ. ಆ ಜನ್ಮಪರಿಯಂತ ಪಂಚಪರಮೇಷ್ಠಿಗಳ ಸಾಕ್ಷಿಯಾಗಿ ಹಿಂಸೆಗೆ ತೊಡಗುವುದಿಲ್ಲವೆಂದೂ ಅಹಿಂಸಾವ್ರತವನ್ನು ಪಾಲಿಸುವುದಾಗಿಯೂ ನಿರ್ಧರಿಸುತ್ತಾರೆ. ಪ್ರತಿ ವರ್ಷವೂ ಹಬ್ಬದ ಮೂರುದಿನ ಹೊಸಬದಿ ಚಂದ್ರನಾಥ ಸ್ವಾಮಿಯ ಹೊರ ನಡೆಸುವುದೆಂದೂ ರಾತ್ರಿ ಒಳ ಅಂಗಳದಲ್ಲಿ ಹದಿನೈದು ಸಾವಿರ ದೀಪವನ್ನು ಹೊತ್ತಿಸಿ ದೀಪಾರಾಧನೆಯನ್ನು

ಸ್ವಾಮಿಗೆ ಅಭಿಷೇಕ, ಪೂಜೆಯನ್ನು ನಡೆಸುವುದೆಂದು ನಿರ್ಧರಿಸುತ್ತಾರೆ. ಈ ದೀಪಾವಳಿಯ ಹಬ್ಬಕ್ಕೆ ಬೇಕಾದ ಹಣವನ್ನು ಒದಗಿಸಲಾಗಿದ್ದು ಅದರ ವಿವರಗಳು ಆಚರಣೆಯ ಬಗೆಗೆ ಹಲವಾರು ಉಲ್ಲೇಖಗಳು ದೊರಕುತ್ತವೆ.

**ಶ್ರೀ ಮಹಾವೀರ ಸ್ವಾಮಿಯ ಅಷ್ಟವಿಧ ಅರ್ಚನೆ ಪೂಜೆ.**

ಶ್ರೀ ಮತ್ಕುಂಡ ಪುರಾಧಿನಾಥ ವಿಲಸತ್ ಸಿದ್ದಾರ್ಥ ಭೂವಲ್ಲಭ ।
ಪ್ರೇಮಾರ್ದ್ರಾ ಪ್ರಿಯಕಾರಿಣೀ ಪ್ರಿಯಸುತಃ ಸಂಪ್ರಾರ್ಚ್ಯತೇ ಸನ್ಮತಿಃ ॥
ಪಂಚಾಸ್ಯೋನ್ನತಕೇತನಃ ಕನಕರುಗ್ಗಾತ್ರತಂಗ – ಸಿದ್ಧಾಯಿನೀ
ಮಾಣಿಕ್ಯಾಭರಣಾಭಿರಂಜಿತ ಪದಃ ಪ್ರೋತ್ಫುಲ್ಲಪಂಕೇರುಹಃ ॥

ಓಂ ಹ್ರೀಂ ಶ್ರೀಂ ಕ್ಲೀಂ ಐಂ ಅರ್ಹ ಶ್ರೀಮಹತಿ ಮಹಾವೀರ ವರ್ಧಮಾನ ತೀರ್ಥಂಕರ ಪರಮ ಜಿನದೇವ! ಅತ್ರ ಅವತರ ಅವತರ ಅತ್ರ ತಿಷ್ಠ, ತಿಷ್ಠ, ಅತ್ರಠಠಮಮ ಸನ್ನಿಹಿತೋ ಭವ 2 ವಷಟ್ ॥

॥ ಶ್ರೀ ರಾಗ ॥ ॥ ಅಷ್ಟಕ ॥ ॥ ಏಕತಾಳ ॥

ಪೂಜಿಪೆ ನಾ ನಿನ್ನ ಶ್ರೀ ಜಿನರಾಜನೆ ! ಪೊರೆ ಎನ್ನ ॥
ಮೂಜಗ ಪೂಜಿತ, ರಾಜಿತ ಪದಗಳ ॥ ಪೂಜಿಪೆ ॥ ಪಲ್ಲವಿ ॥
ಕಾಲವಿಜೇತನೆ, ಕೈಪಿಡಿದೆನ್ನೆಯ । ಲೀಲೆಯಳೀ ಭವ ದಾಣಟಿಸೆಯಾ ॥
ಕಾಲ ಕಾಲದಾ, ಜನನ ಮರಣಗಳ ।
ಜೋಲಿಸೆ ನಿರ್ಮಲ, ನೀರನೆರೆಯುತ ॥ ಪೂಜಿಪೆ ನಾ ನಿನ್ನಾ ॥
ಓಂ ಹ್ರೀಂ ಅರ್ಹಂ ಶ್ರೀ ವರ್ಧಮಾನ ಜಿನೇಂದ್ರಾಯ ಜನ್ಮ–ಜರಾ ಮೃತ್ಯುವಿನಾಶಾಯ ದಿವ್ಯ ನಿರ್ವಪಾಮಿ ಸ್ವಾಹಾ ॥
ನೊಂದೆನು ಭವಭವದಲಿ ತಾ ತೊಳಲುತ । ಬಂದೆನು ನಿನ್ನೆಡೆ ಸಲಹೆನುತಾ ॥
ಬಂಧುರ ಚಂದನ ಗಂಧಗಳಿಂದಲಿ । ಸುಂದರ ತವ ಪಾದಾರವಿಂದವ ॥ ಪೂಜಿಪೆ ॥
ಓಂ ಹ್ರೀಂ... ಸಂಸಾರತಾಪನಿವಾರಣಾಯ ಮಹಾದಿವ್ಯಗಂಧಂ ನಿರ್ವಪಾಮಿ ಸ್ವಾಹಾ ॥ ಗಂಧ ॥
ರಕ್ಷಣೆಗೈಯಲು ಈ ಭವತಾಪದಿ । ದಕ್ಷನು ನೀನಲ್ಲದೆ ಕಾಣೆ ॥
ಅಕ್ಷಯ ಮೋಕ್ಷದ ಸುಖವನು ಪಾಲಿಸೇ ಅಕ್ಷತೆಯನು ತವ ಪಾದಕರ್ಪಿಸಿ ॥ ಪೂಜಿಪೆ ॥
ಓಂ ಹ್ರೀಂ...ಅಕ್ಷಯಪದ ಪ್ರಾಪ್ತಯೇ ಅಕ್ಷತಂ ॥ ಅಕ್ಷತಂ ॥
ಫುಲ್ಲಶರನ ಮಾಬಿಲ್ಲನೆ ಮುರಿದಾ । ಮಲ್ಲನು ನೀನಿರಲಿನ್ನೇನು ॥
ಮಲ್ಲಿಗೆ ಸಂಪಿಗೆ ಮೊಲ್ಲೆಗಳಿಂದಲಿ । ನಿಲ್ಲದೆ ನಿನ್ನಯ ಪಾದಪಲ್ಲವ ॥ ಪೂಜಿಪೆ ॥
ಓಂ ಹ್ರೀಂ ಕಾಮಬಾಣವಿನಾಶಾಯ ಮಹಾದಿವ್ಯ ಪುಷ್ಪಂ ॥ ಪುಷ್ಪಂ ॥
ಮಧುರಮಧುರ ಕ್ಷೀರಾನ್ನಗಳಿಂದಲಿ । ವಿಧ ವಿಧ ಭಕ್ಷ್ಯಗಳನುಗೊಳಿಸಿ ॥
ಕ್ಷುಧೆಯ ನಿವಾರಣೆ ಗೈಯಲು
ಸಂತತ । ವಿಧಿಯಲಿ ತವ ಚರಣಾರವಿಂದವ ॥ ಪೂಜಿಪೆ ॥
ಓಂ ಹ್ರೀಂ ಕ್ಷುಧಾರೋಗವಿನಾಶಾಯ ॥ ಚುರುಂ ॥
ಕುಮತಿಯ ಕಳೆದಾ ಸುಮತಿಯ ನೀಡಲು
ವಿಮಲಪ್ರದೀಪವ ಬೆಳಗುವೆನು ॥
ಮಮ ದೇಹದೊಳಿಹ ಪರಮ ಜಿನೇಂದ್ರಗೆ ।
ಸಮವಸರಣವನು ಪಾಲಿನುತಲಿ ॥ ಪೂಜಿಪೆ ॥

ಓಂ ಹ್ರೀಂ ಅಜ್ಞಾನಾಂಧಕಾರ ನಿವಾರಣಾಯ
ಮಹಾ ದಿವ್ಯ ದೀಪಂ ನಿರ್ವಪಾಮಿ ಸ್ವಾಹಾ ॥ ದೀಪಂ ॥
ಮೋಡದೊಳಡಗಿಹ ಸೂರ್ಯನ ಪರಿಯಲಿ ।
ಕಾಡುವ ಕರ್ಮದಿ ಮುಳುಗಿಹೆನು ।
ದೂಡಲು ಕರ್ಮಗಳೆಂಟನು ಜವದಲಿ ।
ಬೇಡುವೆ ನಿರ್ಮಲ ಧೂಪದಲಿ ಜಿನ ! ॥ ಪೂಜಿಪೆ ॥
ಓಂ ಅಷ್ಟಕರ್ಮದಹನಾ ಯ ಮಹಾದಿವ್ಯ ಧೂಪಂ ನಿರ್ವಪಾಮಿ ಸ್ವಾಹಾ ॥ ಸ್ವಾಹಾ ॥
ಆ ಮನೆ ಈ ಮನೆ ಎಲ್ಲವ್ಯೂ ಸುಮ್ಮನೆ ।
ಕಾಮ–ಯಮಗಿರಿದು ತವರು ಮನೆ ।
ಸ್ವಾಮಿಯೇ ನಿನ್ನಯ ಮನೆಯನು
ಪಾಲಿಸೆ । ನೇಮದಿ ಫಲಗಳ ಪಾದಕರ್ಪಿಸಿ ॥ ಪೂಜಿಪೆ ॥
ಓಂ... ಮೋಕ್ಷಪದ ಪ್ರಾಪ್ತಯೇ ಫಲಂ ನಿರ್ವಪಾಮಿ ಸ್ವಾಹಾ ॥ಫಲಂ ॥
ಜಲಗಂಧಾಕ್ಷತೆ ಸುಮಚರುದೀಪವ । ಸಲೆ ಧೂಪವ ಫಲಗಳನಿರಿಸಿ ॥
ನಲಿದರ್ಘ್ಯವ ನಾನೇರಿಸಿ ಪಾಡುವೆ ।
ಸುಲಲಿತ ಪದವಿಯ ಪಾಲಿಸೆನುತಲಿ ॥ ಪೂಜಿಪೆ ॥
ಓಂ.... ಅನರ್ಘ್ಯ ಪದ ಪ್ರಾಪ್ತಿಯೇ ಅರ್ಘ್ಯಂ ನಿರ್ವಪಾಮಿ ಸ್ವಾಹಾ ॥ ಅರ್ಘ್ಯಂ ॥
ಧರಣಿಯೊಳನುದಿನ ಚಿರಸುಖ ಶಾಂತಿಯ ।
ಸುರಿಮಳೆ ಗರೆಯುತ ಪೊರೆಯೆಂದು । ಪಮೇಶನೆ ತವ
ಚರಣಪಯೋಜಕೆ । ಎರಯುತ ಶಾಂತಿಯ ಧಾರೆಯನು ಚಿರ ॥ ಪೂಜಿಪೆ ॥
ಓಂ...ಸರ್ವಲೋಕ ಶಾಂತರ್ಥ್ಯಂ ಶಾಂತಿಧಾರಾಂ ಪಾತಯಾಮಿ ಸ್ವಾಹಾ ॥ ಶಾಂತಿಧಾರಾ ॥
ಕಮಲ ಕುಮುದ ಹರಿಚಂಪಕ ಮಾಲತೀಘಮ ಘಮ
ಸುಮಗಳ ನಲಿನಲಿದು ॥ ಸಮವಸರಣಪತಿ!
ಜಯ ಜಯವೆನ್ನುತ । ಸುಮನಾಂಜಲಿಗಳನೇರಿಸುತ ಸಲೆ ॥ ಪೂಜಿಪೆ ॥
ಓಂ..ಅಮಿತ ಸುಖಪ್ರಾಪ್ತಯೇ ಮಹಾದಿವ್ಯ ಪುಷ್ಪಾಂಜಲಿಂ ನಿರ್ವಪಾಮಿ ಸ್ವಾಹಾ॥ ಪುಷ್ಪಂ ॥[86]

**ರಚನೆ – ಶ್ರೀ ಧರ್ಮರಾಜ ಯಾದವ, ನೆಲ್ಲಿಕಾರು**

## ಅಡಿಟಿಪ್ಪಣೆ

1. ಜನಪದ ಮೂಲಗಳಿಂದ.
2. ಮೇಲಿನ ಅದೇ
3. ಮೇಲಿನ ಅದೇ
4. ಮೇಲಿನ ಅದೇ
5. ಜನಪದ ಮೂಲಗಳಿಂದ.

6. ಡಾ.ಎಸ್.ಪಿ.ಪಾಟೀಲ (ಸಂ) ಜೈನಹಬ್ಬಗಳು, ಪು.ಸಂ. 12 ವೈಶಾಲಿ ಪ್ರಕಾಶನ, ನಿರ್ಮಲನಗರ, ಧಾರವಾಡ 1992
7. ಮೇಲಿನ ಅದೇ ಪು.ಸಂ. 13
8. ಮೇಲಿನ ಅದೇ ಪು.ಸಂ. ಅದೇ
9. ಡಾ.ಶೆಟ್ಟಿ.ಎಸ್.ಡಿ (ಸಂ) ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ ಪು.ಸಂ. 172. ರಾಷ್ಟ್ರಕವಿ ಗೋವಿಂದ ಪೈ ಸಂಶೊಧನ ಕೇಂದ್ರ ಎಂ.ಜಿ.ಎಂ. ಕಾಲೇಜು, ಉಡುಪಿ 2002
10. ಮೇಲಿನ ಅದೇ ಪು.ಸಂ. ಅದೇ
11. ಜನಪದ ಮೂಲಗಳು
12. ಮೇಲಿನ ಅದೇ
13. ಮೇಲಿನ ಅದೇ
14. ಮೇಲಿನ ಅದೇ
15. ಮೇಲಿನ ಅದೇ
16. ಪಂ. ದೇವಕುಮಾರ್ ಶಾಸ್ತ್ರಿ, ಮೂಡಬಿದಿರೆ ಹಾಗೂ ಡಾ। ಶೆಟ್ಟಿ ಎಸ್.ಡಿ.ಉಜಿರೆ. (ಸಂ) ಜೈನರ ಹಬ್ಬಗಳು ಪು.ಸಂ. 26, 27, 28 (ಪ್ರ) ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ ದ.ಕ.
17. ಡಾ.ಎಸ್.ಪಿ.ಪಾಟೀಲ (ಸಂ) ಜೈನಹಬ್ಬಗಳು, ಪು.ಸಂ. 31 ವೈಶಾಲಿ ಪ್ರಕಾಶನ, ನಿರ್ಮಲನಗರ, ಧಾರವಾಡ 1992
18. ಜನಪದ ಮೂಲಗಳಿಂದ.
19. ಮೇಲಿನ ಅದೇ
20. ಮೇಲಿನ ಅದೇ
21. ಮೇಲಿನ ಅದೇ
22. ಡಾ.ಎಸ್.ಪಿ.ಪಾಟೀಲ (ಸಂ) ಜೈನಹಬ್ಬಗಳು, ಪು.ಸಂ. 32 ವೈಶಾಲಿ ಪ್ರಕಾಶನ, ನಿರ್ಮಲನಗರ, ಧಾರವಾಡ 1992
23. ಮೇಲಿನ ಅದೇ ಪು.ಸಂ. ಅದೇ
24. ಜನಪದ ಮೂಲಗಳು
25. ಮೇಲಿನ ಅದೇ.
26. ಮೇಲಿನ ಅದೇ.
27. ಪಂ. ದೇವಕುಮಾರ್ ಶಾಸ್ತ್ರಿ, ಮೂಡಬಿದಿರೆ ಹಾಗೂ ಡಾ। ಶೆಟ್ಟಿ ಎಸ್.ಡಿ.ಉಜಿರೆ. (ಸಂ) ಜೈನರ ಹಬ್ಬಗಳು ಪು.ಸಂ. 17, 18, 19, 20 (ಪ್ರ) ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ ದ.ಕ.
28. ಜನಪದ ಮೂಲಗಳು

29. ಡಾ.ಎಸ್.ಪಿ.ಪಾಟೀಲ (ಸಂ) ಜೈನಹಬ್ಬಗಳು, ಪು.ಸಂ. 27 ವೈಶಾಲಿ ಪ್ರಕಾಶನ, ನಿರ್ಮಲನಗರ, ಧಾರವಾಡ 1992
30. ಜನಪದ ಮೂಲಗಳು
31. ಮೇಲಿನ ಅದೇ.
32. ಮೇಲಿನ ಅದೇ
33. ಮೇಲಿನ ಅದೇ
34. ಡಾ.ಎಸ್.ಪಿ.ಪಾಟೀಲ (ಸಂ) ಜೈನಹಬ್ಬಗಳು, ಪು.ಸಂ. 30 ವೈಶಾಲಿ ಪ್ರಕಾಶನ, ನಿರ್ಮಲನಗರ, ಧಾರವಾಡ 1992
35. ಜನಪದ ಮೂಲಗಳು
36. ಮೇಲಿನ ಅದೇ.
37. ಮೇಲಿನ ಅದೇ.
38. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸಂಶೋಧನಾ ಕೇಂದ್ರ, ಧರ್ಮಸ್ಥಳದಲ್ಲಿ ದೊರೆತ ಹಸ್ತಪ್ರತಿ.
39. ಜನಪದ ಮೂಲಗಳು
40. ಮೇಲಿನ ಅದೇ.
41. ಮೇಲಿನ ಅದೇ.
42. ಮೇಲಿನ ಅದೇ.
43. ಮೇಲಿನ ಅದೇ.
44. ಮೇಲಿನ ಅದೇ.
45. ಮೇಲಿನ ಅದೇ.
46. ಮೇಲಿನ ಅದೇ.
47. ಡಾ.ಎಸ್.ಪಿ.ಪಾಟೀಲ (ಸಂ) ಜೈನಹಬ್ಬಗಳು, ಪು.ಸಂ. 45 ವೈಶಾಲಿ ಪ್ರಕಾಶನ, ನಿರ್ಮಲನಗರ, ಧಾರವಾಡ 1992
48. ಮೇಲಿನ ಅದೇ ಪು.ಸಂ. 45–46
49. ಮೇಲಿನ ಅದೇ ಪು.ಸಂ. 46
50. ಮೇಲಿನ ಅದೇ ಪು.ಸಂ. ಅದೇ.
51. ಮೇಲಿನ ಅದೇ ಪು.ಸಂ. 47
52. ಜನಪದ ಮೂಲಗಳು
53. ಮೇಲಿನ ಅದೇ.
54. ಮೇಲಿನ ಅದೇ.
55. ಮೇಲಿನ ಅದೇ.
56. ಮೇಲಿನ ಅದೇ.

57. ಮೇಲಿನ ಅದೇ.

58. ಮೇಲಿನ ಅದೇ.

59. ಮೇಲಿನ ಅದೇ.

60. ಡಾ.ಶೆಟ್ಟಿ.ಎಸ್.ಡಿ (ಸಂ) ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ ಪು.ಸಂ. 174. (ಪ್ರ)ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಎಂ.ಜಿ.ಎಂ. ಕಾಲೇಜು, ಉಡುಪಿ 2002

61. ಮೇಲಿನ ಅದೇ ಪು.ಸಂ. ಅದೇ

62. ಪಂ. ದೇವಕುಮಾರ್ ಶಾಸ್ತ್ರಿ, ಮೂಡಬಿದಿರೆ ಹಾಗೂ ಡಾ। ಶೆಟ್ಟಿ ಎಸ್.ಡಿ.ಉಜಿರೆ. (ಸಂ) ಜೈನರ ಹಬ್ಬಗಳು ಪು.ಸಂ. 23. (ಪ್ರ) ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ ದ.ಕ.

63. ಮೇಲಿನ ಅದೇ ಪು.ಸಂ. 23, 24

64. ಡಾ.ಎಸ್.ಪಿ.ಪಾಟೀಲ (ಸಂ) ಜೈನಹಬ್ಬಗಳು, ಪು.ಸಂ. 35 ವೈಶಾಲಿ ಪ್ರಕಾಶನ, ನಿರ್ಮಲನಗರ, ಧಾರವಾಡ 1992

65. ಮೇಲಿನ ಅದೇ ಪು.ಸಂ. ಅದೇ

66. ಪಂ. ದೇವಕುಮಾರ್ ಶಾಸ್ತ್ರಿ, ಮೂಡಬಿದಿರೆ ಹಾಗೂ ಡಾ। ಶೆಟ್ಟಿ ಎಸ್.ಡಿ.ಉಜಿರೆ. (ಸಂ) ಜೈನರ ಹಬ್ಬಗಳು ಪು.ಸಂ. 24. (ಪ್ರ) ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ ದ.ಕ.

67. ಡಾ.ಶೆಟ್ಟಿ.ಎಸ್.ಡಿ (ಸಂ) ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ ಪು.ಸಂ. 36. (ಪ್ರ)ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಎಂ.ಜಿ.ಎಂ. ಕಾಲೇಜು, ಉಡುಪಿ 2002

68. ಮೇಲಿನ ಅದೇ ಪು.ಸಂ. ಅದೇ

69. ಜನಪದ ಮೂಲಗಳು

70. ಪಂ. ದೇವಕುಮಾರ್ ಶಾಸ್ತ್ರಿ, ಮೂಡಬಿದಿರೆ ಹಾಗೂ ಡಾ। ಶೆಟ್ಟಿ ಎಸ್.ಡಿ.ಉಜಿರೆ. (ಸಂ) ಜೈನರ ಹಬ್ಬಗಳು ಪು.ಸಂ. 31. (ಪ್ರ) ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ ದ.ಕ.

71. ಮೇಲಿನ ಅದೇ ಪು.ಸಂ. 29

72. ಮೇಲಿನ ಅದೇ ಪು.ಸಂ. 29

73. ಮೇಲಿನ ಅದೇ ಪು.ಸಂ. 30

74. ಮೇಲಿನ ಅದೇ ಪು.ಸಂ. ಅದೇ

75. ಡಾ.ಶೆಟ್ಟಿ.ಎಸ್.ಡಿ (ಸಂ) ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ ಪು.ಸಂ. 194. (ಪ್ರ)ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಎಂ.ಜಿ.ಎಂ. ಕಾಲೇಜು, ಉಡುಪಿ 2002

76. ಮೇಲಿನ ಅದೇ ಪು.ಸಂ. ಅದೇ

77. ಮೇಲಿನ ಅದೇ ಪು.ಸಂ. ಅದೇ

78. ಮೇಲಿನ ಅದೇ ಪು.ಸಂ. ಅದೇ

79. ಮೇಲಿನ ಅದೇ ಪು.ಸಂ. 195
80. ಜನಪದ ಮೂಲಗಳು
81. ಮೇಲಿನ ಅದೇ
82. ಡಾ.ಎಸ್.ಪಿ.ಪಾಟೀಲ (ಸಂ) ಜೈನಹಬ್ಬಗಳು, ಪು.ಸಂ. 51 ವೈಶಾಲಿ ಪ್ರಕಾಶನ, ನಿರ್ಮಲನಗರ, ಧಾರವಾಡ 1992
83. ಡಾ.ಶೆಟ್ಟಿ.ಎಸ್.ಡಿ (ಸಂ) ತುಳುನಾಡಿನ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ ಪು.ಸಂ. 177. (ಪ್ರ)ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಎಂ.ಜಿ.ಎಂ. ಕಾಲೇಜು, ಉಡುಪಿ 2002
84. ಮೇಲಿನ ಅದೇ ಪು.ಸಂ. ಅದೇ
85. ಮೇಲಿನ ಅದೇ ಪು.ಸಂ. 177–128
86. ಪಂ. ದೇವಕುಮಾರ್ ಶಾಸ್ತ್ರಿ, ಮೂಡಬಿದಿರೆ ಹಾಗೂ ಡಾ। ಶೆಟ್ಟಿ ಎಸ್.ಡಿ.ಉಜಿರೆ. (ಸಂ) ಜೈನರ ಹಬ್ಬಗಳು ಪು.ಸಂ. 41, 42, 43, 44. (ಪ್ರ) ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ ದ.ಕ.

## ಅಧ್ಯಾಯ: ಆರು

# ಮದುವೆಯ ಹಾಡುಗಳು

ಮದುವೆ ಷೋಡಶ ಸಂಸ್ಕಾರಗಳಲ್ಲಿ ಒಂದಾಗಿದ್ದು, ಮಾನವನ ಜೀವನದ ಭಾಗವಾಗಿ ಮಹತ್ವವಾದ ಸ್ಥಾನ ಪಡೆದಿದೆ. ಅದು ಪ್ರತಿಯೊಬ್ಬನ ಜೀವನದಲ್ಲಿ ಅತ್ಯಂತ ಸಂಭ್ರಮ ಸಡಗರದಿಂದ ಕೂಡಿದ ಪವಿತ್ರವಾದ ಸಮಯ. ವಧುವಿನ ತಂದೆ ತಾಯಂದಿರಿಗೆ ತಮ್ಮ ಮಗಳನ್ನು ಯೋಗ್ಯ ವರನಿಗೆ ಧಾರೆ ಎರೆದು ಕೊಟ್ಟ ಧನ್ಯತಾ ಭಾವನೆ ಒಂದೆಡೆಯಾದರೆ, ಮುದ್ದಿನ ಮಗಳ ಅಗಲುವಿಕೆಯ ನೋವು ಇನ್ನೊಂದೆಡೆ. ಈ ಎರಡು ಮಿಶ್ರಿತ ಭಾವನೆಗಳ ಸಂದರ್ಭದಲ್ಲಿ ತಂದೆ–ತಾಯಿಗಳು ಮಗಳ ಬಾಲ್ಯದ ಸವಿನೆನಪುಗಳನ್ನು ಹಾಗೂ ಸದ್ಗುಣಗಳನ್ನು ಸ್ಮರಿಸುತ್ತಾ ತುಂಬಿದ ಹೃದಯದಿಂದ ಶುಭ ಹಾರೈಸುತ್ತಾರೆ. ಆದುದರಿಂದ ಮದುವೆ ಮಾನವನ ಜೀವನದ ಅವಿಭಾಜ್ಯ ಅಂಗವಾಗಿದ್ದು, ಸಮಾಜದಲ್ಲಿ ಗೌರವಯುತವಾದ ಜೀವನ ನಡೆಸಲು ನಮ್ಮ ಹಿರಿಯರು ಮಾಡಿಕೊಂಡಿರುವ ಅತ್ಯಾವಶ್ಯಕವಾಗಿರುವ ನೀತಿ ನಿಯಮಗಳ ಚೌಕಟ್ಟು ಎನ್ನಬಹುದು.

ಜೈನರ ಜನಪದ ಗೀತೆಗಳಲ್ಲಿ ಮದುವೆಗೆ ಸಂಬಂಧಪಟ್ಟ ಹಾಡುಗಳು ಸಾಂಸ್ಕೃತಿಕ ಮಹತ್ವವಾದುವು. ಮದುವೆಯ ಸಂದರ್ಭದಲ್ಲಿ ಶುಭಕಾರ್ಯ ನಿಮಿತ್ತವಾಗಿ ಹಾಡಲ್ಪಟ್ಟ ಹಾಡುಗಳೇ ಶೊಭಾನೆ ಪದಗಳೆನ್ನಬಹುದು. ಈ ಪದದ ನಿಷ್ಪತ್ತಿ 'ಶೋಭನ'ದಿಂದ ಬಂದಿರಬೇಕು. (ಕಿಟ್ಟೆಲ್ ನಿಘಂಟು) ಇದರ ಅರ್ಥ ಸುಂದರ, ಶುಭಕರ, ಹೊಳೆಯುವಂತೆ ಆಗಿದೆ. 'ನೇಮವಿದ್ದರೆ ವ್ರತ, ನಾರಿಯರಿದ್ದರೆ ಶೊಭನ' ಮುಂತಾದ ಗಾದೆಗಳು 'ಶೋಭಾನೆ' ಅಥವಾ 'ಸೋಬಾನೆ', 'ಶೋಭನ' ಪದದ ಅರ್ಥ ವ್ಯಾಪ್ತಿಯನ್ನು ದೃಢಪಡಿಸುತ್ತದೆ. ಮದುವೆ ಮತ್ತು ಮೈನೆರೆದಾಗ ಗರ್ಭಿಣಿಯಾದಾಗ ಹಾಡುವ ಎಲ್ಲಾ ಹಾಡುಗಳು ಸೋಬಾನೆಯೇ ಆಗಿದೆ. ಇವು ಮಂಗಳ ಅಥವಾ ಶುಭ ಕೋರುವ ಹಾಡುಗಳೆನ್ನಬಹುದು.

''ನಮ್ಮ ಜೀವನದ ಅನೇಕ ಸಂಸ್ಕಾರಗಳಲ್ಲಿ ಮದುವೆ ಅತೀ ಮಹತ್ವದ ಸ್ಥಾನ ಪಡೆದಿದೆ. ಆಹಾರ ನಿದ್ರೆಯಷ್ಟೇ ಮಾನವನಿಗೆ ಪ್ರಬಲವಾಗಿರುವ ನಿಸರ್ಗದತ್ತವಾದ ಕಾಮಕ್ಕೆ ನೀತಿ ನಿಯಮದ ವ್ಯವಸ್ಥೆ ಕೊಟ್ಟು ಸ್ತ್ರೀ ಪುರುಷರು ಒಂದಾಗಿ ಬದುಕಲು ಹಾಗೂ ಗೌರವಯುತ ಜೀವನ ನಡೆಸಲು ಸಾಮಾಜಿಕ ಒಪ್ಪಿಗೆ ಪಡೆಯುವ ಧಾರ್ಮಿಕ ಸಂಸ್ಕಾರವೇ ವಿವಾಹ. ಷೋಡಶ ಸಂಸ್ಕಾರಗಳಲ್ಲಿ ಅತೀ ಮುಖ್ಯವಾದುದೂ, ಹಾಗೂ ಮಾನವನಿಗೆ ಮೋಕ್ಷದಾಯಕವಾದುದೂ ಎಂದು ಪರಿಗಣಿಸಲ್ಪಟ್ಟು ಧಾರ್ಮಿಕ ನಿಯಮಗಳ ಪಾಲನೆ, ಸಂತಾನ ಪ್ರಾಪ್ತಿ ಮೊದಲಾಗಿ ಧರ್ಮ ಹಾಗೂ ವಂಶೋದ್ಧಾರದ ಉದ್ದೇಶವನ್ನು ಹೊಂದಿರುವ ವಿವಾಹ ಕಲ್ಯಾಣಮಯವೆನಿಸಿರುವ ಒಂದು ಶುಭಕಾರ್ಯ''[1]

ಜೈನ ಜನಪದ ಸಾಹಿತ್ಯ ಸಂಗ್ರಹಗಳಲ್ಲಿ ಈ ಶೋಭಾನದ ಹಾಡುಗಳು ವಿಪುಲವಾಗಿ ಸಿಗುತ್ತವೆ. ಜೈನರ ಮದುವೆಯ ಸಂಪ್ರದಾಯದ ಸೋಬಾನೆ ಪದಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಕಾರಣ ಅವರ ಬದುಕಿನ, ಧಾರ್ಮಿಕ ಮೌಲ್ಯ, ಸಾಂಸ್ಕೃತಿಕ ಶ್ರೀಮಂತಿಕೆಗಳು ತಮ್ಮದೇ ಆದ ಸಂಪ್ರದಾಯಗಳನ್ನು ಉಳಿಸಿಕೊಂಡು ಬಂದಿರುವುದೊಂದು ವಿಶೇಷ. ಮದುವೆಯ ಸಂದರ್ಭದಲ್ಲಿ ಜೈನರಿಗೆ ಸೋಬಾನೆಯೇ ಶಾಸ್ತ್ರವಾಗಿರುವುದರಿಂದ ಹಾಡಬೇಕಾಗುತ್ತದೆ. ಮದುವೆ ಬಾಳಿನ ಒಂದು ರಸಘಟ್ಟ. ಜನಪದ ಸಂಸ್ಕೃತಿಯಲ್ಲಿ ಇದಕ್ಕೆ ವಿಶೇಷವಾದ ಮಹತ್ವ ಉಂಟು. ಒಂದು ಸಾಮಾಜಿಕ ಆಚರಣೆಯಾಗಿ ಮದುವೆ ನಡೆದುಹೋಗದೆ ಜೈನರಲ್ಲಿ ಒಂದು ಸಂಭ್ರಮದ, ಸಡಗರದ ಅಂಶವಾಗಿ ಪರಿಣಮಿಸುತ್ತದೆ. ಮದುವೆ ಎಲ್ಲಾ ವಯಸ್ಸಿನವರಿಗೂ ಸಂತಸ ತರುವ ಕಾರ್ಯಕ್ರಮ. ಇದರಲ್ಲಿ ವಿವಿಧ

ಆಚರಣೆಗಳು ಕುತೂಹಲ ಹಾಗೂ ಮೋಜಿನ ಮೂಲಕ ಸಂತಸ ತರುತ್ತವೆ. ಬಂದಾಗ ನೆಂಟರಿಗೂ ದೊರೆಯುವ ಬೆಲ್ಲ–ನೀರಿನ ಸ್ವಾಗತ, ನೀರು ಮಜ್ಜಿಗೆಯ ರುಚಿ, ಗೌರವದ ವೀಳ್ಯ, ಮೆಲ್ಲಲು ತಾಂಬೂಲ ಆ ಸಂದರ್ಭದಲ್ಲಿ ಕುಳಿತಿರುವಂತೆ ಪ್ರೇರೇಪಿಸುತ್ತದೆ. ಧಾರೆ ಎರೆಯುವುದು ಮದುವೆಯ ಆಟದ ಮೋಜು, ವಿಶೇಷವಾದ ಭೋಜನ, ಬಂಧು, ಬಾಂಧವರ ಜೊತೆಯಲ್ಲಿ ಸರಸ ಸಲ್ಲಾಪ, ಕುಣಿಯುವ ವಿನೋದ– ಹೀಗೆ ವಿವಾಹದ ಮಂಟಪ ಆಕರ್ಷಣೀಯ ಸ್ಥಳವೂ ಆಗಿರುತ್ತದೆ. ಮದುವೆಯ ವಿವಿಧ ಶಾಸ್ತ್ರಗಳು, ವಾದ್ಯಗಳ ಮೊಳಗು, ಹಸಿರು ಚಪ್ಪರ, ಅಪಾರ ಸಂಖ್ಯೆಯ ನೆಂಟರುಗಳ ಸಡಗರದ ಜೊತೆಗೆ ಸೋಬಾನೆ ಪದಗಳ ಲಯಬದ್ಧ ಹಾಡುಗಾರಿಕೆಯು ಹಳ್ಳಿಯ ಮದುವೆಯ ಸೊಗಸನ್ನು ಇಮ್ಮಡಿಗೊಳಿಸುತ್ತವೆ. ಈ ಹಾಡುಗಳನ್ನು ಮದುವೆಯ ಸಂದರ್ಭದಲ್ಲಿ ಹಾಡಿದರೆ ವೀಳಯದ ಗೌರವವುಂಟು. ವೀಳೆಯ ಶಾಸ್ತ್ರ, ದಿಬ್ಬಣ ಹೊರಡುವುದು, ಧಾರೆ ನೀರು ಎರೆಯುವ ಶಾಸ್ತ್ರ, ಬಳೆತೊಡುವ ಶಾಸ್ತ್ರ, ಅರಿಶಿನ ಹಚ್ಚುವ ಶಾಸ್ತ್ರ, ಹುಡುಗಿಯ ಅಲಂಕಾರ ಶಾಸ್ತ್ರ, ಮುಂತಾಗಿ ಮದುವೆಯಲ್ಲಿನ ಎಲ್ಲಾ ಶಾಸ್ತ್ರಗಳಿಗೂ ಸೋಬಾನೆಗಳನ್ನು ಕಟ್ಟಿ ಹಾಡಿದರು.

ಎಲ್ಲಿಯೋ ಹುಟ್ಟಿ ಎಲ್ಲಿಯೋ ಬದುಕಲು ಹೊರಟ ಜೀವಿಗಳು ಓರ್ರೋರ್ವರನ್ನು ಪ್ರೀತಿಸಿ ಬಾಳಸಂಗಾತಿಗಳಾಗುತ್ತಾರೆ. ಕೆಲವು ಶಾಸ್ತ್ರಗಳು ಮುಗಿದ ಮೇಲೆ ಪತಿ–ಪತ್ನಿಯರ ಕೈ ಹಿಡಿಸುವುದು ಓರ್ರೋರ್ವರ ಕೈ ಹಿಡಿದು ಸಾಗಲೆಂಬ ಸಂಕೇತದಿಂದ. ಅವರೀರ್ವರಲ್ಲಿ ಅಂದಿನಿಂದಲೇ ಅನುರಾಗದ ಮೊಳಕೆ ಕುಡಿಯೊಡೆಯುತ್ತದೆ. ಆತ್ಮೀಯತೆ ಪ್ರೇಮವಾಗಿ ಹೃದಯಭಾವ ಬೆಸುಗೆಯಾಗುವಂತೆ ಪ್ರೇರೇಪಿಸುತ್ತದೆ. ವಿವಾಹದಲ್ಲಿ ಒದಗುವ ಸಂಸ್ಕೃತಿ ಇಂಥದು. ಪತಿ–ಪತ್ನಿಯರ ನಡುವೆ ಇರುವ ಸಂಕೋಚದ ತೆರೆ ಸರಿಯಲೆಂಬ ದೃಷ್ಟಿಯಿಂದ ಮದುವೆಯಲ್ಲಿ ಚೆಂಡಾಡುವ, ಹಾಗೂ ಇನ್ನಿತರ ಆಟಗಳನ್ನು ಎಲ್ಲರೆದುರು ಆಡಿಸುತ್ತಾರೆ. ಬಾಗಿಲು ತಡೆಯುವುದರ ಹಿನ್ನೆಲೆಯಲ್ಲಿ ಅವರ ನಾಚಿಕೆ ಸ್ವಭಾವವನ್ನು ದೂರ ಮಾಡುವ ಆಶಯವಿದೆ. ಆದ್ದರಿಂದ ಅವನು ತನ್ನ ಅತ್ತೆ ಮಾವನವರಿಗೆ ಅವರ ಮನೆಯ ಜೊತೆ ಸಂಬಂಧ ಬೆಳೆಸಲು ಒಪ್ಪಿಕೊಳ್ಳುತ್ತಾನೆ. ಈ ಸಂಬಂಧದಲ್ಲಿನ ಹಾಡು ಮಧುರವಾದುದು. ಹೀಗೆ ಈ ಹಾಡುಗಳು ನಾಗರಿಕ ಗಂಧ–ಗಾಳಿ ಇಲ್ಲದ ಕಡೆಗಳಲ್ಲಿ ಶುದ್ಧ, ದೇಶೀಯ ಗುಣದಿಂದಲೇ ಕೂಡಿರುತ್ತವೆನ್ನಬಹುದು. ಸೋಬಾನೆ ಪದಗಳು ಎಲ್ಲಾ ರೀತಿಯಿಂದಲೂ ಸಂಸ್ಕೃತಿಯನ್ನು ಬಿಂಬಿಸುವವುಗಳಾಗಿವೆ.

ಶೋಭಾನೆ ಹಾಡುಗಳ ವಸ್ತುವಿನ ಹರವು ಬಹು ವಿಸ್ತಾರವಾಗಿದೆ. ಇವುಗಳಲ್ಲಿ ಮದುವೆಯ ಸಂದರ್ಭದ ಸೋಬಾನೆ ಹಾಡುಗಳು ಪ್ರಮುಖವಾಗಿದ್ದು ಅವುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಮದುವೆಗೆ ಸಂಬಂಧಿಸಿದಂತೆ ಸುಮಾರು 25–30 ಸಂದರ್ಭಗಳಲ್ಲಿ ಹಾಡುಗಳನ್ನು ಹೇಳುವುದು ರೂಢಿಯಲ್ಲಿದೆ. ಆದರೆ ಇವೆಲ್ಲ ಆಯಾ ಪರಿಸರದಲ್ಲಿ ಎಲ್ಲರಲ್ಲಿಯೂ ಬಳಕೆಯಲ್ಲಿರುವಂಥವೇ. ಈ ಹಾಡುಗಳು ಕೇವಲ ಹೆಂಗಸರಿಗೆ ಮೀಸಲಾಗಿದ್ದು, ಮುಮ್ಮೇಳ, ಹಿಮ್ಮೇಳಗಳಿಂದ ಪರಿಪೂರ್ಣಗೊಳ್ಳುತ್ತವೆಯಾದರೂ ಪ್ರದೇಶದಿಂದ ಪ್ರದೇಶಕ್ಕೆ ಇವುಗಳ ಧಾಟಿಯಲ್ಲಿ ಭಿನ್ನತೆಗಳು ಕಂಡು ಬರುತ್ತವೆ"[2].

ಮದಯವೆಯ ಸಂದರ್ಭದಲ್ಲಿ ಹಾಡುವ ಕೆಲವು ಹಾಡುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ:

## ವಧೂವರರಿಗೆ "ಸೇಸೆ" ಇಡುವ ಹಾಡು (ಆಶೀರ್ವಾದದ ಹಾಡು)

ಆಸೆಗಲ್ಲ ಮೇಲೆ ನಿಂತು ತಪ್ಪವ ಮಾಡಿ
ಕೊಣಚೆಗಲ್ಲ ಮೇಲೆ ಕೂತು ತಪ್ಪವ ಮಾಡಿ ।
ಆದೀಸ್ವರ ಸ್ವಾಮಿಗೆ ಆಗ್ಯೇತ್ತು ಈ ಹೆಣ್ಣು
ನೇಮೀಶ್ವರ ಸ್ವಾಮೀಗೆ ನಂಬ್ಸಿತ್ತ ಈ ಹೆಣ್ಣು ।
ಮತ್ತೈದೆಯಾಗಲೆಂದು ಮೂಗುತಿಯ ತಂದಿಟ್ಟೆ
ವದೆಗಿತ್ತ್ಯಾಗಲೆಂದು ಐದಾಳಿಯ ತಂದಿಟ್ಟೆ ।
ಎಂಬ ಭೂಷಣವೆಂಬ ಬಂದೀಯ ಕಟ್ಟಿದೆ ।

ಸರ್ವಮಂಗಳವೆಂಬ ವಾಲೇಯ ತಂದಿಟ್ಟೆ ।
ನಾಗಭೂಷಣವೆಂಬ ಕಾಲುಂಗುರ ತಂದಿಟ್ಟೆ
ನಾನಿಟ್ಟ ಸೇಸೆ ನೀನಿಟ್ಟ ಸೇಸೆ, ಸರಿಸೇಸೆಯಾಗಲಿ ।
ಹುಂಬುಚಸದಮ್ಮಯ ಗದ್ದುಗೆ ಬಾಳಿದಂತೆ
ಬಾಳಲಿ ಈ ಮದು ಮಕ್ಕಳು ॥ [3]

ಈ ಹಾಡಿನಲ್ಲಿರುವ ಕಾವ್ಯ ಸೌಂದರ್ಯವನ್ನು ಗಮನಿಸಿ. ಈ ಹಾಡಿನ ಮದುವೆಯ ಹೆಣ್ಣು ಆಸೆ ಎಂಬ ಕಲ್ಲಿನ ಮೇಲೆ ನಿಂತು ತಪಸ್ಸನ್ನು ಮಾಡಿದವಳಂತೆ ಚಿತ್ರಿತವಾಗಿದ್ದಾಳೆ. ಅಂದರೆ ಮದುವೆಯ ಹಿನ್ನೆಲೆಯಲ್ಲಿರುವ ಆಶಾಗೋಪುರ ಮತ್ತು ಆಕೆ ಕಟ್ಟಿಕೊಂಡಿರುವ ಆಸೆಗಳ ಸರಮಾಲೆ ಹಾಗೂ ಅದನ್ನು ಸೂಚಿಸುವಲ್ಲಿ ಈ ಮಾತು ಬಹಳ ಶಕ್ತಿಶಾಲಿಯಾಗಿದೆ ಎನ್ನಿಸುತ್ತದೆ. ತಪಸ್ಸೆನ್ನುವುದು ಸರಳವಾದ ಮಾತಲ್ಲ. ಅದರಲ್ಲೂ ಕಲ್ಲಿನ ಮೇಲೆ, ನಿಂತು ತಪಸ್ಸು ಮಾಡುವುದು, ಅದೂ ಆಸೆ ಎಂಬ ಕಲ್ಲಿನಮೇಲೆ. ಆಸೆಯಿಂದ ಕೂಡಿದ ನಿರೀಕ್ಷೆಯಲ್ಲಿ ಮನಸ್ಸು ಪರಿತಪಿಸುತ್ತಿದೆ. ಆದರೆ ಆಸೆ ಎಂಬ ನಿರೀಕ್ಷೆ ಸಫಲವಾಗುವುದು ತಡವಾದರೆ, ತಳಭಾಗದಲ್ಲಿ ಕಲ್ಲು ಮೇಲಿನಿಂದ ಸೂರ್ಯ ಎರಡೂ ಸುಡುತ್ತದೆ. ಆದರೂ ಈ ಹಾಡಿನ ಹೆಣ್ಣು ಮಾತ್ರ ಯಾವುದಕ್ಕೂ ಜಗ್ಗದೆ, ಧೃತಿಗೆಡದೆ, ಒಂದೇ ಮನಸ್ಸಿನಿಂದ ಉತ್ತಮವರನಿಗಾಗಿ ಆದೀಶ್ವರ, ನೇಮೀಶ್ವರರನ್ನು ಕುರಿತು ತಪಸ್ಸು ಮಾಡಿದ್ದಾಳೆ. ಅವಳ ಆಸೆಯ ಈ ನಿರೀಕ್ಷೆ ಮದುವೆಯಿಂದ ಪೂರ್ಣವಾಗುವುದೆಂದು, ಅದು ಆಗಲೆಂದು ವಿವಿಧ ಆಭರಣಗಳನ್ನಿಟ್ಟು 'ಹೊಂಬುಜದಮ್ಮಯ್ನ ಗದ್ದುಗೆ ಬಾಳಿದಂತೆ' ಸುಖವಾಗಿ ಬಾಳಲೆಂದು ಆಕೆಯ ಗೆಳತಿಯರು, ಬಂಧುಗಳು ಹಾರೈಸಿದ್ದಾರೆ.

'ಹೊಂಬುಜದಮ್ಮಯ್ನ ಗದ್ದುಗೆ ಬಾಳಿದಂತೆ' ಎಂಬಲ್ಲಿಯೂ ನಾವು ಗಮನಿಸಬೇಕಾದ ಒಂದು ಧ್ವನಿಯಿದೆ. ಈ ಗದ್ದುಗೆ ಚಿರಕಾಲ ಬಾಳುತ್ತದೆ ಎಂಬ ಧಾರ್ಮಿಕ ವಿಶ್ವಾಸವಷ್ಟೇ ಅಲ್ಲ ಇಲ್ಲಿರುವುದು; ಅವರು ತಲತಲಾಂತರದಿಂದ ಕಾಣುತ್ತಿರುವ ಸತ್ಯವನ್ನು ಪೂರ್ಣ ಭರವಸೆಯಿಂದ ಇಲ್ಲಿ ತುಂಬಿದ್ದಾರೆ. ಈ ಕ್ಷೇತ್ರದಲ್ಲಿ ಲಕ್ಕಿಯ ಗಿಡ ಒಣಗುವವರೆಗೆ ಮುತ್ತಿನಕೆರೆ ಬತ್ತುವವರೆಗೆ ತೀರ್ಥದ ನೀರು ನಿಲ್ಲುವವರೆಗೆ ನನ್ನ ಸತ್ಯ ಇರುತ್ತದೆ ಎಂದು ದೇವಿ ಪದ್ಮಾವತಿ ಜಿನದತ್ತರಾಯನಿಗೆ ಆಶ್ವಾಸನೆ ಕೊಟ್ಟಿದ್ದಳು ಎಂಬುದು. ಅಂತೆ ಆ ಗದ್ದುಗೆ ಹೇಗೆ ಚಿರಕಾಲ ಇರುವುದು ಸತ್ಯವೋ, ಹಾಗೆ ನಿಮ್ಮ ಬದುಕೂ ಸುಖವಾಗಿ ನಡೆಯುವುದು ಸತ್ಯ ಸಂಗತಿ ಆಗಲಿ ಎನ್ನುವುದು ಈ ಮಾತಿನಲ್ಲಿರುವ ಅವರ ಆಶಯ'

2001ರ ಜನವರಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನಡೆದ ಶ್ರದ್ಧಾ ಹಾಗೂ ಅಮಿತ್‌ರವರ ವಿವಾಹ ಸಮಾರಂಭದಲ್ಲಿ ಶ್ರೀಮತಿ ಹೇಮಾವತಿ ಹೆಗ್ಗಡೆಯವರು ತಮ್ಮ ಭಾವನೆಗಳನ್ನು ಸೋಬಾನೆ ಹಾಡುಗಳ ರೂಪದಲ್ಲಿ ರಚಿಸಿ ವ್ಯಕ್ತಪಡಿಸಿದ್ದಾರೆ. ಅವುಗಳಲ್ಲಿ ಕೆಲವು ಅವರ ಸ್ವಂತ ರಚನೆ ಆದರೆ ಮತ್ತೆ ಕೆಲವು ಅವರೇ ಸಂಗ್ರಹಿಸಿದ ಹಾಡುಗಳಾಗಿವೆ. ಈ ಸಂಗ್ರಹದ ಶುಭಹಾರೈಸುವ ಹಾಡುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ:

(ರಾಗ ವೀಣಾವಾದಿನಿ ಸರಿಗಮಪದನಿಸ ಏಕತಾಳ)
ಹರಸಬನ್ನಿರಿ ಬಂಧು ಬಳಗ ತಾವೆಲ್ಲರೂ
ಅನ್ನದಾನದ ಕನ್ಯಾದಾನದ ಫಲವು ಫಲಿಸಲೀ ॥
ಭೂಮಿತೂಕದ ಹೆಣ್ಣು । ನಮ್ಮೆಲ್ಲರ ಕಣ್ಣು
ಚಿತ್ರದಾಗಿನ ಗೊಂಬೆ । ಹೊನ್ನ ಪುತ್ಥಳಿಯೂ ॥
ಗುಣದಲ್ಲಿ ಗಂಭೀರ । ಮಣಿಯಂತೇ ಮೈಬಣ್ಣ
ಸಣ್ಣ ಮಲ್ಲಿಗೆಯನ್ನು ಮೋಲ್ವ ಚೆಲ್ವ ಸುಂದರಿಯೂ॥
ಸಿರಿಚಂದ್ರನಾಥ ವರ ಶ್ರೀ ಮಂಜುನಾಥರ

ಕರುಣೆಯ ಕೂಸನ್ನು ಹರಸಲು ಬನ್ನಿ ॥
ತಳಿರುಮಾವು ಪತ್ರ ಹೋಲುವ ಚರಣ
ಸುಳಿವ ಕಾಲುಂಗುರ ಸೂಕ್ಷ್ಮದ ಗೆಜ್ಜೆ ॥
ಬಳೆ ಭಾರಿ ಕಂಕಣ ಬೆರಳ ಹೊನ್ನುಂಗುರು
ನವಿಲಿನ ಬಂಕಿ ನೀಳಾದ ತೋಳು ॥
ಜಲ ನೆಲ ಒಂದಾಗಿ ಹೊಳೆವ ಮಂಟಪದಿ
ಕಣ್ಣಾ ದೃಷ್ಟಿಯಾಗ್ವ ಪುಣ್ಯದ ಜೋಡಿ
ಶ್ಲೋಕಃ
ಶತಮಾನಂ, ಭವತೋ । ಶತಾಯುಃ ಪುರುಷಃ ।
ಶತೇಂದ್ರಿಯಾಯುಷ್ಯೇಂದ್ರಿಯೋ । ಪ್ರತಿತಿಷ್ಠತಿ ॥ [4]

ಈ ಹಾಡಿನಲ್ಲಿ ಅನ್ನದಾನದಂತೆ ಕನ್ಯಾದಾನದ ಶ್ರೇಷ್ಠತೆಯನ್ನು ಹೇಳುತ್ತಾ, ಮದುವೆಯ ಹೆಣ್ಣಿನ ಸೌಂದರ್ಯವನ್ನು ಹಾಡಿ ಹೊಗಳಿದ್ದಾರೆ. ಹೆಣ್ಣಿನ ಸೌಂದರ್ಯವನ್ನು ಸುವರ್ಣ ಪುತ್ಥಳಿಗೆ, ಮಣಿಗೊಂಬೆ ಮುಂತಾದವುಗಳ ಜೊತೆ ಹೋಲಿಸಿ, ಅವಳ ದೇಹಸೌಂದರ್ಯವನ್ನು ವರ್ಣಿಸಿ ಬಂಧು ಬಾಂಧವರೆಲ್ಲರೂ ಅವಳಿಗೆ ಆಶೀರ್ವದಿಸಬನ್ನಿರೆಂದು ಹಾರೈಸಿದ್ದಾರೆ.

ಹಾಗೆಯೇ ಹೇಮಾವತಿ ವೀರೇಂದ್ರ ಹೆಗ್ಗಡೆಯವರು ರಚಿಸಿ ಹಾಡಿಸಿರುವ ಆಶೀರ್ವಾದದ ಮತ್ತೊಂದು ಹಾಡನ್ನು ಇಲ್ಲಿ ಅಧ್ಯಯನದ ಅನುಕೂಲತೆಗಾಗಿ ಬಳಸಿಕೊಳ್ಳಲಾಗಿದೆ. ಅದು ಹೀಗಿದೆ:

ಮಂಗಳಕರ ಈ ಶುಭದಿನದೀ ಕಲ್ಯಾಣಂ ಶುಭ ಕಲ್ಯಾಣಂ
ಮಂಗಳವಾದ್ಯ ನಿನಾದದೊಡನೆ ಶುಭ
ಕಲ್ಯಾಣಂ ಶುಭ ಕಲ್ಯಾಣಂ ॥
ನಗೆಮುಖ ಚೆಲುವ ಅಮಿತನಿಗೆ । ತವರಿನ
ಕಣ್ಮಣಿ ಶ್ರದ್ಧಾಳಿಗೆ
ಶ್ರೀ ಗುರುಹಿರಿಯರ ಸಮ್ಮುಖದೀ ಕಲ್ಯಾಣಂ
ಶುಭ ಕಲ್ಯಾಣಂ ॥
ವೇದ ಘೋಷದಿಂ ಕಲ್ಯಾಣಂ । ಅಗ್ನಿ ಸಮ್ಮುಖೇ ಕಲ್ಯಾಣಂ
ಸ್ವಸ್ತಿ ಮಂತ್ರದಿಂ ಕಲ್ಯಾಣಂ । ದೇವ
ಕರುಣೆಯೊಳು ಕಲ್ಯಾಣಂ ॥
ತಂದೆ ತಾಯಿಯರ ವಾತ್ಸಲ್ಯ ಬಂಧು ಬಾಂಧವರ
ಹರಸಿಕೆಯು ಅಕ್ಷತೆಯು
ಅಕ್ಷತೆ ಸಿಂಚನವಾಗಿರುವ । ಕಲ್ಯಾಣಂ ಶುಭ ಕಲ್ಯಾಣಂ॥
ರತ್ನಮಂಟಪದೊಳು ಕಲ್ಯಾಣಂ । ರಾಜ
ಸಭೆಯೊಳು ಕಲ್ಯಾಣಂ
ಗಾನ ಮೇಳದೊಳು ಕಲ್ಯಾಣಂ । ಸಕಲ
ಸೌಭಾಗ್ಯದ ಕಲ್ಯಾಣಂ ॥ [5]

ಈ ಹಾಡಿನ ವಿಶೇಷತೆಯೆಂದರೆ ಜನಪದರು ಮದುವೆಯ ಸಂದರ್ಭದ ಈ ಆಶೀರ್ವಾದದ ಹಾಡನ್ನು ಹಾಡುವಾಗ ಆಯಾ ಸಮುದಾಯದವರು ತಮ್ಮ ಸಂಪ್ರದಾಯಕ್ಕೆ, ಪರಿಸರಕ್ಕೆ ತಕ್ಕಂತೆ ಹಾಡಿನ ಭಾಷೆಯ ಬಳಕೆಯಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುತ್ತಾರೆ. ಈ ಹಾಡು ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ನಡೆದ ಶ್ರದ್ಧಾ ಹಾಗೂ

ಅಮಿತ್‌ರವರ ವಿವಾಹ ಸಂದರ್ಭದಲ್ಲಿ ಹಾಡಿರುವುದರಿಂದ ವಧುವರರ ಹೆಸರುಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸಿಕೊಂಡಿದ್ದಾರೆ. ಇದು ಜನಪದರ ಹಾಡು ಕಟ್ಟಿಹಾಡುವ ಅವರ ಸಹಜ ಬುದ್ಧಿಮತ್ತೆಯ ನೈಪುಣ್ಯತೆಗೆ ಹಿಡಿದ ಕೈಗನ್ನಡಿಯಾಗಿದೆ.

## ಅರಸಿನ ಎಣ್ಣೆ ಎರೆಯುವ ಹಾಡು

ಮುಂದಿನ ಹಾಡಿನಲ್ಲಿ ವಧು–ವರರಿಗೆ ಅರಿಶಿನ ಎಣ್ಣೆಯನ್ನು ಎರೆಯುವ ಹಳ್ಳಿಗರ ಸಂಪ್ರದಾಯವನ್ನು ವರ್ಣಿಸಲಾಗಿದೆ:

(ಆಗಿಭೋಗಿ ಸರಿಗಮದಸ ರೂಪಕ)
ಸಾಗಾರಿ ಗಾಮಾದಾ ಸಾದಾಮ ಗಾರೀ
ಆ ನಾಡ ಅರಸೀನ ಈ ನಾಡ ಅರಸಿನ
ಸಾರೀಗ ಮಾದಾಮ ಗಾರೀ ಸಾ,
ಗೋವೀ ಮಲೆನಾಡಾ ಅರಸೀನ
ದಾಸಾರಿ ಮಾ಼ ಗಾಮಾದ ಸಾ಼
ಗೋವೀ ಮಲೆನಾಡಾ ಅರಸಿನವ ಅವರಪ್ಪ
ಚಾಗಾರೀ ಸದಾಮ ಮಾಗಾರೀ
ಹಚ್ಚಡವೆ ಕೊಟ್ಟು ತರಿಸ್ಯಾರೆ
ಸಾರೀಗ ಮಾಗಾರೀ ಗಾ಼ ಸಾ಼
ಮಾಮಾಗ ಮಾ಼ ಗಮದಾಮ ಮಾ಼
ಎಣ್ಣೆ ಅರಸಿನ ಹೋಗಿ ಸರಸವಾಡುತ್ತಾವೆ
ಸಾರೀಗ ಮಾದಾಮ ದಾ಼,,
ಮದುಮಗಳ ವದನಗುವುದಾ಼ವೆ
ದಾಸಾಸ ದಾಮಾದ ದಾಸಾದ ಸಾ಼
ಅರಸೀನ ಹಚ್ಚಿಗಂಬೋ ಅರಸರ ಮಗಳೇ ಬಾರೆ
ದಾಗಾರೀ ಸಾದಾಮ ಮಾಗಾರೀ
ಅರಸಿನಕೂ ನಿನಗೂ ಸೊಗಸೇನೇ
ಸಾರೀಗ ಮಾಗಾರೀ ಗಾ಼ ಸಾ಼
ಸಾಗಾರೀಗಾ । ಗಾಮಾದ ಮಾ಼
ಎಣ್ಣೆಯ ಹಚ್ಚಾಲೆ ಹನ್ನೊಂದ್ನೆ ದಿನದಾಗೆ
ಗಾಮಾರ ದಾ಼ ಸಾದಾ ಮ ಗರೀ
ಎಣ್ಣೆಯ ಹಚ್ಚೋ಼ ಐದೇರು
ದಾಸಾರಿ ಮಾ಼ ಮಾದಾಮ ಗಾರೀ
ಎಣ್ಣೆಯ ಹಚ್ಚೋ಼ ಐದೇರು ಮದುಮಕ್ಕಗೆ
ಮಾಮಾಮ ಗಾರೀ ಗಾರೀಸಾ
ಎಣ್ಣೆ ಹಚ್ಚ್ಯಾರೋ ಒಲುವೀಲಿ [6]

ಈ ಹಾಡಿನಲ್ಲಿ ಅರಿಸಿನದ ಮಹತ್ವ ಹಾಗೂ ವಧು–ವರರಿಗೆ ಮದುವೆಯ ಕಾರ್ಯದಲ್ಲಿ ಪ್ರಮುಖವಾಗಿರುವ ಅರಿಶಿನೆಣ್ಣೆ ಹಚ್ಚುವ ಸಂಪ್ರದಾಯವನ್ನು ಇಲ್ಲಿ ಹಾಡುಗಾರ ಸೆರೆಹಿಡಿದಿದ್ದಾನೆ. ಅರಿಸಿನೆಣ್ಣೆ ಹಚ್ಚುವ

ಶಾಸ್ತ್ರವು ಸಾಮಾನ್ಯವಾಗಿ ಮದುವೆಯ ಆರಂಭದ ಕಾರ್ಯಗಳಿಂದ ಹಿಡಿದು ಮುಕ್ತಾಯದವರೆಗೂ ನಡೆಯುವಂತಹ ಹಲವಾರು ಶಾಸ್ತ್ರಸಂಪ್ರದಾಯವಾಗಿದೆ. ಜನಪದರು ಅಥವಾ ಹಾಡುಗಾರ ಸಾಂದರ್ಭಿಕವಾಗಿ ಇಂತಹ ಸೊಗಸಾದ ವರ್ಣನೆಗಳ ಮೂಲಕ ಹಾಡನ್ನು ಕಟ್ಟಿ ಹಾಡುವಲ್ಲಿ ಯಶಸ್ವಿಯಾಗಿದ್ದಾನೆ. ಇಂತಹ ಹಾಡುಗಳು ಒಂದು ಧಾರ್ಮಿಕ ಸಂಪ್ರದಾಯ, ಶಾಸ್ತ್ರ ಆಚರಣೆಗಳನ್ನು ಪುನಃ ಪುನಃ ಮರುಕಳಿಸುವಂತೆ ಮಾಡುತ್ತವೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

## ಹಸೆಗೆ ಕರೆಯುವ ಹಾಡು

ಮದುಮಕ್ಕಳನ್ನು ಹಸೆಗೆ ಕರೆಯುವ ಹಾಡಿನಲ್ಲಿ ಜೈನರು ಸಾಮಾನ್ಯವಾಗಿ ಅರಹಂತರು, ಸಿದ್ಧರು, ವರ್ಧಮಾನ, ಬಾಹುಬಲಿ, ಯಕ್ಷ–ಯಕ್ಷಿಯರಾದ ಧರಣೇಂದ್ರ–ಪದ್ಮಾವತಿ ಇವರುಗಳಿಗೆ ವಂದಿಸಿ ಹಸೆಗೆ ನಡೆದು ಬನ್ನಿ ಎಂದು ಮದುಮಕ್ಕಳಿಗೆ ಹೇಳುವ ಮಾತುಗಳು ಕಂಡುಬರುತ್ತವೆ. ಇದಕ್ಕೆ ಕಾರಣವೆಂದರೆ ಶುಭಕಾರ್ಯ ನಡೆಯುವಾಗ ಹೆಜ್ಜೆ ಹೆಜ್ಜೆಗೂ ದೇವರನ್ನು ನೆನಪಿಸಿಕೊಳ್ಳಬೇಕೆಂಬ ಮನೋಭಾವವನ್ನು ಹಾಡುಗಾರರು ಮುಂದಿನ ಈ ಹಾಡಿನಲ್ಲಿ ವ್ಯಕ್ತಪಡಿಸಿದ್ದಾರೆ.

(ಸರಿಗಪಸಮೋಹನ)
ಬಾರಮ್ಮ ಹಸೆಮಣೆಗೆ ಧರಣೇಂದ್ರನರಸಿಯೆ
ವಾರಿಜಾಕ್ಷಿಯೆ ನಾಗರಾಜನವರಿಸಲು
ದಾರಿಯ ನೋಡುತ ಹಾರುವ ಪಿಡಿಯುತ ॥
ನಾಗವೇಣಿಯೆ ನಾಗಮಣಿಗಣ ಭೂಷಿತೆ
ನಾಗದೇವತೆ ನಾಗರಾಜನ ರಮಣಿಯೇ ॥

ನಾರಿಮಣಿಯರಿಂದ ಮೀರಿದ ಹರುಷದಿ
ಸಾರಿಕರೆವರು ತ್ವರಿತದಿ ಬಾರೆಂದು ॥
ಕಾಂಚನ ಭೂಷಣ ಸಂಚಯವನು ತೊಟ್ಟು
ಕಾಂಚಿನ ಕಿಂಕಿಣಿಯಿಂಚರದೊಳು ನೀನು ॥
ಕರುಣಾಪಾಂಗದಿ ಕರೆಯುತ ಮಿಂಚನು
ಕರಿವರಗಮನೆಯ ಭರದೊಳು ಅಡಿಯುಟ್ಟು ॥ 7

ಹಾಗೆಯೇ ಶ್ರೀಮತಿ ಹೇಮಾವತಿ ವೀರೇಂದ್ರ ಹೆಗ್ಗಡೆಯವರು ರಚಿಸಿ, ಸಂಗ್ರಹಿಸಿರುವ ''ಸೋಬಾನೆ ಹಾಡುಗಳು'' ಎಂಬ ಪುಟ್ಟ ಪುಸ್ತಕದಲ್ಲಿರುವ ವರನನ್ನು ಹಸೆಗೆ ಕರೆಯುವಾಗ ಎಂಬ ಹಾಡು ಹೀಗಿದೆ:

ಬಾರೋ ಹಸೆಮಣೆಗೆ ಸುಂದರಾಂಗನೇ
ಬಾರೋ ಹಸೆಮಣೆಗೆ ಬೇಗ
ಬಂಗಾರ ಮಂಟಪದ ಶೃಂಗಾರ ಮಾಡಿ
ಸಂಗೀತವ ಪಾಡೇ
ಸಂಗೀತವ ಪಾಡಿ ಭೃಂಗನಾಯಕಿಯರು
ಸುರಚಿರಭರಣಂಗಳ್ ಲಾಲಿಸೋದೇವಾ ॥

ಸುರಪುರ ಮಂದಿರ ಗಿರಿಯ ಹಸೆಮಣೆಗೆ
ಮುತ್ತೈದೆಯರು ಸುತ್ತು ಮುತ್ತಲು

ಮುತ್ತೈದೆಯರು ಸುತ್ತು ಮುತ್ತಲು ಕೂಡಿ
ಮುತ್ತಿನಾರತಿ ಕೈಯಲೆತ್ತಿ ಕಾದಿರುವರು ॥ 8

## ದಿಬ್ಬಣದ ಹಾಡು

ಮದುವೆಯ ದಿನ ಗಂಡಿನ ಮನೆಯಿಂದ ದಿಬ್ಬಣ ಹೊರಡುವುದಕ್ಕೆ ಮುಂಚೆ ಅವರ ಮನೆಯಲ್ಲಿ ದೇವರಕಾರ್ಯ ನಡೆಸಿ, ಬಂಧು ಬಳಗದವರನ್ನೆಲ್ಲ ಕರೆದು ಊಟ ಹಾಕಿ ವರನನ್ನು ಕೂರಿಸಿ ಅಕ್ಷತೆ ಇಡುತ್ತಾರೆ. ಈ ಸಂದರ್ಭದಲ್ಲಿ ಆ ವರನ ಬಗ್ಗೆ ಆತನ ತಾಯಿಯ ಬಗ್ಗೆ ಬಳಗದವರ ಅಭಿಮಾನ ಅಭಿವ್ಯಕ್ತಗೊಳ್ಳುತ್ತದೆ. ಅದಲ್ಲದೆ ತಮ್ಮತಮ್ಮ ಮನೆದೇವರುಗಳಾದ ಜಿನದೇವರು, ಪದ್ಮಾವತಿ ಇನ್ನಿತರ ಯಕ್ಷಯಕ್ಷಿಯರನ್ನು ತಂದೆ ತಾಯಿ, ಅಕ್ಕಂದಿರು, ಅಣ್ಣ–ತಮ್ಮಂದಿರುಗಳ ರೂಪದಲ್ಲಿ, ವರನಿಗೆ ಅಕ್ಷತೆಯನ್ನಿಟ್ಟು ಹರಸಲು ಬಂದಿದ್ದಾರೆಂಬ ಅವರ ನಂಬಿಕೆಯೂ ಸಹ ಹಾಡಿನ ರೂಪದಲ್ಲಿ ವ್ಯಕ್ತವಾಗುತ್ತದೆ.

ಮುಂದಿನ ಹಾಡಿನಲ್ಲಿ ಮದುಮಕ್ಕಳು ದಿಬ್ಬಣ ಹೊರಡುವ ಸಂದರ್ಭದಲ್ಲಿ ಮೊದಲು ತಮ್ಮತಮ್ಮ ಮನೆ ದೇವ್ರಿಗೆ ಇಡಿಗಾಯಿ ಹೊಡೆದು ದೀಪಹಚ್ಚಿ, ಪೂಜಿಸಿ, ಪರಸ್ಪರ ಸತಿ–ಪತಿಯರೊಡಗೂಡಿ ಬರುವುದಾಗಿ ದೇವರಲ್ಲಿ ಪ್ರಾರ್ಥಿಸಲಾಗಿದೆ. ಹಾಗೆಯೇ ಹೆತ್ತತಾಯಿಯ ಚರಣಕ್ಕೆ ಎರಗಿ ಆಶೀರ್ವಾದ ಪಡೆದು ದಿಬ್ಬಣಕ್ಕೆ ಹೊರಡಲು ಅನುವಾಗಿದ್ದಾರೆ ಎಂದು ಚಿತ್ರಿಸಲಾಗಿದೆ.

ಮಾಳಿಗೆ ಒಳಗೆ ಹೋದಾನೆ ಕಂದಯ್ಯ
ಮನೆದೇವ್ರಿಗೆ ಕಾಯಿ ಇಡಿಗಾಯಿ ಒಡೆದ್ಯಾರೆ
ಮನೆ ದೇವ್ರಿಗೆ ದೀಪ ಉರಿಸ್ಯಾರೆ ॥
ಉರಿಸಿ ಏನೆಂದು ಹೇಳ್ಯಾರೆ

ಸತಿಯೊಳಗೊಂಡೆ ಬರತೇನಿ
ಪತಿಯೊಳಗೊಂಡೆ ಬರತೇನಿ ಅಂದೇಳಿ
ಮನೆದೇವ್ರಿಗೆ ಕೈಯ ಮುಗುದಾರು
ಮಾಳಿಗೆ ಒಳಗ ಹೋದಾರು ಕಂದಯ್ಯ
ಜಿನದೇವ್ರಿಗೆ ಕಾಯೆ ಇಡಿಗಾಯಿ
ಜಿನದೇವ್ರಿಗೆ ಕಾಯಿ ಇಡಿಗಾಯಿ ಹೊಡೆದು ಏನೆಂದು ಹೇಳ್ಯಾರೆ
ಸತಿಯೊಳಗೊಂಡೆ ಬರತೇನಿ॥ ಅಂದೇಳಿ
ಜಿನದೇವ್ರಿಗೆ ಕೈಯ ಮುಗುದಾರು

ಮಾಳಿಗೆ ಒಳಗೆ ಹೋದಾರೆ ಕಂದಯ್ಯ
ಹೆತ್ತವ್ವನ ಸಿರಿಪಾದಕೆರಗ್ಯಾರು
ಹೆತ್ತವ್ವನ ಸಿರಿಪಾದಕೆ ವಂದನೆ ಮಾಡಿ
ಸತಿಯೊಳಗೂಡೆ ಬರತೇನೆ ॥ ಅಂದೇಳಿ
ಹಡದವ್ವಗೆ ಕೈಯ ಮುಗುದಾರು ॥9

ದಿಬ್ಬಣದ ಮೆರವಣಿಗೆ ಹೊರಡುವ ಈ ಹಾಡನ್ನು ಗಮನಿಸಿ, ಈ ಹಾಡು ಏಕತಾಳದಿಂದ ಕೂಡಿದ್ದಾಗಿದೆ.

ಸೋ ಅನ್ನೇ ಸೋಬಾನ ಬನ್ನೇ ॥ ಪ ॥

ಆನಿ ಆನಿ ನೋಡ ಆನಿ ಸಿಂಗಾರ ನೋಡ
ಆನಿ ಮ್ಯಾಗಿರುವ ಮದುಮಗನ । ಸೋಬಾನೆ ।
ಆನಿ ಮ್ಯಾಗಿರುವ ಮದುಮಗನಾ ।
ಕೊರಳ ಕಂಠಿಯ ಸರದ ಕಳೆನೋಡ ॥ ಸೋ ಅನ್ನೇ ॥ 1 ॥
ಆನಿಯ ಹಿಂದ್ಯಾರ ಆನಿಯ ಮುಂದ್ಯಾರ
ಇತ್ತಿ ನೆಡಬಲಕ ಇವರ‍್ಯಾರೋ । ಸೋಬಾನೆ ।
ಇತ್ತಿ ನೆಡಬಲಕ ಇವರ‍್ಯಾರೋ ।
ಮದುಮಗನ ಅಣ್ಣ ತಮ್ಮರು ಹೌದೇನ ॥ ಸೋ ಅನ್ನೇ ॥ 2 ॥
ಕುದುರಿ ಕುದುರಿ ನೋಡ ಕುದುರಿ ಸಿಂಗಾರ ನೋಡ
ಕುದ್ರೆಗಾಡಿಲಿರುವ ಮದುಮಗಳು । ಸೋಬಾನೇ ।
ಕುದ್ರೆಗಾಡಿಯಲಿರುವ ಮದುಮಗಳು ।
ಕೊರಳ ಮುತ್ತಿನ ಸರದ ಕಳೆ ನೋಡ ॥ ಸೋ ಅನ್ನೇ ॥ 3 ॥
ಕುದುರಿಯ ಹಿಂದ್ಯಾರ ಕುದುರಿಯ ಮುಂದ್ಯಾರ
ಕುದುರಿ ಎಡಬಲಕ ಇವರ‍್ಯಾರ । ಸೋಬಾನೇ ।
ಕುದುರಿ ಎಡಬಲಕ ಇವರ‍್ಯಾರ
ಮದುಮಗಳ ಅಕ್ಕ ತಂಗೀರು ಹೌದೇನ ॥ ॥ ಸೋ ಅನ್ನೇ ॥ 4 ॥
ದೇವಗೆ ಶರಣೆನ್ನು । ದೇವಿಗೆ ಶರಣೆನ್ನು
ದೇವರಂತ ಮಗನ ಕರುಣಿಸಿದ ।
ಜ್ವಾಲಿನಿ ತಾಯಿಯ ಪಾದಕ್ಕೆ ಶರಣೆನ್ನು ॥ 10

ದಿಬ್ಬಣ ಹೊರಟು ಹೆಣ್ಣಿನ ಮನೆಗೆ ಬರುವಾಗ ಹುಡುಗನ ಅಕ್ಕ ಕಳಸವನ್ನು ತೆಗೆದುಕೊಂಡೂ, ತಂಗಿ ಸಾಲೆ ಕುಕ್ಕೆಯಲ್ಲಿ ಹುಡುಗನಿಗೆ ಕೊಡುವ ಸಮಸ್ತ ವಸ್ತುಗಳನ್ನೂ ಹೊತ್ತು ತರುತ್ತಾಳೆ. ಸೀರೆ, ಕುಪ್ಪಸ, ಆಭರಣ, ಹಿಂಗಾರ, ಅಕ್ಕಿ, ತೆಂಗಿನಕಾಯಿ, ಹಣ್ಣು, ಬಳೆ, ಕುಂಕುಮ, ಅರಿಶಿನ, ಮೂರ್ತಮಣಿ, ಹಸಿದಾರ ಮುಂತಾದ ಎಲ್ಲವನ್ನೂ ಹೊತ್ತು ಗಂಡಿನ ಕಡೆಯ ಹಿರಿಯರಿಗೆ ಒಪ್ಪಿಸುತ್ತಾಳೆ. ಆಗ ಹೆಣ್ಣಿನ ಕಡೆಯ ಯಜಮಾನ ಕೊಟ್ಟಿರುವ ವಸ್ತುಗಳನ್ನು ನೋಡಿ ಒಪ್ಪಿಕೊಳ್ಳುತ್ತಾನೆ. ಇದನ್ನು ಕೊಡುವಾಗ ಸೋಬಾನೆ ಹಾಡುತ್ತಾ ಒಪ್ಪಿಸುತ್ತಾರೆ. ಒಂದು ಕಾಲದಲ್ಲಿ ಮುಡಿಗಟ್ಟಲೆ ಅಕ್ಕಿಯನ್ನು ದಿಬ್ಬಣದವರು ಹೊತ್ತುಕೊಂಡೇ ಗಾಡಿಯಲ್ಲೇ ತೆಗೆದುಕೊಂಡು ಹೋಗುತ್ತಿದ್ದರು. ಕುಕ್ಕೆಯಲ್ಲಿ ತೆಂಗಿನ ಕಾಯಿ ಅಕ್ಕಿ, ಹೂವು, ಹಣ್ಣು ಮತ್ತು ಮದುವೆಯ ಹೂವು ಹಾರಾದಿಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಈ ಆಚರಣೆಯ ಕ್ರಮ ನೋಡುವಾಗ ಹೆಣ್ಣಿನವರ ಮನೆಯ ಅನೇಕ ಖರ್ಚನ್ನು ಗಂಡಿನವರೇ ವಹಿಸಬೇಕಾಗಿತ್ತೆಂದು ತೋರುತ್ತದೆ.

## ಮಡಿಲು ತುಂಬುವುದು

ಮದುವೆ ಆಚರಣೆಗೆ ಸಂಬಂಧಿಸಿದ ಒಂದು ಜನಪದ ಸಂಪ್ರದಾಯ ಮಡಿಲು ತುಂಬುವುದು. ಹಲವಾರು ಸಂದರ್ಭಗಳಲ್ಲಿ ಮಡಿಲು ತುಂಬುವ ಕಾರ್ಯ ನಡೆಯುತ್ತದೆ. ಗಂಡಿನ ಮನೆಯವರು ಹೆಣ್ಣಿನ ಮನೆಗೆ ವೀಳ್ಯಶಾಸ್ತ್ರಕ್ಕೆ ಬಂದಾಗ ಹೆಣ್ಣನ್ನು ಹಸೆಮೇಲೆ ಕೂರಿಸಿ ಮಡಿಲು ತುಂಬುವರು. ಹೆಣ್ಣಿನ ಮುಂದೆ ಬಂದು ಬಿಳಿಬಟ್ಟೆ ಹಾಸಿ (ಕೆಲವು ಸಂಪ್ರದಾಯದ ಪ್ರಕಾರ ಅರಿಶಿನದ ಬಟ್ಟೆ) ಅದಕ್ಕೆ ಒಂದು ಚಿಪ್ಪು ಬಾಳೆಹಣ್ಣು, ಒಂದು ಕಟ್ಟು ಎಲೆ, ಒಂದು ಹಿಡಿ ಅಡಕೆ, ಒಂದು ಅಚ್ಚುಬೆಲ್ಲ, ಒಂದು ಕೊಬ್ಬರಿ, ಸ್ವಲ್ಪ ಅಕ್ಕಿ, ಹುರಿಕಡಲೆ, ಅರಿಸಿನ ಕುಂಕುಮ, ಹೂಗಳನ್ನು ಇಡುವರು.

ಕೆಲವು ಸಂಪ್ರದಾಯದ ಪ್ರಕಾರ ಕರಿಮಣಿ, ಬಳೆ, ಬಿಚ್ಚೋಲೆ, ಬಾಚಣಿಗೆ, ಕನ್ನಡಿಗಳನ್ನು ಇಡುವುದುಂಟು. ಹಸೆಮೇಲೆ ಕೂತ ಹೆಣ್ಣಿನ ಮಡಿಲಿಗೆ ಮುತ್ತೈದೆಯರು ಹೂವು, ಹಣ್ಣು, ಕಾಯಿ ಬೆಲ್ಲಗಳನ್ನು ತುಂಬುವರು. ಅಕ್ಷತೆ ಇಡುವ ಕೆಲಸವನ್ನು ಐದು ಜನ ಅಥವಾ ಒಂಬತ್ತು ಜನ ಮುತ್ತೈದೆಯರು ಮಾಡುತ್ತಾರೆ. ಮಡಿಲು ತುಂಬಿದ ಶಾಸ್ತ್ರಮಾಡಿ ಅನಂತರ ಅದನ್ನೆಲ್ಲಾ ಗಂಟು ಕಟ್ಟಿ ಹೆಣ್ಣನ್ನು ಹಸೆಯಿಂದ ಏಳಿಸುವರು. ಕೆಲವು ಸಂಪ್ರದಾಯದ ಪ್ರಕಾರ ಇದನ್ನೆಲ್ಲಾ ಅರಿಶಿನದ ಬಟ್ಟೆಯಲ್ಲಿರಿಸಿದಂತೆ ಮುತ್ತೈದೆಯರು ಹೆಣ್ಣಿನ ಸೊಂಟಕ್ಕೆ ಕಟ್ಟುವುದುಂಟು. ಇಂಥ ಸಂದರ್ಭದಲ್ಲಿ ಹೆಣ್ಣನ್ನು ದೇವರ ಮುಂದೆ ಕರೆದುಕೊಂಡು ಹೋಗಿ ಪೂಜೆ ಮಾಡಿಸಿ, ಗಂಟುಕಟ್ಟಿದ ಮುತ್ತೈದೆಯರೇ ಅದನ್ನು ಬಿಚ್ಚುವ ಕೆಲಸವನ್ನು ಮಾಡುವರು. ಮಡಿಲು ತುಂಬಿದ ವಸ್ತುಗಳ ಸಿಹಿತಿಂಡಿಗೆ ಉಪಯೋಗಿಸಬಹುದು. ಕರಿಮಣಿ, ಬಿಚ್ಚೋಲೆ, ಬಳೆ, ಬಾಚಣಿಗೆ, ಕನ್ನಡಿಗಳನ್ನು ಮಾತ್ರ ಯಾರಾದರೂ ಮುತ್ತೈದೆಯರಿಗೆ ಕೊಡುತ್ತಾರೆ ಅಥವಾ ಗಂಗೆಯಲ್ಲಿ ಬಿಡುತ್ತಾರೆ.

ಜೈನರು ಧರಣೇಂದ್ರ–ಪದ್ಮಾವತಿಯನ್ನು ಆದರ್ಶ ದಂಪತಿಗಳೆಂದು ತಿಳಿದು ಆರಾಧಿಸುವರು. ಅವರಂತೆಯೇ ಬಾಳಬೇಕೆಂದು ವಧೂವರರಿಗೆ ಆಶೀರ್ವದಿಸುವುದಲ್ಲದೆ ಇಂತಹ ಹಾಡುಗಳಲ್ಲಿ ಧರಣೇಂದ್ರ ಪದ್ಮಾವತಿಯರನ್ನು ನೆನೆಯುವುದು ವಿಶೇಷವಾಗಿದೆ.

ಮಡಿಲನು ಧರಣನ ಮಡದಿಗೆ ತುಂಬಿರೆ
ಭಾಮಿನಿ ರನ್ನೆಗೆ ಕಾಮಿನಿಯರು ಬಂದು

ಚೂತ ದಾಳಿಂಬರ ಪೂತ ಚಕ್ಕೋತವು
ಖರ್ಜೂರ ಮಾದಳ ನೂತನ ಕದಳಿ ಫಲದ
ಖ್ಯಾತೆ ಶ್ರೀ ಪದ್ಮೆಗೆ ಪ್ರೀತಿಯಿಂದಲಿ ಬಂದು
ರತುನ ತಟ್ಟೆಯ ಪಿಡಿದು ಅತಿಶಯದಿಂದಲಿ ॥
ಜಂಜುನೇರಳೆ ಗಜನಿಂಬೆ ದ್ರಾಕ್ಷಿಯನು
ಸೇಬು ಕಿತ್ತಳೆ ಫಲದ ಅಂಬೆ ಪದ್ಮಾವತಿಗೆ
ಅಂಬುಜ ಮುಖಿಯರೇ ಸಂಭ್ರಮದಿಂದಲಿ
ಕುಂಬಿನಿಯೊಳು ನೀವು ನಸುನಗೆ ನಗುತಲಿ॥

ದೇವರ ದೇವನ ದೀನ ದಯಾಕರಸ
ಪಾರ್ಶ್ವನಾಥನ ಯಕ್ಷಿ ನಾಗಿಣಿ ಮಣಿಗೆ
ಗಾನ ವಿನೋದದಿಂ ನಾರಿಯರೆಲ್ಲರು
ನಾನಾ ಫಲಂಗಳ ಹರುಷದಿಂದಲಿ ತಂದು ॥11

ಮುತ್ತೈದೆಯರು ವಧುವಿನ ಸೆರಗನ್ನು ಹಾಕಿ ಅದರೊಳಗೆ ಮಡಿಲನ್ನು ತುಂಬುತ್ತಾ ಹೂ ಹಾಗೂ ಇನ್ನಿತರ ಬಂಗಾರದೊಡವೆಗಳಿಂದ ಆಕೆಯನ್ನು ಸಿಂಗರಿಸಿ, ಸಡಗರ ಸಂಭ್ರಮಗಳಿಂದ ಸಂಗೀತವನ್ನು ಹಾಡುತ್ತಾ ಆಕೆಗೆ ಸಿರಿವಂತೆಯಾಗೆಂದು ಹರಸುತ್ತಾರೆ.

## ಉರುಟಣೆಯ ಹಾಡುಗಳು

ಮದುವೆಯ ಸಂದರ್ಭದಲ್ಲಿ ವಧೂವರರಲ್ಲಿ ಸಂಕೋಚಪ್ರವೃತ್ತಿಯನ್ನು ಕಳೆಯಲು ಕೆಲವು ಹಾಡುಗಳನ್ನು ಹಾಡಿಸುವ ಉರುಟಣೆ ಸಂಪ್ರದಾಯ ಕರ್ನಾಟಕದಲ್ಲಿ ರೂಢಿಯಿದೆ. ನೂತನ ದಂಪತಿಗಳು ಹಸೆಮಣೆಯ ಮೇಲೆ ಕುಳಿತು, ಅರಿಶಿನ ಕುಂಕುಮ ಗಂಧ ಪುಷ್ಪಗಳನ್ನು ಪರಸ್ಪರ ಅನುಲೇಪನ ಮಾಡಿ ತಾಂಬೂಲ ಕೊಡುವಾಗ ಈ

ಹಾಡುಗಳನ್ನು ವಧುವು ಮತ್ತು ಸುಮಂಗಲೆಯರೂ ಹಾಡುತ್ತಾರೆ. ಈ ಹಾಡುಗಳು ಉರುಟಣೆಗೆ ಕರೆಯುವುದರಿಂದ ಪ್ರಾರಂಭವಾಗಿ ಕುಂಕುಮ ಅರಿಶಿನ ಹಚ್ಚುವುದು, ಚೆಂಡಾಡುವುದು, ತಾಂಬೂಲ ಕೊಡುವುದು, ಹಾರಹಾಕಿ ಆರತಿ ಬೆಳಗುವುದರೊಂದಿಗೆ ಮುಕ್ತಾಯವಾಗುವುದು. ಉರುಟಣೆಯ ಹಾಡುಗಳನ್ನು ಬಾಗಿಲು ತಡೆದು ವಧೂವರರ ಕೈಯಿಂದ ಹೆಸರು ಹೇಳಿಸುವುದು, ಓಕುಳಿಯಾಡಿಸುವುದು ಮುಂತಾದವುಗಳಲ್ಲೂ ಬಳಸುತ್ತಾರೆ. ಈ ಹಾಡುಗಳು ಒಗಟುಗಳಾಗಿರಬಹುದು, ಹಾಸ್ಯದಿಂದ ಕೂಡಿ ಮನರಂಜನೆಯುಳ್ಳದ್ದಾಗಿರಬಹುದು. ಈ ಉರುಟಣೆಗೆ ಸಂಬಂಧಿಸಿದ ಒಂದೊಂದು ಹಾಡನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಮದುಮಗಳನ್ನು ಗೋಳು ಹೊಯ್ಯುವಾಗ
(ರಾಗ: ಚಾರುಕೇಶಿ, ಮಿಶ್ರಛಾಪು)
ಪರವಶಳಾದಳು ಕನ್ಯೆ
ಕನಿಕರಿಸಿ ಪಾಡು ಪಡುವಳು ಸುಕನ್ಯೆ ॥ ಪಲ್ಲ ॥
ಗಲ್ಲಕ್ಕೆ ಕುಂಕುಮವಿಟ್ಟು
ಗಡಿಬಿಡಿಯಲ್ಲಿ ಕಾಡಿಗೆ ಹಲ್ಲಿಗಿಡುವಳು
ನಡೆಯಲ್ಲಿ ಎಡವುತ ಮಾತನ್ನೇ ಮರೆಯುತ
ಒಬ್ಬರ ಹೆಸರ ಮತ್ತೊಬ್ಬರಿಗಿಡುವಳು ॥ 1 ॥

ರಾತ್ರೀಲಿ ಹಗಲಾಯಿತೆನ್ನುತ ಎದ್ದು
ಎಲ್ಲರ ಎಬ್ಬಿಸಿ ಬನ್ನಪಡಿಸುತ್ತಾ
ತನ್ನ ಮೇನೆಯ ಪೆಟ್ಟಿಗೆಯೊಳಿರಿಸಿ ಈಗ
ವೇಳೆಯಾಯಿತು ಬೇಗ ಪೊರಡಬೇಕೆನುತ ॥ 2 ॥

ಅಕ್ಕಭಾವರ ಮರೆತೊಮ್ಮೆ
ತಂಗಿ ತಮ್ಮಂದಿರೆಷ್ಟಿಹರೆಂದು ಎಣಿಸಿ ದಣಿವುತ
ಬಹುಜನ್ಮದ ಪುಣ್ಯದಿಂದೆನಗೆ ಇಂಥಾ
ಗಂಡದೊರಕಿದನೆಂದು ಬಿಂಕವಪಡುತಲಿ ॥ 3 ॥

ಉಕ್ಕುವ ಹಾಲಿಗೆ ಉರಿಯನ್ನೇ ಹಾಕಿ
ಬೆಕ್ಕನ್ನು ಬಗಲೊಳಗೆತ್ತಿ ಮುದ್ದಿಡುತ
ತನ್ನನಿಯ ಈಗಲೇ ಬಂದನೆಂದು ಭಾವಿಸುತ
ಬೀಳುತ್ತಾ ಏಳುತ್ತಾ ಓಡಿ ಬರುವವಳ ॥ 4 ॥ 12

ಈ ಹಾಡಿನಲ್ಲಿ ಮದುಮಗಳ ಪರಪಾಟಲನ್ನು ಚಿತ್ರಿಸಲಾಗಿದೆ. ವಧುವು ತನ್ನ ಭಾವಿಪತಿಯನ್ನು ಮನಸ್ಸಿನಲ್ಲಿ ಸ್ಥಾಪಿಸಿಕೊಂಡು ಅವನ ನೆನಪಿನಲ್ಲೆ ಕನಸನ್ನು ಕಾಣವಳು. ಸಂಭ್ರಮದಲ್ಲಿ ಮುಳುಗಿದ ಆಕೆ ಕುಂಕುಮವನ್ನು ಗಲ್ಲಕ್ಕೆ, ಕಾಡಿಗೆಯನ್ನು ಹಲ್ಲಿಗೆ ಇಡುತ್ತಿದ್ದಾಳೆ. ನಡೆಯಲ್ಲಿ ಎಡಗುತ್ತ, ಹೆಸರುಗಳನ್ನೆ ಮರೆಯುತ್ತ, ಒಬ್ಬರ ಹೆಸರನ್ನು ಮತ್ತೊಬ್ಬರಿಗಿಟ್ಟು ಕರೆಯುತ್ತ, ಬೆಳಗಾಗುವುದನ್ನೆ ಕಾಯುತ್ತ, ರಾತ್ರಿಯಲ್ಲೇ ಹಗಲಾಯಿತೆಂದು ತಡಬಡಿಸಿ ಗೆಳತಿಯರನ್ನು ಬಂದು–ಬಾಂಧವರನ್ನು ಎಬ್ಬಿಸುವ ಚಿತ್ರಣವಿದೆ. ವಧುವಿನ ಸಂಭ್ರಮ, ಸಡಗರಗಳನ್ನು ಜನಪದರ ಈ ಪದ್ಯದಲ್ಲಿ ಅತ್ಯಪೂರ್ವವಾದ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಮುಂದಿನ ಹಾಡಿನಲ್ಲಿ ಬೀಗರ ಜಿಪುಣತನವನ್ನು ಎತ್ತಿ ಆಡಿಕೊಳ್ಳುತ್ತಾ ಹಾಸ್ಯಮಾಡುತ್ತಾ ಪರಸ್ಪರರಲ್ಲಿ ಆತ್ಮೀಯ ಭಾವನೆ ಬರುವಂತೆ ಹಾಡಿದ್ದಾರೆ. ಅದು ಹೀಗಿದೆ:

ಆನಿ ಬರವಂತ ಆರು ಬಣವೀ ಕೊಂಡೆ
ಆನೆಲ್ಲಿ ನಿಮ್ಮ ದಳವೆಲ್ಲಿ । ಸರಕ್ಕ ಸರಿತಲ್ಲ ।
ಆನೆಲ್ಲಿ ನಿಮ್ಮ ದಳವೆಲ್ಲಿ ಬೀಗರು
ಬೊಳ್ಳೋರಿ ಏರಿ ಬರುತಾರ ॥

ಒಂಟಿ ತರತಾನಂತ ಎಂಟು ಬಣದಿಕೊಂಡೆ
ಒಂಟೆಲ್ಲಿ ನಿಮ್ಮ ದಳವೆಲ್ಲಿ । ಸರಕ್ಕ ಸರಿತಲ್ಲ ।
ಒಂಟೆಲ್ಲಿ ನಿಮ್ಮ ದಳವೆಲ್ಲಿ ಬೀಗರು
ಕುಂಟೋರಿ ಮ್ಯಾಲೆ ಬರತಾರ ॥

ಎಲ್ಲರೂ ಕಟ್ಯಾರ ಮಲ್ಲಿಗ್ಹೂವಿನ ದಂಡಿ
ಬೀಗುತಿ ಕಟ್ಯಾಳ ಹುಲ್ಹೊರೆಯ । ಸರಕ್ಕ ಸರಿತಲ್ಲ ।
ಬೀಗುತಿ ಕಟ್ಯಾಳ ಹುಲ್ಹೊರೆಯ ಅವರಣ್ಣಾ
ಕುದುರಿಗಿಲ್ಲೆಂದು ಕಸಗೊಂಡ ॥

ಒಂದಡಕಿ ಒಡೆದು ಒಂಬತ್ತು ಮದುವೆ ಮಾಡಿ
ಇಂದಿನ ಖರ್ಚು ಬಲುಖರ್ಚು । ಸರಕ್ಕ ಸರಿತಲ್ಲ ।
ಇಂದಿನ ಖರ್ಚು ಬಲು ಖರ್ಚು ಬೀಗಯ್ಯ
ದುಡ್ಡೆಣಿಸುತ್ತಾ ದಣಿದಾನು ॥

ಒಂದೆಲಿ ಹರಿದರಿದು ಒಂಬತ್ತು ಮದುವಿಮಾಡಿ
ಇಂದಿನ ಖರ್ಚು ಬಲು ಖರ್ಚು । ಸರಕ್ಕ ಸರಿತಲ್ಲ ।
ಇಂದಿನ ಖರ್ಚು ಬಲು ಖರ್ಚು ಬೀಗಯ್ಯ
ಲೆಕ್ಕ ಬರೆಯುತ ದಣಿದಾನು ॥
ಬೀಗರನ್ನು ಜರೆಯುವ ಮತ್ತೊಂದು ಹಾಡು ಹೀಗಿದೆ

ನಿಸ್ತ್ರೇರು ನಾವ್ಬಂದು ಹತ್ತೆಂಟುಗಳಿಗ್ಯಾದೋ
ನಿಸ್ತ್ರೇ ಬೀಗತ್ತಿ ಸುಳಿವಿಲ್ಲ ।
ಪಟ್ಟಿ ಹಾಸಲಿಲ್ಲ ಪಟ್ಟಿ ಬೀಸಲಿಲ್ಲ
ಪಟ್ಟಿ ಮೇಲೆ ನಾವು ಕೂಡೋ ಬಗೆ ಹ್ಯಾಂಗ

ಒಂದು ಪಂಕ್ತಿಗೆ ನೀರು ಒಂದು ಪಂಕ್ತಿಗೆ ಬಳ್ಳೆ
ಈಗೊಂದು ಪಂಕ್ತೀಲಿ ಕೈಸನ್ನೇ । ಅತ್ತಿಗಮ್ಮ
ಬಾಳಲೆ ಇಲ್ಲೇನು ಒಳಗೆ

ಇಡಿಯ ಕಡಲೆಯ ಒಡೆದು ಪಾಯಸಮಾಡಿ
ಜೋರಾಗಿ ಓಡೋಗೋ ಉದಕದ ಪಾಯಸಮಾಡಿ
ಹರಿದಾವೆ ಹೆಬ್ಬಾಗಿಲ ಜಗುಲಿಗೆ

ಓಡೋಡಿ ಬಾಗಿಲ ಮುಂದೆ

ತಡೆದಾಡಿ ಹರಿವ ಪಾಯಸ । ಅತ್ತಿಗಮ್ಮ
ಜಾರಿ ಬಿದ್ದಾಳೆ ನಮ್ಮ ಎಡಿ ಮುಂದೆ –13

ಈ ಹಾಡನ್ನು ಕೇಳಿದಾಗ ನಗೆ ಉಕ್ಕಿ ಬರುತ್ತದೆ. ಬಂದ ಬೀಗರನ್ನು ಉಪಚರಿಸುವುದು ಸಂಪ್ರದಾಯ. ಆ ಉಪಚಾರದಲ್ಲಿನ ಔಪಚಾರಿಕತೆಯಲ್ಲಿ ಹಾಸ್ಯದ ಚಿತ್ರಣವನ್ನು ಬಿಡಿಸಿದ್ದಾರೆ ಜನಪದರು. ಬೀಗರನ್ನು ಕೂರಿಸಲು ಚಾಪೆಯು ಸಾಲದೆಂಬ ಅವರ ಕುಚೇಷ್ಟೆ, ಪಂಕ್ತಿಯಲ್ಲಿ ಬಡಿಸಿದ ಒಂದಡಿ ಕಡಲೆಯಲ್ಲಿ ಮಾಡಿದ ಮಾರುದ್ದದ ತೆಳ್ಳಗಿನ ಪಾಯಸ, ಆ ಪಾಯಸ ನೀರಿನಂತೆ ಹರಿದು ಹೆಬ್ಬಾಗಿಲಿನವರೆಗೆ ಹೋಗಿ, ಅದರಲ್ಲಿ ಬೀಗತೆ ಜಾರಿಬಿದ್ದಳೆಂಬ ಅಣಕಿಸುವ ಅವರ ಔಪಚಾರವನ್ನು ಹಾಸ್ಯವಾಗಿ ಹಂಗಿಸುವ ವರ್ಣನೆ ಸರಳವಾಗಿ, ಆದರೆ ಕಾವ್ಯದಂತೆ ಹರಿದಿದೆ.

**ಮದುಮಕ್ಕಳ ಓಕುಳಿಯಾಡುವ ಹಾಡು**

ಐದನೆ ದಿನದೋಕುಳಿಯ ನಾಡಿದರು
ಮಯ್ದುನರೊಡಗೂಡಿ ವಧೂವರರು ॥
ಪದುಳದಿಂದಿಭೇ೯ದವಾಗಿ ಕುಳ್ಳಿರಿಸುತ
ಚದುರೆಯರೆಲ್ಲರು ಮುದದಿ ಶೋಭಾನೆ ಪಾಡೆ
ಚಿನ್ನದ ಹಂಡೆಯೊಳು ಚೆನ್ನಾದ ಓಕುಳಿಯ
ಮುನ್ನಾದ ವಧುವರರ ಇದಿರೊಳಗಿಟ್ಟು
ಚಿನ್ನದುಂಗುರವನು ಚೆನ್ನೆಯರಿಕ್ಕಲು
ತನ್ನ ತನ್ನದೆಂದು ತಮ್ಮ ಕೈಗಳನಿಡುತ
ರನ್ನರನ್ನೆಯರು ಓಕುಳಿಯಾಡಿದರು.
ನಲ್ಲೆಯು ನಾಚುತ ಮೆಲ್ಲನೂಕುಳಿಯ
ನಲ್ಲಗೆ ಚೆಲ್ಲಲು ಉಲ್ಲಾಸದಿಂದ
ನಿಲ್ಲಲೆ ಎನುತಲಿ ನಲ್ಲನು ನಗುತಲಿ
ಎಲ್ಲ ಓಕುಳಿಯನು ನಲ್ಲೆಗೆ ಚೆಲ್ಲಲು
ನಲ್ಲ ನಲ್ಲೆಯರು ಓಕುಳಿಯಾಡಿದರು
ಇಂತು ಮೂರು ಬಾರಿಯೊಳು ಉಂಗುರವಿಕ್ಕಿ
ಪಂಥದಿ ಆಡಲು ವಧುವರರು ಮಿಕ್ಕಿ
ನಿಂತು ನೋಡುವ ಜನ ತಿಂಥಿಣಿ ತೋಷಿಸೆ
ಕಂತು ಜನಕ ಸುನಂದಾದೇವಿಯಂದದಿ
ಕಾಂತ ಕಾಂತೆಯರು ಓಕುಳಿಯಾಡಿದರು –14

ವಧೂವರರ ನಡುವೆ ಸಂಕೋಚ, ನಾಚಿಕೆ ಭಾವನೆಗಳನ್ನು ದೂರಮಾಡಲು, ಅವರಲ್ಲಿ ಅನ್ಯೋನ್ಯವಾದ ಭಾವನೆ ಬೆಳೆಯುವಂತೆ ಮಾಡಲು ಕೆಲವು ಆಟಗಳನ್ನು ಆಡಿಸುವ ಸಂಪ್ರದಾಯವಿದೆ. ಅದರಲ್ಲಿ ಓಕುಳಿಯಾಡುವ ಆಟವೂ ಒಂದಾಗಿದೆ. ಈ ಸಂದರ್ಭದಲ್ಲಿ ಸೋಬಾನೆ ಆಡುವ ಮಹಿಳೆಯರು ಓಕುಳಿ ತುಂಬಿದ ಹಂಡೆಯನ್ನು ವಧುವರರ ಮುಂದಿಕ್ಕಿ ಅದರಲ್ಲಿ ಚಿನ್ನದುಂಗುರವನ್ನು ಹಾಕಿ ವಧುವರನ್ನು ಹುಡುಕುವಂತೆ ಹೇಳುವರು. ವಧು–ವರರು ಉಂಗುರ ನನದು ತನ್ನದೆಂದು ಆಡುವ ಆಟ ಈ ಹಾಡಿನಲ್ಲಿ ಬಂದಿದೆ. ವಧು–ವರರು ಪರಸ್ಪರ ಮೆಲ್ಲಮೆಲ್ಲನೆ ತುಸುನಗೆಯನ್ನು ಬೀರುತ್ತಾ ಕಣ್ಣಿನಲ್ಲಿ ದಾರೆ ನೋಟವನ್ನು ಬೀರುತ್ತಾ ಪರಸ್ಪರ ಓಕುಳಿ ಎರಚಾಡಿ ಆಡುವಂತೆ ಇಲ್ಲಿ ಚಿತ್ರಿತವಾಗಿದೆ.

**ಬಾಗಿಲು ತಡೆಯುವ ಶೋಭಾನೆಯ ಹಾಡು ಹೀಗಿದೆ:**

ರಂಗನ ಪರಿಣಯ । ಐದನೇ ದಿವಸದಿ ಮಂಗಳೋ ಕುಳಿಯ
ನಾಡಿ ಭೂ ಸುರರಂತೆ ರಂಗ ದಿಟ್ಟಿಗಳ್ ನೀಡಿ ।
ಅಂಗ ಜನ ಮದದಾನೆಯಂದವಿ ಅಂಗನೆಯರ ಸಮ್ಮೇಳದಿಂದಲಿ ।
ಅಂಗನಾಮಣಿ.......ರೂಪಿಣಿ ರಂಗನಾಥನ ತಡೆದು ದ್ವಾರದಿ ॥
ಕಡಲ ಶಯನಾ ನಿನ್ನ ಮಗಳನ್ನು ಮಗನಿಗೆ ಕೊಡಬೇಕೆಂದೆನುತ
ತಂಗೆ ಸೌಭದ್ರೆ ನುಡಿದಳು ॥

ನಾನು । ದ್ವಾರದೊಳಿನ್ನ ತಡೆದಿಹೆ ಬಾಗಿಲನು । ಬಿಡೆನಿನ್ನ ಮಗಳ ಕೊಡ
ಬೇಕು । ಗಂಡು ಮಗನು ಜನಿಸಿದರೆ । ಮಂಡಲಿ ಕರ ಗಂಡಾಗಿ
ತೇಜದಲೀ । ಆಳಿರಲಿ ಭೂಮಂಡಲ ಸೌಖ್ಯದಲೀ । ಕೀರ್ತಿಯ
ಒಳಗೊಂಡು ವಿನೋದದಲೀ । ಹೆಣ್ಣಾದರೆನ್ನಲಿಚಂಡ ವಿಕ್ರಮ
ಕುವರ ಗೆನುತಲಿ । ಪುಂಡರಿಕದಳ ನಯನ ಜಗದ್ದೋದ್ದಂಡ
ಮೂರುತಿ ಈಶ ಸಖ ಮಾರ್ತಾಂಡ ಶತ ಕೋಟಿ ಪ್ರಕಾಶನೇ ।
ಬಿಡೆ ನಿನ್ನ ಮಗಳ ಕೊಡಬೇಕು । –15

ಒಟ್ಟಿನಲ್ಲಿ, ಮದುವೆ ಎನ್ನುವುದು ಎರಡು ಕುಟುಂಬಗಳ ಮಧ್ಯೆ ಸಂಬಂಧವನ್ನು ಬೆಸೆಯುವ, ವಧೂ–ವರರ ನಡುವೆ ಆತ್ಮೀಯತೆಯ ಕೊಂಡಿಯನ್ನು ಹೆಣೆಯುವ ಶುಭಕಾರ್ಯ. ಅದನ್ನು ಯಾಂತ್ರಿಕವಾಗಿ ಮಾಡದೆ ಜನ್ಮಾಂತರದ ಬಂಧವೆಂದು ಭಾವಿಸಿ ಸಂಭ್ರಮಿಸಿ ತನ್ಮಯತೆಯಿಂದ ತೊಡಗಿಸಿಕೊಂಡು ಖುಷಿಪಟ್ಟು ಜನ್ಮ ಸಾರ್ಥಕವೆಂದು ಭಾವಿಸುವ ಅತ್ಯಂತ ಶ್ರೇಷ್ಠಕಾರ್ಯ ಎನ್ನುವುದು ಇಲ್ಲಿನ ಆಚರಣೆಗಳ ಮೂಲಕ ನಮಗೆ ವೇದ್ಯವಾಗುತ್ತದೆ. ನಾವಿಂದು ವೇಗದ ಯುಗದಲ್ಲಿದ್ದೇವೆ. ಈ ಬಗೆಯ ಸಂಪ್ರದಾಯ, ಶಾಸ್ತ್ರಗಳನ್ನು ಆಚರಿಸಲಾರದಂಥ ಸ್ಥಿತಿಗೆ ತಲುಪಿರುವ ನಮಗೆ ಹಿಂದಿನ ನಮ್ಮ ಜನಪದರ ತಾಳ್ಮೆ, ಸಂಬಂಧಗಳ ಬಗೆಗೆ ಅವರು ತೋರುತ್ತಿದ್ದ ನಿರ್ವ್ಯಾಜವಾದ ಪ್ರೇಮಗಳನ್ನು ಗುರುತಿಸಿದಾಗ ಕಳೆದುಹೋದ ಕಾಲದ ಕುರಿತು ವಿಷಾದವಾಗುತ್ತದೆ. ಜೈನರ ಮದುವೆಯ ಹಾಡುಗಳು ಅಂದಿನ ನಮ್ಮ ಸಮಾಜದ ನೈಜ ಚಿತ್ರಣಕ್ಕೆ ಸಾಕ್ಷಿ ನುಡಿಯುತ್ತವೆ.

## ಅಡಿಟಿಪ್ಪಣಿ


1. ಪ್ರಭಾಕರ್ ಎಸ್, ರತ್ನತ್ರಯ, ಶಾರದಾ ಪ್ರೆಸ್, ರಥಬೀದಿ, ಮಂಗಳೂರು, 1995, ಪುಟ.62
2. ಪದ್ಮಪ್ರಸಾದ್ ಎಸ್.ಪಿ., ಜೈನ ಜನಪದ ಸಾಹಿತ್ಯ ಸಂಪಾದನೆ ಮತ್ತು ಅಧ್ಯಯನ, ರತ್ನತ್ರಯ ಪ್ರಕಾಶನ, ಮೈಸೂರು 1987, ಪುಟ.54
3. ಪದ್ಮಪ್ರಸಾದ್ ಎಸ್.ಪಿ., ಜೈನ ಜನಪದ ಸಾಹಿತ್ಯ ಸಂಪಾದನೆ ಮತ್ತು ಅಧ್ಯಯನ, ರತ್ನತ್ರಯ ಪ್ರಕಾಶನ, ಮೈಸೂರು 1987, ಪುಟ.54–55
4. ಹೇಮಾವತಿ ವೀ.ಹೆಗ್ಗಡೆಯವರು, ಸೋಭಾನೆ ಹಾಡುಗಳು, ಶ್ರೀಕ್ಷೇತ್ರ ಧರ್ಮಸ್ಥಳ, 2006, ಪುಟ.10
5. ಹೇಮಾವತಿ ವೀ.ಹೆಗ್ಗಡೆಯವರು, ಸೋಭಾನೆ ಹಾಡುಗಳು, ಶ್ರೀಕ್ಷೇತ್ರ ಧರ್ಮಸ್ಥಳ, 2006, ಪುಟ.10–11
6. ಹೇಮಾವತಿ ವೀ.ಹೆಗ್ಗಡೆಯವರು, ಸೋಭಾನೆ ಹಾಡುಗಳು, ಶ್ರೀಕ್ಷೇತ್ರ ಧರ್ಮಸ್ಥಳ, 2006, ಪುಟ.25
7. ಹಾಡಿದವರು– ಶ್ರೀಮತಿ ದೇವಮ್ಮ, ಮೇಲಿನ ಮನೆ, ಹುಂಬುಜ, ಹೊಸನಗರ ತಾ.

8. ಹೇಮಾವತಿ ವೀ.ಹೆಗ್ಗಡೆಯವರು, ಸೋಭಾನೆ ಹಾಡುಗಳು, ಶ್ರೀಕ್ಷೇತ್ರ ಧರ್ಮಸ್ಥಳ, 2006
9. ಹಾಡಿದವರು–ಶ್ರೀಮತಿ ನಾಗಮ್ಮ, ತೋಟದಮನೆ, ಹೊರನಾಡು, ಕಳಸ, ಮೂಡಿಗೆರೆ ತಾ.
10. ಹಾಡಿದವರು: ಜ್ವಾಲನಮ್ಮ, ಬಸ್ತಿಮಠ, ಜೈನಮಠ, ನರಸಿಂಹರಾಜಪುರ,
11. ಹಾಡಿದವರು: ಸುಗುಣಮ್ಮ, ಸನ್ಮತಿ ನಿಲಯ, ಹಳೆಪೇಟೆ, ಬೆಳ್ತಂಗಡಿ, ದ.ಕ.ಜಿಲ್ಲೆ
12. ಹಾಡಿದವರು: ತಾರಾವತಿಯಮ್ಮ, ಸುಗಂಧಿ ಮನೆ, ಕುವೆಂಪು ನಗರ, ತುಮಕೂರು
13. ಹಾಡಿದವರು: ಶ್ರೀಮತಿ, ಸನ್ಮತಿ, ಮಹಾವೀರ ನಗರ, ಹಾಸನ
14. ಹಾಡಿದವರು: ಶ್ರೀಮತಿ ರೇವತಿ, ಹಾರಿಗೆ, ಸಾಗರ ತಾ., ಶಿವಮೊಗ್ಗ ಜಿಲ್ಲೆ.
15. ಹಾಡಿದವರು: ಸುಮಂಗಲಮ್ಮ, ಆದಿನಾಥ ನಿವಾಸ, ಮುನಿಯಂಗಳ, ಸುಳ್ಳಳ್ಳಿ, ಸಾಗರ

## ಅಧ್ಯಾಯ: ಏಳು

# ರತ್ನಾಕರನ ಕೀರ್ತನೆಗಳು

ಕನ್ನಡದ ಮೇರುಕವಿ ರತ್ನಾಕರವರ್ಣಿಯು ಮಹಾಕಾವ್ಯ, ಶತಕಗಳೊಂದಿಗೆ ಕೀರ್ತನೆಗಳನ್ನು ರಚಿಸಿದ್ದಾನೆ. ಜೈನರಲ್ಲಿ ಗ್ರಂಥಸ್ಥ ಪರಂಪರೆಯ ಹಾಡುಗಳ ಸಂಖ್ಯೆ ಕಡಿಮೆ. ಕಾವ್ಯ, ಮಹಾಕಾವ್ಯಗಳ ರಚನೆಯಲ್ಲಿ ಆಸಕ್ತಿ ತೋರಿದ ಜೈನಕವಿಗಳು ವೀರಶೈವ, ವೈಷ್ಣವ ಸಂಪ್ರದಾಯದಂತೆ ಕೀರ್ತನೆಗಳನ್ನು ರಚಿಸುವಲ್ಲಿ ವಿಶೇಷ ಆಸಕ್ತಿಯನ್ನು ತೋರಸಲಿಲ್ಲ. ಆದರೆ ಈ ಕೊರತೆಯನ್ನು ಸ್ವಲ್ಪಮಟ್ಟಿಗೆ ನಿವಾರಿಸದವನು ರತ್ನಾಕರವರ್ಣಿ. ಆತ ರಚಿಸಿರುವ ಉಪಲಬ್ಧವಾದ 94 ಕೀರ್ತನೆಗಳನ್ನು ಭುವನಹಳ್ಳಿಯ ಡಿ. ಶ್ರೀಪತಿಯವರು ಅಚ್ಚು ಮಾಡಿಸಿರುವರು. ಮೂಡಬಿದ್ರೆಯಲ್ಲಿ 39 ಗೀತೆಗಳು ದೊರೆತಿವೆ. 'ಅಧ್ಯಾತ್ಮರಸ ಗೀತಾಮಂಜರಿ' ಎಂಬ ಹೆಸರಿನಲ್ಲಿ ಸಂಗೀತ ಪ್ರಸ್ತಾರ ಹಾಕಿ ಶ್ರೀ ಎಂ. ಜಗತ್ಪಾಲಯ್ಯನವರು ಗೀತೆಗಳನ್ನು ಅಚ್ಚು ಹಾಕಿಸಿರುವರು.

ಇಂದ್ರಿಯ ಚಾಪಲ್ಯಕ್ಕೆ ತಲೆಬಾಗದವರೂ ಯಾರೂ ಇಲ್ಲ. ಎಂಥ ಸಾತ್ವಿಕರನ್ನೂ ಇದು ಮರಳುಗೊಳಿಸಿ ದಾರಿತಪ್ಪಿಸುವುದುಂಟು. ಇಂಥ ಚಾಪಲ್ಯ ರತ್ನಾಕರನೂ ಒಳಗಾಗಿರಬೇಕು. ಕಾರ್ಕಳದ ಬೈರವರಸನ ಆಸ್ಥಾನದಲ್ಲಿ ಕವಿಯಾಗಿದ್ದು 'ಶೃಂಗಾರ ಕವಿ ಹಂಸರಾಜ'ನೆಂದು ಬಿರುದು ಹೊಂದಿದ್ದನು. ಅಲ್ಲಿದ್ದಾಗ ನಡೆದ ಅಚಾತುರ್ಯದಿಂದ ರಾಜನ ಕೋಪಕ್ಕೆ ತುತ್ತಾಗಬೇಕಾಗಿ ಅಲ್ಲಿಂದ ರತ್ನಾಕರ ಅಲ್ಲಿಂದ ಕಾಲು ಕೀಳಬೇಕಾಯಿತು. ತನ್ನಿಂದ ಆಗಿ ಹೋದ ತಪ್ಪಿಗಾಗಿ ಮರುಗುತ್ತ ಹುಂಚ ಜೈನಮಠಕ್ಕೆ ಹೋಗಿ ಅಲ್ಲಿನ ಗುರು ಮಾಹೇಂದ್ರಕೀರ್ತಿಗಳ ರಕ್ಷಣೆ ಕೋರಬೇಕಾಯಿತು. ಆ ಸಂದರ್ಭದಲ್ಲಿ ರಚಿತವಾದ ಕೀರ್ತನೆ ಇದು:

ಇಂದ್ರಿಯಕ್ಕೆ ಸಿಕ್ಕಿ ನೊಂದೆನಯ್ಯ ಗುರುವೆ ಮಾಹೇಂದ್ರ ಕೀರ್ತಿ  
ಕಾಯೋ ಕರುಣದ ತರುವೆ  
ಕಣ್ಣ ಸವಿದಾಗಿ ಕಂಡಲ್ಲಿ ಹಾರಿ, ಎಳೆ  
ವೆಣ್ಣೆರೆ ಬಯಸಿ ಭ್ರಾಂತಿ ತಲೆಗೇರಿ  
ಉಣ್ಣದ ನೋವನುಂಡು ನಲವೇರಿ । ಸೆಲೆ  
ಬಣ್ಣವಳಿದನ ಕಾಯೋ ಮತಿದೋರಿ  
ಎರವಿನ ಬಾಳೆಂಬುದ ನರಿದರಿದೂ । ನಿಚ್ಚ  
ಪರಲೋಕ ಚಿಂತನೆಯ ಮರೆದು  
ನರನೀ ನಾಟಕದಲ್ಲಿ ಬಿದಿಮೆರೆದು, ಬೇಗೆ  
ವರಿದನ ಕಾಯೋ ಶಾಂತರಸವೆರೆದು  
ಯೋಗಾನಂದ ಉಪದೇಶ ಚಕ್ರವರ್ತಿ, ಎನ್ನ–  
ಲಾಗುಮಾಡಿ ಸಲಹೋ ನಿನಗದು ಕೀರ್ತಿ  
ರಾಗ ದ್ವೇಷವಳಿದ ಸುಜ್ಞಾನ ಮೂರ್ತಿ, ದಿವ್ಯ–  
ಯೋಗಿ ಮುಕ್ತಿ ಗಾಣಿಸೋ ಮಹೇಂದ್ರ ಕೀರ್ತಿ

ತಾನು ಮಾಡಿದ ತಪ್ಪಿಗಾಗಿ ಅವನಿಗೆ ಸಾಕಷ್ಟು ಪ್ರಾಯಶ್ಚಿತ್ತವೂ ಆಯಿತು. ಮನಃಪೂರ್ವಕವಾಗಿ ಮಾಡಿಕೊಂಡ ಪ್ರಾಯಶ್ಚಿತ್ತದಿಂದ ಆತ್ಮ ಶುದ್ಧಿಯಾಗುತ್ತದೆ ಎಂಬುದು ಬಲ್ಲವರ ನುಡಿ. ಅಂತೆಯೇ ರತ್ನಾಕರ ತಾನು ತಾನು ಅನುಭವಿಸಿದ್ದನ್ನು ಕಾವ್ಯಕಟ್ಟಿ ಹಾಡುವುದರ ಮೂಲಕ ಪ್ರಾಯಶ್ಚಿತ್ತ ಮಾಡಿಕೊಂಡು ಇತರರ ಕಣ್ಣು ತೆರೆಸುವ ಹಾಗೆ ಮಾಡಿದ, ತನ್ನ ಪಾಡು ಇತರರಿಗೆ ಬರುವುದು ಬೇಡ ಎಂದು. ಹೀಗಾಗಯೇ, ಜಗದ ಮನುಜರಿಗೆ ಅವನು ಕೊಡುವ ಎಚ್ಚರಿಕೆ ಈ ಬಗೆಯದು:

ಕನ್ನೆವೆಣ್ಣಿನ ಕಡೆಗಣ್ಣ ನೋಟಕೆ
ಮನಸೋತೆ ಕೋಗಿಲೆ ॥
ಚೆನ್ನ ಸಂಪಿಗೆಯರಳೊಳು ಸಿಕ್ಕಿ ಜಿನುಗುವ
ಹೊನ್ನ ತುಂಬಿಯಂತೆ ಕೋಗಿಲೆ
ಕಾಯದಾಸೆಗಾಗಿ ಕರಣೇಂದ್ರಿಯಂಗಳ
ನೋಯಿಸದಿರು ಕಂಡ್ಯ ಕೋಗಿಲೆ
ವೈಯಾರದಿಂದ ಶ್ರೀಮಂಧರ ಸ್ವಾಮಿಯೆ ಕಾಯೆನುತಿರುಕಂಡ್ಯ ಕೋಗಿಲೆ

ರತ್ನಾಕರನ ಈ ಒಂದೊಂದು ಮಾತೂ ಇಂದ್ರಿಯ ಚಾಪಲ್ಯದಿಂದ ಆತ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಕುಸಿಯುತ್ತಿರುವ ಕೀಳುಕಾಮಿಗಳ ಕಣ್ಣು ತೆರೆಸುವಂತಿವೆ. ಉಪಮಾನ ಕೊಟ್ಟು ಅರಿವನ್ನುಂಟುಮಾಡುವಲ್ಲಿ ಅದೆಷ್ಟು ಹಾಳತ ಹೊಂದಾಣಿಕೆ! ಎಷ್ಟೇ ಆದರೂ ತಾನೇ ಕಂಡು, ಉಂಡು, ನೊಂದು ಪೂರ್ಣಾನುಭವಿಯಾಗಿ ಜನರಿಗೆ ಬೋಧಿಸುತ್ತಿರುವ ಒಬ್ಬ ಬಲುಜ್ಞಾನಿಯಲ್ಲವೇ ಆತ?

ತಾಯಿ, ತಂದೆ, ತಮ್ಮ, ಸಹೋದರ, ಹೆಂಡತಿ, ಪುತ್ರ, ಮಿತ್ರ ಮುಂತಾದ ಸಂಬಂಧವು ಎಷ್ಟು ಭವದಲ್ಲುಂಟಾಗಲಿಲ್ಲ? ಹಿಂದಿನ ಭವಗಳ ಅಂಥ ಎಷ್ಟೆಷ್ಟು ಸಂಬಂಧಗಳನ್ನು ನಾನೀಗ ನೆನಪಿಗೆ ತಂದುಕೊಳ್ಳೋಣ, ಮತ್ತೆಷ್ಟನ್ನು ಗಮನಿಸೋಣ? ಹಾಗಾದರೆ ಲೌಕಿಕದ ಬದುಕು, ಹುಟ್ಟು–ಸಾವು ಇವೆಲ್ಲವೂ ಅದೆಷ್ಟೋ ಬಗೆಯಲ್ಲಿ ನಮಗೆ ನಿರಂತರವಾದ ಕಷ್ಟ ಪರಂಪರೆಗೆ ಕಾರಣವಾಗುವಂಥದ್ದಲ್ಲವೇ ? ಕ್ಷಣಿಕವಾದ, ನಿಸ್ಸಾರವಾದ ಈ ಸಂಸಾರ ಸುಖವನ್ನು ನಾವು ನೆಚ್ಚಿಕೊಂಡಿರುವುದು ಸರಿಯೇ ? ಈ ಭೂಮಿಯನ್ನು ಅದೆಷ್ಟೋ ಜನ ರಾಜಮಹಾರಾಜರುಗಳು ಆಳಿಹೋಗಿದ್ದಾರೆ. ಇದರ ಸಾರ್ವಭೌಮ ತಾನು ಎಂದುಕೊಂಡು ಪ್ರಶಸ್ತಿಗಳನ್ನು ಕೆತ್ತಿಸಿಕೊಂಡಿದ್ದಾರೆ, ಕೋಟೆ ಕೊತ್ತಲಗಳನ್ನು ಕಟ್ಟಿಸಿಕೊಂಡು ಮೆರೆದಿದ್ದಾರೆ. ಆದರೆ ಕಾಲಗರ್ಭದಲ್ಲಿ ಅವರು ಕೆಸರಾಗಿ ಹೋಗಿದ್ದಾರೆ, ಅವರು ಕಟ್ಟಿಕೊಂಡ ಕೋಟೆಕೊತ್ತಲಗಳ ಮೇಲೆ ಹುಲ್ಲು, ಕಸ–ಕಡ್ಡಿಗಳು ಬೆಳೆದು ಅವರ ಹೆಸರು ಅಳಿಸಿ ಹೋಗಿವೆ. ಹೀಗಿದ್ದರೂ ಮನುಷ್ಯ ನಶ್ವರವಾದ ಈ ಲೋಕವನ್ನು, ಸಂಸಾರವನ್ನು ನಚ್ಚಿಕೊಂಡಿದ್ದಾನಲ್ಲ ಎಂದು ಕವಿ ವಿಷಾದಿಸುತ್ತಾನೆ. ಅಂಥವರನ್ನು ಕುರಿತು:

ಲೋಕವೆಲ್ಲವು ಸಟೆ ಸಂಭ್ರಮಕ್ಕೆ ಮರುಳಾಗಿ
ವ್ಯಾಕುಲದೊಳಾಡುತಿದೆ ಕಂಡ್ಯ ! ॥
ನೀಕಂಡು ತಿಳಿ ಮತ್ತಿಲ್ಲ ತಡೆವರೇನೋ ?
ಸಾಕೇಳು ಮುಕ್ತಿಗೆ ನಿಜಾತ್ಮ
ಭರತೇಶ್ವರ ಮುನ್ನ ತನ್ನದೆಂದಾಳ್ದ ನೀ
ಧರೆಯ, ಮತ್ತಾಳ್ದ ಸಗರೇಂದ್ರ
ಪರಶುರಾಮನು ಸುಭೌಮನಾರಾವಣರಘು
ಜರು ಪಾಂಡವರು ಆಳಿದರು
ನೆರೆದಾಳ್ದ ರಾಜವಿಟರುಗಳೆಲ್ಲ ಹೋದರೂ
ಧರೆಯೆಂಬ ಗಣಿಕೆ ಹೋಗಲಿಲ್ಲೈ
ಅರರೆ ! ಮತ್ತೀಗಳೂ ಎನಗೆ ತನಗೆಂದೊದ
ರಿರಿದಾಡುತಿದೇಕೊ ! ಜಗವೆಲ್ಲ
ನೂರಗಳಿಸಿದೊಡೆ ಸಾವಿರದಾಶೆ, ಸಾವಿರವು
ತೋರುವುದು ಲಕ್ಷಕೋಟವನು!
ಮಿರುವುದು ಧನದಾಶೇ ಅಗ್ನಿಗೆ ಕಾಷ್ಠವನು
ತೋರಿದಷ್ಟಕೆ ಹೆಚ್ಚುವಂತೆ

ಹೀಗೆನ್ನುವ ಕವಿ ಅಂಥವರಿಗೆ ಆತ್ಮೋದ್ಧಾರದ ದಾರಿಯನ್ನೂ ಕೆಳಗಿನಂತೆ ತೋರಿದ್ದಾನೆ:

ಇಂದಾದೆಯೋ ? ನಿನ್ನೆ ಮೊನ್ನೆಯಾದೆಯೋ ? ನೀ
ಹಿಂದಾದ ಯುಗಕೆ ಗಡಿಯಿಲ್ಲ !
ಅಂದಿಂದ ಹೊತ್ತ ಮೈ ಸತಿಸುತರುಸಿರಿಕನಸಿ
ನಂದದಿ ಮಾಯವಾದುದರಿಯ
ಮುಂದಾದರೆಚ್ಚರೈ ! ನೀ ಪರಬ್ರಹ್ಮಪ್ರಾಭೃತ
ದಂದವರಿತು ತಪಸ ಮಾಡು
ಕರ್ಮಗಳಳಿದು ಕೈವಲ್ಯ ತಾನಹುದು ಶ್ರೀ
ಮಂಧರಸ್ವಾಮಿ ಮೆಚ್ಚುವನು

ಭೋಗ, ಸಿರಿಗಳು ಯಾರಗೂ ಸ್ಥಿರವಲ್ಲ. ಅವು ನೀರ ಮೇಲಿನ ಗುಳ್ಳೆಯಂತೆ, ಕಾಮನಬಿಲ್ಲಿನಂತೆ, ದೂರದಲ್ಲಿ ಬರಿದೇ ಕಾಣಿಸುವ ಬಿಸಿಲ್ಗುದುರೆಯಂತೆ, ಯುವತಿಯ ಕಡೆಗಣ್ಣಿನಂತೆ, ಕಲ್ಲಮೇಲಿನ ನೀರಿನಂತೆ, ಸಮುದ್ರದ ಉಬ್ಬರವಿಳಿತದಂತೆ, ಕೈಗೆ ಹಣ ಸಿಕ್ಕಿದಾಗ ಪ್ರಿಯವಾಗಿ ಮಾತನಾಡುವ ಲಂಚಕೋರನಂತೆ, ಒರಗಿದವ ಸ್ವಪ್ನ ಕಂಡು ಬೇಗದಿ ಕಣ್ಣ ತೆರೆದಂತೆ. ಆದ್ದರಿಂದ

ಸಕಲ ಭೋಗೋಪಭೋಗಗಳು
ಇರದೆ ಪರಮನಿರಂಜನ ಸಿದ್ಧನ ನಂಬು ನೀ
ಸಿರಿಯ ವಿಕಾರ ಬಹು ತೆರನಹುದು

ಎಂದು ಭವ್ಯಜೀವಿಗಳಿಗೆ ರತ್ನಾಕರ ಕಿವಿ ಮಾತು ಹೇಳಿದ್ದಾನೆ. ಜೀವನದಲ್ಲಿ ಎಂದೆದೂ ದುಃಖವೇ. ಹುಟ್ಟಿದರೂ ದುಃಖ, ಬೆಳೆದರೂ ದುಃಖ, ಐಶ್ವರ್ಯ ಬಂದರೆ ದುಃಖ, ಬಾರದಿದ್ದರೆ ದುಃಖ

ಸಂಸಾರ ದುಃಖಮಯ ದೇಹ ರುಜೆಮಯವು
ಸಂಶಯವಿಲ್ಲ ತಾನಿದರಲ್ಲಿ
ಹಂಸನಾಥನ ಧ್ಯಾನವಿಡಿದ ಸುಜ್ಞಾನಿ
ಸಂಸುಖವಪ್ಪುದು ನೆರೆನಂಬು

ಆಕಾಶವೆಷ್ಟು ವಿಶಾಲವಿದೆಯೋ ಅಷ್ಟೇ ವಿಶಾಲವಾದ ಆಡಂಬರವುಳ್ಳದ್ದು ಮನುಷ್ಯ ಜೀವನ. ತಾನಾರು, ತನ್ನಿರುವಿಕೆಯೇನು ಎಂಬುದನ್ನು ಅರಿತುಕೊಳ್ಳಲು ಈ ಗೀತೆಯಲ್ಲಿ ಪ್ರಯತ್ನಿಸಿದ್ದಾನೆ. ಅದು ಹೀಗಿದೆ:

ಕುಪ್ಪಸದಯ್ಯ ನೀನಾರಯ್ಯ ?
ನಿಜಪೇಳು, ನಿನ್ನ ಹೆಸರೇನಯ್ಯ ?
ಗಗನದಂದದಿ ಗಾಡಿಕಾರಯ್ಯ, ಹಸಿ–
ದೊಗಲ ಕುಪ್ಪಸದಯ್ಯ ಹಳೆಯಯ್ಯ
ಹೊಗರುಳ್ಳ ಹೊಸಮೈಯೊಂದಾಗಿ ನಿಚ್ಚ
ಹೊಗುತ ಹೊರಟಿಹ ಹುಚ್ಚಯ್ಯ
ಸಂತೆಯ ನುಡಿಗೆ ಸಂದಿಸಿದಯ್ಯ, ಕಾಯ
ಕಂತೆಯ ತೊಟ್ಟ ಕಾರುಣಿಕಯ್ಯ
ಪಂಥಪಾಡುಗಳುಳ್ಳ ಪರಮಯ್ಯ, ಸುಖ
ತಿಂಥಿಣಿರೂಪಾದ ಸೊಬಗಯ್ಯ
ಅಂಜಿಕೆಗೆಟ್ಟ ಮನುಜಯ್ಯ ? ಜಲ
ಜಂಜಾಟಕ್ಕೆ ಸಿಕ್ಕಿದೆನಯ್ಯ

ರಂಜಿಸಿ ನಿನ್ನನೆ ನೀ ನೋಡಯ್ಯ ನಿ–
ರಂಜನ ಸಿದ್ಧಯ್ಯ ನಿತ್ಯಯ್ಯ

ಇಲ್ಲಿ ''ಕುಪ್ಪಸದಯ್ಯ'' ಒಂದೇ ಒಂದು ಪದ ಸಾಕು, ದೇಹದ ಅಸ್ಥಿರತೆಯನ್ನು ಸಾರಲು. ತನು ಬೇರೆ ಆತ್ಮ ಬೇರೆಂಬುದನ್ನು ದೃಢಪಡಿಸಲು ಹಾಗೂ ಸಂಸಾರಸುಖ ಬಲು ಭ್ರಾಂತಿಯುಳ್ಳದ್ದು ಎಂಬುದನ್ನು ಅರುಹಲು.

ಬಾಲಕಗೆ ಹಣ್ಣನೆ ಕೊಟ್ಟು ನಗಿಸಿ,, ಮೆಲುವ
ವೇಳೆಯಲ್ಲಿ ಕಸಿದುಕೊಂಡಾ ಬಾಲಕನ
ಗೋಳಿಡಿಸುವಂದ ಈ ಸುಖ ಕಾಣಿರೋ
ನಾಳೆ ಕಾಲನಿಂದ ದುಃಖ ಕಾಣಿರೋ
ಮುಕ್ತಿಯೊಂದೇ ಸುಖಕಾಣೀರೊ !
ಮತ್ತೆಲ್ಲೂ ಸುಖವೆಂಬುದಿಲ್ಲ ನೋಡಿರೋ !
ಮುಕ್ತಿ ಬೇಕು ಸುಖವು ಬೇಕು ಅದಕೆ ಪೂಜೆ
ಭಕ್ತಿ ಬೇಕು ಶ್ರೀಮಂಧರಸ್ವಾಮಿಯ ನಂಬಿರೋ

ಗುರುವನ್ನು, ಗುರುಮಹಿಮೆಯನ್ನು ರತ್ನಾಕರ ಎರಡು ಮೂರು ಕೀರ್ತನಗಳಲ್ಲಿ ಹೊಗಳಿದ್ದಾನೆ. ''ಗುರುವೆ ನಿನ್ನ ನಾ ಮರೆದಿರುವೆನೆ ? ಬಂಧುವೆ, ಅರಿಯದವನಿಗೆ ಬುದ್ಧಿಗಲಿಸಿ ರಕ್ಷಿಸಿದೆ''

ಆರುಂಟೋ ? ಕರುಣಿಗಳಾರುಂಟೋ ? ಜಗದುಪಕಾರಿಗಳು ಮಹಾಋಷಿ ಮಹೇಂದ್ರ ಕೀರ್ತಿ ಮುನೀಂದ್ರ ನೀನಲ್ಲದೆ

ನೆಲ್ಲಿಕಾಯಮೆದ್ದು ನೀರ್ಗುಡಿದರೆ ಬೆಲ್ಲವೆನಿಪಂದದಿ ಕರ್ಮತಾ
ನಲ್ಲಿರ್ದುದರಿಂದ ಸಂಸಾರವಿದೆಲ್ಲ ಹಿತದಂತಿಹುದಲ್ಲ–
ಎಲ್ಲಿಯೆಮುಳುಗದಿಲ್ಲಿಗೆ ಮೋಹಿಸಿರೆಂದೆಲ್ಲರಿಗರುಹಿದೆಯೋ
ಅಂಗವ ನೆಚ್ಚದೆ ಆತ್ಮನ ಮರೆಯದೆ ಕಂಗಳು ಪರಿದೆಡೆ ಹೋಗದೆ
ಸಂಗಡಿಸಿದ ಸುವ್ರತಗಳ ಬಿಡದೆ ಸುಸಂಗದೊಳಿರಿ ಎಂದೆ
ಶೃಂಗಾರ ಕವಿ ಹಂಸರಾಜನ ಗುರುವೆ ಲೋಕ ಸುಖಿಗೈದ ಕೃ–
ಪಾಂಗ ಮಾಹೇಂದ್ರ ಕೀರ್ತಿ ಮುನೀಂದ್ರ ಮನೋರಥದಾಯ
ಸಂಗತ ಸಂಪ್ರೀತಿಯಿಂದ ಬಲುಗಾವಲುಂಟೆ ?
ಹೆಂಗಳಾಟದಿಂದ ಹೆಚ್ಚಿನ ಭ್ರಾಂತಿಯುಂಟೆ ?
ಶೃಂಗಾರಕವಿ ಹಂಸನಿಂದ ಮಿಗಿಲುಂಟೆ ? ಮುನಿ
ಪುಂಗವ ಮಾಹೇಂದ್ರ ಕೀರ್ತಿಗಿಂತ ಶಾಂತರುಂಟೆ ?
ಚಂದ್ರನಂತೆ ಶಾಂತನಾಗಿ ನಿಂದಾ
ಸಾಂದ್ರ ಶೃಂಗಾರ ಕವಿಗುರು ಮಾ–
ಹೇಂದ್ರ ಕೀರ್ತಿಯೋಗಿಯಂತೆ
ಇಂದ್ರಿಯ ವಿಜಯನಾಗಬೇಕು

ಮಾಹೇಂದ್ರ ಕೀರ್ತಿಗಳು ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ತನಗೆ ನೀಡಿದ ಸದುಪದೇಶವನ್ನು ಕವಿ ಈ ಕೀರ್ತನೆಯಲ್ಲಿ ಹೇಳಿದ್ದಾನೆ.

ತಿಳುಹಿದರಿಲ್ಲವಯ್ಯ ನನ್ನವರಾಗಿ
ತಿಳಿಹಿದರಿಂದುತನಕ ತೊಳಲುವೆನೆ

ಹೀನವಿಷಯ ಸುಖವಿಷವೆಂದು ಭಾವಿಸೋ
ಜ್ಞಾನರಸವನೆ ಸೇವಿಸೋ
ತಾನೆ ಕೆಡುವೆ ಮೈಯ ತಪಕಾಗಿ ಸಲಿಸಿನಿ
ತ್ಯಾನಂದ ಪದವಿ ಪಡೆಯೆಂದು
ರಾಗರೋಷವ ಬಿಡುಕಂದ, ಕಡುಶಾಂತ
ನಾಗಿ ಕರ್ಮವ ನೀ ಗೆಲ್ಲೆಂದ
ಯೋಗಿ ಮಾಹೇಂದ್ರ ಕೀರ್ತಿಯಂತೆ ಕೃಪೆವಂತ
ನಾಗಿ ಕರ್ಮಾರಿಗೆಲ್ಲೆಂದು ಸದ್ಧರ್ಮವ

ಎಲ್ಲರಲಿ ತ್ಯಾಗಿಯಾಗು, ಯಾವುದೂ ನಿನ್ನದೆನ್ನಬೇಡ, ಯಾರೂ ನಿನ್ನವರೆನ್ನಬೇಡ, ಎಲ್ಲವನ್ನೂ ಬಿಟ್ಟುಬಿಡು. ಮನೆ, ಹೊಲ, ವಸ್ತು, ವಾಹನವನ್ನನ್ಯರಿಗೆ ಕೊಡು, ದೇಹವನ್ನೂ ಸಮಯ ಬಂದರೆ ಕೊಟ್ಟುಬಿಡು. ಮನವೊಂದನ್ನು ಮಾತ್ರ ಬಾಹ್ಯ ಚಿಂತನೆಗೆ ಕೊಡದೆ ತನುವಿನೊಳಗಿರ್ಪ ಆತ್ಮನಲ್ಲಿ ಹೂಳು. ಹಣ, ಆಭರಣ ಎಲ್ಲ ವಸ್ತುವನ್ನು ಕೊಡು. ಚಿತ್ತವೊಂದನ್ನು ಮಾತ್ರ ಅನ್ಯ ಚಿಂತನೆಗೆ ಕೊಡದೆ ಆತ್ಮನ ಚಿಂತನೆಗೆ ಅರ್ಪಿಸಿಕೋ, ಮೀಸಲಾಗಿಟ್ಟುಕೋ. ಆಗ ಸುರಪದವಿ ನಿನಗೆ ತೀರ ಹತ್ತಿರ. ಮುಂದಿನ ಹೆಜ್ಜೆಯಲ್ಲೇ ನಾಳೆಯೇ ನಿನ್ನದಾಗುವುದು ಎಂಬ ಗುರುವಿನ ಉಪದೇಶವಾಯಿತು. ಶಿಷ್ಯನ ಸಾಧನೆ ಆರಂಭವಾಯಿತು. ತನ್ನನ್ನು ಕಾಡುತಿದ್ದ ಎಲ್ಲ ದೌರ್ಬಲ್ಯದೈತ್ಯ ಪರಿವಾರವನ್ನು ದೂರದೂರಕ್ಕೆ ಅಟ್ಟುತ್ತಿದ್ದಾನೆ. ಇನ್ನು ಮುಟ್ಟದಿರೆನೆಂದು ಹೇಳುತ್ತಿದ್ದಾನೆ.

ನಮ್ಮ ಮನೆಯೊಳಿಂದು ಹಬ್ಬ ನಮಗೆ ಸಂದಣಿ ಬಹಳ
ನಿಮ್ಮ ನುಡಿಸುವರೆ ಹೊತ್ತಿಲ್ಲ ಹೋಗಿ ವಿಷಯಗಳಿರ
ತನುವೆಂಬ ಮನೆಯೊಳು ಪರಮಾತ್ಮನೆಂದೆಂಬ
ಮನೆಯದೇವರ ಹಬ್ಬ ಆ ಹಬ್ಬಕಿಂದು
ನೆನೆಯದೆ ಮಿಯಬೇಕು ನಡೆಯದೆ ಬಲಗೊಂಡು
ನೆನೆಹಿನಮೃತಾನ್ನದುಪಹಾರವಿಡಬೇಕು
ನೆರವಿಯಿಂದಗಲದೇಕಾಂತದೊಳಿರಬೇಕು
ನೆರೆಯಬೇಕಮಲಗುಣವೆಂಬ ವಸ್ತುಗಳ
ಪರಿಹರಿಸಿ ಕಳೆಯಬೇಕನ್ಯ ಚಿಂತೆಗಳ
ಎರಡಿಲ್ಲದೊಂದು ಮನದಲ್ಲಿ ಭಜಿಸಬೇಕು
ನೋಡದೆ ಕಂಡು ನುಡಿಯದೇ ಪೊಗಳಿ ಬಾಯ್ದೆರೆದು
ಬೇಡದೆ ಪರಮಪದವಿಯ ಪಡೆಯಬೇಕು
ನಾಡಾಡಿದೈವವಲ್ಲವಸಮಾನವಿದು ಧ್ಯಾನ
ರೂಢಿಯೊಳು ಹಂಸನಾಥನ ಭಜಿಸಬೇಕು

ಈಗ ಅವನಿಗೆ ದೇಹ ಬೇಕಾಗಿಲ್ಲ. ದೇಹ ಆತ್ಮಕ್ಕಿರುವ ಮುಚ್ಚಳವಷ್ಟೆ. ದೇಹವೇ ನನ್ನನ್ನು ಬಿಟ್ಟುಬಿಡು. ಮನಸ್ಸೇ ನೀನು ಧ್ಯಾನಕ್ಕೆ ನಡೆ. ನನ್ನ ಉನ್ನತಿಯನ್ನು ನಾನು ಕಂಡುಕೊಳ್ಳಬೇಡವೇ ? ಸುಮ್ಮನೆ ನಿನ್ನೊಡನಿದ್ದರೆ ನನಗೇನಾದಂತಾಯಿತು ? ನನ್ನನ್ನು ನಾನೀಗ ತಿಳಿದುಬಿಟ್ಟಿದ್ದೇನೆ. ಇನ್ನು ನಿನ್ನ ಹಂಗಲಿ ಬೇಡ. ಇಂದಿನ ತನಕ ನಿನಗಾಗಿ ಹೆಂಡತಿ ಮಕ್ಕಳು, ತಾಯಿ–ತಂದೆಯರು ಬೇಕಾದಷ್ಟು ಜನರನ್ನು ಕಟ್ಟಿಕೊಂಡೆ, ಹುಟ್ಟೆದ್ದು ನಿಂದೆ, ನಿನ್ನ ರೂಪು ಸೇರಿದ ಎಲ್ಲಾ ಗತಿಗಳಲ್ಲೂ ದುಃಖದಲ್ಲಿಯೇ ಬಂದಿದ್ದೇನೆ. ನೀನು ನನ್ನ ವೈರಿ ಎಂಬುದನ್ನು ಚೆನ್ನಾಗಿ ತಿಳಿದುಬಿಟ್ಟಿದ್ದೇನೆ. ವ್ಯರ್ಥವಾಗಿ ನಿನ್ನಂಥ ಕಪಟಿಯ ಸಹವಾಸದಲ್ಲಿ ಎಷ್ಟು ದಿನಗಳನ್ನು ಕಳೆದು ಬಿಟ್ಟೆನಲ್ಲ. ನನ್ನ

ಯಾವ ಪುಣ್ಯದ ಫಲವೋ ಈಗ ಅಪರಾಜಿತೇಶನ ಅರಿವು ಪಡೆದಿದ್ದೇನೆ. ಆತನ ಕರುಣೆ ಹೊಂದಿದ್ದೇನೆ. ಇನ್ನೇಕೆ ನಿನ್ನ ಹಂಗು ಇನ್ನು ನನ್ನನ್ನು ಬಿಟ್ಟು ಹೊರಡು.... ಎಂದು ದೇಹಕ್ಕೆ ಛೀಗುಟ್ಟುತ್ತಿದ್ದಾನೆ.

ಯೋಗಿ ಎಂಥವನು ? ಅವನು ಹೇಗಿರಬೇಕು ? ಅವನ ಮನವೆಂಥಹುದು ? ಇವೆಲ್ಲ ರತ್ನಾಕರನಿಗೆ ಗೊತ್ತಿದೆ. ಸಾಧನೆಯಲ್ಲಿ ಸಿದ್ಧಿಯಾಗಿದೆ.

ಸಾಮಾನ್ಯನಲ್ಲ ಕಾಣಿರೋ ಆತ್ಮಯೋಗಿ
ಭೂಮಿಯೊಳಗವ ದೇವ ಕಾಣಿರೋ
ಪುಣ್ಯ ಕಾಲುಕಸ ಕಾಣಿರೋ
ಪುಣ್ಯ ಕಾಲುಕಸ ಕಾಣಿರೋ ಅವಗೆ ಮಹಾ–
ರಣ್ಯ ದೊಳಗವನೊಂಟ ಕಾಣಿರೋ
ಆವಾಗಲೂ ಒಂದೆ ಪರಿಯಾಗಿಹುದು ಯೋಗಿಯಮನ
ಭಾವವಿಶುದ್ಧ ನಿಶ್ಚಯ ತಾಳಿಹುದು ಯೋಗಿಯ ಮನ

ಆದರ್ಶ ಆತ್ಮಯೋಗಿಯೆಂಥವನೆಂಬುದನ್ನು ಈ ಗೀತೆ ನಮ್ಮ ಕಣ್ಣಿಗೆ ಕಟ್ಟುವಂತೆ ಹೇಳುತ್ತದೆ. ಆದರ್ಶಗುಣ ಸಾಧನೆ ಸಿದ್ಧಿಸಿದ ಶ್ರೇಷ್ಠ ಆತ್ಮಯೋಗಿ ಸಾಕ್ಷಾತ ಶಿವನೇ ಅಲ್ಲದೆ ಮತ್ತೇನು ? ಮುಕ್ತಿಕನ್ಯೆಯೊಡನೆ ಆದ ಪರಮಾತ್ಮನ ಮದುವೆಯನ್ನು, ಅದರ ಸಡಗರ ಸಿದ್ಧತೆಗಳನ್ನು ಇಲ್ಲಿ ಸಾರುತ್ತಿದ್ದಾನೆ.

ಶೃಂಗಾರವಾಗಾತ್ಮ ಸುಮ್ಮನೇಕೆ ಇದ್ದೆಯ್ಯೆ? ಮು–
ಕ್ತ್ಯಂಗನೆಯ ಮದುವೆ, ಶುಭಲಗ್ನ ಬಂದಿತು
ಚಿನ್ನವೆಂಬ ಕೆಂಪಿನಕಲ್ಲ ತೊಡಲವಳು ಮೆಚ್ಚಳು
ರನ್ನ ಮಾರರ ಭೂಷಣವ ತೊಡೆಲೋ ಮದುವಣಿಗ
ನಿರ್ಜರೆ ಸಂವರೆಯೆಂಬ ಕುಂಡಲವ ಧರಿಸು
ನಿರ್ಜಿತಾತ್ಮನೆಂಬ ಕುಂಡಲವ ಧರಿಸು
ಊರ್ಜಿತ ಮೌನವೆಂಬ ಕಂಕಣಕಟ್ಟು, ಸಂಗ
ವರ್ಜಿತ ಭಾಸಿಂಗವ ಕಟ್ಟೆಲೋ ಮದುವಣಿಗ
ಪರಮಧೈರ್ಯವೆಂಬ ಕಠಾರಿ ಹಿಡಿ, ರಾಗ
ರೋಷ ಹಾವುಗೆ ಮೆಟ್ಟನಡೆ ಆತ್ಮ ಮಂಟಪಕೆ
ಧೀರಚಿದಂಬರ ಪುರುಷನನೋಡಿ ಕರ್ಮವೆಂಬ
ತೆರೆ ಜಾರಿತು, ಮುಕ್ತಿ ಕೈವಿಡಿ ಶೋಭನ ! ಶೋಭನ !

ಇಂಥ ಅಪೂರ್ವ ಕೃತಿರತ್ನಗಳಿಂದಲೇ 'ಶೃಂಗಾರಕವಿ ಹಂಸರಾಜ' ನೆಂಬ ಬಿರುದು ಕವಿಗೆ ಬಹುಮಟ್ಟಿಗೆ ಒಪ್ಪುವುದು. ಇನ್ನೊಂದು ಕೀರ್ತನೆಯಲ್ಲಿ ಮದುವೆಯ ಮಂಟಪ, ವೈಖರಿ, ಮುಹೂರ್ತಗಳ ವರ್ಣನೆಯಿದೆ.

ಸರಸ್ವತಿ ! ಧವಲವ ಕೊಡು, ಲಕ್ಷ್ಮೀ ! ಶೋಭನವ ಪೇಳು
ಪರಮಾತ್ಮ ರಾಜನಿಗೆ ಮುಕ್ತಿ ಕನ್ನೆಯೊಡನಿಂದು ಮದುವೆ
ದ್ವಾದಶಾನುಪ್ರೇಕ್ಷೆಯೆಂಬ ಹನ್ನೆರಡು ಕಂಬದಲ್ಲಿ
ಆದರಿಸಿ ಮದುವೆಯ ಮಂಟಪ ರಾಜಿಸಿತು
ಆದರ್ಶಭಕ್ತಿಗಳೆಂಬ ಬಂಧುಗಳು ಬಂದಾರು, ಸು–
ನಾದ ಬಿಂದುವೆಂಬ ವಾದ್ಯ ಮೊಳಗಿತು
ಷಡ್ದ್ರವ್ಯ ಪಂಚಾಸ್ತಿ ಕಾಯ ಸಪ್ತ ತತ್ವ ನವಪದಾರ್ಥ
ಬಿಡದೆಣಿಸಲಿಪ್ಪತ್ತೇಳು, ತಾರಾಬಲ ಕೂಡಿತು !

ಒಡನೆ ಶುಕ್ಲ ಧ್ಯಾನವೆಂಬ ಚಂದ್ರ ಬಲಸೇರಿತು ! ಕೈ
ವಿಡಿದನಹೊ ! ಚಿದಂಬರ ಪುರುಷ ಮುಕ್ತಿ ಕಾಂತೆಯನು

ಆತ್ಮಕಲ್ಯಾಣಸಾಧನೆಗೆ ಅವಕಾಶವಿರುವ, ಮೋಕ್ಷಮಾರ್ಗತೋರಿಸುವ ಜಿನಮತದೊಳಗೆ ಜನ್ಮವೆತ್ತುವುದೇ ಪುಣ್ಯವೆಂದು ಸಾರಿದ್ದಾನೆ... _

ಆಹಾ ! ಪುಣ್ಯವಲ್ಲ ! ನರದೇಹವಿಡಿದು
ಜಿನಮತದೊಳಗುದಿಸುವುದಾ ಹಾ! ಪುಣ್ಯವಲ್ಲ
ಸಿರಿವಂತ ದಾನ ಮಾಡಬಹುದು ಶಾಸ್ತ್ರಿ
ಪರಗುರ್ಪದೇಶಿಸಿ ಬಹುದಿನಿತೂ
ದೊರಕದಿರ್ದೊಡೆ ಮಾಳ್ಪ ಜಿನಪೂಜೆ ನೋಡಿ
ಪರಿಣಾಮಸಿದ್ಧಿ ಪಡೆಯಬಹುದು
ಸೇವ್ಯಾ ಸೇವ್ಯವನರಿದುಣಬಹುದು ಸು–
ಭವ್ಯರ ಗೋಷ್ಠಿಯೊಳಿರಬಹುದು
ದಿವ್ಯವ್ರತವನಾಂತು ನೋಂಪಿಯನೋಂತು ಮು–
ದವ್ಯಯ ಸುಖಪಡೆಯಬಹುದು
ಭೋಗವಿರಕ್ತಿ ದೋರಲು ಯೋಗಿಯಾಗಿ ಮ–
ಹಾಗುಣಗಳ ವಿರಾಜಿಸಬಹುದು
ಆಗಮಸಂಸಿದ್ಧ ನಾದೊಡೆ ಸುಜ್ಞಾನಿ–
ಯಾಗಿ ಕರ್ಮವ ಖಂಡಿಸಬಹುದು
ಮಂಗಲ ರತ್ನತ್ರಯ ದೊರಕಿದೊಡೆ ಮು–
ಕ್ತ್ಯಂಗನೆಯೊಡನೆ ಸುಖಿಸಬಹುದು
ಶೃಂಗಾರಕವಿ ಹಂಸರಾಜನ ಸಮುದ್ರಾಧೀಶ
ನಲಗದೊಳೈಕ್ಯವಾಗಿರಬಹುದು

ಈ ಮತ ಇಂದಿನದಲ್ಲ, ನಿನ್ನೆಯದಲ್ಲ ಅದು ಆದಿಸ್ವಾಮಿ ವೃಷಭೇಶನೇ ಜನ್ಮವೆತ್ತಿದ್ದ ಮತ. ಅಂಥ ಜಿನಮತ ಪ್ರವರ್ತಕನಾದ ಆದಿನಾಥನನ್ನು ಕವಿ ಹೀಗೆ ಸ್ತುತಿಸಿದ್ದಾನೆ:

ಆದಿ ಜಿನೇಶ ಆದಿ ಜಿನೇಶ
ಆದಿ ಜಿನೇಶ ಅಘಕುಲನಾಶ
ನಿರ್ಮಲರೂಪ ನಿರ್ಜಿತಕೋಪ
ಧರ್ಮದ ದೀಪ ಪಾಪ ವಿಲೋಪ
ನಿರ್ಜಿತ ಮದನ ಸದ್ಗುಣ ಸದನ
ಸ್ಫೂರ್ಜಿತ ಜ್ಞಾನ ವರ್ಜಿತ ಕದನ
ಶಕ್ತಿ ನಿಭವದನ ಮುಕ್ತಿ ನಿವಾಸಾಧೀಶ
ಭಕ್ತಾಬ್ಜವಂದಿತ ವ್ಯಕ್ತ ಕಡಲಾಧೀಶ

ಕೆಳಗಿನ ಕೀರ್ತನೆಯಲ್ಲಿ ಆದಿನಾಥನ ಜಿನನ ನಾನಾ ಗುಣಲಕ್ಷಣಗಳನ್ನು ಮನೋಜ್ಞವಾಗಿ ವರ್ಣಿಸಿದ್ದನೆ:

ಆನಂದಯೋಗಿ ಆಧ್ಯಾತ್ಮಯೋಗಿ
ಜೈನಾಗಮಯೋಗಿ ಜಯಸಿದ್ದ ಯೋಗಿ
ಪವನ ವಿಜಯಯೋಗಿ ಪರಮಾತ್ಮಯೋಗಿ

ಜವನದಾಳಿಯಗೆದ್ದ ಜಗದೇಕಯೋಗಿ
ಧೈರ್ಯಾಚಾರದಯೋಗಿ ದಯೆಯುಳ್ಳಯೋಗಿ
ಸೂರ್ಯಪ್ರಕಾಶದ ಶೃಂಗಾರಯೋಗಿ
ಗಗನದೊಳಾಡುವ ಗಂಧರ್ವಯೋಗಿ
ಸುಗುಣಮಣಿಯ ತೊಟ್ಟ ಶೃಂಗಾರಯೋಗಿ
ಲಕ್ಷಣಾಭರಣದ ಅಸಮಾನಯೋಗಿ
ಮೋಕ್ಷಕಾಂತೆಗೆ ಸೋತ ಮೋಹಗಾರಯೋಗಿ
ಮೋಹಸೂರನಗೆದ್ದ ಮನೆಗಾರಯೋಗಿ
ಶ್ರೀ ಹಂಸನಾಥನ ಸಿದ್ಧಾಂತಯೋಗಿ

ಈ ಕೆಳಗಿನ ಗೀತೆಯಲ್ಲಿ ಔಪಾಸನೆಯನ್ನು ಮಾಡಬೇಕೆಂದು ಕರೆಯುತ್ತಿದ್ದಾನೆ. ಅದಕ್ಕೆ ಸ್ನಾನ, ಉಡಬೇಕಾದ ಮಡಿ, ನುಡಿಯಬೇಕಾದ ಮಂತ್ರ, ಅಗ್ನಿ ಇವುಗಳನ್ನು ತಿಳಿಸಿ, ಸಮಿತ್ತುಗಳು, ತುಪ್ಪ, ಮಾಡುವ ಕ್ರಮ, ಕೊನೆಗದರಿಂದಾಗುವ ಪರಿಣಾಮ ಇವುಗಳನ್ನು ವಿಶಿಷ್ಟ ರೀತಿಯಲ್ಲಿ ತಿಳಿಸಿದ್ದಾನೆ.

ಔಪಾಸನೆಯ ಮಾಡೇಳು ಬಾಹ್ಯ
ವೈಪರೀತ್ಯವ ಬಿಟ್ಟು ನಿನ್ನೊಳಗಳವಟ್ಟು
ವ್ರತಸ್ನಾನವ ನೀಮಾಡು, ಅತಿ
ಹಿತವಾದ ಗುಪ್ತಿ ಸಮಿತಿಯೊಡಗೂಡು
ಶ್ರುತದಾದ್ಯಂತವ ಪಾಡು ಆತ್ಮ
ನುತಿಗೈದು ದೇಹಕುಂದುವ ಪರಿಮಾಡು
ಧ್ಯಾನಾನಿಲನ ತಂದಿರಿಸು, ನಿನ್ನ
ಸ್ವಾನು ಮನದೊಳು ಅಗ್ನಿಯ ಪ್ರಜ್ವಲಿಸು
ಜ್ಞಾನಹಸ್ತದೊಳನುಕರಿಸಿ, ಕರ್ಮ
ಹೀನ ಸಮಿತುಗಳ ತೆಗೆದಗ್ನಿಗಿರಿಸು
ನೂರನಾಲ್ವತ್ತೆಂಟುತೆರದಾ ಕರ್ಮ
ದ ರೂಪನಾಹುತಿಗೊಂಡು ನಿರುಪಮ
ಧೀರ ಕ್ಷಮಾಘೃತವೆರೆದಾವ್ರತ ಪಾಲ–
ನೆರದೆರೆದೊಡನೆ ಕಾಂಬ ಚಿದಂಬರನು
ಮನುರುತ್ವಿಕ್ಕನು ಧರಿಸು ಆತ್ಮ
ತನುವೊಳಿಡದಷ್ಟ ಸದ್ಗುಣದೊಡೆವೆರಸು
ಮುನಿಕುಲಪತಿ ನೀನೆಂದೆನಿಸು ನಿರಂ
ಜನಸಿದ್ಧ ನಿತ್ಯ ನಿರ್ಮಲನೆಂದುಸ್ಮರಿಸು

ಪ್ರತಿಯೊಬ್ಬ ಮನುಷ್ಯನೂ ತನ್ನ ಬದುಕಿನಲ್ಲಿ ಅನುಸರಿಸಬೇಕಾದ ಆಚಾರಗಳನ್ನು ಕವಿ ಹೇಳಿದ್ದಾನೆ. ಧಾನ–ಧರ್ಮವ ಮಾಡು, ಪರೋಪಕರವ ಮರೆಯದಿರು, ಕೇಡ ಬಯಸದಿರು, ಮೂಢರೊಡನಾಡದಿರು, ಸುಜನರ ಆದರ್ಶ ಹಾಕಿಕೊಂಡು ಜೀವನ ನಡೆಸು, ಹೆಣ್ಣು, ಹೊನ್ನು, ಮಣ್ಣು ನಿನ್ನನೆ ವಂಚಿಸಿ ಹೋಗುವವು, ಬೆನ್ನನೊದೆವ ಯಮದೂತರು ಬರುವರು. ಮುಂದೆ ನೀನೆಚ್ಚರಿಕೆ, ತಂದೆ–ತಾಯ್ಗಳ ಬೈಯದಿರೆಚ್ಚರಿಕೆ, ಹಾಳು ಬದುಕಿಗಾಗಿ ಹಲಬರ ಕೂಡ ಹಗೆ ಬೇಡೆಚ್ಚರಿಕೆ, ಕಾಲನವರು ಬಂದು ಯಾವಾಗ ಕರೆವರೊ ಕಾಣೆಯದೆಚ್ಚರಿಕೆ, ಮೂಲೋಕಪತಿ ಶ್ರೀ ಮಂಧರೇಶನ ಚರಣವ ಮರೆಯದೆಚ್ಚರಿಕೆ ಎಂದು ನಾನಾ ಬಗೆಯ ಎಚ್ಚರಿಕೆಗಳನ್ನು ಕೊಟ್ಟಿದ್ದಾನೆ.

ಮನುಷ್ಯರು ಅನುಭವಿಸುವ ಕಷ್ಟ ದುಃಖಗಳಿಗೆ ಅವರಿವರು ಕಾರಣರೆಂದು ಹೇಳುವುದು ಸರಿಯಲ್ಲ. ಅದು ಅವರೇ ಸಂಪಾದಿಸಿಕೊಂಡು ಕರ್ಮದ ಫಲವೆಂದು ಸಾರುವ ಈ ಕೆಳಗಿನ ಗೀತೆ ಪ್ರಸಿದ್ಧವಿದೆ.

ಆರೇನು ಮಾಡುವರು ? ಆರಿಂದಲೇನಹುದು ?
ಪೂರ್ವಜನ್ಮದ ಕರ್ಮವಿದು ಕಾಡುತಿರಲು
ತಾನು ಮಾಡಿದ ಕರ್ಮ ತನ್ನಡರಿಕೊಲ್ಲುತಿರೆ
ಮಾನವರು ಮಾಡುವರೆಂದು ತಿಳಿದು
ಮೌನದೊಳಿರದೆ ಇವರವರು ಮಾಡಿದರೆಂಬ
ಈ ನುಡಿಯಿದೇನು ಬಿಡು ಸಮತೆಯನ ಮಾಡು
ನಾ ಮಾಡಿದಷ್ಟು ನನಗೆಂದು ಸತ್ಯವ ಬಿಡದೆ
ಶ್ರೀಮಂಧರೇಶ್ವರನಾಜ್ಞೆಯ ಮೀರದೆ
ಸಾನುರಾಗದಿ ಸುಜನರೊಡನಾಡಿ ಪರಮಾತ್ಮ
ಧ್ಯಾನದೊಳಗನುದಿನವು ಕಳೆಯೊ ಕಾಲವನು

ರತ್ನಾಕರನ ಕೀರ್ತನೆಗಳ ನುಡಿಮುತ್ತಿನಂತೆ ಇವೆ. ಅದಕ್ಕೆ ಈ ನಿದರ್ಶನವನ್ನು ಗಮನಿಸಬಬಹುದು:

ನಿಜವರಿಯದ ಮನುಜ ಧನುಜ
ಸುಜನರಲ್ಲದವರ ಸಂಗ ಭಂಗ ದೇವ
ಒಕ್ಕಲಗೋಳು ದೊರೆಗೆ ಹಾಳು, ಮನೆಯೊಳು
ಮಕ್ಕಳಿಲ್ಲದ ಬಾಳು ವಂಶಹಾಳು
ರೊಕ್ಕವಿಲ್ಲದ ಶೆಟ್ಟ ಮಾಳ್ವಬಿಟ್ಟ, ಕರೆ
ದಿಕ್ಕದುಣ್ಣುವ ಕೂಳು ಬರಿಯ ಧೂಳು
ವಂಚನೆ ಮಾಡುವ ಮಿತ್ರ ಶತ್ರು, ಕೊಟ್ಟ
ಲಂಚದಾಸೆಯ ಭೂಪ ವ್ಯಾಘ್ರರೂಪ
ಹಿಂಚು ಮುಂಚರಿಯದ ಕೋಪಿ ಶಾಪಿ, ಗುರು
ಪಂಚಕವರಿಯದವನಸುವೆ ಪಶು
ಧರ್ಮವನೊಲ್ಲದ ಜನ ಅಜಗಲಸ್ತನ
ದುರ್ಮತಿಗಳ ನೋಟ ಕರ್ಮದಾಟ
ಮರ್ಮಹೃದಯರ ನಗೆಯೆ ಹಗೆ, ಜನಕೊಂದೆ
ಸ್ವರ್ಮೋಕ್ಷಪತಿ ನಿನ್ನ ಪಾದವೆ ಗತಿ

ಇಂಥ ನುಡಿಮುತ್ತುಗಳು ಸರ್ವಜ್ಞನ ತ್ರಿಪದಿಗಳನ್ನು ನೆನಪಿಗೆ ತರುತ್ತವೆ.

ದೇವರನ್ನು ಕಾಣಬೇಕಾದರೆ ಎಲ್ಲೆಲ್ಲಿಯೋ ಅಲೆದಾಡಿ ಪರದಾಡಬೇಕಾಗಿಲ್ಲ. ಪರಿಶುದ್ಧವಾದ ಮನಸ್ಸಿನಿಂದ, ಭಾವನೆಯಿಂದ ತನ್ನಾತ್ಮದೊಳಗೆ ಪ್ರವೇಶಿಸಿದರೆ ಸಾಕು, ಅಲ್ಲಿಯೇ ಪರಮಾತ್ಮನ ದರ್ಶನವಾಗುತ್ತದೆ. ಈ ತತ್ವವನ್ನು ಕೆಳಗಿನ ಗೀತೆಯಲ್ಲಿ ಹೇಳಿದ್ದಾನೆ.

ಹೊರಹೊರಗಾಡಿದರೇನುಂಟು? ಒಳ
ವರಿದು ನೋಡಿದರಲ್ಲವೆ ದೇವನುಂಟು
ಹರಿಹಂಚಾಗಿ ಹೊರಗೆ ಸುಳಿದಾಡಲು
ಕೆರೆಮನೆ ಹೊಲನಲ್ಲದೇನುಂಟು?
ತರುವಿ ತನ್ನ ಮನವ ವೈಯೊಳಿರಬಿಟ್ಟು

ಅರಸಿ ನೋಡಿದರಾದೇವನುಂಟು
ಧ್ಯಾನ ಒಂದಲ್ಲದೆ ಬರಿಸ್ನಾನವ ಮಾಡಲು
ನಿಮ್ಮ ಮೈ ಸುಖವಲ್ಲದೇನುಂಟು?
ಧ್ಯಾನಪೂರಿತನಾಗಿ ಜಪವ ಮಾಡಲು ಮ–
ಹಾನುಭಾವನ ಮುಂದೆ ಕಾಭಲುಂಟು
ಅಂಗವನೋಡಲೆಲುಬು ರಕ್ತ ಮಾಂಸಚರ್ಮದ
ಬೊಂಬುಳಿಯಲ್ಲದೇನುಂಟು?
ಅಂಗಬೇರಾತ್ಮ ಬೇರೆಂದು ನೋಡಿದರಲ್ಲಿ ಬೆಳ–
ದಿಂಗಳ ಬೊಂಬೆಯಂತಾದೇವನುಂಟು
ಗುರುದೇವರೆಂದಿದಿರಿಟ್ಟು ನೋಡಿದವರಲ್ಲಿ
ಸುರಪದ ಸುಖವಲ್ಲದೇನುಂಟು
ಗುರು ಹಂಸನಾಥನ ಧ್ಯಾನವ ಮಾಡಲು ಇರದೆ
ಪರಮ ಮುಕ್ತಿಸುಖವ ಕಾಣಲುಂಟು

ಸಂಸಾರ ಸಾಗರದ ದು:ಖ ಪರಂಪರೆಯನ್ನು ಕವಿ ಈ ಗೀತೆಯಲ್ಲಿ ಮನಮುಟ್ಟುವಂತೆ ವರ್ಣಿಸಿದ್ದಾನೆ:

ಆರಿಗೊರೆವೆನೆನ್ನ ನೋವ ಸರ್ವಜ್ಞ?
ಆರುಂಟು ನೀನಲ್ಲದೆನಗೆ ಸರ್ವಜ್ಞ
ಒಂದೇ ಎರಡೇ ನಾನಾಭಾವದಲ್ಲಿ ಬಂದೆ
ಹೊಂದಿಹುಟ್ಟುತ ಕಣ್ಣೀರಲ್ಲಿ ಮಿಂದೆ
ಹಿಂದೆ ಹಲವು ಕಾಲ ನಾ ನಿಂತು ನೊಂದೆ
ಮುಂದೆ ನೀ ಶರಣಾಗಬೇಕೆನ್ನ ತಂದೆ
ಹೀಜನ್ಮದೊಳನು ಇಹುದೊಂದೆ ಇರವೆ
ನಾನೊಲ್ಲೆನೊಲ್ಲೆ ವಿಸ್ಮಯ ಕಲ್ಪತರುವೆ
ನೀನೊಲ್ಮೆದೋರೋ ಲಾವಣ್ಯದ ತರುವೆ
ಧ್ಯಾನಕೆ ಬಂದೆನ್ನ ಸಲಹೆನ್ನ ಗುರುವೆ
ಅಭಯಕೊಡು ಕೋಟಿ ಸೂರ್ಯಪ್ರಕಾಶ
ಉಭಯ ಕರ್ಮವ ಸುಟ್ಟುರುಹೆ ಪಾಪನಾಶ
ತ್ರಿಭುವನಾಗ್ರದೊಳೆನ್ನನಿರಿಸೋ ಸರ್ವೇಶ
ಪ್ರಭುವೆ ಚಿದಂಬರ ಶ್ರೀ ಜಿನೇಶ

ಭವದ ಪರಿಪಾಟಲೆಗಳಿಂದ ಬಿಡುಗಡೆ ಹೊಂದಲು ಜಿನಸ್ತುತಿಯ ಮಾರ್ಗವನ್ನು ಕವಿ ತೋರಿರುವುದು ಹೀಗೆ:

ಜಿನರೆನ್ನು ನಿಚ್ಚ ಜಿನರೆನ್ನು ಜಿನ ಜಿನ
ಜಿನಸಿದ್ಧರೆಂದೆನ್ನು ಕಂಡಾಮನವೆ
ಬದ್ಧ ಕರ್ಮಕೆ ಸಿಕ್ಕಿ ಬಳಲುವರಿಗೆ ಜಿನ
ಸಿದ್ಧ ನಾಮವೆ ಜೀವಸಿದ್ಧ ಕಂಡಾ!
ಭ್ರಾಂತಿಯ ಕೆಡಿಸುವ ಬಲುಮಂತ್ರವಿದು ಅರಿ–
ಹಂತ ಅಸಿ ಆ ಉಸ ಎನು ಮನವೆ
ತಪವ ಮಾಡಿದ ಫಲ ತನ್ನ ತಾ ದೊರೆಕೊಂಬು

ದಪರಾಜಿತೇಶ್ವರ ಜಯವೆನು ಮನವೆ
ಅಚೆಜನವೆನಿಪ ಕರ್ಮಾಂಜನವಳಿಪ ನಿ–
ರಂಜನ ಸಿದ್ಧ ನಮೋ ಎನು ಮನವೆ

ಈ ಸಂಸಾರದ ತೊಳಲಾಟದಲ್ಲಿ ಸಿಕ್ಕ ಜೀವಿಗಳು ಆತ್ಮನ ಇರವನ್ನೇ ಮರೆತುಬಿಡುತ್ತಾರೆ. ಕೇವಲ ಬಾಹ್ಯ, ನಶ್ವರಸುಖವನ್ನು ಅನುಭವಿಸುತ್ತ ಅಷ್ಟರಿಂದಲೇ ತೃಪ್ತಿ ಹೊಂದುವ ಅವರನ್ನು ನೋಡಿ ಕವಿ ಮರುಕದಿಂದ ಈ ಗೀತೆ ಹಾಡಿದ್ದಾನೆ–

ಅರಿಯಲಿಲ್ಲವಲ್ಲ ಆತ್ಮನ
ಮರೆತುಕೆಟ್ಟರೆಲ್ಲಾ
ಹೊರಗಣ ಸೋಗೆಯ ತಿಂದೊಳಗಿಹರಸ
ದಿರವದರಿಯದಿಹ ಕುರಿಯಂತೆಲ್ಲಾ
ಹೊಟ್ಟೆಯ ಹೊರೆವುದಕೆ, ಧರ್ಮವ
ಬಿಟ್ಟು ಹೋಗುವುದಕೆ
ಕೆಟ್ಟ ಮನದಿ ಕೇಡಿನ ಬದುಕಿಗೆ ತಲೆ–
ಗುಟ್ಟಳುತಿಹರಿದ ಬಿಟ್ಟು ನಿಜಾತ್ಮನ
ಉರಿವರು ಸಿರಿಯಿರಲು ದುಃಖದಿ
ನರಳುವರೆಡರಿನೊಳು
ಎರಡರೊಳೊಂದೇ ಭಾವದಿ ಸಂತತ
ಪರಮ ನಿರಂಜನ ಸಿದ್ಧನ ನೆನೆಸರು

ಈ ಅಲ್ಪಜೀವಿಗಳಿಗೆ ಕವಿ ಆತ್ಮಜ್ಞಾನದ ಪರಿಚಯ ಮಾಡಿಕೊಡುತ್ತಿದ್ದಾನೆ.

ಅರಿದು ಪಿಡಿಮನವೆ ಸಮ್ಯಕ್ತ್ಯ ಚಿಂತಾಮಣಿಯ
ಧರಿಸೆ ಮುಕ್ತಿಯ ನೀವ ಪರುಷದಾ ಕಣಿಯ
ಅರಿಹಂತನೆ ದೇವ ನಿರ್ಗ್ರಂಥ ಗುರುತಾನೆ
ಬರೆದ ದಶಲಕ್ಷಣವೆ ಶಾಸ್ತ್ರವೆಂದು
ನೆರೆನಂಬು ಚಲನ ಮಲಿನಾವ ಗಾಢವಬಿಟ್ಟು
ಪರಮಾರ್ಥದೊಳು ನಂಬಿಕೆಯ ನಿಲಿಸು ಮನವೆ
ಏಳು ಪ್ರಕೃತಿಗಳ ಉಪಶಮನದಿಂದಲು
ಕೇಳಿ ತತ್ವಗಳ ತಿಳಿವುದೆ ವೇದ ತಾ
ನೇಳ ರಕ್ಷಯದೀಕ್ಷೆಯಿಕವಿಂತು ಮೂರು ತೆರದೊಳೆ
ಮೋಕ್ಷವು ತಪ್ಪದಹುದು ಮನವೆ
ಮೂರು ಮೂಡಗಳೆಂಟು ಮದವು ಮತ್ತಾನ–
ಯನ ತಾವಾರು ಶಂಕಾದಿ ದೋಷಗಳೆಂಟು ಗೂಡಿ
ಸೇರಿಸದೆ ಇಂತು ಇಪ್ಪತ್ತೈದು ದೋಷಗಳ
ಧೀರ ನೀನಾಗಿ ಪಿಡಿಯದಿರು ದೃಢದಿ ಮನವೆ
ಅಂದದಕೆಂಟು ನಿಃಶಂಕೆ ನಿಃಕಾಂಕ್ಷೆಯೆಂ–
ದೆಂಬ ಮೂರನೆಯ ನಿರ್ವಿಚಿಕಿತ್ಸೆ ಮತ್ತೆ
ಅಂಗಮುಪಗೂಹನ ಸ್ಥಿತಿಕರಣ ವಾತ್ಸಲ್ಯ

ದಂಗವ ಮೂಢತ್ವ ಧರ್ಮಪ್ರಭಾವನೆಯಾ
ಇಂತು ಎಂಟಂಗಯುತ ಸಮ್ಯಕ್ತ್ವವನು ತಾಳಿ
ಕಂತುಹರನಪರಾಜಿತೇಶ ಕೈಪಿಡಿದು
ಚಿಂತಿಲಾರ್ಥವನಿತ್ತು ನಿರ್ಮಾಣಕೊಡಗೊಂಡು
ಶಾಂತನಾಗಿರ್ಪ ಶಾಶ್ವತ ಸೌಖ್ಯದಿ

ಸಾಮಾನ್ಯ ಜೀವಿಗೆ ಸಾಧಕವಾಗುವ ಬಗೆಯನ್ನು, ಮಾರ್ಗವನ್ನು ಹೇಳಿಕೊಡುತ್ತ ರತ್ನಾಕರ ರತ್ನತ್ರಯವನ್ನು ವಿವರಿಸುತ್ತಾನೆ.

ಈ ಬುದ್ಧಿ ನಿನಗೆ ತರವಲ್ಲ ಆತ್ಮ
ಲಾಭವಾಗಿಯೂ ವಿಷಯ ಸುಖ ಬಯಸುವುದು
ನಿಶ್ಚಯದಿ ತತ್ವಗಳ ತಿಳಿವ ಯೋಗ್ಯತೆಯಿದ್ದು
ಸ್ವಚ್ಛ ಮನನಾಗಿ ಪರಮಾತ್ಮನೊಳಗರಿದು
ನಿಶ್ಚಿಂತದಿರದೆ ಮನೆಹೊಲ ಬಂಧು ಬಳಗವನು
ತುಚ್ಛಮನದೊಳು ನೆನೆದು ಬಯಲಾಸೆ ಪಡುವ
ಸಮ್ಯಕ್ತ್ವವೆಂಬ ಪರ್ವತಾಗ್ರದೊಳಗಿದ್ದು
ಧುಮ್ಮಿಕ್ಕಿ ಮಿಥ್ಯಾಕ್ಷಿತಿಗೆ ಬಿದ್ದು ಬಳಲಿ
ಕರ್ಮವೈರಿಗೆ ಸಿಕ್ಕಿ ದುರ್ಗತಿಗೆ ಪೋಪೆ ಜಿನ–
ಧರ್ಮವ ಮರೆದು ಹಲಹಲವ ಚಿಂತಿಸುವ
ರತ್ನ ಮೂರನು ಪಡೆದು ಧರ್ಮದಿಂ ರಕ್ಷಿಸದೆ
ಯತ್ನದಿಂದಾತ್ಮಸ್ವರೂಪವ ಕಾಣದೆಯು
ಪತ್ನಿ ಪುತ್ರಾದಿಗಳ ನಂಬಿ ನೀ ಕೆಡಬೇಡ
ರತ್ನಾಕರಾದಿ ಜಿನಪತಿಯ ಭಾವಿಸದೆ

ಋಷಿಗಳನ್ನು ನಿಂದಿಸಬೇಡೆಂದು, ಗುರು–ಹಿರಿಯರನ್ನು, ತಾಯಿ–ತಂದೆಗಳನ್ನು ಬೈಯಬೇಡೆಂದು, ಗುರುಕರುಣವ ಪಡೆದು ಸತತ ಚಿದಂಬರ ಪುರುಷನ ನೆನೆಯೆಂದು ಉಪದೇಶಿಸುತ್ತಾನೆ. ಆತ್ಮ ಬೇರೆ, ದೇಹ ಬೇರೆ ಎಂಬ ಭೇದ ವಿಜ್ಞಾನ ವಿವರಿಸಿ ಹಂಸತತ್ವವನ್ನು ಪ್ರತಿಪಾದಿಸುತ್ತಾನೆ ಕವಿ.

ಬ್ರಹ್ಮಯೋಗವೇ ಸುಖವೃದ್ಧಿ, ಪರ
ಬ್ರಹ್ಮ ಒಂದನೆ ಸಾಧಿಸೆಲ್ಲವೂ ಸಿದ್ಧಿ
ಕಮಲಗಳೇಳೊಳಗುಂಟು ಒಂದು
ಕಮಲದೊಳಮೃತ ಉಂಟದ ನೋಲಿದೀಂಟು
ಕಮಲ ಏಳಕೆ ಒಂದೇ ದಂಟು, ಆರು
ಕಮಲಲಿಪಿಯನೋಡು ವಿದ್ಯೆ ಕೈಗಂಟು
ವಾಯುಗಳೀರೈದ ಜಯಿಸು, ಮಹಾ
ವಾಯುವೇಗದಿ ಹರಿವುದನುಪಚೈಸು
ವಾಯುಗಣಗಣಕೊಟ್ಟೈಸು, ಮತ್ತೆ
ವಾಯುವೆರಡ ಮನ ಬಂದುಗೆಗೈಸು
ಹಂಸನಂದದಿ ಜಾಣನಾಗು, ಶುದ್ಧ
ಹಂಸವ ಪಿಡಿದಿಹ ಆಶೆಗೆ ಸಾಗು

ಹಂಸ ಹಂಸ ಎಂದು ಬೀಗು, ಗುರು
ಹಂಸನಾಥನಮೋಡಿ ಮುಕ್ತಿಗೆ ಹೋಗು

ರತ್ನಾಕರ ಮಹಾಜ್ಞಾನಿ, ಆತ್ಮಯೋಗಿ ಇವೆರಡಕ್ಕಿಂತಲೂ ಮಿಗಿಲಾಗಿ ಕವಿಶ್ರೇಷ್ಠ, ತತ್ವಜ್ಞಾನ ಅವನಲ್ಲಿ ಎರಕಹೊಯ್ದಿದೆ ಸ್ವಂತ ಅನುಭವದಿಂದ ಲೋಕದ ಕಷ್ಟ ಸುಖಗಳ ಅರಿವಾಗಿದೆ. ದೃಢಸಾಧನೆಯಿಂದ ಯೋಗ ಸಿದ್ಧಿಸಿದೆ. ಈ ಕಾರಣ ಅವನ ಉಪದೇಶಕ್ಕೆ ಮನ್ನಣೆಯಿದೆ. ತಾನು ಜೀವನದ ಹಾದಿಯಲ್ಲಿ ನಡೆವಾಗ ವಿವಿಧ ಸನ್ನಿವೇಶಗಳಲ್ಲಿ ಮಾಡಿದ ಅಭಿಪ್ರಾಯಗಳನ್ನು ಗೀತೆಗಳನ್ನಾಗಿ ಮಾಡಿಕೊಂಡಿದ್ದಾನೆ. ವೈರಾಗ್ಯಪೂರ್ಣವಾಗಿದ್ದ ಅವನ ಚೇತನದಿಂದ ಅದೇ ಭಾವಪ್ರಧಾನವಾದ ಗೀತೆಗಳು ಹೊರಹೊಮ್ಮಿರುವುದು ಸರಿಯೇ ಹೌದು. ಅವನ ಆಶಯ ತನ್ನ ಗೀತೆಗಳು ಎಲ್ಲರಿಗೆ ಎಚ್ಚರ ಕೊಡುತ್ತಿರಬೇಕೆಂದು. ಅದರಿಂದ ಸಾಮಾನ್ಯರಿಗೂ ಸುಲಭವಾಗಿ ಹಿಡಿಸುವಂತೆ ಸರಳವಾಗಿ ಹಾಡಿದ್ದಾನೆ. ಜೊತೆಗೆ ಮನೋರಂಜನೆಯನ್ನೊದಗಿಸುವುದನ್ನು ಮರೆತಿಲ್ಲ. ಪ್ರತಿ ಗೀತೆಯಲ್ಲೂ ಸ್ವಧರ್ಮದ ಮುದ್ರೆಯನ್ನೊತ್ತಿರುವುದು ನಿಶ್ಚಯ. ಅಂದ ಮಾತ್ರಕ್ಕೆ ಇದು ಆ ಧರ್ಮದವರಿಗೆ ಮಾತ್ರ ಅನ್ವಯಿಸುತ್ತದೆಂಬುದನ್ನು ಸರಿಯಿಲ್ಲ, ಯಾವ ಧರ್ಮದ ಒಳ್ಳೆಯ ತತ್ವವಾದರೂ ನಿರ್ದೋಷಪಥದಲ್ಲಿ ನಡೆಯಲೆತ್ತಿಸುವ ಯಾವೊಬ್ಬನಿಗೂ ಬೇಕೇ ಆಗುತ್ತದೆ. ಆ ಕಾರಣದಿಂದ ಮತವನ್ನು ಬದಿಗಿಟ್ಟು ತತ್ವಜ್ಞಾನ ಸಾಹಿತ್ಯ ದೃಷ್ಟಿಯಿಂದ ಈ ಗೀತೆಗಳನ್ನು ನೋಡಬೇಕು, ಆಗಲೇ ಈ ಗೀತೆಗಳ ಸಾರವು ಸುಂದರವಾಗಿ ಸುಧೆಯಾಗುವುದು.

---------------

## ಮದುವೆ ಸಂಪ್ರದಾಯದ ಹಾಡುಗಳು



ಉಡಿ ತುಂಬುವ ಹಾಡು



ಮದುಮಗಳನ್ನು ಎದುರುಗೊಳ್ಳುವ ಹಾಡು



ಆರತಿ ಹಾಡು

## ತೋರಣ ಮೂಹೂರ್ತದ ಹಾಡುಗಳು





## ಆರತಿ ಶೋಭಾನೆ ಹಾಡುಗಳು







**ವಧೂವರರಿಗೆ ಶುಭಹಾರೈಕೆ**







# ಅನುಬಂಧ

1. **ಹಸೆಯ ಹಾಡು**

ಚೆನ್ನಾದ ಸಾಮಣಿ, ಹರನೇ ನಿನ್ನ ಹರಸುವೆ
ಪದವಿಡೈ ಸುಂದರಾಂಗ– ಹಸೆಮಣೆಗೆ ಹೂಮಾಲಂಗ
ಪದವಿಡೈ ಸುಂದರಾಂಗ. . . . . . . .
ಜಾಜಿಯ ಸಾಮಣಿ, ಈಜಾಣಾ ನಿನಗಾಸುವೆ
ಪದವಿಡೈ ಸುಂದರಾಂಗ–ಹಸೆಮಣೆಗೆ ಹೂಮಾಲಂಗ
ಪದವಿಡೈ ಸುಂದರಾಂಗ. . . . .
ಒಂದುಕಂಬತಕ್ಕ ಪಗಡೆಗಳಿರಿಸಿ, ಪಗಡೇಗೆ ತಕ್ಕಂತ
ಹಸೆಮಣೆಗಳಿರಿಸಿ– ಹಸೆಗೇ ಪಾರ್ವತಿದೇವಿ
ಅರಸುಗಳು ಬತ್ತವರೆಂದು– ಹಸನಾಗಿ ಬರೆದಾರೋ
ನಾಲ್ಕುಮೂಲೆಯಚೌಕ– ಋಷಿಗಳು ಕೂತವರೆ
ಹಸೆಮಣೆಮ್ಯಾಗೆ. . . . .
ಮೂರುಕಂಬತಕ್ಕ ಪಗಡೆಗಳಿರಿಸಿಪಗಡೇಗೆ
ತಕ್ಕಂತ ಹಸೆಮಣೆಗಳಿರಿಸಿ. . . . .
ಏಳು ಕಂಬತಕ್ಕ ಪಗಡೆಗಳಿರಿಸಿ, ಪಗಡೇಗೆ
ತಕ್ಕಂತ ಹಸೆಮಣೆಗಳಿರಿಸಿ. . . . . .

2. **ಬಳೆಗಾರನೊಡನೆ**

ಬಾರಯ್ಯ ಬಳೆಗಾರ, ಊಡಯ್ಯ ಗೋಡೆಯ
ಅಣೆಗೊಂದು ಬಳೆಯ ತೊಡಿರಯ್ಯ. . . .
ಬಳೆಯ ತೊಡಿಸುವಾಗ, ಬಲಚೋರಿ ಸೀನುವನಾರು
ಬಳೆಗಾರ ಶೆಟ್ಟ ಕೈಯ ನೀ ಬಿಡಯ್ಯ. . . .
ಕೈಯ ಬಿಡು ಬಿಡುತೀನಿ, ನಿನ್ನಾನೂ ಬಿಡಾಕಿಲ್ಲಾ–
ರಾಜ ಮೈಸೂರ ತೊರೆದ ಹಾಗೆ. . . .

3. **ಸತಿಪತಿಯರು ತೌರು ಮನೆಯಿಂದ**

ಕಾಂತೆ ನೀ ಮೈಸೂರು ನೋಟಕ್ಕೆ ಪೋಗೋಣ
ಸಂತೋಷದಿಂದಲಿ ಬಾ ಪ್ರಿಯಳೆ– ಅತ್ತೆಯ ಮನೆಗೆಂದು
ಬಿತ್ತರದಿಂದ ಪೋಗಿ, ಹೊತ್ತಾಯ್ತು ರೈಲ್ಗಾಡಿ ಬೇಗನ್ಡೇಳೆ.
ಗಾಡಿಯ ಮಾಡಿರಿ, ಬಾಡಿಗೆ ನೋಡಿರಿ, ಜೋಡಿಸಿ ಸಾಮಾನ ಗಾಡಿಯೊಳು
ಗಾಡಿಯ ಕೂಡುತ, ಬೀದಿಯ ನೋಡುತ–
ನಗು ನಗುತ ನಾವೀಗ ಪೋಗೋಣ. . . . .
ಇಂದು ಪೇಟೇಸ್ಗಾಡಿ, ಕಂಡಿತು ಮೈಸೂರು ಟೇರ್ಷಗಳು
ಮುಂದಕ್ಕೆ ಶ್ರೀರಂಗಪಟ್ಟಣವು– ನಂದಿಯ ವಾನವಾನವು
ಪಕ್ಷಿಯು ಕಂಡಿತು ಮೈಸೂರು ಟೇರ್ಷಗಳು. . . . .
ತಂಟೆಮಾಡುವರು ಪೋಲೀಸ್ನೋರು
ಉಂಟಾದ ಟಕೀಟು ತಾರೆಂದು–

ಗಂಟೆಮೀರಿದಮೇಲೆ ತಂಟೆಯು. . . . .
ಮಡದಿಶ್ರೀರಂಗಪಟ್ಣ, ಬಿಡದೆ ಕ್ಲೋಸ್ ಪೇಟೆ
ಮೊದಲೇ ಬಂದೇವು ಮದ್ದೂರಿಗೆ– ಸ್ಥಡದಗಾಡಿ
ಮಡದಿ ನೀ ಕೇಳೆ ಮದ್ದೂರ. . . . .
ಅರುಳೆಯಚಕ್ಕು ಆನೆಕಲ್ತುಂಬ ಕಂಬಳಿ ನೇಯುವುದು
ಹೆಸರಾಯ್ತು– ಪೆಟ್ಟಿಗೆಗಾಡಿ ಕಟ್ಟಿ ಎಣ್ಣೆ ತುಂಬಾಬಿಟ್ಟಾರು
ಎಂಜಿನ್ಗೆ ನೀರುಬೇಗ–ರೊಟ್ಟಿಕಲ್ ಬಿಡುವಾಗ–
ಕೈ ಪಿಡಿದು ತಂದಾರು ಕಾರೋಟ್ ಗಳ. . . . . .
ಅಲ್ಲಿಯೆ ನೋಡಿ ಸಂಪಂಗಿಸ್ವಾಮೀಯ ಮಠವನ್ನು
ನೇತ್ರಕೆ ಕಾಣುವುದು– ಅರಸಿಯರೆಲ್ಲರು ದೊರೆಮುಪ್ಪು
ಮಾರುವಾಗ ಹರುಷದಿಂದ ನಾವೀಗ ಪೋಗೋಣ. . . . . .

4. **ಹಸೆಯಮೇಲಿರುವ ಗಂಡನ್ನು ಜರಿಯಬೇಡಿ**

ಜರಿಯಬೇಡಿರಿ ಮದುವೆಗಂಡಿನ,
ಧೀರನೊಳಗಂಭೀರನು– ದೀರನಂಥ
ಅಳಿಯನೊಂದಿಗೆ ಕಳಿಸಿ ನಿಮ್ಮಮಗಳನು. . . . .
ಯೇಕಚಕ್ರವ ಆಳ್ವನು, ತಿರುಗಿ ನೋಡೆಲೆ ಭೂಪನ
ಸತ್ಯದಲಿ ಹರಿಶ್ಚಂದ್ರನಂತೆ,–
ವೇಕಚಕ್ರವನಾಳ್ವನು. . . . .
ರೋಪಿನೊಳಗೆ ದೇವೇಂದ್ರನಂತೆ
ಕೋಪದಲಿ ಅಭಿಮನ್ಯುವು– ವೃದ್ಧಿಗೊಳಿಸುವ
ನಿಮ್ಮ ಬಳಗವ ಆತ್ಮ ಒಳಗೆ ಗುಣಶೀಲರು. . . . .

5. **ಹಸೆಯಿಂದ ಎದ್ದಾಗ**

ಆಕೈ ಚಂದ ಈಕೈ ಹಿಡುಕೊಂಡು
ರೇಕುಮಾಣಿಕದ ಹರಳೊತ್ತಿ– ಬೆರಳೊತ್ತಿ
ಸಾಕು ನಮ್ಮರಾಯ ಬಿಡುಕೈಯ. . . . .
ಕೈಯ್ಯ ಬಿಡುವಾರೆ, ನಾ ಬಡವಾರ ಮಗನೇನೆ
ಎತ್ತುಮಾರಿದ ಹಣವಲ್ಲವೇ– ನಿಮ್ಮವರಿಗೆ
ನಾ ಹೊತ್ತಿನ ಬೆಳಕಿನಲ್ಲಿ ಸುರಿಯಲಿಲ್ಲವಾ. . . . .

6. **ಗಂಡು ಹೂವಿನ ಮಂಟಪಕ್ಕೆ ಹೋಗುವಾಗ ಹೇಳುವ ಲಾವಣಿ**

ಒಂದು ಜಿನದಲ್ಲಿ ಮಾಡಬೇಕು ತಾನಪಾನ
ನಿನ್ನ ಮೇಲುಂಟು ಪ್ರೀತಿ ಎನ್ನ ಮನ–
ಉಟ್ಟು ಗಂಡುನಿಂತಿರಬೇಕು ಚಿತ್ರಸನ್ನ
ಮ್ಯಾಲೆ ಒದರಬೇಕು ನೋಡು ಜಮಕನಾನ
ಎಡಕ ಉರಿಯಬೇಕು ನೋಡು ನಂದಾದೀಪ
ಬಲಕೆ ಇರಬೇಕು ನೋಡು ಮಂಚ ಬೇಗ–

ಅಲ್ಲಿ ಈಗಿರಬೇಕು ನೋಡು ಪಚ್ಚೆತೇನ
ಮುಡಿಯಿವೀಗ ಇರಬೇಕು ನೋಡು ನಾರಿ ಬೇಗ–
ನಾನು ಹೊಯ್ತೀನಿ ನೋಡು ಮಹಡಿಮ್ಯಾಗೆ–
ನಿಂತು ಕಂಡು ನೋಡು ದೇವಡಿಮ್ಯಾಗೆ. . . . . .

7. **ಹಳ್ಳಿಗರ ಪ್ರಾರ್ಥನೆ**

ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲೀ
ಎಳ್ಳು ಜೀರಿಗೆ ಬೆಳೆಯೋಳ– ಭೂತಾಯ
ಎದ್ದೊಂದುಗಳಿಗೆ ನೆನೆವೇನು. . . . .
ಎದ್ದೊಂದು ಗಳಿಗೆ ಸಿದ್ದರ ಶಿವಪಾಪಾವ–
ನೆನೆದಾರೆ, ನಾವ್ ಹೊತ್ತಿದ್ದ ಪಾಪ ಪರಿಹಾರ. . . . .
ಬಾರೋ ಬಾರೋ ಕಂದ ಪಾಪಣ್ಣ– ಕಂದಯ್ಯಾ
ನಾವು ಮಾವಯ್ಯನ ಸೀಮೆಗೆ ಹೋಗವ್
ಎಂದು ಹೇಳಿದ ನಿಂಗರಾಜಮ್ಮ

ಸೂರ್ಯನಂಥ ಕಂದನ ಕರ್ಕೊಂಡು, ಕಂದನಿಗೆ ಶೃಂಗಾರಮಾಡಿ ಅರಳೆಲೆ ಮಾಗಾಯಿ ಧರಿಸಿದ ಕಂದನಿಗೆ ಗಿರುಗೆಜ್ಜೆ ಮಾಗಾಯಿ ಧರಿಸಿ, ಎಣ್ಣೆ ಹಾಕಿ ಹಣೆಗಂಟು ಹೂಡಿ, ಪಟ್ಟೆಸೀರೆ ಉಟ್ಕೊಂಡು ಕುಮಲಂಗಿ ರವಿಕೆ ತೊಟ್ಟು, ಕಂದನ ಕರ್ಕೊಂಡು ಒಂಟಂಗಡಿ, ಬಿದರಂಗಡಿ,ಇನಿಕಲ್ಲು ಬೀದಿಯಲ್ಲಿ ಹೊರಟು ಈರನಗೇರಿ ಬೀದಿಗೆ ಬಂದು ಹುಣಸೂರು ಮಾರ್ಗದಲ್ಲಿ ಹೊರಟು ಕೋಟೆಬಿಟ್ಟು ಪೇಟೆಗೆ ಬಂದು ತನ್ನಣ್ಣನ ಪಟ್ಟಣವನ್ನು ನೋಡುತ್ತಾಳೆ. ಬಾಗಿಲಿಗೆ ಬಂದಾಗ ಭಟರು ಅವಳನ್ನು ವಿಚಾರಿಸುತ್ತಾರೆ. ನಿಂಗರಾಜಮ್ಮ ಕಾಗದವೊಂದನ್ನು ತನ್ನಣ್ಣನಿಗೆ ಬರೆದು ಕಳುಹಿಸುತ್ತಾಳೆ. ದೊರೆ ಸೈನ್ಯವನ್ನು ತೆಗೆದುಕೊಂಡು, ಹೋವಿನ ಪಲ್ಲಕ್ಕಿ ಶೃಂಗಾರಮಾಡಿಸಿಕೊಂಡು, ಲಕ್ಷ್ಮೀ ಎಂಬ ತನ್ನ ಕುದುರೆಮೆಲೆ ಕುಳಿತುಕೊಡು ಬಂದು ನೇನು ಅಲ್ಲಿಂದಲೇ ಹೇಳಿಕಳಿಸಿದ್ದರೆ ಆನೆಮೇಲೆ ಹಣಕೊಟ್ಟು, ಗಾಡಿಮೇಲೆ ಜವಳಿ ಕಳಿಹಿಸುತ್ತಿದ್ದೆನಲ್ಲಾ ಎಂದು ಹೇಳುತ್ತಾನೆ. ಆಗ ನಿಂಗರಾಜಮ್ಮ ಹೇಳುತ್ತಾಳೆ, ಅಣ್ಣಯ್ಯ ಹೊನ್ನು ಚಿನ್ನ ತೆಗೆದುಕೊಂಡು ಹೋದರೆ ಮೂರು ದಿನಕ್ಕೆ ಹಾಳಾಗಿ ಎಂದಿನ ಬಾಳು ಎಂದಿನಂತೆಯೇ ಆಗುತ್ತೆ. ಆದ್ದರಿಂದ ನಿನ್ನ ತಾಳಕೇರಿ, ಮದ್ದಾನ ಕೇರಿಯಲ್ಲಿ ಮೂರು ಸೀಮೆ ದಾನಕೊಡಿಸಣ್ಣ ಎಂದು ಹೇಳಿಕೊಳ್ಳುತ್ತಾಳೆ.

ಆಗ ದೊರೆ ಕೋಪಗೊಂಡು, ಏನು ಹೇಳಿದೆ, ಈವತ್ತು ನನ್ನ ಸೀಮೆ ಕೇಳಿದ ನೀನು, ನಾಳೆ ನನ್ನ ಮಡದಿಯನ್ನು ನಿನ್ನ ಗಂಡನಿಗೆ ಕೇಳ್ತೀಯೆ ಎಂದು ಹೇಳುತ್ತ

ಈ ಪಾಪಿ ತಂಗಮ್ಮನ ಮಾರುದ್ದ ಮಂಡೆ ಹಿಡಿದು ಆಚೆಗೆ ತಳ್ಳಿ, ಆ ಪಾಪಿ ಕಂದನ್ನ ಕಿತ್ಕೊಂಡುಸೆರೆಯಲ್ಲಿಡಿರಿ ಎಂದು ಹೇಳುತ್ತಾನೆ.

ಏನೂ ಅರಿಯದ ಆ ಮಗು ತನ್ನ ತಾಯಿಯನ್ನು ಕುರಿತು ಸೆರೆವಾಸ ಮುಗಿದ ಕೂಡಲೇ ಮಾವಯ್ಯನ ತಲೆ ಚೆಂಡಾಡಿ ಬರ್ತೀನಿ, ದು:ಖಿಸದೆ ನೀನು ಹಿಂತಿರುಗು ತಾಯಿ, ಎಂದು ಹೇಳುತ್ತದೆ.

ನಿಂಗರಾಜಮ್ಮ ತನ್ನ ಮುದ್ದು ಕಂದನನ್ನು ಕೊಟ್ಟು, ಕೋಟೆಬಿಟ್ಟು ಈಚೆಗೆ ಬಂದು, ಮೂರು ಕೂಡಿದ ಹಾದಿಗೆ ಬಂದು, ಮೂರು ಸೆರೆ ದೂಳನು ಎರಚುತ್ತ ಅಣ್ಣನ ಪಟ್ಟಣಕ್ಕೆ ಶಾಪಕೊಟ್ಟಳು.

8. **ಹರಸುವ ಹಾಡು**

ಹರಸೀರೆ ನೀವೀಗ, ಸರಸೀಜಾಕ್ಷಿಗೆ ಬೇಗ
ಮುತ್ತುಮಾಣಿಕ್ಯವು, ನವರತ್ನಗಳನಿಟ್ಟ
ಪುಟ್ಟ ಬಾಲೆ ಬಾರೆಂದೆನುತ, ಮತ್ತೆ ಮುತ್ತೈದೆಯರು ಬಂದು . . . . .
ಗಂಧಕುಂಕುಮ, ಪುಷ್ಪದಿಂದ ಬರುತ

ಕಂದನ ಪಡೆದುಕೊಂಡು–
ಸುಕಿಯಾಗಿ ಬಾಳೆಂದೆನುತ. . . .. . . .
ಪರಿಪರಿಬಾಲೆಯರು ಭಾಗ್ಯದ
ಶ್ರೀಲಕ್ಷ್ಮೀಯೆನುತ– ಚಿಕ್ಕಬಾಲೆ ಬಾರೆಂದೆನುತ,
ನಗುತ, ಸೀತಾದೇವಿಯನು. . . . . .

9. **ಜೋಗುಳ ಹಾಡು**

ಇಂದುವದನೆ ಜೋಜೋ, ಚಂದ್ರಶೇಖರನೆ ಜೋಜೋ
ನಂದಿವಾಹನ ಶಿವ ಜೋಜೋ– ಎನುತಲೆ ಇಂದುವದನೆಯು
ತೂಗಿದಳು ಪಂಚಮುಖನೆ ಜೋಜೋ. . . .
ಪಂಚ ಶ್ರೀಭುಜನೆ ಜೋಜೋ ಪಂಚಮುಖದಲ್ಲಿ ಬ್ರಹ್ಮ ಜೋಜೋ
ಎನುತಲೆ ಸಂಚಿವದನೆಯು ತೂಗಿದಳು ಜೋಜೋ. . . . .
ನೀಲಮೇಘನೆ ಜೋ ಜೋ, ನೀಲಪ್ರೀಯನೆ ಜೋ ಜೋ
ನೀಲಮೇಘಶ್ಯಾಮನೆ ಜೋ ಜೋ– ಎನುತಲೆ
ನೀಲವದನೆಯು ತೂಗಿದಳು ಜೋ, ಜೋ. . . .

10. **ಜೋಗುಳಗೀತೆ**

ಕಮಲಾಕ್ಷನೆ ಬೇಗ ಮಲಗು, ಏಕೆ ಅಳುವೆ ಎನ್ನಯ ಬಾಲ. . .
ಚನ್ನಿಗ ನಿನ್ನ ಕರದೊಳು ಕೊಡುವೆನು
ಚಂದದಿ ಈ ಮಲ್ಲಿಗೆ ಹೂವ– ಮಲಗೈ ಬೇಗನೆ
ಕೊಮಲಾಂಗನೆ, ಸರಸೀಜವದನ ನೀನೀಗ. . . . .
ಗುಂಡುಬತ್ತಾಸುಗಳನು ಕೊಡುವೆ
ಸವಿಯಾದ ಫಲಗಳನ್ನು– ಪುಟ್ಟಬಾಯೊಳು ಇಡುವೆ–
ನಿನಗೆ ಬಾಲ ನೀನೀಗ. . . .
ಹಾಲುಸಕ್ಕರೆತುಪ್ಪವ ಕುಡಿಸುವೆ
ಕುವರ ನನೀಗ, ಮೋದದಿ ಕುಡಿ ನಿಂ
ಸುಂದರಬಾಲನೆ, ಚಂಡನು ನೋಡುತ ನೀನೀಗ. . . .
ತೂಗುವ ತೊಟ್ಟಿಲಿನೊಳಗೆ ಮಲಗಿಸಿ
ಜೋಗುಳ ಪಾಡುತಾ ನಾನೀಗ– ತೂಗುವೆ ಮಲಗೈ
ಕೋಮಲಬಾಲನೆ, ಚಂಡನು ನೋಡುತ ನೀನೀಗ. . . . .

11. **ಮಂಗಳ ಗೀತೆ**

ಮಂಗಳಾರತಿ ನಮ್ಮ ಸಾಂಬಮೂರ್ತಿಗೇ
ಜಯಮಂಗಳಾರತಿಯೆತ್ತಿರಿ, ಅಂಗಜವರದನಿಗೆ. . . . .
ಗೋವುಕಾಯ್ದವಗೆ, ಗೋಪಿಯ ಕಂದನಿಗೆ
ರಾವಣೇಶನ ತಲೆಯ ಚೆಂಡಾಡಿದ ರಾಮದೇವರಿಗೆ. . . . .
ಪಕ್ಷಿವಾಹನಿಗೆ, ಲಕ್ಷ್ಮಯ ರಮಣನಿಗೆ
ಮಾವಕಂಸನ ಮರ್ಧಮಾಡಿದ ಮದಕಜನಕನಿಗೆ. . . ..
ಸೀತೆ ಮೋಹನಗೆ, ಕೌಸಲ್ಯಾಪುತ್ರನಿಗೆ

ತುಲಸೀವನದೊಳು ಭಕ್ತರ ಸಲಹುವ–
ಮದನಾಜನಕನಿಗೇ– ಮಂಗಳಂ, ಮಂಗಳಂ

12. **ಅಣ್ಣ ತನ್ನ ತಂಗಿಯನ್ನು ಮದುವೆಗೆ ಕರೆಯುವಿಕೆ**

ಬಂದ ಅಣ್ಣಯ್ಯನಿಗೆ ನಿಂದು ನೀರ ಕೊಟ್ಟು
ತಂಗಿಯು ಕೇಳುತ್ತಾಲೇ– ಅಣ್ಣಯ್ಯ
ಸುಖವಯ್ಯ ನಮ್ಮ ತೌರಲ್ಲಿ. . . . .
ಸು:ಖವೇನೇಳಲಿ ಶ್ರೀ ಗೌರಿ ತಂಗಮ್ಮ
ಎಚ್ಚೈಕ ಕಿರಿಯವರ ಮದುವೀಗ– ತಂಗಮ್ಮ
ನಿನ್ನೆಲ್ಲ ಬಾಂಧವರು ಬರಬೇಕು.
ಅವರೆ ಊರದು ಬಂದ ತುಗರಿ ಮುರಿಯೋದು ಬಂದ
ಮರಹೊಲದ ಕಳ್ಳೆ ಕಿಳಬಂದ– ಅಣ್ಣಯ್ಯ
ನಾನ್ಹೇಗೆ ಬರಲಯ್ಯ ಮದುವೀಗ. . . . .
ಅವರೆ ಊರಿಸಿ ಕೊಡುವೀ ತುಗರೀ ಮುರಿಯಿಸಿ ಕೊಡುವೀ
ನಾಎರೆ ಹೊಲದ ಕಳೆಯ ಕಿಳಿಸಿಕೊಡುವಿ– ತಂಗಮ್ಮ
ನೀ ದೇವರು ತರಬೇಕು ನಡೆಯಮ್ಮಾ. . . . .
ಆರೆಮ್ಮೆವಳಗಾಂತಿ ಆರೆಮ್ಮೆ–
ನೂರುಕರು ನೂರು– ಅಣ್ಣಯ್ಯ
ನಾ ಹೇಗೆ ಬರಲಯ್ಯ ಮದುವೀಗ. . . . .
ಕಾಯಗೊಲ್ಲನ ಕೊಡುವೀ ಕಡೆಯ ಗೊಲ್ಲತಿ ಕೊಡುವೀ
ಅಡಿಗೆ ಮಾಡಾಗ ಮಡದೀಯ ಕಳುತೀನಿ– ತಂಗಮ್ಮ
ಏಳು ತಂಗಮ್ಮ ಮದುವೀಗ. . . . .
ಅಕ್ಕನಿಗೆ ಸೀರಿಲ್ಲ ಮಕ್ಕಳಿಗೆ ಒಡವೆ ಇಲ್ಲ
ನಮ್ಮ ಚಿಕ್ಕ ಭಾವಾಜೀಗೆ ಕುದುರಿಲ್ಲ
ಅಕ್ಕನಿಗೆ ಸೀರೆ ಕೊಡುವೀ ಮಕ್ಕಳಿಗೆ ಒಡವೆ ಕೊಡುವೀ
ನಿಮ್ಮ ಚಿಕ್ಕ ಭಾವಾಜಿಗೆ ಕುದುರೇಯ– ಹಿಡಿತರುವೆ
ಇನ್ನೇಳು ತಂಗಮ್ಮ ಮದುವೀಗ. . . . .
ಮಾಳೀಗೆ ಮಲೀಗೆ ತೂಗು ಮಂಚದ ಮೇಲೆ
ಮಾಸೀಕ ಮುತ್ತು ಬಿಗಿಯವರ– ಅತ್ತ್ಯಮ್ಮ
ನಾ ಹೋಗಿ ಬರ್ತೀನಿ ತೌರಿಗೆ. . . . .
ಮಾಳೀಗೆ ಮಲ್ಲೀಗೆ ತೂಗುಮಂಚದ ಮೇಲೆ
ಮಾಸೀಕ ಮುತ್ತು ಬಿಗಿಯವರ– ಅತ್ತ್ಯಮ್ಮ
ನಾ ಹೋಗಿ ಬರ್ತೀನಿ ತೌರಿಗೆ. . . . .
ಮಾಳೀಗೆ ಮೇಲಿರುವ ಮಾವಯ್ಯ ನೀವ್ ಕೇಳಿ
ನಮಗೆ ಬಣ್ಣ ಬಂಗಾರ ಕೊಡಿ ಬನ್ನೀ– ಮಾವಯ್ಯ
ನಾ ಹೋಗಿ ಬರುವೇನು ತೌರೀಗೆ. . . .
ಹೋದಾರೆ ಹೋಗಮ್ಮ ಹೋಗಿ ನೀ ನಾಳೆ ಬಾರಮ್ಮ

ನಿನ್ನ ಮಾಗಾಯಿ ಜೋಕೆ ಮಗ ಜೋಕೆ– ಸೊಸೆಮುದ್ದಿ
ನೀ ಹೋಗಿನ್ನು ನಾಳೆ ಬರಬೇಕು. . . .
ಉಪ್ಪರಿಗೆ ಮೇಲಿರುವ ಅತ್ತ್ಯಮ್ಮ ನೀವು ಕೇಳಿ
ನಮಗೆ ಎಣ್ಣೆ ಬಾಚಣಿಗೆ ಕೊಡಿಬನ್ನೀ– ಅತ್ತ್ಯಮ್ಮ
ನಾ ಹೋಗಿ ಬರುವೇನು ತೌರೀಗೆ. . . .
ಹೋದಾರೆ ಹೋಗಮ್ಮ ಬಾಚಿನ ತಡಿಬೇಡ
ಮಾಗಾಯಿ ಜೋಕೆ ಮಗ ಜೋಕೆ– ಸೊಸೆ ಮುದ್ದಿ
ಇಂದಿದ್ದು ನಾಳೆ ಬರಬೇಕು. . . .
ದೊಡ್ಡ ಮಾವನ ಹಟ್ಟೀಲಿ ಚಿಕ್ಕ ಮಾವನ ತೊಟ್ಟೀಲಿ
ವೈಕಾರದಲ್ಲಿ ಒರಗಿರುವ– ಪುರುಷಾರೆ
ನಾ ಹೋಗಿದ್ದು ಬರುತೀನಿ ತೌರೀಗೆ. . . .
ಹೋದಾರೆ ಹೋಗೆಣ್ಣೆ ಹೋಗಿ ನೀ ಇರಬೇಡ
ನೀ ಬರಬೇಕು ಮಾವಯ್ಯನ ಅರಮನೆಗೆ– ಬೆಲೆ ಹೆಣ್ಣೆ
ಬರುತಿದ್ದ ಕುದುರೇಯ ಕಳುಹೇನು. . . .

13. **ಅತ್ತಿಗೆ ನಾದಿನಿಯರ ಸಂಭಾಷಣೆ**

ಹಿತ್ತೀಲ ಮನೆಯವಳೆ ಹೀರೆಕಾಯಿ ನೆರಿಯವಳೆ
ಸುತ್ತದಾಳಿಂಬೆ ಮನೆಯವಳೆ– ಸಂಗಾತಿ
ಸಂದ್ಹೇಗೆ ಬಂದ್ಹೋಗೆ ಸ್ವಪ್ನಾಗೆ
ನನಗೆ ಸಂಗಾತಿ ನನಗಿಂತು ಗುಣಕಾತೀ
ಮಾತಾಡುವಂದಾರೆ ಮನೆ ದೂರ– ಸಂಗಾತಿ
ಸಂದ್ಹೇಗೆ ಬಂದ್ಹೋಗೆ ಸ್ವಪನಾಕೆ. . . . .
ನಾನು ನನ ಸಂಗಾತಿ ಸಂದ್ಹೇಲ್ಲಿ ನೀರಿಗ್ಹೋಗಿ
ಅಂಜುಬೇಡ ಸಂಗಾತಿ ಅಳುಕುಬೆಡ– ಸಂಗಾತಿ
ಗುಂಡಲಪೇಟೆ ಗುರುಕಾರ– ನಮ್ಮಣ್ಣ
ಚೆಂದಕ ಮುಂಗೈಯ್ಯ ಹಿಡಿದಾನೋ ನಮ್ಮಣ್ಣ
ಗುಂಡಲಪೇಟೆ ಗುರುಕಾರ. . . . .
ನಾನು ನನ ಸಂಗಾತಿ ಸಂದ್ಹೇಲ್ಲಿ ನೀರಿಗ್ಹೋಗಿ
ಸಿಂಗಲ್ಲುನೂರ ಹೊಸಕೆರೆ– ಏರಿಮೇಲೆ
ಸಂಗಾತಿಸೆರಗ ಹಿಡಿದಾನೋ– ನಮ್ಮಣ್ಣ
ಸಿಂಗಲ್ಲುನೂರ ಹೊಸಕೆರೆ ಏರಿಮೇಲೆ. . . .
ಅತ್ತಿಗೆ ನಾದಿನೀರು ಹೊತ್ತುನಲ್ಲಿ ನೀರಿಗ್ಹೋಗಿ
ಅತ್ತಿ ಮರ ಸಾಕ್ಷಿ ಜಲ ಸಾಕ್ಷಿ– ಅತ್ತಿಗಮ್ಮ
ನೀವು ಹೆಣ್ಣಾ ಹೆತ್ತಾಗ ಕೊಡಬೇಕು. . . . .
ನಾನು ಹೆಣ್ಣಾ ಹೆತ್ತಗ ಗಂಡು ಮಗನ ಪಡೆದಾಹ
ಧರ್ಮಾರ್ಥ ಧಾರೆ ಎರೆವೇನೋ. . . . . .
ಅಣ್ಣಾನ ಮನೆಗ್ಹೋಗಿ ಹೆಣ್ಣೀಗೇ ನಾನಾಗಿ

ಕನ್ನಾಡಿಗೋಡೆ ಮರೆಯಲ್ಲಿ– ಅತ್ತಿಗಮ್ಮ
ಕಣ್ಣಾಮುಚ್ಚೇದ ಪುರುಷರಿಗೇ– ನಾದಿನೀ
ನಿನ್ನ ರಾಯರ ಕಿರುತಂಗಿ– ನಾದಿನೀ
ನಿಮ್ಮಣ್ಣ ಚೆನ್ನುಗುರ ಬೆಸಕೊಳ್ಳೀ. . . .
ಅಣ್ಣಯ್ಯ ಅಣ್ಣಯ್ಯ ಸಣ್ಣಪಾಗಿನ ದೊರೆಯೇ
ನಿಮ್ಮೆಣ್ಣೆ ನಮಗೆ ಸಲಬೇಕು. . . . .
ಈಗ ಬರೋ ತಂಗಮ್ಮ ಆಗೇನು ಮಾಡುತಿದ್ದೆ
ನನ್ನೇ ಪಟ್ಟಣದ ದೊರೆ ಬಂದು– ಕಂದಯ್ಯನಗೇ
ಹೊನ್ನುವ್ರೋಲೆ ಹಾಕೀ ಹೋಗವರೆ– ತಂಗಮ್ಮ
ನಾನೇನು ಮಾಡಲೀ ನಿಜ ತಂಗಿ. . . . . .
ಅಪ್ಪಾ ಮಗನೇ ಒಪ್ಪೀದ ಮಗಳಿಲ್ಲ
ನೆನ್ನೆ ಪಟ್ಟಣದ ದೊರೆ ಬಂದು– ಹೋಗಿದ್ದರಂತೆ
ನಾನೇನು ಮಾಡಲೀ ನಿಜ ಮಗನೇ. . . . .
ಅಂತಾ ಹೆಣ್ಣಾ ತರುವ್ರೋದು ಬಲ್ಲೇ
ಅಂತಾ ಹೆಣ್ಣಾ ಬಿಡುವ್ರೂದ ನಾ ಬಲ್ಲೇ
ನೀಸುಮ್ನ ಬಾರಮ್ಮ ಮನಗೀಗ– ಅಂದಾನ
ಚಾವಡಿ ಒಳಗೆ ಪಗಡೆ ಆಡ ಆಡಾದು ಒಲ್ಲೇ
ನೀಸುಮ್ನೆ ಬಾರಮ್ಮ ಮನೆಗೀಗ. . . .. . . .

14. **ಜೋಗುಳ ಗೀತೆ**

ಯಾವ ಪಾಪಿ ದೃಷ್ಟಿ ತಾಗಿತೋ ಗೋಪಾಲ ಕೃಷ್ಣಾಗೆ
ಎಂತ ದೃಷ್ಟಿ ತಾಗಿತೋ–
ತೊಡೆಯ ಮೇಲೆ ಹಾಲು ಕುಡಿಯುವ, ಕಡೆದ ಬೆಣ್ಣೆಯ
ಹಚ್ಚುವ ಮಗುವಿಗೆ ಯಾವ ಪಾಪಿ ದೃಷ್ಟಿ ತಾಗಿತೋ. . . . . .
ಹೊಲ್ಲಿ ಒದಿಸಿ ಮೊಲ್ಲೆ ಮುಡಿಸಿ
ಕಲ್ಲುವ ಸಕ್ಕರೆ ಕೈಯಲ್ಲಿ ಪಿಡಿವಾಗ
ಯಾವ ಪಾಪಿ ದೃಷ್ಟಿ ತಾಗಿತೋ ಗೋಪಾಲಕೃಷ್ಣಾಗೆ. . . .. .
ಕಣ್ಣೀಗೆ ಕಪ್ಪನಚ್ಚಿ ಹಣೀಗೆ ತಿಲಕನಿಟ್ಟು
ಕಾಲೀಗೆ ಗಗ್ರ ಕಟ್ಟಿ ನಡೀಗೆ ಗೆಜ್ಜೆ ಕಟ್ಟಿ
ಆಡುವಾಗ ಯಾವ ಪಾಪಿ ದೃಷ್ಟಿ ತಾಗಿತೋ ಗೋಪಾಲಕೃಷ್ಣಾಗೆ. . . . .
ಭರಣಿ ಬಾಚಣಿ ಕೋಲು ಗಿಲ್ಕಿಗಣನೆಲ್ಲಾವ
ಇಟ್ಟು ಕೊಂಡಾಡುವ ಮಗುವಿಗೆ ಯಾವ ಪಾಪಿ ದೃಷ್ಟಿ ತಾಗಿತೋ. . . . .
ಅಂಬೆಗಾಲಿಕ್ಕಿಕೊಂಡು ಅಂಗಳದೊಳಗಾಡುವ–
ಮಗುವೀಗೆ ಯಾವ ಪಾಪಿದೃಷ್ಟಿ ತಾಗಿತೋ. . . . .
ಚೆನ್ನಾದ ತೊಟ್ಟಿಲಿಗೆ ರನ್ನಾದ ಸರಪಾಣಿ ಕೃಷ್ಣಾನ ಮಲಗಿಸಿ
ರಂಭೆಯರೆಲ್ಲರು ಜೋಗುಳ ಪಾಡುವಾಗ. . . .
ಗೋಲಿಗೆಜ್ಜುಗ ಚಾಲೀಚೆಂಡು

ಚಿನ್ನೆ ಕೋಲಾಡುವ ಮಗುವೀಗೆ. . . .

15. **ಆರತಿಯ ಗೀತೆಗಳು**

ಎತ್ತುವೆನಾರತಿಯ ಶ್ರೀ ಸತ್ಯಭಾಮೆ ಬೆಳಗಿದಳಾರತಿಯ. . . ..
ಗೋಕುಲದೊಳಗೆ ಹುಟ್ಟಿದನಂತೆ ಗೋವುಗಳನ್ನು ಕಾಯ್ದನಂತೆ
ಮಧುರೆಯ ಶ್ರೀಕೃಷ್ಣ ಪತಿಯಾಗಬೇಕೆಂದು ಎತ್ತಿದಳಾರತಿಯ. . . ..
ಶ್ರೀ ಸತ್ಯಭಾಮೆ ಎತ್ತಿದಳಾರತಿಯ. . . . . .
ಮಧುರಾಪುರಕೆ ಹೋಗಿ ಮಾವ ಕಂಸನ ಕೊಂದು
ಮಧುರೆಯ ಶ್ರೀಕೃಷ್ಣ ಪತಿಯಾಗಬೇಕೆಂದು ಎತ್ತಿದಳಾರತಿಯ
ಶ್ರೀ ಸತ್ಯಭಾಮೆ ಎತ್ತಿದಳಾರತಿಯ. . . . . .
ಗೊಲ್ಲರಮನೆಯೊಳು ಪಾಲುಬೆಣ್ಣೆಯ ಕದ್ದು
ಮಧುರೆಯ ಶ್ರೀ ಕೃಷ್ಣ ಪತಿಯಾಗಬೇಕೆಂದು ಎತ್ತಿದಳಾರತಿಯ
ಶ್ರೀ ಸತ್ಯಭಾಮೆ ಎತ್ತಿದಳಾರತಿಯ. . . . . .

16. **ಪೂಜೆಮಾಡೋಣ ಬೇಗಬನ್ನಿರಿ ಶಂಭುಶಂಕರ ಗೌರಿಗೆ**

ಪರಮೇಶ್ವರ ಪಟ್ಟದರಾಣಿಗೆ. . . .
ಮುತ್ತುಮೂಗುತಿ ಕೆಂಪುಕೆತ್ತಿದ ರತ್ನತಂದಿಡಿ ಗೌರಿಗೆ
ಪರಮೇಶ್ವರಪಟ್ಟದರಾಣಿಗೆ. . . . ಪೂಜೆಮಾಡೋಣ ಬೇಗಬನ್ನಿರಿ
ಮರುಗಮಲ್ಲಿಗೆ ದವನ ತಂದಿಡಿ ಗೌರಿಗೆ
ಪರಮೇಶ್ವರ ಪಟ್ಟದರಾಣಿಗೆ. . . .
ಪಟ್ಟಸೀರೆಯು ಜಾರಿಕುಪ್ಪುಸ ಮುತ್ತು ತಂದಿಡಿ ಗೌರಿಗೆ
ಪರಮೇಶ್ವರ ಪಟ್ಟದರಾಣಿಗೆ. . . .

## ಸೋಬಾನೆ ಹಾಡುಗಳು

**(ಧರ್ಮಸ್ಥಳದಲ್ಲಿ ಚಿಸೌ। ಶ್ರದ್ಧಾ ಮತ್ತು ಚಿ। ಅಮಿತ್‌ರವರ ವಿವಾಹ ಸಮಾರಂಭದ ಜನವರಿ 16,17,18–1–2001)**

1. ವಂದನಂ ಭಕ್ತಿ ವಂದನಂ ಖ ವಂದನಂ ಭಕ್ತಿ ವಂದನಂ
2. ಬೀಗರು ಬೀಗರಿಗೆಲ್ಲಾ ಬಿಲ್ಲಾಳ ಕಳುವ್ಯಾರೇ (ಬಿಲಹರಿ ಏಕತಾಳ)
3. ಬಂಗಾರವಿಡಬಾರದೆ ನಿನಗೊಪ್ಪುವ ಬಂಗಾರವಿಡಬಾರದೆ (ಕಲ್ಯಾಣಿ ಏಕತಾಳ)
4. ಇಂದು ನಾವು ತಂದಿರುವೆವು ಮಂಗಳಾರತಿ (ಆನಂದ ಬೈರವಿ ಏಕತಾಳ)
5. ಆ ನಾಡ ಅರಶಿನ . . . ಈ ನಾಡ ಅರಸಿನ (ಆ ಭೋಗಿ . . . . ರೂಪಕ)
6. ಬಟ್ಟಲೊಳಗಿರುವ ಪುಟ್ಟಮಣಿ ಬಾಸಿಂಗ (ತಿಲಂಗ್. . . ರೂಪಕ)
7. ಎದ್ದು ಬಾರಮ್ಮ ನಿನ್ ಹೆಜ್ಜೆಯ ನೋಡೆನು (ಶುದ್ಧ ಸಾವೇರಿ . . . . ಏಕ)
8. ಬಾರೋ ಹಸೆಮಣೆಗೆ . . . . . ಸುಂದರಾಂಗನೇ ( ಮೋಹನ)
9. ಹಸೆಮಣೆ ಏರಿದ ನವವಧುವರರಿಗೆ (ಕಲಾಶ್ರೀ ಆದಿತಾಳ)
10. ವರವ ಕೊಡೆ ತಾಯೇ ವರವಕೊಡೇ (ಚಂದ್ರಕೌಂಸ ... . . . . ತ್ರಿರೂಪಕ)
11. ಮಂಗಳಕರ ಈ ಶುಭದಿನದೀ ಕಲ್ಯಾಣಂ ಶುಭಕಲ್ಯಾಣಂ . . .(ಖರಹರ)
12. ಕಲ್ಯಾಣಂ ಶುಭ ಕಲ್ಯಾಣಂ

13. ಬುದ್ಧಿ ಮಾತು ಹೇಳಿದರೆ ಕೇಳಬೇಕಮ್ಮ (ಮಾಯಾಮಾಳವ. . . . ಗೌಳ)
14. ಶ್ರೀ ಗುರುರಾಯನ ಬೇಗದಿ. . . ಸೋಬಾನೆ (ಬೃಂದಾವನ ಸಾರಂಗ)

**ಬಾಸಿಂಗ**

ಸಾವಧಾನದಿ ಸತಿ ಸಂಹಿತೆಗಿಂದು ।
ಬಾಸಿಂಗ ಕಳುಹಿದರ್ ದೇವಿಯರ್‌ಗಿಂದು॥
ನಾಗಲೋಕದ ನಾರಿಪದ್ಮಮ್ಮ ಹರಸಿ।
ಕಳುಹಿದ ಪದ್ಮರಾಗದ ಬಾಸಿಂಗ॥
ಬಲುಭೇರಿ ದುಂದುಭಿರವ ಕೇಳಿತಲಿ।
ದೇವಿ ಜ್ವಾಲ್ಮಮ್ಮನ ಸ್ವರ್ಣಬಾಸಿಂಗ॥
ಕಂದ ನಿನಗೆಂದು ಕೂಶ್ಮಾಂಡಿನಿ ತಾಯೆ ।
ಕಳುಹಿದರಿಂದು ಮರಕತದ ಬಾಸಿಂಗ ॥
(ನಿತ್ಯ ಮಂಗಳೆ ನಿರ್ವಿಕಾರಚಿತ್ತೆಗೆ
ಸಿದ್ಧಾಯಿನಿ ಕಳುಹಿದ ಸಿದ್ಧಿಯ ಬಾಸಿಂಗ)
ಭೂರಿವಿಡಾಯದಿ ಸಿದ್ಧಾಯಿನಿತಾಯಿ ।
ಹರಸಿ ಕಳುಹಿದ ಸಿದ್ಧಿಯ ಬಾಸಿಂಗ ॥

**ಅರಸಿನ**

ಹಿತ್ತಾಳೆ ಚಿತ್ತಾರದಿ ಚೆನ್ನದ ಅರಶಿನ
ಬೆಳ್ಳಿ ಬಟ್ಟಲಿನಾಗ ಗಂಧದೆಣ್ಣೆ ತಂದು
ಹಚ್ಚಿದರಾಗ ಚೆಲುವೇರು ಅರಶಿನವ ॥ ಹಚ್ಚಿದ ॥
ಎಳೆ ಬಾಳೆ ಸುಳಿಯಂಥ ಬೆರಳುಳ್ಳ ಐದೇರು
ನಾಜೂಕಲಿ ನೆರೆದರು ಅರಶಿನಕೆ
ಮಾವಿನ ಸುಳಿಯಂಥ ಬೆರಳುಳ್ಳ ನಾರಿಯರು
ಚಿನ್ನದುಂಗುರುವ ಕಳಚಿದರು
ಚಿನ್ನದಂಥ ಹಡುಗಿ ಕೆಂಪು ಕೆನ್ನೆಗೆ
ಹಚ್ಚಿ ಚೆನ್ನದ ನವಿಲ ಗರಿಯಾಗ

**ಹೆಣ್ಣು–ಹಸೆಗೆ**

ಹಸೆಗೆಬರುತ್ತಾಳೆ ನಮ್ಮ ಸಿರಿಗೌರಿ ಈಗ ।
ಹರಸಿರಾಕೆಯ ಅನುರಾಗದಲಿ ಬೇಗ ।
ಹಸೆಗೆ ಬರುವೋಳ ಹೆಸರೇನು ಕುಲವೇನು ?
ಎನ್ನುವಿರೇನು ? ನೀವೆಲ್ಲ ನಾಬಲ್ಲೆ ॥ಪ॥
ಸರ್ವಹಿತ ಬಯಸೋ ಸಂಹಿತೆ ಈಕೆ
ಅರಳ ಶೆಟ್ಟರ ಘನವೆತ್ತಕುಲದೋಳು ।
ರತ್ನದಂತಹ ರತ್ನಮ್ಮರ ಹುಡುಗಿ । ಹಸೆಗೆ ಬರುತಾಳೆ ॥1॥
ಹಸೆಗೆ ಬರುವಾ ಕನ್ಯೆ ನಡೆಹೇನು ನುಡಿಹೇಗೆ ಎನ್ನುವಿರೇನೂ...?।
ಮಗುವಿನ ಮನದಾಕೆ? ಮಧುರಮಾತಿನ ಮಲ್ಲಿ ।
ಮಲ್ಲಿಗೆಯಂಥ ಮೆಲ್ಲನೆ ಬಿಳಿ ಹುಡುಗಿ ॥2॥

ಹಸೆಗೆ ಬರೋ ಹುಡುಗಿ ಮನಸ್ಥೇಗೆ ಮೊಗಹೇಗೆ ಎನ್ನುವಿ....?।
ಬಿನ್ನಾಣವಿನಿತಿಲ್ಲ । ಬಿದಿಗೆ ಚಂದ್ರನ ಮೊಗ
ಕುಡುಮದ ಕಣ್ಣಾಗಿ ಕಡೆತನಕ ಬಾಳೋಳು
ಬಲದ ಕಾಲಿಟ್ಟು ಬರುತಾಳೆ।
ಹೇಗೆ ಬರುತಾಳವಳು ಎಲ್ಲಿಗೆ ಬರುತಾಳೆ ಎನ್ನುವಿರೇನೋ....?।
ಹೆಜ್ಜೆ ಗೆಜ್ಜೆನಾದ ಒಜ್ಜೆಸೀರೆನೆರಿಗೆ
ಝಲ್ಲನೆ ಚಿಮ್ಮುತ ವಯ್ಯಾರ ಬೀರುತ್ತ
ನವಿಲೀನ ನಡಿಗೇಲಿ ಬರವ್ಹೋಳೂ ।
ಅರಳಿದ ಮಲ್ಲಿಗೆ ಕುಡುಮದ ತೋಟದಿ
ಪರಿಮಳಬೀರಲಿ ಅನವರತ ।

**ಹುಡುಗ ಹಸೆಗೆ**

ನಗು ಮೊಗದ ಬಲು ಸೊಬಗ ಹಸೆಗೆ ಬಾರೊ ।
ಧೀಮಂತ ನಡಿಗೆಯಲಿ ಹಸೆಯ ನೇರೋ ।
ದಾಂಪತ್ಯ ಜೀವನದ ನೌಕೆಯಾ ನಾವಿಕನೆ ।
ಕಾದಿಹಳು ಸಂಗಾತಿ ತ್ವರೆಯ ಮಾಡೋ ।
ಧರ್ಮಾರ್ಥಕಾಮಗಳ ಪುರುಷಾರ್ಥ ಹುಟ್ಟು ।
ಪರಮ ಪುರುಷಾರ್ಥವೇ ಕೊನೆಗದರಗುಟ್ಟು ।
ಸಪ್ತರಾಗದ ತೆರದಿ ಒಂದಾಗಿ ಒಲಿದು ।
ಸಪ್ತಪದಿಯಲಿ ನಡೆಸು ಕೈಯಹಿಡಿದು
ಏಳು ಬೀಳುಗಳೆಂಬ ಸಂಸಾರ ನೌಕೆ
ಸಾವಧಾನದಿ ನಡೆದು ಆನಂದ ದೆಡೆಗೆ ।
ದೈವದೇವರ ಕೃಪೆಯ ಚುಕ್ಕಾಣಿಯಾಗೆ ।
ಜೊತೆಗೆ ಬರುವಳು ಹೆಣ್ಣು ಬೆಂಗಾವಲಾಗಿ ।

**ಅರತಿ–ಹೆಣ್ಣು (ಮದುಮಗಳಿಗೆ)**

ಹತ್ತು ಮಂದಿ ಸೇರಿ ಶುಭದ ಹಾಡಹಾಡಿ
ಆರತಿ ಬೆಳಗೋಣ ।
ಹೊನ್ನೆ ಬೆಳಕಿನ ಕುಡಿ ಕಣ್ಣಬೆಳಕಿಗೆ ಸಾಟಿ
ಕುಡುಮದ ಕನ್ನೆಗೆ ಕನಸಿನ ಚೆಲ್ವೆಗೆ ।
ಮಲ್ಲಿಗೆ ಮನಸಿನ ಮೊಲ್ಲೆಯ ಹುಡುಗಿಗೆ
ಬೆಳ್ಳನೆ ಬೆಳಕೀವ ಬೆಳ್ಳಿಯ ಆರತಿ ।
ಬಪ್ಪಕಷ್ಟಗಳೆಲ್ಲಾ ನಷ್ಟವಾಗಲಿ ಎಂದು ।
ತುಪ್ಪದ ಬತ್ತೀಲಿ ತಪ್ಪದೆ ಬೆಳಗೋಣ ।
ಅರಿವೆನೆಚ್ಚರದಲ್ಲಿ ನೀಬಾಳೆನುತಾ
ಅರೆಳೆಯಬತ್ತೀಲಿ ಚಂದದ ಸುಖಬಾಳು ನಿನದಾಗಲೆಂದು ಅಂದದ ಆರತಿ ।
ಕುಂದದ ಬೆಳಕಲ್ಲಿ ನಂದದ ಆರತಿ

ರತ್ನವರ್ಮ ಪತ್ನಿ ರತ್ನಮ್ಮರ ಪೌತ್ರಿಗೆ
ರತ್ನದ ಕಾಂತೀಲಿ ಬೆಳಗುವ ಆರತಿ ।
ರತ್ನವರ್ಮ ಸತಿ ರತ್ನಮ್ಮರೀರ್ವರ
ಕಣ್ಣ ಗೊಂಬೆಗೆ ರತ್ನದ ಆರತಿ ।
ಧರ್ಮದಾ ನೆಲೆಗಟ್ಟು ನೇಮದಾ ಬೀಡೆಂದು
ಅರಸುತ್ತ ಬಂದಿಲ್ಲಿ ನೆಲೆಯಾದ ಪ್ರಭುವೆ ।
ಶಿವನಾಜ್ಞೆಯನು ತಮ್ಮ ಶಿರದಲ್ಲಿ ಹೊತ್ತು
ಧರ್ಮರಕ್ಷಣೆಗಾಗಿ ಬಂದ ಆಹೊತ್ತು
ಧರ್ಮದೇವತೆಗಳಿಗೆ ಅಣ್ಣಪ್ಪನೊತ್ತು
ಧರೆ ಸ್ವರ್ಗವಾಯ್ತಂದು ಎಲ್ಲರಿಗೆ ಗೊತ್ತು ।
ಧರ್ಮಚಾವಡಿಯಾಯ್ತು ನೆಲ್ಯಾಡಿ ಬೀಡು
ಪುಣ್ಯದ ನೆಲೆಯಾಯ್ತು ನಮ್ಮ ಈನಾಡು
ಅನ್ನದಾನದಿ ನೀಗಿ ಹೊಟ್ಟೆಯಾಪಾಡು
ಬೆಳ್ಳಿ ಬೆಟ್ಟವದಾ ಕತ್ತಲೆಯ ಕಾಡು
ನಿತ್ಯ ರುದ್ರವು ಪೂಜೆ ಉತ್ಸವಾದಿಗಳು
ನಿತ್ಯ ನಂದಾದೀಪ ನೇಮ ತಂಬಿಲವು
ಸತ್ಕರ್ಮ ಸವಿಮಾತು ನಿತ್ಯ ಸದಾಗಾನ
ಬನ್ನ ವಿಲ್ಲೆಲ್ಲೆಲೂ ನಿನ್ನ ಗುಣಗಾನ ।

## ವಧುವಿನ ಸ್ವಗತ

1. ಊರೆಲ್ಲಾ ಗುಲ್ಲು ಅಬ್ಬಬ್ಬಾ ಮಳ್ಳು ನಾನೇನು ಗೊತ್ತಿರದ ಮೊದ್ದು ಹುಡುಗಿ.
2. ನನ್ನ ಭಾವನೆ ಇಂದು ಮದುವೆ ಆಗೋ ಗಂಡು ನನಗೇನು ಗೊತ್ತು ಈನಂಟು ಗಂಟ್ ಬಿತ್ತು.
3. ನಾನೊಂದು ಮಾತನ್ನು ಆಡಿಲ್ಲ ಈ ತನಕ ಬರಿನಗೆಯ ಬೀರಿದೆನು ಎದುರಾಗಲವನು.
4. ಕರವಿಡಿದು ಮಾತಾಡೋ ಕೆಚ್ಚೆದೆಯು ಎನಗಿಲ್ಲ, ಬರಿ ಮಾತನಾಡಿದರೆ ಮುತ್ತು ಸುರಿಯುವುದೇನು.
5. ಕೈ ತುಂಬಾ ಸಿಹಿತಿಂಡಿ ಸಿಹಿ ಸುದ್ದಿ ನಿನಗೆನಲು ಎರಡು ಕರವಿಡಿದೊಮ್ಮೆ ಕುಲುಕಿದರೆತಪ್ಪೆ?
6. ಸೊಂಟವಿಡಿದೆಲ್ಲೆಲ್ಲೊ ಸುತ್ತಾಡೋ ಜೋಡಿಗಳ ಸೊಕ್ಕು ಕಂಡು ಕಂಪಿಸುದೆನ್ನೆದೆಯು
7. ಕಾರಲ್ಲಿ ಮಗ್ಗುಲಲಿ ಕುಳಿತೊಮ್ಮೆಸುತ್ತಿದ್ದೆ ದೊಡ್ಡತಪ್ಪಯ್ತಪ್ಪ । ಬೊಬ್ಬೆಸಾಕಾಯ್ತು
8. ಹೊಟೇಲು ಪಾರ್ಕುಗಳ ಸುತ್ತಿಕೆಟ್ಟೆವೆ ನಾವು, ಗುಟ್ಟಾಗಿ ಪಿಸುಗುಟ್ಟಲನುವಿಲ್ಲವೇ.
9. ಒಬ್ಬಂಟಿತಾನೆಂದು ಮನೆಗೆ ಬಂದೊಂದೊಮ್ಮೆ ಉಭಯ ಕುಶಲೋಪರಿಯು ಬೇಡವೇನು?
10. ಅಪ್ಪ ಡ್ಯೂಟಿಗೆ ಹೋಗೆ ಅಮ್ಮ ಬಸದಿಗೆ ಹೋಗೆ ತಮ್ಮ ಮನೆಯಲ್ಲಿರಲಿಲ್ಲವೆನೆ ನನ್ನತಪ್ಪೆ. (ಮನೆಯ ಏಕಾಂತದ ಪ್ರೀತಿಯಲಿ ಬಳಿಬಂದು ಸುಳಿಗೂದಲಲ್ಲೊ ಕೈಯಾಡಿಸಿರಲು ಅಷ್ಟಕ್ಕೆ ಕಣ್ಣ ಕೂರಂಚಿನಲ್ಲಿ ಚುಚ್ಚಿ ಕೊಲ್ಲುವುದೇಕೆ ನಗೆ ಎಂಬ ಚೆನ್ನದಾ ಸೂಜಿ ।
11. ಅಬ್ಬಬ್ಬಾ ಸಾಕಾಯ್ತ ಈಗೋಳು ನೋಡಾಯ್ತು ಒಮ್ಮೆ ಧಾರೆಯ ನೀರು ಕೈಮೇಲೆ ಬಿದ್ರಾಯ್ತು
12. ಒಳ್ಳೆ ಊಟವನುಂಡು ಹೊಟ್ಟೆ ತುಂಬಿದ ಬಳಿಕ ನಮ್ಮ ಹರಸಿ ತಾವು ಹೋಗೆ ಬಿಡುತ್ತಾರೆ ಅಯ್ಯೋ ಅಷ್ಟರ ತನಕ ಕಾಯಬೇಕು.

**ಸರ್ವಧರ್ಮ ಸಮಭಾವದ ಹಾಡು**

ವಂದನಂ ಭಕ್ತಿ ವಂದನಂ ಭಕ್ತಿ ವಂದನಂ
ಪ್ರಥಮ ವಂದನ ಗಣಪತಿ ಜ್ಞಾನದಾತಾ ಸದ್ಗುರುನಾಥಾ
ಆದಿಶಕ್ತಿ ದೇವಿ ಶ್ರೀದುರ್ಗೆ ಮಂಜುನಾಥ ಚಂದ್ರನಾಥ
ಬ್ರಹ್ಮಾಣಿ ಸರಸ್ವತಿ ಶಾರದೆ ಸೌಭಾಗ್ಯದಾತೆ ವರಲಕ್ಷ್ಮಿ
ಗಿರಿಜಾ ಸಾವಿತ್ರಿ ಗಾಯತ್ರಿ ಪದ್ಮಾಂಬಿಕಾ ದೇವಿ ಜಗದಂಬಿಕಾ ॥ ವಂದನಂ॥
ಲಕ್ಷ್ಮೀರಮಣ ನರಸಿಂಹ । ಪದ್ಮಾವತೀಶ ಶ್ರೀನಿವಾಸ
ರುಕ್ಮಿಣಿ ವಲ್ಲಭ ಶ್ರೀಧರ । ಗೋವಿಂದ ಮಾಧವ ಕೇಶವ
ಜಾನಕಿ ಜೀವನ ರಘುರಾಮ । ರಾಧಾ ಮೋಹನ ಯದುನಂದನ
ಕಾರ್ತಿಕೇಯ ಶ್ರೀ ಸುಬ್ರಹ್ಮಣ್ಯ । ಹರಿಹರ ತನಯ ಅಯ್ಯಪ್ಪ ಸ್ವಾಮಿ ॥ ವಂದನಂ॥
ಸರ್ವಸಂಗ ಪರಿತ್ಯಾಗಿ ತೀರ್ಥಂಕರ । ಜಿನಕರ ಗುಣಕರ ಮಹಾವೀರ
ಸರ್ವಧರ್ಮ ಸಾರ ಸತ್ಯಧರ್ಮ ಶಾಂತಿ ಪ್ರೇಮ ಆನಂದ ಸಾಕಾರ
ಹನುಮ ಭೀಮ ಮಧ್ವವ್ಯಾಸಗುರು । ರಾಘವೇಂದ್ರ ಯತಿ ರಮಣಗುರು
ದತ್ತ ದಿಗಂಬರ ಕನಕ ಪುರಂದರ । ನಿತ್ಯದಾಸಾರ್ಚಿತ ನಾಮಗುರು.

**ತವರುಮನೆಯ ಕರೆಬರುವ ಹಾಡು**

(ಬಿಲಹರಿ ಸರಿಗಪದಸ ಸನಿದಪಮಗರಿಸ ಏಕತಾಳ)
ಸಾಸಾ ಸರಿಗಪ ಮಾ । ಗಾಪಾ ದಪದಪದರಿ ಸಾನೀ
ಬೀಗರು ಬೀಗರಿಗೆಲ್ಲಾ ಬಲ್ಲಾಳ– ಕಳುವ್ಯಾರೆ
ದಾಸನಿ ದಾ ಪಾ ಮಗರೀ
ಪಿಲ್ಲಿಯ ಕಾಲ ಮಗಳೀಗೇ
ಗಾಪದ ಸಾಸಾ ಸಾರಿಗ ರೀ ಸಾ
ಪಿಲ್ಲಿಯ ಕಾಲ ಮಗಳು ರಾಜಕುವರಿಗೆ
ರೀಸನಿ ದಾಪ ಮಗರಿಗ ಸಾ
ಪಲ್ಲಕಿ ಕೊಟ್ಟು ಕಳುವ್ಯಾರೇ
ಗಾಗಾ ಗಾ ರಿಗಾ ರೀಗಾರೀಸಾ ರೀ
ನೆಂಟ ನೆಂಟರಿಗೆಲ್ಲಾ ಎಂಟಾಳ ಕಳುವ್ಯಾರೆ
ಗಾಪದ ಸಾ ರಿ ದಪದಾಪ
ಮಿಂಚಿಕೆ ಕಾಲ ಮಗಳೀಗೆ
ಸಾಸಾ ಸನಿದಪ ಪನಿದಪ ಮಗರೀ
ಮಿಂಚಿಕೆ ಕಾಲ ಮಗಳಿಗೆ ಮುತ್ತೈದೆಗೆ
ರೀಪಾ ಮಗರೀ ಗಾರೀಸಾ
ದಂಡಿಗೆ ಕೊಟ್ಟು ಕಳುವ್ಯಾರೆ
ಪಾಪಾ ಪಾಮಗಾ ಪಾ ದಾದಾ ದಾಸನಿ ದಾಪಾ
ತೆಂಕಲ ಕೇರಿಯ ಕೆಂಚೇರ ಕರೆಸವ್ವಾ
ಪಾದಪ ಸಾಸಾ ಸಾರಿದ ಸಾ
ಅಂಚು ಗುಪ್ಪಟ್ಟೆ ಸೆರಗಿನ
ಸಾರಿಸ ನೀ ದಸನಿದ ಪಾ
ಅಂಚು ಗುಪಟ್ಟೆ ಸೆರಗಿನ ಸೀರೆನುಟ್ಟು

ರೀ ಪಾ ಮಗರೀ ಗಾ ರೀ ಸಾ

ಕೆಂಚೆರ ಸೋಬನಕೆ ಕರೆಸವ್ವ

ಸಾಸಾ ಸರಿಗಪ ಮಾ । ಗಾಪಾ ದಪದಪದರಿ ಸಾನೀ

ಬಡಗಲ ಕೇರಿಯ ಬೆಡಗೇರ ಕರಸವ್ವ

ದಾಸನಿ ದಾ ಪಾ ಮಗರೀ

ಬಡಲು ಗುಪ್ಪಟ್ಟೆ ಸೆರಗಿನ ।

ಗಾಪದ ಸಾಸಾ ಸಾರಿಗ ರೀ ಸಾ

ಬಡಲು ಗುಪ್ಪಟೆ ಸೆರಗಿನ ಸೀರೆನುಟ್ಟು

ರೀಸನಿ ದಾಪ ಮಗರಿಗ ಸಾ

ಮಡದಿರ ಸೋಬನಕೆ ಕರಸವ್ವ ॥

## ಜಿನನಾಮವೆಂಬ ಬಂಗಾರವಿಡಬಾರದೆ

(ಕಲ್ಯಾಣಿ ಸರಿಗಮಪದನಿಸ ಏಕತಾಳ)

ಪಾಪಮ । ರೀ.ಗಾ।ಗಾ ಮದ।ನಿದ ಪಮ। ಪಾಪಮ ರೀ ಗಾ ಸಾ

ಬಂಗಾರ ವಿಡಬಾರದೆ ನಿನಗೊಪ್ಪುವ ಬಂಗಾರವಿಡಬಾರದೇ

ನೀನೀ ನೀನಿ ದನಿಸನಿ ದಾಪಾ। ಸಾಸಾನಿ ಪಾಪಾ ಮದಪಮ ಗರಿಸಾ

ಜಿನನಾಥನ ದಿವ್ಯ ಮಂಗಳ ನಾಮವೆಂಬ ಬಂಗಾರ ವಿಡಬಾರದೆ...

ಗಾಗಾಗ ಗಾ.ರೀ ಮಾಮಾಮ ಮಾಗ । ದಾದಾದ ದಾದನಿ ದಾ, ಪಾಪಾಮಾ

ಮುತ್ತೈದೆ ತನವೆಂಬ ಮುಖದಲಿ ಕುಂಕುಮದ । ಕಸ್ತೂರಿಯ ಬೊಟ್ಟನಿಡೆ ನಿನ್ನ ಹಣೆಗೆ

ದಾದಾದ ದಾದನಿ ದಾ,ಪಾ (ಮಗರಿಸ)

ಕಸ್ತೂರಿಯ ಬೊಟ್ಟನಿಡೇ

ಮಾದಾ ಸಾಸಾ ನಿರಿಸನಿದಪಮಾ ಮಾಮಾ ಮಾಗರಿ ಗಾ

ಹೆತ್ತವರ ಕುಲಕೆ ಕುಂದುಬಾರದ ಹಾಗೆ ಮುತ್ತಿನ ಮೂಗುತಿಯನಿಡೇ

ನೀರೀ ಪಮಗರಿ ಸಾ.ಪಾಗಮ ಪಾಪಾ ಪಾಗಮ ದಾದಾ ನೀನೀ ನೀದನಿ ಸಾ ಪಾ ಸಾ ನೀ

ಕರ್ತೃ ಪತಿಯ ಮಾತು ಮೀರಬಾರದು ಎಂಬ ಮುತ್ತಿನೋಲೆ ಕೊಪ್ಪನಿಡೆ ನಿನ್ನ ಕಿವಿಗೆ

ನೀನೀ ನೀದನಿ ಸಾ ,,

ಮುತ್ತಿನೋಲೆ ಕೊಪ್ಪನಿಡೆ

ನಿರಿಸನಿದಾಪಾ ಮದಪಮ ಗಾರಿ ಮಾಮಾ ಮಾಗರೀ ಸಾ ನೀರೀ ಪಮಗರಿ ಸಾ

ಹತ್ತು ಮಂದಿಕೈಲಿ ಹೌದೆನಿಸಿಕೊಂಡು ಮಸ್ತಕದ ಮುಕುಟವಿಡೇ ॥

ಕರೆದೊಬ್ಬರಿಗೆ ಅನ್ನವಿಕ್ಕುವೆನೆಂಬ

ಹರಡಿ ಕರಿಕಣವನಿಡೇ ನಿನ್ನ ಕೈಗೆ ॥

ಹರಡಿ ಕಂಕಣವನಿಡೆ ॥

ಹೀನ ಗುಣವ ಬಿಟ್ಟು ಹಿತದಲ್ಲಿದ್ದೇನೆಂಬ

ನೇಮದ ಮಡಿಯನುಡೆ ॥2॥

## ಮುತ್ತೈದಿಗೆ ಮಂಗಳಾರತಿ

(ಆನಂದ ಭೈರವಿ ಏಕತಾಳ)

ಸಾಸ ಪಾಪಾ ಪಾದಾಪಾಮಾ, । ಪಾದನೀದಪಾ,

ಇಂದು  ನಾವು ತಂದಿರುವೆವು ಮಂಗಳಾರತೀ

ಪಾಸಾ ನಿದಪ । ಗಮಪಮ ಗ ರೀ

ಚಂದ್ರಜಿನನ ಹರಕೆ ಪಡೆದ । ಮಂಗಳಾಂಗಿಗೇ

ಸಗರಿಗ ಮಪದಪ । ನೀದಪ ಮಗ, ಗಾ

ಮುತ್ತಿನಂತ ಮಾತು ನುಡಿಯೆ । ಮುತ್ತಿನಾರತೀ ತ್ರೈ

ಗಮನಿಪ  ಗರೀ । ಮಾಗರಿ ಗಸಾ,

ರತ್ನದಲ್ಲಿ ರಮಿಸಲೆಂದು ರತ್ನದಾರತೀ ॥1॥

ಸುಜ್ಞಾನಿಯಾಗಿ ಬಾಳಲೆಂದು ಜ್ಞಾನದಾರತೀ

ತೂಕ ತಪ್ಪದಾ ನಡೆಗೆ ತುಪ್ಪದಾರತೀ ॥2॥

ಅಂಧಕಾರ ಕಳೆಯಲೆಂದು ದೀಪದಾರತೀ

ಮಂದಿ ಮನವ ಗೆಲ್ಲಲೆಂದು ಮಾಣಿಕ್ಯದಾರತೀ ॥3॥

## ಮದುಮಗಳಿಗೆ ಎಣ್ಣೆ ಹಚ್ಚುವ ಹಾಡು

(ಆಭೋಗಿ  ಸರಿಗಮದಸ ರೂಪಕ)

ಸಾಗಾರಿ ಗಾಮಾದಾ ಸಾದಾಮ ಗಾರೀ

ಆ ನಾಡ ಅರಸೀನ ಈ ನಾಡ ಅರಸಿನ

ಸಾರೀಗ ಮಾದಾಮ ಗಾರೀ ಸಾ,

ಗೋವೀ ಮಲೆನಾಡಾ ಅರಸೀನ

ದಾಸಾರಿ ಮಾ  ಗಾಮಾದ ಸಾ

ಗೋವೀ ಮಲೆನಾಡಾ ಅರಸಿನವ ಅವರಪ್ಪ

ಚಾಗಾರೀ ಸದಾಮ ಮಾಗಾರೀ

ಹಚ್ಚಡವೆ ಕೊಟ್ಟು ತರಿಸ್ಯಾರೆ

ಸಾರೀಗ ಮಾಗಾರೀ ಗಾ  ಸಾ

ಮಾಮಾಗ ಮಾ ಗಮದಾಮ ಮಾ

ಎಣ್ಣೆ ಅರಸಿನ ಹೋಗಿ ಸರಸವಾಡುತ್ತಾವೆ

ಸಾರೀಗ ಮಾದಾಮ ದಾ,,

ಮದುಮಗಳ ವದನಗುವುದಾವೆ

ದಾಸಾಸ ದಾಮಾದ ದಾಸಾದ ಸಾ

ಅರಸೀನ ಹಚ್ಚಿಗಂಬೋ ಅರಸರ ಮಗಳೇ ಬಾರೆ

ದಾಗಾರೀ ಸಾದಾಮಾ ಮಾಗಾರೀ

ಅರಸಿನಕೂ ನಿನಗೂ ಸೊಗಸೇನೇ

ಸಾರೀಗ ಮಾಗಾರೀ ಗಾ ಸಾ

ಸಾಗಾರೀಗಾ । ಗಾಮಾದ ಮಾ

ಎಣ್ಣೆಯ ಹಚ್ಚಾಲೆ ಹನ್ನೊಂದ್ನೆ ದಿನದಾಗೆ

ಗಾಮಾರ ದಾ ಸಾದಾ ಮ ಗರೀ

ಎಣ್ಣೆಯ ಹಚ್ಚೋ ಐದೇರು

ದಾಸಾರಿ ಮಾ ಮಾದಾಮ ಗಾರೀ

ಎಣ್ಣೆಯ ಹಚ್ಚೋ ಐದೇರು ಮದುಮಕ್ಕಗೆ

ಮಾಮಮ ಗಾರೀ ಗಾರೀಸಾ

ಎಣ್ಣೇ ಹಚ್ಚ್ಯಾರೋ ಒಲುವೀಲಿ

**ಮುತ್ತೈದಿ ಹಾಡು**

(ತಿಲಂಗ್ ಸಗಮಪನಿಸ ಸಾನಿಪಮಗಸ ರೂಪಕ)

ಸಾಗಾಮ ಪನೀ ನೀಸಾ ನೀಸಾ ನೀಸಾ ನೀಸಾ ನೀಪಾ

ಬಟ್ಟಲೊಳಗಿರುವ ಪುಟ್ಟ ಮಣಿ ಬಾಸಿಂಗ

ಪಾನೀಸ ನೀಪಾ ಗಾಮಾಪ ಗಾ

ಈಗ್ಯಾರು ಕೊಟ್ಟು ಕಳುವ್ಯಾರೇ

ಪಾನೀಸ ಗಾ ಗಾಗಾಮ ಗಾಸಾ

ಈಗ್ಯಾರು ಕೊಟ್ಟು ಕಳುವ್ಯಾರೆ ಹುಮ್ಮುಚದ

ಪಾನೀಸ ನೀಪಾ ಗಾಮಾಪ ಗಾ

ಆಕ್ಕ ಪದ್ಮಮ್ಮ ಕಳುವ್ಯಾರೇ

ಸಾ,, ಮಾ,ಪ ಗಾ,, , , । ಗಮಪ ನೀ , ಪಾ,, ।ಮಗ

ಸೋ ಬಾ ನಾ, ಸೋ. . ಬಾ ನಾ

ಮಾಮಾಗ ಮಾ, ಮಾಮಾಪ ಮಾಗಾ,

ಅಕ್ಕ ಪದ್ಮಮ್ಮ ಏನೆಂದು ಕಳುವ್ಯಾರೆ

ಗಾಮಾಪ ನೀಪಾ, ನೀನೀಸ ।

ಮೂರೇದಿನ ಮುಡಿದು ಮೆರಿಲೆಂದು

ನೀ ನೀ ನೀ ಸಾ,, ಗಾ, ಸಾ, ನೀ ಪಾ , ,

ಮೂರೇದಿನ ಮುಡಿದು ಮೆರಿಲೆಂದಾರಂಭದಿನಕೆ

ಪಾನೀ,ಸ ನೀಪಾ, ಗಾಮಾಪ ಗಾ,

ಚಿನ್ನದ ಕಂಭಕೆ ರಥವೇರೀ

ಮಾಮಾಮ ಮಾಪಾಮ ಗಾ ೀ ೀ। ಗಮಪ ನೀನೀ ಸಾ ೀ ೀ (ನೀಪ)

ಸೋಬಾನ ಸೋಬಾ ನಾ ಸೋಬಾನ ಸೋಬಾನಾ

ಹರಿವಾಣದೊಳಗಿರುವ ಹಳದಿ ಮಣಿ ಬಾಸಿಂಗ । ಈಗ್ಯಾರು ಕೊಟ್ಟುಕಳುಹ್ಯಾರೆ॥

ಈಗ್ಯಾರು ಕೊಟ್ಟು ಕಳುಹ್ಯಾರೆ ಹುಮ್ಮುಚದ । ತಾಯಿ ಪದ್ಮಮ್ಮ ಕಳುಹ್ಯಾರೆ ॥ ಸೋಬಾನೆ॥

ಕಣ್ಣಿನೊಳಗಿನ ಸಣ್ಣ ಮಣಿ ಬಾಸಿಂಗ । ಈಗ್ಯಾರು ಹರಸಿ ಕಳುಹ್ಯಾರೆ । ಈಗ್ಯಾರು ಕೊಟ್ಟು

ಕಳುಹ್ಯಾರು । ಹುಮ್ಮುಚದ ಅಮ್ಮಾರು ಹರಸಿ ಕಳೀಸ್ಯಾರೆ ॥

ಅಮ್ಮಾರು ಪದ್ಮಮ್ಮ ಏನೆಂದು ಕಳಿಸ್ಯಾರೆ

ಮೂರೇದಿನ ಮುಡಿದು ಮೆರಿಲೆಂದೇ

ಮೂರೇ ದಿನ ಮುಡಿದು ಮೆರಿಲೆಂದಾರಂಭ ದಿನಕೆ ।

ಅಮ್ಮಾರು ಹರಸಿ ಕಳಿಸ್ಯಾರೆ ॥ ಸೋಬಾನ ॥

ತಾಯಿ ಪದ್ಮಮ್ಮ ಏನೆಂದು ಕಳುಹ್ಯಾರೆ।

ಮೂರೇ ದಿನ ಮುಡಿದು ಮೆರಿಲೆಂದೇ ।

ಮೂರೇ ದಿನ ಮುಡಿದು ಮೆರಿಲೆಂದಾರಂಭಾ ದಿನಕೆ ।

ರತ್ನದ ಕಂಭಕೆ ರಥವೇರಿ ॥ ಸೋಬಾನ ॥

**ವಧುವನ್ನು ಹಸೆಗೆ ಕರೆವ ಹಾಡು**

(ಶುದ್ಧ ಪಾವೇರಿ ಸರಿಮಪದಸ ಏಕತಾಳ)

ದಾಸಾ ದಾಸಾ ಮಪದಪ ಮರಿಸಾ,

ಎದ್ದು ಬಾರಮ್ಮನಿನ್ ಹೆಜ್ಜೇಯ ನೋಡೇನು

ಚಾಸಾರೀ ಮಾ ಪಾದಮ ಪಾ,

ಹೆಗ್ಡೆರ ಮಗಳೆ ಬಾರಮ್ಮ

ಪಾಪಾಪಪಾ ಮಪದಪ ಮರೀ

ನಿನ್ ಕಾಲ್ಗಳ ನೋಡೇ. . . ನು

ದಾಸಾರಿ ಮಾ ಪಾದಮ ಪಾ,

ಎದ್ದು ಬಾ ಹಸೆಯ ಜಗಲೀಗೆ

ದಾಮಪ ದಾ ೀ ೀ , ದಾಮಪದಾ । ಮದಸರಿ ಸರಿಸದ ೀ ಪಾ ೀ ಮಾೀ ರೀ

ನಡೆದು ಬಾರಮ್ಮ ನಿನ್ ನಡಿಗೆಯ ನೋಡೆನು । ನಡೆಯಲಿ ಕುಂಕುಮ ಉದುರುತ

ದಾದಗ ಮಾಮಾ ಪಾಪಾ, ರೀ, ದಾಸಾರೀಮ, ಪಾದಮ ಪಾ,

ನಡೆಯಲಿ ಕುಂಕುಮ ಉದುರುತ ತಾಯಮ್ಮಿ ನಡೆದು ಬಾ ಹಸೆಯ ಜಗಲೀಗೇ

ಸಾದಸರೀ, ದಾಮಪ ದಾೀ ೀ । ಸಾ ಸಾ ದಾ, ಮಾ ರೀ ರೀ ರೀ

ಅತ್ತಲಿಂದ ಕರೆತನ್ನಿ ತೆಕ್ಕೆಯ ನೆರಿಗ್ಯೋಳೆ ಚಿತ್ತಾರ ನೆಂಬಿ ನಗುವ್ರೋಳೆ

ದಾದಾ ಮಾಮಾ ಪಾಪಾ ರೀ । ದಾಸಾ ರೀಮಾ ಪಾರಮಪಾ ೀ

ಚಿತ್ತಾರ ನೆಂಬಿ ನಗುವ್ರೋಳ ತಾಯಮ್ಮಿಯ ಅತ್ತಲಿಂದ ಹಸೆಗೆ ಕರೆತನ್ನಿ

ಸಾರೀ ಪಾ ೀ ಮಾರೀರೀ । ಸಾರೀ ಪಾ, ಮಾ ರೀ ರೀ

ಒಳಗಿಂದೇ ಕರೆತನ್ನಿ ಕವಳೀಗೆ ನೆರಿಗ್ಯೋಳ

ಮಾಮ ಮಾಮಾ ಪಾದಮ ಪಾ, ।

ದವಳಾರನೆಂಬ ನಗುವ್ರೋಳ

ದಾದಾ ಮಾಮಾ ಪಾಪಾ ರೀ, ।ದಾಸಾರೀ ಮಾ ಪಾದಮಪಾ,

ದವಳಾರನೆಂಬ ನಗು ವ್ರೋಳ ತಾಯಮ್ಮಿಯ ಒಳಗಿನಿಂ ಹಸೆಗೆ ಕರೆತನ್ನಿ

ದಾ ಸಾ ಸಾ ರಿಸದಾ, ಮಪ। ದಾಸಾಸಾ ರಿಸದಾ , ,

ಚಿನ್ನಾದ ಬಾಚಣಿಗೇ ಕನ್ನೇರು ತಕ್ಕೊಂಡು

ಮಾಮ ಪಾಪದಸ ದಸದಾೀ ಪಾೀ

ಕೆನ್ನ ಹಿಂಗೊರಳ ಬಿಗಿಬಾಚಿ

ಚಾದಾ ಮಾಪ,, ಪಾಪಾ, ರೀ । ದಾ ಸಾ ರೀ ಮ ಪಾದಮಪಾ,

ಕೆನ್ನ ಹಿಂಗೊರಳ ಬಿಗಿಬಾಚಿ ಕಟ್ಯಾರಲ್ಲೊ ಪುಟ್ಟಮಲ್ಲಿಗೆ ಮುಡಿಸ್ಯಾರೆ ॥

## ವರನನ್ನು ಹಸೆಮಣೆಗೆ ಕರೆವ ಹಾಡು

(ಸರಿಗಪದಸ ಮೋಹನ)

ಸಾಸಾಸ ರಿಗ ಸರಿ ಗಾೀ । ಪಾ ಪ ದಾೀ ಪ ರೀ

ಬಾರೋ ಹಸೆಮಣೆಗೆ ಸುಂದರಾಂಗನೇ

ದಾದಾದ ಗಾರೀ ಸಾೀ ।

ಬಾರೋ ಹಸೆಮಣೆಗೆ ಬೇಗ

ಗಾಪಾಪ ಪಾಪಗ ಗಾಪಾಪ ದಾ । ಗಾ ಪಾ ದ ಸಾ ರಿ ದ ಪಾೀ ೀ

ಬಂಗಾರ ಮಂಟಪವ ಶೃಂಗಾರ ಮಾಡಿ ಸಂಗೀತವ ಪಾಡೇ

ಸಗರಿಗ ರಿಸದಾ ದರಿಸರಿ ಸದಮ ಪಸದಸದಪಗ ಸಾದಪ ಗರಿಸ

ರಾರೀಸದಾೀ ಪಾಸಾದ ಪಗರೀ । ಸರಿಗಪ ದಸ ಪದ ಸಾ ದಪಗರಿಸೀ

ಸಂಗೀತವ ಪಾಡಿ ಭೃಂಗನಾಯಕಿಯರು ಸುರಚಿರಭರಣಂಗಳ್ ಲಾಲಿಸೋದೇವಾ ॥

## ವಧೂವರರಿಗೆ ಹಸೆಮಣೆಯ ಹಾಡು

(ಕಲಾಶ್ರೀ ಸಗಪದನಿಸ ಪನಿದಪಗಮರಿಸಾ ಆದಿ)

ಗಾಪದ ನೀನೀ ದಾಪಗ ದಾ ಪಾ

ಹಸೆಮಣೆಯೇರಿದ ನವವಧುವರರಿಗೆ

ಗಪದಪ ಗರಿರೀ ಗಮರಿ ನಿ ಸಾ

ಹರಸುತ ಗೈಯುವ ಮಾಣಿಕ್ಯದಾರತಿ

(ಸಮೂಹ) ಮಾ ಮಾ ಮಾ ಗಾರಿ ಪಾಪಾಪಾ ಗಾಪಾ

ರತ್ನದಾರತೀ ಮಾ ಣಿಕ್ಯದಾರತಿ ಚೆಲ್ವ

ದಾದಾದಾ ನೀದ ಪಾಪಾ ನೀ

ಮುತ್ತಿನಾರತಿ ನವ ರತ್ನದಾರತೀ

ಮಾ ದಾ ಮಾ ಮಾ ಗಮರಿಗ ಪಾಪಾ

ಮಾತಾಪಿತರ ಬಂಧು ಬಾಂಧವರ

ನೀನೀ ಪನಿಪಗ ರೀ ರೀಗಪ ರೀಸಾ

ಹಿರಿಯರ ಹರಸಿಕೇ ತುಂಬಿದ ಆರತಿ

ನೀನೀ ಸಾಸಾ ನೀಸಗರೀ

ಮಂಗಳವಾದ್ಯನಿ ನಾದದೊಡನೆ ಬಲು

ಸಾನಿಪಗಪರೀ ಗಮರಿ ನಿಸಾ

ಹಿಗ್ಗಿನಿಂದೆತ್ತುವ ವಾತ್ಸಲ್ಯದಾರತೀ ||1|| (ಸಮೂಹ)

ಚಿರಕಾಲ ದಾಂಪತ್ಯ ಸೌಭಾಗ್ಯ ತರಲು

ಅಕ್ಷತೆ ಸಿಂಚನ ಚಂದನಾದಾರತಿ

ಚತುರ್ವಿದ ಪುರುಷಾರ್ಥ ಸಪ್ತಪದಿಯೊಳಿರೆ

ಅೈದೈದೈದೇರು ಗೈದಾರು ಆರತಿ ||2||

## ವಧೂವರರಿಗೆ ಶುಭಕೋರುವ ಹಾಡು

ಸಾಸಾ I ಸಾಸಾನಿ I ದೀಸಾನೀ ದಾಮಾಗ

ವರವ ಕೊಡೇ ತಾಯೇ I ವರವ ಕೊಡೇ

ಗಾಮಾ । ದಾಮಾಗ। ಮಾ ಗಾ । ನಿ ಸಾ

ಕುಡುಮದ ಕನ್ನೆಗೆ ವರವಕೊಡೇ ।ಸಿರಿಸಂಪನ್ನೆಗೆ I

ಸಾಗಾಮ I ದಾನೀ ನಿಪಾನೀಸಾ

ಸೆರೆಗೊಡ್ಡಿ ಬೇಡುವೆ ವರವ ಕೊಡೇ ॥॥

ಮಾಮಾಗ I ಮಾ I ದಾದಾಮ I ದಾ

ಆರಶಿನ ಮೆತ್ತಿದ ಹೊಳೆಯುವ ಕರಿಮಣಿ

ನೀನೀ I ನೀನೀ I ಸಾದಾನೀಸಾ

ಬೆಳಗಿರುವಂಥಾ ವರವ ಕೊಡೆ

ಗಾಗ I ಸಾನೀ I ನೀಸಾನೀ । ದಾಮಾಗ

ಬೇಡಿದ ಬಡವರಿಗೆ ಕರೆದು ಮೃಷ್ಟಾನ್ನವ

ಗಾಮಾ I ದಾಮಾಗ I ಮಾಗಾ । ನಿಸಾ

ನೀಡುತ್ತಲಿರುವಂಥಾ ವರವ ಕೊಡೆ ॥॥

ಸಾಗಾಗ I ಮಾಮಾ I ಗಾಮಾಗ । ಸಾನೀ

ಹಿಂಡು ಬಳಗವು ಹೆಚ್ಚಾಗಿ ಮನೆಯಲ್ಲಿ

ಸಾದಾ I ಮಾಗಾ I ಗಾಮಾಗ । ಮಾಃ
ಎಂದೆಂದಿಗಿರುವಂಥ  ವರವ ಕೊಡೆ
ನೀನೀನಿ I ದಾದಾದಾ I ಗಾಗಾಗಿ । ಪಾನಿ
ಶಾಲ್ಯಾನ್ನ ಪಂಚಾಮೃತ ಭಕ್ಷ ಪರಮಾನ್ನ
ಗಾಮಾ I ದಾಮಾಗ I ಮಾಗಾನಿ । ಸಾ
ಯಾವಾಗಲಿರುವಂಥ ವರವ ಕೊಡೆ ॥
ಮಾಳಿಗೆ ಮನೆಯಲ್ಲಿ ರನ್ನ ತೊಟ್ಟಿಲ ಕಟ್ಟಿ
ಜೋಗುಳವಾಡುವ ವರವ ಕೊಡೇ
ಬಾಗಿಲು ತೋರಣ ಮದುವೆ ಮುಂಜಿಯು ನಿತ್ಯ
ದೇವಕಾರ್ಯ ನಡೆವ ವರವ ಕೊಡೆ ॥
ಕರುಣಾವಾರಿಧಿ ನಿನ್ನ ಚರುಣಾಂಬುಜಗಳಿಗೆ
ಶರಣಾಗಿರುವಂಥ  ವರವ ಕೊಡೆ
ಶರಣಾದರೆ ನಮ್ಮ ಕುವರಿಯ ಕಾಯುವ
ಭಾರನಿನಗೆಂಬುವೆ ವರವ ಕೊಡೆ ॥

## ವಧುವಿಗೆ ಶುಭಕೋರುವ ಹಾಡು

(ಖರಹರ...)
ಪಾಪಾ ಪಾಮ ಮಗಪಮ ಗರಿಗಸ ಸಾರೀರಿಗಾ ಮಪ ಗರಿಗರೀಸಾ
ಮಂಗಳ ಕರ ಈ ಶುಭದಿನದೀ ಕಲ್ಯಾಣಂ ಶುಭ ಕಲ್ಯಾಣಂ
ಪಾದಸನಿಗಪ ಪಾದಾಸ ಗರಿಗಸ
ಮಂಗಳ ವಾದ್ಯ ನಿನಾದದೊಡನೆ ಶುಭ ಕಲ್ಯಾಣಂ ಶುಭ ಕಲ್ಯಾಣಂ ॥
ನಗೆಮುಖ ಚೆಲುವ ಅಮಿತನಿಗೆ । ತವರಿನ ಕಣ್ಮಣಿ ಶ್ರದ್ಧಳಿಗೆ
ಶ್ರೀ ಗುರುಹಿರಿಯರ ಸಮ್ಮುಖದೀ ಕಲ್ಯಾಣಂ ಶುಭ ಕಲ್ಯಾಣಂ ॥
ವೇದ ಘೋಷದಿಂ ಕಲ್ಯಾಣಂ । ಅಗ್ನಿ ಸಮ್ಮುಖೇ ಕಲ್ಯಾಣಂ ।
ಸ್ವಸ್ತಿ ಮಂತ್ರದಿಂ ಕಲ್ಯಾಣಂ । ದೇವ ಕರುಣೆಯೊಳು ಕಲ್ಯಾಣಂ ॥
ತಂದೆ ತಾಯಿಯರ ವಾತ್ಸಲ್ಯ ಬಂಧು ಬಾಂಧವರ ಹರಸಿಕೆಯು
ಅಕ್ಷತೆ ಸಿಂಚನ ವಾಗಿರುವ । ಕಲ್ಯಾಣಂ ಶುಭ ಕಲ್ಯಾಣಂ
ರತ್ನ ಮಂಟಪದೊಳು ಕಲ್ಯಾಣಂ । ರಾಜ ಸಭೆಯೊಳು ಕಲ್ಯಾಣಂ
ಗಾನಮೇಳದೊಳು ಕಲ್ಯಾಣಂ । ಸಕಲಸೌಭಾಗ್ಯದ ಕಲ್ಯಾಣಂ ॥

## ವಧುವಿಗೆ ಶುಭಕೋರುವ ಹಾಡು

ಸಾನಿದ ಪಾಮಗ ರೀಗಾಸಾ ಖ ಸಮಗಮ ಪಾದಿಪ ನೀನೀದಪ
ಕಲ್ಯಾಣಂ ಶುಭ ಕಲ್ಯಾಣಂ । ಕಲ್ಯಾಣಂ ಶುಭ ಕಲ್ಯಾಣಂ ಖಖ ಪ ಖಖ
ಮಾನಿದ ಸಾಃ ಸಾಸರಿ ನೀದಾಃ
ಮಂಗಳ ದಿನದಲಿ ಮಂಗಳ ಕಾರ್ಯವು
ಸಮಗಮ ರಿಗಸಾ ಸಾನಿದಾಸಾಃ
ಮಂಗಳ ಶ್ರದ್ಧಾಳ ಬಾಳಿನಲಿ
ಮಾಮಗ ಪಾಃ ಗಪದನಿ ಪದಮಾ
ಮಾಂಗಲ್ಯ ಸೂತ್ರದೆ ದಾಂಪತ್ಯ ಬಂಧವು

ಸಮಗಮ ಪದನಿದ ಸಾನಿದಪಾ

ಸುಮನಸ ವಂದ್ಯರ ಹರಕೆಯಲಿ II 1 II

ದಾದಾದಾನಿದ ಪದಮಗಪಾ

ಅಮಿತಾನಂದದ ಅಮಿತನಿಗೆ

ನೀನೀದನಿದಪ ದನಿಪದ ಸಾ

ಶಾಂತಿಯ ಆಗರ ಶ್ರದ್ಧಾಳಿಗೆ

ಸಾದಮ ಗಮಗ ಮಾಪದ ಮಪಮ

ಮಧುರ ಮಿಲನವಿದು ನೂತನ ಬಾಳಿಗೆ

ಸಮಗಮ ಪದನಿದ ಸಾನಿದಪಾ

ಶುಭಾಶಯ ನವದಂಪತಿಗಳಿಗೆ II 2 II

ಹೇಮಾವತಿ ಶ್ರೀ ವೀರೇಂದ್ರ ಹೆಗ್ಗಡೆ

ಕರುಳಿನ ಐಕ್ಯೆಕ ಕುಡಿ ಶ್ರದ್ಧಾ

ಆವರಾದರ್ಶವೆ ದೀವಿಗೆ ಆಗಲಿ

ಜೀವನದಲಿ ಯಶ ಶತಸಿದ್ಧ II 3 II

ಮಾತೃಶ್ರೀ ರತ್ನಮ್ಮ ಸುರೇಂದ್ರ ಹರ್ಷೇಂದ್ರ

ರಾಜೇಂದ್ರ ಹಿರಿಯರ ಶುಭ ಹರಕೆ

ಕಾಯಲಿ ನಿಮ್ಮನು ನೀಡಲಿ ನೆಮ್ಮದಿ

ಶಾಂತಿಯ ತೃಪ್ತಿಯ ಸುಖಬಾಳಿಗೆ II 4 II

ಮಾಮಾಗ ಮಾಪದ ಪಾಮಾ

ಶ್ರೀ ಮಂಜುನಾಥನ ಅಭಯದ ರಕ್ಷೆಯಲಿ

ನೀನಿ ನೀನಿ ದಾನಿ ದಾಪಾ

ಚಂದ್ರನಾಥ ತೀರ್ಥಂಕರ ಹರಕೆಯಲಿ

ಸಮಗಮರಿಗಸಾ ಸರಿನಿದ ಸಾ

ಮಂಗಲಕರ ದಾಂಪತ್ಯವು ಸಾಗಲಿ

ನಾನಿದ ಪಾಮಗ ರೀಗಸಾ

ಜಗಹಿತ ಸಂತತಿ ವರ್ಧಿಸಲಿ II 5 II

(ಕಮಾಜ್ ಸಮಗಮ ಪದನಿದ ಸಾಆದಿ ಸನಿದಪ ಮಗರಿಗ ಸಾ

**ವಧುವಿಗೆ ಶುಭಕೋರುವ ಹಾಡು**

(ಮಾಯಾಮಾಳವ ಗೌಳ)

ಸಾ ಪಮ ಗರಿಸರಿ ಗಾರೀಸಾ ಸರಿ

ಬುದ್ದಿ ಮಾತು ಹೇಳಿದರೆ ಕೇಳಬೇಕಮ್ಮ ಮನ

ಮಾ ಮಾ ಮಾ ಸದ ಸನಿದಪ ಮಾಗರಿಸ

ಶುದ್ಧಳಾಗಿ ಗಂಡನೊಡನೆ ಬಾಳಬೇಕಮ್ಮಾ

ಪದಮಾ ಪಾ ಪದನಿಸ ನಿದ ಪಾ

ಅತ್ತೆಮಾವಗಂಜಿಕೊಂಡು ನಡೆಯಬೇಕಮ್ಮ ಮಗಳೆ

ಮಾಪದ ನೀ ಸಾರಿನಿ ಸಾ

ಚಿತ್ತದೊಲ್ಲಭಸಕ್ಕರೆ ಪಡೆಯಬೇಕಮ್ಮಾ

ಸಾರಿಗ ಲಗರಿಸ ನೀಸಂ ಸಾ

ಹೊತ್ತುಹೊತ್ತಿಗೆ ಮನೆಯ ಕೆಲಸ ಮಾಡಬೇಕಮ್ಮಾ ಮಗಳೇ
ನೀದಾ ದಾನೀ ಪಾದಾ ಮಾಪಾ ಮಪದಪ ಮಾರಿಸ
ಹತ್ತು ಮಂದಿ ಒಪ್ಪುವ ಹಾಗೆ ನಡೆಯಬೇಕಮ್ಮಾ॥
ನೆರೆಹೊರೆಯರಿಗೆ ನ್ಯಾಯ ಹೇಳಬೇಡಮ್ಮ ಮಗಳೇ
ಗರ್ವ ಕೋಪ ಮತ್ಸರವನು ಮಾಡಬೇಡಮ್ಮ ಮಗಳೇ
ಪರರನು ನಿಂದಿಪರ ಸೇರಬೇಡಮ್ಮ
ಪುರಂದರ ವಿಠಲ ಸ್ಮರಣೆ ಮರೆಯಬೇಡಮ್ಮ ಮಗಳೆ ॥

## ಹಸೆಯ ಹಾಡು

1. (ಸಾಧಾರಣ ಹಾವಿನ ನೃತ್ಯದಂತೆ) (ಅದಿತಾಳ)
ಬೇಗನೆ ಬಾ... । ಬೇಗನೆ... ಬಾ... । ಬೇಗನೆ ಬಾ ಬಲು ಬೇಗನೆ ಬಾ ॥ಪ॥
ವರ ಪದುಮಾಂಬೆಯ । ಚರಣವ ಸ್ಮರಿಸುತ । ಬೇಗನೆ ಬಾ । ಬೇಗನೆ ಬಾ... ।
ಚಾರುಮನೋಹರವೆನಿಸುವ ಹಸೆಯನು । ಏರಲು ನಸುನಗೆ ಬೀರುತ ಹರುಷದಿ ॥1॥
ನಿನ್ನಯ ಜೀವನ ದಾರಿಗೆ ಪಾವನ । ಎನ್ನುವ ಹಸೆಯನು ಏರೌ ಈ ಕ್ಷಣ ।
ನಿನ್ನಯ ಕಣ್ಮನದುನ್ನತಿ ಕಾರಣ । ವೆನ್ನುವ ಶ್ರೀ ರವಿರಾಜನ ಸೇರಲು ॥2॥
ನಾರೀ ಕುಲಮಣಿ ಚೇಳಿನಿ ಸೀತಾ । ನಾರೀ ರತುನ ವನಮಾಲೆಯರಂಥಾ ।
ಧೀರತೆ ಶೂರತೆ ವಿನಯ, ಗಂಭೀರತೆ । ಹೊಂದುವ ಯೋಗ್ಯದ ಹಸೆಯನು ಏರಲು ॥3॥
ನರಸುರ ಮುನಿ ಜನ ನಿರತವು ಸ್ಮರಿಸುವ । ಪರಮ ಪೂಜ್ಯ ಪಂಚಾಕ್ಷರಿ ಸ್ಮರಿಸುತ ।
ಹಿರಿದೆನಿಸುವ ಸುಖ ಭಾಗ್ಯವ ನೀವಾ ಹರುಷವ ಕೊಡುವಾ ಹಸೆಯನು ಏರಲು ॥4॥

2. ರಾಗ :ಹಂಸಧ್ವನಿ ರೂಪಕ ತಾಳ (ಮನಸು ಕರಗದೇ...ಎಂಬಂತೆ)
ನಗು ನಗುತಲಿ ಲಗು ಬಗೆಯಲಿ । ಸೊಗಸು ನಡೆಯಲಿ ॥ಪ॥
ಸುಗುಣಮಣೀ । ಬಾ ರಮಣಿ । ಝಗಝಗಿಪ ಹಸೆಯೊಳು ನೀ ॥1॥
ಮುತ್ತುಗಳ ಸುತ್ತಿರುವಾ । ರತ್ನಗಳ ಕೆತ್ತಿರುವಾ ।
ಕಸ್ತೂರಿ ಮುದಲತ್ತರುಗಳ ಮೆತ್ತಿರುವ ವಿಚಿತ್ರ ಹಸೆಗೆ ॥2॥
ಮಲ್ಲಿಗೆಯ ಚೆಲ್ಲಿರುವಾ । ಫುಲ್ಲಶರನ ಬಿಲ್ಲಿರುವಾ ।
ನಲ್ಲರ ಮನದಲ್ಲುರಿಯನು । ಚೆಲ್ಲಿ ಮೊಳೆವ ಚೆಲ್ವ ಹಸೆಗೆ ॥3॥
ಅಷ್ಟಮದ ಮೆಟ್ಟಿರುವ । ತುಷ್ಟಗುಣ ಮುಟ್ಟಿರುವಾ ।
ಕಷ್ಟವ ಹಿಂದಟ್ಟುತ । ನಿನಗಿಷ್ಟ ಕೊಡುವ ಶ್ರೇಷ್ಠ ಹಸೆಗೆ ॥4॥
ನರ ಸುರರೂ ಮುನಿಜನರೂ ನಿರತವುತಾ ಸ್ಮರಿಸುತಿಹಾ ।
ನಿರುಪಮ ಪಂಚಾಕ್ಷರಿಯನು । ಸ್ಮರಿಸುತಲಿ ಹರುಷದಲಿ ॥5॥

3. (ಬಾ ಭ್ರಮರಾ–ಪರಾಗಮಿದೇ...ಎಂಬಂತೆ) ಅದಿತಾಳ
(ಆಯಾಯಾ ವಧೂವರರ ಹೆಸರುಗಳನ್ನು ಬೇಕು ಬೇಕಾದಲ್ಲಿ ಸೇರಿಸಿಕೊಳ್ಳುವುದು)
ಬಾರೇ ಸಖಿ । ಸರೋಜ ಮುಖಿ । ಸುಖ ಈವ ಹಸೆ ಏರೆ ಬಾ...।
ಬಲು ಸುಖವೀವ ಹಸೆಯೇರೆ ಬಾ ॥ಪ॥
ಹರುಷದುಲ್ಲಾಸವ ದೊರಕಿಸಿ ಕೊಡುವಾ ।
ಹಸೆಯನೇರೇ ನೀ...ಬಾ... ॥ಅ.ಪ.॥
ನಿನಗಾಗಿ ಕಾಯುತಿಹನೂ । ಶ್ರೀ ನಾಭಿರಾಜ ತಾನೂ ।

ಜೀವನದ ಸಾರ ಕೊಡಿಸೂ । ಈ ಬಾಳ ನೌಕೆ ನಡೆಸೂ ॥1॥

ಅನುದಿನವೂ–ತನುಮನವೂ । ಜಿನಗುರುಗಳ ಪದದಿ । ಶ್ರೀ ಜಿನ ಗುರುಗಳ ಪದದಿ ।

ವಿನಯ ಭಕ್ತಿ ಸದ್ಗುಣಗಳ ಕ್ರಮದಿ । ಅನುಪಮಳೆನಿಸೌ ಜಗದಿ । ಈ ಹಸೆಯನೇರೆ ಬಾರೆ ।

ನಸುನಗುತ ಬೇಗ ಬಾರೇ ॥ ನಿನಗಿದುವೆ ಸುಖದ ಚಿಗುರು ॥ ನೀನಾಗು ಭಾಗ್ಯ ಸೊಡರು ॥2॥

ಪಂಚಾಕ್ಷರಿಯ ಸ್ಮರಿಸಿ ಜಗದಾಂಬೆ ಚರಣನುತಿಸಿ ।

ತನುಮನವ ಶುದ್ಧಿಗೊಳಿಸಿ । ಸುಖ ಸೇರಲೆಂದು ಬಯಸಿ ॥3॥

4. ರಾಗ : ಹಂಸಧ್ವನಿ ಆದಿತಾಳ (ವನಿತಾ ಮಣಿಯೇ...ಎಂಬಂತೆ)

ಸುಗುಣಾಮಣಿಯೇ । ಮಹದಾನಂದವನು ಪಡೆಯೇ ॥

ಹಸೆಯನು ಏರೇ ನಸುನಗೆ ಬೀರೆ । ಕುಶಲದಿ ಬಾ... ಬಾ ॥

ಹರುಷದಿ......ನೀ.......ಬಾ...ಬಾ ॥ಪ॥

ಪರಮ ಪಂಚಾಕ್ಷರಿಯನ್ನು ಸ್ಮರಿಸುತಾ ।

ವರಜಗದಾಂಬೆಯ ಪದ ನಿತ್ಯಾ ಧ್ಯಾನಿಸುತಾ ॥

ಮಹಾ ಸಂತೋಷವಾ ತುಂಬುತ ಮೆರೆವಾ ।

ಹಸೆಯನು ಏರೇ ನಸುನಗೆ ಬೀರೇ ।

ಕುಶಲದಿ ಬಾ... ಬಾ । ಹರುಷದಿ......ನೀ.......ಬಾ...ಬಾ ॥1॥

ನವನಿಧ ರತುನಗಳಿಂದಾ ಶೋಭಿಸುವಾ ।

ಹರುಷದುಲ್ಲಾಸವ ದೊರಕಿಸಿ ಕೊಡುವಾ ।

ನವಜೀವನವಾ ತುಂಬಿಸಿ ಕೊಡುವಾ ।

ಹಸೆಯನು ಏರಲು ಬಾ... ॥

ಹಸೆಯನು ಏರೇ ನಸುನಗೆ ಬೀರೆ ।

ಕುಶಲದಿ ಬಾ... ಬಾ । ಹರುಷದಿ......ನೀ.......ಬಾ...ಬಾ ॥2॥

ಮದಗಜ ನಡೆಯಲಿ ಸರೋಜಮುಖಿಯೇ ।

ನಸುನಗುತಲಿ ನೀ ಬಾರಮ್ಮ ಸಖಿಯೇ ॥

ಸಂತೋಷದೀ –ಬಹು–ಉಲ್ಲಾಸದಿ ।

ಹೆಸಯನು ಏರಲು ಬಾ... ।

ಹಸೆಯನು ಏರೆ ನಸುನಗೆ ಬೀರೆ ।

ಕುಶಲದಿ ಬಾ... ಬಾ । ಹರುಷದೀ ನೀ ಬಾ... ಬಾ... ॥3॥

5. ದೀಜಾ ಸಿನಿಮಾ (ಮಲೆಯಾಳ) (ಸುರುಮ ಎಲಿದಿಯ ಮಿಳಿಗಲೇ... ಎಂಬಂತೆ)

ಸರಸಿಜಾಕ್ಷಿಯೆ ಪ್ರಿಯಸಖೀ । ಸಭೆಯ ಮಧ್ಯದ ಮಂಟಪಕೆ ನೀ ।

ಬೇಗ ಬಾರೇ ತೋಷದಿ । ಬೇಗ ಬಾರೇ ತೋಷದಿ ॥ ಪ॥

ಪರಮ ಪಾವನ ಹಸೆಯನೇರೆ । ಬಾರೆ ಬೇಗ ತೋಷದಿ ॥

ದೇವಗುರುಗಳ ಬಾಗಿ ನಮಿಸಿ । ಬೇಗ ಬಾರೆಲೆ ಬಾ ಸಖಿ ॥1॥

ದಿವ್ಯ ಪಂಚಾಕ್ಷರಿಯ ಮಂತ್ರವು । ಬಾಳು ಹೊನ್ನಾಗುವ ರಸಾ ॥

ಬಾಳು ಪರಿಮಳಗೂಡಿ ನಲಿಯೆ । ಹಸೆಯನೇರಲು ಬಾ ಸಖಿ ॥2।

ನಿನ್ನ ಜೀವನ ಧನ್ಯವಾಗಲು । ಪಂಚ ಗುರುಗಳ ಸ್ಮರಿಸುತಾ ॥

ದೇವಿ ಜಗದಾಂಬೆಯ ಸ್ಮರಿಸಿ । ಬೇಗ ಬಾರೆಲೆ ಬಾ ಸಖಿ ॥3॥

6. (ನಮೋಭೂತನಾಥಾ....ಎಂಬಂತೆ)
ಬಾ ಬೇಗ ಬಾರೇ । ಹಸೆಯನು ಏರೆ ॥
ನಾರಿಮನೋಹರೇ । ನಸುನಗೆ ಬೀರೇ ॥ಪ॥
ಜೀವನದೇಳಿಗೆಯಾಗುವ ಹಸೆಗೆ ।
ಪರಮ ಪಂಚಾಕ್ಷರಿ ಸ್ಮರಿಸುತ ಬಾರೇ ।
ನಾರಿ ಶಿರೋಮಣಿ । ಬಾ... ಬಾ... ॥1॥
ಶರಣರ ಪಾಲಿನಿ । ಸುಮತಿಪ್ರದಾಯಿನಿ ।
ಚಿರ ಸುಖದಾಯಿನಿ । ಮಂಗಲ ಕಾರಿಣಿ ।
ವರಜಗದಾಂಬೆಯ ನೀ ಸ್ಮರಿಸುತಾ ॥2॥
7. (ಭಯ್ಯ ಮೇರೆ... ಎಂಬಂತೆ)
ಸಖಿ ಬಾರೆ । ನೀರಜಮುಖಿ ಬಾ... ಬಾ... ಸಖಿ । ಬಾರೆ ॥
ಮಂದಗಮನೆ ಬಾ... ॥ ಬಾ ಸಖಿ ಬಾರೆ... ॥ಪ॥
ನಾರಿ ಶಿರೋಮಣಿ ನೀರೆ । ಮನೋಹರೆ ॥ ಬಾ ಸಖಿ ಬಾರೆ ॥ ಅ.ಪ ॥
ಮೂಜಗ ವಂದ್ಯನ । ಶ್ರೀ ಜಿನ ರಾಜನು । ಶರಣರಿಗೊಲಿಯುವ ಪದುಮಾಂಬೆಯ ನಾ ॥
ಸ್ಮರಿಸುತ ಹಸೆಯನು ಏರೆ । ನೀ ಬಾರೆ ॥1॥
ನಿನ್ನಯ ಮುಂದಿನ । ಬಾಳಿಗೆ ಪಾವನ । ವಾಗುವ ಹಸೆಯನು ಏರೌ ಈ ಕ್ಷಣ ॥
ನಸುನಗೆ ಬೀರುತ ಬಾರೇ । ಮನೋಹರೆ ॥2॥
ನಿನ್ನನು ಮೋಹಿಸಿ । ನಿನ್ನನ್ನೆ ಪ್ರೀತಿಸಿ ।
ನಿನ್ನೊಡನಾಟದ ಸುಖವನು ಬಯಸಿ । ಕಾಯುತ್ತಲಿರುವನು ಬಾರೇ । ಮನೋಹರೆ ॥3॥
ಶ್ರೀ ಗುರು ಹಂಸನ ಶಾಂತಿನಿಕೇತನ । ಪರಮಪಂಚಾಕ್ಷರಿ ಮಂತ್ರವೆಂಬುದನಾ ॥
ಸ್ಮರಿಸುತಾ ಹಸೆಯನು ಏರೇ ಮನೋಹರೇ ॥4॥
8. (ಘಡೀ ಘಡೀ....ಎಂಬಂತೆ)
ಬಾ... ಬಾ... ಸಖಿಯೇ । ಶಶಿ ಮುಖಿಯೇ । ಗುಣಮಣಿಯೇ ॥
ನಿನ್ನಯ ಬಾಳಿಗೆ ಸೌಖ್ಯವನೀಯುವ । ಹಸೆಯೇರೇ ನೀ ಬಾರೇ ॥ಪ॥
ನಿನ್ನಯ ಪಾಲಿನ ದೇವನೆಂದೆನಿಸಿ । ನಿನ್ನಯ ಸುಖಶಾಂತಿಯ ಬಯಸೀ ॥
ನಿನ್ನಯ ಬಾಳಿಗೆ ಕಾಂತಿಯ ಬರಿಸಿ । ತನ್ನ ಹೃದಯದಲ್ಲಿ ನಿನ್ನನ್ನಿರಿಸಿ ॥
ನಿನ್ನೊಡನಾಟಕೆ ಕಾಯುವನೂ । ಸ್ಮರಿಸುವನೂ । ಪ್ರೀತಿಪನೂ ॥
ನಿನ್ನಯ ಜೀವನ ಜ್ಯೋತಿಯ ಬೆಳಗಲು । ಹಸೆಯೇರೆ । ನೀ ಬಾರೇ ॥1॥
ಪರಮ ಪಂಚಾಕ್ಷರಿ ಮಂತ್ರವ ಸ್ಮರಿಸಿ ಶ್ರೀ ಗುರುಹಿರಿಯರ ಪಾದಕೆ ನಮಿಸಿ ॥
ಚಿರ ಸುಖದೇಳಿಗೆಯನು ನೀ ಬಯಸಿ । ವರಜಗದಾಂಬೆಯ ಹೃದಯದಿ ನಮಿಸಿ ॥
ಹರುಷದುಲ್ಲಾಸದೀ ನೀ ಬಾರೇ ನಗು ಬೀರೇ ಹಸೆಯೇರೆ ।
ನಿನ್ನಯ ಬಾಳಿಗೆ ನೂತನ ಚೇತನವಾಗಲು ಹರುಷದಿ ನೀ ಬಾರೆ ॥2॥

**ತಾಳಿಬಂದಿ ಶೋಭಾನೆ**

ರಾಗ:ಅರಭಿ ಅದಿ:ತಾಳ (ಶ್ರೀ ಜಿನೇಶನ ಶ್ರೀಮುಖಜಾತೆಗೆ...ಎಂಬಂತೆ)
ಜೀವನಾ ಸವಿಜೇನಿನಾಪರಿ । ಆಗಲಿ ಮುಂದಕೆ ಶತವರುಷಾ ॥
ಪರಮ ಪಂಚಾಕ್ಷರಿ ಸ್ಮರಿಸುತ ತಾಳೀ । ಬಂದಿಯ ಕಟ್ಟುವೆ ಈ ದಿವಸಾ ॥ಪ॥

ಭೂಸುರ ಬಹು ವಿದ್ವಾಂಸರ ಮಿಲನದಿ ।
ಶೋಭಿಸುವಾ ಸಭಾ ಮಧ್ಯದಲಿ ॥
ದೋಷವಿನಾಶ ಸರ್ವೇಶನ ಸ್ಮರಿಸುತ ।
''ಸರೋಜ ದೇವಿಗೆ'' ಹರುಷದಲೀ ॥1॥
ಭರತ ಸೌಭದ್ರೆಗೆ ಶ್ರೇಣಿಕಚೇಳಿನಿ ।
ದೇವಿಗೆ ತೊಡಿಸಿಹ ತಾಳಿಬಂದೀ ॥
ಪರಿಮಳ ಬೀರುತ್ತ ಬಾಳಿಗೆ ಚೇತನಾ ।
ಬೀರುವ ಸಾಧನ ತಾಳೀಬಂದೀ ॥2॥
ಬಾಳು ಹೊನ್ನಾಗಲಿ ಸತಿಮಣಿ ಶ್ರೀವನ-।
ಮಾಲೆ ಸಾವಿತ್ರಿಯ ಪರಿಯಲ್ಲಿ ॥
ಸೋಲನು ನೀಗಿಸಿ ಶಾಂತಿಯು ನೆಲಸಲಿ ।
ವರಜಗದಾಂಬೆಯ ಕರುಣೆಯಲಿ ॥

**ತೋರಣ ಇಡುವ ಶೋಭಾನೆ**

(ವರವನು ಪಾಲಿಸು ನೀ....ಎಂಬಂತೆ) ಅದಿತಾಳ

ತೋರಣವಾ ಇಡುವಾ । ಸಖಿಯರೇ । ತೋರಣವನು ಇಡುವಾ । ಮಂಗಲ ।
ತೋರಣವನು ಇಡುವಾ । ಸೋಲನು ನೀಗುವ ಶುಭವನು ಕೊಡುವಾ ॥ಪ॥
ಅರುಹ ಶ್ರೀ ಸಿದ್ಧರ ಗುರುಗಳು ಮೂವರ । ಸ್ಮರಿಸುತ ಶ್ರೀ ಜಿನಧರ್ಮ ರಕ್ಷಕರ ।
ಚರಣವ ನೆನೆಯುತ ಮಂಗಲ ಕಾರ್ಯದ ಕಿರುಕುಳ ನೀಗುವ ಧ್ವಜದಾರೋಹಣ ॥1॥
ವಾರ-ತಿಥಿಯು-ನಕ್ಷತ್ರ-ಕಿರಣಗಳು । ಸೇರಿಹ ಲಗ್ನ-ಮುಹೂರ್ತ-ದೋಷಗಳು ।
ಪಾರಿಶ್ವನಾಥನ ಶ್ರೀ ಪದುಮಾಂಬೆಯ । ಕರುಣೆಯ ಬಲದಲಿ ನೀಗಲಿ ಬೆಳಗಲಿ ॥2॥
ಜಲ-ಗಂಧಾಕ್ಷತೆ ಪುಷ್ಪ ಭಕ್ಷ್ಯಗಳಾ । ಹೊಳೆಯುವ ದೀಪಸುಧೂಪ-ಫಲಗಳಾ ।
ಬಲುತರ ಭಕ್ತಿಯಿಂ ಅರ್ಚಿಸಿ ಪೂಜಿಸಿ । ಹಲವಿಧ ಮಂಗಲ ಗೀತವ ಪಾಡುತ ॥3॥
ಮಂಗಳಾಂಗಿಯರ ಜತೆಯನು ಕೂಡುತ । ಮಂಗಲ ವಾದ್ಯ ಸಂಕೀರ್ತನೆ ಮಾಡುತ ।
ಮಂಗಲ ಪಂಚಾಕ್ಷರಿಯನು ಸ್ಮರಿಸುತ । ಶೃಂಗಾರದ ಸಿರಿ ಕಾರಣವೆನಿಸುವ ॥4॥

## ಅರಶಿನೆಣ್ಣೆಯ ಹಾಡು

(ಭ್ರೂಹಿಮುಕುಂದೇತಿ... ಎಂಬಂತೆ)

ಅರಶಿನ ಹಚ್ಚುವೆನೂ । ತೋಷದಿ ।
ಅರಶಿನ ಹಚ್ಚುವೆನೂ..... ॥ಪ॥
ಸುರುಚಿರವೆನಿಸುವ ಪರಿಮಳ ಬೀರುವ ।
ಅರಿಶಿನ ಹಚ್ಚುವೆನೂ....॥ಅ.ಪ.॥
ಸುರಗಂಗೆಯ ಜಲ-ಎರೆಯುತ ತೋಷದಿ ।
ಹರುಷದಿ ಅರೆದು-ತಯ್ಯಾರಿಸಿರುವ ದಿವ್ಯ ॥1॥
ಪರಿ ಪರಿ ರೋಗ ನಿವಾರಣೆಯಾಗುವ ।
ಸತತ ಬಾಳಿಗೆ ಇದು ತೋಷವನೀಯುವ ॥2॥
ಮುತ್ತೈದೆಯರು ತಾ ನಿತ್ಯವು ಧರಿಸುವ ।
ಚಿತ್ತಕ್ಕೆ ಶಾಂತಿಯನ್ನಿತ್ತು ವಿರಾಜಿಪ ॥3॥

ಪರಿ ಪರಿ ರಮ್ಯದ ಮೆರುಗನು ತಾಳಿಹ ।
ವಿರಚಿತ ಮಂಟಪ ಮಧ್ಯದಿ ಹರುಷದಿ ॥4॥
ಸರುವ ಕಾರ್ಯದಲಿ ಹಿರಿತನ ತಾಳಿಹ ।
ಪರಮ ಪಂಚಾಕ್ಷರಿ ಮಂತ್ರವ ಸ್ಮರಿಸುತ ॥5॥

**ಮಾಲೆ (ಹಾರ) ಹಾಕುವ ಶೋಭಾನೆ**

(ಮಿಾಟಿ ಮಿಾಟಿ.....ಎಂಬಂತೆ)
ಪರಿಮಳ ಬೀರುವ ಹಾರವನೂ ।
ಹರುಷದಿ ಕೊರಳಿಗೆ ಹಾಕುವೆನೂ ॥ಪ॥
ಶ್ರೀ ಗುರು ಹಿರಿಯರ ಸ್ಮರಿಸುತಲಿ ।
ಶ್ರೀ ಜಗದಾಂಬೆಯ ಸ್ಮರಿಸುತಲಿ ।
ಅರಳಿದ ಮಲ್ಲಿಗೆ ಜಾಜಿ ಸೇವಂತಿಗೆ ।
ಮಂದಾರ ಸಂಪಿಗೆ ಮಾಲೆಯನೂ ॥1॥
ಪಾವನ ಮಿಲನ ಸಂಕೇತವಿದೂ ।
ಜೀವನದೇಳ್ಗೆಯ ಸಾರವಿದೂ ।
ಹೃದಯ ದೊಳರಳಿದ ಮಧುರಾನಂದದ ।
ವಿಧ ವಿಧ ಪೂಗಳ ಹಾರವಿದೂ ॥2॥
ಎರಡು ಹೃದಯ ಒಳ ತೋಟದಲಿ ।
ಪರಿಮಳ ಸೂಸುತ ಅರಳುತಲಿ ॥
ಎರಡೊಂದಾಗುವ ಕಣ್ಮನ ತಣಿಸುವ ।
ಕುಂದದ ಬಾಡದ ಹಾರವಿದೂ ॥3॥
ಪರಮ ಪಂಚಾಕ್ಷರಿ ಮಂತ್ರವನೂ ।
ಸ್ಮರಿಸುತ ಹಾರವ ಹಾಕುವೆನೂ ।
ಘಮ ಘಮ ಘಮಿಸುವ ಅತಿ ಹಿತವೆನಿಸುವ ।
ಬಾಳಿನೊಳುತ್ತಮ ಹಾರವಿದೂ ॥4॥

**ಅರತಿ ಹಾಡು (ಕನ್ಯೆಗೆ)**

1. (ಜಯತು ಹರಿ ವಿಠಲಾ..... ಎಂಬಂತೆ)
ಬೆಳಗುವೆನು ಸತತಾ ।
ಮಂಗಲ ಆರತಿ ಜೀವನ ಸಾರಥಿ ।
ಆಗಲಿ ಈ ಜ್ಯೋತಿ..... ॥ಪ॥
**ವರ ನೇಮಿರಾಜರ** ಪ್ರಿಯ ಸುಕುಮಾರಿಯೆ ।
**ವರ ಅನಂತ್ರಾಜರಾ** ಪ್ರೇಮದ ಸೊಸೆಯೆ ॥
ಸುಮನ ಕುಮಾರಿ ಜೀವನ ದಾರಿ ।
ಪರಿಮಳ ಬೀರಲಿ ಸುಖ ಭಾಗ್ಯ ಸೇರಿ ॥ 1॥
ಕೊಲೆ ಹುಸಿ ಕಳವಿಗೆ ನೀಮೆಚ್ಚದಿರೂ ।
ಬಲುತರ ಆಶೆಗೆ ಬಲಿಯಾಗದಿರೂ ॥
ಲಲನೆ ಚೇಳಿನಿಯಂತೆ – ವನಮಾಲೆ–ಸೀತೆಯಂತೆ ।

ಬಾಳು ನೀ ಮುಂದಕ್ಕೆ ಸಾವಿತ್ರಿಯಂತೆ ॥2॥
ಪರಮ ಪಂಚಾಕ್ಷರಿ ಸ್ಮರಿಸುತ ಮನದಿ ।
ಗುರು ಹಿರಿಯರ ಮನ ಕೆಡಿಸದೆ ದಿನದಿ ॥
ನಿರ್ಮಲ ಭಾವದಿ ಧರ್ಮ ಸುಪ್ರೇಮದಿ ।
ನಿತ್ಯಾ ಸುಮಂಗಲಿಯಾಗು ಜೀವನದಿ ॥3॥

2. (ಕಣ್ಣಾ.....ತರುಮೈ ನಿರೈ ಕಣ್ಣಾ....ಎಂಬಂತೆ)
ಸತತಾ ಬೆಳಗುತಲೀ ನಿರತಾ ।
ಸುಖ ಶಾಂತಿ ಯಶೋಭರಿತಾ ॥ಪ॥
ವಿದ್ಯೆಯಲಿ । ಚೆಲು । ಬುದ್ಧಿಯಲಿ ॥ ನಿತ್ಯ ॥
ದಶ ದಿಕ್ಕು ಪ್ರಭೆದೋರಿ ಪಸರಿಸಲೀ ॥ಅ.ಪ॥
ಪರಮೇಶನೊಲುಮೆಯು ನಿನಗಾಗಲಿ । ನಿತ್ಯ ॥
ಸರಸ್ವತಿ –ಲಕ್ಷ್ಮಿಯು ಜತೆಗೂಡಲಿ ॥
ಪರಮ ಪಂಚಾಕ್ಷರಿ ಸ್ಮರಿಸುತ್ತಲೀ । ನಿನ್ನ ॥
ಹರಸೂವೆ ಆರತಿ ಬೆಳಗುತಲಿ ॥1॥
ನಿತ್ಯದ ನಡೆನುಡಿ ಸತ್ಯದಲಿ । ಮಹಾ ॥
ಭೂಜಾತೆ–ದಮಯಂತಿ ರೀತಿಯಲಿ ।
ವನಮಾಲೆ–ಚೇಳಿನಿ–ಸ್ಫೂರ್ತಿಯಲಿ । ನಿನ್ನ ॥
ಜೀವನ ಕುಂದಣದಂತಾಗಲೀ ॥2॥
3. (ವರವನ್ನು ಪಾಲಿಸು ನೀ.....ಎಂಬಂತೆ)
(ಇಲ್ಲಿರುವ ವಧೂವರರ ಹೆಸರುಗಳ ಬದಲಿಗೆ ಬೇರೆ ಸೇರಿಸಬಹುದು)
ಬೆಳಗುವೆನಾರತಿಯಾ ತೋಷದಿ । ಬೆಳಗುವೆನಾರತಿಯಾ ॥ಪ॥
ಬಾಳಿನ ಏಳ್ಗೆಗೆ ಕಾರಣವಾಗಿಹ ॥ ಅ.ಪ ॥
ಪರಮ ಮಂಗಳಕರ ಗುರುಗಳ ಐವರ ।
ಸ್ಮರಿಸುತ ಅನುಪಮ ಧರ್ಮರಕ್ಷಕರ ॥
ಧರೆಗತಿಶಯದಾ ದಶ ಧರ್ಮಗಳ ।
ಸ್ಮರಿಸುತ ಮಂಗಲ ಆರತಿಯನು–ನಾ ॥1॥
ಪರಪದುಮಾಂಬೆಯ ಕರುಣೆಯ ಒಲಿಸಿ ।
ಅಂಗಡಿ ಬೆಟ್ಟಿನ ಜ್ಯೋತಿ–ನೀ ನೆನಿಸಿ ।
ಶ್ರೀ ಪದ್ಮರಾಜನ ಕುವರಿ ಎಂದೆನ್ನಿಸಿ ।
ಮೆರೆದ ಸುಮಂಗಲ ಕುಮಾರಿ ನಿನಗೆ ॥2॥
ನಾರೀ ಕುಲವಣಿ ಚೇಳಿನಿಯಂತೆ ।
ಸಾವಿತ್ರಿಯು ದಮಯಂತಿಹರಂತೆ ॥
ವನಮಾಲೆಯಪರಿಪಂಚಾಕ್ಷರಿಯನು ।
ಮರೆಯದೆ ಅನುದಿನ ಸ್ಮರಿಸುತ ಬಾಳೆಂದು ॥3॥
4. (ಜ್ಯೋತಿ ಕಲಷ್ ಚಲ್ ಕೆ....ಎಂಬಂತೆ)

ಬೆಳಗುವೆನಾರತಿಯಾ... ಬೆಳಗುವೆನಾರತಿಯಾ ॥ಪ॥

ಬಾಳು ಬದುಕಿನಲಿ ಬೆಳಕನು ನೀಡುವ ।

ಮಂಗಲ ಆರತಿಯಾ.... । ಮಂಗಳ ಆರತಿಯಾ... ॥ಅ.ಪ॥

ಅರಹಂತರ ಶ್ರೀ ಸಿದ್ಧರ ಗುರುಗಳ ।

ಸ್ಮರಿಸುತ ಶ್ರೀ ಜಿನ ಯಕ್ಷ ಯಕ್ಷಿಯರ ॥

ಚರಣಕೆ ನಮಿಸುತಲಿ...ಚರಣಕೆ ನಮಿಸುತಲಿ... ॥1॥

ನಾರಿ ಕುಲ ಮಣಿ ಚೇಳಿನ ಸೀತಾ ।

ನಾರಿ ರತುನ ಮನ ಮಾಲೆಯರಂತಾ ॥

ಕೀರ್ತಿಯಗಳಿಸುತಲಿ... । ಕೀರ್ತಿಯ ಗಳಿಸುತಲಿ...।2॥

ಮಂಗಳಾಂಗಿಯರ ಜತೆಯನು ಕೂಡುತ ।

ಮಂಗಲಕರ ಪಂಚಾಕ್ಷರಿ ಸ್ಮರಿಸುತ ॥

ಬೆಳಗುವೆ ನಾರತಿಯ...। ಬೆಳಗುವೆ ನಾರತಿಯ....॥3॥

5. (ಅನುರಾಗದ ಅಮರಾವತಿ....ಎಂಬಂತೆ)

ಬೆಳಗುವೆನೂ । ದಿವ್ಯ 'ಜ್ಯೋತಿಯನೂ ॥

**"ನಯನ ಕುಮಾರಿ"** ಗೆನಾ । ಹರುಷದಿ ಬೆಳಗುವೆನಾ ॥ಪ॥

ಶ್ರೀ ಪಾರಿಶ್ವೇಶನ । ಕರುಣೆಯಲಿ ।

ಶ್ರೀ ಪದುಮಾಂಬೆಯ ಮಮತೆಯಲಿ ॥

ದಿನ ನಿತ್ಯದಿ ನಿನ್ನ ಜೀವನದಿ ।

ಜಿನ ಧರ್ಮ ರಕ್ಷಕರೊಲಿಯುತ್ತಲಿ ।

ಚಿರ ಸುಖ ಶಾಂತಿಯ ನಿನಗೀಯಲಿ ॥1॥

ಪರಮ ಪಂಚಾಕ್ಷರಿ ಮಂತ್ರವನೂ ।

ಮರೆಯದೆ ಬಾಳು ಸದ್ಧರ್ಮವನೂ ॥

ಆನಂದದಿ ಮಹದಾನಂದದೀ ।

ಪತಿಸುತ ಗೃಹಭಾಗ್ಯ ಕೈಸೇರಲಿ । ನಿನ್ನ ।

ನಡೆನುಡಿಯಲಿ ಸತ್ಯಪ್ರಭೆ ದೋರಲಿ ॥2॥

6. (ಅದಾಹೈ ಚಂದ್ರಮಾ.... ಎಂಬಂತೆ)

ಮಂಗಲಾ ಸುಮಂಗಲಾ । ನಿನಗೆ ಆಗಲಿ ।

ಅಂಗ ಜಾರಿ ಕರುಣೆಯಿಂದ ಬಾಳು ಬೆಳಗಲಿ ॥ ನಿಮ್ಮ । ಬಾಳು ಬೆಳಗಲಿ ॥ಪ॥

ಇಂದಿಗೆ ಇದು ಶುಭ ದಿವಸ । ನೀನು ।

ಮುಂದಕ್ಕೆ ಬಾಳು ಶತ ವರುಷ ।

ಅಂದದಲಿ ಬಹು । ಚಂದದಲಿ ।

ಶ್ರೀ ಪದುಮಾಂಬೆಯ ಕರುಣೆಯಿಂದಲಿ ॥1॥

ನಿತ್ಯದ ನಡೆ ನುಡಿಗಳಲಿ । ಮಹಾ ।

ಶಕ್ತಿ ಸ್ವರೂಪಿಣಿ ಕಾಯಲಿ ।

ಸತ್ಯದಲಿ ದಯ ಧರ್ಮದಲಿ ।

ಉತ್ತಮಳೆನ್ನಿಸೌ ಬಾಳಿನಲಿ ॥2॥

ಎತ್ತುವೆನು ನಾ ನಿನಗೆ ಆರತಿ । ನಿನ್ನ ॥
ಚಿತ್ತಕ್ಕೆ ಒಲಿಯಲಿ ಭಾರತಿ ।
ನೀತಿಯಲಿ ಸಂ । ಪ್ರೀತಿಯಲಿ ।
ಕೀರ್ತಿಯಗಳಿಸೌ ಧಾತ್ರಿಯಲಿ ॥3॥
ಸತಿಮಣಿ ಸಾವಿತ್ರಿಯಂತೆ । ಸೀತೆ ॥
ವನಮಾಲೆ ಚೇಳಿನಿಯರಂತೆ ॥
ದಿನ ನಿತ್ಯದಿ ನೀನು ಮನ ಶುದ್ಧದಿ ।
ಪರಮ ಪಂಚಾಕ್ಷರಿ ನೀ ಸ್ಮರಿಸಿ ॥4॥

## ಆರತಿ ಹಾಡು

(ಜಯತು ಹರಿವಿಠಲಾ... ಎಂಬಂತೆ)
ನಿಮಗೆ ಬೆಳಗುವೆನೂ । ಮಂಗಲ ಮಯದಾ ॥
ಬಾಳಿಗೆ ಹಿತದಾ । ಆರತಿಯನು ಪಿಡಿದೂ ॥ಪ॥
ಸುಗುಣ ಸುಚರಿತ ಶ್ರೀ । ಸುಂದರ ರಾಜಗೆ ॥
ಸುಮತಿ ಸುಶೀಲ ಶ್ರೀ । ಸರೋಜ ದೇವಿಗೆ ॥
ಜೀವನ ದೇಳಿಗೆ, ಆಗುವ ದೀವಿಗೆ ॥
ನಿತ್ಯಾ ಸಂತೋಷ ಸೌಭಾಗ್ಯವ ಪೊಂದಲು ॥1॥
ಭರತೇಶಚಕ್ರಿಯಾ । ನಡೆನುಡಿ ಕ್ರಮದಿ ।
ಸತಿಮಣಿ ಚೇಳಿನಿ ದೇವಿಯ ಭಾವದಿ ॥
ನಿರ್ಮಲ ಭಾವದಿ, ಧರ್ಮಸುಪ್ರೇಮದಿ ।
ಸತ್ಯಾಸುಧರ್ಮದ । ಬೆಳಗುವ ಜ್ಯೋತಿಯ ॥2॥
ಪರಮ ಪಂಚಾಕ್ಷರಿ । ಮಂತ್ರವ ಸ್ಮರಿಸಿ ।
ಗುರುಹಿರಿಯರಮನ । ಅನುದಿನ ಒಲಿಸಿ ॥
ನಿರ್ಮಲ ಭಾವದಿ । ಭಾರತ ದೇಶದಿ ॥
ಬಾಳು ಸುಮಂಗಲ । ಆಗುವ ಜ್ಯೋತಿಯ ॥3॥
ದೋಣಿ ಸಾಗಲಿ... ಎಂಬಂತೆ)
ನಿರ್ಮಲಾ ಮನ ದಿವ್ಯ ಚೇತನ । ಮಾಳ್ಪ ಸಾಧನ ಆರತಿ ।
ಮಂಗಲಾಮಯ ರತ್ನದಾರತಿ । ನಿಮಗೆ ಎತ್ತುವೆ ಆರತಿ ॥ಪ॥
ನಿತ್ಯದಾ ನಡೆನುಡಿಗಳಿಂದಲಿ । ಧರ್ಮದೇಳ್ಗೆಯ ಬಯಸುತಾ ॥
ಬಾಳುಸಾಗಲಿ ಶಾಂತಿಸೇರಲಿ । ಕ್ಷೇಶ ದುಃಖವ ಕಳೆಯುತಾ ॥
ಶ್ರೀರಮೇಶನ ಪಾದಪದ್ಮಕೆ । ಭಕ್ತಿ ಕಾಣಿಕೆ ನೀಡುತಾ ॥
ನಿಮ್ಮ ಜೀವನ ಪರಮ ಪಾವನ । ವಾಗಲೆನ್ನುತ ಬೆಳಗುವೆ ॥1॥
ಹಾಲುಸಕ್ಕರೆ ಜೇನುಗೂಡಿಹ । ರೀತಿಯಲಿ ಜೀವನರಸಾ ॥
ದಿವ್ಯಪಂಚಾಕ್ಷರಿಯ ಮಂತ್ರವು । ಬಾಳು ಹೊನ್ನಾಗುವ ರಸಾ ॥
ನೂತನದ ನವದಂಪತಿಗಳಿಗೆ । ನಿತ್ಯ ಒದಗಲಿ ಸಂತಸಾ ॥

ಭವ್ಯರಾಗುತ ಕೀರ್ತಿಗಳಿಸಿರಿ । ಎಂದು ಬೆಳುಗವೆ ಆರತಿ ॥2॥

(ಪಂಚಮ ವೇದಾ.....ಎಂಬಂತೆ)

ಮಂಗಲ ಜ್ಯೋತಿ । ಬಾಳಿಗೆ ಸ್ಫೂರ್ತಿ ।

ನೀಡುವ ಆರತಿ । ಬೆಳಗುವೆ ನಾ...।

ಧರ್ಮದ ಪ್ರೀತಿ । ಬೆಳಗುವ ಜ್ಯೋತಿ ।

ಹೃದಯಕ್ಕೊದಗಲಿ । ಸುಖಶಾಂತಿ ॥1॥

ವಿಜಯ ಕುಮಾರಗೆ । ಸುನಂದ ದೇವಿಗೆ ।

ಆರತಿ ಬೆಳಗುವೆ । ತೋಷದಿ ನಿಮಗೆ ।

ಪಂಚಾಕ್ಷರಿ ಮಹಾ । ಮಂತ್ರದ ಸ್ಮರಣಾ ॥

ಜೀವನಪಾವನ । ವಾಗುವ ಸಾಧನ ॥2॥

(ಈ ಚಂದದ ಮನೆಯಲ್ಲಿ....ಎಂಬಂತೆ)

ನಾ ಎತ್ತುವೆನಾರತಿಯಾ । ಶುಭ । ಮಂಗಲ ಆರತಿಯಾ ॥

ಶ್ರೀ ಪರಮಾತ್ಮನ । ಸ್ಮರಿಸುತಲೀನಿಮ । ಗೆತ್ತುವೆನಾರತಿಯ ॥ಪ॥

ನೂತನ ದಂಪತಿಯಾಗಿಹ ನಿಮಗೆ ।

ಬಾಳಿಗೆ ಏಳಿಗೆಯಾಗುವ ದೀವಿಗೆ ।

ಪ್ರೀತಿಯೊಳಾರತಿ ಬೆಳಗುವೆ ನಿಮಗೆ ।

ಮನವೂ ಗುಣವೂ ಬೆಳಗಲಿ ಎನ್ನುತ ॥1॥

ಶ್ರೀ ಪಂಚಾಕ್ಷರಿ ಮಂತ್ರವ ಸ್ಮರಿಸಿ ।

ಬೆಳಗುವೆ ಶ್ರೀ ಜಗದಾಂಬೆಗೆ ನಮಿಸಿ

ವಿಜಯ ಕುಮಾರಗೆ ಸುನಂದ ದೇವಿಗೆ ।

ಹರುಷಾ ಸರಸಾ ಬೆಳಗಲಿ ಎನ್ನುತ ॥2॥

(ಸಯೋನಾರಾ.....ಎಂಬಂತೆ)

ಬೆಳಗುವೆನೂ.....ಬೆಳಗುವೆನೂ..... । ಮಂಗಲ ಆರತಿ ಬೆಳಗುವೆನೂ ।

ಹಿತವಾದಾ..... ಅತಿಗೆಲುವಾದಾ । ಸುಮಧುರ ಜ್ಯೋತಿಯ ಬೆಳಗುವೆನೂ ।

ಬೆಳಗುವೆನೂ... ಬೆಳಗುವೆನೂ... ॥ಪ॥

ಧರ್ಮದ ಪ್ರೀತಿ ದೃಢವಾಗಿ । ಜೀವನಸಾರಾ ಹೊನ್ನಾಗಿ ।

ಅತಿ ಉಲ್ಲಾಸ ಒಟ್ಟಾಗಿ । ಬೆರೆದೂ... ನಲಿದೂ...ಜೊತೆಯಾಗಿ ।

ಬೆಳಗುವೆನೂ... ಬೆಳಗುವೆನೂ... ॥1॥

ಶ್ರೇಣಿಕ ಚೇಳಿನಿಯಂತಾಗಿ । ಸತ್ಯದ ದಾರಿಗೆ ಬೆಳಕಾಗಿ ।

ಭಾರತಜ್ಯೋತಿ ನೀವಾಗಿ । ಒಲಿದೂ ನಲಿದೂ ಜೊತೆಯಾಗಿ ॥

ಬೆಳಗುವೆನೂ... ಬೆಳಗುವೆನೂ... ॥2॥

ಪರಮಪಂಚಾಕ್ಷರಿಸ್ಮರಿಸುತಲಿ । ಶ್ರೀ ಜಗದಾಂಬೆಗೆ ನಮಿಸುತಲಿ ।

ಗುರುಹಿರಿಯರ ಮನ ಒಲಿಸುತಲಿ । ಹಿತದಿ ಮಿತದಿ ಒಟ್ಟಾಗಿ ।

ಬೆಳಗುವೆನೂ... ಬೆಳಗುವೆನೂ... ॥3॥

॥ಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳು॥ (ಶ್ರವಣಬೆಳಗೊಳ)

(ಸಯೋನಾರಾ... ಎಂಬಂತೆ)

ಬೆಳಗುವೆನೂ ಬೆಳಗುವೆನೂ । ಮಂಗಲಆರತಿ ಬೆಳಗುವೆನು ॥

ನವರತ್ನಗಳಾ ಕಾಂತಿಯಲಿ । ಬೆಳಗುವ ಜ್ಯೋತಿಯ ಬೆಳಗುವೆನು ॥
ಬೆಳಗುವೆನೂ... ಬೆಳಗುವೆನೂ... ॥ಪ॥
ಧರೆಗತಿ ಚೋದ್ಯದ ಬಾಹುಬಲಿ । ಮೆರೆದಿಹ ಶ್ರವಣ ಬೆಳ್ಗುಳದಲ್ಲಿ ।
ಶೋಭಿಪ ಶ್ರೀಗುರುಪೀಠದಲಿ, ರಾಜಿಪ ಗುರುವರಗೆರಗುತಲಿ ॥
ಬೆಳಗುವೆನೂ... ಬೆಳಗುವೆನೂ... ॥1॥
ಶ್ರೀನೇಮಿನಾಥಗೆ ವಂದಿಸುತಾ । ಸರ್ವಾಹ್ಣಯಕ್ಷಗೆ ನಮಿಸುತ್ತ ॥
ಶ್ರೀಕೂಷ್ಮಾಂಡಿನಿಗೆರಗುತ್ತಾ । ಮುತ್ತಿನ ಆರತಿ ಪಿಡಿಯುತ್ತಾ ।
ಬೆಳಗುವೆನೂ... ಬೆಳಗುವೆನೂ... ॥2॥
ಪೂಜ್ಯರು ಧರಿಸಿಹ ಹಾವಿಗೆಗೆ । ಪಿಂಛಕಮಂಡಲ ಮುದ್ರಿಕೆಗೆ ॥
ಮೂಜಗ ಬೆಳಗುವ ಬೆಳ್ಗೊಡೆಗೆ । ಚಾಮರ ಮಯೂರ ಸಿಂಹಾಸನಕೆ ॥
ಬೆಳಗುವೆನೂ... ಬೆಳಗುವೆನೂ... ॥3॥
ಚಾರುಕೀರ್ತಿಪಂಡಿತಾಚಾರ್ಯ । ಇವರಿಗೆ ಒದಗಲಿ ಬಲ–ಧೈರ್ಯ ॥
ಧರ್ಮಪ್ರಕಾಶಕೆ ಶಶಿ–ಸೂರ್ಯ, ಆಗಲಿ ಬೆಳಗಲಿ ಗುರುವರ್ಯಾ ।
ಬೆಳಗುವೆನೂ... ಬೆಳಗುವೆನೂ... ॥4॥
ಪರಮಪಂಚಾಕ್ಷರಿ ಸ್ಮರಿಸುತಲಿ । ಧರ್ಮದ ಧ್ವಜವನ್ನು ಪಿಡಿಯುತಲಿ ।
ಸತ್ಯಾಹಿಂಸೆಯ ಮಾರ್ಗದಲಿ ಚಾರಿತ್ರ ಬೆಳಗಲಿ ವಿಶ್ವದಲಿ ।
ಬೆಳಗುವೆನೂ... ಬೆಳಗುವೆನೂ... ॥5॥
(ನೀಲೆ ಗಗನ್ ಕಿ ಚಲೇ...ಎಂಬಂತೆ)
ನಾ...ಎತ್ತುವೆನಾರತಿಯಾ । ಶುಭ । ಮಂಗಳ ಆರತಿಯ ।
ಹೃದಯ ಮಂದಿರ । ಪೂರ್ಣಿಮ ಚಂದಿರ ॥
ಆಗಲಿ ಬಹು ಸುಂದರಾ... ॥ಪ॥
ಇಂದಿನ ದಿವಸಾ । ತುಂಬುತ ಹರುಷಾ।
ಬಾಳು ನೀ ಶತವರುಷ... ॥1॥
ಪಂಚಾಕ್ಷರಿಯಾ । ಶ್ರೀಜಗದಾಂಬೆಯ ॥
ಸ್ಮರಿಸುತ ಬಾಳು ದಿನಾ... ॥2॥
ಶಾರದೆ ಒಲಿದೂ । ಲಕ್ಷ್ಮಿಯು ನಲಿದೂ ।
ಹರಸಲಿ ನಿನಗೆಂದೂ... ॥3॥

## ವಧೂವರರಿಗೆ ಆರತಿ

(ಜೋತಿ ಷೇ ಜ್ಯೋತ್ ಜಗಾತೆ...ಎಂಬಂತೆ)
ಮಂಗಲ ಆರತಿ ಬೆಳಗುವೆನೂ । ಜಯ ।
ಮಂಗಲ ಆರತಿ ಬೆಳಗುವೆನು । ಶುಭ ಮಂಗಲ ಆರತಿ ಎತ್ತುವೆನೂ ॥ಪ॥
ಶ್ರೀ ಆದಿರಾಜಗೆ । ಶ್ರೀ ಮರುದೇವಿಗೆ ।
ಮಂಗಲವಾಗಲು ಬಯಸುವೆನು ॥ಅ.ಪ॥
ಮೂಜಗಧೀಶನ ಕರುಣೆಯಲಿ ।
ಶ್ರೀ ಜಗದಾಂಬೆಯ ಪ್ರೇಮದಲಿ ।
ಇಂದಿನ ದಿವಸಾ । ಬಂದಿಹ ಹರುಷಾ ॥

ಮುಂದಕೆ ಸಾಗಲಿ । ಶತ ವರುಷಾ ॥1॥

ಬಾಳಿಗೆ ನೂತನ ಚೇತನವೂ ।

ಸೇರಲು ದಾಂಪತ್ಯ ಕಾರಣವೂ ।

ಸತಿಪತಿ ಒಮ್ಮತದಿಂದಲಿ ನಿರತಾ ।

ಧರ್ಮದ ನಡೆನುಡಿಯಲಿ ಸತತಾ ॥2॥

ಪರಮ ಪಂಚಾಕ್ಷರಿ ಮಂತ್ರವನೂ ।

ಸ್ಮರಿಸಿರಿ ಶ್ರೀ ಜಗದಂಬೆಯನೂ ।

ಭಾರತದಲಿ ಆದರ್ಶದ ಸತಿಪತಿ ।

ಆಗಲು ಆರತಿ ಬೆಳಗುವೆನೂ ॥3॥

(ಓ...ಅಮ್ಮಾ ಪದ್ಮಾವತಿಯಮ್ಮಾ... ಎಂಬಂತೆ)

ಓ... ಎತ್ತುವೆ ಆರತಿ ನಿಮಗೆ ।

ನೂತನ ದಂಪತಿಗಳಿಗೆ । ನಿಮ್ಮ ।

ಮುಂದಿನ ಜೀವನ ಬೆಳಗೆ ॥ಪ॥

ಎರಡಾದ ಜೀವನ ಮುಂದೆ ಒಂದಾಗಿ।

ಬೆರೆಯಲಿ ದೇಹಾತ್ಮರೊಂದೇ ಎಂದಾಗಿ ।

ಬರುತ್ತಿಹ ಕಿರಿಕುಳಗಳನ್ನೆಲ್ಲ ನೀಗಿ ।

ಮೆರೆಯಲಿ ದಾಂಪತ್ಯ ಆದರ್ಶವಾಗಿ ॥ನೂತನ...॥1॥

ಭರತೇಶ–ಸೌಭದ್ರೆಯಂತೆ ಧರ್ಮದಲಿ ।

ಸುರಪತಿ–ಶಚಿದೇವಿಯಂತೆ ಭಾಗ್ಯದಲಿ ।

ಹರಿಶ್ಚಂದ್ರ–ಚಂದ್ರಮತಿಯಂತೆ ಸತ್ಯದಲಿ ।

ಪರಮಾನಂದವ ಹೊಂದಿ ಬಾಳಿ ನಿತ್ಯದಲಿ ॥ ನೂತನ... ॥2॥

ಬಂಗಾರ ತೊಟ್ಟಿಲಲಿ ಸುಕುಮಾರ ಮಲಗಿ ।

ಮಂಗಲ ಗೀತವ ಹಾಡುತ್ತ ತೂಗಿ ।

ಸಿಂಗಾರ ಸುಖ ಭಾಗ್ಯಗಳು ಜತೆಯಾಗಿ ।

ಸಂಗಡ ಸೇರುತ್ತ ಬಾಳುವವರಾಗಿ ॥ ನೂತನ... ॥3॥

ಪರಮ ಪಂಚಾಕ್ಷರಿಯನ್ನು ಸ್ಮರಿಸುತ ।

ಗುರು ಹಿರಿಯರ ಪದಕ್ಕೆರಗುತ್ತ ಸತತಾ ।

ಪರಹಿತ ಚಿಂತನೆ ಬಯಸುತ್ತ ನಿರತ ।

ವರಜಗದಾಂಬೆಯ ನಿತ್ಯ ಧ್ಯಾನಿಸುತಾ ॥ನೂತನ... ॥4॥

(ಜ್ಯೋತಿ ಕಲಷ್ ಚಲ್ ಕೇ... ಎಂಬಂತೆ)

ಎತ್ತುವೆನಾರತಿಯಾ... । ಎತ್ತುವೆನಾರತಿಯಾ ॥ಪ॥

ಸುತ್ತಲು ಮುಸುಕಿಹ–ಕತ್ತಲೆ ನೀಗುವ ।

ಮಂಗಳ ಆರತಿಯಾ...। ಮಂಗಳ ಆರತಿಯಾ... ॥1॥

ಶ್ರೀ ಜಿನರಾಜನ ಪಾದಕೆ ನಮಿಸಿ ।

ಮೂಜಗದಾಂಬೆಯ ಹೃದಯದಿ ಸ್ಮರಿಸಿ ॥

ಬೆಳಗುವೆ ಆರತಿಯಾ... । ಬೆಳಗುವೆ ಆರತಿಯಾ...॥2॥

ಅಮಲಮತಿಯ ಶ್ರೀ ಆದಿರಾಜನಿಗೆ ।

ವಿಮಲ ಚರಿತೆ ಶ್ರೀ ಪ್ರೇಮ ಕುವರಿಗೆ ।

ಹರುಷದೊಳಾರತಿಯಾ... । ಹರುಷದೊಳಾರತಿಯಾ... ॥3॥

ಮೇಲೆಂದೆನಿಸುವ ಸತಿಪತಿ ಅನಿಸಿ ।

ಶ್ರೀ ಪಂಚಾಕ್ಷರಿ ಮಂತ್ರವ ಜಪಿಸಿ ।

ಬಾಳಿರಿ ಸೌಖ್ಯದಲಿ... । ಬಾಳಿರಿ ಸೌಖ್ಯದಲಿ... ॥4॥

(ಬಾಳೊಂದು ನಂದನಾ...ಎಂಬಂತೆ)

ಆನಂದವಾಗಲೀ । ಸುಖಶಾಂತಿ ನೆಲಸಲೀ ॥

ಈ ಬಾಳಿಗೆ ಸುಖದೇಳಿಗೆಯಾಗಲೀ ।

ಸವಿಜೇನಿನಂಥ ಪ್ರೀತಿ । ಶ್ರೀ ರಾಮಚಂದ್ರನಂತ ನೀತಿ ॥

ನಿಮಗಾಗಲಿ ಬೆಳಕಾಗಲಿ ಈ ಆರತಿ ॥

ಇದುವೆ ಬಾಳು ಜ್ಯೋತಿ ॥1॥

ಸುರಪತಿಯ ಭಾಗ್ಯದಂತೆ । ಬ್ರಹಸ್ಪತಿಯ ಜ್ಞಾನದಂತೆ ॥

ಜತೆಗೂಡುತ ನಲಿದಾಡುತ ಬಾಳಿರಿ ।

ನಿಜ ಧರ್ಮ ನೀತಿಯಿಂದಾ ॥2॥

ಪರಮಾತ್ಮನಡಿಗೆ ನಮಿಸಿ । ಶ್ರೀ ಪಂಚಾಕ್ಷರಿಯ ಸ್ಮರಿಸಿ ।

ದಿನ ನಿತ್ಯದಿ ಮನ ಶುದ್ಧದಿ ಬಾಳಿರಿ ।

ಬೆಳಗುವೆ ನಾ ತೋಷದಿ ॥ 3॥

(ಚೌದವೀನ್ಕ್ ಚಾಂದ್ ಹೊ... ಎಂಬಂತೆ)

ನಾ ನಿಮಗೆ ಬೆಳಗುವೇ ಆನಂದದಿಂದಲಿ ।

ಜೀವನದ ಭಾಗ್ಯ ಜ್ಯೋತಿ । ಈ ಆರತಿ... ॥ಪ॥

ವರ ಪಾರ್ಶ್ವನಾಥ ಜಿನನಾ । ಧರಣೇಂದ್ರ ನರಸಿಯನ್ನಾ ॥

ಚರಣಾರವಿಂದಗಳನಾ । ಸ್ಮರಿಸುತಲಿ ಆರತಿಯನಾ ।

ಬೆಳಗುವೆನು ತೋಷದಿಂದಾ । ನೀವು ಬಾಳಿ ಧರ್ಮದಿಂದಾ ॥1॥

ಶ್ರೀ ರಾಮ ಸೀತೆಯಂತೆ । ಸೌಭದ್ರೆ ಭರತರಂತೆ ।

ಪಂಚಾಕ್ಷರಿಯ ಸ್ಮರಿಸಿ । ಕುಲ ವಂಶ ಬೆಳಗಿ ಚಂದ ।

ಸುಖ ಭಾಗ್ಯ ಶಾಂತಿಯಿಂದಾ । ನಲಿನಲಿದು ಬಾಳಿ ಚಂದಾ ॥2॥

(ಜಾಯೆತು ಜಾಯೆ ಕಹಾ... ಎಂಬಂತೆ)

ಮಂಗಲ ಆರತಿಯಾ । ತೋಷದಿ ।

ಬೆಳಗುವೆನಾರತಿಯಾ....॥ಪ॥

ಪರಮ ಪುರುಷ ಮಹಾ ಮಂಗಲಮಯನಾ ।

ಭಕುತೋದ್ಧಾರಿಣಿ ಜಗದಾಂಬೆಯನಾ ।

ಚರಣವ ಸ್ಮರಿಸುತ ಬೆಳಗುವೆನಾ... ॥1॥

ಸುಖವನು ಕೊಡುವಾ ಶಾಂತಿಯಾ ನೀವಾ ।

ಜೀವನದೇಳ್ಗೆಗೆ ಕಾರಣವಿರುವಾ ।

ಹರುಷದುಲ್ಲಾಸವ ದೊರಕಿಸಿ ಕೊಡುವಾ ॥2॥

ಸತಿಪತಿ ಒಮ್ಮತವಾಗುವ ನಿರತಾ ।
ಜತೆಯಲಿ ಕೂಡುತ ಸದ್ಗುಣ ಚರಿತಾ ॥
ನೀತಿ ಧರ್ಮ ದಯೆ ಬೆಳಗಲಿ ಸತತಾ ॥3॥
ಶ್ರೀ ರವಿರಾಜಗೆ ವಿಜಯ ಕುಮಾರಿಗೆ ।
ಹೊಂದಿದ ದಾಂಪತ್ಯ ಚಿರದಿನ ಬೆಳಗೆ ।
ಹರುಷವ ತಾಳುತಾ ಬೆಳಗುವೆನಾ ॥4॥
ಪಂಚಾಕ್ಷರಿ ಮಹಾ ಮಂತ್ರವ ಸ್ಮರಿಸಿ ।
ಪಂಚಾಣು ವ್ರತಗಳ ಅನುದಿನ ಪಾಲಿಸಿ ।
ವಂಚನೆ ಮಾಡದೆ ಬಾಳಿರಿ ಸತತಾ ॥5॥

**ಆರತಿ ಹಾಡು (ಶೋಭಾನೆ)**

(ವರವನು ಪಾಲಿಸು ನೀ....ಎಂಬಂತೆ) (ಆದಿತಾಳ)
ಆರತಿ ಬೆಳಗುವೆನೂ... ಮಂಗಲ ।
ಆರತಿ ಎತ್ತುವೆನೂ... । ಮಂಗಲ ಆರತಿ ಬೆಳಗುವೆನೂ ॥ಪ॥
ಜೀವನದೇಳ್ಗೆಗೆ ಕಾರಣವಾಗಿಹ ॥ಅ.ಪ.॥
ವರಪದುಮಾಂಬೆಯ ಕರುಣೆಯ ಒಲಿಸೀ ।
ಪೆರಿಬೆಟ್ಟಿನ ಕುಲ ಜ್ಯೋತಿ ನೀನೆನಿಸಿ ।
ಶ್ರೀ ಪದ್ಮರಾಜನಕುವರಿ ಎಂದೆನಿಸಿ ।
ಮೆರೆದಿಹ ವಿಜಯಕುಮಾರಿಗೆ ಹರುಷದಿ ॥1॥
ನಾರಿ ಶಿರೋಮಣಿ ಅನಿಸುತ ಅನುದಿನ ।
ಬೀರಲಿ ಪರಿಮಳ ಮುಂದಿನ ಜೀವನ ॥
ಸೇರಿಹ ಪತಿ–ಸುತ–ಗೃಹ ಅದು ಪಾವನ ।
ವಾಗಲಿ ಶಾಂತಿಯು ಸೇರಲಿ ಚಿರದಿನ ॥2॥
ನಡೆ–ನುಡಿಯಲಿ ನೀ ಜಾಣಳೆಂದೆನಿಸೀ ।
ಬಡತನದ ವರ್ಗಕೆ ನೀ ಸಹಕರಿಸಿ ॥
ಪೊಡವಿಯೊಳುನುಪಮ ಕುಲವಧು ಅಸಿಸಿ ।
ಹಿಡಿಯುವ ಕಾರ್ಯದಿ ಕೀರ್ತಿಯ ಗಳಿಸೌ ॥3॥
ಗುರುಗಳ ಹಿರಿಯರ ಬಳಗಕೆ ನಮಿಸಿ ।
ಪರಹಿತ ಚಿಂತನೆಯನು ದಿನ ಬಯಸಿ ।
ಪರಮ ಪಂಚಾಕ್ಷರಿ ಮಂತ್ರವ ಸ್ಮರಿಸಿ ।
ಚಿರಸುಖ ಶಾಂತಿಯ ನಿನಗಾಗಲಿಯೆಂದೂ ॥4॥

**ಆರತಿ ಹಾಡು**

(ಮಂಗಳ ಪಾಡುವೆ...ಎಂಬಂತೆ) (ಆದಿತಾಳ)
ಆರತಿ ಎತ್ತುವೆ ಶ್ರೀ ಜಗತ್ಪಾಲಗೆ ।
ಆರತಿ ಬೆಳಗುವೆ ಶ್ರೀ ಮಾಘಮಾಲೆಗೆ ॥ಪ॥
ನಾಗರಾಜನ ರಾಣಿ ಪದಕೆ ಬಾಗುತಲಿ ।

ಭೋಗಿಗಳರಸನ । ರೂಪ ತಾಳುತಲಿ ।
ಮಾಘಮಾಲೆಯ ಮನ । ಕದ್ದೊಯ್ದ ಧೀರಗೆ ।
ಆರತಿ ಬೆಳಗುವೆ ನಾ ಹರುಷದಲಿ ॥1॥
ವೀರಸುವೀರನ ಚರಣವ ಸ್ಮರಿಸಿ ।
ನಾರಿ ಶಿರೋಮಣಿ ಬಿರುದನು ಧರಿಸಿ ।
ಓರೆ ಕಣ್ಣಿನ ನೋಟ ಬೀರಿ ಪತಿಯಮನ ।
ಸೂರೆ ಮಾಡಿದ ಧೀರೆ । ಶ್ರೀ ಮಾಘಮಾಲೆಗೆ ॥2॥
ಸುರಪತಿ ಶಚಿಯಂತೆ ಮನ್ಮಥ ರತಿಯಂತೆ ।
ಭರತೇಶಚಕ್ರಿ ಸೌಭದ್ರೆಯರಂತೆ ।
ವರ ರಘುವೀರ ಸೀತೆಯರಂತೆ ನಿತ್ಯದಿ ।
ಜೊತೆಯಾಗಿ ಬಾಳಿರಿ ಸುಖಸಂಪ್ರೀತಿಯಲಿ ॥3॥
ಪಂಚಾಕ್ಷರಿ ಮಂತ್ರ ಮನದಿ ಸ್ಮರಿಸುತಾ ।
ಪಂಚಾಣುವ್ರತಗಳ ದಿನವು ಪಾಲಿಸುತಾ ।
ವಂಚನೆಯಿಲ್ಲದೆ ಬಾಳು ನಡೆಸುತಾ ।
ಆದರ್ಶ ದಾಂಪತ್ಯ ನಡೆಸಿರಿ ನಿರತಾ ॥4॥
(ಹರಿಯೆ ನಿನ್ನಾ ವಿರಸಭಾವಾ...ಎಂಬಂತೆ) ॥ರೂಪಕತಾಳ॥
ಎತ್ತುವೆನೂ ಆರತಿಯನು ವಧುವರರಿಗೆ ।
ಮುತ್ತಿನಂಥಾ ಆರತಿಯನು ನಿಮಗೆ ಬೆಳಗುವೆ ॥ಪ॥
ಬಾಳು ಹೊನ್ನು ಆಗಲೆಂದು ಜಗತ್ಪಾಲಗೆ ।
ಶೀಲ ನಡತೆ ಬೆಳಗಲೆಂದು ಮಾಘಮಾಲೆಗೆ ॥
ಬಾಳು ಹರುಷವಾಗಿ ವರುಷ । ನೂರು ದಾಟಲಿ ॥1॥
ಸೋಲು–ದುಃಖ ಕಳೆದು ನಾಭಿರಾಜ ಬಾಳಲಿ ।
ಸೇರಿದಾ ಸಂಸಾರದಲ್ಲಿ ಕೀರ್ತಿ–ಬೆಳೆಯಲಿ ॥
ಬೆಳಗುವೆನೂ ಆರತಿಯನೂ ಚಂಪಕುವರಿಗೆ ॥2॥
ಪರಮ ಪಂಚಾಕ್ಷರಿಯ ನಿತ್ಯ ಸ್ಮರಿಸಿ ಬಾಳಿರಿ।
ಹರುಷ ಸೌಖ್ಯ ಶಾಂತಿ ಹೊಂದಿ ಜಯವ ಗಳಿಸಿರಿ ॥3॥
(ಸುಂದರ ನಾರಿ ಪ್ರೀತನ ಪ್ಯಾರಿ...ಎಂಬಂತೆ) (ಆದಿತಾಳ)
ಎತ್ತುವೆನಾನವರತ್ನದಾರತಿ । ಎತ್ತುವೆ ತೋಷದಲಿ ॥
ವಿಜಯಕುಮಾರಿಗೆ ಹರುಷದಲಿ...॥ಪ॥
ಪಾರಿಶ್ವನಾಥಾನಾ ಶ್ರೀ ಪದುಮಾಂಬೆಯ ।
ಸ್ಮರಿಸುತ ಎತ್ತುವೆನಾ ಆರತಿ । ಹರುಷದಿ ಬೆಳಗುವೆನಾ ॥1॥
ನಿನ್ನಯ ಜೀವನದೇಳ್ಗೆಗೆ ಕಾರಣ । ವೆನ್ನುವ ಜ್ಯೋತಿಯನಾ ।
ಬೆಳಗುವೆ । ಆರತಿ ಎತ್ತುವೆನಾ ॥2॥
ಮಂಗಳ ಆರತಿ ಜೀವನ ಜ್ಯೋತಿ ।
ಶೃಂಗಾರದ ನೀತಿ । ಬಾಳಿಗೆ । ಒದಗಲಿ ಸುಖ–ಶಾಂತಿ ॥3॥
ನಿತ್ಯದ ನಡೆನುಡಿ ಉತ್ತಮವಿರಿಸಿ । ಪಂಚಾಕ್ಷರಿ ಸ್ಮರಿಸಿ ।

ಬಾಳಿರಿ । ಎನ್ನುತ ಬೆಳಗುವೆನೂ ॥4॥

(ಭಯ್ಯಾ ಮೇರಿ....ಎಂಬಂತೆ) (ಆದಿತಾಳ)

ಆ...ರತಿ ಎತ್ತುವೆ ನಿನಗಾರತಿ । ಆರತಿ । ಮಂಗಲಮಯದಾರತಿ । ಆರತಿ॥

ಜೀವನ ಸಾರಥಿ । ಈ ಮಹಾಜ್ಯೋತಿ ಆರತಿ ॥ಪ॥

ಹಿತಕರವಿರುವಾ ಸುಖವನು ಕೊಡುವಾ ।

ಬಾಳಿಗೆ ನೂತನ ಚೇತನ ಬರುವಾ ।

ಆನಂದಮಯದಾರತಿ । ಈ ಜ್ಯೋತಿ...॥1॥

ನಿನ್ನಯ ಮಂದಿನ ಸುಖಕಿದು ಕಾರಣ ।

ವೆನಿಸುವ ಆರತಿಯನು ಬೆಳಗುವೆ ನಾ ॥

ಮಂಗಲಮಯದಾರತಿ । ಈ ಜ್ಯೋತಿ ॥2॥

ಜೀವನ ದಾರಿ ಮಂಗಲಕಾರಿ ।

ಯಾಗಲು ಪಂಚಾಕ್ಷರಿ ಸಹಕಾರಿ ।

ಸ್ಮರಿಸುತ ಬಾಳಿರಿ ಎಂದೂ ನಾನಿಂದೂ ॥3॥

(ಬೃಂದಾವನದೊಳು...ಎಂಬಂತೆ) (ಆದಿತಾಳ)

ಆರತಿ ಬೆಳಗುವೆ ಹರುಷದಲೀ ।

ನವ ವಧುವರರಿಗೆ ನಾ ತೋಷದಲಿ ॥

ಸೇರಿದ ಈ ದಾಂಪತ್ಯದಿ ಚಿರಸುಖ ।

ಸೇರುತ ನಲಿಯಲಿ ಬಾಳಿನಲಿ ॥ಪ॥

ವಿಮಲಚರಿತ ಶ್ರೀ ನಾಭಿರಾಜನಿಗು ।

ಅಮಲಮತಿಯ ಶ್ರೀ ಚಂಪಕುವರಿಗೂ ॥

ಜರಗಿದ ವಿವಾಹ ಚಿರದಿನ ಬಾಳಲು ।

ನಮಿಸುವೆ ಶ್ರೀ ಪದುಮಾಂಬೆಯನೂ ॥1॥

ನಿತ್ಯದ ನಡೆ-ನುಡಿ ಉತ್ತಮವಾಗಲಿ ।

ಸತ್ಯದೇವ-ಗುರು ಭಕ್ತಿಯಲಿ ।

ಎತ್ತಿಹಜನುಮವು ಸಾರ್ಥಕವಾಗಲಿ ।

"ಶಕ್ತಿ ಸ್ವರೂಪಿಣಿ" ಕರುಣೆಯಲಿ ॥2॥

ವರ ಸದ್ಧರ್ಮದ ಏಳಿಗೆ ಬಯಸಿ ।

ಪರಮ ಪಂಚಾಕ್ಷರಿಯನು ದಿನ ಸ್ಮರಿಸಿ ।

ಧರಣೇಂದ್ರನರಸಿಯ ಅನುದಿನ ಧ್ಯಾನಿಸಿ ।

ಧರೆಗಾದರ್ಶದ ಬಾಳುವೆ ನಡೆಸಿ ॥3॥

(ಅನುಪಮ ಜ್ಞಾನ ದಿವಾಕರ...ಎಂಬಂತೆ) (ಆದಿತಾಳ)

ಮಂಗಲಾರತಿ ನವ ವಧುವರರಿಗೆ । ಮಂಗಲವಾಗಲು ಬೆಳಗುವೆನೂ ।

ಮಂಗಲ ಜೀವನ ಬಾಳಿಗೆ ಚೇತನ । ಸಿಂಗಾರದ ಚೆಲುರಂಗನು ಕೊಡಿಸುವ ॥ಪ॥

ಚಾರುಮನೋಹರವಾಗಲಿ ಚಿರಸುಖ । ಸೇರಲಿ ಈ ಸಂಸಾರದಲಿ ।

ತೋರುವ ದುಃಖ ನಿವಾರಣೆಯಾಗಲಿ । ಬೀರಲಿ ಪರಿಮಳ ಬಾಳಿನಲಿ ॥1॥

ಸತಿಪತಿ ಒಮ್ಮತ ಹಿತಮಿತಗೂಡುತ । ಜತೆಯ ಬಾಳಿರಿ ಅನವರತಾ ॥

ಸತಿಮಣಿ ಚೇಳಿನಿ ಶ್ರೇಣಿಕರಾಪರಿ । ಜೊತೆಯಲಿ ನಿರ್ಮಲ ಮತಿಯುತರಾಗಿರಿ॥2॥

ಚಿರಸುಖ ಶಾಂತಿ ಸೌಭಾಗ್ಯವು ಸೇರಲು । ಸ್ಮರಿಸಿರಿ ಪಂಚಾಕ್ಷರಿ ಸತತಾ ॥

ದೊರಕಿದ ಜೀವನ ಪಾವನ ಗೊಳಿಸಲು । ಪರಹಿತ ಚಿಂತನೆ ಬಯಸುತ್ತಾ ॥3॥

(ಅಮರಾ ಮಧುರಾ ಪ್ರೇಮಾ...ಎಂಬಂತೆ) (ಆದಿತಾಳ)

ಒಳಗೂ ಹೊರಗೂ ಪ್ರೀತಿ...ಬೆಳಗುವ ಸಾಧನ ಜ್ಯೋತಿ ।

ಬೆಳಗುವೆ ಮಂಗಲ ಆರತಿ ॥ಪ॥

ಸದಾನುರಾಗವ ಅನುದಿನ ಗಳಿಸಿ ।

ಹೃದಯದಳೊಂದೇ ಕಡೆನಿಲಿಸಿ ।

ಒದಗುವ ಬೇಸರ ಕಷ್ಟವ ನೀಗಿಸಿ ।

ಒಲಿದೂ ನಲಿದೂ ಬಾಳುವ ಜ್ಯೋತಿ ।

ಬೆಳಗುವೆ ಮಂಗಲ ಆರತಿ ॥1॥

ವರಪದುಮಾಂಬೆಯ ಕರುಣೆಯ ಒಲಿಸಿ ।

ಪರಹಿತ ಕಾರ್ಯದಿ ಮನವಿರಿಸಿ ।

ದಿನವೂ ಮನವೂ ಶಾಂತಿಯ ಗಳಿಸಿ ।

ಒಲವೂ ಗೆಲುವೂ ಗಳಿಸುವ ಜ್ಯೋತಿ ॥2॥

ಸತ್ಯ ಅಹಿಂಸಾ ಧರ್ಮದ ಜ್ಯೋತಿ ।

ವರ ಪಂಚಾಕ್ಷರಿ ಸಾರಥಿ ।

ಉತ್ತಮ ಧರ್ಮ ಸುತತ್ವದ ಪ್ರೀತಿ ।

ಒಲಿಯೇ ಬೆಳೆಯೇ ಬೆಳಗುವೆ ಆರತಿ ।

ಎತ್ತುವೆನಾ ನಿಮಗಾರತಿ ॥3॥

(ಅನುರಾಗದಾ ಅಮರಾವತಿ...ಎಂಬಂತೆ) ॥ಆದಿತಾಳ॥

ಜಯವಾಗಲೀ ನಿಮಗೆ ಶುಭವಾಗಲಿ । ಚಿರಸುಖ ಶಾಂತಿಯು ನಲಿದಾಡಲಿ ।

ಮಂಗಲ ಆರತಿ ನಿಮಗಾಗಲಿ ॥ಪ॥

ಧರಣೇಂದ್ರರಾಜಗೆ ಜಯವಾಗಲಿ । ವರಪದುಮಾಂಬೆಗೆ ಶುಭವಾಗಲಿ ।

ಬಾಳಿನಲಿ ಬದುಕಿನಲಿ । ಸೋಲು–ತೊಡಕು–ದುಃಖ ತೊಲಗುತ್ತಲಿ ।

ಗೇಲಿನ ಮಾಲೆಯು ಕೈಸೇರಲಿ ॥1॥

ಅರಹಂತ–ಜಿನಸಿದ್ಧ–ಚರಣವನೂ ।

ಮರೆಯದೆ ವರ ಬ್ರಹ್ಮರಾಣಿಯನೂ ।

ದಿನ ನಿತ್ಯದಿ ಜೀವನದಿ । ಅನುಪಮ ಶಾಂತಿ ಸೌಭಾಗ್ಯವನೂ ।

ಪಡೆಯಲು ಆರತಿ ಬೆಳಗುವೆನೂ ॥2॥

ಜೀವನ ನಂದನ ವನವಾಗಲಿ । ಸೇರಿಹ ದಾಂಪತ್ಯ ಹೊನ್ನಾಗಲಿ ।

ಪರಮಾತ್ಮನಾ । ಗುಣ ಕೀರ್ತನ । ಅನುದಿನ ಮಾಡಿರಿ ಬಾಳಿನಲಿ ।

ಸಿರಿ–ಭಾಗ್ಯ–ಸುಖ–ಶಾಂತಿ ಕೈಸೇರಲಿ ।3॥

ಪರಮ ಪಂಚಾಕ್ಷರಿ ಮಂತ್ರವನೂ । ಮರೆಯದೆ ಸದ್ಧರ್ಮದೇಳ್ಗೆಯನೂ ।

ಒಮ್ಮತದಿ ಆನಂದದಿ । ಚಿರದಿನ ಬಾಳಿರಿ ತೋಷದಲಿ ।

ಆರತಿ ಬೆಳಗುವೆ ಹರುಷದಲಿ ॥4॥

(ಅನುರಾಗದ....ಎಂಬಂತೆ) (ಆದಿತಾಳ)

ಹರುಷದಲೀ । ನಲಿಯುತ್ತಲಿ । ಚಿರದಿನ ಬಾಳೆಂದು ಬಯಸುವೆನೂ ವರಮುತ್ತಿನಾರತಿ ಬೆಳಗುವೆ ॥ಪ॥

ವರಶಾರದಂಬೆಯು ಮಮತೆಯಲಿ ಧರಣೇಂದ್ರನರಸಿಯು ಕರುಣೆಯಲಿ ॥

ಹರಸುತ್ತಲೀ । ಮೊರೆಯುತ್ತಲೀ ।

ಚಿರಸುಖದೇಳ್ಗೆಯ ನೀಡುತ್ತಲೀ ।

ಹರಷದ ಜೀವನ ನಿಮಗೀಯಲೀ ॥1॥

ಅಂದದ ನಡೆ–ನುಡಿ ಚಿಗುರುತ್ತಲೀ ।

ಚಂದನ ವೃಕ್ಷಕ್ಕೆ ಸುಮವಾಗಲಿ ।

ಅಂದದಲಿ । ಚಂದದಲಿ । ಕುಂದು ಕಳೆದು ಬಾಳು ಮುಂದಿನಲಿ ।

ಶುಕ್ಲ ಪಕ್ಷದ ಚಂದ್ರನಂತಾಗಲಿ ॥2॥

ಹಿರಿದಾದ ಪಂಚಾಣುವ್ರತಗಳಲಿ ।

ಪರಮ ಪಂಚಾಕ್ಷರಿ ಸ್ಮರಿಸುತಲಿ ।

ಅನುದಿನವೂ ತನುಮನವೂ । ಬೆರಸುತ್ತ ಬಾಳಿರಿ ಸತ್ಯದಲಿ ।

ಆರತಿ ಬೆಳಗುವೆ ತೋಷದಲಿ ॥3॥

**ಶುಭಾಶೀರ್ವಾದದ ಹಾಡು**

(ಸ್ವಾಮಿ ದೇವನೆ...ಎಂಬಂತೆ)

ಆಗಲೀ ನಿಮಗಾಗಲಿ । ಸುಖವಾಗಲಿ ಶುಭವಾಗಲಿ ।

ನಾಗರಾಜನ ರಾಣಿ ನಿಮ್ಮನು । ಹರಸಿ ಪ್ರೀತಿಸಿಕಾಯಲಿ ॥ಪ॥

ಇಂದಿನಾ ದಿನದಿಂದ ಜೀವನ । ನಂದನಾ ವನವಾಗಲೀ ।

ಬಂದು ಬಳಗವು ಗೃಹವು । ಪತಿ (ಸತಿ) ಸುತರಿಂದ ಶಾಂತಿಯು ನೆಲಸಲಿ ।

ಅಂದದಾ ನಡೆನುಡಿಗಳಿಂದಲಿ । ಕುಂಡಣಕೆ ಸಮವಾಗಲಿ ॥1॥

ಧರಣರಾಜನ ಅರಸಿಯನು ನೀವ್ । ಸ್ಮರಿಸಿ ಬಾಳಿರಿ ನಿತ್ಯದಿ ।

ಚರಿತಸದ್ಗುಣ ಭರಿತರೆನಿಸುತ । ಮೆರೆದು ಬಾಳಿರಿ ಲೋಕದಿ ।

ಹರುಷದುಲ್ಲಾಸದಲಿ ನಡೆಯಿರಿ । ಸತ್ಯ ಧರ್ಮದ ಮಾರ್ಗದಿ ॥2॥

ನಡೆವ ಚರಿತದಿ ನುಡಿವ ವಚನದಿ । ನೀತಿ ಮಾರ್ಗವ ಹಿಡಿಯುತಾ ।

ಹಿಡಿವ ಕಾರ್ಯದಿ ದುಡಿವ ಕೆಲಸದಿ । ಧರ್ಮದೇಳ್ಗೆಯ ಬಯಸುತಾ ।

ಮೊಡವಿಯಲಿ ಆದರ್ಶ ಸತಿಪತಿ । ಅನಿಸಿ ಬಾಳಿರಿ ನಿತ್ಯದಿ ॥3॥

ಪರಮ ಮಂಗಲ ಗುರುಗಳೈವರಿ । ಗೆರಗಿ ಬೆಳಗುವೆ ಆರತಿ ।

ಸೇರಿದಾ ಸಂಸಾರದಲಿ ಸುಖ । ಸೇರಲಿದುವೆ ಸಾರಥಿ ।

ಹರುಷದಲಿ ಶೋಭಾನ ಪಾಡುತ । ಬೆಳಗುವೆ ಮಂಗಲಾರತಿ ॥4॥

ಪರಮ ಪಂಚಾಕ್ಷರಿಯ ಮಂತ್ರವ । ಸ್ಮರಿಸಿ ಭಜಿಸುತ ನಿತ್ಯದಿ ।

ಹಿರಿಯರಾ ಮನ ಕೆಡಿಸದೆ ಪರ । ಹಿತವ ಚಿಂತಿಸಿ ಧರ್ಮದಿ ।

ಕೊರೆತೆಯಾಗದ ರೀತಿ ಬಾಳಿರಿ । ಎಂದು ಹರಸುವೆ ಪ್ರೇಮದಿ ॥5॥

**ಬಾಗಿಲು ತಡೆಯುವ ಹಾಡು**

ವಾರಣಗಮನೆ ವೈಯಾರಿ ಮನೋಹರಿ । ನಾರೀಮಣಿಯು ಖೇಚರಿಯು

ಇವಳು । ನಾರೀಮಣಿಯು ಖೇಚರಿಯು ।1।

ಸಾರಿ ಬಂದಳು ಬಾಗಿಲ ತಡೆದಿಹಳ್ಯಾರು ಸಾರಮ್ಮ ಪಡಿಗಳ ತೆಗೆದು । ಕೆಲ ಸಾರಮ್ಮ ಪಡಿಗಳ ತೆಗೆದು ।2।

ವೀರಖೇಚರಿಯಾದರೊಳ್ಳಿತು ನಡೆಯಣ್ಣ । ಯಾರ ಮಾತಿನ ಮೇಲೆ ತಂದೆ ನೀನು ಮತ್ಯಾರ ಮಾತಿನ ಮೇಲೆ ತಂದೆ ॥ 3 ॥

ವೀರನ ಮನುಜಮಂದಾರನುದಾರನು । ಯಾರ ಕೇಳಲು ಬೇಕು ತಂಗಿ ನಾನು । ಮತ್ಯಾರ ಕೇಳಲು ಬೇಕು ತಂಗಿ ॥ 4 ॥

ಬಲ್ಲಿದನಾದಡೆರಿಪುರಾಯರನೆಲ್ಲ । ತಲ್ಲಣಗೊಳಿಸು ಹೋಗಣ್ಣ ನೀನು ತಲ್ಲಣಗೊಳಿಸು ಹೋಗಣ್ಣ ॥ 5 ॥

ಎಲ್ಲರ ಮರ್ದಿಸಿ ವಿಜಯರ್ದ್ಧಶೈಲದ । ಫುಲ್ಲಾಕ್ಷಿಯನು ತಂದೆನಮ್ಮ ನಾನು ಫುಲ್ಲಾಕ್ಷಿಯನು ತಂದೆನಮ್ಮ ॥ 6 ॥

ಎಲ್ಲಿಯ ನಾರಿಯೆ ಫುಲ್ಲಾಕ್ಷಿ ಇವಳಲ್ಲ । ನಲ್ಲೆಯೆಂದರೆ ಬಿಡೆನಣ್ಣ ನಾನು । ನಲ್ಲೆಯೆಂದರೆ ಬಿಡೆನಣ್ಣ ॥ 7 ॥

ಸಲ್ಲಲಿತಾಂಗಿಯರೊಳಗತಿ ರೂಪಿನ । ಚಲ್ಲೆಗಣ್ಣೆಯು ಕಾಣೆ ತಂಗಿ । ಇವಳು ಚಲ್ಲೆಗಣ್ಣೆಯು ಕಾಣೆ ತಂಗಿ ॥ 8 ॥

ಮೆಚ್ಚಿ ಬಂದಳು ಮನದಿಚ್ಛೆಯರಿತು ಬಹು ಹೆಚ್ಚು ಮಾತಿಗೆ ಬಿಡೆವಣ್ಣ ನಿನಗಚ್ಚು ಮಾತಿಗೆ ಬಿಡೆವಣ್ಣ ॥ 9 ॥

ಕಚ್ಛಮಹಾಭೂಪನುದರ ಸುಧಾಕರೆ । ಮೆಚ್ಚಿ ಬಂದವಳಲ್ಲ ತಂಗಿ ಇವಳು । ಮೆಚ್ಚಿ ಬಂದವಳಲ್ಲ ತಂಗಿ ॥ 10 ॥

ಪಲ್ಲವಾಧರೆಯಾದರೊಳ್ಳಿತು ನಡೆಯಣ್ಣ । ಬಲ್ಲವಿಕೆಯ ತೋರಬೇಡ ನಿನ್ನ ಬಲ್ಲವಿಕೆಯ ತೋರಬೇಡ ॥ 11 ॥

ಫುಲ್ಲಶರನ ಮಂತ್ರದೊಲ್ಲಭೆಯನು ಇಂತು । ಗೆಲ್ಲುವ ನುಡಿಯದಿರಕ್ಕ ನಿನ್ನ ಗೆಲ್ಲುವ ನುಡಿಯದಿರಕ್ಕ ॥ 12 ॥

ದುಷ್ಟರಾಯನ ಕಡಿ । ದಟ್ಟುವ ಸಮಯದಿ । ಬಟ್ಟೆಯೊಳಗೆ ಸಿಕ್ಕಿದವಳು ನಡು । ಬಟ್ಟೆಯೊಳಗೆ ಸಿಕ್ಕಿದವಳು ॥ 13 ॥

ಪಟ್ಟಧರೆಯು ನಮಿರಾಜನನುಜೆ ಇವಳು । ಬಟ್ಟೆಯೊಳಗೆ ತರಲಿಲ್ಲ ನಡುಬಟ್ಟೆಯೊಳಗೆ ತರಲಿಲ್ಲ ॥ 14 ॥

ಸಾರಿ ಬಂದಡೆ ಬಾಗಿಲ ಬಿಡುವೆ ನಮ್ಮಣ್ಣನ । ವಾರಿಜಾಕ್ಷಿಯೆ ಹೆಸರೇನೆ ॥ ವಾರಿಜಾಕ್ಷಿಯ ನಿನ್ನ ಹೆಸರೇನು ॥ 15 ॥

ಪಂಕಜ ಮುಖಿಯಳೆ ಕೊಂಕಿದ ಕುರುಳವಳೆ । ಬಿಂಕಗಾತಿಯ ಹೆಸರೇನು । ನಿನ್ನ ಬಿಂಕಗಾತಿಯ ಹೆಸರೇನೆ ॥ 16 ॥

ಕುಂಕುಮಾಂಗಿನಿ । ಕೇಳು ಸಾರಸವತಿಯು । ಮೀನಂಕನರಸಿಯೆನ್ನ ಹೆಸರು ಮೀನಾಂಕರಾಣಿಯೆನ್ನ ಹೆಸರು ॥ 17 ॥

ಅಂಬುಜಾಂಬಕಿ ಸುಂದರಾಂಗಿ । ಪೂರ್ಣೆಂದು । ವಿಡಂಬೆ ನಿನ್ನಯ ಹೆಸರೇನೇ ವಿಡಂಬೆ ನಿನ್ನಯ ಹೆಸರೇನೆ ॥ 18 ॥

ರಂಭೆ ಪುತ್ಥಳಿ ಬೊಂಬೆ । ಕರುಣಸಾಗರ ಚಂದ್ರಬಿಂಬೆ । ಕಾಣಮ್ಮಯನ್ನರು ।

ಚಂದ್ರಬಿಂಬೆ ಕಾಣಮ್ಮಯೆನ್ನ ಹೆಸರು
ಖೇಚರಿಯೊ ಭೂಚರಿಯೊ ನೀವತ್ತಿಗೆಯು ಕಾಣೆ । ಸೂಚಿಸಿ
ನಡೆ ನಿನ್ನ ಹೆಸರ ॥ ನೀನು ಸೂಚಿಸಿ ನಡೆ ನಿನ್ನ ಹೆಸರ ॥
ಭೂಚರರನು ಮರ್ದಿಸಿ । ದತಿ ವಿದ್ಯಾಚಾರಿಯು ಯೆನ್ನ ಹೆಸರು ॥
ಬಿಡೆ ನಿನ್ನ ಗಾಡಿಯ । ನಡೆನಡೆ ಬಾಗಿಲೋಳ್ । ಬಿಡೆನು ಕಾಣೆಲೆ ಮೃಗನೇಶ,
ನಾನು । ಬಿಡೆನು ಕಾಣೆಲೆ ಮೃಗನೇತ್ರೆ ॥

**ಬಾಗಿಲು ತಡೆಯುವ ಹಾಡು**

(ಘಡಿ ಘಡಿ...ಎಂಬಂತೆ)

**ತಂಗಿ :**

ಬಿಡೆ ಬಿಡೆ ಬಿಡೆ । ನಾ ಬಿಡೆನೂ ಬಾಗಿಲನೂ ತಡೆದಿಹೆನೂ ।
ನಿನ್ನೊಡಗೂಡಿಹ ಸೊಬಗಿನ ನಾರೀ ।ಯಾರಿವಳೂ ನಿಜ ಹೇಳೂ? ॥ಪ॥
ಆಗದಾಗದೂ ಈ ಬಾಗಿಲೊಳು । ಪೋಗಲು ನಾಬಿಡೆ ನಿಜ ಹೇಳು ಯಾರಿವಳೂ?।
ನಿನ್ನಯ ಕೈಗಳ ಪಿಡಿಯುತ ಜತೆಯಲಿ । ಉಲ್ಲಾಸದಿ ತಾ ನಿಂತವಳೂ ಯಾರಿವಳೂ? ।
ಯಾವ ವಂಶ ಕುಲ ಜಾತಿಗಳೂ । ನೀತಿಗಳೂ ಧರ್ಮಗಳೂ ॥ ಯಾರಾಗಿಹರು ತಾಯಿ
ತಂದೆಗಳು ।
ನಿಜ ಹೇಳು ಯಾರಿವಳೂ?॥ ಬಿಡೆ ಬಿಡೆ ॥1॥
ನಿನ್ನಯ ರೂಪಕ್ಕೆ ಮೆಚ್ಚಿ ಬಂದವಳೊ । ನೀನೇ ಪ್ರೇಮಿಸಿ ಬಂದವಳೊ? ಯಾರಿವಳೂ?॥
ಹೇಳದೆ ಕೇಳದೆ ಓಡಿ ಬಂದವಳೋ । ಏನು ಮೋಡಿಗಳ ತಿಳಿದಿಹಳೋ? ಯಾರಿವಳೂ?॥
ನಸುನಗೆ ಬೀರುತ ನಿಂತಿಹಳೂ ನೋಡುವಳೂ । ಯಾರಿವಳೂ ॥
ನಿನ್ನಯ ರೂಪಕ್ಕೆ ತಕ್ಕಂತಿಹಳೂ ಯಾರಿವಳೂ ನಿಜ ಹೇಳೋ? ಬಿಡೆ ಬಿಡೆ...॥2॥

**ಅಣ್ಣ:**

ಬಿಡೂ ಬಿಡೂ ಬಿಡು ಬಾಗಿಲನೂ । ಪೋಗುವೆನು ಪೇಳುವೆನೂ ।
ಏತಕೆ ಕೋಪಾ ನಿನಗೀತಾಪ । ಪೇಳುವೆನೂ ಸತ್ಯವನೂ । ಬಿಡೂ ಬಿಡು....॥1॥
ಹೇಳದೆ ಓಡುತ ಬಂದವಳಲ್ಲಾ ಹೇಳದೆ ಕೇಳದೆ ತಂದಿಲ್ಲಾ । ಹೇಳದೆ ಕೇಳದೆ ತಂದಿಲ್ಲಾ ।
ಮೋಡಿಮಾಯಗಳ ಇವಳರಿತಿಲ್ಲಾ । ಕೂಡಿಹ ವಂಶವು ಕೆಟ್ಟಿಲ್ಲಾ ಕೂಡಿಹ ವಂಶವು ಕೆಟ್ಟಿಲ್ಲಾ॥
ತಾಳೀ–ಕರಿಮಣಿ ಕಟ್ಟಿಹೆನೂ ಮೆಚ್ಚಿಹೆನೂ ಇವಳನ್ನೂ । ಭೂಸುರ ಬಹು ವಿದ್ವಾಂಸರ ಮೆಚ್ಚಿಸಿ ।
ಬಾಳಿನ ಬೆಳಕನು ತಂದಿಹೆನೂ ॥ ಬಿಡೂ...ಬಿಡು...॥3॥

**ತಂಗಿ :**

ಬಾಬಾ ಬಾ ಬಾರಣ್ಣಾ ಎಲೆ ಅಣ್ಣಾ ನೀ ಧನ್ಯಾ ।
ನಮ್ಮಯ ಗೃಹವನ್ನು ಬೆಳಗುವ ಜ್ಯೋತಿಯ ತಾರಾಣ್ಣಾ ಬಾರಣ್ಣಾ ॥
ನಿನ್ನಯ ನಡತೆಗೆ ಮೆಚ್ಚುತ ನಾನು । ನಿನ್ನಯ ಗೆಳತಿಯ ಹರಸುವೆನೂ ।

ನಿನ್ನಯ ಗೆಳತಿಯ ಹರಸುವೆನೂ । ತಿಳಿಯದೆ ನಾನಾಡಿದ ವಚನವನೂ ಮುನ್ನಿಸು ಎನ್ನುತ
ಬೇಡುವೆನೂ । ಮನ್ನಿಸು ಎನ್ನುತ ಬೇಡುವೆನು ॥
ಎನ್ನಯ ಆಶೆಯ ಪೇಳುವೆನೂ ಭಾಷೆಯನೂ ಕೊಡು ನೀನೂ । ನಿಮ್ಮೊಳು ಜನಿಸುವ
ಸುಕುಮಾರಗೆ ಜತೆ । ಎನ್ನಯ ಕುವರಿಯ ನೀಡುವೆನೂ । ಬಾ...ಬಾ...॥4॥
ಪರಮ ಪಂಚಾಕ್ಷರಿ ಮಂತ್ರವ ಸ್ಮರಿಸಿ । ಮರೆಯದೆ ಜಗದಾಂಬೆಯನುತಿಸಿ । ಮರೆಯದೆ
ಜಗದಂಬೆಯನುತಿಸಿ ॥ ಶ್ರೀ ಗುರು ಹಿರಿಯರ ಬಳಗಕೆ ನಮಿಸಿ । ಸರಸಿಜಾಕ್ಷಿಯನು
ಜತೆಯೊಳಗಿರಿಸಿ ।
ಸರಸಿಜಾಕ್ಷಿಯನು ಜತೆಯೊಳಗಿರಿಸಿ । ನಸುನಗೆ ಬೀರುತ ಬಾರಣ್ಣಾ । ಎಲೆ ಅಣ್ಣಾ ನೀಧನ್ಯಾ ॥
ನಿನ್ನಯಾ ಜೀವನ ಪರಿಮಳ ಬೀರಲು । ಸತಿಯೊಡನಾಡುತ ಬಾರಣ್ಣಾ॥5॥

## ಕನ್ಯಾದಾನ (ಬುದ್ಧಿವಾದ)

ಬುದ್ಧಿಮಾತು ಹೇಳುತ್ತೇನೆ ನೀನು ಕೇಳಮ್ಮಾ । ಮಗಳೆ।
ಮನ ಶುದ್ಧಳಾಗಿ ಗಂಡನೊಡನೆ ಬಾಳು ನೀನಮ್ಮಾ ॥ಪ॥
ಚಿತ್ತಶುದ್ಧಿಯಿಂದ ಜಿನನಾ ಸ್ಮರಿಸಿ ಬಾಳಮ್ಮ ।ದಿನ।
ನಿತ್ಯದಲ್ಲಿ ಆರು ಕ್ರಿಯೆಯ ನಡೆಸಬೇಕಮ್ಮ ।
ಅತ್ತೆ ಮಾವರಿಗಂಜಿಕೊಂಡು ಸೇವೆ ಮಾಡಮ್ಮ ।ನಿನ್ನ।
ಹತ್ತಿರಾ ಇಹ ಬಂಧುವರ್ಗದಿ ದ್ವೇಷ ಬೇಡಮ್ಮಾ ॥1॥
ಪ್ರೀತಿಯಿಂದ ಸೇವಕರನು ಕಾಣ ಬೇಕಮ್ಮಾ । ಸತ್ಯ ।
ನೀತಿ ನಿಯಮವ ಮೀರಿ ಎಂದಿಗು ನಡೆಯ ಬೇಡಮ್ಮ।
ಸೋತು ದುಃಖದಿ ನೊಂದವರ ಸಂತೋಷ ಪಡಿಸಮ್ಮಾ ।
ಸತ್ಪಾತ್ರವರಿತು ದಾನ ಧರ್ಮವ ಮಾಡಬೇಕಮ್ಮಾ ॥2॥
ಬೀದಿ ಬಾಗಿಲಲಿ ನೀನು ನಿಲ್ಲಬೇಡಮ್ಮ । ಎಂದಿಗೂ ।
ರಾತ್ರಿ ಕಾಲದಿ ಒಬ್ಬಳಾಗಿ ತಿರುಗಬೇಡಮ್ಮ ।
ಕ್ರೋಧ ಮಾನ ಮಾಯೆ ಲೋಭ ತೊರೆದು ಬಾಳಮ್ಮ ।
ಆದರದಲಿ ಅಹಿಂಸ ಧರ್ಮವ ಮರೆಯಬೇಡಮ್ಮಾ ॥3॥
ಹುಟ್ಟಿದಾ ಕುಲ ವಂಶ ಗೌರವನುಳಿಸಿ ಬಾಳಮ್ಮ । ನೀನು ।
ಇಷ್ಟದಿಂದ ಹೊಕ್ಕಿದಾ ಗೃಹಜ್ಯೋತಿಯಾಗಮ್ಮ ।
ಕಷ್ಟಕಾಲದಿ ಕುಗ್ಗಬೇಡ ಶ್ರೇಷ್ಟಕಾಲದಿ ಸೊಕ್ಕುಬೇಡ ।
ಕೆಟ್ಟ ಯೋಚನೆ ತಾಳದೆ ನೀ ಪತಿಯನೊಲಿಸಮ್ಮಾ ॥4॥
ಕಾಲು ಕಿವಿ ಕಣ್ ಬಾಯಿ ಇಂದ್ರಿಯ ಹಿಡಿತಬೇಕಮ್ಮಾ ।
ಮೇಲು ಸೆರಗೂ ಜಾರದಂತೆ ನೋಡಿಕೊಳ್ಳಮ್ಮಾ ।
ಹಾಳು ಹರಟೆಯ ಸುದ್ದಿ ಕತೆಗೆ ಒಲಿಯಬೇಡಮ್ಮಾ।
ಮೇಲೆನಿಪ ಪಂಚಾಕ್ಷರಿಯನೂ ಸ್ಮರಿಸಿ ಬಾಳಮ್ಮಾ ॥5॥

## ಆರತಿ ಹಾಡು

(ಘಡೀ ಘಡೀ...ಎಂಬಂತೆ) (ಆದಿತಾಳ)
ಮನೋಹರಾ । ವಾಗಿರುವಾ । ಶುಭವಿರುವಾ । ಸುಖ ಕೊಡುವಾ ॥
ಬಾಳಿಗೆ ಬೆಳಕನು ನೀಡುವ ಮಂಗಲ । ಆರತಿಯಾ ಬೆಳಗುವೆನೂ ॥ಪ॥

ಜೀವನದೇಳ್ಗೆಯ–ದೀವಿಗೆಯಾಗಿ । ಬಾಳು ಬದುಕಿನಲಿ ಬೆಳಕಾಗಿ...।
ಸಿರಿ ಸುಖ ಶಾಂತಿಗೆ ಕಾರಣವಾಗಿ । ದೊರಕುವ ಬೇಸರಗಳನೀಗಿ ।
ಚಿರದಿನ ಬಾಳಿರಿ ಸೌಖ್ಯದಲೀ । ಸತ್ಯದಲೀ । ಧರ್ಮದಲಿ ॥
ವರಪದುಮಾಂಬೆಯ ಚರಣವ ಸ್ಮರಿಸುತ । ಆರತಿಯಾ ಬೆಳಗುವೆನೂ ॥1॥
ನಡೆ–ನುಡಿಯಲಿ ಬಹುಜಾಣರೆಂದೆನಿಸಿ । ಹಿಡಿಯುವ ಕಾರ್ಯದಿ ಪರಹಿತ ಬಯಸಿ ।
ಪೊಡವಿಯೊಳನುಪಮ ಸತಿ ಪತಿ ಅನಿಸಿ । ದುಡುಕದೆ ಬಾಳಿರಿ ಕೀರ್ತಿಯ ಗಳಿಸಿ ।
ಅರುಹನ–ಸಿದ್ಧನ ಪಾದವನೂ । ಸ್ಮರಿಸುವೆನೂ । ನುತಿಸುವೆನೂ ।
ಪಾರಿಶ್ವನಾಥನ ಹೃದಯದಿಧ್ಯಾನಿಸಿ । ಆರತಿಯಾ ಬೆಳಗುವೆನೂ ॥2॥
ಸತ್ಯ ಅಹಿಂಸೆಯ ಪಾಲಿಸಿ ದೃಢದಿ । ಎರಗಿರಿ ಗುರು ಹಿರಿಯರ ಪದದಿ ।
ಶಕ್ತಿಯ ಪಂಚಾಕ್ಷರಿಯನು ಮನದಿ । ಭಕ್ತಿಯಿಂ ಜಪಿಸಿರಿ ಅನುದಿನದಿ ।
ಅನುಪಮರೆನ್ನಿಸಿ ಬಾಳಿನಲಿ । ಲೋಕದಲಿ । ಮೆರೆಯುತಲಿ ।
ಮಂಗಲ ಆರತಿ ಬೆಳಗುವೆ ನಿಮಗೆ । ಮಮತೆಯಲಿ ಹರುಷದಲಿ ॥3॥

## ಜೋಗುಳ ಹಾಡುಗಳು

ಗಂಡು ಮಗು (ಘಡೀ ಘಡೀ...ಎಂಬಂತೆ) (ಆದಿತಾಳ)

ಜೋ...ಜೋ...ರಾಗವನೂ । ಹಾಡುವೆನೂ ತೂಗುವೆನೂ ।
ಜೋಗುಳ ಹಾಡನು ಲಾಲಿಸು ನೀನು । ಎಲೆ ಕಂದಾ ರಾಜೇಂದ್ರ ॥ಪಲ್ಲ॥
ಎನ್ನಯ ಕಣ್ಣಿನ ಬಾನೊಳು ನೀನು । ಹುಣ್ಣಿಮೆ ಚಂದ್ರನಪರಿ ನೀನೂ...।
ಎನ್ನಯ ವಂಶದ ಜ್ಯೋತಿಯು ನೀನು । ನಿನ್ನಯ ಏಳ್ಗೆಯ ಬಯಸುವೆನೂ...।
ಎನ್ನಯ ಕಣ್ಣಿಗೆ ಆನಂದಾ । ಬಲುಚಂದ । ಎಲೆಕಂದ॥
ನಿನ್ನಯ ಜೀವನ ಪಾವನಗೊಳಿಸಲು । ಸ್ಮರಿಸುವೆನೂ ಪದ್ಮಾಂಬೆಯನೂ ॥1॥
ಕೊಲೆ–ಹುಸಿ–ಕಳವಿಗೆ ನೀನೊಲಿಯದಿರೂ । ಬಲುತರ ಆಶೆಯ ಮಾಡದಿರೂ ।
ಪರಸ್ತ್ರೀ ಪರಧನ ಮೆಚ್ಚದಿರೂ ನೀ । ಗುರುಹಿರಿಯರ ಮನ ಕೆಡಿಸದಿರೂ ।
ನಿನ್ನಯ ಬಾಳಿಗೆ ಬೆಳಕಾಗಿ । ಗೆಲುವಾಗಿ । ಶುಭವಾಗಿ ॥ ನಿನ್ನೆಡೆ ಬರುತಿಹ ।
ಕಷ್ಟವ ನೀಗಲು । ಬೇಡುವೆನೂ ಪದ್ಮಾಂಬೆಯನೂ ।2॥
ಏಕೆ ಸುಮ್ಮನೆ ನೀ ಛಲಪಟುವೆ । ಏತಕೆ ಮಲಗದೆ ನೀನಳುವೆ...।
ಏತಕೆ ಈಪರಿ ನೀ ಕೋಪಿಸುವೆ । ಬೇಕೆಂಬುದನೂ । ನಾನೀವೆ...।
ಹಾಲೂಸಕ್ಕರೆ ಪಾಕವನೂ । ದ್ರಾಕ್ಷಿಯನೂ । ಫಲಗಳನೂ । ನಾನಿನಗೀವೆ ।
ನಸುನಗು ಮಗುವೆ । ಎಲೆಕಂದಾ ರಾಜೇಂದ್ರಾ ॥3॥
ವರ ರಘುವೀರನ ನೀತಿಯ ತಿಳಿದೂ । ಭರತೇಶನ ಒಳ ತತ್ವದಿ ಮೆರೆದೂ...॥
ಪರಮಪಂಚಾಕ್ಷರಿ ಮಂತ್ರಕೆ ಒಲಿದೂ । ಪರಹಿತ ಚಿಂತನೆ ಹೃದಯದಿ ಬೆಳೆದೂ ।
ವರಜಗದಾಂಬೆಯ ನಿತ್ಯದಲಿ । ಸ್ಮರಿಸುತಲಿ ನುತಿಸುತಲಿ ।
ಚಿರಕಾಲ ಬಾಳೆಂದು ಜೋಗುಳ ಪದಗಳ ಹಾಡುವೆನೂ ತೂಗುವೆನೂ ॥4॥

## ಹೆಣ್ಣು ಮಗು

(ಜನುಮನೆನ್ನಾ ಪಾವನವಾಯ್ತು...ಎಂಬಂತೆ) (ಆದಿತಾಳ)

ಜೋ ಜೋ ಜೋ ಜೋ ಜೋ ಜೋ ।
ಜೋಗುಳ ಹಾಡನು ಕೇಳೌ ಜೋ ಜೋ ।

ರಾಗದಿ ನಿನ್ನಾ ತೂಗುವೆ ಎನ್ನಾ ಕಣ್ಮಣಿಯೇ....॥1॥
ನಿನ್ನಯ ಅಂದ । ಅಳದಿರೆ ಚಂದ ।
ನಿನ್ನಯ ನಸುನಗೆ ಪ್ರೇಮದ ಬಂದಾ।
ಎನ್ನಯ ಕಣ್ಮನ ಬಾನಿಗೆ ಚಂದ್ರ । ನೀನಂದಾ... ॥2॥
ಏಕೆ ಸುಮ್ಮನೆ ನೀ–ಛಲ ಪಡುವೆ ।
ಬೇಕಾದುದು ನಿನಗೀಗಲೆ ಕೊಡುವೆ ।
ಸಾಕು ಮಾಡು । ಹರುಷದಿ ನೋಡೋ । ನಲಿದಾಡೂ... ॥3॥
ಸಕ್ಕರೆ–ಜೇನು–ದ್ರಾಕ್ಷೆಯು ಬೇಕೇ ।
ಚೊಕ್ಕ ಹಾಲು ಹಣ್ಣಿನರಸಬೇಕೆ ।
ದುಃಖಿಪೆ ಏಕೆ? । ಈಗಲೇ ಬೇಕೇ? ಮನೋಹರೆ... ॥4॥
ಜೋಗುಳವನ್ನಾಹಾಡುತ ನಿನ್ನಾ ।
ತೂಗುವೆಯೆನ್ನಯ ಭಾಗ್ಯದ ಚಿನ್ನಾ ।
ಕೂಗದೆ ಮಲಗೂ–ನೀ–ಸುಖಿಯಾಗೂ । ಬಾಳಿನಲಿ...॥5॥
ಶೀಲ–ವ್ರತಗಳಲಿ ಚೇಳಿನಿಯಂತೆ ।
ಗೇಳಿನ ಸೀತೆ–ಸಾವಿತ್ರಿಯರಂತೆ ।
ಮೇಲೆನಿಸುವವನಮಾಲೆಯ ತೆರದಿ । ಅನುದಿನದಿ...॥6॥
‘‘ಪರಮಪಂಚಾಕ್ಷರಿ’’ ಮಂತ್ರದ ಸ್ಮರಣಾ ।
ಮರೆಯಲು ಬೇಡಾ ಪದುಮಾಂಬೆಯನಾ ।
ಸ್ಮರಿಸುತ ಮನದಿ । ಬಾಳೌ ಮುದದಿ । ಜೀವನದೀ...॥7॥

**ಜೋಗುಳ**

ಜೋ... ಜೋ... ಜೋ... ಜೋ... ।
ಜೋ ಜೋ ಕಂದಾ ಎನ್ನ ಕಣ್ಣಾನಂದಾ ।
ನಿನ್ನಯ ಅಂದಾ ಅಳದಿರೆ ಚಂದಾ ॥ ಜೋ ಜೋ...॥ಪಲ್ಲ॥
ಏತಕೆ ಸುಮ್ಮನೆ ನೀ ಛಲ ಪಡುವೆ । ಹಾಲನುನಾ ಕೋಡುವೆ ।
ಸಕ್ಕರೆ ದ್ರಾಕ್ಷೆಗಳ ಕೊಡುವೆ । ಜೋಗುಳಗಳ ಹಾಡುವೆ ।
ರಾಗದಿ ತೂಗುವೇ । ನಸುನಗು ಎಲೆಮಗುವೇ ನಿನಗೆ । ಬೇಕಾದುದಾಕೊಡುವೆ ॥1॥
ಆಗಲಿ ನಿನಗೆ ಬಾಳಿನ ಏಳಿಗೆ ನಂದನವನದ ಹಾಗೆ ॥
ಪರಿಮಳ ಪಸರಿಸಲೀ ಧರೆಗೆ ।
ಶ್ರೀ ಗುರು ಹಿರಿಯರ ಚರಣಕೆ ಬಾಗುತ ।
ಪಂಚಾಕ್ಷರಿ ಸ್ಮರಿಸಿ । ಅನುದಿನ । ಜಗದಾಂಬೆಗೆ ನಮಿಸಿ ।2॥

**ಹೆಣ್ಣು ಮಗು**

ಜೋ... ಜೋ... । ಜೋ... ಜೋ... ॥ಪ॥
ಜೋ ಜೋ ಬಾಲೆ ದಿವ್ಯ ವಜ್ರದೋಲೆ ।
ಅನಂದ ಲೀಲೆ ಆಡು ಸುಶೀಲೆ ।
ಬಾಳೌ ಬಹು ವೇಳೆ । ಚಿರ ದಿನ । ಬಾಳೌ ಬಹು ವೇಳೆ ॥ ಅ.ಪ ॥
ಸೀತೆಯ ಭಕ್ತಿ–ಸಾವಿತ್ರಿ ಶಕ್ತಿ ವನಮಾಲೆಯ ಯುಕ್ತಿ ।

ಸತಿ ಮಣಿ ಚೇಳಿನಿಯಾ  ಸ್ಫೂರ್ತಿ । ಪರ ಶಿವ ।
ಸ್ಮರಣೆಯ ಸತ್ಪ್ರೀತಿ । ಗಳಿಸುತ ನೀನು ಪರಮ ಪಂಚಾಕ್ಷರಿ ।
ಮಂತ್ರದ ಮಹಿಮೆಯನೂ । ಸ್ಮರಿಸೂ ಶ್ರೀ ಜಗದಂಬೆಯನೂ ॥1॥
ಭಾರತ ದೇಶದ ದೀವಿಗೆಯಾಗಿ । ನಾರಿಯರಾ ಕುಲ ಮಣಿಯಾಗಿ ।
ಸ॥ ಚ್ಚರಿತವೆ ನಿತ್ಯದ ಕ್ರಮವಾಗಿ ।
ಜೀವನ ಸಾಗಲಿ ಕಿರುಕುಳ ನೀಗಲಿ ।
ಪರಿಮಳ ಬೀರಲಿ ಬಾಳಿನಲಿ । ಹರಸುವೆ । ನಿನ್ನನು ಪ್ರೇಮದಲಿ ॥2॥

**ಅಷ್ಟ ಕಂಬದ ಮಂಟಪವಲಂಕರಿಸಿ...ಎಂಬಂತೆ**

ಅರಹಂತ–ಸಿದ್ಧರಾಚಾರ್ಯರ ಸ್ಮರಿಸಿ ।
ವರ ಉಪಾಧ್ಯಾಯ–ಸಾಧುಗಳನ್ನು ನುತಿಸಿ ।
ಧರಣೇಂದ್ರನರಸಿಯ ಚರಣಕೆ ನಮಿಸಿ ।
ಹರುಷದಿ ತೂಗುವೆ ನಿನ್ನನು ಹರಸಿ ॥ ಜೋ ಜೋ ॥1॥
ನೂತನವೆನಿಸುವ ತೊಟ್ಟಿಲ ತರಿಸಿ ।
ನೂತನ ರೀತಿಯಿಂದದನು ಶೃಂಗರಿಸಿ ।
ಪ್ರೀತಿಯಿಂ ಬಂಧು ಮಿತ್ರರನೆಲ್ಲ ಕರೆಸಿ ।
ಮಾತೆಯು ಜಾತಳ ತೊಟ್ಟಿಲೊಳಿರಿಸಿ । ಜೋ...॥2॥
ಕಳಬೇಡ ಕೊಲಬೇಡ ಹುಸಿಯಾಡಬೇಡ ।
ಇಳೆಯ ಭೋಗದೊಳತಿ ಆಶೆಯು ಬೇಡ ।
ಒಳ ಹೊರಗಿನ ಜನರೊಳು ದ್ವೇಷ ಬೇಡ ।
ಬೆಲು ಜಿನ ಧರ್ಮವನೀ ಮರೆಯ ಬೇಡಾ ॥ ಜೋ..॥3॥

**ಲಗ್ನಪತ್ರಿಕೆ**

ಕರಿಯನೇರಿಕೊಂಡು ತಡಿಯಸೂಡಿಕೊಂಡು
ಅತ್ತಿಯ ಮರನಡಿ ಬರುವ । ಹಡೆದವ್ವ
ಬೀಗರೆಲ್ಲಾರು ಪರರಲ್ಲ.
ಬಂದ ನೆಂಟರಿಗೆ ತಂಬಿಗೇಲಿ ನೀರು ಕೊಡಿರೋ
ಆಡಿ ಜಮಖಾನ ಕೊಡಿರೊ । ಶ್ರೀ ಮಾವಯ್ಯಗೆ
ಆಸರಿಗೆ ಕೊಡಿರೊ ನಾರೇರು.
ಆಸರು ಕುಡಿದ ಭಾವಯ್ಯ ಹೇಳಿದ
ನಮ್ಮ ಬಾಲೈಗೆ ಕೊಡಬೇಕು । ಭಾವಯ್ಯ
ಅಂದುಳ್ಳ ನಿಮ್ಮ ಕುವರಿಯ॥
ಆ ಮಾತು ಹೇಳ್ಯಾರೆ ಈ ಮಾತು ಕೇಳ್ಯಾರೆ
ಹೆಣ್ಣಿನ ಒಪ್ಪಂದ ಮುಗಿದಿತ್ತು
ತಾಳೇಯ ಎಲೆಯ ತರಿಸ್ಯಾರು
ತಾಳೇಯ ಓಲೆ ಬರೆದಾರು । ಹೆಣ್ಣಿಗೆ
ಲಗ್ನದ ಓಲೆಯ ಬರೆದಾರು.

ಹೊನ್ನ ಹರಿವಾಣಕೆ
ಮುತ್ತು ಹವಳತುಂಬಿ
ಪುತ್ರವ್ವನ ಕರೆತನ್ನಿ
ನಾವು ಬರೆದ ಲಗ್ನದ ವಾಲೆಯ
ಮಡಿಲಿಗೆ ತುಂಬಿ ಕುಂಕುಮದಕ್ಷತೆ ಇಡುವೆವು.
(ಸಂಗ್ರಹ : ಜಿ.ಎಸ್. ವಸಂತಮಾಲ)

**ಎಣ್ಣೆ ಒತ್ತುವ ಶೋಭಾನೆ**

ವಂದಿಸುವೆನು ಶಾರದೆ ನಿಮಗೆ
ಕೆಂದಾವರೆ ಎಸಳಿನ ಚರಣಕೆ
ಚಂದಗ್ರಪ್ರಭಜಿನರ ಶೃತಕೆರಗಿ
ಧರಣೀಂದ್ರ ಪದ್ಮಾಂಬೆಗೆ ಅಭ್ಯಂಗದ ಪದನ ಸ್ವರವೆತ್ತಿ ।ಸೋ।
ಎಣ್ಣೆ ವತ್ತುವರರಮನೆಗೆ । ಬಣ್ಣದ ಮೇಲ್ಕಟ್ಟನೆ ಕಟ್ಟಿ
ಸಣ್ಣ ಮುತ್ತುಗಳ ಸರಗಳ । ಮುತ್ತು ಸರಗಳ ತೋರಣ
ಕನ್ನಡಿ ಅಂದದಲಿ ಹೊಳೆವಂತೆ
ಧರಣೀಂದ್ರ ಪದ್ಮಾಂಬೆಗೆ ಎಣ್ಣೆವತ್ತುವರ ಬರಹೇಳಿ॥
ಬಟ್ಟಲೆಣ್ಣೆಯನಿರಿಸಿ ಪಟ್ಟೆಯ ಹಸೆಹಾಸಿ
ಬಟ್ಟ ಮುತ್ತುಗಳ ಕೆಲಕಿರಿಸಿ
ಧರಣೀಂಧ್ರ ಪದ್ಮಾಂಬೆಗೆ ಎಣ್ಣೆವತ್ತ ಬರಹೇಳಿ॥
ಕಿಂಡ್ಢಲೆಣ್ಣೆಯನಿರಿಸಿ ಬಣ್ಣದ ಹಸೆವಾಸಿ
ಸಣ್ಣ ಮುತ್ತುಗಳ ಕೆಲಕಿರಿಸಿ
ಧರಣೀಂದ್ರ ಪದ್ಮಾಂಬೆಗೆ ಉಗುರೆಣ್ಣೆವತ್ತ ಬರಹೇಳಿ॥
ದುಂಡು ಮುತ್ತಿನ ತೊಡಿಗೆಯ ಸಡಲಿಸಿ

**ಶಾಸ್ತ್ರದ ನೀರೆರೆಯುವ ಶೋಭಾನೆ**

ಈಗ ತೋಡಿದ ಭಾವಿ ಈಗಲೆ ಜಲ ಬಿದ್ದೋ
ಬಾಳೆಯ ವನಕೆ ಹರಿದವು(2)
ಹರಿದು ಮಿಕ್ಕನೀರ ರಾಯನ ಜಳಕಕ್ಕೆ ತೆಗೆ ತಂದು ॥
ಅಂದದಲಿ ಚಂದದಲಿ ನೂರಂದದಲಿ ಒಲೆಹೂಡಿ
ಗಂಧದ ಚಕ್ಕೆ ತಳಕಿಕ್ಕಿ ಕಾದೋ ನೀರು ಮದವಣಿಗೆಗೆ
ಆರಕ್ಕೆ ಕೊಂಡರು ನೂರಕ್ಕೆ ಬೆಲೆಯಾದ ಕಟ್ಟೆ ಸೋಕಿದರೆ ಫಲಿರೆಂಬ
ಫಲಿರೆಂಬ ಕಾಲ್ಮಣೆಯ ಮದುಮಗನ ಮೀಯಡಿಗೆ ತೆಗೆತನ್ನಿ
ಹತ್ತು ಕಾಲೇಣಿಯ ಅಟ್ಟಕ್ಕೆ ಹಾಕಿದರು ಹತ್ತು ಮಾನೆಣ್ಣೆ ತೆಗೆತಂದು
ತೆಗೆತಂದು ನಿಸ್ತ್ರೇರು ರಂಭೇರೊತ್ತಿದರು ಉಗುರೆಣ್ಣೆ.
ಅಟ್ಟಡಿಗೆ ಅಡಿಗಲ್ಲು ಮೆಟ್ಟಡಿಗೆ ಸೋಪಾನ ಪಚ್ಚೆಯಕಲ್ಲು ಪದುಮದ
ಪದುಮದ ಬಚ್ಚಲಮನೆಗೆ ಹೋಗಿ ಮೀದಾನು ಮದುಮಗ ॥
ಚಿನ್ನದೊಂಟಿಯ ತೆಗೆದು ತನತಂಗಿಗೆ ಕೊಟ್ಟು

ಚೆನ್ನ ಪಟ್ಟೆಯನಳಿದು ಬಿಳಿದುಟ್ಟು । ಮದುಮಗ
ಬಿನ್ನಾಣದಿಂ ಹೊರಟ ಜಳಕಕೆ ॥
ಚಿನ್ನದ ಕಡಾಯಿಗೆ ರನ್ನದ ತಂಬಿಗೆ ಹಾಕಿ ರನ್ನದ ಭಾರಕೆ ನಡುಬಳುಕಿ
ನಡುಬಳುಕಿ ಮುಡಿ ಸಡಲಿ ವರ್ಣೆರು ನೀರ ಬೆರೆಸಿದರು.
ತಾಳು ತಾಳೆಂದರೆ ತಾಳದೆ ತಂಬಿಗೆ । ತಾಳದೆ ನೀರ ಎರೆಯುತ್ತ
ನೀರೆರೆವ ಅಮ್ಮನಪಿಲ್ಲಿ ಜಾರಿದವೆ ನೀರ ಜಳಕೀಗೆ

**ಬೀಸುವ ಹಾಡು**

ಗೋಧಿ ತುಪ್ಪದಲ್ಲಿ ಅರೆ ಹೊತ್ತಿ
ಉಪ್ಪರಿಗೆ ಒಳಗಿಟ್ಟ್ರವ್ವ ಬೆರಳಿರಿಸಿ
ಹುಮ್ಮಚದ ಅಮ್ಮಯ್ಯ ಬೀಸಿದರೆ
ಹನ್ನೆರಡು ಮಣಗೋಧಿ ಉದುರ್‍ಯಾವು.
ಹಾಲಲ್ಲಿ ಅರೆಹೊತ್ತಿ
ಮಾಳಿಗೆ ಒಳಗಿಟ್ರವ್ವ
ಹುಮ್ಮಚದ ಅಮ್ಮಯ್ಯ ಬೆರಳಿರಿಸಿ
ಬೀಸಿದರೆ ಹನ್ನೆರಡು ಮಣಗೋಧಿ ಉದುರ್‍ಯಾವು
ತುಪ್ಪದಲಿ ಅರೆಹೊತ್ತಿ
ಬೋದಿಗೆ ಮನೆಯೊಳಗಿಟ್ರವ್ವ
ಬೆರಳಿರಿಸಿ ಹುಮ್ಮಚದ ಅಕ್ಕಯ್ಯ ಬೀಸಿದರೆ
ಹನ್ನೆರಡು ಮಣ ಗೋಧಿ ಉದುರ್‍ಯಾವು

**ಉಡಿ ತುಂಬುವ ಹಾಡು**

ಮಡಿಲನು ಧರಣಿನ ಮಡದಿಗೆ ತುಂಬಿರೆ
ಭಾಮಿನಿ ರನ್ನೆಗೆ ಕಾಮಿನಿಯರು ಬಂದು.
ಚೂತ ದಾಳಿಂಬರ ಪೂತ ಚಕ್ಕೋತವು
ಖರ್ಜೂರ ಮಾದಳ ನೂತನ ಕದಳಿ ಫಲವ
ಖ್ಯಾತೆ ಶ್ರೀ ಪದ್ಮೆಗೆ ಪ್ರೀತಿಯಿಂದಲಿ ಬಂದು
ರತುನ ತಟ್ಟೆಯ ಪಿಡಿದು ಅತಿಶಯದಿಂದಲಿ ॥
ಜಂಬುನೇರಿಳೆ ಗಜನಿಂಬೆ ದ್ರಾಕ್ಷಿಯನು
ಸೇಬು ಕಿತ್ತಳೆ ಫಲವ ಅಂಬೆ ಪದ್ಮಾಂಬೆಗೆ
ಅಂಬುಜ ಮುಖಿಯರೆ ಸಂಭ್ರಮದಿಂದಲಿ
ಕುಂಬಿನಿಯೊಳು ನೀವು ನಸು ನಗೆ ನಗುತಲಿ ॥
ದೇವರ ದೇವನ ದೀನ ದಯಾಕರನ
ಪಾರ್ಶ್ವನಾಥನ ಯಕ್ಷಿ ನಾಗಿಣಿ ಮಣಿಗೆ
ಗಾನ ವಿನೋದದಿಂ ನಾರಿಯರೆಲ್ಲರು
ನಾನಾ ಫಲಂಗಳ ಹರುಷದಿಂದಲಿ ತಂದು ॥

**ಹೆಣ್ಣನ್ನು ಹಸೆಗೆ ಕರೆಯುವ ಹಾಡು**

ಎದ್ದು ಬಾರೈ ಹಸೆಗೆ ಮುದ್ದು ಪದುಮಾಂಬಿಕೆ ॥
ಬದ್ದ ಕರ್ಮಿಗಳ ಉದ್ಧರಿಸುತ್ತ ಜಿನ
ಸಿದ್ಧರನ್ನೇ ಭಜಿಸಿ ಜನರ
ಶುದ್ಧಮನದಿ ಮೊರೆದ ಪ್ರಬುದ್ಧೆ ನೀನೀಗ ॥
ರಾಜ ಧರಣೇಂದ್ರನರಸಿ ತ್ರೈಜಗದಿ ಪೂಜೆಯನಾಂತಮಾತೆ
ಕಾಲವ್ಯಾಲಜಯಶೀಲ ಪಾರ್ಶ್ವಜಿನ
ಪಾಲ ಶ್ರೀಪದಭಕ್ತೆ ಭಕ್ತ ಪಾಲಕಿ ಮಾತೇ ಖ್ಯಾತೆ ॥
ನಳಿನಾಕ್ಷಿ ಬಾರೆ ಕಳಹಂಸಯಾನೆ
ಸುಲಲಿತಮಾದ ಸುಮಮಾಲೆ ತಾರೆ
ಕಟ್ಟಾಣಿ ಮಣಿಯೆ ಮೆಟ್ಟಕ್ಕಿಯೊಳ್ನಿಂದು
ಪಟ್ಟದ ಚಕ್ರಿಗೆ ಸುಭದ್ರೆ ಮಾಲೆ ನೀಡೆ ॥

**ಬಾಸಿಂಗ ಮತ್ತು ಕೊಂಡಿಲ ಹಾಡು**

ನೆಂಟ ಭಾವನ ಬಂದು
ಒಂದೇ ಚೂರಿಯ ಹಿಡಿದು
ಚಂದಾದಿ ಬೆಂಡ ಹರಿತಂದು (ನಮ್ಮನಿಯ)
ಕಂದಯ್ಯನ ಹಣೆಯ ಅಳತೆಗೆ.
ಮಣ್ಣಾಗೆ ಹುಟ್ಟೋದು, ಮಣ್ಣಾಗೆ ಬೆಳೆಯೋದು
ಮಣ್ಣು ಸೋಕಿದರೆ ಅರಳೋದು, ಪದ್ಮವ್ವ
ಬೆಂಡು ನಮ್ಮನಿಗೆ ಬರಬೇಕ.
ಬಾವಿ ಕಟ್ಟೆಮೇಲೆ ಬಾಸಿಂಗ ಹೆಣೆವ್ವೋನೆ
ಬಾಸಿಂಗದ ಮ್ಯಾಲೆ ಜಲ್ಲಿ ಬರಲಣ್ಣ, ಗುಡಿಗಾರಣ್ಣ
ಬಾಸಿಂಗದ ಮ್ಯಾಲೆ ಜಲ್ಲಿ ಬರಲಿ.
ಉದ್ದಿನ ಕಾಳಂತೆ ತಿದ್ದಿ ತೀಡಿದ ಬಾಸಿಂಗ
ಸಿದ್ಧರ ಪಾದ ನೆನೆಯುತ, ನಮಿಸುತ
ಮುದ್ದಿನ ಅಳಿಯ ಮುಡಿ ಬನ್ನಿ.
ಬಾಸಿಂಗ ಕಟ್ಟಾಕೆ ಭಾವಗೆ ಬರಹೇಳಿ
ಭಾವ ಬಂದಾರು ಅಕ್ಕಯ್ಯಗೆ ಕೈ ಹಿಡಿದು
ಬೀಸಿ ಶಲ್ಯವ ಹೊದೆಯುತ.

**ಧಾರೆ ಎರೆಯುವ ಶೋಭಾನೆ**

ಧಾರೆಯ ನೆರೆದ ವಿನಮಿ ರಾಜೇಂದ್ರನು
ಧಾರಿಣೀಪತಿ ಭರತ ರಾಜೇಂದ್ರಗೆ ॥
ಧಾರಿಣಿಪತಿ ಭರತಗು ಸ್ತ್ರೀರತ್ನ ಸುಭದ್ರೆಗು
ಭೂರಿ ವೈಭವದಿ ಶೃಂಗಾರ ಮಾಡಿ ॥ಧಾರೆ॥
ರತ್ನ ಮಂಟಪದಿ ಮುತ್ತಿನಕ್ಷತೆ ಹೊಯ್ದು
ಚಿತ್ತಜ ರೂಪನ ಎತ್ತಿ ನಿಲ್ಲಿಸಿದರಾಗ ॥

ನಮಿ ವಿನಮಿಗಳಾಗ ಭರಿತ ತೋಷದಿನಿಂದು
ಮಿರಿ ಮಿರಿ ಮಿನುಗುವ ತೆರೆಯ ಪಿಡಿಯಲು ॥
ವಿನಮಿರಾಜೇಂದ್ರನ ಅನುಜೆಯ ಕರೆತಂದು
ಪುರುಸುತ ನಿದಿರೊಳು ವಿನಯದಿ ನಿಲಿಸಿ
ನಿರ್ಮಲ ಜಲವನು ಸ್ವರ್ಣ ಕುಂಭದಿ ತಂದು
ನಿರ್ಮಲ ಮನದೊಳು ಧರ್ಮಧಾರೆ ಎರೆದರು
ಶುಭ ತಿಥಿ ಶುಭವಾರ ಶುಭತಾರೆ ಲಗ್ನದಿ
ಶುಭ ಮುಹೂರ್ತದಿಧಾರೆ ಸೊಬಗಿನೊಳೆರೆದರು
ಮಡದಿಯ ಕಂಠಕೆ ಪಿಡಿದ ಮಲ್ಲಿಗೆ ಮಾಲೆ
ಬೆಡಗಿನೊಳಿಕ್ಕಲು ಒಡನೆಯೆ ಸತಿಯಳು
ಸುರಗೆ ಶಾವಂತಿಗೆ ಪರಿಮಳ ಸುಮಮಾಲೆ
ಎರೆಯನ ಕೊರಳಿಗೆ ಕರವೆತ್ತಿ ಹಾಕಲು
ಭೇರಿ ನಗಾರಿ ತುತೂರಿ ಕಹಳೆಗಳು
ಸೇರು ತಂಗಳದೊಳು ಭೋರೆಂದು ಮೊಳಗಲು
ಮುತ್ತಿನಾರತಿ ತಂದು ಎತ್ತಲು ಹರುಷದಿ
ಚಿತ್ತಜರೂಪ ಶ್ರೀ ಭರತ ಸುಭದ್ರೆಗೆ
ಸಂತೋಷದಿಂದ ಸುಮಂತ್ರ ಪೂರ್ವಕವಾಗಿ
ನಿಂತು ಭೂಸುರರೆಲ್ಲ ಮಂತ್ರಾಕ್ಷತೆ ತಳಿಯೆ ॥ಧಾರೆ॥

**ನಾಗೋಲೆ ಹಾಡು**

ನೀಲದ ಭಿತ್ತಿಕೆ ಮೇಲೆ । ನಾಲ್ಕು ಮೂಲೆಯು
ನಾಲ್ಕು ನಾಲ್ಕು ಕಂಬಗಳು ವಜ್ರದೊಳಗೇ ॥
ಮೇಲೆ ಪೌಳಭೋಧಿಗೆಯು ಮೇಲೆ ವಜ್ರ ತೊಲೆಗಳು
ಮೇಲೆ ಪಚ್ಚೆ ಮಯವಾದ ರನ್ನ ಮುಕುರದ
ಸಾಲು ತೋರಣ ವಿರಾಜಿಸಿತು ॥
ನಾಗವಲ್ಲಿಯ ಚೂರ್ಣಾದಿಗಳ ಆಗ ತಂದಿರಿಸಿ
ನಾಗವೇಣಿಯರು ಬೇಗ ರಾಗ ಪಾಡುತಲಿ ।
ಭೋಗ ಚಕ್ರಿ ಭರತರಾಜರಾಗವತಿ ಸೌಭದ್ರೇಯು
ಸಾಗಿ ನಿಲ್ಲಲು ಮದವಳಿಗಿಗಾಗ ಕೇಳೆ ಭರತರಾಜ
ರಾಗವತಿಯರು ಹೊಳಲ ಬಲಗೊಂಡು ॥
ಕನ್ನವೇಣಿ ಸಜ್ಜಾಗೃಹಕೆ । ಇನ್ನು ಬಾರೆನಲು
ರನ್ನದ ಕಂಠಿಕೆಯನಿತ್ತೊಡೆ ನೀನು ಬಹೆನೆನಲು
ಚೆನ್ನೆ ಸೌಭದ್ರೇಯ ಮತಿಯನ್ನು ನೋಡಿ
ಭರತರಾಜ ರನ್ನಕಂಠಿಕೆಯನಿತ್ತ
ಇದ ನೋಡಿ ನಸುನಗುತ ಪ್ರಸನ್ನ ವದನೆಯರು ಹೊಳಲ ಬಲಗೊಂಡು ॥
ನಾಗವೇಣಿ ಸಜ್ಜಾಗೃಹಕ್ಕೆ ಈಗ ಬಾರೆನಲು
ಬೇಗದಿಂ ಮುದ್ರಿಕೆ ಇತ್ತೊಡೆ ನೀನು ಬಹೆನೆನಲು

ಭೋಗಿ ಸುಭದ್ರೆಯ ಮೊಗ ನೋಡಿ ಭರತರಾಜ
ಬೇಗ ಮುದ್ರಿಕೆಯನುರಾಗದಿಂದಿತ್ತನು
ಇದ ನೋಡಿ ನಸುನಗುತ ಪ್ರಸನ್ನವದನೆಯರು ಹೊಳಲಸುತ್ತಿದರು.
ಇನ್ನು ಏನು ಸುಭದ್ರೆ ನಿನ್ನ ಮಾತೆನಲು
ನಿನ್ನ ಅರ್ಧಾಸನದಲ್ಲಿ ಮನ್ನಿಸೆಂದನಲು
ನಿನ್ನ ಗೋತ್ರವ ಬಿಟ್ಟು ಎನ್ನ ಗೋತ್ರಕೆ ಬರುವೆಯಾದೊಡೆ
ನಿನ್ನ ಮನ್ನಿಸುವೆನೆಂದನು ಭರತರಾಜ
ಇದನೋಡಿ ನಸುನಗುತ ಪ್ರಸನ್ನವದನೆಯರು ಹೊಳಲ ಬಲಗೊಂಡು
ನಾರಿಮಣಿಯರೆಲ್ಲ ಸಾಕ್ಷಿ । ವೀಳ್ಯವೀಯೆನನನಲು
ನಾರಿ ಸೌಭದ್ರೇಯು ನಾಚಿ ಬಳಿಗೆ ಸಾರಲು
ದ್ವಾರ ತಡೆಯೆ ಸೋದರಿಯರು
ಹಾರ ಪದಕವಿತ್ತು ಮುದದಿ ನೇರ ಸಜ್ಜಾಗೃಕೆ ಬರಲು
ನಾರಿಯರಾರತಿಯ ಎತ್ತಿ ಸಾರಿ ಹರಸಿದರು ಹರುಷದಿ

**ಮದುಮಗಳಿಗೆ ತಲೆ ಬಾಚುವುದು**

ತನ್ನಿರಿ ಬಾಚಣಿಗೆ ತನ್ನಿರಿ ಚವುರಿಯ, ತನ್ನಿರಿ ಚಿನ್ನದ ಕರಡಿಗೆ
ಕರಡಿಗೆಯ ತಂದು ಮದುಮಗಳಿಗೆ
ಹೆತ್ತಮ್ಮನ ಬೇಗ ಬರಹೇಳಿ ॥
ನೀಡಿರಿ ಬಾಚಣೆಗೆ ನೀಡಿರಿ ಚೌರಿಯ
ನೀಡಿರಿ ಚಿನ್ನದ ಕರಡಿಗೆಯ ॥
ನೀಡಿರಿ ಚಿನ್ನದ ಕರಡಿಗೆ ಮದುವಳಿಗೆಗೆ
ಹಿರಿಯಮ್ಮನ ಬೇಗ ಬರಹೇಳಿ.
ಚಿನ್ನದ ಬಾಚಣಿಗೆ ಕನ್ನೆಯರು ತಕ್ಕೊಂಡು
ಕನ್ನೆಯರು ಕರುಳ ಎಡಕೊತ್ತಿ
ಕನ್ನೆಯರು ಕರುಳ ಎಡಕೊತ್ತಿ ಬಲಕೊತ್ತಿ
ಕನ್ನೆಯ ತುರುಬ ಕಟ್ಟಿದರು
ಮುತ್ತಿನ ಜಲ್ಲಿಯಂತೆ ಇರ್ಪುದು ಕೇಶವು
ಇನ್ನಾರಿಗೂ ಚಾಚಲಳವಲ್ಲ
ಇನ್ನಾರಿಗೂ ಚಾಚಲಳವಲ್ಲ ಮದುವಳಿಗೆಯ
ಚಿಕ್ಕಮ್ಮನ ಬೇಗ ಬರಹೇಳಿ
ಅಂಗಳದಲ್ಲಿ ಹುಟ್ಟಿತು ಐದೆಸಳಿನ ಮಲ್ಲಿಗೆ
ಐದೆಸಳು ಸಹಿತ ಕೊಯಿತನ್ನಿ
ಐದೆಸಳು ಸಹಿತ ಕೊಯಿತನ್ನಿ ಮದುಮಳಿಗೆ
ಕನ್ನೆಯರು ಬಂದು ಮುಡಿಗಿಡಿರಿ ॥

**ಎಣ್ಣೆ ಒತ್ತುವ ಹಾಡು**

ಎಣ್ಣೆಯನೊತ್ತಿದರು ಏಣಾಕ್ಷಿಗೆ
ಉಲ್ಲಾಸದಿಂದಲಿ ಸಲ್ಲಲಿತಾಂಗಿಗೆ

ಮೆಲ್ಲನೆ ರಾಗದಿ ಮಲ್ಲಿಗೆ ಹೂವಿನ
ಎಣ್ಣೆಯ ನೊತ್ತಿದರು ॥
ಬಾಲೆಂದು ಫಾಲೆಗೆ ಕಾಲಕಾಲನ ಸತಿಗೆ
ಕಾಳಾಹಿವೇಣಿಗೆ ತಾಳೆಯ ಹೂವಿನ ॥ಎಣ್ಣೆ॥
ಸುಗುಣ ಸಂಪೂರ್ಣೆಗೆ । ನಿಗಮಾದಿ ವಿನುತೆಗೆ
ಜಗದೀಶನರಸಿಗೆ ಜಾಜಿಯ ಹೂವಿನ ॥ಎಣ್ಣೆ॥
ಸುರವರಪಾಲೆ ಗಿರಿರಾಜಬಾಲೆ ಸುರಪುರ ಲೋಲೆಗೆ
ಸಂಪಿಗೆ ಹೂವಿನ ಎಣ್ಣೆಯ ನೊತ್ತಿದರು ॥
ತೈಲವನೊತ್ತಿದರು
ಬಾರೆಂದು ಬಾಲೆಯರು
ಲಲನೆ ವರ ಬಾಲೆಗೆ
ಪದ್ಮಿನಿ ದೇವಿಗೆ ॥ತೈಲವ॥
ಕುಕ್ಕುಟ ವಾಹನೆಗೆ
ಕಾತುರ ಲೋಚನೆಗೆ
ಕಾಮಿನಿ ವರ ಬಾಲೆಗೆ
ಕೇತಕಿ ಪುಷ್ಪದ
ತೈಲವ ನೊತ್ತಿದರು ॥

**ಬಳೆ ತೊಡಿಸುವ ಹಾಡು**

ಬಳೆಯ ತೊಡಲೀ ಬಂದೆ
ಮಡದಿ ಪದ್ಮಿನಿ ದೇವಿಗೆ ॥ಬಳೆ॥
ಹಸಿರು ಕನ್ನಡಿ ಬಳೆ
ವಂಕಿ ಮಾಟದ ಬಳೆ॥ಬಳೆಯ॥
ಮಡದಿ ಪದ್ಮಿನಿ ಕೈಗೆ
ಮುತ್ತು ಮಾಣಿಕದ ಬಳೆ
ಕೆಂಪು ರತ್ನದ ಬಳೆ ॥ಬಳೆಯ॥
ಕೆಂಪು ಸಾಣಿಯ ಬಳೆ
ಹುಮ್ಮಚದ ಪದ್ಮಿನಿ ಕೈಗೆ ॥ಬಳೆಯ॥
ರಂಗು ರಂಗಿನ ಬಳೆ
ನಿಟ್ಟೂರ ತಾಯಿ ಜ್ವಾಲಿನಿ ಕೈಗೆ ॥ಬಳೆಯ॥
ನೀಲವರ್ಣದ ಬಳೆ
ನೀಲಲೋಚನೆ ಪದ್ಮಿನಿ ಕೈಗೆ ॥ಬಳೆಯ॥
ಬಳೆ ಬಂದಿದೆ ಬಾರೈ ಪದ್ಮಿನಿ॥
ಬಳೆ ಬಂದಿದೆ ನೋಡೆ ಪದ್ಮಿನಿ
ಬಳೆ ಇಡಬೇಕೆನುತಲಿ
ವಂಕಿಯ ಬಳೆಗಳು ॥ನಿ॥
ಸಂಪುಗಾರಿಕೆಯಿಂದ ಜೂಜನಾಡಿದರು ॥ಬಳೆ॥

ಶಂಕರನ ಶೆಟ್ಟಿಯ ಬಂದು
ಪದ್ಮಿನಿಯ ಮಂಕು ಮಾಡಿದನಲ್ಲೆ
ಎಳೆಯ ತೆಂಗಿನಕಾಯಿ ಗೊನೆಯ ಬಾಳೆಹಣ್ಣು
ಬಳೆಗೆ ಪೂಜಿಸಿದರು ಭಕ್ತಿಯಿಂದಲಿ
ತಾನು ಬಿಡದೆ ವೇಳೆ
ಪದ್ಮಿನಿ ಕೋಟೆ ಶ್ರೀವರ ಕಳುಹಿ
ಪೋಟಲಿ ಬಳೆಗಳ ತರಬೇಕೆನುತಲಿ
ಜೂಟಿಗಾರಿಕೆಯಿಂದ ಜೂಜನಾಡಿದರು ॥ಬಳೆ॥

## ದಿಬ್ಬಣ ಹೊರಡುವ ಹಾಡು

ಮಾಳಿಗೆ ಒಳಗೆ ಹೋದಾನೆ ಕಂದಯ್ಯ
ಮನೆದೇವ್ರಿಗೆ ಕಾಯಿ ಇಡಿಗಾಯಿ ಒಡೆದ್ಯಾರೆ
ಮನೆದೇವ್ರಿಗೆ ದೀಪ ಉರಿಸ್ಯಾರೆ ॥
ಉರಿಸಿ ಏನೆಂದು ಹೇಳ್ಯಾರೆ
ಸತಿಯೊಳಗೊಂಡೆ ಬರತೇನಿ
ಪತಿಯೊಳಗೊಂಡೆ ಬರತೇನಿ ಅಂದೇಳಿ
ಮನೆದೇವ್ರಿಗೆ ಕೈಯ ಮುಗುದಾರು
ಮಾಳಿಗೆ ಒಳಗ ಹೋದಾರು ಕಂದಯ್ಯ
ಜಿನದೇವ್ರಿಗೆ ಕಾಯೆ ಇಡಿಗಾಯಿ
ಜಿನದೇವ್ರಿಗೆ ಕಾಯಿ ಇಡಿಗಾಯಿ ಹೊಡೆದು ಏನೆಂದು ಹೇಳ್ಯಾರೆ
ಸತಿಯೊಳಗೊಂಡೆ ಬರತೇನಿ ॥ಅಂದೇಳಿ
ಈನದೇವ್ರಿಗೆ ಕೈಯ ಮುಗುದಾರು
ಮಾಳಿಗೆ ಒಳಗೆ ಹೋದಾರೆ ಕಂದಯ್ಯ
ಹೆತ್ತವ್ವನ ಸಿರಿಪಾದಕೆರಗ್ಯಾರು
ಹೆತ್ತವ್ವನ ಸಿರಿಪಾದಕೆ ವಂದನೆ ಮಾಡಿ
ಸತಿಯೊಳಗೂಡೆ ಬರತೇನೆ ॥ಅಂದೇಳಿ
ಹಡದವ್ವಗೆ ಕೈಯ ಮುಗುದಾರು ॥

## ವೀಳೆಯ ಮಡಚುವ ಶೋಭಾನೆ

ರಮಣನ ಸ್ವೀಕರಿಸೆನ್ನ ಪ್ರೇಮದ ತಾಂಬೂಲ
ದ್ಯುಮಣಿ ಶಶಿತೇಜ ಕ್ರಮದೊಳಗಿದ ಮಡಚಿರುವೆ ॥
ಪ್ರೇಮದೊಳು ಭುಜಿಸು ತಾಂಬೂಲನ ॥
ಅಗ್ರದ ಅಡಿಕೆಯ ತರಿಸಿ ಸಾಗರದ ಬಿಳಿಯಲೆ
ಸೊಗಸಿನ ಕೆನೆಸುಣ್ಣ । ಸುಗುಣಿ ತಂದಿರುವೆನು
ರಾಗದೊಳು ಭುಜಿಸು ತಾಂಬೂಲವ ॥
ಕಾಂತನ ಕರ್ಪೂರ ಲವಂಗ । ಸಂತಸದಿ ಜಾಕಾಯಿ
ಇಂತೀ ವೀಳ್ಯೆಯವನು । ಗುಣವಂತನೆ ಹಿಡಿದಿರುವೆನು
ಸಂತೋಷದಿ ಭುಜಿಸು ತಾಂಬೂಲವ

## ಗಂಡು ಹೆಣ್ಣಿಗೆ

ಮಡದಿಯೆ ಸ್ವೀಕರಿಸಾನು । ಕೊಡುತಿಹ ವೀಳ್ಯೆಯ ನೀನು
ಒಡೆದ ಜಾಕಾಯಿ । ಬಿಡಿಸಿದ ಜಾಪತ್ರೆಯು
ಹಿಡಿದಿಹೆ ನೀ ಭುಜಿಸು ತಾಂಬೂಲವ
ಬೆಳೆದಿಹ ಅಡಿಕೆಯ ಲವಂಗ
ಎಳೆತರ ವೀಳ್ಯೆದ ಎಲೆಯ
ಬಿಳಿದಾಗಿಹ ಸುಣ್ಣ । ಬಳಸದೆ ತಂದಿರುವೆನು
ಲಲನೆಯೇ ನೀ ಭುಜಿಸು ತಾಂಬೂಲವ ॥

## ಹೊಳಲು ಬಳಸುವ ಶೋಭಾನೆ

ಇಂದ್ರ ನರೇಂದ್ರ ನಾಗೇಂದ್ರ ವಂದಿತನಾತ । ಚಂದ್ರನಾಥ ಚರಣಕ್ಕೆ ನಮಿಸಿ।
ಇಂದ್ರಾದಿ ಅಷ್ಟಾದಿಕ್ಪಾಲರ ಪೂಜೆಯ । ಚಂದಾದಿಂದ ಕೇಳಿ ಜನರೆಲ್ಲಾ ।
ಆರು ಮಂದಿಂದ್ರಾರೂ । ಹಾರವಳಿಯನುಟ್ಟು । ಹಾರಕ್ಕೆ ಪವಿತ್ರಗಳನಿಟ್ಟು ।
ಹಾರಕ್ಕೆ ಪವಿತ್ರಗಳನಿಟ್ಟು । ಹಾರಕ್ಕೆ ಪವಿತ್ರಗಳನಿಟ್ಟು ಮಾಡಿದರು ।
ನಾಗಂಗಳ ಪೂಜಿ ಕ್ರಮದಿಂದಾ ॥
ಹತ್ತು ಮಂದೀಂದ್ರರೂ । ಪಟ್ಟಾವಳಿಯನುಟ್ಟು । ಹಸ್ತಕ್ಕೆ ಪವಿತ್ರಾಗಳನಿಟ್ಟು
ಮಾಡಿದರೇನಾಗಂಗಳ ಪೂಜೆ ಕ್ರಮದಿಂದಾ॥
ಇಂದ್ರಾದಿಯಾಗಿ ಈಶಾನ್ಯದೀ ಪದಮುಂದೆ । ಚಂದದಿಂದ ಶಾಂತಿಗಳ ಮಾಡಿ ।
ಚಂದಾದಿಂದ ಕಾಂತಿಗಳ ಮಾಡಿ ಪುಷ್ಪಾಂಜಲಿಯಿಂದೆರಗಿ । ಇಂತೆರಡು
ಕರುವ ಮುಗಿದಾರು ॥
ಸೂರ್ಯಮನಿಳೆಯಾದ । ಆಯಾನುಳ್ಳೊಳಲಾನು । ಬೇಗದಲಿ ಮಿಂದು
ಮಡಿಯುಟ್ಟು । ಬೇಗದಲಿ ಮಿಂದು ಮಡಿಯುಟ್ಟು ಅಕ್ಕೈಯ್ಯಾ ಭಾವೆ ನೀ
ಹೊಳಲಾ ಬಳಸೇಳೂ ॥ ಶ್ರೀ॥
ಚಂದ್ರಾ ಮಮಗಿಳೆಯಾದ । ಅಂದವುಳ್ಳೊಲಾಲನು । ಚಂದದಲಿ ಮಿಂದು
ಮಡಿಯುಟ್ಟು । ಚಂದದಲ್ಮಿಂದು ಮಡಿಯುಟ್ಟು ಅಕ್ಕೈಯ್ಯ ಅಕ್ಕಂಜೀವಿ ಹೊಳಲ ಬಳಸೇಳೂ॥ 6॥
ಮಾಳಿಗೆಯೊಳಗೆ । ಬಾಲನ ತೊಡೆಯೊಳಿಟ್ಟು । ಮಹಾವಾಗ್ದೇವಿಯಂತೆ
ನಲಿಯುವಳೇ । ಮಹಾವಾಗ್ದೇವಿಯಂತೆ ನಲಿವಳೇ ಅಕ್ಕೈಯ್ಯ ।
ಭಾವೇನೀಹೊಳಲ ಬಳಸೇಳೂ ॥
ಮಾಳಿಗೆಯೊಳಗೆ । ಬಾಲನ ತೊಡೆಯೊಳಿಟ್ಟು । ಮಹಾವಾಗ್ದೇವಿಯಂತೆ
ನಲಿಯುವಳೇ । ಮಹಾವಾಗ್ದೇವಿಯಂತೆ ನಲಿವಳೇ ಅಕ್ಕೈಯ್ಯ ।
ಭಾವೇನೀಹೊಳಲ ಬಳಸೇಳು ॥
ಉಪ್ಪರಿಯೊಳಗೆ, ಪುತ್ರನ ತೊಡೆಯೊಳಿಟ್ಟು । ವಾಗ್ದೇವಿಯಂತೆ ನಲಿಯುವಳೇ । ವಾಗ್ದೇವಿಯಂತೆ
ನಲಿವಳೇ ಅಕ್ಕೈಯ್ಯ । ನಿಸ್ತ್ರೇ ನೀಹೊಳಲ ಬಳಸೇಳು ॥
ಮೊಲ್ಲೆ ಮಲ್ಲಿಗೆ । ಮರುಗದವನ ಚಂಪಕನಾಗವು । ಕಮಲ ಕಲ್ಹಾರವ
ಕುಳಕುಟ ಜಾಜಿ ಪುಷ್ಪದ ಚಂಡ ಚಂಡನಾಡಿದರು ।
ಧನ ಸಮೃದ್ಧಿಯು  ಆಗಲೆಂದು । ಮನವಿಶುದ್ಧಿಯಿಂ ।
ಕನಕಪುರದೊಳ್ ರಾಜಿಪ ವೀರಜಿನಕ ಯಕ್ಷಿಯ ನೆನದು । ಚಂಡನಾಡಿದು

ಹೂವಿನ ಚಂಡನಾಡಿದರು

**ಹೆಣ್ಣು ಒಪ್ಪಿಸಿಕೊಡುವ ಹಾಡು**

ಇಂದೇಕೋ ಮನೆಯಲ್ಲಿ ಚಂದದ ಬೆಳಕಿಲ್ಲ
ಅಂಗಳದ ಒಳಗೆ ಬೇಳಕಿಲ್ಲ ।
ನನ್ನ ಮಗಳೆ ನೀನಲ್ಲ ನಮ್ಮ ನಡುವಲ್ಲಿ ॥
ಹುಟ್ಟಿದ ದಿನದಿಂದ ಕಟ್ಟಿದ ಕನಸಂತೆ
ಮೆಟ್ಟಕ್ಕಿಯಲ್ಲಿ ನಿನ ನಿಲಿಸಿ
ಕೊಟ್ಟೇವು ಕಟ್ಟಾಣಿಯಂಥ ಅಳಿಯಾಗೆ ॥
ಏಸು ಸಾಕಿದರೇನು ಏಸು ಸಲಹಿದರೇನು
ಬಿಸಾಡಿದಂತೆ ಬಯಲೊಳಗೆ ॥ನನಕಂದ॥
ಕೋಸು ದೂರಕೆ ನಿನ್ನ ಕಳುಹಿದೆ ॥
ಕೊಟ್ಟವರ ಮನೆಯಲ್ಲಿ ಪಟ್ಟದರಸಿಯಾಗಿ
ಪಿಟ್ಟೆಂಬ ನುಡಿಗೆ ಎಡೆಗೂಡದೆ । ಬಾಳಿದರೆ ಬೆಟ್ಟದೊಡಯಾಗೆ ಮಣಿದೇವು ॥
ಹಸನಾಗಿ ನಿನ ಬದುಕು ಹಸರಿಸಿ ಹಬ್ಬಲಿ
ಹಸನಾದ ಕುಡಿಗಳ ಪಡೆಯಲಿ ।
ಹಸನಾದ ಕುಡಿಗಳ ಪಡೆದು ನೀ ಬಾಳೆಂದು
ಉಸಿರಿರುವ ತನಕ ಹರಸೇವು

**ಹಾಲು ತುಪ್ಪ ಸಿಡಿಯುವ ಹಾಡು**

ಸಖೇರು ಸಖಿಯರೆಲ್ಲಾ
ಸಖೇರ್ ಮನೆಯರೆಲ್ಲಾ
ಸಖೇರು ಪಡೆದಂಥ ಕೊಮರಗೆ ಸಿರಿ ನೇಮಿ ಜಿನರಿಗೆ
ಶರಣೆಂದು ಐದೇರು
ಬಾಲಜಿನಪಣೆಗೆ
ಹಾಲಸಿಡಿ ಬನ್ನಿರೆ
ಪಟ್ಟೆಯ ನುಟ್ಟವಳೆ
ಅದಕ್ಕೊಪ್ಪುವ ನಡೆನುಡಿಯಾಳೆ
ಒಪ್ಪಂದಿದ್ದೈದೇರು
ಪುತ್ರ ಜಿಪತಿಗೆ
ಹಾಲ ಸಿಡಿ ಬನ್ನಿರೆ
ಸಿರಿ ನೇಮಿಜನರಿಗೆ
ಶರಣೆಂದು ಐದೇರು
ಬಾಲ ಜಿನಪಗೆ
ಹಾಲಸಿಡಿ ಬನ್ನಿರೆ
ಸಾಲೆಯ ನುಟ್ಟವರೆ
ಅದಕ್ಕೊಪ್ಪುವ ರವಿಕೆ ತೊಟ್ಟವಳೆ
ಒಪ್ಪದಿಂದ್ಯೆದೇರು ॥

ಪುತ್ರ ಜಿನಪತಿಗೆ
ಹಾಲಸಿಡಿ ಬನ್ನಿರೆ
ನೇಮಿ ಜನರಿಗೆ
ಶರಣೆಂದು ಐದೇರು
ಬಾಲಜಿನ ಪತಿಗೆ
ಹಾಲಸಿಡಿ ಬನ್ನಿರೆ

**ಧಾರೆ ಮಂಟಪದಲ್ಲಿ ಐದು ಮಂದಿ ಮುತ್ತೈದೆಯರು ಹಾಡುವ ಆರತಿ ಹಾಡು**

ಶ್ರೀ ಪದ್ಮರಾಜಿಪ ಮಾಣಿಕದೆರಳೆ
ಬಿಗಿದು ಕಟ್ಟಿದ ಮಂಡೆ ಬಿಂಕದ ಕುರಳೆ ॥ ನಿ ॥
ಇಡಿಗಮನೆ ಮಲ್ಲಿಗೆಯರಳೆ
ಆರುಕಂಕಣ ಬಂದಿ ತೋಳವಂಕಿ ಸತಿಯಳೆ
ದೊರೆ ಧರಣೇಂದ್ರ ನಿಮ್ಮ ಮಡದಿ ಪದ್ಮವ್ವಗೆ
ಬೆಳಗುವೆನಾರತಿಯ ॥
ಕೆಂಪು ಮುತ್ತಿನ ಜೊಂಪು
ಎಸಳು ಹೊನ್ನವಾಲೆ
ಅಂಜದ ಕಾಯಾಲೆ
ಸರಕಂಠ ಮಾಲೆ
ಸಂಪಿಗೆ ವರ್ಣ ಸೊಬಗಿನ ಸಾಲೆ
ಮಿಂಚುವ ಮೂಗುತಿಯಿಟ್ಟು
ಪದ್ಮವ್ವಗೆ...
ಮಂಟಪದಾರತಿಯ ಬೆಳಗಿದರು....
ನಂಬಿದೆ ನಾನಿನ್ನ
ಅಂಬುಜ ಲೋಚನೆ
ಅಂದುಗೆ ಕಿರುಗೆಜ್ಜೆ ಇಟ್ಟ ಪದ್ಮಮ್ಮ
ಗಂಧ ಕಸ್ತೂರಿಯನು ಲೇಪನ ಮಾಡಿಸಿ
ಆನಂದಿಂದೊಪ್ಪುವ ಸಂಗೀತ ಲೋಲೆಗೆ
ಮಂಗಳಾರತಿಯ ಬೆಳಗುವೆ ॥
ಭುಂಜಗದೊಡೆಯ ಪಟ್ಟದರಾಣಿಗೆ
ಅರ್ತಿಯಿಂದಲೇ ಮರೆವುತ್ತ ಜಾಣೆಗೆ
ಪಟ್ಟೆಯ ದೇವಾಂಗವ
ನಿರಿನಿರಿಹಿಡಿದು ಉಟ್ಟು
ವಿಸ್ತಾರದಿಂದಲಿ ಬರುವ ಪದ್ಮಮ್ಮಗೆ
ಮಂಟಪದಾರತಿಯ ಬೆಳಗುವೆ ॥

**ಗರ್ಭಾದಾನದ ಶೋಬಾನೆ**

ಶರಣೆಂಬೆ ಶ್ರೀ ಧರಣೇಂದ್ರಗೆ
ಶರಣು ಪದ್ಮಾಂಬೆಗೆ
ಶರಣಕ್ಕೆ ಶರಣೆಂದು ಎರಗಿ
ನಾ ಪೇಳುವೆ ವಿನಯಾದಿ ॥ ಸೋಬಾನವ
ಕನ್ನಡಿ ಮಾಳಿಗೆ ಮನೆಯೊಳಗೆ
ಸುವರ್ಣದ ಗೋಡೆ ಗಮಗಮಿಸಿ
ಕನ್ನೆಯರೆಲ್ಲರೂ
ಮಲಗುವ ಮನೆಯ
ಶೃಂಗಾರ ಮಾಡಿದರು
ಫಲದಾನ ಕೊಡಿಸುತಲಿ
ಕನ್ನೆಯರೆಲ್ಲರೂ
ಮಲಗುವ ಮನೆಯ
ಶೃಂಗಾರ ಮಾಡಿದರು
ಏನಕ್ಕ ಶ್ರೀಯಾಲ ದೇವಿ
ಭೂಮಕ್ಕೆ ಏನೇನ ಬೇಕ ಹೇಳೆ
ಹಾಲು ಸಕ್ಕರೆ
ಪೇಣಿ ಚಿರೋಟಿ
ಖರ್ಜೂರ ಕಜ್ಜಾಯ
ಸಜ್ಜೆಯ ಮನೆಯಲಿರಿಸಿ
ಒಪ್ಪದಿಂದಲಿ ಸಿಂಗರಿಸಿದರು

**ಶುಭ ಶಕುನಗಳು**

ಎದ್ದು ಬರ ಹೇಳೆ ಮೂರು ಲೋಕದ ಐದೇರ
ತಾಯಿ ತಂದುಳ್ಳ ಕೊಮರಿ
ತಾಯಿ ತಂದುಳ್ಳ ತಂಗಮ್ಮನ
ಮೂರ್ತಕೆ ಮೊದಲೆ ಬರಹೇಳೆ ॥
ಎದ್ದು ಬರಹೇಳೆ ಮುದ್ದು ಮುಖದ ಐದೇರ
ಮಗ್ಗೆ ಮಲ್ಲಿಗೆಯ ಮುಡಿವ । ಪದ್ಮಾಂಬೆಯ
ಎದ್ದೆದ್ದು ಸೋಬಾನಕೆ ಬರಹೇಳೆ
ನಾರಿಕೈಕಟ್ಟೆ ಮೆಟ್ಟಲ ಇಳಿವಾಗ
ಮೆಟ್ಟಲಪಲ್ಲಿ ನುಡುದಾವೆ ॥ ಏನೆಂದು ನುಡುದಾವೆ
ಅದುವೆ ಈ ಹೆಣ್ಣು ಜಯ ಜಯ ।
ನಿಸ್ತ್ರೀ ಕೈಕಟ್ಟೆ ಬಾಗಲ ಇಳುವಾಗ
ಬಾಗಲ ಗೌಳಿ ನುಡುದಾವೆ ॥ ಏನೆಂದು ನುಡುದಾವೆ
ಅದುವೆ ಈ ಹೆಣ್ಣು ಜಯ ಜಯ